

ಅನೇಕ

ಡಿ.ಎಸ್. ನಾಗಭೂಷಣ

ಅನೇಕ

ಡಿ.ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ
ಬಳ್ಳಾರಿ

ಅನೇಕ

(ಸಾಹಿತ್ಯ ಹಾಗೂ ಸಾಮಾಜಿಕ ವಿಚಾರಗಳ ಲೇಖನ ಸಂಗ್ರಹ)

ಡಿ.ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ
ಬಳ್ಳಾರಿ

ANEKA
A collection of articles of Literary criticism and social thought by
D.S. Nagabhushana
12/3, 'Vasuprada'
2nd Main, 8th Cross
Yadavagiri, Mysore - 570 020
Tel. : 0821 - 2412574

Published by
Lohiya Prakashana
'Kshitija', Kappagallu Road
Gandhi Nagar, Bellary - 583 103
Tel. : 08392 - 257412

ISBN 81-87731-67-2

First Impression : 2005

Pages : xvi + 278

Price : Rs. 125

Cover Design : **Sudhakar Darbe**

ಅನೇಕ : ಡಿ.ಎಸ್. ನಾಗಭೂಷಣ

ಪ್ರಕಾಶಕರು : ಲೋಹಿಯಾ ಪ್ರಕಾಶನ, ಬಳ್ಳಾರಿ

ಪುಟಗಳು : ೧೬ + ೨೭೮

ಬೆಲೆ : ರೂ. ೧೨೫

ವಿನ್ಯಾಸ :

ಆಕೃತಿ ಕಂಪ್ಯೂಟರ್ಸ್
ಮೈದಾನ ನಾಲ್ಕನೇ ಅಡ್ಡರಸ್ತೆ, ಮಂಗಳೂರು - 1
ದೂರವಾಣಿ : 0824 2443002

ಮುದ್ರಕರು :
ವಿಶ್ವಾಸ್ ಪ್ರಿಂಟ್ಸ್
VISHWAS PRINTS
೨೩, ೩ನೇ ಅಡ್ಡರಸ್ತೆ, ನಂಜಾಂಬ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೦೪೮೩೫

ಲೇಖಕರ ಮಾತು

ನನ್ನ ಈ ಸಾಹಿತ್ಯ ವಿಮರ್ಶೆ ಮತ್ತು ಸಾಮಾಜಿಕ ವಿಚಾರಗಳ ಎರಡನೇ ಸಂಕಲನ ನನ್ನ ಮೊದಲ ಲೇಖನಗಳ ಸಂಗ್ರಹ 'ಗಮನ' ಪ್ರಕಟವಾದ ೧೫ ವರ್ಷಗಳ ನಂತರ ಹೊರಬರುತ್ತಿದೆ. ಈ ಹದಿನೈದು ವರ್ಷಗಳಲ್ಲಿ ನಾನು ಬರೆದದ್ದು ಕಡಿಮೆ. ಗೆಳೆಯರ ಜೊತೆ ಸಂಪಾದಿಸುತ್ತಿದ್ದ 'ಸಾಹಿತ್ಯ ಸಂವಾದ' ಪತ್ರಿಕೆ ಜೊತೆ ನನ್ನ ಸಂಪರ್ಕ ಕಡಿದುಹೋದುದೂ, ವೃತ್ತಿಜೀವನದ ಕಾರಣದಿಂದಾಗಿ ಮಡಿಕೇರಿಯಂತಹ ಸಾಂಸ್ಕೃತಿಕ ದುರ್ಗಮ ಸ್ಥಳದಲ್ಲಿ ಐದು ವರ್ಷವಿರಬೇಕಾಗಿ ಬಂದುದೂ, ಎಲ್ಲಕ್ಕಿಂತ ಹೆಚ್ಚಾಗಿ ಏಳು ವರ್ಷಗಳ ಹಿಂದೆ - ಮಡಿಕೇರಿಯಲ್ಲಿದ್ದಾಗಲೇ - ನಾನು ಮಾರಣಾಂತಿಕ ಕಾಯಿಲೆಗೆ ಈಡಾಗಿ ಈಗಲೂ ಅದರ ಪರಿಣಾಮಗಳು ನನ್ನನ್ನು ಕಾಡುತ್ತಿರುವುದೂ ಇದಕ್ಕೆ ಕಾರಣವಿರಬಹುದು. ಆದರೆ ಹಲವಾರು ಸಾಹಿತ್ಯಾಸಕ್ತ ಮತ್ತು ಸಮಾಜವಾದಿ ಗೆಳೆಯರ ಸಹವಾಸ ಹಾಗೂ ಜಾಗತೀಕರಣ ಕುರಿತ ನನ್ನ ವೈಯಕ್ತಿಕ ಕುತೂಹಲ ಮತ್ತು ನಾನು ಕೆಲಸ ಮಾಡುತ್ತಿರುವ ಆಕಾಶವಾಣಿ ಕೆಲಸಕಾರ್ಯಗಳ ಬಗೆಗಿನ ಕಾಳಜಿ - ಇವು ಈ ಹದಿನೈದು ವರ್ಷಗಳಲ್ಲಿ ನನ್ನನ್ನು ಕ್ರಿಯಾಶೀಲವಾಗಿಯೇ ಇಡಲು ಸಹಾಯ ಮಾಡಿವೆ. ಇವೆಲ್ಲವೂ ಈ ಸಂಕಲನದ ಲೇಖನಗಳಲ್ಲಿ ಪ್ರತಿಬಿಂಬಿತವಾಗಿರುವುದನ್ನು ಓದುಗರು ಗಮನಿಸಬಹುದು.

ನನ್ನ ಮೊದಲ ಸಂಕಲನವೂ ಬರೀ ಸಾಹಿತ್ಯ ವಿಮರ್ಶೆಯ ಸಂಕಲನವಾಗಿರದೆ, ಸಾಮಾಜಿಕ ವಿಚಾರಗಳ ಸಂಕಲನವೂ ಆಗಿತ್ತು. ಈ ಎರಡನೇ ಸಂಕಲನವೂ ಅದೇ ತೆರನದ್ದು. ನನ್ನ ಆಸಕ್ತಿಯ, ನಾನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕ್ರಿಯಾಶೀಲನಾಗಿರುವ ಮುಖ್ಯ ಕ್ಷೇತ್ರಗಳ ಬಗ್ಗೆ ನಾನು ಪ್ರತಿಕ್ರಿಯಿಸಿರುವುದು ಇಲ್ಲಿನ ಲೇಖನಗಳಲ್ಲಿ ದಾಖಲಾಗಿದೆ. ಅದಕ್ಕೇ ಈ ಸಂಕಲನದ ಶೀರ್ಷಿಕೆ 'ಅನೇಕ'. ಹಿಂದಿನ ಸಂಕಲನದಲ್ಲಿ ಸೇರದಿದ್ದ ಒಂದು ಕ್ಷೇತ್ರ ಈ ಸಂಕಲನದಲ್ಲಿ ಸೇರ್ಪಡೆಯಾಗಿದೆ - ಆಕಾಶವಾಣಿ ಕುರಿತು ಎರಡು ಲೇಖನಗಳಿವೆ. ನಾನು ೩೦ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಮಾಧ್ಯಮ ಇಂದು ಬಹುಮಾಧ್ಯಮ ಸಂದರ್ಭದಲ್ಲಿ ಉಳಿದುಕೊಳ್ಳಲು ಏನೆಲ್ಲ ಕಸರತ್ತುಗಳನ್ನು ಮಾಡುತ್ತಿದೆ! ಆಕಾಶವಾಣಿಯಂತಹ ಒಂದು ಸರಳ, ಸಾಂಸ್ಕೃತಿಕ ಮಾಧ್ಯಮವನ್ನು ನಾವು ಎಷ್ಟೆಲ್ಲ ವಿಕ್ಷಿಪ್ತಗೊಳಿಸುತ್ತಿದ್ದೇವೆ... ಇಂತಹ ಎಲ್ಲ ಸರಳ ಸಾಂಸ್ಕೃತಿಕ ಸಂಪನ್ಮೂಲಗಳು ವಿಕ್ಷಿಪ್ತಗೊಳ್ಳಲೇಬೇಕಾದಂತಹ ಒತ್ತಡ ಎಲ್ಲಿಂದ ಮೂಡಿಬರುತ್ತಿದೆ? ಖಚಿತವಾಗಿ ಅದರ ಮೂಲ ಇರುವುದು ಮನುಷ್ಯನ ಎಗ್ಗಿಲ್ಲದ ಭೋಗಾಸಕ್ತಿಯನ್ನು ಕೆರಳಿಸಿ ಮೆರೆಯಲಾರಂಭಿಸಿರುವ ಜಾಗತೀಕರಣವೆಂಬ ವಿದ್ಯಮಾನದಲ್ಲಿ. ಈ ಸಂಕಲನದಲ್ಲಿರುವ 'ಜಾಗತೀಕರಣದ ಸ್ವರೂಪ ಮತ್ತು ಆತಂಕಗಳು' ಇದನ್ನು ಸೂಕ್ಷ್ಮವಾಗಿ ವಿವರಿಸುವುದು. ಈಗ ಓದಿದಾಗ ಸ್ವಲ್ಪ ಭಾವಾವೇಶದಿಂದ ಕೂಡಿದ ಲೇಖನವೆನಿಸುವುದಾದರೂ- ಈ ಸಂಬಂಧದ ಒಂದು ಪ್ರಶ್ನೋತ್ತರವೂ ಅದೇ ಧಾಟಿಯಲ್ಲಿದೆ-ಆ ಸಂದರ್ಭದಲ್ಲಿ ಆ ತೀವ್ರತೆ ಸಹಜವಾಗಿಯೇ ಆಗಿತ್ತು. ಕಳೆದ ಚುನಾವಣೆಯಲ್ಲಿ ಜನತೆ ನೀಡಿದ ನಿರ್ಣಾಯಕ ತೀರ್ಪು, ಬುದ್ಧನಿಂದ ಗಾಂಧಿವರೆಗೆ ಹರಿದುಬಂದ traditional Indian wisdom ನಮ್ಮ ಜನಮನದಲ್ಲಿ ಈಗಲೂ ಜೀವಂತವಾಗಿದೆ ಎಂಬುದನ್ನು ಸಾಬೀತುಪಡಿಸಿತು. ಜಾಗತೀಕರಣವಾದಿಗಳು ಸಾರಿ

ಹೇಳುವಂತೆ ಚರಿತ್ರೆ dead end ತಲುಪಿದೆ ಎಂಬುದಕ್ಕೆ ವ್ಯತಿರಿಕ್ತವಾಗಿ ಭಾರತ ಮತ್ತೆ ಚರಿತ್ರೆ ನಿರ್ಮಾಣದಲ್ಲಿ ತೊಡಗಲಾರಂಭಿಸಿದೆ - 'ಸಮೃದ್ಧಿ'ಯ ಜೊತೆಗೆ 'ಸಮಾನತೆ'ಯೂ ಒಂದು ಮೌಲ್ಯವಾಗಿ ಮರುಸ್ಥಾಪನೆಯಾಗಿದೆ. ಇದನ್ನು ಕಾಪಾಡಿಕೊಂಡು ಹೋಗುವುದಕ್ಕೆ ಇಂತಹ ಸಾಂದರ್ಭಿಕ ಭಾವಾವೇಶ ಅಗತ್ಯವೆಂದೇ ನನ್ನ ಭಾವನೆ.

ಈ ಸಂಕಲನದಲ್ಲಿ ನನ್ನ ಮೊದಲ ಸಂಕಲನದ ಎರಡು ಲೇಖನಗಳನ್ನು ಸೇರಿಸಿಕೊಂಡಿದ್ದೇನೆ. 'ಗುತ್ತಿ - ಹೂವಯ್ಯ: ವಿಭಿನ್ನ ದೃಷ್ಟಿಕೋನಗಳು' ಮತ್ತು 'ಮಾಸ್ತಿ ಕಥೆಗಳು : ಒಂದು ನೋಟ'. ಈ ಸಂಕಲನದಲ್ಲಿರುವ ಕುವೆಂಪು ಮತ್ತು ಮಾಸ್ತಿ ಕುರಿತ ಲೇಖನಗಳಿಗೆ ಒಂದು ಸಮಗ್ರತೆ ಒದಗಿಸಲು ಈ ಸೇರ್ಪಡೆ. ಜಿ.ಎಸ್.ಎಸ್. ಮತ್ತು ವೀಚಿ ಕುರಿತು ವೈಯಕ್ತಿಕ ಸ್ತರದ ಎರಡು ಲೇಖನಗಳೂ ಇಲ್ಲಿವೆ-ಈ ಎರಡೂ ಅವರವರ ಅಭಿನಂದನ ಗ್ರಂಥಗಳಿಗಾಗಿ ಬರೆದದ್ದು. ಇದರಲ್ಲಿ ವೀಚಿ ಕುರಿತ ಲೇಖನ ಕೊಂಚ ಕಟುವಾಗಿದೆ, ಸಕಾರಣವಾಗಿಯೇ. ಆ ಸಂದರ್ಭದ ಕೆಲವು ಬೆಳವಣಿಗೆಗಳು ಲೇಖನದ ಆ ಶೈಲಿಗೆ ಕಾರಣವಾಗಿರಬಹುದು. ಆದರೆ ಲೇಖನ ನನ್ನ ಮಟ್ಟಿಗೆ ಅಪ್ರಾಮಾಣಿಕವಾಗಿಲ್ಲ. ವೀಚಿಯವರ ಬಗೆಗೆ ನನ್ನ ಪ್ರೀತಿ ಹಾಗೂ ಗೌರವ ಇದ್ದೇ ಇದೆ.

ಈ ಸಂಕಲನದಲ್ಲಿ ವಿವಿಧ ಸಾಂದರ್ಭಿಕ ವಿಷಯಗಳಿಗೆ - ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ, ರಾಜಕೀಯ-ನಾನು ನೀಡಿದ ಪ್ರತಿಕ್ರಿಯೆಗಳೂ ಮತ್ತು ವಿವಿಧ ಪತ್ರಿಕೆಗಳ ಸಂಪಾದಕರು ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳೂ ಸೇರ್ಪಡೆಯಾಗಿವೆ. ಸಂದರ್ಶನಗಳೂ ಸಾಹಿತ್ಯ ಕಮ್ಮಟಗಳೂ ಇಲ್ಲಿವೆ. ಇಲ್ಲಿನ ಬಹುತೇಕ ಸಂದರ್ಶನಗಳು ಆಕಾಶವಾಣಿಗಾಗಿ ನಾನು ನಡೆಸಿಕೊಟ್ಟಂತಹವು. ಇವುಗಳಲ್ಲಿ ಶಿವರಾಮ ಕಾರಂತ ಹಾಗೂ ಎಸ್. ನಿಜಲಿಂಗಪ್ಪನವರೊಡನೆ ನಡೆಸಿದ ಸಂದರ್ಶನಗಳು ಬಿಚ್ಚು ಮನಸ್ಸಿನ ಅಪರೂಪದ ಸಂದರ್ಶನಗಳು ಎಂದು ಹೇಳಿಕೊಳ್ಳಲು ನನಗೇನೂ ಸಂಕೋಚವಿಲ್ಲ. ಇನ್ನು ಸಾಹಿತ್ಯ ಕಮ್ಮಟಗಳು - ನಾನು ಬೆಂಗಳೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕನಾಗಿದ್ದಾಗ ಸಾಹಿತ್ಯ ಸಂಚಿಕೆ 'ಕನ್ನಡ ಭಾರತಿ'ಗಾಗಿ ಆಯೋಜಿಸಿದ ಮೂರು ಕಮ್ಮಟಗಳಾದ ಭಾಷಾ ಕಮ್ಮಟ, ಕಾವ್ಯ ಕಮ್ಮಟ ಹಾಗೂ ಕಥಾ ಕಮ್ಮಟಗಳ ಪೈಕಿ ಭಾಷಾ ಕಮ್ಮಟದ ಧ್ವನಿಮುದ್ರಣ, ಪ್ರಸಾರದ ನಂತರ ಆಕಸ್ಮಿಕವಾಗಿ ಅಳಿಸಿ ಹಾಕಲ್ಪಟ್ಟದ್ದರಿಂದ ಕಾವ್ಯ ಮತ್ತು ಕಥಾ ಕಮ್ಮಟಗಳು ಇಲ್ಲಿ ಪ್ರಕಟವಾಗಿದೆ. ಇವುಗಳಲ್ಲಿ ನನ್ನೊಡನೆ ಪರಿಣತರಾಗಿ ಭಾಗವಹಿಸಿದ್ದ ಡಾ. ಜಿ.ಎಸ್. ಶಿವರುದ್ರಪ್ಪ, ಎಚ್.ಎಸ್. ಶಿವಪ್ರಕಾಶ್, ಕೆ.ಬಿ. ಸಿದ್ಧಯ್ಯ, ಕಿ.ರಂ. ನಾಗರಾಜ ಹಾಗೂ ರಾಘವೇಂದ್ರ ಖಾಸನೀಸರಿಗೆ ನಾನು ಇಲ್ಲಿ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ಇವರೆಲ್ಲರೂ ಈ ಕಮ್ಮಟಗಳಲ್ಲಿ ಕಾವ್ಯ ಮತ್ತು ಕಥಾ ಸಂಪ್ರದಾಯಗಳ ಬಗ್ಗೆ ನಡೆಸಿರುವ ಚರ್ಚೆ ಎಷ್ಟು ಕುತೂಹಲಕಾರಿಯೂ ಪ್ರಯೋಜನಕಾರಿಯೂ ಆಗಿದೆ ಎಂಬುದನ್ನು ಓದುಗರು ಗಮನಿಸಬಹುದು. ಈ ದೃಷ್ಟಿಯಿಂದ ಈ ಕಮ್ಮಟಗಳನ್ನು ದಾಖಲೆಗಳಾಗಿ ಉಳಿಸಲು ಈ ಸಂಗ್ರಹದಲ್ಲಿ ಪ್ರಕಟಿಸಲಾಗಿದೆ. ಈ ಸಂಗ್ರಹದಲ್ಲಿರುವ ಸಂದರ್ಶನಗಳು ಹಾಗೂ ಕಮ್ಮಟಗಳನ್ನು ಧ್ವನಿಸುರುಳಿಗಳಿಂದ ಬರಹಕ್ಕಿಳಿಸಿಕೊಟ್ಟ ನನ್ನ ಸಹೋದ್ಯೋಗಿ / ಗೆಳೆಯರಿಗೆ ನಾನಿಲ್ಲಿ ಕೃತಜ್ಞತೆಗಳನ್ನು ತಿಳಿಸಬಯಸುವೆ.

ಈ ಲೇಖನ ಸಂಗ್ರಹ ಪ್ರಕಟವಾಗುತ್ತಿರುವ ಹೊತ್ತಿನಲ್ಲಿ ಹಲವರನ್ನು ನೆನೆಯಬೇಕು. ಮೊದಲಿಗೆ ಸ್ನೇಹದಿಂದ ಉದಾರವಾದ ಬೆನ್ನುಡಿ ಬರೆದುಕೊಟ್ಟಿರುವ ಕೆ. ಸತ್ಯನಾರಾಯಣ

ಎರಡು - ಮೂರು ದಶಕಗಳಿಂದಲೂ ನನ್ನ ಬರಹಗಳನ್ನು ಗಮನಿಸುತ್ತಾ, ಪ್ರತಿಕ್ರಿಯಿಸುತ್ತಾ ಬಂದಿರುವ ಗೆಳೆಯ. ಇನ್ನು ಡಾ. ಜಿ.ಎಸ್. ಶಿವರುದ್ರಪ್ಪ, ಕೆ.ಎಂ. ಶಂಕರಪ್ಪ ಮತ್ತು ದೇವನೂರ ಮಹಾದೇವ ಅವರವರದೇ ವಿಶಿಷ್ಟ ರೀತಿಯಲ್ಲಿ ನನ್ನ ಬರಹವನ್ನು ಪ್ರೋತ್ಸಾಹಿಸುತ್ತಿರುವವರು. ಇನ್ನು ಭದ್ರಾವತಿಯ ಎಂ. ಚಂದ್ರಶೇಖರಯ್ಯ, ಶಿವಮೊಗ್ಗಾದ ಸತ್ಯನಾರಾಯಣ ಅಣತಿ, ರಾಜೇಂದ್ರ ಚೆನ್ನಿ, ದಿವಾಕರ ಹೆಗಡೆ, ನಿಸಾರ್ ಅಹಮದ್, ಬೆಂಗಳೂರಿನ ಇಂದಿರಾ ಕೃಷ್ಣಪ್ಪ, ರುದ್ರಪ್ಪ ಹನಗವಾಡಿ ಹಾಗೂ ಮೈಸೂರಿನ ಅಪ್ಪಾಜಿ ಗೌಡ ಮತ್ತು ಅವರ ಕುಟುಂಬದ ಸದಸ್ಯರು; ನನ್ನ ಪತ್ನಿ ಸವಿತಾಳ ಗೆಳತಿಯರಾದ ಕೆ. ಪದ್ಮಾಕ್ಷಿ ಮತ್ತು ಶ್ರೀದೇವಿ ನನ್ನ ಬರವಣಿಗೆಯ ಬಗ್ಗೆ ಪ್ರೀತಿ - ಅಭಿಮಾನಗಳನ್ನು ಇಟ್ಟುಕೊಂಡವರು. ಹಾಗೆಯೆ 'ಸಾಹಿತ್ಯ ಸಂವಾದ' ಪತ್ರಿಕೆ ಸಾಮೂಹಿಕವಾಗಿ ನಡೆಯುತ್ತಿರುವ ತನಕ ಸಾಹಿತ್ಯಿಕ ಚರ್ಚೆ - ವಾಗ್ವಾದಗಳಿಗೆ ಕಾರಣರಾಗುತ್ತಿದ್ದ ರಾಘವೇಂದ್ರ ಪಾಟೀಲ, ಜಿ.ಎಲ್. ರಾಮಪ್ಪ, ಸ. ಉಷಾ ಮತ್ತು ವೈ. ಮಂಜಪ್ಪ; ನಂತರ ಚಿತ್ರದುರ್ಗದಲ್ಲಿ ಸಾಹಿತ್ಯಿಕ - ಸಾಂಸ್ಕೃತಿಕ ವೇದಿಕೆ : 'ಅಭಿರುಚಿ' ಹುಟ್ಟುಹಾಕಿ ಪ್ರತಿ ತಿಂಗಳೂ ಒಂದು ಸಾಹಿತ್ಯಗೋಷ್ಠಿ ನಡೆಸಲು ನನಗೆ ನೆರವಾದ ಬಿ.ಪಿ. ವೀರೇಂದ್ರ ಕುಮಾರ್ ಮತ್ತು 'ಅಭಿರುಚಿ'ಯ ಹಲವು ಸದಸ್ಯರು. ಹಾಗೇ ಕವಿ ಎಸ್. ಮಂಜುನಾಥ್, ಕತೆಗಾರ್ತಿ ಎಚ್. ನಾಗವೇಣಿ ಮತ್ತು ಬಂಧುಗಳಾದ ಡಿ.ವಿ. ರಾಜಶೇಖರ, ಡಾ. ಸಿ.ಆರ್. ಚಂದ್ರಶೇಖರ್ ಮತ್ತು ವೈ. ರಾಜು - ಹೀಗೆ ಹಲವರು ನನ್ನ ಸಾಹಿತ್ಯಾಸಕ್ತಿ ಉಳಿಯಲು, ಬೆಳೆಯಲು ಕಾರಣರಾಗಿದ್ದಾರೆ. ಪ್ರತಿಸಲದ ಭೇಟಿಯಲ್ಲೂ ನನ್ನ ಬರಹಗಳ ಬಗ್ಗೆ ಕುತೂಹಲ ಹಾಗೂ ಆಸಕ್ತಿಗಳಿಂದ ವಿಚಾರಿಸುತ್ತಿದ್ದ, ಇತ್ತೀಚೆಗೆ ತಾನೆ ನಿಧನರಾದ ಸಮಾಜವಾದಿ ನಾಯಕ ಕಿಷನ್ ಪಟ್ನಾಯಕರನ್ನೂ ಇಲ್ಲಿ ನೆನೆಯುವುದು ನನ್ನ ಕರ್ತವ್ಯ.

ನನ್ನ ಅಸ್ವಸ್ಥತೆಯ ಕಾರಣ ಈ ಸಂಗ್ರಹದ ಹೆಚ್ಚೂ ಕಡಿಮೆ ಇಡೀ ಕರಡನ್ನು ತಿದ್ದಿದವಳು ನನ್ನ ಪತ್ನಿ ಸವಿತಾ. ಅವಳು ಈ ಲೇಖನಗಳ ಕರಡನ್ನು ಮಾತ್ರವಲ್ಲ, ಹಲವಾರು ವರ್ಷಗಳಿಂದ ತನ್ನದೇ ರೀತಿಯಲ್ಲಿ ನನ್ನ ವ್ಯಕ್ತಿತ್ವವನ್ನೇ ತಿದ್ದುತ್ತಾ ಬಂದಿದ್ದಾಳೆ. ನಾನು ಮಾರಣಾಂತಿಕ ಕಾಯಿಲೆಗೆ ಒಳಗಾಗಿ ನಮ್ಮನ್ನು ವಿಚಾರಿಸುವ ಬಂಧು ಬಳಗ ಯಾರೂ ಇಲ್ಲದಿದ್ದ ಮಡಿಕೇರಿಯಲ್ಲಿ ಅವಳು ತೋರಿದ ಧೈರ್ಯ, ಕ್ರಿಯಾಶೀಲತೆ ಅನುಪಮವಾದದ್ದು. ಈಗಲೂ ಅವಳ ಉಪಚಾರ ನಡೆದೇ ಇದೆ, ಬೇಸರವಿಲ್ಲದೆ, ಸಹನೆಗೆಡದೆ. ಅವಳಿಗೆ ಕೃತಜ್ಞತೆ ಎಂದಷ್ಟೇ ಹೇಳಿದರೆ ಅಪಚಾರವಾದೀತು.

ನನ್ನ ಸಂಪಾದಕತ್ವದ 'ಕುವೆಂಪು:ಒಂದು ಪುನರನ್ವೇಷಣೆ' ಪ್ರಕಟಿಸಿದ ಒಂದು ತಿಂಗಳಲ್ಲೇ ನನ್ನ ಲೇಖನಗಳ ಸಂಗ್ರಹವೊಂದನ್ನು ಪ್ರಕಟಿಸಲು ಮುಂದಾಗಿದ್ದಾರೆ, ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣ. ಓದುಗರೇ ಇಲ್ಲ, ಪುಸ್ತಕ ಕೊಳ್ಳುವವರೇ ಇಲ್ಲ ಎಂದು ಹೇಳಲಾಗುತ್ತಿರುವ ಇಂದಿನ ದಿನಗಳಲ್ಲಿ ಗೆಳೆಯ ಚನ್ನಬಸವಣ್ಣ ಅವರ ಪುಸ್ತಕ ಪ್ರಕಾಶನ ಸಾಹಸ ಸೋಜಿಗವನ್ನುಂಟುಮಾಡುವಂತಹುದು. ಅವರಿಗೆ ನಾನು ಈ ಮೂಲಕ ಆಭಾರಿಯಾಗಿದ್ದೇನೆ.

೨-೩-೨೦೦೫

ಮೈಸೂರು

ಡಿ.ಎಸ್. ನಾಗಭೂಷಣ

ಪ್ರಕಾಶಕರ ಮಾತು

ಗೆಳೆಯ ಡಿ.ಎಸ್ ನಾಗಭೂಷಣ ಅವರು ಸಂಪಾದಿಸಿದ 'ಕುವೆಂಪು - ಒಂದು ಪುನರನ್ವೇಷಣೆ' ಕಳೆದ ತಿಂಗಳಷ್ಟೇ ಓದುಗರ ಕೈ ಸೇರಿತು / ಸೇರುತ್ತಿದೆ. ಒಂದು ತಿಂಗಳ ಕ್ಷಿಪ್ರ ಅವಧಿಯಲ್ಲೆ ಅವರ ಮತ್ತೊಂದು ಕೃತಿಯನ್ನು ಪ್ರಕಟಣೆಗೆ ಕೈಗೆತ್ತಿಕೊಂಡೆವು. ಬರೀ ಸಾಹಿತ್ಯಿಕ ಕೃತಿಗಳ ಕುರಿತು ವಿಮರ್ಶೆಯಾಗಿದ್ದರೆ ಎತ್ತಿಕೊಳ್ಳುತ್ತಿರಲಿಲ್ಲವೇನೋ. ಸಾಹಿತ್ಯದ ಜೊತೆಗೆ, ಸಾಮಾಜಿಕ ವಿಚಾರಗಳ ಬಗೆಗೆ, ಪ್ರಚಲಿತ ವಿದ್ಯಮಾನಗಳ ಬಗೆಗೂ ಲೇಖನಗಳು ಇರುವುದರಿಂದ, ಲೋಹಿಯಾ ಪ್ರಕಾಶನವು ಸಹ ಇಂತಹ ಸಮುದಾಯದ ಅಗತ್ಯಗಳ ಒತ್ತಾಸೆಯ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿರುವುದರಿಂದ, ಪ್ರೀತಿಯಿಂದ ಈ ಕೃತಿಯನ್ನು ಪ್ರಕಟಿಸುತ್ತಿದ್ದೇವೆ.

ಜಾಗತೀಕರಣದ ಭರಾಟೆಯಲ್ಲಿ, ಮುಕ್ತ ಮಾರುಕಟ್ಟೆಯ ದೆಸೆಯಿಂದಾಗಿ ದಿಡ್ಡಿ ಬಾಗಿಲು ತೆಗೆದಂತಾಗಿರುವುದರಿಂದ, ಸರಕು ಸಂಸ್ಕೃತಿಯ ಕೈಮೇಲಾಗಿ ಮನುಷ್ಯನನ್ನು ಭೋಗಲೋಲುಪ್ತತೆಯಲ್ಲಿ ತೇಲಾಡಿಸುತ್ತಿದೆ. ಆದರೆ ಬಹುಜನಸಮುದಾಯವು ಕನಿಷ್ಟ ಅವಶ್ಯಕತೆಗಳಿಂದಲೂ ವಂಚಿತರಾಗಿದ್ದಾರೆ. ನಮಗೆ ದೊರಕಿರುವ ವಿದ್ಯೆ (ಅಕ್ಷರವಲ್ಲ)ಯಿಂದ ಈ ಅಂತರವನ್ನು ಕನಿಷ್ಟ ಕಡಿಮೆ ಮಾಡುವ ಬಗೆಗಾದರೂ ಚಿಂತಿಸಿ, ಕಾರ್ಯಪ್ರವೃತ್ತರಾಗಬೇಕಾಗಿದೆ.

ಕಳೆದ ಐದಾರು ವರ್ಷಗಳಿಂದ ನಾಗಭೂಷಣ ಮತ್ತು ಸವಿತಾ ನಾಗಭೂಷಣ ಅವರು ಪ್ರಕಾಶನದೊಂದಿಗೆ ಪ್ರೀತಿಯಿಂದ ಒಡನಾಡುತ್ತಿದ್ದಾರೆ. ನಾಗಭೂಷಣರ ನಿಷ್ಠುರತೆಯ ಪ್ರೀತಿ, ಸವಿತಾ ಅವರ ತಂಗಾಳಿಯಂತ ಪ್ರೀತಿಯನ್ನು ಪ್ರಕಾಶನವು ಸಮಭಾವದಿಂದ ಸ್ವೀಕರಿಸಿದೆ ಹಾಗೂ ಜವಾಬ್ದಾರಿಯುತವಾಗಿ ಬೆಳೆದಿದೆ. ಇದಕ್ಕಾಗಿ ಪ್ರಕಾಶನವು ಈ ಇಬ್ಬರಿಗೂ ಅಭಾರಿಯಾಗಿದೆ.

ಅಚ್ಚುಕಟ್ಟಾಗಿ ಅಕ್ಷರಗಳನ್ನು ಜೋಡಿಸಿಕೊಟ್ಟಿರುವ ಆಕೃತಿ ಕಂಪ್ಯೂಟರ್ಸ್‌ನ ಕಲ್ಲೂರು ನಾಗೇಶ್ ಅವರಿಗೆ, ಮುಖಪುಟ ವಿನ್ಯಾಸ ಮಾಡಿಕೊಟ್ಟ ಕಲಾವಿದ ಸುಧಾಕರ ದರ್ಬೆಯವರಿಗೆ, ಸುಂದರವಾಗಿ ಮುದ್ರಿಸಿಕೊಟ್ಟಿರುವ ವಿಶ್ವಾಸ್ ಪ್ರಿಂಟ್ಸ್‌ನ ಸಿಬ್ಬಂದಿವರ್ಗಕ್ಕೆ, ಎಲ್ಲಕ್ಕಿಂತ ಮಿಗಿಲಾಗಿ ಪ್ರಕಾಶನದ ಪ್ರಕಟಣೆಗಳನ್ನು ಸದಭಿರುಚಿಯ ಓದುಗರಿಗೆ ತಲುಪಿಸಿ ನೆರವಾಗುತ್ತಿರುವ ಸಮಾನಮನಸ್ಕ ಗೆಳೆಯರಿಗೆ ಪ್ರಕಾಶನವು ಕೃತಜ್ಞವಾಗಿದೆ.

ಸಿ. ಚನ್ನಬಸವಣ್ಣ
ಪ್ರಕಾಶನದ ಪರವಾಗಿ

''ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ.
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ.
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ...''

– ಬಸವಣ್ಣ

ಕಳೆದ ಹತ್ತು ವರ್ಷಗಳಿಂದ
ನನಗೆ ತಾಯಿ ತಂದೆ
ಎಲ್ಲಾ ಆಗಿರುವ

ಸವಿತಾಗೆ

ಈ ಕೃತಿ ಅರ್ಪಿತ

ಪರಿವಿಡಿ :

ಧರ್ಮ, ಜಾತಿ, ಕೋಮುವಾದ : ಕುವೆಂಪು ಚಿಂತನೆಗಳು

> 'ನನ್ನ ಸಾಹಿತ್ಯದಲ್ಲಿ ಅಧ್ಯಾತ್ಮ ದೃಷ್ಟಿಯೇ ಸರ್ವವ್ಯಾಪಿ. ಅದು ನನ್ನ ಇಡೀ ಜೀವನವನ್ನೆಲ್ಲ ಆಕ್ರಮಿಸಿಕೊಂಡಿದೆ. ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸುವುದು ನನ್ನ ಉದ್ದೇಶವಲ್ಲ. ಅಧ್ಯಾತ್ಮ ಸಾಧನೆ ನನ್ನ ಜೀವನೋದ್ದೇಶ. ಈ ಸಾಧನೆಯ ಅನುಭವವೇ ಸಾಹಿತ್ಯವಾಗಿ ಹೊರಹೊಮ್ಮುತ್ತದೆ'[1]

ಎಂದು ಸ್ಪಷ್ಟವಾಗಿ ಸಾರಿಕೊಂಡ ಸಾಹಿತಿಯೊಬ್ಬ ಅದೂ ಆ ಅಧ್ಯಾತ್ಮದ ಸಾಧ್ಯತೆ - ಬಾಧ್ಯತೆಗಳೆರಡಕ್ಕೂ ಪಾರಂಪರಿಕವಾಗಿ ಎರವಾಗಿದ್ದ ಸಾಮಾಜಿಕ ಹಿನ್ನೆಲೆಯಿಂದ ಬಂದ ಸಾಹಿತಿಯೊಬ್ಬ ಧರ್ಮ, ಜಾತಿ, ಕೋಮುವಾದಗಳ ಬಗ್ಗೆ ತಳೆದ ನಿಲುವುಗಳು ಮತ್ತು ವ್ಯಕ್ತಪಡಿಸಿದ ಪ್ರತಿಕ್ರಿಯೆಗಳು ಸಾಂಸ್ಕೃತಿಕವಾಗಿ ಮಾತ್ರವಲ್ಲದೆ ಚಾರಿತ್ರಿಕವಾಗಿಯೂ ಮಹತ್ವದ್ದೆನಿಸಬಲ್ಲವು.

ಕುವೆಂಪು ಅವರ ಅಧ್ಯಾತ್ಮಸಾಧನೆಯ ಉತ್ತುಂಗ ಶಿಖರದ ಸಾಹಿತ್ಯಿಕ ಪ್ರತಿಬಿಂಬ ಎಂದು ಬಹುಜನರಿಂದ ಭಾವಿಸಲ್ಪಟ್ಟ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ರಚನೆಯ ಕಾಲದಲ್ಲಿ ಸ್ವತಃ ಕುವೆಂಪು ಅವರೇ ತಮ್ಮದೊಂದು ತರಗತಿಯಲ್ಲಿ 'I am not a mere artist. ಕಲೆ ನನ್ನ ಜೀವನದ ಗೌಣಪಕ್ಷ. Predominantly and primarily I am a philosopher. The concept of Rasa was never in my mind when I wrote Sri Ramayana Darshanam' ಎಂದು ಉದ್ಗರಿಸಿದುದನ್ನು ಅವರ ವಿದ್ಯಾರ್ಥಿಯೊಬ್ಬರು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.[2] ಅಂದರೆ ಕುವೆಂಪು ಪ್ರಕಾರ ತಮ್ಮ ಮಹಾಕಾವ್ಯ ಮೂಲತಃ ಒಂದು ದರ್ಶನ; ಅದು ಕಾವ್ಯವಾಗಿರುವುದು ಆನುಷಂಗಿಕ ಮಾತ್ರ. ಪ್ರಾಚೀನ ಭಾರತೀಯ ಕಾವ್ಯ ಪರಂಪರೆಯ ಒಟ್ಟಾರೆ ಆಶಯದ ದೃಷ್ಟಿಯಿಂದ ನೋಡಿದ್ದಾದರೆ ಇದೇನೂ ಹೊಸ ಮಾತಲ್ಲ. ಆದರೆ ಕುವೆಂಪು ಆಧುನಿಕ ಕಾಲದ ಕವಿ. ಅನೇಕ ಮತಾಚಾರಗಳಿಗೂ, ಮತವಿಮುಖವಾದ ವಿಚಾರಲಹರಿಗಳಿಗೂ, ತಾತ್ವಿಕ ಚರ್ಚೆಗಳಿಗೂ, ಪ್ರಾಚೀನ ಭಾರತ ಕಂಡರಿಯದಂತಹ ಜನತಾ ಹೋರಾಟಗಳಿಗೂ ವೇದಿಕೆಯಾಗಿ ನವನವೀನವಾದ - ಮುಂದೆ 'ಆಧುನಿಕ'ವೆಂದು ಕರೆಯಲ್ಪಟ್ಟ - ಮನೋಭೂಮಿಕೆಯೊಂದು ಸಂಶ್ಲೇಷಣೆಗೊಳ್ಳುತ್ತಿದ್ದ, ಭಾರತದ ಚರಿತ್ರೆಯ ಬಹುಮಹತ್ವದ ಸಂಕ್ರಮಣ ಕಾಲದಲ್ಲಿ ರೂಪುಗೊಂಡ ಕವಿ - ಬರಹಗಾರ. ಈ ದೃಷ್ಟಿಯಿಂದ ಅವರ ಅಧ್ಯಾತ್ಮಸಾಧನೆ, ಆ ಹಿನ್ನೆಲೆಯಲ್ಲಿ ರೂಪುಗೊಂಡ ಸಾಹಿತ್ಯ ಮತ್ತು ಅದರ ಒಲವು

ನಿಲುವುಗಳು ಸಹಜ ಕುತೂಹಲಕ್ಕೆ ಎಡೆಮಾಡಿಕೊಡುವಂತವೇ ಆಗಿವೆ.

ನಿಜ, ಕವಿ ತನ್ನ ಬಗ್ಗೆ ತಾನೇ ಹೇಳಿಕೊಂಡ ಮಾತುಗಳನ್ನು ಅದರ ಮುಖಬೆಲೆಯಲ್ಲೇ ನಾವು ಸ್ವೀಕರಿಸಬೇಕಿಲ್ಲ. ಕುವೆಂಪು ಅವರ ವಿಷಯದಲ್ಲಿಯೂ ಇದು ಸತ್ಯವೇ. ಕನ್ನಡ ಸಂಸ್ಕೃತಿ ಕೂಡಾ ಇದುವರೆವಿಗೂ ಕುವೆಂಪು ಅವರನ್ನು ಮೂಲತಃ ಕವಿ - ಬರಹಗಾರ ಎಂದು ಕಂಡು ಮಾನ್ಯ ಮಾಡಿದೆಯೇ ಹೊರತು ತತ್ವದರ್ಶಕನಾಗಿ ಅಲ್ಲ, ಅವರ ವಿಶ್ವಮಾನವ ಗೀತೆ ಅಥವಾ ತತ್ವದ ಅಲ್ಲಲ್ಲಿ ಆಗಾಗ್ಗೆ ಪ್ರಾಯೋಜಿತವಾದ ಪ್ರಚಾರದ ಹೊರತಾಗಿಯೂ. ಕುವೆಂಪು ಇದನ್ನು ಗಮನಿಸಿಯೂ ಇದ್ದಾರೆ. ತಮ್ಮ 'ನೆನಪಿನ ದೋಣಿಯಲ್ಲಿ' ಈ ಬಗ್ಗೆ ಅವರು ಹೀಗೆ ಅಲವತ್ತುಕೊಂಡಿದ್ದಾರೆ :

> 'ಸಾಧಾರಣವಾಗಿ ನನ್ನ ಕವಿ ಬದುಕಿನ ಸಾಹಿತ್ಯಭೂಮಿಕೆಯನ್ನೇ ನನ್ನ ಜೀವನ ಮೌಲ್ಯದ ಸರ್ವಸ್ವವೆಂಬಂತೆ ನನ್ನ ಜೀವನ ಚರಿತ್ರೆ ಬರೆದವರು ಮತ್ತು ನನ್ನ ಸಾಹಿತ್ಯದ ವಿಮರ್ಶೆ ಮಾಡಿರುವವರು ತಿಳಿದು ಬರೆದಿದ್ದಾರೆ ಮತ್ತು ಬರೆಯುತ್ತಿದ್ದಾರೆ. ನನ್ನ ಸಮಾಜ ಸುಧಾರಣಾ ಪಕ್ಷವನ್ನಾಗಲೀ, ನನ್ನ ವಿಚಾರವಾದಿ ಮನೋಧರ್ಮವನ್ನಾಗಲೀ ಅವರು ಅಷ್ಟೇನೂ ಗಂಭೀರವಾಗಿ ಪರಿಗಣನೆಗೆ ತಂದುಕೊಳ್ಳುತ್ತಿಲ್ಲ. ನನ್ನ ಕವಿ ಪ್ರತಿಭೆ ತನ್ನ ರಸಧರ್ಮಕ್ಕೆ ಒಂದಿನಿತೂ ಭಂಗ ಬರದ ರೀತಿಯಲ್ಲಿ ವೈಚಾರಿಕ ಬುದ್ಧಿಯನ್ನೂ, ವೈಜ್ಞಾನಿಕ ದೃಷ್ಟಿಯನ್ನೂ ಸಮಪ್ರಮಾಣದಲ್ಲಿ ಅಳವಡಿಸಿಕೊಂಡಿರುವುದನ್ನು ಸಹೃದಯರು ಗುರುತಿಸಲಾಗದಿದ್ದರೆ ನನ್ನನ್ನು ಆಂಶಿಕವಾಗಿ ಮಾತ್ರ ಪರಿಶೀಲಿಸಿದಂತಾಗುತ್ತದೆ; ನನ್ನ ಪೂರ್ಣತ್ವಕ್ಕೆ ಚ್ಯುತಿ ಬರುತ್ತದೆ.'

ಕುವೆಂಪು ಪದೇ ಪದೇ ತಮ್ಮ ಸಾಹಿತ್ಯ, ವೈಚಾರಿಕತೆ, ದರ್ಶನ ಇತ್ಯಾದಿಗಳ ಬಗ್ಗೆ ಸ್ವತಃ ತಾವೇ ಏಕೆ ಹೇಳಿಕೊಳ್ಳುತ್ತಾರೆ ಮತ್ತು ಬರೆದುಕೊಳ್ಳುತ್ತಾರೆ ಎಂಬ ಪ್ರಶ್ನೆಯನ್ನೂ ಒಳಗೊಂಡಂತೆ ಅವರ ಈ ಮಾತುಗಳು ಆಧುನಿಕ ಕನ್ನಡ ಸಂಸ್ಕೃತಿಯ ದೊಡ್ಡ ಬಿಕ್ಕಟ್ಟೊಂದನ್ನು ಸೂಚಿಸುತ್ತಿವೆಯೆಂದು ನಾನು ಭಾವಿಸುತ್ತೇನೆ. ಕುವೆಂಪು ಅವರನ್ನು ಕವಿಯನ್ನಾಗಿ, ಲೇಖಕನನ್ನಾಗಿ ಮಾತ್ರ ಸ್ವೀಕರಿಸಿದ ಕನ್ನಡ ಸಂಸ್ಕೃತಿ, ಅವರನ್ನು ಓರ್ವ ಸಾಂಸ್ಕೃತಿಕ ನಾಯಕನನ್ನಾಗಿ ಏಕೆ ಸ್ವೀಕರಿಸದೇ ಹೋಯಿತು (ಈ ಪ್ರಶ್ನೆಯನ್ನು ಕುವೆಂಪು ವಿಶ್ವವಿದ್ಯಾಲಯದ ವಿಚಾರ ಸಂಕಿರಣದಲ್ಲಿ ಮುಂದಿಟ್ಟಾಗ ಕೆಲವು ಕುವೆಂಪು ಅಭಿಮಾನಿಗಳು ಪ್ರತಿಭಟಿಸಿದ್ದುಂಟು. ಅದಕ್ಕೆ ನನ್ನ ಒಂದು ಸಾಲಿನ ಪ್ರತಿಕ್ರಿಯೆ:ಕುವೆಂಪು ಅವರನ್ನು ಕನ್ನಡದ ಜನ ತನ್ನ ಸಾಂಸ್ಕೃತಿಕ ನಾಯಕ ನನ್ನಾಗಿ ನಿಜವಾಗಿಯೂ ಸ್ವೀಕರಿಸಿದ್ದರೆ ಕನ್ನಡ ಶಾಲೆಗಳು ಸದ್ಯದ ದುರ್ಗತಿಗೀಡಾಗುತ್ತಿರಲಿಲ್ಲ.) ಎಂಬ ಪ್ರಶ್ನೆಗೆ ಸಂಬಂಧಿಸಿದ ಬಿಕ್ಕಟ್ಟಿದು - ಅದೂ ಕುವೆಂಪು ಕನ್ನಡ ಸಂಸ್ಕೃತಿಯು ಯಾವ ಭಾರತೀಯ ಸಂಸ್ಕೃತಿಯ ಒಂದು ಪ್ರಧಾನ ಧಾರೆಯಾಗಿದೆಯೋ, ಅದರ ಮುಖ್ಯ ಸ್ರೋತ ವೆನಿಸಿರುವ ಅಧ್ಯಾತ್ಮ ಸಾಧನೆಯ ಪರಮಗುರಿಯನ್ನು ಇಟ್ಟುಕೊಂಡಿದ್ದಾಗ್ಯೂ!

ಈ ಬಿಕ್ಕಟ್ಟಿನ ಮೂಲ ಇರುವುದು ಕುವೆಂಪು ಪ್ರತಿಪಾದಿಸಿದ ಆಧ್ಯಾತ್ಮಿಕ ಸಾಧನೆಯ ಹಾದಿಯ ಚಾರಿತ್ರಿಕ ವಿಶಿಷ್ಟತೆಯಲ್ಲಿ ಎಂದು ನಾನು ಭಾವಿಸಿದ್ದೇನೆ. ಕುವೆಂಪು ಅವರ ಪ್ರಜ್ಞೆ ಅರಳಿದ್ದು ರಾಷ್ಟ್ರೀಯ ನವೋದಯದ ಸಂದರ್ಭದಲ್ಲಿ. ಆಗ ಅರಳಿದ ಅದೆಷ್ಟೋ ಪ್ರತಿಭೆಗಳ ಕಥೆಯೇ ಒಂದಾದರೆ ಕುವೆಂಪು ಅವರದ್ದೇ ಇನ್ನೊಂದು. ಕಾರಣ ಕುವೆಂಪು ಅವರ ಸಾಮಾಜಿಕ ಹಿನ್ನೆಲೆ. ಪಾರಂಪರಿಕವಾಗಿ ಸಂಸ್ಕೃತಿಯಲ್ಲಿ ಸಮಪಾಲು ನಿರಾಕರಿಸಲ್ಪಟ್ಟ ಜನಸಮುದಾಯದಿಂದ ಬಂದು, ಆ ಜನಸಮುದಾಯದ ಸ್ಮೃತಿಗಳೆಲ್ಲವನ್ನೂ ಹೊತ್ತು ತಂದು, ಧರ್ಮ - ವಿಜ್ಞಾನಗಳ ಸಂಬಂಧವನ್ನು ಒಂದು ಹೊಸ ವೈಚಾರಿಕ ಪಾತಳಿಯಲ್ಲಿ ಬೆಸೆಯಲು ಯತ್ನಿಸುತ್ತಿದ್ದ ರಾಷ್ಟ್ರೀಯ ನವೋದಯದ ಅಗ್ನಿದಿವ್ಯಕ್ಕೆ ಒಪ್ಪಿಸಿದ ಕುವೆಂಪು ಅವರು ಸಮಕಾಲಿನ ನವೋದಯದ ಧ್ವನಿಗಳಿಗಿಂತ ಭಿನ್ನವಾದ ಧ್ವನಿಯಲ್ಲಿ ಮಾತಾಡಬೇಕಾಗಿ ಬಂದದ್ದು ಸಹಜವೂ ಅನಿವಾರ್ಯವೂ ಆಗಿತ್ತು. ಹಾಗಾಗಿಯೇ ಅವರು ತಮ್ಮ ವ್ಯಕ್ತಿತ್ವ ವಿಕಾಸದ ಸಮಯದಲ್ಲಿ ತಮ್ಮ ಸುತ್ತಲಿದ್ದ ಸಾಂಪ್ರದಾಯಿಕ ವಾತಾವರಣದಲ್ಲಿ ಭಿನ್ನ ಧ್ವನಿಯಲ್ಲಿ ಮಾತನಾಡುವ ಆತ್ಮಬಲವನ್ನು ಸಂಘಟಿಸಿ ಕೊಂಡಿದ್ದು ಅವರ ಸಾಮಾಜಿಕ ಹಿನ್ನೆಲೆಯಲ್ಲಿದ್ದ ಜಾನಪದೀಯ ಸಾಂಸ್ಕೃತಿಕ ಮೌಲ್ಯಗಳಿಂದಲ್ಲ. ಬದಲಾಗಿ ಶ್ರೀ ರಾಮಕೃಷ್ಣ ಪರಮಹಂಸ ಪ್ರಣೀತವಾದ ವಿವೇಕಾನಂದರ ಶಿಷ್ಟ ಧೀರವಾಣಿಯಿಂದ.

ಈ ಸಂಬಂಧವಾದ ವಿಚಿತ್ರವೂ, ಸಾಂಕೇತಿಕವೂ ಆದ ಒಂದು ಚಾರಿತ್ರಿಕ ವಿವರವೆಂದರೆ, ಕುವೆಂಪು ಅವರನ್ನು ಅವರ ವಿದ್ಯಾರ್ಥಿ ದೆಸೆಯಲ್ಲಿ ಪಾಲಿಸಿ ಪೋಷಿಸಿದ ಶ್ರೀ ರಾಮಕೃಷ್ಣಾಶ್ರಮಕ್ಕೆ ಅವರ ಮೊದಲ ಪರಿಚಯವಾದದ್ದು ಶ್ರೀ ರಾಮಕೃಷ್ಣರ ಜನ್ಮದಿನೋತ್ಸವದ ಅಂಗವಾಗಿ 'That caste system is a hindrance to progress of India' ಎಂಬ ವಿಷಯದ ಕುರಿತು ಏರ್ಪಾಡಾಗಿದ್ದ ಚರ್ಚಾಸ್ಪರ್ಧೆಯ ಆರಂಭಿಕ ಭಾಷಣಕಾರರಾಗಿ ಅವರು ವಿವೇಕಾನಂದರ ವಿಚಾರಗಳನ್ನು ಬಳಸಿಕೊಂಡು ಜಾತಿಪದ್ಧತಿಯ ವಿರುದ್ಧ ಮಾಡಿದ ವೈಚಾರಿಕ ದಾಳಿಯ ಮೂಲಕ ಎಂಬುದು! ಈ ದಾಳಿ ಆರಂಭ ಮಾತ್ರವಾಗಿತ್ತು. ತಮ್ಮ ಸಾಹಿತ್ಯ - ಜೀವನಗಳುದ್ದಕ್ಕೂ ಕುವೆಂಪು ಈ ದಾಳಿಯನ್ನು ಮುಂದುವರಿಸಿದರು ಮಾತ್ರವಲ್ಲ, ಬೇರೆ ಬೇರೆ ನೆಲೆಗಳಿಗೊಯ್ದು ಈ ದಾಳಿಗೊಂದು ವೈಚಾರಿಕ ಪ್ರಭೆಯನ್ನು, ಸಾಹಿತ್ಯಿಕ ಸೌಂದರ್ಯವನ್ನೂ, ಆಧ್ಯಾತ್ಮಿಕ ಘನತೆಯನ್ನೂ ಒದಗಿಸಿದರು.

ಇದು ಸಾಧ್ಯವಾದುದು ಕುವೆಂಪು ತಾವು ಬಹು ಎಚ್ಚರದಿಂದ ಜಾತ್ಯಾತೀತರಾಗಿದ್ದು ಕೊಂಡು ಭಾರತೀಯ ಪರಂಪರೆಯನ್ನು ಜಾತ್ಯಾತೀತ ಕಣ್ಣುಗಳಿಂದ ನೋಡಬಲ್ಲವರಾಗಿದ್ದುದ ರಿಂದ. ಹಾಗಾಗಿಯೇ ಕುವೆಂಪು ಅವರಿಗೆ ತಮ್ಮ ಶೂದ್ರ ಹಿನ್ನೆಲೆ ಒಂದು ಚಾರಿತ್ರಿಕ ಆಕಸ್ಮಿಕವಾಗಿ ಮಾತ್ರ ಕಂಡು ಭಾರತೀಯ ಶಿಷ್ಟ ಪರಂಪರೆಯೊಂದಿಗೆ ಪರಕೀಯತೆಯನ್ನು ಅನುಭವಿಸುವ ಸ್ವೇಚ್ಛಾನುಸಂಧಾನವನ್ನು ಸೃಷ್ಟಿಸಲಿಲ್ಲ. ವೇದೋಪನಿಷತ್ತುಗಳನ್ನೊಳಗೊಂಡ ಸಂಸ್ಕೃತ ಪರಂಪರೆ ಯನ್ನು ಯಾರದೋ ಅನ್ಯರ ಸ್ವತ್ತೆಂದು ಭಾವಿಸದೆ ಅದಕ್ಕೆ ತಾನೂ ಸಹಜ ಉತ್ತರಾಧಿಕಾರಿ

ಎಂಬ ಆತ್ಮವಿಶ್ವಾಸದೊಡನೆ ಅವರು ಅದರೊಡನೆ ಸಜೀವ ಅನುಸಂಧಾನ ನಡೆಸಿದರು. 'ಪೂರ್ಣ ದೃಷ್ಟಿ'ಯನ್ನು ಅನಾವರಣ ಮಾಡಿದ ಈ ಮಹಾಅನುಸಂಧಾನವೇ ಕುವೆಂಪು ಎಂಬ ಇಪ್ಪತ್ತನೇ ಶತಮಾನದ ಕನ್ನಡದ ವಿಶಿಷ್ಟ ಸಾಮಾಜಿಕ - ಸಾಂಸ್ಕೃತಿಕ ವಿದ್ಯಮಾನ. ಈ ಮಹಾ ವಿದ್ಯಮಾನವು ಬಹುಬೇಗನೆ ಆರಾಧನೆಯ ಸುಲಭ ದಾರಿ ಹಾಗೂ ಅನುಮಾನದ ವಿನಾಶಕಾರಿ ದಾರಿಗಳ ದ್ವಂದ್ವಕ್ಕೆ ಸಿಕ್ಕು ತನ್ನ ಕೇಂದ್ರಾಕರ್ಷಣೆಯನ್ನು ಕಳೆದುಕೊಂದ್ದು, ಕನ್ನಡ ಸಂಸ್ಕೃತಿಯ ದುರಂತವಾಗಿ ಇಂದೂ ನಮ್ಮನ್ನು ಕಾಡುತ್ತಿದೆ.

೩

ಕುವೆಂಪು ಧರ್ಮವನ್ನು ಅಧ್ಯಾತ್ಮವೆಂದು ಕರೆದರು. ಧರ್ಮದ ಜೊತೆ ಬೆಳೆದಿದ್ದ ಜಾತಿಪದ್ಧತಿ ಹಾಗೂ ಇತರ ಮೌಢ್ಯಾಚಾರಗಳನ್ನು ಅವರು ಮತಾಚಾರಗಳೆಂದು ಕರೆದರು. ಆ ಮತಾಚಾರಗಳನ್ನು ಪೋಷಿಸುವಂತಿದ್ದ ದೇವರು, ಗುರು, ಪುರೋಹಿತಶಾಹಿಯನ್ನು ಅವರು 'ಹೊಟ್ಟು' ಎಂದು ಕರೆದರು. ಅಧ್ಯಾತ್ಮಸಾಧನೆ ಎಲ್ಲ ಜೀವಿಗಳ ಆಜನ್ಮಸಿದ್ಧ ಹಕ್ಕು; ಅದನ್ನು ನಿರಾಕರಿಸುವ ಎಲ್ಲ ನಂಬಿಕೆ, ಆಚಾರ-ವಿಚಾರಗಳನ್ನು ಧರ್ಮಬಾಹಿರವೆಂದರು. ಅಷ್ಟೇ ಅಲ್ಲ, ವೇದಗಳು ಕಾಲಾತೀತವಲ್ಲ; ಕಾಲಕಾಲಕ್ಕೆ ವಿಜ್ಞಾನ ಹಾಗೂ ಇತರ ಜ್ಞಾನಶಾಸ್ತ್ರಗಳು ಬಿಚ್ಚಿಡುವ ಸತ್ಯಗಳ ಬೆಳಕಿನಲ್ಲಿ ವೇದಗಳೂ ಪರಿಷ್ಕಾರಗೊಳ್ಳಬೇಕು ಎಂದರು. ಆ ಕಾಲದಲ್ಲಿ ಹೀಗೆನ್ನಲು ತಮಗೆ ಶಕ್ತಿ ನೀಡಿದ 'ಶ್ರೀರಾಮಕೃಷ್ಣ ಚರಿತಾಮೃತ'ದ ಕನ್ನಡ ಅನುವಾದಕ್ಕೆ 'ಶ್ರೀರಾಮಕೃಷ್ಣ ವಚನವೇದ' ಎಂದು ಹೆಸರು ಸೂಚಿಸಿ ತಮ್ಮ ವಾದವನ್ನು ಹೀಗೆ ಸಮರ್ಥಿಸಿಕೊಂಡರು :

> ''ಈ 'ವಚನವೇದ' ವೇದಗಳೂ ಮಾಡದ ಕೆಲಸವನ್ನು ಮಾಡುತ್ತದೆ. ಈ 'ವಚನವೇದ' ವೇದಗಳು ಹೊಗಲಾರದ, ಬಹುಶಃ ಕೆಲವರ ದೃಷ್ಟಿಯಲ್ಲಿ ಹೊಗಬಾರದ ಮೂಲೆ ಮೂಲೆಗಳನ್ನು ಪ್ರವೇಶಿಸಿ ಜ್ಯೋತಿರ್ದಾನ ಮಾಡುತ್ತದೆ. ಈ 'ವಚನವೇದ' ಅಂಧಶ್ರದ್ಧೆಯ ಮೂಢಾಚಾರದ ಜನಜಂಗುಳಿಯನ್ನು ಪುರೋಹಿತ ವರ್ಗದ ನಖ ಪಂಜರದಿಂದ ಪಾರುಮಾಡಿ, ಅವರ ಧರ್ಮದಾಸ್ಯ, ದೈನ್ಯಗಳನ್ನು ಪರಿಹರಿಸಿ ಅವರನ್ನು ಮನುಷ್ಯರನ್ನಾಗಿ ಮಾಡುತ್ತದೆ. ಈ 'ವಚನವೇದ' ಪ್ರಜ್ಞಾಪರಾಧಜನ್ಯವಾದ ಭಯಭೀತಿ ಗಳಿಂದಲೂ ನಮ್ಮನ್ನುದ್ಧರಿಸಿ ಉದಾರಧೀರರನ್ನಾಗಿ ಮಾಡಿ ಸಂರಕ್ಷಿಸುತ್ತದೆ; ಜೀವನ್ಮುಕ್ತಿಗೆ ನಡೆಸುತ್ತದೆ''.

ಇದೇ ಸಂದರ್ಭದಲ್ಲಿ ಅವರು 'ಸೆಕ್ಯುಲರ್ ಸ್ಟೇಟ್' ಎಂಬುದರ ಅರ್ಥ ವ್ಯಾಖ್ಯಾನ ವನ್ನು ಮಾಡುತ್ತಾರೆ. ಈ ವ್ಯಾಖ್ಯಾನದಲ್ಲಿಯೇ ಕುವೆಂಪು ಅವರ ಧಾರ್ಮಿಕ ದೃಷ್ಟಿಕೋನದ ವಿಶಿಷ್ಟತೆಯೂ ವಿದಿತವಾಗುತ್ತದೆ.

''ಸ್ವತಂತ್ರ ಭಾರತವನ್ನು ನಮ್ಮ ರಾಜ್ಯಾಂಗ 'ಸೆಕ್ಯುಲರ್ ರಾಜ್ಯ' ಎಂದು ಕರೆದಿದೆ. ಸೆಕ್ಯುಲರ್ ಅಂದರೆ ಧಾರ್ಮಿಕವಲ್ಲದ, ಮತದೂರವಾದ, ಲೌಕಿಕ, ಲೋಕಾಯುತ ಎಂದು ಅರ್ಥವಾಗುತ್ತದೆ. ಯಾವ ಭರತಖಂಡವನ್ನು ಅಧ್ಯಾತ್ಮಿಕ ದೃಷ್ಟಿಯಿಂದ ಪುಣ್ಯಭೂಮಿಯೆಂದು ಕರೆದರೋ; ಯಾವುದರ ವಿಶೇಷ ಪ್ರಜ್ಞೆ, ವಿಶೇಷ ಪ್ರತಿಭೆ, ವಿಶಿಷ್ಟ ಕರ್ತ್ತನ, — ಸ್ವಭಾವ; ಸ್ವಧರ್ಮ ಸರ್ವವೂ ಧಾರ್ಮಿಕದಲ್ಲಿ ಮಾತ್ರ ನಿಷ್ಠವಾಗಿದೆ ಎಂದು ಸ್ವಾಮಿ ವಿವೇಕಾನಂದರು ಸಾರಿದರೋ, ಯಾವುದರ ಸ್ವಾತಂತ್ರ್ಯಕ್ಕಾಗಿ ದುಡಿದು ಮಡಿದ ಸ್ವಾತಂತ್ರ್ಯ ಶಿಲ್ಪಿ ಮಹಾತ್ಮಾಗಾಂಧೀಜಿಯ ನಡೆ ನುಡಿ ಉಸಿರು ಎಲ್ಲವೂ ಭಗವದಭಿಮುಖವಾದ ದಿವ್ಯಧರ್ಮದಲ್ಲಿಯೇ ಸಮರ್ಪಿತವಾಗಿದ್ದಿತೋ ಆ ಭೂಭಾಗವನ್ನು 'ಧಾರ್ಮಿಕವಲ್ಲದ', 'ಮತದೂರವಾದ', 'ಲೌಕಿಕ', 'ಲೋಕಾಯುತ', 'ಸೆಕ್ಯುಲರ್' ಎಂದು ಕರೆದರೆ ಏನರ್ಥವಾಗುತ್ತದೆ? ಹಿಮಾಲಯವನ್ನಾದರೂ ಎತ್ತಿ ಬೇರೆ ದಿಕ್ಕಿಗೆ ಸಾಗಿಸಬಹುದೋ ಏನೋ? ಆದರೆ ಭಾರತೀಯ ಸಂಸ್ಕೃತಿಯ ಈ ಅಧ್ಯಾತ್ಮಿಕ ಲಕ್ಷಣವನ್ನು ಮಾತ್ರ ಮಾರ್ಪಡಿಸಲು ಎಂದೆಂದಿಗೂ ಸಾಧ್ಯವಿಲ್ಲ. ಹಾಗೆ ಮಾಡುವುದೂ ರಾಜ್ಯಾಂಗದ ಉದ್ದೇಶವಲ್ಲ. ರಾಜ್ಯಾಂಗ 'ಸೆಕ್ಯುಲರ್' ಎಂದು ಕರೆದುದರ ಉದ್ದೇಶ ಆಡಳಿತದ ಸಮನ್ವಯ ದೃಷ್ಟಿಯನ್ನೂ ಮತೀಯ ನಿಷ್ಪಕ್ಷಪಾತ ವನ್ನೂ, ಎಲ್ಲ ಮತದವರಿಗೂ ಸರ್ವ ಸಮಾನವಾದ ಹಕ್ಕು ಬಾಧ್ಯತೆ, ಹೊರೆ ಹೊಣೆ ಉಂಟೆಂಬುದನ್ನೂ ಸಾರುವುದೇ ವಿನಾ, ಯಾವ ಆಸ್ತಿಕ ನಾಸ್ತಿಕ ಸಿದ್ಧಾಂತಗಳನ್ನು ಸಂಸ್ಥಾಪಿಸುವುದೂ ಅಲ್ಲ, ಉತ್ಪಾಟಿಸುವುದೂ ಅಲ್ಲ. ಅಂದರೆ ನಮ್ಮ ರಾಷ್ಟ್ರದ ಆಡಳಿತದ ಈ ಲಕ್ಷಣವನ್ನು ಸರಿಯಾದ ಮಾತಿನಲ್ಲಿ ವರ್ಣಿಸುವುದಾದರೆ, 'ಸಮನ್ವಯ ರಾಷ್ಟ್ರ' ಎಂದು ಕರೆಯಬೇಕಾಗುತ್ತದೆ. ಅಂತಹ ಸಮನ್ವಯ ರಾಷ್ಟ್ರಕ್ಕೆ ಅತ್ಯಂತ ಅವಶ್ಯವಾಗಿರುವ ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಈ ಯುಗದಲ್ಲಿ ಸ್ವಾತಂತ್ರ್ಯೋದಯಕ್ಕೆ ಬಹುಪೂರ್ವದಲ್ಲಿ ಸ್ಪಷ್ಟವಾಗಿ ಅನುಭವಪೂರ್ವಕವಾಗಿ ಸರ್ವಜನ ಸುಲಭ ಗ್ರಾಹ್ಯವಾಗಿ ಪ್ರಭಾವಯುತವಾಗಿ ಕ್ರಾಂತಿಪೂರ್ಣವಾದುದಾದರೂ ಸಂಪ್ರದಾಯ ಅವಿರುದ್ಧವೆಂಬಂತೆ ಲೋಕ ಸಮಸ್ತಕ್ಕೂ ತೋರಿ ಸಾರಿದವರೆಂದರೆ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರು. ಅವರ ಈ 'ವಚನವೇದ' ನಿಜವಾಗಿಯೂ ಸಮನ್ವಯ ದೃಷ್ಟಿಯನ್ನು ಸರ್ವ ಪ್ರಜೆಗಳಿಗೂ ಸುಲಭವಾಗಿ ಹೃದಯಸ್ಪರ್ಶಿಯಾಗಿ ಬೋಧಿಸುವ ನವೀನ ವೇದ.''

ಇನ್ನೂ ಮುಖ್ಯವೆಂದರೆ ಕುವೆಂಪು ಅವರು ಉಪನಿಷತ್ತುಗಳು ವೇದಗಳ ವಿಸ್ತರಣೆ

ಎಂಬ ನಂಬಿಕೆ ಆಧಾರರಹಿತ, ವೇದಗಳು ಮೂಲತಃ ಲೋಕಾರ್ಥವಾದ ಪ್ರಾರ್ಥನೆಗಳಾದರೆ ಉಪನಿಷತ್ತುಗಳು ಪರಮಾರ್ಥದ ಅನ್ವೇಷಣೆಯಲ್ಲಿ ತೊಡಗಿರುವಂತಹವು; ಅವುಗಳಲ್ಲಿರುವುದೆಲ್ಲ ಪರಮ ಸತ್ಯ ಅಥವಾ ಸತ್ಯದ ಪರಮಾವಧಿಗಳೇನಲ್ಲ; ಮನುಷ್ಯರ ಇತರ ಕೃತಿಗಳಲ್ಲಿರುವಂತೆ ವೇದೋಪನಿಷತ್ತುಗಳಲ್ಲಿಯೂ ಮೂಢಭಾವನೆಗಳೂ ತಪ್ಪು ಭಾವನೆಗಳೂ ಇಲ್ಲದೇ ಇಲ್ಲ ಎಂದು ಘೋಷಿಸಿ ಇಂತಹ ಮೂಢಭಾವನೆಗಳಿಲ್ಲದುವೆಂದು ತಾವು ನಂಬಿದ ಉಪನಿಷತ್ ವಾಕ್ಯಗಳನ್ನು 'ಋಷಿವಾಣಿ' ಎಂಬ ಶೀರ್ಷಿಕೆಯಡಿ ಆಯ್ದು ಪ್ರಕಟಿಸಿ, ಶ್ರುತಿಗಳು ಅಪೌರುಷೇಯ ಎಂಬ ನಂಬಿಕೆಗೆ ಮರ್ಮಾಘಾತವನ್ನೇ ಉಂಟುಮಾಡಿದರು. ತನ್ನ ಈ 'ಋಷಿವಾಣಿ'ಯನ್ನು ಪ್ರಕಟಿಸಲು ಶ್ರೀ ರಾಮಕೃಷ್ಣಾಶ್ರಮಕ್ಕೆ ಕಷ್ಟವಾಗಬಹುದೆಂದು ತೋರಿದಾಗ, ಅದನ್ನು ಖಾಸಗಿ ಪ್ರಕಾಶನವೊಂದರ ಹೆಸರಿನಲ್ಲಿ ಪ್ರಕಟಿಸಿದರು. ಹೀಗೆ ಶ್ರೀ ರಾಮಕೃಷ್ಣ ಪರಮಹಂಸರ ವಿಚಾರದ ಮೊಟ್ಟೆಗಳು ಕುವೆಂಪು ಅವರ ವ್ಯಕ್ತಿತ್ವದ ಕಾವಿನಲ್ಲಿ ಶ್ರೀ ರಾಮಕೃಷ್ಣಾಶ್ರಮದ ಗೋಡೆಗಳನ್ನೇ ಅಲುಗಾಡಿಸುವಂತಹ ರೆಕ್ಕೆಗಳನ್ನುಳ್ಳ ಮರಿಗಳಿಗೆ ಕಾರಣವಾಗತೊಡಗಿದವು.

ಮುಂದೆ ಕಾಲಾನುಕ್ರಮದಲ್ಲಿ ಇದೇ ಮರಿಗಳು ದೊಡ್ಡದಾಗಿ ಎಲ್ಲ ತತ್ವದಲ್ಲೆ ಮೀರಿ ನಿರ್ದಿಗಂತವಾಗಿ ಏರಿ ಅನಂತ ಆಕಾಶದಲ್ಲಿ ರೆಕ್ಕೆ ಬಡಿಯುತ್ತ ವಿಶ್ವ ಮಾನವ ಗೀತೆಯನ್ನು ವಿನ್ಯಾಸಗೊಳಿಸಿದವು. ಇದರ ಪರಿಣಾಮ ಎಷ್ಟು ಕ್ರಾಂತಿಕಾರಕವಾದುದೆಂದರೆ ಸನಾತನ ಹಿಂದೂ ಧರ್ಮದ ಅನೇಕ ಪ್ರಸ್ಥಾನಗಳಿಗೆ ಹೊಸ ವ್ಯಾಖ್ಯಾನ ಬರೆದಿದ್ದ ಕುವೆಂಪು ತಾವು ಕೊಟ್ಟ ಕೊನೆಯ ಪತ್ರಿಕಾ ಸಂದರ್ಶನದಲ್ಲಿ ಹೇಳಿದ್ದು ಹೀಗೆ :

> ''... ಹಾಗೆ ನೋಡಿದರೆ, ನಾನು ಹಿಂದೂ ಅಂತ ಹೇಳಿಕೊಳ್ಳೋದೇ ಇಲ್ಲ. ನಾನು ಹಿಂದೂ ಅಲ್ಲ. ಹಿಂದೂ ಅಂದರೆ ಗಂಗಾ-ಗಾಯತ್ರಿ-ಗೋ - ಇವು ಪವಿತ್ರ ಅಂತ ಭಾವಿಸೋದು. ಗಂಗಾ ಯಾಕೆ ಪವಿತ್ರ? ನಮ್ಮ ಮಲೆನಾಡಿನ ತುಂಗಾ ಕೂಡಾ ಪವಿತ್ರವಲ್ಲವೇ? ಗಾಯತ್ರಿ ಒಂದು ಪ್ರಾರ್ಥನೆ ಆದರೆ ನಾನು ಹಾಡೋ ಪದ್ಯಾನೂ ಗಾಯತ್ರಿನೇ. ಇನ್ನು ಗೋವು ಕಡಿಬಾರದು ಅನ್ನೋದಾದ್ರೆ ಅದೊಂದೇ ಪ್ರಾಣೀನಾ? ಬೇರೆ ಪ್ರಾಣಿಗಳೇನು ಪಾಪ ಮಾಡಿದಾವೆ? ಅವೂ ಇಷ್ಟೇ ಮುಖ್ಯ. ಪೂಜೆ, ಪುನಸ್ಕಾರ, ವಿಧಿ ಇಂಥವುಗಳನ್ನು ಮಾಡೋದು ಹಿಂದುಗಳಾದರೆ, ಇದಾವುದನ್ನೂ ನಾನು ಮಾಡೋದಿಲ್ಲ. ನೀವು ಹೇಳುವ ಹಿಂದುವಿನ ಯಾವ ಲಕ್ಷಣಗಳೂ ನನ್ನಲ್ಲಿಲ್ಲ. ಹಾಗಾದರೆ ನಾನೆಂಥ ಹಿಂದು? ಎಂಥ ದೊಡ್ಡ ಸಾಹಿತಿನೇ ಆಗಿರಲಿ - ಅವನು ಅನುಷ್ಠಾನಕ್ಕೆ ತರೋದಕ್ಕೆ ಆಗದೇ ಇದ್ರೂ ಚಿಂತೆ ಇಲ್ಲ - ವಿಶ್ವಮಾನವತ್ವವನ್ನು ಭಾವದ ಮಟ್ಟದಲ್ಲಾದರೂ ಒಪ್ಪಿಕೊಳ್ಳದೇ ಹೋದರೆ, ಅಂಥವನನ್ನೂ ಮೂರನೇ ದರ್ಜೆ ಅಥವಾ ನಾಲ್ಕನೇ ದರ್ಜೆಯವನಂತಲೇ ತಿಳಕೊಳ್ಳಬೇಕು''[೨].

ಕುವೆಂಪು ಇದೆಲ್ಲವನ್ನೂ, ಧರ್ಮವನ್ನು ನಿರಾಕರಿಸದೆ, ತಾವು ಓದಿಕೊಂಡ ವಿಜ್ಞಾನವೂ ಸೇರಿದಂತೆ ಇಪ್ಪತ್ತನೇ ಶತಮಾನದ ನವನವೀನ ಜ್ಞಾನಶಾಸ್ತ್ರಗಳಲ್ಲಿನ ಹೊಸ ಸಂಶೋಧನೆಗಳ, ವಿಚಾರ ಲಹರಿಗಳ ಅನುಸಂಧಾನದೊಂದಿಗೆ, ಅದನ್ನು ಹೊಸ ವ್ಯಾಖ್ಯಾನಕ್ಕೆ ಒಳಪಡಿಸ ತೊಡಗಿದ್ದರು. ಇದನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ಅವರಿಗೆ ಒದಗಿಬಂದಿದ್ದು ಅವರ ಸೃಜನಶೀಲ ಪ್ರತಿಭೆ. ಈ ಮುನ್ನ ವಿವರಿಸಿದ ಅವರ ವೈಚಾರಿಕ ದಾಳಿ ಬೆಂಕಿಯಂತೆ ಧರ್ಮದ ಕಿಲುಬನ್ನು ಸುಟ್ಟು ಹಾಕಿದರೆ ಅವರ ಕಾವ್ಯ ನಾಟಕಗಳು ಸುಟ್ಟುಳಿದ ಧರ್ಮದ ಹೃದಯಭಾಗವಾದ ಅಧ್ಯಾತ್ಮಿಕತೆಯ ಸೌಂದರ್ಯವನ್ನು ಬೆಳಗಿಸುವ ಬೆಳಕಿನಂತಿವೆ.

ಕುವೆಂಪು ರಾಷ್ಟ್ರೀಯ ನವೋದಯದ ಉತ್ಪನ್ನವೆಂದು ಈ ಹಿಂದೆಯೇ ಸೂಚಿಸಿದೆ. ಈ ರಾಷ್ಟ್ರೀಯ ನವೋದಯದ ಒಡಲಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜ್ಞಾನಯೋಗದ ಬೆಂಕಿಯಿದ್ದರೆ ಗಾಂಧೀಜಿಯವರ ಕರ್ಮಯೋಗದ ಬೆಳಕೂ ಇತ್ತು. ಇವೆರಡರಿಂದಲೂ ಪ್ರಭಾವಿತರಾಗಿದ್ದ ಕುವೆಂಪು ವಿದ್ಯಾರ್ಥಿ ದೆಸೆಯಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶಕ್ಕೆ ಹೋಗಿ ಗಾಂಧೀಜಿ ದರ್ಶನ ಮಾಡಿಕೊಂಡು ಬಂದಿದ್ದರು. ಸ್ವಾತಂತ್ರ್ಯ ಹೋರಾಟದಿಂದ ಉದ್ದೀಪ್ತನಾಗಿ ಅನೇಕ ಕ್ರಾಂತಿ ಗೀತೆಗಳನ್ನು ರಚಿಸಿದ್ದರು. ೧೯೩೧ರ ಹೊತ್ತಿಗೇ

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ

ಎಂದು ಆರಂಭವಾಗಿ

ಇಂದೊ ನಾಳೆಯೋ ದಾಸನೀಶನಾಗಲೇ ಬೇಕು
ಎಂದಿಂದೆ ಎದ್ದೇಳಿ; ನಾಳೆಯನು ಹೋಕು–
ನಾವೆ ದೇವತೆಗಳೈ! ಭಾರತವೇ ಸ್ವರ್ಗವೈ!
ಭಾರತಾಂಬೆಯೆ ನಮಗೆ ದೇವಿಯೈ ಜನನಿ

ಎಂದು ಮುಗಿಯುವ, ದೈವ ಕಲ್ಪನೆಯನ್ನು ಭಾರತಾಂಬೆ ಎಂಬ ಹೊಸಮಂತ್ರದಿಂದ ಮರ್ತ್ಯಗೊಳಿಸಿ, ಧರ್ಮವನ್ನು ಪ್ರಜಾಸತ್ತೆಯೆಂಬ ಹೊಸ ತಂತ್ರದಿಂದ ಲೌಕಿಕಗೊಳಿಸುವ ಮತ್ತು ೧೯೩೪ರ ಹೊತ್ತಿಗೇ

ಯಾವ ಕಾಲದ ಶಾಸ್ತ್ರ, ಏನು ಹೇಳಿದರೇನು
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು
ನಿನ್ನೆದೆಯ ಋಷಿ! ಮನು ನಿನಗೆ ನೀನು

....

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ
ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ
ನಮ್ಮ ಹೃದಯವೇ ನಮಗೆ ಶ್ರೀಧರ್ಮ ಸೂತ್ರ

ವೆಂದು ಹೊಸ ಧರ್ಮಸೂತ್ರವನ್ನೇ ಘೋಷಿಸಿ ಲೌಕಿಕ ಜಾತಿಪದ್ಧತಿಗೆ ಧಾರ್ಮಿಕ ಒತ್ತಾಸೆಯಾಗಿ ನಿಂತಂತಿದ್ದ ವರ್ಣಾಶ್ರಮ ಧರ್ಮದ ಅಡಿಗಲ್ಲನ್ನೇ ಸಡಿಲಿಸಿದರು.

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ ಸೋದರರೆ ಬೇಗ ಬನ್ನಿ

ಎಂದು ಕರೆ ಕೊಡುವ ಮೂಲಕ ಪುರೋಹಿತಶಾಹಿಯ ಬುಡಕ್ಕೇ ಕೈ ಹಾಕಿದರು.

ಜೊತೆಗೆ ಕುವೆಂಪು ಇದೇ ಕೆಲಸವನ್ನು ಇನ್ನೂ ಹೆಚ್ಚಿನ ಭಾವಶಕ್ತಿ ತುಂಬಿಕೊಂಡ ರೂಪಕ ಭಾಷೆಯಲ್ಲಿ ಕಟ್ಟಿ ನಿಲ್ಲಿಸಿದ ತಮ್ಮ ನಾಟಕಗಳ ಮೂಲಕವೂ ಇನ್ನಷ್ಟು ಪರಿಣಾಮಕಾರಿ ಯಾಗಿ ಮಾಡಿದರು. ಗಾಂಧಿ - ಅಂಬೇಡ್ಕರ್ ಮುಖಾಮುಖಿಯಾಗಲೀ, ಅದರ ಪರಿಣಾಮವಾಗಿ ಕಾಂಗ್ರೆಸ್ ಆಂದೋಲನದಲ್ಲಿ ಮೂಡಿದ ದಲಿತ ದೃಷ್ಟಿಯಾಗಲೀ ರಾಷ್ಟ್ರೀಯ ನವೋದಯದ ಚರ್ಚಾ ವಸ್ತುವಾಗುವ ಬಹುಮುನ್ನವೇ - ಅಂದರೆ ೧೯೨೮ರ ಹೊತ್ತಿಗೇ - ತಮ್ಮ ೨೪ನೇ ವಯಸ್ಸಿನಲ್ಲಿಯೇ 'ಜಲಗಾರ' ಎಂಬ ನಾಟಕ ಬರೆದು ಶಿವನನ್ನು ಜಗದ ಜಲಗಾರ ಎಂದು ನಿರೂಪಿಸಿ ಅವನನ್ನು ಜಲಗಾರ ಜಾತಿಗೆ ಸೇರಿಸಿ ಅಸ್ಪೃಶ್ಯತಾ ಸಮಸ್ಯೆ ಕಡೆ ಸಾರಸ್ವತ ಲೋಕದ ಗಮನ ಸೆಳೆದಿದ್ದರು. ಇಲ್ಲಿ ಜಲಗಾರ ಹಾಡುವ ಹಾಡನ್ನು ಗಮನಿಸಿದರೆ, ಶ್ರೀ ರಾಮಕೃಷ್ಣರ ಧರ್ಮ ಸಮನ್ವಯ ತತ್ವವು ಹೇಗೆ ಗಾಂಧೀಜಿಯು ಕರ್ಮಯೋಗದಲ್ಲಿ ಕಂಡುಕೊಂಡ ಕೋಮುಸೌಹಾರ್ದದ ಸಂದೇಶವಾಗಿ ಮಾರ್ಪಾಟಾಗಿದೆ ಎಂಬುದು ಗೊತ್ತಾಗುತ್ತದೆ.

ವಿಗ್ರಹದೊಳಗಿರೆ ರಾಮ, ಯಾರಿಂದೀ ಲೋಕದಾರಾಮ?
ಮೂಡಣದೊಳಗಿರುವನು ರಾಮ ಪಡುವಣದಿ ಅಲ್ಲಾಹು
ಹೃದಯದೊಳು ನೀನೊಮ್ಮೆ ಸೆಲೆ ವಿಚಾರಿಸೆ
ಅಲ್ಲೇ ಇರುವನು ಕರೀಮ, ಅಲ್ಲೇ ಇರುವನು ರಾಮ
ಅಲ್ಲಿ ರಾಮರ ಕಂದನೇ ಆಗಿರುವನು ಕಬೀರ

ಈ ನಾಟಕದಲ್ಲಿ ಶಿವ ಜಲಗಾರನಿಗೆ ತನ್ನ ನಿಜವೇಷ ತೋರಿಸುವಾಗ ತ್ರಿಶೂಲ

ಬ್ರಹ್ಮಬೀದಿಗಳನ್ನು ಗುಡಿಸುವ ಪೊರಕೆಯಾಗುತ್ತದೆ, ಯಜ್ಞೋಪವೀತ ಸ್ಮಶಾನಗಳಲ್ಲಿ ಚಟ್ಟ ಕಟ್ಟುವ ಹಗ್ಗವಾಗುತ್ತದೆ. ಕಾಶಿಯ ಬೀದಿಯಲ್ಲಿ ಶಂಕರಾಚಾರ್ಯರನ್ನು ದಬಾಯಿಸಿ ನಿಂತ ಚಂಡಾಲನನ್ನು ಆ ವರ್ಣಾಶ್ರಮ ಧರ್ಮದ ಮಾನ ಉಳಿಸಿಕೊಳ್ಳಲು ಶಿವನೆಂದು ಕರೆದು ಅದ್ವೈತ ದರ್ಶನವನ್ನು ಅದ್ವೈತ ಪುರಾಣವನ್ನಾಗಿ ಮಾರ್ಪಡಿಸಿದ ಮಾಯಾವಾದಿ ಪ್ರತಿಭೆಗೆ ಈ ನಾಟಕವನ್ನು ಕಟ್ಟಿದ ಶಂಬೂಕ ಪ್ರತಿಭೆ ಶಿವನನ್ನೇ ಜಲಗಾರರನ್ನಾಗಿ ತೋರಿಸಿ ತಿರುಗೇಟು ನೀಡಿದಂತಿದೆ. ಈ ನಾಟಕವನ್ನು ಕುವೆಂಪು ಮೊದಲು ಶಿವರಾತ್ರಿಯ ದಿನ ಬಹಿರಂಗವಾಚನ ಮಾಡಿದಾಗ ಶಿವಭಕ್ತನೊಬ್ಬ ಕುವೆಂಪು ಅವರನ್ನು 'ಶಿವದ್ರೋಹಿ, ಶಿವದ್ರೋಹಿ' ಎಂದು ಬೊಬ್ಬೆ ಮಾಡಿ ಆರ್ಭಟಿಸಿ ಹೋದನಂತೆ. ಈ ನಾಟಕ ಮೊದಲು ಪ್ರದರ್ಶಿತಗೊಂಡಾಗ ಮೈಸೂರಿನ ಹಿರಿಯ ಪತ್ರಕರ್ತ ತಾತಯ್ಯನವರು ತಮ್ಮ 'ಸಾಧ್ವಿ' ಪತ್ರಿಕೆಯಲ್ಲಿ 'ಇದೊಂದು ಬ್ರಾಹ್ಮಣರ ಹೀಯಾಳಿಕೆಗೆಂದೇ ಬರೆದ ನಾಟಕ' ಎಂದು ವಿಮರ್ಶಿಸಿದರಂತೆ.[೪] ಆದರೆ ಅವರಿಗೆ ಬೆಂಬಲವಾಗಿ ಬ್ರಾಹ್ಮಣರಾದ ತಳುಕಿನ ವೆಂಕಣ್ಣಯ್ಯನವರು, ಬ್ರಾಹ್ಮಣೇತರರಾದ ಪ್ರೊ. ವಾಡಿಯಾ ಅವರೂ, ಎಲ್ಲಕ್ಕಿಂತ ಹೆಚ್ಚಾಗಿ ಶ್ರೀ ರಾಮಕೃಷ್ಣಾಶ್ರಮದ ಮೈಸೂರು ಶಾಖೆಯ ಸ್ಥಾಪಕಾಧ್ಯಕ್ಷರಾದ ಶ್ರೀ ಸಿದ್ಧೇಶ್ವರಾನಂದರೂ ಇದ್ದರು. ಅವರೆಲ್ಲರ ಹಿಂದೆ ಇದ್ದುದು ಶ್ರೀ ವಿವೇಕಾನಂದರ ಧೀರವಾಣಿಯ ಮೂಲಕ ಪ್ರಕಟಗೊಂಡ ಶ್ರೀ ರಾಮಕೃಷ್ಣರ ಆಧುನಿಕ ಅದ್ವೈತ ದರ್ಶನ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಹೊತ್ತಿಗೆ ಸ್ವತಃ ಶೂದ್ರತಪಸ್ವಿ ಎನಿಸಿದ್ದ ಕುವೆಂಪು ತಮ್ಮ ಒಳತೋಟಿಯನ್ನು ತೋಡಿಕೊಳ್ಳಲೋ ಎಂಬಂತೆ; ತನಗೆ ಎದುರಾಗಲಾರಂಭಿಸಿದ್ದ ವಿರೋಧವು ಎಂತಹ ಸಂಕುಚಿತ ಹಾಗೂ ಜಡವಾದಿ ದೃಷ್ಟಿಕೋನದಿಂದ ಒಡಮೂಡಿತ್ತು ಎಂಬುದನ್ನು ವಿವರಿಸಲೋ ಎಂಬಂತೆ 'ಶೂದ್ರ ತಪಸ್ವಿ' ನಾಟಕ ಬರೆದರು. ವರ್ಣಾಶ್ರಮ ಧರ್ಮ ಮತ್ತು ರಾಜಧರ್ಮಗಳೆರಡನ್ನೂ ಮುಖಾಮುಖಿಯಾಗಿಸುತ್ತ ನಿಜವಾದ ರಾಜಧರ್ಮ ವಿವೇಚನೆ ಬಳಸಿ ಎತ್ತಿ ಹಿಡಿಯಬೇಕಾದದ್ದು 'ಋತ'—ಧರ್ಮವನ್ನೇ ಹೊರತು ಜಾತಿಗರ್ವಾಂಧತೆಯನ್ನಾಗಲೀ ಶಾಸ್ತ್ರಸಂಮೂಢತೆಯನ್ನಾಗಲೀ ಅಲ್ಲ ಎಂದು ಸಾರುವ ಈ ನಾಟಕ ಮಾಸ್ತಿಯವರಂತಹ ಉದಾರವಾದಿಗಳನ್ನೇ ಕೆಣಕಿತು. ಈ ನಾಟಕ, ಪರಂಪರೆಯನ್ನು ಅನಗತ್ಯವಾಗಿ ಕೀಟಲೆ ಮಾಡುವ ಪ್ರಯತ್ನವಾಗಿ ಕಂಡಿತು. ಕುವೆಂಪು ಧೃತಿಗೆಡದೆ, ಪರಂಪರೆ ಸತ್ವಯುತವಾಗಿ ಸಂಪತ್ತಿನ ರೂಪದಲ್ಲಿ ಉಳಿಯುವುದು 'ಋತ' ಧರ್ಮಾನುಸಾರವಾದ ವ್ಯಾಖ್ಯಾನಗಳಿಂದಲೇ ಎಂದು ಉತ್ತರ ನೀಡಿದರು.

ಅವರ 'ಬೆರಳ್‌ಗೆ ಕೊರಳ್' ಮತ್ತು 'ಸ್ಮಶಾನ ಕುರುಕ್ಷೇತ್ರಂ' ನಾಟಕಗಳೂ, 'ಶ್ರೀ ಮನ್ಮೂಕವಾಗಿತ್ತು', 'ಸಾಲದ ಮಗು', 'ಧನ್ವಂತರಿಯ ಚಿಕಿತ್ಸೆ' ಮುಂತಾದ ಸಣ್ಣಕತೆಗಳೂ, 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಕಾದಂಬರಿಯೂ ಮಾಡುವುದು ಇಂತಹ ವ್ಯಾಖ್ಯಾನಗಳನ್ನೇ, ಇನ್ನಷ್ಟು ವಿಶಾಲ ವ್ಯಾಪ್ತಿಯ ತಾತ್ವಿಕತೆಯಲ್ಲಿ: ಶೂದ್ರನ ಬೆರಳನ್ನು ದಕ್ಷಿಣೆಯಾಗಿ ಪಡೆಯುವ ಬ್ರಾಹ್ಮಣ ತನ್ನ ಕರ್ಮಚಕ್ರಕ್ಕೆ ಸಿಲುಕಿಕೊಂಡು ತನ್ನ ಬೆರಳನ್ನೇ ಬಲಿಕೊಡಬೇಕಾಗುತ್ತದೆ ಎಂಬುದನ್ನು ಸೂಚಿಸುತ್ತದೆ 'ಬೆರಳ್‌ಗೆ ಕೊರಳ್' ನಾಟಕ. ದೇಶದಲ್ಲಿ ಪ್ರಜಾಸತ್ತೆ, ಸಮಾಜವಾದ

ಎಂಬ ತತ್ವಗಳು ಇನ್ನೂ ದೂರದ ಕನಸುಗಳಾಗಿ ಕೂಡಾ ಕಾಣದಿದ್ದ ಕಾಲದಲ್ಲಿ (೧೯೩೧) ರಚಿತವಾದ 'ಸ್ಮಶಾನ ಕುರುಕ್ಷೇತ್ರಂ' ನಾಟಕವು 'ಸ್ವತಂತ್ರ ಭಾರತ ರಂಗ, ಸರ್ವಪ್ರಜಾಧಿಪತ್ಯಂ, ಸರ್ವಸಮತ್ವಂ, ಜಗತ್‌ಕಲ್ಯಾಣಂ, ಭೂವೈಕುಂಠ ನೋಡದೋ...' ಎಂಬ ಕಾಣ್ಕೆಯನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ. ಇದು ಕುವೆಂಪು ಕಾಣ್ಕೆಯ ಧರ್ಮದರ್ಶನ. ಅದುವೇ 'ಧನ್ವಂತರಿ ಚಿಕಿತ್ಸೆ' ಕತೆಯಲ್ಲಿ ಕಾಣುವ ವಸಿಷ್ಠದರ್ಶನಕ್ಕೆ ವಿರುದ್ಧವಾದ ವಿಶ್ವಾಮಿತ್ರ ದರ್ಶನ; 'ಕಾನೂರು ಸುಬ್ಬಮ್ಮ ಹೆಗ್ಗಡಿತಿ'ಯಲ್ಲಿ ಕಾಣುವ ಬುದ್ಧದರ್ಶನ.

೫

ಆದರೆ ಕುವೆಂಪು ಅವರ ಇನ್ನೊಂದು ಕಾದಂಬರಿ 'ಮಲೆಗಳಲ್ಲಿ ಮದುಮಗಳು' ಈ ಎಲ್ಲ ದರ್ಶನಗಳನ್ನೂ ಉತ್ತರಣಿಸಿಕೊಂಡ ಅವರ ಪೂರ್ಣದೃಷ್ಟಿಗೆ ಸಜೀವ ಉದಾಹರಣೆಯಂತಿದೆ. ಮುಟ್ಟಿದೆಡೆಯಲ್ಲೆಲ್ಲಾ ಉಸಿರಾಡುವ ಈ ಕಾದಂಬರಿ ಸಕಲ ಜೀವ ಜಗತ್ತನ್ನೂ ಅಖಂಡ ಸಂಬಂಧದಲ್ಲಿಟ್ಟು, ವ್ಯಾವಹಾರಿಕ ಪಾತಳಿಯ ತರತಮಗಳ ಆತ್ಯಂತಿಕ ಹುಸಿತನವನ್ನು ಕಲಾಸಿದ್ಧಿಯ ಪ್ರಪೂರ್ಣತೆಯ ಮೂಲಕ ಮನದಟ್ಟು ಮಾಡಿಸುತ್ತದೆ. ಮತಾಂತರ ಮತ್ತು ವರ್ಣಾಶ್ರಮ ಧರ್ಮಗಳ ನಡುವೆ ಆಯ್ಕೆ ಮಾಡಿಕೊಳ್ಳಲಾಗದ ಸಂದಿಗ್ಧದಲ್ಲಿರುವ ಅಸಹಾಯಕ ಮನುಷ್ಯರ ಪ್ರಪಂಚವನ್ನೇ ಒಳಗೊಂಡ ಈ ಕಾದಂಬರಿಯ ಸಕಲ ಪಾತ್ರಗಳೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದಿವ್ಯಾನುಭವ ಅಥವಾ ಭೂಮಾನುಭೂತಿಗೆ ಪಾತ್ರವಾಗಿ; ತಮೋಯೋಗ್ಯ, ನಿತ್ಯನಾರಕಿ ತತ್ವಗಳನ್ನು - ಅವರನ್ನು ಯಾರಾದರೂ ಪ್ರತಿಪಾದಿಸಿದ್ದರೆ - ಮೌಢ್ಯದ ಪರಮಾವಧಿಗಳೆಂಬಂತೆ ನಿರ್ಲಕ್ಷಿಸುವವರಾಗಿ, ಅಧ್ಯಾತ್ಮ ಸಾಧನೆಗೆ - ಅಂದರೆ ತಮ್ಮ ಅನಂತತೆಯ ಅನುಭವಕ್ಕಾಗಿ - ಸಾಲಾಗಿ ನಿಲ್ಲುತ್ತವೆ. ಶೃಂಗೇರಿ, ಧರ್ಮಸ್ಥಳ, ತಿರುಪತಿಗಳು ಬಿತ್ತುತ್ತಿದ್ದ ಮತೀಯ ಮೌಢ್ಯಗಳು ಹಾಗೂ ಕ್ರೈಸ್ತ ಪಾದ್ರಿಗಳು ಒಡ್ಡುತ್ತಿದ್ದ ಲೌಕಿಕ ಆಮಿಷಗಳ ದಟ್ಟ ವಾತಾವರಣದಲ್ಲೂ, ಈ ಧಾರಣ ಶಕ್ತಿಯನ್ನು ಈ ಪಾತ್ರಗಳಿಗೆ ಪ್ರದಾನ ಮಾಡುತ್ತಿರುವ ಸನಾತನ ಶಕ್ತಿಯ ಸಂಕೇತದಂತಿರುವ, ಈ ಕಾದಂಬರಿಯ ಹೃದಯಭಾಗದಲ್ಲಿ ಪ್ರವೇಶಿಸಿ 'ಮಿಂಚಿ' ಮಾಯವಾಗುವ ಗಡ್ಡದಯ್ಯನ ಪಾತ್ರ ಕುವೆಂಪು ಅವರ ಅಪ್ರತಿಮ ವಿಶ್ವಾಮಿತ್ರ ಸೃಷ್ಟಿಪ್ರತಿಭೆಗೆ ಸಾಕ್ಷಿಯಂತಿದೆ. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಕೂಡಾ ಸಕಲರಿಗೂ ಆತ್ಮವಿಕಾಸದ ಅವಕಾಶವಿರುವ ಧರ್ಮವನ್ನೇ ಪ್ರತಿಪಾದಿಸುತ್ತದೆ ಎಂದು ಕೇಳಿದ್ದೇನೆ.

'ಪ್ರಾಚೀನದ ಸತ್ವದ ಮೇಲೆ ನಿಂತು ಅರ್ವಾಚೀನವನ್ನು ಸೃಜಿಸುತ್ತಾ ಭವಿಷ್ಯತ್ತಿನ ನೂತನ ಆಗಾಮಿಕದತ್ತ ಮುಂದುವರೆಯಬೇಕು ಎಂಬುದು ನನ್ನ ಆದರ್ಶ'[೫] ಎಂದು ಒಂದೆಡೆ ಹೇಳಿಕೊಂಡಿರುವ ಕುವೆಂಪು ಪ್ರಾಚೀನದ ಸತ್ವವನ್ನು ಶೋಧಿಸುವಲ್ಲಿ ಕಟು ನಿಷ್ಠುರರಾಗಿದ್ದರು. ಹಾಗೇ ನೂತನ ಆಗಾಮಿಕದ ಕಾಣ್ಕೆಯ ವಿಷಯದಲ್ಲೂ ಬಹು ಎಚ್ಚರಿಕೆಯಿಂದಿದ್ದರು. ಇದು

ವಿವರವಾಗಿ ಎದ್ದು ಕಾಣುವುದು ಅವರ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಎಂದು ಪ್ರಸಿದ್ಧವಾದ ಒಕ್ಕೂಟದ ಭಾಷಣದಲ್ಲಿ. ಕುವೆಂಪು ತಮ್ಮ ಜೀವನ - ಸಾಹಿತ್ಯಗಳೆರಡರಲ್ಲೂ ಯಾವುದರ ವಿರುದ್ಧ ಸಮರ ಸಾರಿದ್ದರೋ ಆ ಪುರೋಹಿತಶಾಹಿಯ ವಿರುದ್ಧ ಸಂಘಟನಾತ್ಮಕವಾಗಿ ಸಮರ ಸಾರುವುದಕ್ಕೆ ಕಂಕಣಬದ್ಧವಾಗಿ ೧೯೭೪ರಲ್ಲಿ ಅಸ್ತಿತ್ವಕ್ಕೆ ಬಂದ (ಹಾಗೇ ವಿಸರ್ಜನೆಗೊಂಡ) ಕರ್ನಾಟಕ ಕಲಾವಿದರ ಹಾಗೂ ಬರಹಗಾರರ ಒಕ್ಕೂಟದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು :

''ಇಲ್ಲಿಯೂ ಯಾವ ತತ್ವವಾಗಲಿ ನಿಮ್ಮಿಂದ ಸ್ವೀಕಾರವಾಗುವುದಕ್ಕೆ ಅರ್ಹತೆ ಪಡೆಯಬೇಕಾದರೆ ಅದು ವಿಶ್ವಕ್ಕೆ, ವಿಶ್ವ ಜನತೆಗೆಲ್ಲ ಅನ್ವಯವಾಗುವಂತಿದ್ದರೆ ಮಾತ್ರ ಗ್ರಾಹ್ಯ. ಬರೀ ಹಿಂದೂಗಳಿಗೆ, ಹಿಂದೂ ದೇಶಕ್ಕೆ, ಅವರಿಗೆ ಇವರಿಗೆ ಅಂತ ಇಲ್ಲ. ವಿಶ್ವಕ್ಕೆಲ್ಲ ಅನ್ವಯವಾಗುವಂತಿದ್ದರೆ ಅದನ್ನು ನೀವು ಮಾನ್ಯ ಮಾಡಲೇಬೇಕು. ಅದು ವೈಜ್ಞಾನಿಕ ಸತ್ಯದಂತೆ ಶಾಶ್ವತ ಸತ್ಯ. ಇಂತಹ ಶಾಶ್ವತ ಸತ್ಯದ ಕೇಂದ್ರಗಳು ನಮ್ಮ ಪ್ರಾಚೀನ ಸಾಹಿತ್ಯ - ಸಂಸ್ಕೃತಿಗಳಲ್ಲಿವೆ. ಅವಕ್ಕೆ ಹೊಸ ವ್ಯಾಖ್ಯಾನಗಳನ್ನು ಮಾಡಬೇಕು, ಸರಿಯಾದ ಸರ್ವಸಮ್ಮತವಾದ ರೀತಿಯಲ್ಲಿ ವಿಶ್ವಕ್ಕೆ ಅನ್ವಯವಾಗುವಂತೆ... ಆ ವ್ಯಾಖ್ಯಾನ ಮಾಡುವವರು ಯಾರು? ಲೇಖಕರು, ಬರಹಗಾರರು ನೀವು. ನಮ್ಮ ಹಿಂದಿನ ಆಚಾರ್ಯ ವರ್ಗವೆಲ್ಲ ಅದನ್ನು ತೆಗೆದುಕೊಂಡು ಅತ್ಯಂತ ಅವಿವೇಕವಾಗಿ ವ್ಯಾಖ್ಯಾನ ಮಾಡಿದ್ದಾರೆ. ಆ ತರದ ಆಚಾರ್ಯರು ಋಷಿಗಳು ಎನ್ನುವ ಗೌರವವನ್ನು ನೀವು ನಿಮ್ಮ ತರುಣರಿಂದ ಮೊದಲು ತೆಗೆದುಹಾಕಬೇಕಾಗುತ್ತದೆ. ಸಂಪೂರ್ಣವಾಗಿ ವಿಚಾರಪೂರ್ವಕವಾಗಿ ಕೆಲಸ ಮಾಡಿ... ''

ಆದರೆ ದುರದೃಷ್ಟಕರ ಸಂಗತಿ ಎಂದರೆ, ಕುವೆಂಪು ಅವರ ಈ ಕರೆಯ ಹಾಸುಬೀಸನ್ನಾಗಲೀ, ಅದರ ಹಿಂದಿನ ಸಾಂಸ್ಕೃತಿಕ ತುರ್ತನ್ನಾಗಲೀ ಅರಿತು ಕ್ರಿಯಾಶೀಲರಾದವರು ಬಹಳ ಕಡಿಮೆ ಜನರು. ಹೀಗಾಗಿ ಒಂದೆಡೆ ಜಾತ್ಯಾಂಧ ಶೂದ್ರವಾದಿಗಳಿಂದಲೂ ಮತ್ತೊಂದೆಡೆ ಜಡ ವಿಚಾರವಾದಿಗಳಿಂದಲೂ ಸುತ್ತುವರಿಯಲ್ಪಟ್ಟ ಕುವೆಂಪುವೆಂಬ ವಿದ್ಯಮಾನ ಕರ್ನಾಟಕದಲ್ಲಿ ಸೃಜನಶೀಲ ತತ್ವ ಪರಂಪರೆಯಾಗಿ ಬೆಳೆಯಲೇ ಇಲ್ಲ - ಆಗಾಗ್ಗೆ ಹುಟ್ಟಿ ಸಾಯುತ್ತಿದ್ದ ಜನಪರ ಚಳವಳಿಗಳನೇಕಕ್ಕೆ ಸಾಂದರ್ಭಿಕ ಸ್ಫೂರ್ತಿ ಸೆಲೆಯಾಗಿ ಕಾಣಿಸಿಕೊಂಡಿದ್ದರ ಹೊರತಾಗಿ. ಅವರ 'ಮಲೆಗಳಲ್ಲಿ ಮದುಮಗಳು' ಕೃತಿ ಆಧುನಿಕ ಕನ್ನಡ ಸಂಸ್ಕೃತಿಯ ಮಹಾಕಾವ್ಯವಾಗಿರುವಂತೆ ಕುವೆಂಪು ಕೂಡಾ ಆಧುನಿಕ ಕನ್ನಡ ಸಂಸ್ಕೃತಿಯ ನಾಯಕರಾಗಬಲ್ಲವರಾಗಿದ್ದರು. ಆದರೆ ಆಗದೆ ಉಳಿದುಹೋದರು. ಅವರು ಹಾಗೆ ಆಗಿದ್ದರೆ ಕರ್ನಾಟಕದ ಇಂದಿನ ಜಾತಿವಾದಿ, ಕೋಮುವಾದಿ, ಭೋಗವಾದಿ ಹಿಂಸಾ ಸಂಸ್ಕೃತಿಯ ವಿರುದ್ಧ ವೈಚಾರಿಕ ನಾಯಕತ್ವಕ್ಕಾಗಿ ಇಷ್ಟು ಪರದಾಡಬೇಕಾದ ಅಗತ್ಯವಿರಲಿಲ್ಲ. ಈ ದೃಷ್ಟಿಯಿಂದ ಈಗ ಜಾಗತೀಕರಣದ ಸವಾಲಿನ ಎದುರು ಕನ್ನಡ

ಸಂಸ್ಕೃತಿಯನ್ನು ಪುನಾರಚಿಸಬಯಸುವವರು ಕುವೆಂಪು ಅವರನ್ನು ತಮ್ಮ ಪುರಾತನ, ಸಪಕಲು ಮನೋಭಾರಗಳನ್ನು ಇಳಿಸಿ ಪುನರನ್ವೇಷಿಸಿಕೊಳ್ಳಬೇಕಿದೆ.

ಉಲ್ಲೇಖಗಳು

೧. ದೇಜಗೌ: ರಾಷ್ಟ್ರಕವಿ ಸಂದರ್ಶನ, ಸಹ್ಯಾದ್ರಿ ಪ್ರಕಾಶನ, ಮೈಸೂರು

೨. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ : ಶ್ರೀ ಕುವೆಂಪು ಸಂಭಾಷಣೆ ಮತ್ತು ಸಂದರ್ಶನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

೩. ಸಂದರ್ಶನ : ಜಿ.ಎಸ್. ಶಿವರುದ್ರಪ್ಪ : ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು - ಕುವೆಂಪು ಸಂ : ಸುಜನಾ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ

೪, ೫. ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

❑

(ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕುವೆಂಪು ಜನ್ಮ ಶತಮಾನೋತ್ಸವದ ಅಂಗವಾಗಿ ೨೦೦೪ರ ಮಾರ್ಚ್ ೧, ೨ರಂದು ಕುವೆಂಪು ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ ವಿಚಾರಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧ)

ಕುವೆಂಪು : ಸ್ವಾತಂತ್ರ್ಯೋತ್ತರ ಸನ್ನಿವೇಶದಲ್ಲಿ

ರಾಷ್ಟ್ರಕವಿ ಕುವೆಂಪು ವಿಚಾರವೇದಿಕೆ ಕಳೆದ ಕೆಲವು ವರ್ಷಗಳಿಂದ ಪ್ರತಿವರ್ಷ ಕುವೆಂಪು ಜನ್ಮದಿನವನ್ನು ವಿಚಾರ ಸಂಕಿರಣಗಳ ಮೂಲಕ ಆಚರಿಸಿಕೊಂಡು ಬರುತ್ತಾ ಕುವೆಂಪು ವಿಚಾರಧಾರೆಯನ್ನು ಕನ್ನಡ ಜನಮನದಲ್ಲಿ ಉಳಿಸಿ ಬೆಳೆಸುವ ದಿಕ್ಕಿನಲ್ಲಿ ತನ್ನ ಕೈಲಾದ ಪ್ರಯತ್ನ ಮಾಡುತ್ತಿದೆ. ಈ ಪ್ರಯತ್ನದ ಅಂಗವಾಗಿ ಈ ವರ್ಷ ಈ ದಿನ ಭಾರತೀಯ ಸ್ವಾತಂತ್ರ್ಯ ಸುವರ್ಣೋತ್ಸವದ ನೆನಪಿಗಾಗಿ 'ಕುವೆಂಪು ಮತ್ತು ರಾಷ್ಟ್ರೀಯತೆ' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿರುವುದಾಗಿ ವೇದಿಕೆಯ ವ್ಯವಸ್ಥಾಪಕರು ಹೇಳಿದ್ದಾರೆ. ಯಾವುದೇ ದೇಶದ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಮುಖ್ಯವಾಗಿ ನೆನಪಿಗೆ ಬರುವವರು ರಾಷ್ಟ್ರನಾಯಕಗಣ - ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ ವಿಚಾರ ಬಿತ್ತಿ ಬೆಳೆದು ಹೋರಾಟ ಮಾಡಿ ಧೀರರೆನಿಸಿಕೊಂಡವರು. ನಮ್ಮ ದೇಶದ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಆಗುತ್ತಿರುವುದೂ ಇದೇ. ನಮ್ಮ ರಾಷ್ಟ್ರನಾಯಕರೆನಿಸಿದ ಗಾಂಧಿ - ನೆಹರೂ - ಪಟೇಲ್ ಮತ್ತು ಅವರ ರಾಜಕೀಯ ಸಹಚರರ ಚಿಂತನೆ ಮತ್ತು ಚಳುವಳಿಗಳನ್ನು ಕುರಿತು ವಿಚಾರ ಸಂಕಿರಣಗಳೂ, ಪ್ರಕಟಣೆಗಳೂ, ಚಲನಚಿತ್ರ ಮಾಲಿಕೆಗಳೂ ರೂಪಿತವಾಗುತ್ತಿವೆ. ಇಂತಹ ಸಂಪೂರ್ಣ ರಾಜಕೀಯ ಆಚರಣೆಯ ಸನ್ನಿವೇಶದಲ್ಲಿ ಕವಿಯೊಬ್ಬರನ್ನು ಕುರಿತು ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ಚರ್ಚೆ ಮಾಡಬಹುದೆಂಬುದು ಆ ಕವಿಯ ಶಕ್ತಿ ಮತ್ತು ಪ್ರಭಾವ ವಿಶೇಷತೆಗೆ ಸಾಕ್ಷಿಯಾಗಿದೆ. ಕನ್ನಡದಲ್ಲಿ ಇಂತಹ ವಿಶಿಷ್ಟ ಮಾನ್ಯತೆಗೆ ಒಳಗಾಗಬಲ್ಲ ಲೇಖಕರು ಇಲ್ಲವೆಂದೇ ಹೇಳಬೇಕು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಲೇಖಕರಿದ್ದಾರೆ, ಸ್ವಾತಂತ್ರ್ಯ ಹೋರಾಟವನ್ನು ವಸ್ತುವಾಗಿಸಿಕೊಂಡು ಕಥೆ - ಕವನ - ಕಾದಂಬರಿಗಳನ್ನು ಬರೆದವರಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತವನ್ನು ನೇರವಾಗಿ ಅದರ ರಾಜಕಾರಣದೊಂದಿಗೆ, ತಮ್ಮ ಕೃತಿಗಳಲ್ಲಿ ಚಿತ್ರಿಸಿದವರೂ ಇದ್ದಾರೆ. ಕುವೆಂಪು ಅವರಿಗೆ ಸರಿಸಮವಾಗಿ, ಶಕ್ತಿಯುತ, ಸ್ಫೂರ್ತಿಯುತ ದೇಶಭಕ್ತಿ ಗೀತೆಗಳನ್ನು ಬರೆದ ಕವಿಗಳಿದ್ದಾರೆ. ಆದರೆ ಇವರ್ಯಾರನ್ನೂ ರಾಷ್ಟ್ರೀಯತೆ ಎಂಬ ತತ್ವದ ಹಿನ್ನೆಲೆಯಲ್ಲಿ ವ್ಯಾಪಕವಾಗಿ ಚರ್ಚಿಸುವುದು ಅಸಾಧ್ಯವೆಂದೇ ನನ್ನ ಭಾವನೆ. ಏಕೆಂದರೆ ಕುವೆಂಪು ಅವರಿಗೆ ರಾಷ್ಟ್ರೀಯತೆ ಎನ್ನುವುದು, ಇವರ ತಲೆಮಾರಿನ ಬೇರೆಲ್ಲ ಲೇಖಕರಿಗಿದ್ದ ಪರಿಭಾವನೆಗಿಂತ ಹೆಚ್ಚು ಸಂಕೀರ್ಣವಾದ ತತ್ವವಾಗಿತ್ತು. ಒಮ್ಮೆಗೇ ಅದು

ಅಧ್ಯಾತ್ಮಿಕ ತತ್ತ್ವವೂ ಲೌಕಿಕ ತತ್ತ್ವವೂ ಆಗಿತ್ತು. ಅವರದೇ ಆದ ಪರಿಭಾಷೆಯಲ್ಲಿ ಹೇಳುವುದಾದರೆ ಅನ್ನಮಯ ಕೋಶದಿಂದ ಆನಂದಮಯ ಕೋಶದವರೆಗಿನ ಪಂಚಕೋಶಗಳಲ್ಲೂ ಅಂತರ್ಗತವಾಗಿರುವ ಸಮಸ್ತದಲ್ಲೂ ವ್ಯಾಪ್ತವಾಗಿದ್ದ ತತ್ತ್ವವದು. ಜೊತೆಗೆ ಕಾಡಿನ ಮೂಲೆಯೊಂದರಿಂದ, ಅಕ್ಷರಜ್ಞಾನಕ್ಕೆ ಅದೀಗ ತಾನೇ ಕಣ್ತೆರೆಯುತ್ತಿದ್ದ ಹಿನ್ನೆಲೆಯಿಂದ ಬಂದ ಕುವೆಂಪು ಅವರಿಗೆ ರಾಷ್ಟ್ರೀಯತೆಯು ಒಂದು ಒಟ್ಟಾರೆ ಬಿಡುಗಡೆಯ ತುರ್ತೂ ಆಗಿತ್ತು. ಈ ತರಹದ ತುರ್ತೇ ಅವರಿಂದ ''ನೂರು ದೇವರನೆಲ್ಲ ನೂಕಾಚೆ ದೂರ / ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ'' ಎಂಬ ಆಧ್ಯಾತ್ಮಿಕ ಸ್ತರವನ್ನು ಲೋಕಸ್ತರಕ್ಕಿಳಿಸಿ, ಲೋಕಸ್ತರವನ್ನು ಆಧ್ಯಾತ್ಮಿಕ ಸ್ತರಕ್ಕೇರಿಸುವ ಅಲ್ಲೋಲ ಕಲ್ಲೋಲಮಯವಾದ ಸಾಲುಗಳನ್ನು ಬರೆಸಿದ್ದು. ''ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು / ಜೀವದಾತೆಯನಿಂದು ಕೂಗಬೇಕು'' ಎಂಬ ಇದೇ ಪದ್ಯದ ಮುಂದಿನ ಸಾಲುಗಳು, ಆ ಹೊತ್ತಿಗೆ ದೇವರುಗಳು ಏನಾಗಿದ್ದವು, ಭಾರತಾಂಬೆ ಎಂದರೆ ಯಾರು ಎಂಬುದನ್ನು ಕುರಿತ ಕುವೆಂಪು ಅವರ ಪರಿಭಾವನೆಯ ಸ್ತರಗಳನ್ನೂ ಸೂಚಿಸುತ್ತವೆ. ಭಾರತಾಂಬೆ ಕುವೆಂಪು ಅವರಿಗೆ ವಿಶಾಲತೆ, ಉದಾರತೆ ಹಾಗೂ ಸಮಾನತೆಗಳನ್ನು ಪ್ರತಿನಿಧಿಸುವ ಬಿಡುಗಡೆಯ ಸಂಕೇತವಾಗಿದ್ದಳು. ಸ್ವಾತಂತ್ರ್ಯಾನಂತರವೂ ಕುವೆಂಪು ಅವರಿಗೆ ಈ ಸಂಕೇತಾರ್ಥ ಬದಲಾಗಲಿಲ್ಲ. ಇದೇ ಕುವೆಂಪು ಅವರನ್ನು ಈ ಸಂದರ್ಭದಲ್ಲಿ ಇತರ ಲೇಖಕರಿಗಿಂತ ವಿಶಿಷ್ಟವಾಗಿಸುವುದು. ಇತರೆ ಪ್ರಮುಖ ಲೇಖಕರಿಗೆ ಸ್ವಾತಂತ್ರ್ಯಾನಂತರದ ಸನ್ನಿವೇಶ ಹುಳ್ಳುಹುಳ್ಳಾಗತೊಡಗಿದೆ ಎನ್ನಿಸಿ, ವಿಶ್ವಾಸ ಕಳೆದುಕೊಂಡವರಂತೆ ವ್ಯಂಗ್ಯ, ವಿಡಂಬನೆ ಸಿನಿಕತೆಗಳಿಗೆ ಇಳಿದರೆ, ಕುವೆಂಪು ಹೆಚ್ಚು ಪ್ರಬುದ್ಧ ಹಾಗೂ ಸಮಗ್ರ ಚಿಂತಕರಂತೆ ೧೯೪೭ರ ಆಗಸ್ಟ್ ೧೫ರ ಸ್ವಾತಂತ್ರ್ಯವನ್ನು ಒಂದು ಘಟ್ಟದ ಸ್ವಾತಂತ್ರ್ಯ ಮಾತ್ರ - ಸಂಪೂರ್ಣ ಸ್ವಾತಂತ್ರ್ಯ ಸಾಧನೆ ಕಾಲ ಕ್ರಮೇಣ ಹಂತಾನುಹಂತವಾಗಿ ಆಧ್ಯಾತ್ಮಿಕ ಸಿದ್ಧಿಯಂತೆ ಆಗಬೇಕಾದ್ದು ಎಂಬ ಅರಿವಿನೊಂದಿಗೆ ಬದುಕಿ ಬರೆದರು. ಅವರಿಗೆ ಸಂಪೂರ್ಣ ಸ್ವಾತಂತ್ರ್ಯವೆಂದರೆ 'ದಾಸನೀಶನಾಗುವ' ಆಧ್ಯಾತ್ಮಿಕ ಸ್ವಾತಂತ್ರ್ಯ. ಹಾಗೆಂದೇ ಈಗ ತಾನೇ ನಾನು ಪ್ರಸ್ತಾಪಿಸಿದ ''ನೂರು ದೇವರನೆಲ್ಲ ನೂಕಾಚೆ ದೂರ'' ಎಂದು ಆರಂಭ ವಾಗುವ 'ಇಂದಿನ ದೇವರು' ಎಂಬ ಪದ್ಯ ಮುಗಿಯುವುದು ಈ ಸಾಲುಗಳೊಂದಿಗೆ :

> **ಇಂದೋ ನಾಳೆಯೋ ದಾಸನೀಶನಾಗಲೆ ಬೇಕು**
> **ಎಂದಿಂದೆ ಎದ್ದೇಳಿ; ನಾಳೆಯೆನೆ ಹೋಕು!**
> **ನಾವೆ ದೇವತೆಗಳೈ ಭಾರತವೇ ಸ್ವರ್ಗವು**
> **ಭಾರತಾಂಬೆಯೆ ನಮಗೆ ದೇವಿಯೈ ಜನನಿ**

ಅಂದರೆ ಕುವೆಂಪು ಅವರ ರಾಷ್ಟ್ರೀಯ ಸ್ವಾತಂತ್ರ್ಯದ ಕಲ್ಪನೆ ಲೌಕಿಕಾರ್ಥವನ್ನು ಮೀರಿದ್ದು - ಅವರು ನಂಬಿ, ಬಹುಶಃ ಅನುಭವಿಸಿ ಬದುಕಿದ ಅದ್ವಯ ಸ್ಥಿತಿಗೇರುವಂತಹದ್ದು. ಹಾಗೆಂದೇ ಕುವೆಂಪು ಅವರಿಗೆ ರಾಷ್ಟ್ರೀಯ ಸ್ವಾತಂತ್ರ್ಯ ಎನ್ನುವುದು ವ್ಯಕ್ತಿತ್ವ ಆಗುತ್ತಾ ಆಗುತ್ತಾ

ಅರಳಿಕೊಳ್ಳುವ ವೈಯಕ್ತಿಕ ನೆಲೆಯ ಪ್ರಕ್ರಿಯೆಯ ಒಂದು ಪ್ರಾಥಮಿಕ ಹಾಗೂ ಅನಿವಾರ್ಯ ಹಂತ ಮಾತ್ರವಾಗಿತ್ತು. ಸ್ವಾತಂತ್ರ್ಯ ಪೂರ್ವದ ಅವರ ಕವಿತೆಗಳಲ್ಲಿ ಹಾಗೂ ಲೇಖನಗಳಲ್ಲಿ, ವಿಶೇಷವಾಗಿ ''ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ'' ಎಂಬ ಸಂಕಲನದ ಭಾಷಣಗಳಲ್ಲಿ; ಸ್ವಾತಂತ್ರ್ಯಾನಂತರದ ಕವಿತೆಗಳಲ್ಲಿ ಹಾಗೂ ಭಾಷಣಗಳಲ್ಲಿ ನಾವು ಕಾಣುವುದು ಈ ಆಗುವಿಕೆಯ ಕಡೆಗೆ ವ್ಯಕ್ತವಾಗುವ ವಿವಿಧ ರೀತಿಯ ತುಡಿತಗಳನ್ನೇ. ಈ ತುಡಿತಕ್ಕೆ ರಾಷ್ಟ್ರೀಯ ಸ್ವಾತಂತ್ರ್ಯ ಎನ್ನುವುದು ಕಾಲ ಧರ್ಮೀಯವಾದ ಒಂದು ನೆಪವಷ್ಟೆ :

ನಿತ್ಯತೆಯ ಗಬ್ಬದಲಿ
ಮುಂದೆಯದು ತೋರುವುದು
ಬಿಡುಗಡೆಯ ಹಬ್ಬದಲಿ

ಅದಕ್ಕೇ

ನಡೆಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ

ಈ ನಡೆ ಇನ್ನೊಂದು ಸ್ತರದಲ್ಲಿ ಎಲ್ಲಿಯೂ ನಿಲ್ಲದ ನಡೆ ಕೂಡಾ ಆಗಿಬಿಡುತ್ತದೆ :

ಎಲ್ಲಿಯೂ ನಿಲ್ಲದಿರು
ಮನೆಯನೆಂದು ಕಟ್ಟದಿರು
ಕೊನೆಯನೆಂದು ಮುಟ್ಟದಿರು
ಓ ಅನಂತವಾಗಿರು
ಓ ನನ್ನ ಚೇತನ
ಆಗು ನೀ ಅನಿಕೇತನ

ಕುವೆಂಪು ಅವರ ಆತ್ಯಂತಿಕ ಸ್ವಾತಂತ್ರ್ಯಗೀತೆ ಎಂದೂ ಎನಿಸಿಕೊಳ್ಳಬಲ್ಲ ಈ ಗೀತೆ ಸ್ವತಃ ಕುವೆಂಪು ಅವರೇ ಘೋಷಿಸಿದಂತೆ ಅವರ ಬದುಕಿನ ಸಾರ ಸಂದೇಶವಾದ ವಿಶ್ವಮಾನವ ಸಂದೇಶವನ್ನು ಹೊತ್ತ ಗೀತೆ. ಹೀಗೆ ಕುವೆಂಪು ಅವರಿಗೆ ಸ್ವಾತಂತ್ರ್ಯವೆಂಬುದು ನಿಜಾರ್ಥದಲ್ಲಿ ಅವಿಭಾಜ್ಯವೂ ಅಖಂಡವೂ ಆಗಿದ್ದುದರಿಂದ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಸನ್ನಿವೇಶಗಳೆರಡರಲ್ಲೂ ಕುವೆಂಪು ಪ್ರತಿಕ್ರಿಯಿಸಿದ್ದು ಒಂದೇ ನೆಲೆಯಲ್ಲಿ : ಅದು ಚೇತನಾರೋಹಣ ನೆಲೆ.

ಅಂದ ಮಾತ್ರಕ್ಕೆ ಕುವೆಂಪು ಅವರಿಗೆ ಆಗಸ್ಟ್ ೧೫ರ ಸ್ವಾತಂತ್ರ್ಯ ಅಷ್ಟು ಮಹತ್ವದ್ದಾಗಿರಲಿಲ್ಲ ಎಂದಲ್ಲ. ಆಗಸ್ಟ್ ೧೫ರ ಆ ದಿನಕ್ಕಾಗಿ ಭಾರತದ ಎಲ್ಲ ಸ್ವಾತಂತ್ರ್ಯಪ್ರಿಯ ಪ್ರಜೆಗಳಂತೆ ಅವರೂ ಕಾದಿದ್ದರು. ಏಕೆಂದರೆ ಅವರು ಮುಂದೆ ರಾಷ್ಟ್ರಕವಿ ಪ್ರಶಸ್ತಿ ಸ್ವೀಕಾರ

ಮಾಡಿದ ಸಂದರ್ಭದಲ್ಲಿ ಹೇಳಿದಂತೆ

''ನಾನು ಲಾಠಿಯೇಟು ತಿಂದಿಲ್ಲ. ಸೆರೆಮನೆಗೆ ಹೋಗಿಲ್ಲ. ಬ್ರಿಟಿಷರ ವಿರುದ್ಧವಾಗಿ ತಿಲಕ ಮತ್ತು ಗಾಂಧೀಜಿ ಪ್ರಭಾವವು ಪ್ರಚೋದಿಸಿದ ವಿದ್ಯಾರ್ಥಿ ಮೆರವಣಿಗೆಗಳಲ್ಲಿ ಕೂಗಿಕೊಂಡು ಅಲೆದಿದ್ದೇನೆ. ವಿದೇಶಿ ವಸ್ತ್ರ ದಹನ ಯಜ್ಞಗಳಲ್ಲಿ ಭಾಗವಹಿಸಿ, ಪ್ರೇಕ್ಷಕನಾಗಿ ನಿಂತಿದ್ದು, ಪಕ್ಕದಲ್ಲಿ ನಿಂತಿದ್ದ ಮಿತ್ರರು ಹುರಿದುಂಬಿಸಿದ್ದಕ್ಕಾಗಿ ತಾತ್ಕಾಲಿಕ ಭಾವಾವೇಶಕ್ಕೊಳಗಾಗಿ ಇದ್ದುದೊಂದು ಅಂಗಿಯನ್ನೂ, ಟೋಪಿಯನ್ನೂ ಬೆಂಕಿಗೆ ಎಸೆದದ್ದು ಉಂಟು... ಸುಮಾರು ೧೯೨೫ ರಿಂದ ೧೯೪೭ರ ವರೆಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯ ಸಂಗ್ರಾಮದ ಚಿತ್ಸಾಗರದಲ್ಲಿ ನನ್ನ ಕವಿಚೇತನ ಸಮುದ್ರ ಸಂಪೂರ್ಣ ಮಗ್ನವಾಗಿಬಿಟ್ಟಿತು. ಆ ಬೃಹತ್ ಸಾಗರದ ಸಂಮಥನ ಕ್ಷೋಭೆಯಿಂದ ಉಲ್ಲೋಲ ಕಲ್ಲೋಲವಾದ ಮಹಾ ತರಂಗಗಳೆಲ್ಲ ಈ ಕವಿಚೇತನ ಸಮುದ್ರದಲ್ಲಿಯೂ ಪ್ರತಿಫಲನವಾಗಿ ಸಾವಿರಾರು ಕವನರಾಶಿ ಪುಂಜೀಭೂತವಾದುವು ಸಾಹಿತ್ಯವೇಲೆಯಲ್ಲಿ. ಆ ಕಾಲದಲ್ಲಿ ನಡೆದ ಯಾವ ಮಹಾ ಘಟನೆಯೂ ಬಹುಶಃ ನನ್ನ ಲೇಖನಿಯಿಂದ ವಂಚಿತವಾಗಿಲ್ಲ''.

ಪ್ರತಿಯೊಂದು ವಿದ್ಯಮಾನವನ್ನೂ ಅದರ ಅಲ್ಪಕಾಲಿಕ ಹಾಗೂ ದೀರ್ಘಕಾಲಿಕ ಮತ್ತು ಲೌಕಿಕ ಹಾಗೂ ಪಾರಮಾರ್ಥಿಕ ಅರ್ಥ ಹಾಗೂ ನೆಲೆಗಳಲ್ಲಿ ಅರ್ಥೈಸುತ್ತಿದ್ದ ಕುವೆಂಪು ಅವರಿಗೆ ಆಗಸ್ಟ್ ೧೫ ಸಹಜವಾಗಿಯೇ ಒಂದು ದೊಡ್ಡ ಹಬ್ಬವಾಗಿತ್ತು. ಇಡೀ ಮಧ್ಯರಾತ್ರಿ ಅವರು ರೇಡಿಯೋ ಮುಂದೆ ಕೂತು ಆ ಮೊದಲ ಸ್ವಾತಂತ್ರ್ಯ ದಿನದಂದು ದೆಹಲಿಯಲ್ಲಿ ನಡೆದ ಸಮಾರಂಭಗಳ ವೀಕ್ಷಕ ವಿವರಣೆ ಕೇಳುತ್ತಾ ಅಲ್ಲಿನ ಚಿತ್ರಗಳಲ್ಲಿ ಕಲ್ಪಿಸಿಕೊಳ್ಳುತ್ತಾ ಬರೆದ 'ಶ್ರೀ ಸ್ವಾತಂತ್ರ್ಯೋದಯ ಮಹಾ ಪ್ರಗಾಥಾ' ಎಂಬ ಖಂಡ ಕವನ ಸ್ವತಂತ್ರ ಭಾರತ ಕುರಿತ ಅವರ ಕನಸುಗಳನ್ನೆಲ್ಲ ಆ ದಿನದ ರೋಮಾಂಚನದೊಂದಿಗೆ ನಿರೂಪಿಸುತ್ತದೆ :

ಸಾರಿ ಬಾ ಸರ್ವರ್ಗೆ ಸ್ವಾತಂತ್ರ್ಯಮಂ
ಸಾರಿ ಬಾ ಸರ್ವರ್ಗೆ ಸಾಮ್ಯತ್ವಮಂ
ಸರ್ವರ್ಗೆ ಸಾರಿಬಾ ಸೌಹಾರ್ದಮಂ
ಸರ್ವ ಲೋಕದ ಸರ್ವಸಂತೋಷಮಂ
ಸರ್ವರಿಂ ಸರ್ವರಾ ಉದ್ಧಾರಮಂ

ಇದೆಲ್ಲ ಆಗಬೇಕಾದದ್ದು ಹೀಗೆ :

ಆ ಜಾತಿಯ ಈ ವರ್ಣದ
ಭೇದದ ಭೂತವನಿಂದೇ

ಸಂಹರಿಸುವ ಸುರನೀತಿಯ

ವ್ರತವಾಗಲಿ ಪಥವೊಂದೇ

ಪೊರೆಗಳಚಿದ ಹೊಸನಾಗರ

ಹೆಡೆಯೆತ್ತುವ ತೆರದಿ

ಹೊಸ ನೋಂಪಿಯ ಹೊಸ ಹುರುಪಿಂ

ಝಳಪಿಸಲಾ ಋತಖಡ್ಗಂ

ದೃಢ ಮುಷ್ಟಿಯ ಕರದಿ

ಕೊನೆಗೆ ಈ ಲಹರಿ ಹೊರಳುವುದು -

ಪುರುಷಾರ್ಥದ ಪರಮಾರ್ಥದ

ಆಧ್ಯಾತ್ಮಿಕ ಚೇತನಕೀ

ಸ್ವಾತಂತ್ರ್ಯದ ಸಂಕೇತವೆ

ಚಿರಕೇತನವಾಗುವವೋಲ್

ಕೃಪೆಯಿರಲೆಂದೆಂದೂ

ಎಂಬ, ನಾನು ಈ ಹಿಂದೆ ಪ್ರಸ್ತಾಪಿಸಿದ ಸ್ವಾತಂತ್ರ್ಯದ ನಿರಪೇಕ್ಷ ಅರ್ಥದ ನೆಲೆಗೆ.

ಕುವೆಂಪುರವರ ವ್ಯಕ್ತಿತ್ವವೇ ಹಾಗೆ. ಉಪನಿಷತ್ ಪ್ರಣೀತವಾದ ಪೂರ್ಣದೃಷ್ಟಿ, ರಾಮಕೃಷ್ಣ ಪರಮಹಂಸ ಪ್ರಣೀತವಾದ ಸಮನ್ವಯ ತಂತ್ರ ಹಾಗೂ ವಿನೋಬಾ ಪ್ರಣೀತವಾದ ಸರ್ವೋದಯ ಮಂತ್ರ ಅವರ ಚಿಂತನಾ ಕ್ರಮವನ್ನು ರೂಪಿಸಿದ ಅಂಶಗಳು. ಭಾರತವು ೧೯೫೦ರಲ್ಲಿ ಗಣರಾಜ್ಯವೆಂದು ಘೋಷಿಸಲ್ಪಟ್ಟಾಗ ಅವರು ಬರೆದ 'ಶ್ರೀ ಸಾಮಾನ್ಯರ ದೀಕ್ಷಾಗೀತೆ'ಯೆಂಬ ಪದ್ಯವನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಿದಾಗ, ಈ ಪದ್ಯದ ಆರಂಭದಲ್ಲಿಯೇ ಬರುವ 'ಶ್ರೀಸಾಮಾನ್ಯವೇ ಭಗವನ್ ಮಾನ್ಯಂ; 'ಶ್ರೀಸಾಮಾನ್ಯ'ವೆ ಭಗವದ್ ಧನ್ಯಂ! ಸಾಮಾನ್ಯತೆ ಭಗವಂತನ ರೀತಿ; ಸಾಮಾನ್ಯವೆ ದಿಟ ಭಗವತ್ ಪ್ರೀತಿ' ಎಂಬ ಸಾಲುಗಳಲ್ಲಿರುವ ಕ್ರಾಂತಿಕಾರಕತೆಯನ್ನು ಅರ್ಥ ಮಾಡಿಕೊಳ್ಳಬಹುದು. 'ಶ್ರೀಸಾಮಾನ್ಯ' ಎಂಬ ಶಬ್ದವೇ ಕುವೆಂಪುರವರ ಕೊಡುಗೆಯೆಂದು ನಾನು ಕೇಳಿದ್ದೇನೆ. ಗಣರಾಜ್ಯವೆಂದರೆ ಸಾಮಾನ್ಯದ ಪೂಜೆ ಎಂಬ ಅವರ ಕಾಣ್ಕೆ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಾಗೂ ಗಣರಾಜ್ಯದ ಕಲ್ಪನೆಗಳನ್ನು ಅವರು ಎಷ್ಟು ಮೂಲಭೂತವಾಗಿ ಗ್ರಹಿಸಿದ್ದರು ಎಂಬುದರ ಸೂಚನೆ ನೀಡುತ್ತದೆ. ಅವರು ಗಣರಾಜ್ಯ ವ್ಯವಸ್ಥೆಯ ಆಗಮನವನ್ನು ಗುರುತಿಸುವುದು ಹೀಗೆ :

ಕೊನೆಗೊಂಡಿತೋ ಓರೋರ್ವರ ಗರ್ವದ ಕಾಲ

ಇದು ಸರ್ವರ ಕಾಲ

ಸರ್ವೋದಯ ಸರ್ವೋದಯ

ಸರ್ವೋದಯ ಯುಗಮಂತ್ರ
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ
ಮೇಲಿಲ್ಲವೋ ಕೀಳಿಲ್ಲವೋ
ಸರ್ವ ಸಮಾನದ ರಾಜ್ಯ
ಅಧ್ಯಕ್ಷನೋ ಸೇನಾನಿಯೋ
ಕಮ್ಮಾರನೋ ಚಮ್ಮಾರನೋ
ಕಾಯಕವೆಲ್ಲವೂ ಪೂಜ್ಯ

ಇಂತಹ ಸಾಲುಗಳಲ್ಲಿ ವಿಮರ್ಶಕರು ಕಾವ್ಯವಿದೆಯೋ ಇಲ್ಲವೋ ಎಂದು ನೋಡಿ ಮುಖ ಆಕಡೆ ತಿರುಗಿಸಿದರೆ, ಶ್ರೀಸಾಮಾನ್ಯರು ಇಲ್ಲಿ ತಾವಿದ್ದೇವೆಯೋ ಇಲ್ಲವೋ ಎಂದು ನೋಡಿ ಕುವೆಂಪು ಅವರನ್ನು ಜನತೆಯ ಕವಿ ಎಂದು ಗುರುತಿಸಿದರು. ಕುವೆಂಪು ಅವರ ಬರಹಗಳಲ್ಲಿ ಶ್ರೀಸಾಮಾನ್ಯನ ಅಸಾಮನ್ಯತೆಯದೇ ಮೇಲಾಟ. ಅದೇ ಪ್ರಜಾಪ್ರಭುತ್ವದ ತಿರುಳು. ಕುವೆಂಪು ಅವರನ್ನು ಸಾಮಾನ್ಯವಾಗಿ ದಂತಗೋಪುರದ ಕವಿ ಎಂದು ವರ್ಣಿಸುತ್ತಿದ್ದುದು ಉಂಟು. ಆದರೆ ಈ ದಂತಗೋಪುರದ ಕವಿ ಶ್ರೀಸಾಮಾನ್ಯನ ಏಳ್ಗೆಯ ವಿಷಯವಾಗಿ ತೋರಿದಷ್ಟು ವೈವಿಧ್ಯಮಯವೂ ತೀವ್ರವೂ ಆದ ಕಾಳಜಿಯನ್ನು ಇನ್ನಾವ ಆಧುನಿಕ ಕನ್ನಡ ಬರಹಗಾರನೂ ತೋರಿದಂತಿಲ್ಲ.

ಅವರು ಕನ್ನಡ ಪ್ರಾಧ್ಯಾಪಕರಾಗಿ, ಕಾಲೇಜೊಂದರ ಪ್ರಾಂಶುಪಾಲರಾಗಿ, ವಿಶ್ವವಿದ್ಯಾಲಯವೊಂದರ ಉಪಕುಲಪತಿಯಾಗಿ ಮಾಡಿದ ಕೆಲಸ, ಚಿಂತನೆಗಳೆಲ್ಲವೂ ಈ ಪ್ರಜಾಪ್ರಭುತ್ವದ ತಿರುಳನ್ನು ಪುಷ್ಟಿಗೊಳಿಸುವಂತಹವೇ ಆಗಿದ್ದವು. ಆಡಳಿತ ಹಾಗೂ ಶಿಕ್ಷಣದ ಭಾಷೆಯಾಗಿ ಕನ್ನಡ, ಅಖಂಡ ಕರ್ನಾಟಕ, ಜಾತಿ ನಿರ್ಮೂಲನ - ಇವು, ಬದುಕನ್ನ ಸಕಲವೂ ಪರಿಪೂರ್ಣತೆಯೆಡೆಗೆ ವಿಕಾಸವಾಗುತ್ತಿದೆ ಎಂಬ ದೃಷ್ಟಿಯೊಡನೆ ಗ್ರಹಿಸುವ ಅವರ ಪೂರ್ಣ ದೃಷ್ಟಿಯ ಅವಿಭಾಜ್ಯ ಅಂಗಗಳೇ ಆಗಿದ್ದವು. ಭಾಷೆ ಹಾಗೂ ಸ್ವಾತಂತ್ರ್ಯದ ಸಂಬಂಧವನ್ನು ಅವರು ವಿಶ್ಲೇಷಿಸುವ ತೀವ್ರತೆ ನೋಡಿ : ''ಕನ್ನಡ ಭಾಷೆ ಮಾತಾಡುವ ಜನರ ನಡುವೆಯೇ ಬಾಳಿ ಬದುಕಿ ಅನ್ನ ಸಂಪಾದನೆ ಮಾಡುತ್ತಾ, ಜ್ಞಾನ, ಆಲೋಚನೆ, ವಿಚಾರಗಳನ್ನೆಲ್ಲ ಬೇರೊಂದು ಭಾಷೆಯಲ್ಲೇ ಇಡಲೆತ್ನಿಸುವವನು, ನೀಗ್ರೋ ಗುಲಾಮರಿಂದ ದುಡಿಸಿಕೊಂಡು ದೊಡ್ಡವರಾದ ಅಮೆರಿಕನ್ ಶೋಷಕರಿಗಿಂತ ಕೆಟ್ಟ ಹಾಗೂ ಅತಿ ಸೂಕ್ಷ್ಮ ಶೋಷಕ.'' ಸ್ವಾತಂತ್ರ್ಯ ಬರುವ ಮುನ್ನವೇ ಅಖಂಡ ಕರ್ನಾಟಕದ ಹಾಗೂ ಅದಕ್ಕಾಗಿ ಈಗಿನ ಅವರ ನಾಡಗೀತೆಯ ಪ್ರಪಿತಾಮಹ ನೆಂದು ಅವರೇ ಕರೆದಿರುವ ಕರ್ನಾಟಕ ರಾಷ್ಟ್ರಗೀತೆಯನ್ನು ಬರೆದು, ಆ ಅಖಂಡ ಕರ್ನಾಟಕದಲ್ಲಿ ಸರ್ವ ರಂಗಗಳಲ್ಲೂ ಕನ್ನಡವೇ ರಾರಾಜಿಸುವ ಕನಸನ್ನು ಕಂಡಿದ್ದ ಕುವೆಂಪು ಸ್ವಾತಂತ್ರ್ಯಾನಂತರ ತಮಗೆ ದೊರಕಿದ ಎಲ್ಲ ಅವಕಾಶ - ಸಂದರ್ಭಗಳಲ್ಲೂ ಕನ್ನಡದ ವೀರ ಸೇನಾನಿಯಾಗಿ ಏನೆಲ್ಲ ಮಾಡಿದರು; ಅದಕ್ಕಾಗಿ ಏನೆಲ್ಲ ಟೀಕೆ - ದೋಷಾರೋಪಣೆಗಳಿಗೆ ಒಳಗಾದರು ಎಂಬುದನ್ನು ನಾನು ಇಲ್ಲಿ

ವಿವರವಾಗಿ ಹೇಳಬೇಕಿಲ್ಲ. ಕರ್ನಾಟಕದಲ್ಲಿ ಇಂದು ಇಂಗ್ಲಿಷ್‌ಮಯ ವಾತಾವರಣದೆದುರಲ್ಲೂ ಕನ್ನಡ ಭಾಷೆ ಒಂದು ಜನತಾವಾಣಿಯಾಗಿ, ಪ್ರಜಾಪ್ರಭುತ್ವದ ಸಂಕೇತವಾಗಿ ಉಳಿಯಲೆತ್ನಿಸುತ್ತಿದ್ದರೆ ಅದಕ್ಕೆ ಕುವೆಂಪು, ಕರ್ನಾಟಕದ ಜನತೆಗೆ ನೀಡಿದ ಕನ್ನಡ ದೀಕ್ಷೆಯೇ ಪ್ರಮುಖ ಪ್ರೇರಕ ಶಕ್ತಿಯಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಕನ್ನಡವನ್ನು ಒಂದು ಪ್ರಬಲ ಜನತಾ ಶಕ್ತಿಯಾಗಿಸಿಲಿಕ್ಕೇ ಕುವೆಂಪು ಅವರು ಮೇಲ್ನೋಟಕ್ಕೆ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣುವಂತಿದ್ದ ಅಖಂಡ ಕರ್ನಾಟಕದ ಕಲ್ಪನೆಯನ್ನು ಒಂದು ಸಾಂಸ್ಕೃತಿಕ ಕಲ್ಪನೆಯನ್ನಾಗಿ ಅರ್ಥೈಸಿದ್ದು. ಕರ್ನಾಟಕವೆಂಬುದು ಬರೀ ದೇಶವಿಸ್ತೀರ್ಣವಲ್ಲ; ಕಾಲ ವಿಸ್ತೀರ್ಣ ಹಾಗೂ ಮನೋವಿಸ್ತೀರ್ಣ ತತ್ವಗಳೂ ಅದರಲ್ಲಡಗಿದ್ದು ಕನ್ನಡಿಗರ ಆತ್ಮ ತುಷ್ಟಿ, ಭೌತಿಕ ಪುಷ್ಟಿಗಳೆರಡಕ್ಕೂ ಇದು ಭೂಮಿಕೆಯಾಗಬಲ್ಲುದೆಂದು ಅವರು ಪ್ರತಿಪಾದಿಸಿದರು. ಸ್ವಾತಂತ್ರ್ಯದ ನಿಜವಾದ ಫಲಗಳನ್ನು ತನ್ನ ಜನತೆಗೆ ಸಮರ್ಥ ಬರಹಗಾರ ಅತವಾ ಚಿಂತಕನೊಬ್ಬ ದೊರಕಿಸಿಕೊಡಲೆತ್ನಿಸುವುದು ಹೀಗೇ :

> **ಬರಿಯ ಚದರ ಮೈಲಿಗಳಲ್ತು ಕರ್ನಾಟಕ ದೇಶ ವಿಸ್ತೀರ್ಣಮಂ**
> **ನೆನೆ ನೆನೆ ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ**
> **ಮರೆಯದಿರು ಚದರ ಸಂವತ್ಸರದ ಶತಮಾನಗಳ ಕಾಲವಿಸ್ತೀರ್ಣಮಂ**
> **ಪ್ರಾಣಮಯ, ಭಾವಮಯ, ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ**

('ಕರ್ನಾಟಕ ರಾಜ್ಯೋದಯ ಶ್ರೀಗೀತೆ')

ಸ್ವಾತಂತ್ರ್ಯದ ನಿಜಫಲಗಳು ಜನತೆಗೆ ದೊರಕದಂತೆ ಪ್ರತಿಬಂಧಿಸಿರುವ ಶಕ್ತಿಗಳನ್ನು ಗುರುತಿಸಿ ಅವುಗಳ ವಿರುದ್ಧ ತಮ್ಮ ವೈಚಾರಿಕ ಕತ್ತಿಯನ್ನು ಝಳಪಿಸುವಲ್ಲಿ ಕುವೆಂಪು ಹಿಂದೆ ಬಿದ್ದಿಲ್ಲ. ನಮ್ಮ ಸ್ವಾತಂತ್ರ್ಯಹರಣಕ್ಕೆ ಇಂಗ್ಲಿಷಿಗಿಂತ ಹೆಚ್ಚಾಗಿ ನಮ್ಮ ಪಾರಂಪರಿಕ ಮತಭ್ರಾಂತಿಯೇ ಕಾರಣವೆಂದು ಕುವೆಂಪು ನಂಬುತ್ತಾರೆ. ಅವರ 'ಧ್ರಾಂ ಧ್ರೀಂ ಧ್ರೂಂ' ಎಂಬ ಸ್ವಾತಂತ್ರ್ಯ ಪೂರ್ವ ಕವನದಲ್ಲಿ ಅದನ್ನು ಸಾಂಕೇತಿಕವಾಗಿ ನಿರೂಪಿಸಿದ್ದಾರೆ. ಮತಭ್ರಾಂತಿ ಹಾಗೂ ಅದರ ಶನಿ ಸಂತಾನವೆಂದು ಅವರು ಕರೆಯುವ ಜಾತಿಪದ್ಧತಿಯ ವಿರುದ್ಧ 'ನಿನ್ನೆದೆಯ ದನಿಯೆ ಋಷಿ, ಮನು ನಿನಗೆ ನೀನು' ಎಂಬ ಘೋಷ ವಾಕ್ಯವನ್ನಾಧರಿಸಿದ ಅವರ ವೈಚಾರಿಕ ಕದನ, ಸ್ವಾತಂತ್ರ್ಯಪೂರ್ವ ಸನ್ನಿವೇಶದಿಂದ ಸ್ವಾತಂತ್ರ್ಯೋತ್ತರ ಸನ್ನಿವೇಶಕ್ಕೂ ಚಾಚಿಕೊಂಡಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ಕದನ ಕವನಗಳ ಮೂಲಕ ನಡೆಯುತ್ತಿದ್ದುದು ಸ್ವಾತಂತ್ರ್ಯೋತ್ತರ ಸನ್ನಿವೇಶದಲ್ಲಿ ಗದ್ಯಕ್ಕೆ ಪರಿವರ್ತಿತವಾಗಿದೆ. ಸೂಚ್ಯ ವಾಚ್ಯವಾಗಿದೆ. ಅದಕ್ಕೆ ಸ್ವಾತಂತ್ರ್ಯೋತ್ತರ ಸನ್ನಿವೇಶದ ವಿಕೃತ ಜಾತೀಯತೆಯೇ ಕಾರಣವಾಗಿದೆ. ೧೯೭೦ಳರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ ಮಾಡುತ್ತ ವಿಚಾರ ಕ್ರಾಂತಿಗೆ ಆಹ್ವಾನ ನೀಡಿ ಹೇಳಿದುದು ಹೀಗೆ :

> 'ನಮ್ಮ ಪ್ರಜಾಸತ್ತೆ ಕಲುಷಿತವಾಗಲು ಹಣ ಒಂದೆಯೇ ಕಾರಣ
> ವೆಂದು ತಿಳಿಯುವುದು ತಪ್ಪಾಗುತ್ತದೆ. ಅದಕ್ಕಿಂತಲೂ ಮಹತ್ತಾದ ಮತ್ತು

ಮೂಲಭೂತವಾದ ಮತ್ತೊಂದು ಕಾರಣವೂ ಇದೆ, ನಮ್ಮ ಪುಣ್ಯಭೂಮಿ ಭಾರತದಲ್ಲಿ! ಅದು ಒಂದು ಅಮೂರ್ತ ವಸ್ತು. ಅದು ಹಾಕಿಕೊಂಡಿರುವ ವೇಷದಿಂದ ತುಂಬ ಸಾಧು ಮತ್ತು ಪೂಜ್ಯ ಎಂಬಂತೆ ತೋರುತ್ತದೆ. ಅದು ಭಾವರೂಪಿಯಾದುದರಿಂದ ಅತಿ ಸೂಕ್ಷ್ಮವಾಗಿ ಹೃದಯ ಪ್ರವೇಶ ಮಾಡಿ ನಮ್ಮನ್ನು ಆಕ್ರಮಿಸುತ್ತದೆ. ಮತ್ತು ನಮ್ಮಲ್ಲಿ ನಿಜವಾಗಿಯೂ ಇರುವ ಒಂದು ಅನಿರ್ವಚನೀಯ - ಅತ್ಯಂತ ಅಂತರತಮ - ಸತ್ಯಸ್ಯ ಸತ್ಯವಾದ ಸನಾತನ ತತ್ವಕ್ಕೆ (ಅದನ್ನು ಆಧ್ಯಾತ್ಮ ಎಂದು ಹೆಸರಿಸುತ್ತೇವೆ) ಅದು ತನ್ನ ಬಾಂಧವ್ಯವನ್ನು ಘೋಷಿಸುತ್ತಾ ಬಂದಿರುವುದರಿಂದಲೂ ಮತ್ತು ಅದನ್ನೇ ತಾನು ಪೋಷಿಸುತ್ತಿರುವುದಾಗಿ ಹೇಳುತ್ತಲೂ ಇರುವುದರಿಂದಲೂ ಅದರ ಪ್ರಚ್ಛನ್ನ ವಂಚನೆಯ ಮುಷ್ಟಿಯಿಂದ ತಪ್ಪಿಸಿಕೊಳ್ಳುವುದೂ ಕಷ್ಟಸಾಧ್ಯವಾಗಿದೆ. ಅದರ ಹೆಸರು 'ಮತ'! ಈ ಮತಭ್ರಾಂತಿಯಿಂದ ಲೋಕಕ್ಕೆ ಆಗಿರುವಷ್ಟು ಹಾನಿ ಮತ್ತಾವುದರಿಂದಲೂ ಆಗಿಲ್ಲ ಎಂದು ತೋರುತ್ತದೆ. ಇನ್ನು ಮುಂದೆಯಾದರೂ ನೀವು ಆಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತಭ್ರಾಂತಿ ಮತ್ತು ಮತಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲೀ ಸಮಾಜವಾದವಾಗಲೀ, ಸಮಾನತಾಭಾವ ಸ್ಥಾಪನೆಯಾಗಲೀ ಎಂದೆಂದಿಗೂ ಸಾಧ್ಯವಾಗುವುದಿಲ್ಲ.

ಐಕ್ಯಕ್ಕೂ ಮೈತ್ರಿಗೂ ಸಾಧನವಾಗುವ ಆ ಚಿರಂತನ ಅಧ್ಯಾತ್ಮವನ್ನು ಈ ಅಜ್ಞಾನಜನ್ಯವಾದ ಮತಭಾವನೆ ಆಕ್ರಮಿಸಿ ವರ್ಣ ಜಾತಿ ಪಂಥ ಕೋಮು ಪಂಗಡಗಳೆಂಬ ನೂರಾರು ಭೇದ ಭಾವನೆಗಳ ಬಿರುಕು ಒಡಕುಗಳಿಗೆ ಸಮಾಜವು ಸಿಕ್ಕಿ ಛಿದ್ರ ಛಿದ್ರವಾಗುವಂತೆ ಮಾಡಿದೆ. ಈ ಭೇದಭಾವಗಳೂ ಛಿದ್ರಗಳೂ ಎಲ್ಲಿಯವರೆಗೆ ಇರುತ್ತವೆಯೋ ಅಲ್ಲಿಯವರೆಗೆ ನಿಜವಾದ ಸಮಾನತಾ ಭಾವನೆಯ ಪ್ರಜಾಸತ್ತೆ ಬರಿಯ ಮರು ಮರೀಚಿಕೆಯ ಭ್ರಾಂತಿಜಲವಾಗುತ್ತದೆ. ಆದ್ದರಿಂದ ಸಮಾಜವಾದದ, ಪ್ರಜಾಸತ್ತೆ ನಿಮ್ಮ ಗುರಿಯಾಗಿದ್ದರೆ ಮತಭಾವನೆಯ ಶನಿಸಂತಾನವಾದ ಜಾತಿ ಪದ್ಧತಿಯ ಸಂಪೂರ್ಣ ವಿನಾಶಕ್ಕೆ ನೀವು ಕಂಕಣ ಕಟ್ಟಿಕೊಂಡು ಹೋರಾಡಬೇಕು''[7].

ಈ ಹೋರಾಟ ಯಾರ ವಿರುದ್ಧವೂ ಅಲ್ಲ. ನಮ್ಮ ವಿರುದ್ಧವೇ ಎಂದು ಮಾರ್ಮಿಕವಾಗಿ ಕುವೆಂಪು ತಮ್ಮ ಇನ್ನೊಂದು, ಒಕ್ಕೂಟದ ಭಾಷಣವೆಂದೇ ಸುಪ್ರಸಿದ್ಧವಾದ 'ಸಂಸ್ಕೃತಿ ಕ್ರಾಂತಿಗೆ ಕಹಳೆ' ನಾಂದಿಯಲ್ಲಿ ಹೀಗೆ ಹೇಳುತ್ತಾರೆ :[8]

''... ಈ ಪುರೋಹಿತಶಾಹಿ ಹುಲಿಯಂತೆ. ಇದಕ್ಕೆ ಸಣ್ಣ ಪುಟ್ಟ ಕಲ್ಲನ್ನು ಜೇಬಿನಲ್ಲಿಟ್ಟುಕೊಂಡು ಹೋಗಿ ಹೊಡೆಯುತ್ತೇನೆಂದರೆ ಹುಡುಗಾಟದ

ಕೆಲಸವಲ್ಲ. ಅದನ್ನು ಹೊಡೆಯಬೇಕಾದರೆ ನಾವು ಮದ್ದು ಗುಂಡುಗಳನ್ನು ತಯಾರು ಮಾಡಬೇಕು. ನಾವು ಹೇಳುವಂತಹ ಮದ್ದು ಗುಂಡು ರೂಪಕವಾದದ್ದು ಅಂತ ಇಟ್ಟುಕೊಳ್ಳೋಣ. ವಾಚ್ಯವಾಗಿಯೇ ಗುಂಡಿನಲ್ಲಿ ಹೊಡೆಯಬೇಕು ಅಂತ ಅಲ್ಲ. ಆದರೆ ಈ ವಿಚಿತ್ರ ಬೇಟೆಯಲ್ಲಿ (ಈ ಸಂದರ್ಭದಲ್ಲಿ) ಮೊದಲ ಗುಂಡು ತಗುಲಬೇಕಾದದ್ದು ಹುಲಿಯ ತಲೆಗಲ್ಲ, ನಿಮ್ಮ ತಲೆಗೇ! ತಲೆ... ತಲೆ... ತಲೆ, ಮೊದಲು ತಲೆಯಲ್ಲಿರುವ ಮೆದುಳನ್ನು ಕ್ಲೀನ್ ಮಾಡಬೇಕು. ಅವರಿಗಲ್ಲ, ಆ ಪುರೋಹಿತ ವರ್ಗದವರಿಗಲ್ಲ, ನಿಮಗೇ! 'ನೀವು' ಅಂತ ಹೇಳಿದೆ. ನನ್ನ ಮಟ್ಟಿಗೆ ನಾನೇನೋ ಅದರಿಂದ ಸಂಪೂರ್ಣ ಪಾರಾಗಿದ್ದೇನೆ. ಆದ್ದರಿಂದ ನನಗೇನೂ ರಗಳೆಯಿಲ್ಲ, ಗೊತ್ತಾಯಿತೇ! ನಾನು ಯಾವ ದೇವಸ್ಥಾನಕ್ಕಾಗಲೀ ಪೂಜೆ ಮಾಡಿಸಲು ಹೋಗದೆ ಐವತ್ತು ವರುಷಗಳ ಮೇಲೆ ಆಗಿದೆ. ಯಾವ ಭಟ್ಟನಾಗಲೀ, ಯಾವ ಪುರೋಹಿತನಾಗಲೀ ಯಾವ ಪಂಚಾಂಗವಾಗಲೀ ನನ್ನ ಬಳಿ ಸುಳಿಯಗೊಡುವುದಿಲ್ಲ. ನಮ್ಮ ಮದುವೆಗಿದುವೆಗೆ ಯಾವ ಹಾರುವನನ್ನಾಗಲೀ ಪೌರೋಹಿತ್ಯಕ್ಕೆ ಕರೆಸುವುದಿಲ್ಲ. ಕರೆಸಲೂ ಇಲ್ಲ. ಆದರೆ ಬೇರೆ ಬೇರೆ ಜನರಿಗೆ ಇದನ್ನೆಲ್ಲ ಹೇಳಿದರೆ 'ಏನಿದು? ನೀವು ಹೇಳುವದು ಭಯಂಕರವಾಗಿ ಕಾಣಿಸುತ್ತದೆ' ಎನ್ನುತ್ತಾರೆ. ಅಂದರೇನು ಅದರ ಅರ್ಥ? ಅಜ್ಞಾನದ ಇಲ್ಲಣ, ಅದನ್ನು ನೀವು ತೆಗೆಯಬೇಕು. ಅದಕ್ಕೆ ಎಷ್ಟು ಕೆಲಸ ಮಾಡಬೇಕಾಗುತ್ತದೆ ಗೊತ್ತೇ? ಆ ಅರ್ಥದಲ್ಲಿ ನಾನು ಹೇಳಿದ್ದು - ಈ ವಿಚಿತ್ರ ಬೇಟೆಯಲ್ಲಿ ಮೊದಲ ಗುಂಡು ತಗುಲಬೇಕಾದದ್ದು ನಿಮ್ಮ ತಲೆಗೇ ಎಂದು.''

ಹೀಗೆ ಕುವೆಂಪು ಸ್ವಾತಂತ್ರ್ಯೋತ್ತರ ಸನ್ನಿವೇಶದ ಸಕಲ ಆಯಾಮಗಳಿಗೂ ತಮ್ಮದೇ ವೈಚಾರಿಕ ಸಾಂಸ್ಕೃತಿಕ ಸ್ಪರ್ಶ ನೀಡಿ ಜನಶಕ್ತಿಯನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ. ಸರಳ ವಿವಾಹಕ್ಕಾಗಿ ಅವರು ನಿರೂಪಿಸಿದ 'ಮಂತ್ರ ಮಾಂಗಲ್ಯ' ಪದ್ಧತಿ ಈ ಜಾಗೃತಿಯ ಕೆಲಸಕ್ಕೇ ಇನ್ನೊಂದು ಉದಾಹರಣೆ. ಇದು ಮುಂದೆ ಸರಳ ವಿವಾಹ ಮತ್ತು ಅಂತರ್ಜಾತಿ ವಿವಾಹ ಚಳುವಳಿಗೆ ನಾಂದಿ ಹಾಡಿತು. ಇಂತಹ ಜಾಗೃತಿಯ ಕೆಲಸಗಳನ್ನು ಗಮನಿಸಿಯೇ ಸಮಾಜವಾದಿ ನಾಯಕ ಡಾ. ರಾಮಮನೋಹರ ಲೋಹಿಯಾ ಅವರು ಕುವೆಂಪು ಅವರನ್ನು ರಾಜಕಾರಣಕ್ಕೆ ಆಹ್ವಾನಿಸುವ ಪ್ರಯತ್ನ ಮಾಡಿದರು. ಆಗ ಕುವೆಂಪು ಗೊಳ್ಳೆಂದು ನಕ್ಕು ''ನನಗೂ ಅಂತ ವ್ಯವಹಾರಕ್ಕೂ ಎಣ್ಣೆ ಸೀಗೆಕಾಯಿ ನಂಟು. ನನ್ನ ಧರ್ಮ ನನಗೆ, ನಿಮ್ಮ ಧರ್ಮ ನಿಮಗೆ. ಸ್ವಧರ್ಮೇ ನಿಧನಂ ಶ್ರೇಯಃ ! ನೀವು ಯಾವುದನ್ನು ರಾಜಕೀಯ ಪರಿಭಾಷೆಯಲ್ಲಿ ಹೇಳುತ್ತಿದ್ದೀರೋ ಅದರ ಸಾಂಸ್ಕೃತಿಕ ಆವೃತ್ತಿಯನ್ನಷ್ಟೇ ನಾನು ಹೇಳುತ್ತಿರುವುದು'' ಎಂದರಂತೆ. *(ನೋಡಿ : 'ರಾಷ್ಟ್ರಕವಿ ಕುವೆಂಪು' ಲೇ : ದೇಜಗೌ ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು)* ಆದರೂ ಮುಂದೆ ಕುವೆಂಪು ಲೋಹಿಯಾ ತತ್ವಗಳ ಸಂಕಲನವೊಂದಕ್ಕೆ ಮುನ್ನುಡಿ

ಬರೆದರು. ಅಷ್ಟೇ ಅಲ್ಲ ಏರುತ್ತಿದ್ದ ಜೆ.ಪಿ. ಚಳುವಳಿಯ ಕಾವಿನಲ್ಲಿ ಸಾಂಸ್ಕೃತಿಕ ಪರಿಧಿಯಾಚೆಗೆ ಬಂದು 'ವಿಚಾರ ಕ್ರಾಂತಿಗೆ ಆಹ್ವಾನ' ನೀಡುವ ಸಂದರ್ಭದಲ್ಲಿಯೇ ಹೇಳಿದರು :

> ನಮ್ಮ ಸ್ವಾತಂತ್ರ್ಯ ಸಂಪಾದನೆಗೆ ನಮ್ಮ ರಾಷ್ಟ್ರಪಿತನನ್ನೇನೋ ಉಪಯೋಗಿಸಿಕೊಂಡೆವು. ಆತ ಬೋಧಿಸಿದ ಸ್ವದೇಶಿ, ಸತ್ಯಾಗ್ರಹ, ಅಹಿಂಸೆ, ಗ್ರಾಮರಾಜ್ಯಗಳ ಸರಳ ಜೀವನ, ತ್ಯಾಗಬುದ್ಧಿ ಮೊದಲಾದ ಕೈದುಗಳನ್ನಾಂತು. ಆದರೆ ಸ್ವಾತಂತ್ರ್ಯ ಸಂಪಾದನೆ ಆದೊಡನೆಯೇ ಆತನನ್ನು ತೊಲಗಿಸಿದೆವು; ಆತನ ದೇಹಕ್ಕೆ ಗುಂಡಿಕ್ಕಿದವನೇನೋ ಒಬ್ಬನೆ; ಆದರೆ ತರುವಾಯ ಆತನ ಧ್ಯೇಯಕ್ಕೆ ಉರುಳಿಕ್ಕಿ ಕೊಂದವರು ಹಲವರು ಆತನ ಅನುಯಾಯಿಗಳೇ! ನೆಹರೂ ಅವರ ಮುಂದಾಳುತನದ ನೇತೃತ್ವದಲ್ಲಿ ನಾವು ಗಾಂಧಿಯ ಮೂಲತತ್ವಗಳನ್ನೆಲ್ಲ ಮೂಲೆಗೊತ್ತಿ, ನಮ್ಮ ರಾಷ್ಟ್ರವನ್ನು ಏಕಾಏಕಿ ಅಭಿವೃದ್ಧ ಶ್ರೀಮಂತ ಪಾಶ್ಚಾತ್ಯ ದೇಶಗಳ ಸರಿಸಮಕ್ಕೇರಿಸುವ ಹುಮ್ಮಸ್ಸಿನಲ್ಲಿ ಸಂಪೂರ್ಣವಾಗಿ ಅವರ ಅನುಕರಣೆಗೆ ದೀಕ್ಷಿತರಾದೆವು. ತರುವಾಯ ಸ್ವದೇಶದ ಮತ್ತು ವಿದೇಶದ ಕೆಲವು ರಾಜಕೀಯ ಮತ್ತು ಆರ್ಥಿಕ ಪ್ರಾಜ್ಞರು ಕೊಟ್ಟ ಎಚ್ಚರಿಕೆಯನ್ನೂ ನಾವು ಲೆಕ್ಕಿಸಲಿಲ್ಲ; ಪ್ರತಿಗಾಮಿ ಸೂಚನೆಗಳೆಂದೂ ಅವನ್ನು ತಿರಸ್ಕರಿಸಿದೆವು. ಆದರೂ ಗಾಂಧೀಜಿಯನ್ನು ಕೈಬಿಟ್ಟೆವು ಎಂದಾಗಬಾರದೆಂದು ಅವರ ಧ್ಯೇಯಗಳನ್ನು ಮ್ಯೂಸಿಯಂಗಳಲ್ಲಿ ಪ್ರದರ್ಶನಕ್ಕಿಟ್ಟೆವು : ಅಂದರೆ ಆ ಧ್ಯೇಯಗಳ ಜೀವ ತೆಗೆದು ಕೊಂದು, ಚರ್ಮ ಸುಲಿದು, ಹದ ಹಾಕಿ, ಪ್ರದರ್ಶನ ಮಂದಿರಗಳನ್ನು ಕಟ್ಟಿಸಿಬಿಟ್ಟೆವು. ಅವುಗಳ ಪೂಜೆಗೂ ಏರ್ಪಾಟು ಮಾಡಿ ಅವರ ಭಕ್ತರನ್ನೂ ಸಮಾಧಾನಪಡಿಸಿ, ಮೂಲೆಗೆ ತಳ್ಳಿ, ಮತ್ತೆ ನಮ್ಮ ಪಾಶ್ಚಾತ್ಯರ ಅನುಕರಣೆಯ ಪಾಂಚವಾರ್ಷಿಕ ಯೋಜನೆಗಳ ಯಾಗಕ್ಕೆ ಶುರುಮಾಡಿದೆವು''

ಆದರೆ ಕುವೆಂಪು ಅವರ ಪಶ್ಚಿಮದ ವಿರೋಧ ರಾಜಕೀಯಕ್ಕೆ ಸಂಬಂಧಿಸಿದ್ದೇ ಹೊರತು ಸಾಂಸ್ಕೃತಿಕವಾದುದಲ್ಲ. ಡಾ. ಜಿ.ಎಸ್. ಶಿವರುದ್ರಪ್ಪನವರು ಸಂದರ್ಶನವೊಂದರಲ್ಲಿ ''ಪಶ್ಚಿಮದಲ್ಲಿ ನಾವು ಸಾಂಸ್ಕೃತಿಕವಾಗಿ ಬಿಡಿಸಿಕೊಂಡು ಭಾರತೀಯವಾಗುವುದು ಹೇಗೆ?'' ಎಂದು ಕೇಳಿದ ಪ್ರಶ್ನೆಗೆ ಅವರು

> ''ಏನಂದಿರಿ? ಪಶ್ಚಿಮದಿಂದ ಸಾಂಸ್ಕೃತಿಕವಾಗಿ ಬಿಡಿಸಿಕೊಳ್ಳುವುದೇ? ಅದು ತೀರಾ ಅನಾವಶ್ಯಕ. ಪಶ್ಚಿಮದಿಂದ ಸಾಂಸ್ಕೃತಿಕವಾಗಿ ನಾವು ಬಿಡಿಸಿಕೊಳ್ಳಲೇಬಾರದು. ಉತ್ತಮವಾದುದನ್ನು ನಾವು ಉಳಿಸಿಕೊಳ್ಳಲೇಬೇಕು. ಇನ್ನು ಭಾರತೀಯತೆ ಅಂದರೆ ಏನು? ಭಾರತೀಯತೆಯ ಹೆಸರಿನಲ್ಲಿ ಎಲ್ಲ ಜಾತಿ - ಮತ ಇತ್ಯಾದಿಗಳನ್ನು ಉಳಿಸಿಕೊಳ್ಳೋದಾದರೆ ಆ ಭಾರತೀಯತೇನೇ

ಬೇಡ. ಮತ್ತೆ ಉಪನಿಷತ್ತುಗಳು ಹೇಳೋ ತತ್ವಗಳಿಗೆ, ಎಲ್ಲಿ ಜಾತಿ ಮತ ಏನೂ ಇಲ್ಲವೋ ಅಲ್ಲಿಗೆ ಹೋಗೋದಾದ್ರೆ ಹೋಗಿ. ಭಾರತೀಯನಾಗೋದು ಅಂದ್ರೆ ವಿಶ್ವಮಾನವನಾಗೋದು. ಮತ್ತೆ ಮೂಢನಂಬಿಕೆ, ಜಾತಿ - ಮತ - ಪುರಾಣ - ಸಂಪ್ರದಾಯ ಇತ್ಯಾದಿಗಳಲ್ಲಿ ಸಿಕ್ಕಿಹಾಕಿಕೊಳ್ಳೋದು ಭಾರತೀಯತೆ ಆಗೋದಿಲ್ಲ. ಇದನ್ನೆಲ್ಲ ಹೇಳೋರು ಯಾರು? ವಿಚಾರವಂತರೋ, ಮಠಾಧಿಪತಿಗಳೋ, ಯಾರು? ನಮ್ಮ ಮಠಾಧಿಪತಿಗಳೋ ಬಿಡಿ ಬಿಡಿ. ಅವರ ಅರ್ಥದ ಭಾರತೀಯತೆಯಿಂದ ನಾನು ದೂರವೇ.''

ಕುವೆಂಪು ಸ್ವಾತಂತ್ರ್ಯ ಬಯಸಿದ್ದು ಬ್ರಿಟಿಷರ ಆಳ್ವಿಕೆಯಿಂದ ಎನ್ನುವುದಕ್ಕಿಂತ ಹೆಚ್ಚಾಗಿ ಬ್ರಿಟಿಷರ ಆಳ್ವಿಕೆಗೆ ಕಾರಣವಾದ ಮತಮೌಢ್ಯ, ಜಾತಿ ಪದ್ಧತಿ, ರಾಜಶಾಹಿ ಹಾಗೂ ಸಂಬಂಧಿತ ಮೂಢ ಆಚರಣೆಗಳಿಂದ. ಕುವೆಂಪು ತಮ್ಮ ಸ್ವಾತಂತ್ರ್ಯ ಗೀತೆಗಳಲ್ಲಿ ಎಲ್ಲಿಯೂ ಬ್ರಿಟಿಷರನ್ನು ನಾಮಪದೀಯವಾಗಿ ದೂಷಿಸಲು ಹೋಗಿಲ್ಲ ಎಂಬುದು ಗಮನಾರ್ಹ. ಬ್ರಿಟಿಷರು ಬಾರದಿದ್ದರೆ ಭಾರತದ ಇಡೀ ಶೂದ್ರ ಜನಸ್ತೋಮ ಮನುಸ್ಮೃತಿಯ ಗುಲಾಮಗಿರಿಯಲ್ಲೇ ತೊಳಲಾಡ ಬೇಕಾಗಿರುತ್ತಿತ್ತು ಎನ್ನುವ ಕುವೆಂಪು ''ಇಂಡಿಯಾ ದೇಶವನ್ನು ಗೆದ್ದು ಅದರ ರಾಜಕೀಯ ಅವ್ಯವಸ್ಥೆಗೆ ಒಂದು ಸುವ್ಯವಸ್ಥೆಯನ್ನು ತಂದುಕೊಟ್ಟು ಬ್ರಾಹ್ಮಣಾದಿ ಉಚ್ಚ ವರ್ಣದವರಿಂದ ಸಾವಿರಾರು ವರ್ಷಗಳಿಂದ ತುಳಿಯಲ್ಪಟ್ಟು ದ್ವೇಷಿಸಲ್ಪಟ್ಟು ದಾಸ್ಯತ್ವವನ್ನೇ ದೈವತ್ವವೆಂದೂ ವಿಧಿಯೆಂದೂ ಒಪ್ಪಿಕೊಂಡು ಕಾಲಡಿಯ ಕಸವಾಗಿ ಬಿದ್ದಿದ್ದ ಶೂದ್ರಾದಿ ವರ್ಗದವರನ್ನು ತಲೆಯೆತ್ತುವಂತೆ ಪ್ರೇರಿಸಿದ್ದು ಇಂಗ್ಲೀಷೇ'' ಎಂದು ವಿಶ್ಲೇಷಿಸುತ್ತಾರೆ. ತಮ್ಮ ಚಿಂತನೆಯ ಬೆನ್ನೆಲುಬಾಗಿ ಅಳವಡಿಸಿಕೊಂಡಿದ್ದ ಇಂತಹ ದಿಟ್ಟ ನಿಸ್ಸಂಕೋಚ ಐತಿಹಾಸಿಕ ದೃಷ್ಟಿಕೋನ ದಿಂದಾಗಿಯೇ ಕುವೆಂಪು ಕರ್ನಾಟಕದಲ್ಲಿ ಎಲ್ಲ ಪ್ರಗತಿಪರ ಚಳುವಳಿಗಳ ಹಿಂದಿನ ಪ್ರೇರಕ ಶಕ್ತಿಯಾಗಿದ್ದರು - ಅದು ಕನ್ನಡ ಚಳುವಳಿಯೇ ಆಗಿರಲಿ, ಬಂಡಾಯ ಸಾಹಿತ್ಯ ಚಳುವಳಿಯೇ ಆಗಿರಲಿ, ರೈತ ಚಳುವಳಿಯೇ ಆಗಿರಲಿ, ದಲಿತ ಚಳುವಳಿಯೇ ಆಗಿರಲಿ - ಅವುಗಳ ಹಿಂದೆ ಕುವೆಂಪು ಅವರ ಒಂದೊಂದು ಕೃತಿಯನ್ನು ಸ್ಥೂಲವಾಗಿಯಾದರೂ ಗುರುತಿಸುವಷ್ಟರ ಮಟ್ಟಿಗೆ. ಕನ್ನಡ ಚಳುವಳಿಯ ಹಿಂದೆ 'ಬಾರಿಸು ಕನ್ನಡ ಡಿಂಡಿಮವ...' ಇದ್ದರೆ, ರೈತ ಚಳುವಳಿಯ ಹಿಂದೆ 'ಧನ್ವಂತರಿಯ ಚಿಕಿತ್ಸೆ' ಎಂಬ ಕಥೆ; ದಲಿತ ಚಳುವಳಿಯ ಹಿಂದೆ 'ಕರಿಸಿದ್ಧ' ಪದ್ಯವಿದೆ. ಬಂಡಾಯ ಸಾಹಿತ್ಯ ಚಳುವಳಿಯ ಹಿಂದೆ 'ಕಲ್ಕಿ' ಪದ್ಯವಿದೆ. ಹೀಗೆ ಕುವೆಂಪು ಕರ್ನಾಟಕ ಸ್ವಾತಂತ್ರ್ಯೋತ್ತರ ಸನ್ನಿವೇಶದಲ್ಲಿ ಎಲ್ಲ ಜಡತೆಯ ವಿರುದ್ಧ ವೈಚಾರಿಕವಾಗಿ ಬಂಡೆದ್ದ ಒಂದು ಆಧ್ಯಾತ್ಮಿಕ ಶಕ್ತಿ ರೂಪದಲ್ಲಿ ಕಾಣಸಿಗುತ್ತಾರೆ. ಏಕೆಂದರೆ ಜಡತೆಯ ವಿರುದ್ಧದ ಅವರೆಲ್ಲ ಬಂಡೂ ಆತ್ಯಂತಿಕವಾಗಿ, ಅದರ ಪೂರ್ಣಾವತಾರದಲ್ಲಿ ಕರ್ನಾಟಕ ಚೇತನದ ಉನ್ನತೀಕರಣ ವನ್ನೇ ಉದ್ದೇಶವಾಗಿಟ್ಟುಕೊಂಡಿರುತ್ತಿತ್ತು.

ಇಷ್ಟೆಲ್ಲವನ್ನೂ ನಾವು ಕುವೆಂಪು ಅವರ ಕೊನೆಯ ಸಾರ್ವತ್ರಿಕ ಭಾಷಣದ ಸುಮಾರು

೨೩ ವರ್ಷಗಳ ನಂತರದ ಅಂತರದಲ್ಲಿ ನಿಂತು ನೋಡುತ್ತಿದ್ದೇವೆ. ಈ ಎರಡು ದಶಕಗಳಲ್ಲಿ ಕಾವೇರಿ ಗಂಗೆಗಳಲ್ಲಿ ಬಹಳ ನೀರು ಹರಿದುಹೋಗಿದೆ. ಕುವೆಂಪು ಅವರು ಎಲ್ಲ ಒಳ್ಳೆಯದಕ್ಕೂ ಉದಾಹರಿಸುತ್ತಿದ್ದ ಸೋವಿಯೆತ್ ಯೂನಿಯನ್ ಕುಸಿದುಬಿದ್ದಿದೆ. ಅವರ ಆಧ್ಯಾತ್ಮಿಕ ಪ್ರೇರಣಾ ಶಕ್ತಿಗಳಾಗಿದ್ದ ಪರಮಹಂಸ, ವಿವೇಕಾನಂದರು, ರಾಮಕೃಷ್ಣ ಮಠಗಳಲ್ಲಿ ಮಡಿಯುಟ್ಟು ಕುಳಿತಿದ್ದಾರೆ. ಅವರ ಸರ್ವೋದಯ ತತ್ವದ ಗುರುವಾಗಿದ್ದ ವಿನೋಬಾ ಕುವೆಂಪು ಕಾಲದ ಹೊತ್ತಿಗೇ ಅಪ್ರಸ್ತುತವಾಗಿ ಹೋಗಿದ್ದರು. ಇನ್ನು ಕುವೆಂಪು ಚಿಂತನೆಯ ಹೃದಯ ಭಾಗದಂತಿದ್ದ ಜಾತಿ ವಿನಾಶ ತತ್ವ ಇಂದು 'ಸಾಮಾಜಿಕ ನ್ಯಾಯ'ವೆಂಬ ರಾಜಕೀಯ ಅಸ್ತ್ರದ ಹಿನ್ನೆಲೆಯಲ್ಲಿ ವಿಕೃತಾರ್ಥಕ್ಕೆ ಈಡಾಗಿದೆ. ಮತಭ್ರಾಂತಿಯಂತೂ 'ಸಾಂಸ್ಕೃತಿಕ ರಾಷ್ಟ್ರೀಯತೆ' ಎಂಬ ಹೆಸರಿನಲ್ಲಿ ಘನತೆಯನ್ನು ಪಡೆದುಕೊಳ್ಳುತ್ತಿದೆ. ಅಖಂಡ ಕರ್ನಾಟಕದ ಕಲ್ಪನೆ ಜಾಗತೀಕರಣದ ಹೆಬ್ಬಲೆಗೆ ಸಿಕ್ಕಿ ಕೊಚ್ಚಿ ಹೋಗುತ್ತಿದೆ. ಎಲ್ಲ ಸಿದ್ಧಾಂತಗಳೂ ಚಳುವಳಿಗಳೂ ಸುಸ್ತಾಗಿ ಕೂತಿವೆ. ಇಂತಹ ಒಂದು ದಿಕ್ಕೆಟ್ಟ ಸನ್ನಿವೇಶದಲ್ಲಿ ಕುವೆಂಪು ಅವರನ್ನು ನೆನಪು ಮಾಡಿಕೊಳ್ಳುತ್ತಿರುವುದೇ ಒಂದು ಸಾಂಸ್ಕೃತಿಕ ಸೋಜಿಗವೆನಿಸಿಕೊಳ್ಳಬಹುದು. ಎಷ್ಟಾದರೂ ಕುವೆಂಪು ಅವರೇ ಅವರ ಕಾಲದಲ್ಲಿ ಒಂದು ಸಾಂಸ್ಕೃತಿಕ ಸೋಜಿಗದಂತಿದ್ದರಲ್ಲವೇ?

❑

(೧೯೯೮ರ ಜನವರಿಯಲ್ಲಿ ರಾಷ್ಟ್ರಕವಿ ಕುವೆಂಪು ವಿಚಾರವೇದಿಕೆ ಏರ್ಪಡಿಸಿದ್ದ ವಾರ್ಷಿಕ ವಿಚಾರಸಂಕಿರಣದಲ್ಲಿ ಮಂಡಿಸಿದ ಪ್ರಬಂಧ)

ಕುವೆಂಪು ಅವರ ಕಥನ ಪ್ರತಿಭೆಯ ದಾರ್ಶನಿಕ ನೆಲೆಗಳು

ಮುದ್ದಣನ ನಂತರ ಕನ್ನಡ ಸಾಹಿತ್ಯವು ಪಾಶ್ಚಾತ್ಯ ಪ್ರೇರಣೆಗಳಿಂದಾಗಿ ವ್ಯಕ್ತಿನಿಷ್ಠ ಕಾವ್ಯ ಪ್ರಕಾರದೆಡೆಗೆ ಹೊರಳುವ ಮೂಲಕ ತನ್ನ ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆಯೊಂದಿಗೆ ಮಾತ್ರವಲ್ಲ ಭಾರತೀಯ ಮಹತ್ ಪರಂಪರೆಯೊಂದಿಗೆ ಸಂಬಂಧ ಕಳಚಿಕೊಳ್ಳುತ್ತಿದ್ದ ಸಂದರ್ಭದಲ್ಲಿ ರಾಮಾಯಣ-ಮಹಾಭಾರತಗಳ ಕಥನ ಪರಂಪರೆಯನ್ನು ತಮ್ಮ ಮಹಾಕಾವ್ಯ, ಖಂಡಕಾವ್ಯ ಹಾಗೂ ಹಲವಾರು ನಾಟಕಗಳ ರೂಪದಲ್ಲಿ ಪುನರುಜ್ಜೀವಿಸುವ ಮೂಲಕ ಮತ್ತೆ ಕನ್ನಡ ಸಾಹಿತ್ಯ ತನ್ನ ಮಾತೃ ಪರಂಪರೆಗೆ ಹಿಂದಿರುಗಲು ಕಾರಣರಾದವರು ಕುವೆಂಪು ಎಂಬುದನ್ನು ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಕನ್ನಡ ಕಾವ್ಯ ಪರಂಪರೆ ಹಾಗೂ ಕುವೆಂಪು' ಎಂಬ ತಮ್ಮ ಲೇಖನದಲ್ಲಿ *(ನೋಡಿ : ಕುವೆಂಪು : ಒಂದು ಪುನರನ್ವೇಷಣೆ, ಸಂ : ಡಿ.ಎಸ್. ನಾಗಭೂಷಣ ಪ್ರ: ಲೋಹಿಯಾ ಪ್ರಕಾಶನ)* ಗುರುತಿಸಿದ್ದಾರೆ. ಹಾಗೆ ನೋಡಿದರೆ ಕುವೆಂಪು ಅವರ ಸಮಗ್ರ ಸಾಹಿತ್ಯವನ್ನು ಗಮನಿಸಿದಾಗಲೂ ಎದ್ದು ಕಾಣುವಂತಿರುವುದು ಅವರ ಅನುಪಮ ಕಥನ ಪ್ರತಿಭೆಯೇ. ತನ್ನ ದಟ್ಟ ಹಾಗೂ ಧ್ವನಿಪೂರ್ಣ ವರ್ಣನಾತ್ಮಕತೆಯ ಮೂಲಕ ಈ ಪ್ರತಿಭೆ ಕನ್ನಡ ಗದ್ಯ ಪದ್ಯಗಳೆರಡಕ್ಕೂ, ಭಾರತೀಯ ಸಾಹಿತ್ಯ ಪರಂಪರೆಯ ಬೆನ್ನೆಲುಬಿನಂತಿರುವ ಕಥಾನಾತ್ಮಕತೆಯ ಅತ್ಯುತ್ಕೃಷ್ಟ ಗುಣಗಳೆಲ್ಲವನ್ನೂ ಪ್ರದಾನ ಮಾಡಿದೆ. ಮಾತ್ರವಲ್ಲದೆ, ಆ ಗುಣಗಳಿಗೆ ಆಧುನಿಕ ಮನೋಧರ್ಮದ ದೀಕ್ಷೆಯನ್ನೂ ನೀಡಿದೆ. ಈ ದೃಷ್ಟಿಯಿಂದ ಕುವೆಂಪು ಹೊಸಗನ್ನಡದ ಮಹಾನ್ ಕಥನಕಾರ. 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯ, ಖಂಡಕಾವ್ಯ 'ಚಿತ್ರಾಂಗದಾ' ಹಾಗೂ ರಾಮಾಯಣ - ಮಹಾಭಾರತದ ಕಥೆ - ಉಪಕಥೆಗಳಿಂದ ಪ್ರೇರಿತವಾದ ಅವರ ನಾಟಕಗಳು ಅವರೇ ಪ್ರತಿಪಾದಿಸಿದ ಪ್ರತಿಮಾ ದೃಷ್ಟಿಯ ಸೃಷ್ಟಿಗಳಾಗಿದ್ದು, ಕಥನವಿಲ್ಲಿ ಶಯ್ಯಾರೂಪದಲ್ಲಿ ಮಾತ್ರ ಕ್ರಿಯಾಶೀಲವಾಗಿರುವುದರಿಂದ ಕುವೆಂಪು ಅವರ ಕಥನ ಪ್ರತಿಭೆಯ ಹಾಸು ಬೀಸುಗಳನ್ನು ವಿವರವಾಗಿ ಪರಿಶೀಲಿಸಲು ನಮಗೆ ಯಥೋಚಿತವಾಗಿ ಒದಗಿಬರುವ ಅವರ ಕೃತಿಗಳೆಂದರೆ, ಅವರ ಗದ್ಯ ಕಥನಗಳಾದ ಸಣ್ಣಕಥೆಗಳು ಹಾಗೂ ಕಾದಂಬರಿಗಳು.

ಕುವೆಂಪು, 'ಸಂನ್ಯಾಸಿ ಮತ್ತು ಇತರ ಕಥೆಗಳು' (೧೯೩೭) ಮತ್ತು 'ನನ್ನ ದೇವರು ಮತ್ತು ಇತರ ಕಥೆಗಳು' (೧೯೪೦) ಎಂಬ ಎರಡು ಸಣ್ಣಕಥೆಗಳ ಸಂಕಲನವನ್ನು ಪ್ರಕಟಿಸಿದ ನಂತರ, ಆರಂಭದಲ್ಲಿ (ಬಹುಶಃ) ಅಭ್ಯಾಸ ರೂಪದಲ್ಲಿ ಬರೆದ ಮತ್ತು ಅನುವಾದಿಸಿದ ಕೆಲವು ಸಣ್ಣಕಥೆಗಳನ್ನು ದೇಜಗೌ ಅವರು 'ಕತೆಗಳೊಡನೆ ಆರಂಭದಲ್ಲಿ' ಎಂಬ ಶೀರ್ಷಿಕೆಯಲ್ಲಿ ಸಂಗ್ರಹಿಸಿ ೧೯೮೫ರಲ್ಲಿ ಪ್ರಕಟಿಸಿದ್ದಾರೆ. ಅಂದರೆ (ಟಾಲ್‌ಸ್ಟಾಯ್ ಹಾಗೂ ಠಾಗೋರರ) ನಾಲ್ಕು ಅನುವಾದಿತ ಕಥೆಗಳೂ ಸೇರಿದಂತೆ ಕುವೆಂಪು ಒಟ್ಟು ಇಪ್ಪತ್ತೈದು ಕಥೆಗಳನ್ನು ಬರೆದು ಪ್ರಕಟಿಸಿದ್ದಾರೆ. ಆದರೆ ಕನ್ನಡ ಸಣ್ಣ ಕಥೆಗಳ ವಿಸ್ತಾರ ಭಿತ್ತಿಯಲ್ಲಿ ಇವನ್ನಿಟ್ಟು ನೋಡಿದಾಗ ನಮ್ಮ ವಿಶಿಷ್ಟ ಗಮನಸೆಳೆಯುವುದು ಎರಡೋ ಮೂರೋ ಕಥೆಗಳು ಮಾತ್ರ - 'ಶ್ರೀ ಮನ್ಮೂಕವಾಗಿತ್ತು', 'ಧನ್ವಂತರಿಯ ಚಿಕಿತ್ಸೆ' ಹಾಗೂ ಸ್ವಲ್ಪ ಮಟ್ಟಿಗೆ 'ಮೀನಾಕ್ಷಿಯ ಮನೇಮೇಷ್ಟರು'. ಮಿಕ್ಕವೆಲ್ಲವೂ ಹರಟೆಗಳಂತೆಯೋ, ವಿಡಂಬನೆಗಳಂತೆಯೋ ಅಥವಾ ಮಾಸ್ತಿಯವರಿಗೆ ಆರಂಭದಲ್ಲೇ ಹೆಸರು ತಂದುಕೊಟ್ಟ ರಂಗನ ಕಥೆಗಳ ಉತ್ಸಾಹಪೂರ್ಣ ಅನುಕರಣೆಗಳಂತೆಯೋ ಓದಿಸಿಕೊಂಡು ಮರೆಯಾಗುತ್ತವಷ್ಟೆ.

'ಕನಸಿನ ನನಸು' ದಂತಹ ಕಥೆ ('ಕತೆಗಳೊಡನೆ ಆರಂಭದಲ್ಲಿ') ಆ ಕಾಲದಲ್ಲೇ - ೧೯೩೦ರ ಹೊತ್ತಿಗೇ - ಅತಿವಾಸ್ತವತೆ (**Surrealism**)ಯನ್ನು ಒಂದು ತಂತ್ರವಾಗಿ ಬಳಸುವ ಪ್ರಯತ್ನಕ್ಕಾಗಿ ಹಾಗೂ 'ಸಾಲದ ಮಗು' ವಿನಂತಹ ಕಥೆ ತನ್ನ ನಿಷ್ಠುರ ವಾಸ್ತವದ ನಿರ್ಲಿಪ್ತ ಚಿತ್ರಣಕ್ಕಾಗಿ ಗಮನ ಸೆಳೆಯುವುದಾದರೂ, ಸಣ್ಣ ಕಥೆಯದ್ದೇ ಎನ್ನಬಹುದಾದ ಸೃಜನಶೀಲತೆಯ ನೆಲೆಗಳನ್ನು ಮುಟ್ಟುವಲ್ಲಿ ವಿಫಲವಾಗಿ ಅಂತಿಮವಾಗಿ ನಿರಾಶೆಯನ್ನೇ ಉಂಟುಮಾಡುತ್ತದೆ. ಈ ದೃಷ್ಟಿಯಿಂದ 'ಮೀನಾಕ್ಷಿಯ ಮನೇಮೇಷ್ಟರು' ತನ್ನ ಲಲಿತ ವಿನೋದಮಯತೆಯಿಂದ, ಅನಿರೀಕ್ಷಿತ ತಿರುವುಗಳಿಂದ, ಆ ಕಾಲದ ಕೆಳಮಧ್ಯಮ ವರ್ಗದ ಅಭಿರುಚಿ ಸ್ವಾರಸ್ಯಗಳಿಂದ ಕೊನೆಯವರೆಗೂ ಕುತೂಹಲವನ್ನು ಕಾದಿರಿಸಿಕೊಳ್ಳುತ್ತಾ ಒಂದು ವಿಚಿತ್ರ **Anti-climax**ನಲ್ಲಿ ಕೊನೆಗೊಳ್ಳುವ ಮೂಲಕ ಒಂದು ಪ್ರೌಢ ಸಣ್ಣಕಥೆಯೆನಿಸಿಕೊಳ್ಳುತ್ತದೆ.

'ಶ್ರೀಮನ್ಮೂಕವಾಗಿತ್ತು' ಕನ್ನಡ ಸಣ್ಣಕಥೆಗಳ ಪ್ರಪಂಚದಲ್ಲೇ ಒಂದು ವಿಶಿಷ್ಟ ಕಥೆ. ತಮ್ಮದೇ ವಿಶಿಷ್ಟ ನಿಷ್ಠುರತೆ ಹಾಗೂ ವ್ಯಂಗ್ಯ-ವಿನೋದಗಳಿಂದ ಮಲೆನಾಡಿನ ಗ್ರಾಮೀಣ ಸಮಾಜವನ್ನು ಚಿತ್ರಿಸುವ ಕುವೆಂಪು, ಅದರ ಒಂದು ಇಣುಕು ನೋಟವನ್ನು ಈ ಕಥೆಯಲ್ಲಿ ಒದಗಿಸುತ್ತಾರೆ. ಆದರೆ ಈ ಒಂದು ಇಣುಕು ನೋಟವೇ ಎಷ್ಟು ಪರಿಣಾಮಕಾರಿಯಾಗಿದೆ ಎಂದರೆ ಕುವೆಂಪು ಅವರ ಕಥನ ಶಕ್ತಿಯ ಸರ್ವಸ್ವವೂ ಈ ಕಥೆಯ 'ದೂರದ ಕೆರೆಯೂರಿನಲ್ಲಿ ತನ್ನ ಮುದ್ದುಕರುವನ್ನು ಮೂಸಿ ನೆಕ್ಕುತ್ತಿದ್ದ ಮೂಗು ಪ್ರಾಣಿಯ ಆನಂದದ ಆಶೀರ್ವಾದ ವಿಭೂತಿ ಅದನ್ನಾಲಿಸಿ ಶ್ರೀಮನ್ಮೂಕವಾಗಿತ್ತು!' ಎಂಬ ಕೊನೆಯ ಸಾಲಿನಲ್ಲಿ ತಣ್ಣಗೆ ಆಸ್ಫೋಟಿಸುತ್ತದೆ. ಮಲೆನಾಡಿನ ಗ್ರಾಮಸಮಾಜದ ಎಲ್ಲ ಸ್ತರದ ಸಂಬಂಧಗಳೂ ಸೂಕ್ಷ್ಮ,

ಪರಿಣಾಮಕಾರಿ ಹಾಗೂ ಪ್ರತಿನಿಧಿಕವಾಗಿ ಪ್ರಕಟವಾಗಿರುವ ಈ ಕಥೆಯಲ್ಲಿ ಕುವೆಂಪು, ತನ್ನ ಕಂದನಿಂದ ದೂರವಾಗಿ ಹೋಗಿದ್ದ ಎಮ್ಮೆಯೊಂದು ಮತ್ತೆ ತನ್ನ ಕಂದನೊಡಗೂಡಿದಾಗ ಅನುಭವಿಸುವ ಮೂಕ ಆನಂದಾನುಭೂತಿಯನ್ನು, ಮನುಷ್ಯ ನಿರ್ಮಿತ ನಂಬಿಕೆಯ ಲೋಕದ ದುರಂತದ ಆಳವನ್ನು ಸೂಚಿಸುವ Pathos ಆಗಿ ಪರಿವರ್ತಿಸುವ ಮೂಲಕ ತಮ್ಮ ಪೂರ್ಣದೃಷ್ಟಿಯಲ್ಲಿ ಹದಗೊಂಡ ಕಲಾಕೌಶಲ್ಯವನ್ನು ಮೆರೆದು, ಕಥನವನ್ನು ಒಂದು ಹೊಸ ಎತ್ತರಕ್ಕೆ ಒಯ್ಯುತ್ತಾರೆ. ಕುವೆಂಪು ಕಥನ ಕಲೆಯ ಅಂತರಾತ್ಮವಿದು.

'ಧನ್ವಂತರಿಯ ಚಿಕಿತ್ಸೆ' ಇದಕ್ಕೆ ತದ್ವಿರುದ್ಧವಾದ ಶೈಲಿಯ ಕಥೆ. ರೈತನ ಗೋಳನ್ನು 'ರೈತನ ಎದೆಯ ಮೇಲೆ ಸಮಸ್ತ ಚಕ್ರಾಧಿಪತ್ಯವೂ ಮಹಾಪರ್ವತಾಕಾರವಾಗಿ ನಿಂತಿತ್ತು. ಋಷಿಗಳು ನೋಡಿಕೊಂಡು ಬಂದಿದ್ದ ಆ ಮುಖ್ಯ ಪಟ್ಟಣ ಅದರ ನೆತ್ತಿಯಲ್ಲಿ ರಾರಾಜಿಸುತ್ತಿದೆ! ಅಲ್ಲಿಯ ದೇವಾಲಯಗಳಲ್ಲೂ ವಿದ್ಯಾನಿಲಯಗಳೂ ಕ್ರೀಡಾಮಂದಿರಗಳೂ ಪ್ರಮೋದವನಗಳೂ ಕರ್ಮಸೌಧಗಳೂ ಕಾರ್ಖಾನೆಗಳೂ ರಾಜಪ್ರಸಾದಗಳೂ ತಮ್ಮ ಭಾರವನ್ನೆಲ್ಲಾ ರೈತನ ಎದೆಯ ಮೇಲೆ ಹಾಕಿ, ಸಂಸ್ಕೃತಿ ಮತ್ತು ನಾಗರಿಕತೆ ಎಂಬ ಕೀರ್ತಿಯಿಂದ ಮೆರೆಯುತ್ತಿವೆ!' ಎಂಬ ಕಾಣ್ಕೆಯೊಡನೆ ಗಮನಿಸುವ ಈ ಕಥೆ, ಈ ದುರಂತಕ್ಕೆ ಕಾರಣಗಳನ್ನು ಭೋಗಸಂಸ್ಕೃತಿ, ವಸಿಷ್ಠ ಪರಂಪರೆಯ ಅಸೂಕ್ಷ್ಮತೆ ಹಾಗೂ ರೈತ ಸಮುದಾಯದ ಮತ ಮೌಢ್ಯಾಚಾರಗಳಲ್ಲಿ ಗುರುತಿಸುತ್ತಾ, ಇದರ ನಿವಾರಣೆಗಾಗಿ 'ರಾಜವೇಶ್ಮ ಹಾಗೂ ದೇವಾಲಯದ ಗೋಪುರಗಳನ್ನು ಉರುಳಿಸುವ' ಕ್ರಾಂತಿ ಭೂತಗಳನ್ನು ವಿಶ್ವಾಮಿತ್ರ ಸೃಷ್ಟಿಯ ಮೂಲಕ ಆಹ್ವಾನಿಸುತ್ತಾರೆ. ಹೋದ ಶತಮಾನದ ಮೂವತ್ತರ ದಶಕದಲ್ಲಿ ರಚಿತವಾದ ಈ ಕಥೆ, ವಸ್ತುವಿನ ದೃಷ್ಟಿಯಿಂದ ಐತಿಹಾಸಿಕ ಮಹತ್ವ ಪಡೆದಂತೆಯೇ ಆ ಕಾಲಕ್ಕೆ ಕನ್ನಡ ಕಥಾ ಪ್ರಕಾರಕ್ಕೆ ಹೊಸದೆನಿಸುವ ತನ್ನ ಕ್ರಾಂತಿಕಾರಕ ನಿರೂಪಣಾ ಶೈಲಿಯ ದೃಷ್ಟಿಯಿಂದಲೂ ಗಮನ ಸೆಳೆಯುತ್ತದೆ. ಕುವೆಂಪು ಕಥನ ಕಲೆಯ 'ಬಹಿರಾತ್ಮ'ವಿದು.

ಕುವೆಂಪು ಅವರ ಈ ಎರಡೂ ಕಥೆಗಳಲ್ಲಿ ಅವರ ಸಾಹಿತ್ಯದ ದರ್ಶನದ ಲಾಂಛನವಾಗಿರುವ 'ಶ್ರೀ ಸಾಮಾನ್ಯತೆ' ತನ್ನ ವಿಷಾದ ಹಾಗೂ ವಿಸ್ಫೋಟಕ ಗುಣಗಳೊಂದಿಗೆ ಅಖಂಡವಾಗಿ ಪ್ರಕಟಗೊಂಡು ಅವರು ಮುಂದೆ ಬರೆದ ಎರಡು ಕಾದಂಬರಿಗಳ ಹಿಂದಿರುವ ದರ್ಶನದ ಸೂಚನೆ ನೀಡುವಂತಿದೆ.

೨

ಕುವೆಂಪು ಅವರ ಎರಡು ಕಾದಂಬರಿಗಳಾದ 'ಕಾನೂರು ಹೆಗ್ಗಡಿತಿ' (೧೯೩೬) ಹಾಗೂ 'ಮಲೆಗಳಲ್ಲಿ ಮದುಮಗಳು' (೧೯೬೭) ಕನ್ನಡದ ಎರಡು ಶ್ರೇಷ್ಠ ಕಾದಂಬರಿಗಳೆಂದು ಈಗಾಗಲೇ ಮಾನ್ಯ ಮಾಡಲ್ಪಟ್ಟಿದ್ದು, ಈ ಕೃತಿಗಳ ಬಗ್ಗೆ ಈಗಾಗಲೇ ಕನ್ನಡ ಸಾರಸ್ವತ ಲೋಕದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಎಂ.ಜಿ. ಕೃಷ್ಣಮೂರ್ತಿ *(ಆಧುನಿಕ ಭಾರತೀಯ ಸಾಹಿತ್ಯ*

ಮತ್ತು ಇತರ ಲೇಖನಗಳು) ಕೀರ್ತಿನಾಥ ಕುರ್ತುಕೋಟಿ *(ಯುಗಧರ್ಮ ಹಾಗೂ ಸಾಹಿತ್ಯ ದರ್ಶನ)* ಯು. ಆರ್. ಅನಂತಮೂರ್ತಿ *(ಪ್ರಜ್ಞೆ ಮತ್ತು ಪರಿಸರ)* ಪಿ. ಲಂಕೇಶ್ *(ಪ್ರಸ್ತುತ)* ಮುಂತಾದವರು ನವ್ಯ ಸಂದರ್ಭದಲ್ಲಿ ಬರೆದ ಮತ್ತು ನವ್ಯದ ಕಾವು ಆರುತ್ತಿದ್ದ 'ನವ್ಯೋತ್ತರ' ಸಂದರ್ಭದಲ್ಲಿ ಸುಜನಾ, ಡಿ. ಆರ್. ನಾಗರಾಜ, ಬಿ. ಕೃಷ್ಣಪ್ಪ ಕೆ.ಎಸ್. ಭಗವಾನ್ *(ಶ್ರೀ ಕುವೆಂಪು : ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ)*, ಕೆ.ವಿ. ಸುಬ್ಬಣ್ಣ *(ಕೆ.ವಿ. ಸುಬ್ಬಣ್ಣ ಅವರ ಆಯ್ದ ಬರಹಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ)* ಮುಂತಾದವರು ಬರೆದ ವಿಮರ್ಶೆಗಳೂ ಸೇರಿದಂತೆ ಎಲ್ಲ ಬರೆಹಗಳೂ ಕಾದಂಬರಿಗಳನ್ನು ಒಂದು ನಿರ್ದಿಷ್ಟ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ನೋಡಿ ಅವುಗಳ ಶಕ್ತಿ ದೌರ್ಬಲ್ಯಗಳನ್ನು ಗುರುತಿಸುವ ಪ್ರಯತ್ನಗಳಿಗಷ್ಟೇ ಸೀಮಿತಗೊಂಡಿವೆಯೇ ಹೊರತು, ಅವನ್ನು ಅವುಗಳ ಸ್ವಾಯತ್ತತೆಯಲ್ಲೇ ಇಡಿಯಾಗಿ ಪರಿಶೀಲಿಸುವ ಪ್ರಯತ್ನಗಳಾಗಿಲ್ಲ. ಹೀಗಾಗಿಯೇ ಸುಬ್ಬಣ್ಣನವರ ಮಹಾತ್ವಾಕಾಂಕ್ಷೆಯ 'ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಹೀಗೆ ಬನ್ನಿ' ಎಂಬ ಬರೆಹದಲ್ಲಿ ಆಧುನಿಕ ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿನ ಪೂರ್ವ ಪಶ್ಚಿಮಗಳ ಮುಖಾಮುಖಿಯ ಸಂಕಥನದಲ್ಲಿ 'ಕಾನೂರು ಹೆಗ್ಗಡಿತಿ'ಯ ಮಹತ್ವವನ್ನು ಗುರುತಿಸುವ ಭರದಲ್ಲಿ 'ಮಲೆಗಳಲ್ಲಿ ಮದುಮಗಳು' ಪ್ರಸ್ತಾಪಕ್ಕೇ ಬಾರದೇ ಹೋಗಿದೆ! ಹಾಗೆ ನೋಡಿದರೆ 'ಮಲೆಗಳಲ್ಲಿ ಮದುಮಗಳು' ಕನ್ನಡದ ಶ್ರೇಷ್ಠ ಕಾದಂಬರಿ ಮಾತ್ರವಲ್ಲ, ವಿಶ್ವಸಾಹಿತ್ಯದ ಕೃತಿಗಳ ಸಾಲಿನಲ್ಲಿ ನಿಲ್ಲಬಲ್ಲ ಕೃತಿ ಎಂಬ ಅಲ್ಲಲ್ಲಿ ಆಗಾಗ್ಗೆ ವಿದ್ವದ್ಗೋಷ್ಠಿಗಳಲ್ಲಿ - ಆಡುವ 'ಮಾತು'ಗಳ ಹೊರತಾಗಿ ಈ ಕೃತಿಯ ಬಗ್ಗೆ ಇಡಿಯಾದ ಒಂದು ಪರಿಶೀಲನೆ ಬಂದಂತಿಲ್ಲ ಎಂಬುದು ಕನ್ನಡ ಸಾಹಿತ್ಯ ವಿಮರ್ಶೆಗೆ ಬಡಿದಿರುವ ಗರ ಎಂತಹದು ಎಂಬುದರ ಸೂಚನೆಯೂ ಆಗಿರಬಹುದು.*

ನನಗೆ ತಿಳಿದಂತೆ ರಾಜೇಂದ್ರ ಚೆನ್ನಿಯವರು ತಮ್ಮ 'ಕುವೆಂಪು ಮತ್ತು ಕನ್ನಡ ಕಾದಂಬರಿ' ಎಂಬ ಬರೆಹದಲ್ಲಿ *(ಅಧ್ಯಯನ : ಪರಿಸರ ಸಾಹಿತ್ಯ, ಶಿವಮೊಗ್ಗ)* ಎರಡೂ ಕಾದಂಬರಿಗಳ ಬಗ್ಗೆ ವಿಸ್ತೃತವಾದ ಮತ್ತು ಆಳವಾದ ಚರ್ಚೆ ಮಾಡಿರುವರಾದರೂ, ಆ ಚರ್ಚೆಯ ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯ ಹಿನ್ನೆಲೆಯ ಭಾರಗಳಿಂದಾಗಿ ಈ ಎರಡೂ ಕಾದಂಬರಿಗಳು ತಮ್ಮ ಸ್ವಾಯತ್ತತೆಗಳಲ್ಲಿ ಪ್ರಕಟಪಡಿಸುವ ಸೌಂದರ್ಯ ಹಾಗೂ ದರ್ಶನಗಳು ಪೂರ್ಣ ಪ್ರಮಾಣದಲ್ಲಿ ಹೊಮ್ಮಿದಂತೆ ಕಾಣುವುದಿಲ್ಲ. ಪ್ರತಿಯೊಂದು ಕಲಾಕೃತಿಗೂ, ಅದು ವಿಶ್ವ ಸಾಮಾನ್ಯ ಚರಿತ್ರೆಯ ಕೂಸು ಎನ್ನುವುದು ಎಷ್ಟು ಸತ್ಯವೋ ಅಷ್ಟೇ ಸತ್ಯವಾದ, ಒಂದು ಅನನ್ಯ ಸಾಂಸ್ಕೃತಿಕ ಸ್ವಾಯತ್ತತೆಯೂ ಇರುತ್ತದೆ. ಚರಿತ್ರೆಯ ಎಲ್ಲ ಪ್ರಭಾವ - ಪರಿಣಾಮ - ಒತ್ತಡಗಳನ್ನೂ ಅರಗಿಸಿಕೊಂಡು ಮೂಡಿರುವ ಕಲಾಕೃತಿಯ ಅರ್ಥಪೂರ್ಣತೆ - ಸೌಂದರ್ಯ ಮತ್ತು ದರ್ಶನ ಹೊಮ್ಮುವುದು ಅದರ ಆ ಅನನ್ಯ ಸಾಂಸ್ಕೃತಿಕ ಸ್ವಾಯತ್ತತೆಯ ಆವರಣದಲ್ಲಿಯೇ. ಇಲ್ಲಿ ನಿರ್ದಿಷ್ಟವಾಗಿ ಹೇಳುವುದಾದರೆ ಕುವೆಂಪು ಅವರ ಕಾದಂಬರಿಗಳ

---

* ಡಾ. ಗುರುಪಾದ ಮರಿಗುದ್ದಿಯವರ ಕುವೆಂಪು ಕಾದಂಬರಿಗಳನ್ನು ಕುರಿತ ಸಂಶೋಧನಾ ಪ್ರಬಂಧವನ್ನು ನಾನು ಗಮನಿಸಲಾಗಿಲ್ಲ.

ಅರ್ಥಪೂರ್ಣತೆ ಹೊರಹೊಮ್ಮುವುದು ಅವು ಹುಟ್ಟಿರುವ ಕನ್ನಡ ಸಂಸ್ಕೃತಿಯ ಅನನ್ಯತೆಯ ವಿವಿಧ ನೆಲೆಗಳಲ್ಲೇ - ಅವು ಕನ್ನಡ ಭಾಷೆ ಮತ್ತು ಸಾಹಿತ್ಯ ಪರಂಪರೆಗೆ ಹೇಗೆ ಸ್ಪಂದಿಸಿವೆ ಹಾಗೂ ಆ ಮೂಲಕ ಕನ್ನಡ ಸಂಸ್ಕೃತಿಯ ನೆಲೆಗಳನ್ನು ಹೇಗೆ ವಿಸ್ತರಿಸಲು ಯತ್ನಿಸಿವೆ ಮುಂತಾದ ಸಂಸ್ಕೃತಿ ವಿಶಿಷ್ಟವಾದ ಪ್ರಶ್ನೆಗಳ ಹಿನ್ನೆಲೆಯಲ್ಲೇ. ಅವುಗಳ ವಿಶ್ವಾತ್ಮಕ ಮೌಲ್ಯವೂ ಪ್ರಕಟಗೊಳ್ಳಬೇಕಾದ್ದೂ ಈ ಭಿತ್ತಿಯಲ್ಲಿಯೇ - 'ಮಲೆಗಳಲ್ಲಿ ಮದುಮಗಳು'ವಿನ ಸುಬ್ಬಣ್ಣ ಹೆಗ್ಗಡೆಯ 'ವಿಶ್ವ ಪ್ರಜೆತ್ವ' ಹಂದಿ ಒಡ್ಡಿನ ಹೇಲ್ಗೆಸಿರಿನಿಂದ ತುಂಬಿದ ಅವರ ಮನೆಯಂಗಳದಲ್ಲಿಯೇ ಪ್ರಕಟವಾಗುವಂತೆ.

೩

'ಕಾನೂರು ಹೆಗ್ಗಡಿತಿ' ಸ್ವಲ್ಪ ಮಟ್ಟಿಗೆ ಮತ್ತು 'ಮಲೆಗಳಲ್ಲಿ ಮದುಮಗಳು' ಬಹುಮಟ್ಟಿಗೆ ಇಂದ್ರಿಯ ಗಮ್ಯತೆಯನ್ನು ಮೀರಿದ ಪ್ರಜ್ಞೆಯ ಬೇರೆ ಬೇರೆ ಸ್ತರಗಳಲ್ಲಿ - ಸ್ಮೃತಿ, ವಿಸ್ಮೃತಿ, ಆಸ್ಮೃತಿ - ಸಂಚರಿಸುತ್ತಾ ಕ್ರಮವಾಗಿ ಕಡೆಗೋಲು ಕಂಬದ ಹಾಗೂ ಹುಲಿಕಲ್ಲು ನೆತ್ತಿಯ ಸಾಕ್ಷಿಪ್ರಜ್ಞೆಗಳಲ್ಲಿ ಮೈದಳೆಯುವ ಕಾದಂಬರಿಗಳು. ಹಾಗಾಗಿಯೇ ಈ ಎರಡೂ ಕಾದಂಬರಿಗಳಲ್ಲಿ ಕಾಲ ಏಕಮುಖವಾಗಿ ಬೆಳೆಯದೆ ವಿವಿಧ ರೂಪಗಳಲ್ಲಿ ಪ್ರಜ್ಞೆ ಪ್ರಕಟಗೊಳ್ಳುವ ಸ್ತರಗಳಲ್ಲೆಲ್ಲಾ ಸಂಚರಿಸುತ್ತಾ, ಕಾದಂಬರಿಗಳ ಗ್ರಹಿಕೆಯ ಒಂದು ಹೊಸನೆಲೆಯ ಅಗತ್ಯವನ್ನೇ ಸೃಷ್ಟಿಸುತ್ತದೆ. ಈ ದೃಷ್ಟಿಯಿಂದ ಕುವೆಂಪು ಕಾದಂಬರಿಗಳನ್ನು ವಾಸ್ತವವಾದಿ ಬರವಣಿಗೆ ಪರಂಪರೆಯ 'ಮೌಲ್ಯ ಪ್ರಪಂಚ'ದ ಹೊರಗೆ ತಂದು ಪರಿಶೀಲಿಸಿದರೆ ಮಾತ್ರ ಅವುಗಳ ಸಂಪೂರ್ಣ ಸತ್ಯದರ್ಶನ ನಮಗೆ ದೊರಕಬಹುದು ಎಂದನಿಸುತ್ತದೆ. ಈ ಕುರಿತು ಕೆ.ವಿ. ಸುಬ್ಬಣ್ಣ ಹಾಗೂ ರಾಜೇಂದ್ರ ಚೆನ್ನಿ ಬರೆಹಗಳಲ್ಲಿ ಪ್ರಸ್ತಾಪ ಮಾಡಿರುವರಾದರೂ, ನಾನು ಈ ಹಿಂದೆ ಪ್ರಸ್ತಾಪಿಸಿದ ಆ ಬರೆಹಗಳ ವಿನ್ಯಾಸ ಕಾರಣಗಳಿಂದಾಗಿಯೇ ಈ ಅಂಶವು ಪರಿಶೀಲನೆಯ ಮೂಲ ಭಿತ್ತಿಯಾಗದೆ ಅದರ ಒಂದು ಕಾಣ್ಕೆಯಾಗಿಯೋ ಅಥವಾ ಕೃತಿರಚನೆಯ ಒಂದು ತಂತ್ರವಾಗಿಯೋ ಕಂಡುಳಿದುಬಿಡುತ್ತವೆ, ಅಷ್ಟೆ.

ಕಾದಂಬರಿ ಮೂಲತಃ ಪಾಶ್ಚಾತ್ಯ ಮೂಲದ ಸಾಹಿತ್ಯ ಪ್ರಕಾರವಾದರೂ, ಕುವೆಂಪು ಅವರ ಈ ಕಾದಂಬರಿಗಳು ಆ ಸಾಹಿತ್ಯ ಪ್ರಕಾರ ತತ್ವಗಳಿಗೆ ಎಷ್ಟು ನಿಷ್ಠವಾಗಿವೆ ಎಂಬುದನ್ನೂ ನಾವು ಪರಿಶೀಲಿಸಬೇಕು. ಕುವೆಂಪು ಹಾರ್ಡಿ, ಟಾಲ್‌ಸ್ಟಾಯ್ ಮುಂತಾದವರಿಂದ ಕಾದಂಬರಿಯ ರೂಪದರ್ಶನ ಪಡೆದಂತೆಯೇ ಬುದ್ಧ-ಪರಮಹಂಸ-ವಿವೇಕಾನಂದ - ಗಾಂಧಿ -ಅರವಿಂದರಿಂದ ಅದ್ವಯ ತತ್ವ ದರ್ಶನವನ್ನೂ ಪಡೆದಿದ್ದಾರೆ. ಈ ಎರಡೂ ದರ್ಶನಗಳು ಸಮನ್ವಯಗೊಂಡಂತೆ ಅವರ ಕಾದಂಬರಿಗಳು ಅವತರಣಗೊಂಡಿವೆ. ಇದನ್ನು ಗಮನಿಸದೇ ಹೋದರೆ 'ಕಾನೂರು ಹೆಗ್ಗಡತಿ'ಯ ತುಂಬ ತುಂಬಿರುವ ಲೌಕಿಕ ಹಿಂಸೆಯ ಆಧ್ಯಾತ್ಮಿಕ ದರ್ಶನವಾಗಲೀ, 'ಮಲೆಗಳಲ್ಲಿ ಮದುಮಗಳು'ವಿನ ತುಂಬಾ ಹಬ್ಬಿರುವ ಆಧ್ಯಾತ್ಮಿಕ ದರ್ಶನದಿಂದ ಹಿಂದಿರುವ ಲೌಕಿಕ

ಆಶಯಗಳಾಗಲೇ ಸ್ಪಷ್ಟವಾಗಿ ಆಕಾರಗೊಳ್ಳುವುದಿಲ್ಲ.

'ಕಾನೂರು ಹೆಗ್ಗಡತಿ' ಹೇಳುವ ಸತ್ಯವಾದರೂ ಏನು? ಅದು ನೀಡುವ ದರ್ಶನವಾದರೂ ಯಾವುದು? ಹಾಗೆ ನೋಡಿದರೆ ಎರಡೂ ಕಾದಂಬರಿಗಳು ಹೇಳುವುದು ಕುವೆಂಪು ಅರಿವಾಗಿಸಿಕೊಂಡಿದ್ದ ಅದ್ವಯ ತತ್ವದ ಆತ್ಯಂತಿಕ ಕಾಣ್ಕೆಯಾದ ಪೂರ್ಣದೃಷ್ಟಿಯಲ್ಲಿನ ಆತ್ಮವಿಕಾಸದ ಕಥೆಗಳನ್ನೇ. ಆದರೆ ಆತ್ಮವಿಕಾಸದ ಈ ಕಥೆಗಳು ಹೇಳಲ್ಪಡುವ ಉದ್ದೇಶ ಹಾಗೂ ಬಗೆ, ಅವುಗಳನ್ನು ಸಂಸ್ಕೃತಿ ವಿಕಾಸದ ಕಥೆಗಳನ್ನಾಗಿಯೂ, ಕುವೆಂಪು ಅವರನ್ನು ಮಹಾನ್ ಸಾಂಸ್ಕೃತಿಕ ಕಥಾನಕಾರರನ್ನಾಗಿಯೂ ಮಾಡಿಬಿಡುತ್ತದೆ. 'ಕಾನೂರು ಹೆಗ್ಗಡತಿ' ಹೂವಯ್ಯನ ಪ್ರಜ್ಞಾ ವಿಸ್ತಾರದಲ್ಲಿ ವಿನ್ಯಾಸಗೊಳ್ಳುವ ಕಥೆ. ಕೆ.ವಿ ಸುಬ್ಬಣ್ಣನವರು ವರ್ಣಿಸಿರುವಂತೆ ವಸಾಹತುಶಾಹಿಯ ಒಂದು ವಿಶಿಷ್ಟ ಸಂದರ್ಭದಲ್ಲಿನ ಪೂರ್ವ ಪಶ್ಚಿಮಗಳ ಮುಖಾಮುಖಿಯಲ್ಲಿ ಕಡೆದು ನಿಲ್ಲುವ 'ಗೊಮ್ಮಟ ಪ್ರತಿಮೆ'ಯಂತಿರುವ ಹೂವಯ್ಯನ ವ್ಯಕ್ತಿತ್ವದ ವಿಕಾಸದ ಜೊತೆಯಲ್ಲೇ ಅವನ ಸುತ್ತಲಿನ ಜಗತ್ತು ವಿಕಾಸಗೊಳ್ಳುವಲ್ಲಿ ಉಂಟಾಗುವ ಹಿಂಸೆ ಕನ್ನಡ ಭಾಷೆ ಹಾಗೂ ಸಂಸ್ಕೃತಿಗಳನ್ನು ಚಲನಶೀಲಗೊಳಿಸುವಂತಹ ಪಾತ್ರಗಳನ್ನೂ, ನಿರೂಪಣೆಗಳನ್ನೂ ಸೃಷ್ಟಿಸುತ್ತಾ, ಆಧುನಿಕ ಕನ್ನಡ ಕಥನ ಕಲೆಗೆ ಒಂದು ಪೂರ್ಣ ದೃಷ್ಟಿಯ ಪ್ರಭೆಯನ್ನು ತಂದೊದಗಿಸಿಬಿಡುತ್ತದೆ. ಹೂವಯ್ಯನ ಕಥೆ ಅವನ ಪ್ರಜ್ಞಾ ವಿಸ್ತಾರಕ್ಕೆ ಜಡ-ಚೇತನಗಳೆಂಬ ತಾರತಮ್ಯವಿಲ್ಲದೆ ನೆಪವಾಗಿ ಬರುವ - ಗಿಡ, ಮರ, ತೊರೆ, ಪರ್ವತ ಪಂಕ್ತಿ, ಪಕ್ಷಿ, ಪ್ರಾಣಿಗಳೂ ಸೇರಿದಂತೆ - ವಿವಿಧ ಪ್ರಜ್ಞಾಸ್ತರಗಳಲ್ಲಿರುವ ಎಲ್ಲರ, ಎಲ್ಲದರ ಕಥೆಯಾಗಿ ಸಮಗ್ರಗೊಳ್ಳುವ ಪರಿ ಕನ್ನಡಕ್ಕೇ ಹೊಸದಾಗಿದೆ. 'ಇಲ್ಲಿ ಯಾರೂ ಮುಖ್ಯರಲ್ಲ, ಇಲ್ಲಿ ಯಾರೂ ಅಮುಖ್ಯರಲ್ಲ...' ಇತ್ಯಾದಿಗಳನ್ನು ಕುವೆಂಪು 'ಮಲೆಗಳಲ್ಲಿ ಮದುಮಗಳು' ಕೃತಿಯ ಆದಿಯಲ್ಲಿ ಹೇಳಿರುವವರಾದರೂ ಆ ಪೂರ್ಣ ದೃಷ್ಟಿಯ ರಾಚನಿಕತೆ 'ಕಾನೂರು ಹೆಗ್ಗಡತಿ'ಯಲ್ಲೇ ಆರಂಭವಾಗಿರುವದನ್ನು ಇಲ್ಲಿ ಕಾಣಬಹುದು. ಪೂರ್ಣ ದೃಷ್ಟಿ ಎಂದರೆ ಪಾರಲೌಕಿಕ ಶಕ್ತಿಫಲವಲ್ಲ; ತನ್ನ ಪ್ರಜ್ಞಾ ಪರಿಧಿಯಲ್ಲಿರುವುದೆಲ್ಲವನ್ನೂ ಅವಿಭಾಜ್ಯವಾಗಿ ಗ್ರಹಿಸುವ ಮೂಲಕ ಸತ್ಯ ಸಾಕ್ಷಾತ್ಕಾರ ಮಾಡಿಕೊಳ್ಳುವ ಕೌಶಲ. ಈ ಕೌಶಲದಿಂದಾಗಿಯೇ, ಕಾದಂಬರಿಯ ಮೂಲ ಚಲನೆಗೆ ಸಂಬಂಧವೇ ಪಡದಂತೆ ಕಾಣುವ ಹಲವು ರೀತಿಯ ಶಿಕಾರಿಗಳ, ಬೇಸ್ತುಗಳ, ಕಳ್ಳಂಗಡಿ - ಕೋಳಿ ಅಂಕಗಳ, ಶೂದ್ರ ಸಂಘದ ಮಹಾಸಭೆಯ, ಆಗ್ರಹಾರ ದೇವಸ್ಥಾನದ, ಕೌಲಿ ಕರು ಹಾಕಿದ, ತೆಂಗಿನಕಾಯಿಯ ಮಂತ್ರಶಕ್ತಿಯ, ಬಾಡುಗಳ್ಳ ಸೋಮನ ಸಾಹಸ - ಪಾಡುಗಳ, ಸುಬ್ಬಮ್ಮನ ವ್ಯಭಿಚಾರದ; ವಾಸುವಿನ ನಾಯಿಮರಿ, ಪುಟ್ಟಣ್ಣನ ನಾಯಿ ಹಾಗೂ ಆಳುಮಗ ನಂಜನ ಮಗಳ ಸಾವುಗಳಂತಹ; ಸಣ್ಣ - ದೊಡ್ಡ ಸಂಗತಿಗಳ ಸಕಲ ಸಂಸ್ಕೃತಿ ವಿಶಿಷ್ಟ ವಿವರಗಳೂ ಹೂವಯ್ಯನ ಭಾವಸಮಾಧಿಯ ನಿರೂಪಣೆಗಳಷ್ಟೇ ಕಾದಂಬರಿಯ ಅನಿವಾರ್ಯ ಅಂಗಗಳಂತೆ ಒಡಮೂಡಿ, ನಿಷ್ಠುರ ವಾಸ್ತವ ಹಾಗೂ ರಮ್ಯ ಆದರ್ಶವಾದಗಳ ನಡುವೆ ಮುಖಾಮುಖಿ ಸೃಷ್ಟಿಯಾಗುವುದು. ಈ ಮುಖಾಮುಖಿಯಲ್ಲೇ ಕಾದಂಬರಿಯ ಸತ್ಯದರ್ಶನವೂ ಹೊಮ್ಮುವುದು, ಅದೂ ಎಷ್ಟೊ ಸೂಕ್ಷ್ಮವಾಗಿ, ಕುವೆಂಪು ಅವರ ಕಥನ ಪ್ರತಿಭೆಯ ವಿಶಿಷ್ಟ ಕಲೆಗಾರಿಕೆಯ ಪ್ರತೀಕವಾಗಿ:

ಮೈಸೂರಿನಿಂದ ಬಂದಿದ್ದ ತನ್ನ ಸಾಮಾನುಗಳನ್ನೂ ಪುಸ್ತಕಗಳನ್ನೂ ತೋರಿಸಿಯಾದ ಮೇಲೆ ಹೂವಯ್ಯ ಗೋಡೆಗಳಿಗೆ ತಗುಲಿ ಹಾಕಿದ್ದ ಚಿತ್ರಪಟಗಳನ್ನೂ ತೋರಿಸುತ್ತಾ ಚಲಿಸುತ್ತಿದ್ದನು. ನಡುನಡುವೆ ಪಟಗಳನ್ನು ವಿವರಿಸಲೋಸ್ಕರ ಉಚಿತ ವ್ಯಾಖ್ಯಾನಗಳನ್ನು ಮಾಡುತ್ತಿದ್ದನು. ಅವನ ಸುತ್ತಮುತ್ತ ಸಿಂಗಪ್ಪ ಗೌಡರು, ಚಿನ್ನಯ್ಯ, ರಾಮಯ್ಯ, ವಾಸು, ಸೀತೆ, ಪುಟ್ಟಮ್ಮ, ಇವರುಗಳು ಆಗಾಗ ಒಂದೊಂದು ಮಾತಾಡುತ್ತಲೂ ಪ್ರಶ್ನೆ ಹಾಕುತ್ತಲೂ, ಅದು ಚೆನ್ನಾಗಿದೆ ಎಂದು ಪ್ರಶಂಸಿಸುತ್ತಲೂ ಚಲಿಸುತ್ತಿದ್ದರು.

''ಇವನೇ ಬುದ್ಧದೇವ. ಶುದ್ಧೋಧನ ದೊರೆಗೆ ಮಗನಾಗಿದ್ದ. ಅವನು ಹುಟ್ಟಿದಾಗ ಜೋಯಿಸರು, ಅವನು ಸಂಸಾರತ್ಯಾಗಮಾಡಿ ಸಂನ್ಯಾಸಿಯಾಗುತ್ತಾನೆ ಎಂದು ಭವಿಷ್ಯ ಹೇಳಿದ್ದರಂತೆ... ಹೀಗಿರುತ್ತ ಒಂದು ರಾತ್ರಿ ರಾಜ್ಯವನ್ನು ತಂದೆ ತಾಯಿಗಳನ್ನು, ಅರಮನೆಯನ್ನು ಎಲ್ಲ ಸುಖಭೋಗಗಳನ್ನೂ ತೊರೆದು ತಪಸ್ಸಿಗೆ ಹೋಗಬೇಕೆಂದು ಮನಸ್ಸು ಮಾಡಿದನು. ಅದೇ ರಾತ್ರಿ ಅವನ ಹೆಂಡತಿ ಒಂದು ಮಗು ಹೆತ್ತಳು...''

''ಗಂಡೋ ಹೆಣ್ಣೋ'' ಎಂದು ಕೇಳಿದಳು ಪುಟ್ಟಮ್ಮ. ಹೂವಯ್ಯ, ರಾಮಯ್ಯ ನಕ್ಕರು. ಉಳಿದ ಯಾರಿಗೂ ಆ ಪ್ರಶ್ನೆ ಹಾಸ್ಯಾಸ್ಪದವಾಗಿರಲಿಲ್ಲ. ಅದಕ್ಕೆ ಬದಲಾಗಿ ಅವರೆಲ್ಲರೂ ಉತ್ತರವನ್ನೇ ನಿರೀಕ್ಷಿಸುತ್ತಿದ್ದಂತೆ ತೋರಿತು.

(ಪುಟ : ೨೭೧)

ಅವನ ಸುತ್ತಲಿನ ಪ್ರಪಂಚಕ್ಕೆ ಮುಖ್ಯವಾದುದು ಅವನಿಗೆ ಹಾಸ್ಯಾಸ್ಪದವಾಗಿ ತೋರುತ್ತಿದೆ. ಇದು ಹೂವಯ್ಯ ಎದುರಿಸುತ್ತಿರುವ ಅಸ್ತಿತ್ವವಾದಿ ಬಿಕ್ಕಟ್ಟು. ಇದು ವರ್ಡ್ಸ್‌ವರ್ತ್, ಮ್ಯಾಥ್ಯೂ ಅರ್ನಾಲ್ಡರ ಮಾದರಿಯ ಇಂಗ್ಲಿಷ್ ಸಾಹಿತ್ಯ - ತತ್ವಮೀಮಾಂಸೆಯ ಅಧ್ಯಯನದಿಂದ ಪ್ರೇರಿತವಾದ ರಮ್ಯ ಆದರ್ಶವಾದದ ಬಿಕ್ಕಟ್ಟೂ ಹೌದು. ಈ ಆದರ್ಶವಾದದೊಂದಿಗೆ ತನ್ನ ಸುತ್ತಲಿನ ವಾಸ್ತವವನ್ನು ಬದಲಿಸಿ ಸಂಸ್ಕೃತಿ ದರ್ಶನ ಮಾಡಿಸುವುದಿರಲಿ, ಅದರೊಳಕ್ಕೆ ಪ್ರವೇಶವನ್ನೂ ಪಡೆಯಲಾಗದ ಹೂವಯ್ಯನಿಗೆ ಅದೇ ತನ್ನ ಪಾಲಿನ ಎಲ್ಲ ಹಿಂಸೆಯ ಮೂಲವಾಗಿ ಕಾಣತೊಡಗಿ, ತಾನು ಬದುಕುತ್ತಿರುವ ಸಂಸ್ಕೃತಿ ಪ್ರಪಂಚದಲ್ಲಿ ಅದರ ಅನ್ವಯದ ಮಿತಿಗಳು ಅರಿವಿಗೆ ಬರತೊಡಗುತ್ತವೆ. ಇದರ ಫಲವಾಗಿ ಆವರೆಗೆ ಸುತ್ತಲಿನ ಪ್ರಪಂಚಕ್ಕೆ 'ಮೂರ್ಛೆ ರೋಗ'ದಂತೆ ಕಾಣುತ್ತಿದ್ದ ಅವನ ಭಾವ ಸಮಾಧಿಯ ಸ್ವರೂಪವೂ ಬದಲಾಗುತ್ತ ಹೋಗುತ್ತದೆ. ಇಲ್ಲಿಂದ ಕಾದಂಬರಿಯ ಸತ್ಯದರ್ಶನ ಆರಂಭ:

''ಈ ವಿಚಾರಗಳನ್ನೆಲ್ಲ ಕುರಿತು ನಾನು ಅನೇಕ ದಿನ ಹಗಲು ರಾತ್ರಿ ಆಲೋಚನೆ ಮಾಡಿದ್ದೇನೆ. ನನಗೇ ತಿಳಿಯದಂತೆ ಮೆಲ್ಲಮೆಲ್ಲನೆ ನಾನು ಸಾಮಾನ್ಯ ಜನರ ಹವ್ಯಾಸಗಳಲ್ಲಿ ತಲೆ ಹಾಕತೊಡಗಿದ್ದೆ. ಇಲ್ಲಿಯ ಜನಗಳ,

ಮನಸ್ತಾಪ, ಮಾತ್ಸರ್ಯ, ಕರುಬು - ಇವುಗಳೆಲ್ಲ ನನ್ನ ಹೃದಯದಲ್ಲಿಯೂ ರೂಪಾಂತರ ವೇಷಾಂತರಗಳನ್ನು ಧರಿಸಿ ಮನೆ ಮಾಡಲಾರಂಭಿಸಿದ್ದವು... ನಿನ್ನೆ ಸೂರ್ಯೋದಯದಲ್ಲಿ ನನ್ನೆದೆಯ ಕತ್ತಲೆ ಬಹುಮಟ್ಟಿಗೆ ಪರಿಹಾರವಾಯಿತು.'' *(ಪುಟ : ೪೪೩)*

ನಾವು ಯಾವುದನ್ನು ವಿರೋಧಿಸುತ್ತೇವೋ ಕ್ರಮೇಣ ಅದೇ ನಾವಾಗಿಬಿಡುವ ಅಪಾಯವನ್ನು ಒಳಗೊಂಡ 'ಮುಖಾಮುಖಿ ಮಾರ್ಗ'ವನ್ನು ಅನುಸರಿಸುತ್ತಿದ್ದ ಹೂವಯ್ಯ ಇದರಿಂದಾಗಿ ತನ್ನ ತಾಯಿ, ತಮ್ಮ ಮತ್ತು ಹೃದಯ ಸಂಗಾತಿ ಸೀತೆ ಅನುಭವಿಸಬೇಕಾಗಿ ಬಂದ ದಾರುಣ ಹಿಂಸೆಯಿಂದ ಜರ್ಝರಿತನಾಗಿ ವಿವಿಧ ಸ್ತರಗಳ ಧ್ಯಾನಾವಸ್ಥೆಗಳ ಮೂಲಕ ಹಾದು ಹೋಗಿ* ಅಂತಿಮವಾಗಿ ಸತ್ಯದ ಸಾಕ್ಷಾತ್ಕಾರಕ್ಕಾಗಿ ಆರಿಸಿಕೊಳ್ಳುವುದು ಬುದ್ಧ ದರ್ಶನವನ್ನು :

ರಾಮಯ್ಯನ ಅಧೋಗತಿಯನ್ನೂ ದುಃಸ್ಥಿತಿಯನ್ನೂ ಕೇಳಿದ್ದ ಹೂವಯ್ಯನ ಮನಸ್ಸು ದುಃಖ ಶೋಕ ಕನಿಕರಗಳಿಂದ ಕ್ಷುಬ್ಧವಾಗಿತ್ತು. ಅದಕ್ಕೆಲ್ಲ ತಾನೇ ಕಾರಣನಾಗಿದ್ದೇನೆ ಎಂಬ ಸೂಕ್ಷ್ಮ ಭಾವವೂ ಎದೆ ಚುಚ್ಚಿತ್ತು. ತನ್ನ ಸ್ವಾರ್ಥತೆ, ಅದೃಢತೆ, ಅನಿಶ್ಚಯ ಬುದ್ಧಿ ತೂಗುಯ್ಯಾಲೆಯ ಮನಸ್ಸು - ಇವುಗಳೇ ಕಾರಣವಲ್ಲವೇನು, ಎರಡು ಮೂರು ಮನೆತನಗಳಲ್ಲಿ ನಡೆದಿದ್ದ ಮತ್ತು ನಡೆಯುತ್ತಿರುವ ಅನರ್ಥಗಳಿಗೆ ಎನ್ನಿಸಿತು. ಹೂವಯ್ಯ ತನ್ನನ್ನು ತಾನೇ ಅನಾವಶ್ಯಕಲ್ಲದಿದ್ದರೂ ಅತಿ ಎಂದು ಹೇಳಬಹುದಾದ ಕಠಿಣತೆಯಿಂದ ಆತ್ಮ ಪರೀಕ್ಷೆ ಮಾಡಿಕೊಳ್ಳುತ್ತಾ, ತನ್ನೆದುರು ಮೇಜಿನ ಮೇಲಿದ್ದ ಬುದ್ಧದೇವನ ಧಾನಸ್ಥಿಮಿತ ಮೂರ್ತಿಯನ್ನು ಎವೆಯಿಕ್ಕದೆ ನೋಡತೊಡಗಿದನು.

ಆ ಮಹಾಪುರುಷನ ಸ್ವಾರ್ಥ, ತ್ಯಾಗ, ವೈರಾಗ್ಯ, ಔದಾರ್ಯ, ಕನಿಕರ, ಅಹಿಂಸೆ, ತೀಕ್ಷ್ಣಮತಿ, ಪರದುಃಖ ಕಾತರತೆ-ಇವುಗಳಲ್ಲಿ ಒಂದೊಂದೂ ಅವನ ಜೀವನ ಚರಿತ್ರೆಯ ಘಟನಾ ಚಿತ್ರಗಳೊಡನೆ ಮೂರ್ತೀಭವಿಸಿ, ಮನೋಭಿತ್ತಿಯಲ್ಲಿ ಚರಿಸಿದವು. ಆ ಭವ್ಯ ಭೈರವ ವ್ಯಕ್ತಿತ್ವದ ಮುಂದೆ ತನ್ನ ಅಲ್ಪತೆ ಕನಿಕರಣೀಯವಾಗಿ, ನೀಚವಾಗಿ ತೋರಿ, ಹೂವಯ್ಯನ ಕಣ್ಣುಗಳಿಂದ ಹನಿಗಳು ಒಂದಾದ ಮೇಲೊಂದು ಉದುರಿದವು...

....

ಆ ರಾತ್ರಿ ಬುದ್ಧ ದೇವನ ಕೃಪಾಬಲವನ್ನು ಬೇಡಿ ಮನಸ್ಸನ್ನು ಗಟ್ಟಿ

---

* ಹೂವಯ್ಯನ ಆತ್ಮದ ಮಹಾಮಂದಿರ ಮೆಲ್ಲಮೆಲ್ಲನೆ ಹೊಸ ಹೊಸ ಕಿಟಗಳನ್ನೂ ಬಾಗಿಲುಗಳನ್ನೂ ತೆರೆಯಲಾರಂಭಿಸಿತ್ತು. ಅದು ಅವನ ಎಚ್ಚೆತ್ತ ಚಿತ್ತಕ್ಕೆ ಇನ್ನೂ ಚೆನ್ನಾಗಿ ವೇದ್ಯವಾಗಿರಲಿಲ್ಲ. ಮುಂದೆ ಗೊತ್ತಾಗುತ್ತದೆ! ಒಂದೊಂದು ಹೊಸ ಕಿಟಕಿಯೂ ಹೊಸ ಬಾಗಿಲೂ ತೆರೆದಂತೆಲ್ಲಾ ಸಲಸಲವೂ ವಿಸ್ಮಯ ಪಡಬೇಕಾಗುತ್ತದೆ.

ಮಾಡಿಕೊಂಡು, ಮುಂದಿನ ಹಾದಿಯನ್ನು ನಿಶ್ಚಯಿಸಿದನು. ನಾಳೆ ಕಾನೂರಿಗೆ ಹೋಗಿ, ರಾಮಯ್ಯನನ್ನು ಕಂಡು ತ್ಯಾಗಪೂರ್ಣವಾಗಿ ಅವನ ಉದ್ಧಾರಕ್ಕೂ ಸುಖಕ್ಕೂ ಪ್ರಯತ್ನಿಸುತ್ತೇನೆ; ಮತ್ತು ನಾಡಿದ್ದು ಮುತ್ತಳ್ಳಿಗೆ ಹೋಗುತ್ತೇನಷ್ಟೆ? (ತನ್ನ ಗಂಡು ಕೂಸನ್ನು ತೊಟ್ಟಿಲಿಗೆ ಹಾಕುವ ಉತ್ಸವದಲ್ಲಿ ಖಂಡಿತ ಬಂದು ಭಾಗಿಯಾಗಬೇಕೆಂದು ಚಿನ್ನಯ್ಯ ಕಾಗದ ಬರೆದಿದ್ದನು). ಅಲ್ಲಿ ಸೀತೆಯನ್ನು ಕಂಡು, ಕಾನೂರಿಗೆ ಹೋಗಿ ರಾಮಯ್ಯನ ಹೆಂಡತಿಯಾಗಿರುವಂತೆ ಆಕೆಯನ್ನು ಒಪ್ಪಿಸಲು ಯತ್ನಿಸುತ್ತೇನೆ!

ಎರಡನೆಯ ಸಂಕಲ್ಪವನ್ನು ಮಾಡುತ್ತಿದ್ದಾಗ ಹೂವಯ್ಯನಿಗೆ ತನ್ನ ಪ್ರಾಣವೇ ಶೂನ್ಯವಾಗುತ್ತಿದಂತೆ ತೋರಿತು. ಎದೆ ಹಿಂಡಿ ಹೀರಿದಂತಾಯಿತು. ಗರಗಸದಿಂದ ತನ್ನ ಕರುಳನ್ನು ತಾನೆ ಕೊಯ್ದುಕೊಳ್ಳುವಂತಾಯಿತು. ಮೈ ಬೆವರಿತು. ಕಣ್ಣೀರು ಸುರಿಯಿತು. ಮನಸ್ಸು ಬಿಕ್ಕಿ ಬಿಕ್ಕಿ ಅಳುವಂತಾಯಿತು. ಆದರೂ ತನ್ನ ಪ್ರಯತ್ನಕ್ಕೆ ಬುದ್ಧ ದೇವನ ಕೃಪಾಹಸ್ತ ನೆರವಾಗಿದೆಯೆಂಬ ಶ್ರದ್ಧೆಯಿಂದ ಆತನು ಉತ್ತೀರ್ಣನಾದನು.

(ಪುಟ : ೬೨೦)

ಈ ಉತ್ತೀರ್ಣತೆಯ ಅರ್ಥವಂತಿಕೆ ನಮ್ಮ ಪೂರ್ಣ ಅರಿವಿಗೆ ಸಿಗುವುದು ಈ ಸಂದರ್ಭವನ್ನು ರಮ್ಯ ಆದರ್ಶವಾದದ ದ್ವಂದ್ವವು ಹೂವಯ್ಯನ ವ್ಯಕ್ತಿತ್ವ ವಿಕಾಸದ ಹಾದಿಯನ್ನು ಕವಲೊಡಿಸಿದ್ದ ಸಂದರ್ಭದೊಂದಿಗೆ ಇಟ್ಟು ನೋಡಿದಾಗಲೇ:

ಯಾವ ಸ್ತ್ರೀಸಹಜ ಲಜ್ಜೆಯಿಂದ ಸೀತೆ ತನಗೆ ಹೂವಯ್ಯನಲ್ಲಿದ್ದ ಅನುರಾಗವನ್ನು ಮುಚ್ಚುಮರೆಮಾಡಿದ್ದಳೋ ಅಂತಹ ಪುರುಷ ಸಹಜ ಸಂಕೋಚದಿಂದಲೇ ಹೂವಯ್ಯನೂ ತನಗೆ ಸೀತೆಯಲ್ಲಿದ್ದ ಒಲುಮೆಯನ್ನು ತನ್ನ ಹೃದಯ ಗಹ್ವರದಲ್ಲಿ ಯಾರಿಗೂ ಅರಿಯದಂತೆ ಸೆರೆಹಾಕಿದ್ದನು. ತನ್ನ ಧೀರತೆಗೂ ಗೌರವ ಗಾಂಭೀರ್ಯಗಳಿಗೂ ಕುಂದು ಬರಬಾರದೆಂದು ಅವನು ತನ್ನ ಅಂತರಂಗದಲ್ಲಿದ್ದ ಕಿಡಿಯನ್ನು ಬಹಿರಂಗಗೊಳಿಸದೆ, ಪ್ರಕೃತಿಯನ್ನು ವಂಚಿಸುವ ಸಾಹಸದಲ್ಲಿ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದನು. ಆದರೆ ಪ್ರಕೃತಿ ತನ್ನನ್ನು ವಂಚಿಸಲೆಳುಸುವವರ ಮೇಲೆ ಮುಯ್ಯಿ ತೀರಿಸಿಕೊಳ್ಳದೆ ಬಿಡುವುದಿಲ್ಲ. ಹೀಗೆ ಪ್ರಕೃತಿಯ ಪ್ರತಿರೋಧಕ್ಕೆ ಸಿಲುಕಿದ ಆತ್ಮವು ಪ್ರಕೃತಿಯನ್ನು ಗೆದ್ದು ಉದ್ಧಾರವಾಗಬೇಕು, ಇಲ್ಲದಿದ್ದರೆ ಆದರ್ಶಚ್ಯುತವಾಗಿ ಪತಿತವಾಗಿ ವಿನಾಶ ಹೊಂದಬೇಕು; ಇಲ್ಲದಿದ್ದರೆ ಕೋಟಿ ಕೋಟಿ ಮಾನವರು ಹಿಡಿದಿರುವ ಸಾಧಾರಣ ಪಥವನ್ನು ಹಿಡಿಯಬೇಕು.

(ಪುಟ : ೨೭೦)

ಪ್ರಕೃತಿಯ ಮುಯ್ಯಿಗೆ ಸಿಕ್ಕು ಜರ್ಝರಿತನಾಗಿದ್ದ ಹೂವಯ್ಯನಿಗೆ ಬುದ್ಧದರ್ಶನ ಪ್ರಕೃತಿಯನ್ನು ಗೆದ್ದು ಉದ್ಧಾರವಾಗುವ ನಿಜದ ಹಾದಿಯನ್ನು ತೋರಿಸಿದೆ : ಮೂಲ ಮೋಹಪಾಶದಿಂದ ಬಿಡುಗಡೆ. ಇದೊಂದು ರೀತಿಯ ಆಧ್ಯಾತ್ಮಿಕ Catharsis. ಹಾಗಾಗಿಯೇ ಆ ತೀವ್ರತೆ; ನಂತರ ಆ ಶಾಂತಿ:

> ... ಮರುದಿನ ಪ್ರಾತಃಕಾಲದಲ್ಲಿ ಹೂವಯ್ಯನಿಗೆ ಪುನರ್ಜನ್ಮ ಬಂದ ಹಾಗಿತ್ತು. ಎದೆಯಲ್ಲಿ ಉಕ್ಕುತ್ತಿದ್ದ ಶಾಂತಿಯಾನಂದಗಳ ಉತ್ಕರ್ಷದಿಂದ ಕೆಳಕಾನೂರಿನ ಮನೆ ತುಂಬ ತುಳುಕಾಡುವಂತೆ ತನ್ನಷ್ಟಕ್ಕೆ ತಾನೆ ಹಾಡ ತೊಡಗಿದ್ದನು. ಅದನ್ನು ಕೇಳಿದ ಸೋಮನೂ ಪುಟ್ಟಣ್ಣನೂ ಅಡಿಗೆಯವನೂ ಸ್ವಲ್ಪ ಕಾಲ ತಮ್ಮ ತಮ್ಮ ಕೆಲಸಗಳನ್ನು ನಿಲ್ಲಿಸಿ, ನಿಷ್ಪಂದರಾಗಿ ಆಲಿಸಿ, ಆನಂದಪಟ್ಟು ಆಶ್ಚರ್ಯಪಟ್ಟರು.
>
> ಅನಂತ ಔದಾರ್ಯದಿಂದಲೂ ಅಪಾರ ತ್ಯಾಗದಿಂದಲೂ ಎದೆ ತುಂಬಿ ತುಳುಕುತ್ತಾ ಹೂವಯ್ಯ ತಾನೊಬ್ಬನೆ ಕಾನೂರಿಗೆ ಹೊರಟನು. ಎತ್ತ ನೋಡಿದರತ್ತ ಸೃಷ್ಟಿ ಸ್ವರ್ಗೀಯವಾಗಿತ್ತು. ಹಸುರು ಹುಲ್ಲಿಗೆ ನೋವಾಗ ಬಾರದೆಂದು ದಾರಿಯಲ್ಲಿ ಹುಲ್ಲು ಹುಟ್ಟದ ಕಡೆಯೇ ಹೆಜ್ಜೆಯಿಡುತ್ತಾ ನಡೆದಿದ್ದನು!
>
> *(ಪುಟ : ೬೨೧)*

ಈ ಬುದ್ಧದರ್ಶನವು ಪರಮಹಂಸ - ವಿವೇಕಾನಂದ - ಅರವಿಂದ - ಗಾಂಧಿಯವರ ಮೂಲಕ ಹರಿದು ಬಂದ ಕನ್ನಡ ನವೋದಯದ ದರ್ಶನವೂ ಹೌದು. ಹಾಗಾಗಿಯೇ ಈ ದರ್ಶನದ ಸಾಂಸ್ಕೃತಿಕ ಪರಿಣಾಮವನ್ನು ಕುವೆಂಪು 'ಹತ್ತು ವರ್ಷಗಳ ನಂತರ' ಎಂಬ ಕೊನೆಯ ಅಧ್ಯಾಯದಲ್ಲಿ ಕಾದಂಬರಿ ಚಿತ್ರಿಸುವ ಎಲ್ಲ ದುರಂತಗಳಿಗೆ ಮೂಲವಾದ ಮತ್ತು ಹೂವಯ್ಯ ತನ್ನ'ಮುಖಾಮುಖಿ ಮಾರ್ಗ'ದ ಮೂಲಕ ನಿವಾರಿಸಲಾಗದ ಸಾಮಾಜಿಕ ಅನಿಷ್ಟಗಳೆನಿಸಿದ್ದ ಮರುಮದುವೆಗಳು, ಅಸಮವಯಸ್ಕ ಮದುವೆಗಳು, ಗೌಡಿಕೆಯ ದರ್ಪ-ಪ್ರದರ್ಶನಗಳು, ಕಳ್ಳಿನ ಚಟ, ಭೂತ-ಪಿಶಾಚಿ, ಮಾಟ-ಮಂತ್ರ-ಯಂತ್ರಗಳಲ್ಲಿನ ನಂಬಿಕೆಗಳು ಸ್ವಲ್ಪ ಮಟ್ಟಿಗೆ ನಿವಾರಣೆಯಾಗಿ ಮಲೆನಾಡಿಗೆ ಶ್ರೀ ಸಾಮಾನ್ಯತೆಯ ನವಜೀವನ ಕಾಲಿಟ್ಟುದುದನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾರೆ. ಹಾಗೆ ನೋಡಿದರೆ ಇಡೀ ಕಾದಂಬರಿಯನ್ನು ಆವರಿಸುವ ದುರಂತ ಆರಂಭವಾಗುವುದೇ ಚಿಕ್ಕ ವಯಸ್ಸಿನ ಹೆಂಡತಿಯ ಮೇಲಿನ ಅನುಮಾನದಿಂದ ವಿಚಲಿತರಾಗಿದ್ದ ಚಂದ್ರಯ್ಯಗೌಡರು, ತಮ್ಮ ಗೌಡಿಕೆಯನ್ನು ಧಿಕ್ಕರಿಸಿ ಆಳಿನ ಪರನಿಂತ ಹೂವಯ್ಯನ ವಿರುದ್ಧ ಕಳ್ಳಿನ ಮತ್ತಿನಲ್ಲಿ ವಿಷ ಕಾರುತ್ತಾ ಪಿಶಾಚಿ ಕಂಡವರಂತೆ ಮೂರ್ಛೆ ಹೋಗುವುದರೊಂದಿಗೆ ತಾನೇ? ಅಲ್ಲದೆ ಕಾದಂಬರಿಯು ಸಂಸ್ಕೃತಿ ಮಥನದ ಕಥನವಾಗತೊಡಗುವುದೂ ಇಲ್ಲಿಂದಲೇ. ಹೀಗಾಗಿ ಕಾದಂಬರಿ ಬುದ್ಧದರ್ಶನದೊಂದಿಗೆ ಮುಗಿಯದೆ ಅದರ ಸಾಂಸ್ಕೃತಿಕ ಆವೃತ್ತಿಯನ್ನೂ

ನೀಡಿ ತನ್ನ ಕಥನೋದ್ದೇಶವನ್ನೂ ಪೂರೈಸಿಕೊಂಡಿದೆ, ತನ್ನ ಸಾಹಿತ್ಯಿಕ ಒಡಲನ್ನೇ ಸೀಳಿಕೊಂಡು!

ಆದರೆ ಆಶ್ಚರ್ಯವೆಂದರೆ ಈವರೆಗಿನ ಕನ್ನಡ ಸಾಹಿತ್ಯ ವಿಮರ್ಶೆ ಈ ದರ್ಶನದ ಅರ್ಥ ಪೂರ್ಣತೆಯನ್ನಿರಲಿ, ಕಾದಂಬರಿಗೆ ಅದರಿಂದೊದಗುವ ಆಧ್ಯಾತ್ಮಿಕ ಆಯಾಮವನ್ನೇ ಗುರುತಿಸಲು ನಿರಾಕರಿಸಿದೆ. ಗುರುತಿಸಿರುವ ಒಂದಿಬ್ಬರು ಅದು ಕಾದಂಬರಿಯ ಹೊರಗೇ ಉಳಿದು ಬಿಡುವಂಥದೆಂದೋ, ಸಹಜವಲ್ಲದ್ದೆಂದೋ ಸೂಚಿಸಿ ಮುಂದೆ ಹೋಗಿದ್ದಾರೆ. ಇದು ವಾಸ್ತವವಾದಿ ಪರಂಪರೆಯ ಜೊತೆಗೇ ಸಾಗಿ ಬಂದ ನವ ವೈಚಾರಿಕತೆ ಸೃಷ್ಟಿಸಿದ ಮಾನಸಿಕ ಅಡಚಣೆಗಳ 'ಮಾಯೆ'. ಇದು, ಕಾದಂಬರಿಯು ವಾಸ್ತವವಾದದ ಎಲ್ಲೆಗಳನ್ನು ಮೀರಿ ಬೆಳೆದಿದೆ ಎಂದು ಗುರುತಿಸಿರುವವರನ್ನೂ ಬಿಟ್ಟಿಲ್ಲವೆಂದರೆ? ಅವರು ಈ ಮೀರುವಿಕೆಯ ಮೀಮಾಂಸೆ ಯನ್ನೂ ನಮ್ಮ ಸಂಸ್ಕೃತಿಯ ಹೊರಗಿನಿಂದ ಪಡೆದಿರುವುದರಿಂದ, ಅವರಿಗೆ ಹೂವಯ್ಯ ಕಂಡ ದರ್ಶನವು ಮಾನಸಿಕ ಉಪಾಯಮಾತ್ರವಾಗಿ ಕಂಡಿದೆ! ಇರಲಿ, ಇದೀಗ ಆಧುನಿಕೋತ್ತರವಾದ ತನ್ನ ಆಧ್ಯಾತ್ಮಿಕ ಉಪಪತ್ಯದೊಂದಿಗೆ, ವಾಸ್ತವವಾದ ಬಂದ ಕಡೆಯಿಂದಲೇ ಬರುತ್ತಿದೆ- ಇನ್ನಾದರೂ ನಮ್ಮ ಸಂಸ್ಕೃತಿ ವಿಮರ್ಶಕರು ಧ್ಯಾನಾವಸ್ಥೆಯೂ ಮನುಷ್ಯನ ಅಸ್ತಿತ್ವದ ಸಹಜ ಅವಸ್ಥೆಯೇ ಆಗಿದ್ದು, ಅದರ ವಿವರ - ಒಳನೋಟಗಳೂ ಜೀವ ಸಂಚಲನೆ ಉಂಟು ಮಾಡಿ ಕೃತಿಯೊಂದರ ಅರ್ಥವಂತಿಕೆಯನ್ನು ಹೆಚ್ಚಿಸಬಲ್ಲವು ಎಂದು ಒಪ್ಪಬಹುದು. ಹಾಗೇ 'ಕಾನೂರು ಹೆಗ್ಗಡಿತಿ'ಯೊಳಗಿನ ಬುದ್ಧದರ್ಶನವು ಕನ್ನಡ ಸಂಸ್ಕೃತಿ ದರ್ಶನಕ್ಕೆ ಸಂಸ್ಕೃತಿ ಚರಿತ್ರೆಯಲ್ಲಿ ಒದಗಿ ಬಂದ ಮಹದವಕಾಶವೆಂದೂ ದಾಖಲು ಮಾಡಬಹುದು...

ಬುದ್ಧನ ಪ್ರಜ್ಞಾಶಾಸ್ತ್ರದ ತತ್ವಗಳು ಡೆರಿಡಾನ ಒಳನೋಟಗಳಾಗಿಯೇ ತಲುಪಬೇಕಾದ ದುರಂತವನ್ನೆದುರಿಸುತ್ತಿರುವ ಕನ್ನಡ ಸಂಸ್ಕೃತಿ ವಿಮರ್ಶೆಗೆ 'ಕಾನೂರು ಹೆಗ್ಗಡಿತಿ'ಯ ಮೂಲಕ ಕುವೆಂಪು ಹೊಸದೊಂದು ಹದದ ವೈಚಾರಿಕತೆಯನ್ನು ಸಂಶ್ಲೇಷಿಸುವ ಪ್ರಯತ್ನ ಮಾಡಿದ್ದರು ಎಂಬುದು ಹೇಗೆ ಗೊತ್ತಾಗಬೇಕು? ಕಾದಂಬರಿ ತನ್ನ ಒಡಲನ್ನು ಸೀಳಿಕೊಂಡು ಬಂದು ಹೇಳುವುದು ಇದನ್ನೇ:

> **ಉದಯಿಸುತಿದೆ ನೂತನ ಯುಗದೇವತೆ**
> **ಮಿಥ್ಯೆಯ ಮೌಢ್ಯತೆಯನು ಸೀಳಿ**
> **ಜ್ಞಾನದ ವಿಜ್ಞಾನದ ಮತಿಖಡ್ಗದಿ**
> **ಮೈದೋರುವಳೈ ನವಕಾಳಿ!**
> **ಕೆಚ್ಚಿನ ನಚ್ಚಿನ ತನುಮನ ಪಟುತೆಯ**
> **ಸಂಪಾದಿಸಿ ಓ ಮೇಲೇಳಿ:**
> **ಕಣ್ದೆರಿಯಿರಿ ನವಕಾಂತಿಗೆ, ಶಾಂತಿಗೆ**
> **ಓ ಕ್ರಾಂತಿಯ ಪುತ್ರರೆ ಬಾಳಿ!**

'ಮಲೆಗಳಲ್ಲಿ ಮದುಮಗಳು' ಕನ್ನಡ ಕಾದಂಬರಿ ಪರಂಪರೆಯನ್ನು ಒಂದು ಹೊಸ ನೆಲೆಗೆ ಒಯ್ದು ಕಾದಂಬರಿ. ಭೂತ - ವರ್ತಮಾನ - ಭವಿಷ್ಯತ್ ಕಾಲಗಳನ್ನು ಪರಸ್ಪರ ಲಾಳಿಯಾಡಿಸುತ್ತಾ ಅಖಂಡ ಕಾಲಾವಕಾಶವೊಂದನ್ನು ನಿರ್ಮಿಸಿ ಅದರೊಳಗೆ ಕಥೆಯನ್ನು ಹಾಸು ಹೊಕ್ಕಾಗಿಸುವ ಅನಂತ ಪ್ರಜ್ಞೆಯ ಲೀಲಾವಿನೋದವೆಂಬಂತೆ ಸೃಷ್ಟಿಯಾಗಿರುವ ಈ ಕಾದಂಬರಿ, ಎಲ್ಲೂ ವರ್ತಮಾನಕ್ಕಾಗಲಿ ಮರ್ತ್ಯಪ್ರಜ್ಞೆಗಾಗಲಿ ಎರವಾಗದಷ್ಟು ಲೌಕಿಕವೂ ಆಗಿದೆ. ಎಷ್ಟು ಲೌಕಿಕವೆಂದರೆ ಈ ಕಾದಂಬರಿಯ ಕರ್ತೃವಿನ ನಿಜ ಪೂರ್ವಜರು ಕಥೆಯ ಪಾತ್ರಗಳಾಗಿ ಬರುವರು. ಹಾಗಾದರೆ ಇದೊಂದು ಕುಲ ಚರಿತ್ರೆಯೋ? ಹೌದು, ಇದೊಂದು ಕುಲ ಚರಿತ್ರೆಯೆ. ಆದರೆ ನಮ್ಮ - ನಿಮ್ಮೆಲ್ಲರ ಕುಲ ಚರಿತ್ರೆಯೂ ಹೌದು. ಏಕೆಂದರೆ ನಮ್ಮ ನಿಮ್ಮೆಲ್ಲರ ಪೂರ್ವಜರೂ ಇಲ್ಲಿದ್ದಾರೆ - ಒಂದು ಸಂಸ್ಕೃತಿ ವಿಕಾಸ ಕಥೆಯ ಹಲವು ಪ್ರಜ್ಞಾಸ್ತರಗಳಾಗಿ. ಆ ಸ್ತರಗಳೆಲ್ಲ ಈ ಕಾದಂಬರಿಯನ್ನು ಓದುತ್ತಿದ್ದಂತೆ ನಮ್ಮಲ್ಲಿ ಜಾಗೃತವಾಗತೊಡಗುತ್ತವೆ. ಈ ಕಾದಂಬರಿಯನ್ನು ನಾನು ಹಿಂದೊಮ್ಮೆ 'ಆಧುನಿಕ ಕನ್ನಡ ಸಂಸ್ಕೃತಿಯ ಮಹಾಕಾವ್ಯ'ವೆಂದು ಕರೆದದ್ದು ಈ ಅರ್ಥದಲ್ಲೇ.

ಸುಜನಾ ಮತ್ತು ರಾಜೇಂದ್ರ ಚೆನ್ನಿಯವರು ಈ ಕಾದಂಬರಿಯ ಸಂಕೀರ್ಣ ತತ್ವ ಹಾಗೂ ರೂಪಗಳ ಬಗ್ಗೆ ಆಳವಾದ ಒಳನೋಟಗಳನ್ನು ಈಗಾಗಲೇ ತಮ್ಮ ಬರೆಹಗಳಲ್ಲಿ ನೀಡಿ ಕಾದಂಬರಿಯನ್ನು ಅರ್ಥ ಮಾಡಿಕೊಳ್ಳಲು ಒಂದು ಪರಿಪ್ರೇಕ್ಷ್ಯವನ್ನು ಒದಗಿಸಿದ್ದಾರೆ. ಚೆನ್ನಿಯವರು ಯೂಂಗ್‌ನ ಮನೋವೈಜ್ಞಾನಿಕ ತತ್ವಗಳ ಮೂಲಕ ಕಾದಂಬರಿಯನ್ನು ಪ್ರವೇಶಿಸಿ 'ಕಾದಂಬರಿಯ ವಸ್ತು, ಮೂಲ ಪ್ರವೃತ್ತಿಯಾದ ಕಾಮದ ಸಮಸ್ಯೆಯನ್ನು ಸಮಾಜದ ವಿವಿಧ ಸ್ತರದ ಮತ್ತು ನೈತಿಕ ವಿಕಸನದ ವಿವಿಧ ಹಂತಗಳಲ್ಲಿರುವ ಪಾತ್ರಗಳು ಹೇಗೆ ಎದುರಿಸುತ್ತಾರೆ ಎನ್ನುವುದು' ಎನ್ನುವ ತೀರ್ಮಾನಕ್ಕೆ ಬಂದು ಅದನ್ನು ವಿಷದೀಕರಿಸುತ್ತಾ ಹೋಗುತ್ತಾರೆ. ಸುಜನಾ ಅವರು 'ಅಲ್ಪದಲ್ಲೂ ಭೂಮದ ಅನುಭೂತಿ ಸಾಧ್ಯ' ಎಂಬ ಕುವೆಂಪು ಅವರ ರಸತತ್ವದ ಅನಾವರಣವಾಗಿ ಕಾದಂಬರಿಯನ್ನು ಕಾಣುತ್ತಾರೆ. ಈ ಮೊದಲೇ ಸೂಚಿಸಿದಂತೆ ಇವೆರಡೂ ಕಾದಂಬರಿಯ ಸಾಂಸ್ಕೃತಿಕ ಸ್ವಾಯತ್ತತೆಯನ್ನು ಅರಿವಿಗೇ ತಂದುಕೊಳ್ಳದ, ಕಾದಂಬರಿ ಕುರಿತ ಅಂಶಿಕ ಸತ್ಯ ಮಾತ್ರವಾಗಿವೆ. ಹಾಗಾಗಿ ಈ ಆಂಶಿಕ ಸತ್ಯಗಳನ್ನು ಮೀರಿ ಅನಾವರಣಗೊಳ್ಳುವ ಅದರ ಪೂರ್ಣ ಸತ್ಯದರ್ಶನಕ್ಕಾಗಿ ನಾವು ಕಾದಂಬರಿಯನ್ನು ಅದರ ಸಾಂಸ್ಕೃತಿಕ ಸ್ವಾಯತ್ತತೆಯ ಬೆಳಕಿನಲ್ಲೇ ಪರಿಶೀಲಿಸಬೇಕಾಗುತ್ತದೆ.

ಈ ಕಾದಂಬರಿಯ ಕಾಲ 'ಕಾನೂರು ಹೆಗ್ಗಡಿತಿ'ಯ ಕಾಲಕ್ಕಿಂತ ಹಿಂದಿನದು. ಅಂದರೆ ಕನ್ನಡ ನವೋದಯದ ಪೂರ್ವದ್ದು. ಚಾರಿತ್ರಿಕ ನಿರ್ದಿಷ್ಟತೆಯಿಂದ ಹೇಳುವುದಾದರೆ, 'ಕ್ರೈಸ್ತ ಮತಶ್ರದ್ಧೆಯ ಮತ್ತು ಮಿಷನರಿ ಮತಾಂಧತೆಯ ಶಕ್ತಿ ಕೇಂದ್ರವಾಗಿದ್ದ ಅಮೆರಿಕಾ ದೇಶದ ಚಿಕಾಗೋ ನಗರದಲ್ಲಿ ನೆರೆದಿದ್ದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು

ಹಿಂದೂ ಧರ್ಮದ ಮತ್ತು ವೇದಾಂತ ದರ್ಶನದ ಮಹೋನ್ನತಿಯನ್ನೂ ವಿಶ್ವವೈಶಾಲ್ಯವನ್ನೂ ತಮ್ಮ ಸಿಂಹ ಕಂಠದಿಂದ ಘೋಷಿಸಿದ್ದ, ೧೮೯೩ನೇ ಇಸವಿಯ ಆಸುಪಾಸಿನ ವರ್ಷಗಳಿಗೆ ಸೇರಿದ್ದು. ಕ್ರೈಸ್ತ ಮತಾಂತರಿಕೆಯ ಪ್ರಯತ್ನಗಳು, ಜಡಗೊಂಡಿದ್ದ ಮಲೆನಾಡಿನ ಜನಜೀವನದಲ್ಲಿ ಸಣ್ಣಪ್ರಮಾಣದ ಉತ್ಕ್ರಾಂತಿಯನ್ನು ಉಂಟುಮಾಡುತ್ತಿದ್ದ ಕಾಲವದು. ಈ ಉತ್ಕ್ರಾಂತಿಗೆ ಆ ಜನ ಜೀವನ ಪ್ರತಿಕ್ರಿಯಿಸಿದ ಅನೇಕ ನೆಲೆಗಳ ಅನ್ವೇಷಣೆಯಲ್ಲಿ ಮೂಡಿದ ಸತ್ಯ ಸಂಕೀರ್ಣವೇ ಈ ಕಾದಂಬರಿಯ ಸತ್ಯದರ್ಶನವೂ ಆಗಿದೆ. ಈ ಉತ್ಕ್ರಾಂತಿಗೆ ಕಾದಂಬರಿ ಒದಗಿಸುವ ಹಿನ್ನೆಲೆ ಇದು:

> ಅಮೆರಿಕಾದ ಚಿಕಾಗೋ ಬಹು ದೂರದಲ್ಲಿರಬಹುದು? ವಿವೇಕಾನಂದರ ಉತ್ತಾಲ ಧ್ವನಿ ಮಲೆನಾಡಿನ ಕೊಂಪೆಗೆ ಮುಟ್ಟದಿರಬಹುದು? ಆದರೆ ಸಮೀಪದಲ್ಲಿಯೇ ಇದ್ದುವಲ್ಲ - ಶೃಂಗೇರಿ, ಧರ್ಮಸ್ಥಳ, ಉಡುಪಿ ಇತ್ಯಾದಿ ಪವಿತ್ರ ಕ್ಷೇತ್ರಗಳ ಗುರುಪೀಠಗಳು? ಅವೇನು ಮಾಡುತ್ತಿದ್ದವು? ಅದ್ವೈತ ತತ್ತ್ವದಿಂದ ಬೌದ್ಧಧರ್ಮವನ್ನೇ ಭರತ ವರ್ಷದಿಂದ ಅಟ್ಟಿ ವೈದಿಕ ಧರ್ಮಸ್ಥಾಪನೆ ಮಾಡಿದನೆಂದು ಹೇಳಲಾಗುತ್ತಿರುವ ಆಚಾರ್ಯ ಶಂಕರನ ಮೂಲಪೀಠದಲ್ಲಿ ವಿರಾಜರಾಗಿದ್ದ ಸನ್ಯಾಸಿವರೇಣ್ಯರು ಏನು ಮಾಡುತ್ತಿದ್ದರು?
>
> ಅಜ್ಞರೂ ಮೌಢ್ಯಾಂಧರೂ ಆಗಿದ್ದ ಶೂದ್ರವರ್ಗದ ಸಾಮಾನ್ಯ ಜನರಿಂದ ಪಾದಪೂಜೆ ಮಾಡಿಸಿಕೊಳ್ಳುತ್ತಿದ್ದರು. ಅಡ್ಡಪಲ್ಲಕ್ಕಿ ಸೇವೆ ಸಲ್ಲಿಸಿಕೊಳ್ಳುತ್ತಿದ್ದರು; ದಾನ, ದಕ್ಷಿಣೆ, ಸಾಷ್ಟಾಂಗ ನಮಸ್ಕಾರಗಳನ್ನು ಸ್ವೀಕರಿಸುತ್ತಿದ್ದರು! ತಮ್ಮ ತಮ್ಮ ಪಂಗಡಕ್ಕೆ ಸೇರಿದ ಬ್ರಾಹ್ಮಣೋತ್ತಮರಿಗೆ, ಭೂಸುರರಿಗೆ, ಸಮಾರಾಧನೆ ಮಾಡಿಸಿ ಹೊಟ್ಟೆ ತುಂಬಿಸುತ್ತಿದ್ದರು. ಬಹುಶಃ ಶಾಸ್ತ್ರಕ್ಕಾಗಿ, ತಮ್ಮ ವರ್ಗಕ್ಕೆ ಸೇರಿದ ವಿದ್ವಾಂಸರನ್ನು ನೆರವಿ ವಾಕ್ಯಾರ್ಥ ಏರ್ಪಡಿಸುತ್ತಿದ್ದರೂ ಇರಬಹುದು. ಶೂದ್ರನು ವೇದೋಪನಿಷತ್ತುಗಳನ್ನು ಓದುವುದಿರಲಿ, ಕೇಳಿದರೂ ಅವರ ಕಿವಿಗೆ ಸೀಸ ಕರಗಿಸಿ ಹೊಯ್ಯುವ ನರಕ ಶಿಕ್ಷೆಯನ್ನು ವಿಧಿಸಿ, ಅದಕ್ಕೆ ಮನುಧರ್ಮಶಾಸ್ತ್ರವೆಂದು ಹೆಸರಿಟ್ಟವರು ಶೂದ್ರರಿಗೆ ವೇದಾಂತ ಬೋಧನೆ ಮಾಡುವ ಪಾಪಕ್ಕೆ ಏಕೆ ಪಕ್ಕಾಗುತ್ತಾರೆ?
>
> ಕಾವಲಿಲ್ಲದ ಕೋಟೆಗೆ ನುಗ್ಗಲು ಶತ್ರುವಿಗೆ ಸೈನ್ಯಬೇಕೆ? ರಕ್ಷಕರಿಲ್ಲದ ದುರ್ಗವನ್ನು ಗೆಲ್ಲಲು ನಿಪುಣ ಸೈನಿಕನೊಬ್ಬನಾದರೂ ಸಾಕು! ತಮ್ಮ ಧರ್ಮದ ವಿಚಾರವಾದ ಯಾವ ಬುದ್ಧಿಪೂರ್ವಕ ಜ್ಞಾನವೂ ಇಲ್ಲದೆ, ಪರಂಪರಾಗತವಾದ ಅಂಧ ಆಚಾರ ಸಮೂಹಗಳನ್ನೇ ತತ್ವಗಳೆಂದು ನಂಬಿ, ಆಲೋಚನಾ ಶಕ್ತಿ ಲವಲೇಶವೂ ಇಲ್ಲದಿದ್ದವರನ್ನು, ಜಡಬುದ್ಧಿಗಳನ್ನು, ಮತಾಂತರಗೊಳಿಸುವುದು ಸುಲಭವಲ್ಲ. ಆದರೆ ಜಡ ಬುದ್ದಿಗಳಾಗದೆ ತುಸು ಮಟ್ಟಿಗೆ ಜಾಗ್ರತಮತಿಗಳಾಗಿಯೂ ತಮ್ಮ ಮತ ಧರ್ಮದ ಸನಾತನ ಮೂಲತತ್ವ

ಗಳನ್ನರಿಯದವರ ನಂಬಿಕೆಗಳನ್ನು ಅಲ್ಲಾಡಿಸುವುದು ಅಷ್ಟೇನು ಕಷ್ಟವಲ್ಲ. ಪಾದ್ರಿ ಜೀವರತ್ನಯ್ಯ ಮಲೆನಾಡಿನ ಗೌಡರುಗಳಲ್ಲಿ ಅಂಥವರನ್ನೆ ಪತ್ತೆ ಹಚ್ಚಿ ತನ್ನ ಕೆಲಸಕ್ಕೆ ಕೈಹಾಕಿದ್ದನು.

(ಪುಟ : ೧೯೩)

ಇದು ಒಂದರ್ಥದಲ್ಲಿ ಈ ಕಾದಂಬರಿಯ ತತ್ವದರ್ಶನಕ್ಕೆ ಒಂದು ಪೀಠಿಕೆ. ಆದರೆ ಈ ತತ್ವದರ್ಶನ ಮೇಲ್ನೋಟಕ್ಕೆ ಕಾಣುವಂತೆ ಯಾವುದೇ ಒಂದು ಧರ್ಮದ ವಿರುದ್ಧ ವಾದುದಾಗಿರದೆ ತನ್ನ ಧರ್ಮದ ಆತ್ಮವಿಶ್ಲೇಷಣೆಯೇ ಆಗುವ ಮೂಲಕ ಒಂದು ಜನಾಂಗದ ಸಾಂಸ್ಕೃತಿಕ ಸ್ಮೃತಿಕೋಶದ ಅನಂತಯಾತ್ರೆಯ ಕಥೆಯೂ ಆಗುವ ಬೆರಗನ್ನು ನಾವು ಈ ಕಾದಂಬರಿಯಲ್ಲಿ ನೋಡಬಹುದು.

ಈ ಅನಂತಯಾತ್ರೆಯಲ್ಲಿ ಸಕಲ ಜೀವ ಜಗತ್ತು ಭಾಗಿಯಾಗಿದೆ, ತಂತಮ್ಮ ಆಧ್ಯಾತ್ಮಿಕ ಸ್ಥಾನಮಾನಗಳಿಗನುಗುಣವಾದ ಕ್ರಿಯಾಶೀಲತೆಯೊಂದಿಗೆ - ವಿವೇಕಾನಂದರಿಂದ ಹಿಡಿದು ಗುತ್ತಿಯ ನಾಯಿ ಹುಲಿಯನವರೆಗೆ! ಈ ಕ್ರಿಯಾಶೀಲತೆಯೇ ಕಾದಂಬರಿಯ ಸಾಂಸ್ಕೃತಿಕ ಸ್ವಾಯತತ್ತೆಗೂ ಕಾರಣವಾಗಿರುವುದು. ಅದರ ಒಂದು ಇಣುಕು ನೋಟ ಮಿಶನ್ ಸ್ಕೂಲಿನ ಹತ್ತಿರ ಬಾವಿ ತೋಡಿಸಲು ಸ್ಥಳಗೊತ್ತು ಮಾಡಲು ನಡೆಯುವ ಹಸುರುಕಡ್ಡಿ ಪ್ರಯೋಗದ ದೃಶ್ಯದಲ್ಲಿ ಸಿಗುತ್ತದೆ. ಅನಂತ ಐಗಳ ಸಹಜ ಪೌರ್ವಾತ್ಯ ಜ್ಞಾನ ಹಾಗೂ ಪಾದ್ರಿ ಜೀವರತ್ನಯ್ಯನ ಕಲಿತ ಪಾಶ್ಚಾತ್ಯವಿದ್ಯೆಗಳ ನಡುವೆ ನಡೆಯುವ ಸಂವಾದಂತೆ ತೋರುವ ಈ ಘಟನೆ ಇಡೀ ಕಾದಂಬರಿಯ ದರ್ಶನದ ಇಣುಕು ನೋಟವೂ ಆಗಿದೆ.

ಜೀವರತ್ನಯ್ಯ ಸ್ವಲ್ಪ ಅಪ್ರತಿಭರಾದರು. ಅದರ ತರ್ಕ ಅವರಿಗೆ ಬಗೆ ಹರಿಯಲಿಲ್ಲ. ಇದು ಮಂತ್ರಶಕ್ತಿಯೋ? ಅಥವಾ ವಿದ್ಯುಚ್ಛಕ್ತಿಯಂತೆಯೇ ಒಂದು ತರಹದ ನೈಸರ್ಗಿಕ ಶಕ್ತಿಯೊ? ನೈಸರ್ಗಿಕ ಶಕ್ತಿಯಾದರೆ ಎಲ್ಲರಲ್ಲಿಯೂ ಏಕೆ ಇಲ್ಲ? ಅಥವಾ ಬುದ್ಧಿಶಕ್ತಿಯಂತೆ, ಮೇಧಾ ಪ್ರತಿಭಾಶಕ್ತಿಗಳಂತೆ ದೈವದತ್ತವಾಗಿ ಒಬ್ಬರಲ್ಲಿದ್ದು ಇನ್ನೊಬ್ಬರಲ್ಲಿ ಇರದೆ ಇರಬಹುದಲ್ಲವೆ? ಆದರೆ ಬುದ್ಧಿ ಮೇಧಾ ಮತ್ತು ಪ್ರತಿಭಾಶಕ್ತಿಗಳನ್ನು ಪಡೆದವರು ಐಗಳಂತೆ ಆ ಶಕ್ತಿಗಳನ್ನು ಇತರರಲ್ಲಿ ಸ್ಪರ್ಶಮಾತ್ರದಿಂದ ಪ್ರಚೋದಿಸಲು ಸಾಧ್ಯವೇ? ಅಲ್ಲದೆ ಐಗಳೇನು ತಮ್ಮ ಇಚ್ಛಾಶಕ್ತಿಯಿಂದ ಅದನ್ನು ಇತರರಲ್ಲಿ ಪ್ರಚೋದಿಸುತ್ತಿಲ್ಲ. ಅವರು ಯಾರನ್ನು ಮುಟ್ಟಿದರೂ, ಇಚ್ಛೆಯಿರಲಿ, ಇಲ್ಲದಿರಲಿ ಹಸುರುಕಡ್ಡಿ ಕೆಲಸ ಮಾಡುತ್ತದೆ! ಇದೆಂತಹ ವಿಚಿತ್ರ ಶಕ್ತಿ?

(ಪುಟ : ೨೯೭)

ಆದಿ ಭೌತಿಕ ನೆಲೆಯ ಈ ವಿಚಿತ್ರ ಶಕ್ತಿಯ ಅವಿರ್ಭಾವದ ಹಿನ್ನೆಲೆಯನ್ನು, ಧ್ವನಿಪೂರ್ಣ ವಿವರಗಳೊಂದಿಗೆ ಕಥನದ ಅವಿಭಾಜ್ಯ ಅಂಗವಾಗಿಸುವ ಕುವೆಂಪು ಅವರ ಪ್ರತಿಭೆಯ ಅಖಂಡತೆ

ಮಿಂಚುವುದು ಹೀಗೆ :

ಜೀವರತ್ನಯ್ಯನೂ ಕುತೂಹಲ ಕೆರಳಿ ಅತ್ಯಂತ ಜಾಗರೂಕ ಮನಸ್ಸಿನಿಂದ ಸಮೀಕ್ಷಿಸತೊಡಗಿದನು, ಏನಾದರೂ ದುರ್ಮಂತ್ರದ ಸುಳಿವು ಕಂಡೊಡನೆಯೆ ಪ್ರಯೋಗ ವಿರಾಮ ಮಾಡಲು ನಿಶ್ಚಯಿಸಿ.

ಐಗಳಿಗೆ, ಪೀಠಿಕಾ ಪ್ರಾಯವಾಗಿ, ಮೈಮೇಲೆ ಬಂದಂತಾಗಿ ಹೂಂಕರಿಸಬಹುದೆಂದು ನಿರೀಕ್ಷಿಸಿದ್ದ ಜೀವರತ್ನಯ್ಯಗೆ ಆಶ್ಚರ್ಯವಾಯಿತು, ಐಗಳು ತಮ್ಮ ದಿನನಿತ್ಯದ ಸಹಜ ಸ್ಥಿತಿಯಲ್ಲಿಯೆ ಇದ್ದು, ಚೀಂಕ್ರನಿಗೆ ಒಂದು ಕವಲೊಡೆಯದ ಹಸುರು ಕಡ್ಡಿಯನ್ನು ಯಾವುದಾದರು ಒಂದು ಗಿಡದಿಂದ ಮುರಿದುಕೊಂಡು ಬರುವಂತೆ ಹೇಳಿದುದನ್ನು ನೋಡಿ ! ಚೀಂಕ್ರ ಕೀಳು ಜಾತಿಗೆ ಸೇರಿದ ಅಸ್ಪೃಶ್ಯ: ಅವನ ಹತ್ತಿರ ಅದನ್ನು ತರಲು ಹೇಳುತ್ತಿದ್ದಾರಲ್ಲಾ? ಅಂತಹ ಅಸಾಧಾರಣ ದೈವಿಕ ಕಾರ್ಯನಿರ್ವಹಣೆಗೆ?

ಚೀಂಕ್ರ ಯಾವ ಮುಚ್ಚು ಮರೆಯೂ ಇಲ್ಲದೆ ಬಹಿರಂಗವಾಗಿಯೆ ಸಮೀಪದಲ್ಲಿದ್ದ ಒಂದು ಗಿಡದಿಂದ ಎಲ್ಲರೂ ನೋಡುತ್ತಿದ್ದಂತೆಯೆ ಒಂದು ದೊಡ್ಡ ಕವಲು ಕಡ್ಡಿಯನ್ನು ಮುರಿದು ತಂದ. ಐಗಳು ಅದನ್ನು ಹಿಡಿದು ನೋಡಿ 'ಏನೋ ಇದು? ಯಾರಿಗಾದರೂ ಹೊಡೆಯುದಕ್ಕೆ ಬರಲು ಮುರಿದುಕೊಂಡು ಬರುವಂತೆ ತಂದಿದ್ದಿಯಲ್ಲಾ ಇಷ್ಟು ದೊಡ್ಡ ಹೊರೆಯನ್ನ? ಸಣ್ಣದಾಗಿರಬೇಕು; ಬಳುಕಬೇಕು' ಎಂದು ಹೇಳುತ್ತಿರುವಾಗಲೆ ಕಣ್ಣಾ ಪಂಡಿತರು ತಾವೆ ಹೋಗಿ ಒಂದನ್ನು ಮುರಿದು ತಂದರು.

ಅದು ಐಗಳಿಗೆ ಒಪ್ಪಿಗೆಯಾಯಿತೆಂದು ಅವರ ಮುಖಭಂಗಿಯಿಂದಲೆ ಗ್ರಹಿಸಿದರು ಪಾದ್ರಿ.

(ಪುಟ : ೨೯೪)

ಬದುಕಿನ ಅಂತರ್ಜಲವನ್ನು ಗುರುತಿಸಬಲ್ಲ ಧರ್ಮ ಕವಲೊಡೆದ ಹಸರು ಕಡ್ಡಿಯಂತೆ ಬಳುಕುವಂತಿರಬೇಕು - ಯಾರಿಗಾದರೂ ಹೊಡೆಯುವುದಕ್ಕೆ ಬರುವ ಬರಲಿನಂತಿರಬಾರದು! ಆದರೆ ಜಾತಿ ಪದ್ಧತಿ ಮತ್ತು ಇತರ ಮೌಢ್ಯಚಾರಗಳಿಂದಾಗಿ, ಬಹುಜನರ ಪಾಲಿಗೆ ಶಾಪದಂತಾಗಿ ಆ ಶಾಪದಿಂದ ಮುಕ್ತರಾಗಲು ಆ ಬಹು ಜನರು ಮತಾಂತರದ ಆಮಿಷಕ್ಕೆ ಬಲಿಯಾಗಿ ತಮ್ಮ ಸಾಮುದಾಯಿಕ - ಸಾಂಸ್ಕೃತಿಕ - ಸ್ಮೃತಿಕೋಶದಿಂದಲೇ ಕತ್ತರಿಸಲ್ಪಟ್ಟು ಅಂತರ್ಪಿಶಾಚಿಗಳಂತಾಗುವ ಬಹು ಆಯಾಮಗಳ ಬಿಕ್ಕಟ್ಟನ್ನು ಆಹ್ವಾನಿಸುತ್ತಿರುವ ಹಿಂದೂಧರ್ಮವಾಗಲೀ, ಈ ಬಿಕ್ಕಟ್ಟಿಗೆ ನಿಮಿತ್ತವಾಗಿರುವ ಕ್ರೈಸ್ತಧರ್ಮವಾಗಲಿ, ಯಾರಿಗಾದರೂ ಹೊಡೆಯುವುದಕ್ಕೆ ಮುರಿದುಕೊಂಡು ಬಂದ ಬರಲುಗಳಂತಿವೆ! ಯಾವುದೇ ಧರ್ಮ ಆ ಬಳುಕುವ ಹಸುರು ಕಡ್ಡಿಯಂತಾಗಬೇಕಾದರೆ ಕವಲೊಡೆಯುವ ಸೃಜನಶೀಲತೆಯನ್ನು ತನ್ನಲ್ಲಿ ಬತ್ತಿಸಿರುವ

ಪುರೋಹಿಶಾಹಿ ಜಡತೆಯಿಂದ ಬಿಡುಗಡೆ ಪಡೆಯಬೇಕಾಗಿದೆ. ಈ ಬಗೆಗೇ ಆ ಕಲ್ಲೂರು ಗಡ್ಡದಯ್ಯನೂ ಕ್ರಮವಾಗಿ ಮತಾಂತರದ ಮತ್ತು ಪ್ರೇಮದ ಸುಳಿಗೆ ಸಿಕ್ಕಿ ದಿಕ್ಕೆಟ್ಟಿರುವ ದೇವಯ್ಯ ಹಾಗೂ ಮುಕುಂದಯ್ಯನಿಗೆ ಸೂಚನೆ ನೀಡಿ ದಿಕ್ಕು ತೋರಿಸುವುದು:

> ''ಆ ಸ್ವಾಮಿ ವಿವೇಕಾನಂದರು ಇಂಡಿಯಾಕ್ಕೆ ಬರುವ ದಾರಿಯಲ್ಲಿದ್ದಾರೆ. ಬಂದ ಮೇಲೆ ಭರತಖಂಡವನ್ನೆಲ್ಲ ಸಂಚರಿಸಿ, ಬೋಧಿಸಿ, ಭಾಷಣ ಮಾಡಿ ಹೊಸದೊಂದು ಯುಗಶಕ್ತಿಯನ್ನೇ ಉದ್ಬೋಧನಗೊಳಿಸುತ್ತಾರೆ. ಹಿಂದೂ ಧರ್ಮವು ಬ್ರಾಹ್ಮಣ ಪುರೋಹಿತರಿಂದ ಪಾರಾಗಿ, ಕ್ರೈಸ್ತಾದಿ ಮತ ಪ್ರಚಾರಕರಿಗೆ ದುರ್ಗಮವಾಗಿ ತನ್ನ ವೇದೋಪನಿಷತ್ತಿನ ಶುದ್ಧ ವೇದಾಂತ ದರ್ಶನದಲ್ಲಿ ಪ್ರತಿಷ್ಠಿತವಾಗುವ ಕಾಲ ಸಮೀಪಿಸುತ್ತಿದೆ. ಅದಕ್ಕಾಗಿ ನಾನೂ, ನನ್ನಂತಹ ಇತರ ಕೆಲವರೂ, ದೇಶಾದ್ಯಂತ ಸಂಚರಿಸಿ, ಸ್ಥಳೀಯ ದೇವತಾ ಶಕ್ತಿಗಳನ್ನು ಎಚ್ಚರಿಸುತ್ತಿದ್ದೇವೆ. ನಾನು ಸ್ವಾಮಿ ವಿವೇಕಾನಂದರು ಕೊಲೊಂಬೊಗೆ ಬರುವಷ್ಟರಲ್ಲಿ ಈ ಕರ್ತವ್ಯವನ್ನು ಮುಗಿಸಿ, ಅವರನ್ನು ಎದುರುಗೊಂಡು ಸ್ವಾಗತಿಸಲು ಅಲ್ಲಿಗೆ ಹೋಗುವ ಹಾದಿಯಲ್ಲಿದ್ದೇನೆ''
>
> *(ಪುಟ : ೪೨೦)*

ಈ ಮಾತುಗಳು ಸೃಷ್ಟಿಸುವ ಅಲೌಕಿಕ ಪ್ರಭೆ ಅವಾಸ್ತವಿಕವಾದದ್ದೇನೂ ಅಲ್ಲ - ಅದು ವಾಸ್ತವ ಸಂಗತಿಗಳನ್ನು ಒಂದು ಬಂಧಕ್ಕೆ ತಂದು, ಆಲಿಸುತ್ತಿರುವವರ ಮನಸ್ಸಿನಲ್ಲಿ ಒಂದು ಲೌಕಿಕ ಆಶಯವನ್ನು ಸೃಷ್ಟಿಸುವುದರಿಂದ. ಇಲ್ಲಿ ಉಲ್ಲೇಖಿತವಾಗಿರುವ ಬ್ರಾಹ್ಮಣ ಪುರೋಹಿತಶಾಹಿಯು 'ಮುಸ್ಲಿಂ - ಅಸಂಸ್ಕೃತಿ'ಯ ಸಂಕೇತವಾದ 'ಹೊನ್ನಾಳಿ ಹೊಡೆತ'ದ ಪ್ರವರ್ತಕರಾದ ಕಲ್ಲೂರು ಮಂಜಭಟ್ಟರ ರೂಪದಲ್ಲಿದೆ. ಈ 'ಹೊನ್ನಾಳಿ ಹೊಡೆತ'ದ ಭೀತಿ - ಅವಮಾನಗಳ ಹಿನ್ನೆಲೆಯಲ್ಲೇ ಚಿನ್ನಮ್ಮ ಮುಕುಂದಯ್ಯರ ಪ್ರೇಮ ಬಿಕ್ಕಟ್ಟಿಗೆ ಸಿಗುವುದು ಎಂಬುದನ್ನೂ ಗಮನಿಸಬೇಕು. ಇನ್ನು 'ವೇದೋಪನಿಷತ್ತಿನ ಶುದ್ಧ ವೇದಾಂತ ದರ್ಶನದ ಪ್ರತಿಷ್ಠಾಪನೆ ಎಂದರೆ, ಜಾತಿಪದ್ಧತಿ ಮತ್ತು ತತ್ಸಂಬಧೀ ಅಸಮ ಸಂಬಂಧಗಳಿಂದ ಸಮಾಜದ ಬಿಡುಗಡೆ. ಅರ್ಥಾತ್ ಸಕಲರಿಗೂ ಜ್ಞಾನ ಸಂಪಾದನೆಯ ಸಾಧ್ಯತೆ ಮತ್ತು ಆ ಮೂಲಕ ಅವರ ಆಜನ್ಮ ಹಕ್ಕುಗಳ ಅರಿವಿನ ಅನಾವರಣ - ಇಲ್ಲಿ 'ಆಜನ್ಮ' ಎಂದೆ, ಏಕೆಂದರೆ ಕಾದಂಬರಿಯುದ್ದಕ್ಕೂ ನಾಗರೀಕತೆಗೆ ಇನ್ನೂ ತೆರೆದುಕೊಳ್ಳದ ಸಕಲ 'ಪ್ರಾಕೃತಿಕ' ಪಾತ್ರಗಳೂ ತಂತಮ್ಮ 'ಅಸ್ಮೃತಿ'ಯ ಸ್ಥಿತಿಗಳಲ್ಲಿ ಅನಂತವನ್ನು ಮಿಂಚಾಗಿ ಅನುಭವಿಸುವ ಪ್ರಸಂಗಗಳು ಬಂದು ಹೋಗುತ್ತವೆ. ಇದೇ - 'ಅಸ್ಮೃತಿ'ಯಲ್ಲಿ ಅಡಗಿರುವ ಈ ಅರಿವಿನ ಅನಾವರಣವೇ - ''ಸ್ಥಳೀಯ ದೇವತೆಗಳನ್ನು ಎಚ್ಚರಿಸುವ'' ಮಾತಿನ ಲೌಕಿಕಾರ್ಥ. ಹೀಗಾಗಿಯೇ 'ಮುಕುಂದಯ್ಯ ದೇವಯ್ಯರಿಗೆ ಸಂನ್ಯಾಸಿ ಹೇಳಿದುದರಲ್ಲಿ ಮುಕ್ಕಾಲು ಮೂರು ವೀಸ ಬುದ್ಧಿಗಮ್ಯವಾಗಿರಲಿಲ್ಲ; ಆದರೂ ಅದರ ತಾತ್ಪರ್ಯವು ಭಾವಗೋಚರವಾಗಿ ಅವರು ಒಂದು ಹೊಸ ಜನ್ಮಕ್ಕೆ ಹುಟ್ಟಿ

ಬಂದಂತಾಗಿತ್ತು' ಅಷ್ಟೇ ಅಲ್ಲ, ತನ್ನ ಅತಿ ಲೌಕಿಕತೆಯಿಂದಾಗಿ ತನ್ನ ಆಜನ್ಮ ಮುಗ್ಧತೆಯನ್ನು ಕಳೆದುಕೊಂಡಿರುವ ದೇವಯ್ಯ ಕೆಲಸ ಮುಗಿಯುತೆನ್ನುವಂತೆ ಅಲ್ಲಿಂದ ಹೊರಟು ಹೋದ ನಂತರ, ಹಾಗೆ ಇನ್ನೂ ಮುಗ್ಧತೆ ಕಳೆದುಕೊಳ್ಳದ ಮುಕುಂದಯ್ಯನು ಗಡ್ಡದಯ್ಯನಿಂದ ತನ್ನ ಹಾಗೂ ತನ್ನ ಕುಟುಂಬದ ಆಜನ್ಮ ವೃತ್ತಾಂತ ಕೇಳಿ ಪ್ರಜ್ಞೆಯ ಇನ್ನೊಂದು ವಲಯವನ್ನೇ ಪ್ರವೇಶಿಸುತ್ತಾನೆ:

> ಆಗ ತಾನೆ ಉದಯವಾದಂತೆ ತೋರಿತು, ಅವನಿಗೆ ಹೊರಗಡೆಯ ಪ್ರಪಂಚ! ಅದೇ ಹೊಳೆ, ಅದೇ ಹೊಳೆಯ ದಂಡೆ, ಅದೇ ಅಶ್ವತ್ಥ ವೃಕ್ಷ, ಅದೇ ಅರಳೀಕಟ್ಟೆ, ಅದೇ ಕಲ್ಲೂರು ದೇವಸ್ಥಾನ, ಅದೇ ಮನೆಗಳು, ಆದರೆ ಮುಕುಂದಯ್ಯನಿಗೆ ಇನ್ನೆಂದಿಗೂ ಆ ಪ್ರಪಂಚ ಮೊದಲಿನ ಪ್ರಪಂಚವಾಗಿರಲು ಸಾಧ್ಯವಿರಲಿಲ್ಲ. ತನ್ನಲ್ಲಿ ಉನ್ಮೇಷಿತವಾದ ನವೋತ್ಥಾನವನ್ನು ಸಾಧಾರಣತೆಯ ಸೋಗಿನಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹುದುಗಿಕೊಂಡು ದೇವಸ್ಥಾನಕ್ಕೆ ಹೋದನು.
>
> *(ಪುಟ : ೪೩೪)*

ಜೆನ್ ಅನುಭವ ಎಂದರೆ ಇದೇ ಅಲ್ಲವೇ? ಅದಿರಲಿ, ತಕ್ಷಣವೇ ಪ್ರಜ್ಞೆಯ ಈ ಅಲೌಕಿಕ ಸ್ತರದಿಂದ ಕಥನವನ್ನು ಕುವೆಂಪು ಲೌಕಿಕ ಸ್ತರಕ್ಕೆ ಮರಳಿಸುವುದು ಈ ವಾಕ್ಯದ ಮೂಲಕ :

> *ಬ್ರಾಹ್ಮಣರ ಸಂತರ್ಪಣೆ ಮುಗಿದು ಶೂದ್ರರ ಊಟ ಆರಂಭವಾಗಿತ್ತು...*

ಈ ಧ್ವನಿಪೂರ್ಣ ಸ್ತರಾಂತರದ ಮೂಲಕ ಕುವೆಂಪು ಸಾಧಿಸುವ ಕಥನ ಕಲೆಯ ಬೆಡಗು ಕನ್ನಡಕ್ಕೇ ಹೊಸದೆನ್ನಿಸುತ್ತದೆ. ಇಂತಹ ಹಲವಾರು ಉದಾಹರಣೆಗಳನ್ನು ಈ ಕಾದಂಬರಿಯ ತುಂಬಾ ನೋಡಬಹುದು. ಹಾಗಾಗಿಯೇ ಈ ಕಾದಂಬರಿ ಲೌಕಿಕ-ಅಲೌಕಿಕವೆಂಬ ಪ್ರಜ್ಞಾ ಭೇದವನ್ನು ಅಳಿಸಿ 'ಅದೇ ಇದು, ಇದೇ ಅದು' ಎಂಬ ಅಖಂಡತೆಯ ಅನುಭಾವಿಕ ಅರಿವನ್ನು ಪರಿಮಳಿಸುವ ಕಲಾಕುಸುಮವಾಗುತ್ತದೆ. ಕಾದಂಬರಿ ಸೃಷ್ಟಿಸುವ ಈ ಅನುಭಾವಿಕತೆಯಿಂದಲೇ ಇಲ್ಲಿ ಬರುವ ಪ್ರತಿಯೊಂದು ಪಾತ್ರವೂ - ಮಹಿಳೆಯರೂ, ಮಕ್ಕಳೂ, ಆಳು ಮಕ್ಕಳೂ ಸೇರಿದಂತೆ ಯಾವುದೇ ಪ್ರಜ್ಞಾಸ್ತರದ ತಾರತಮ್ಯವಿಲ್ಲದೆ ಕಥನದ ಆವೇಗಕ್ಕೆ ಸಿಕ್ಕಿ ಆ ಆವೇಗದಲ್ಲೇ ತಮ್ಮೆಲ್ಲಾ ಜೀವಂತಿಕೆಯನ್ನು ಪ್ರಕಟಪಡಿಸುತ್ತಾ, ಲೌಕಿಕಸ್ತರದ ಎಲ್ಲ ತಾರತಮ್ಯ ನೆಲೆಗಳನ್ನೂ 'ಸುಳ್ಳು' ಮಾಡಿ ಬಿಡುತ್ತವೆ. ಈ ದೃಷ್ಟಿಯಿಂದ ಬಿ. ಕೃಷ್ಣಪ್ಪನವರ ಆಕ್ಷೇಪಣೆಗಳು ಕಾದಂಬರಿಯ ಸಾಂಸ್ಕೃತಿಕ ಸ್ವಾಯತ್ತತೆಯ ಹೊರಗಿನ ನೆಲೆಗಳಿಂದಷ್ಟೇ ಸೃಷ್ಟಿಯಾದವು ಎಂದೇ ಹೇಳಬೇಕಾಗುತ್ತದೆ.

ಅದೇನೇ ಇರಲಿ, ಆ ಅನುಭಾವಿ ಕಥನ ತನ್ನ ಲೌಕಿಕಾರ್ಥಗಳನ್ನು ಪ್ರಕಟಪಡಿಸುವ ನೆಲೆಗಳನ್ನು ಅನ್ವೇಷಿಸುತ್ತಾ ಹೋದರೆ, ಕುವೆಂಪು ತಮ್ಮ ಬಾಳು - ಬರೆಹಗಳೆರಡರಲ್ಲೂ

ಪ್ರತಿಪಾದಿಸಿದ ಶಾಂತಿ - ಕಾಂತಿಗಳಿಂದ ಕೂಡಿದ ವೈಚಾರಿಕ ಕ್ರಾಂತಿಯ ನೆಲೆಗಳಿಗೇ ಬಂದು ತಲುಪುತ್ತೇವೆ. ಈ ಕಥನ ತನ್ನ ಗತಿ ತಾರ್ಕಿಕತೆಯನ್ನು ಅತ್ಯಂತಿಕಗೊಳಿಕೊಳ್ಳುವುದು ಎರಡು ದಾರ್ಶನಿಕ ಪ್ರೇರಣೆಗಳಲ್ಲಿ; ಒಂದು ಮಂಜಭಟ್ಟರ ಪುರೋಹಿತಶಾಹಿ ಹಿಡಿತ ಸೃಷ್ಟಿಸಿದ ಜಡವ್ಯವಸ್ಥೆಯ ಎಲ್ಲ ನಿಯಮಗಳನ್ನೂ ಧಿಕ್ಕರಿಸಿದ ಮುಕುಂದಯ್ಯ ಚಿನ್ನಮ್ಮರ ಸಾಹಸ ಪ್ರೇಮ ವಿವಾಹ.* ಇದಕ್ಕೆ ದಕ್ಷಿಣೇಶ್ವರದ ಭವತಾರಿಣಿಯ ಸ್ಥಳೀಯ ರೂಪವಾದ ಹೂವಳ್ಳಿ ಹಾಡ್ಯದ ಮಾರಮ್ಮನ ಆಶೀರ್ವಾದವಿದೆ! ಇನ್ನೊಂದು ಮತಾಂತರವೆಂಬುದು ಒಂದು ಜನಸಮುದಾಯ ವನ್ನು ಲೌಕಿಕ ಪ್ರಯೋಜನ ದೃಷ್ಟಿಯಿಂದ ಮರುಳುಗೊಳಿಸುವ ನೆಲೆಯಿಂದ ಆ ಜನ ಸಮುದಾಯವನ್ನು ಸಮಾನತೆಯ ಅರಿವಿಗೆ ತೆರೆಯುವ ಆಧ್ಯಾತ್ಮಿಕ ನೆಲೆಗೆ ಒಯ್ಯುವ ಕ್ರಿಯೆಯಾಗಬೇಕೆಂಬ, ಕಾದಂಬರಿಯ ಕಥನಾತ್ಮಕತೆಯಲ್ಲೇ ಮೂಡುವ ಗ್ರಹಿಕೆಯ ಪ್ರತೀಕವಾಗಿ; ಜಾತಿಪದ್ಧತಿಯ ಎಲ್ಲ ನಿಯಮಗಳನ್ನೂ ಮೀರಿ ಸಕಲರಿಗೂ ಪ್ರವೇಶ ಸಾಧ್ಯತೆವಿರುವ ಸಾರ್ವಜನಿಕ ಶಾಲೆಯೊಂದರ ಸ್ಥಾಪನೆ. ಇದರ ಹಿಂದೆ ಅಮೆರಿಕಾದಲ್ಲಿನ ಸಹಸ್ರ ದ್ವೀಪೋದ್ಯಾನದ ಕುಟೀರವೊಂದರಲ್ಲಿ ಸ್ವಾಮಿ ವಿವೇಕಾನಂದರು ಕಾಣುವ ಕಾಣ್ಕೆಯ ಬಲವೂ ಇದೆ! ಅಷ್ಟೇ ಅಲ್ಲ ಈ ಎರಡೂ ಪ್ರೇರಣೆಗಳ ಹಿಂದೆ ಮುಕುಂದಯ್ಯ-ದೇವಯ್ಯರ ವೈಯಕ್ತಿಕ ಬದುಕಿನ ಅತಂತ್ರಗಳಿಂದ ಹುಟ್ಟಿದ - ಅಲೌಕಿಕ ಒತ್ತಡಗಳೂ ಇವೆ. ಇನ್ನೂ ಮುಖ್ಯವಾಗಿ ಐತ - ಪೀಂಚಲು, ಗುತ್ತಿ - ತಿಮ್ಮ, ಯೆಂಕಿ, ತಿಮ್ಮಪ್ಪ ಹೆಗ್ಗಡೆ, ಅನಂತರ ಐಗಳು ಮುಂತಾದವರ ಸಾಮೂಹಿಕ ಕ್ರಿಯಾಶೀಲತೆಯ ಮೂಲಕ ಅಸ್ಪಷ್ಟವಾಗಿ ಪ್ರಕಟವಾಗುವ ಪ್ರಜ್ಞಾ ವಿಕಾಸದ ಒತ್ತಡವೂ ಇದೆ. ಎಲ್ಲಕ್ಕಿಂತ ಹೆಚ್ಚಾಗಿ

> ... ಆಗ ತತ್ಕಾಲದಲ್ಲಿ ಅತಿ ಅಮುಖ್ಯವೆಂಬಂತೆ ತೋರುತ್ತಿದ್ದರೂ, ಮೇಗರವಳ್ಳಿಯ ಮತ್ತು ಮಲೆನಾಡಿನ ಮತ್ತು ಕನ್ನಡ ನಾಡಿನ ಮತ್ತು ಭರತಭೂಮಿಯ ಭಾವೀ ಪ್ರಗತಿಯ ಮತ್ತು ಜಾಗೃತಿಯ ದೃಷ್ಟಿಯಿಂದ ನಿಜವಾಗಿಯೂ ಬಹುಮುಖ್ಯವಾದದ್ದೆಂದು ಮುಂದೆ ಗೊತ್ತಾಗುವಂತಹ ಮತ್ತೊಂದು ದೈವಿಕ ಉದ್ದೇಶದ ಕಾರಣವೂ ಒಂದು ಇತ್ತು, ಅಗೋಚರ ವಾಗಿ, ಅಂತರ್ಗತವಾಗಿ, ಗೂಢವಾಗಿ; ಹಳೆಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ, ಕಲ್ಲೂರು, ಸಿಂಬಾವಿ ಮೊದಲಾದ ಸುತ್ತಮುತ್ತಲ ಹಳ್ಳಿಗಳಲ್ಲಿದ್ದು, ಓದು ಬರಹ ಕಲಿಯಲು ಇಷ್ಟ ಪಡುವ ಹುಡುಗರೆಲ್ಲ ಅಂತಕ್ಕನ ಮನೆ ಯಲ್ಲಿದ್ದುಕೊಂಡು ಮಿಶನ್ ಇಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುವುದೆಂದು ನಿರ್ಣಯವಾಗಿತ್ತು. ಅದುವರೆಗೂ 'ಓಟ್ಲು ಮನೆ'ಯಾಗಿದ್ದ ಅಂತಕ್ಕನ ಮನೆ 'ವಿದ್ಯಾರ್ಥಿ ನಿಲಯ'ವಾಗಿ ಪರಿವರ್ತನಗೊಳ್ಳುವುದನ್ನೆ ಇದಿರು ನೋಡುತ್ತಿತ್ತು.

---

* ಇದರ ಹಿನ್ನೆಲೆಯಲ್ಲಿ ಗುತ್ತಿ - ತಿಮ್ಮಿಯರ ಪ್ರೇಮ ಸಾಹಸ ಫಲವಾದ ದೇಶಾಂತರವೂ ಇದೆ ಎಂಬುದನ್ನು ಗಮನಿಸಬೇಕು!

> ಕೆಲವೇ ತಿಂಗಳ ಹಿಂದೆ ಮಗಳನ್ನು ದುರಂತವಾಗಿ ಕಳೆದುಕೊಂಡಿದ್ದು ಮುದುಕಿಯಾಗುತ್ತಿದ್ದ ಅಂತಕ್ಕನ ಬದುಕಿಗೂ, ಮಕ್ಕಳ ಸಹವಾಸ ಮತ್ತು ಸೇವೆಯ ಅಕ್ಕರೆಯ ಆಪು ಸಿಕ್ಕಿ, ಪುನಶ್ಚೇತನಗೊಳ್ಳುವ ಸುಯೋಗ ಸಮೀಪಿಸಿತ್ತು...
>
> *(ಪುಟ : ೬೭೪)*

ಈ ದೈವಿಕ ಉದ್ದೇಶ ಈಡೇರಲು ಲೋಕನಿಮಿತ್ತರಾಗಿ ಕಥೆಯ ಹಿನ್ನೆಲೆಯಲ್ಲಿ ಕಂಡೂ ಕಾಣದಂತೆ ಇರುವವರು ಅನಂತ ಐಗಳು. ಈ ಪಾತ್ರದ ಮೂಲಕ ಕುವೆಂಪು ಬ್ರಾಹ್ಮಣ ಪುರೋಹಿತಶಾಹಿಗೆ ರಚನಾತ್ಮಕ ಪರ್ಯಾಯವೊಂದನ್ನು ಸೂಚಿಸುತ್ತಿರಬಹುದೇ?

ಅದೇನೇ ಇರಲಿ, ಪ್ರೇಮ ಮತ್ತು ವಿದ್ಯೆ ಮಾತ್ರ ಜಡಗಳನ್ನು ಚೇತನಗೊಳಿಸಿ ಅಸ್ಮೃತಿಯಲ್ಲಿ ಅಡಗಿಹೋಗಿರುವ ದಿವ್ಯಾನುಭವ ಸೂಕ್ಷ್ಮಗಳನ್ನು ಜಾಗೃತಗೊಳಿಸುವ ಮೂಲಕ ವ್ಯವಸ್ಥೆಯಲ್ಲಿನ ಹಿಂಸೆಯಿಂದ ಬಿಡುಗಡೆಗೊಳಿಸಬಲ್ಲ ನಿಮಿತ್ತ ಶಕ್ತಿಗಳನ್ನು ಸೃಷ್ಟಿಸಬಲ್ಲವು ಎಂಬ ಮಹಾ ಆಶಯವೇ ಈ ಕೃತಿಯ ವಿನ್ಯಾಸವನ್ನು ನಿರ್ಧರಿಸಿರುವುದು. ಕಾದಂಬರಿಯನ್ನು ಈ ನೆಲೆಯಲ್ಲಿ ಗ್ರಹಿಸಿದಾಗ ಮಾತ್ರ ಇಲ್ಲಿ ಬರುವ 'ಲೋಕಾತೀತ' ಎನ್ನಿಸುವ ಅನೇಕ ಅನುಭವಗಳು, ಪಾತ್ರಗಳು, ಘಟನೆಗಳು ಹಾಗೂ ಚಾರಿತ್ರಿಕ ವಿವರಗಳು ಕಥನದ ಅವಿಭಾಜ್ಯ ಅಂಗಗಳಾಗಿ ಕಾಣಬಲ್ಲವು. ಅಲ್ಲದೆ 'ಮತಾಂತರ'ವು ಇಲ್ಲಿ ವಿವೇಕಾನಂದ ಸಂದರ್ಭದ ಧಾರ್ಮಿಕ ಪರಿಪ್ರೇಕ್ಷ್ಯವನ್ನೂ ಮೀರಿ, ಕೇವಲ ಮತೀಯ ಪ್ರಶ್ನೆಯಾಗಿ ಉಳಿಯದೆ ಸಮಾಜವೊಂದರ ಸೃಷ್ಟಿಶೀಲತೆಯನ್ನು ಕೆರಳಿಸುವ ಒಂದು ಸಂಕೀರ್ಣ ಸಾಂಸ್ಕೃತಿಕ ಪ್ರಶ್ನೆಯಾಗಿ ಮೈದಾಳುವ ಬೆರಗು ಸೃಷ್ಟಿಯಾಗುವುದೂ ಈ ನೆಲೆಯಲ್ಲಿಯೇ ಮತ್ತು ವಸಾಹೋತ್ತರ ಸಂಕಥನದ ಕೇಂದ್ರ ವಸ್ತುವಾದ 'ವಿಸ್ಮೃತಿ'ಯ ಪ್ರಶ್ನೆಯ *(ಸಾಹಿತ್ಯ ಕಥನ: ಡಿ. ಆರ್. ನಾಗರಾಜ, ೧೯೯೬)* ಅನೇಕ ಆಯಾಮ ಗಳು ಹೊರಹೊಮ್ಮುವುದೂ ಇಂತಹ ವಿಶಿಷ್ಟ ಕಥನದ ಸೃಷ್ಟಿಶೀಲತೆಯಲ್ಲಿಯೇ ಎಂಬುದನ್ನೂ ನಾವು ಗಮನಿಸಬೇಕು. ಈ ದೃಷ್ಟಿಯಿಂದ ಈ ಕಾದಂಬರಿ ಕನ್ನಡದ ಮಟ್ಟಿಗಾದರೂ ವಸಾಹತೋತ್ತರ ಚಿಂತನೆಯ ಒಂದು ಬಹು ಮುಖ್ಯ ಪಠ್ಯ ಕೂಡಾ ಆಗಬಲ್ಲದು.

೫

ಕುವೆಂಪು ಅವರ ಈ ಎರಡೂ ಕಾದಂಬರಿಗಳು ಒಂದೇ ಮಹಾ ಆಶಯದ ಎರಡು ಕಾಲಾವತರಣಗಳು. ಲೋಕ ಹಿಂಸೆಯಿಂದ ಬಿಡುಗಡೆಗೊಳ್ಳಲು ಮಾನವ ಸಮಾಜ ನಿರಂತರವಾಗಿ ನಡೆಸುತ್ತಿರುವ ಅನ್ವೇಷಣೆಯ ಮಹಾಕಥನಗಳಂತಿರುವ ಈ ಎರಡೂ ಕಾದಂಬರಿಗಳು ಹಾಗಾಗಿಯೇ, ಮುಕ್ತಾಯಗೊಳ್ಳುವುದೂ ಈ ಅನ್ವೇಷಣೆಯ ಒಂದು ಸಾಮಾನ್ಯ ನೆಲೆಯಲ್ಲಿಯೇ. ಈ ಸಾಮಾನ್ಯ ನೆಲೆ 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಆ ಕಾದಂಬರಿಯ ಅನ್ವೇಷಣಾ ಪ್ರವೃತ್ತಿಗನುಸಾರವಾಗಿ ಅನಾವರಣಗೊಳ್ಳುವುದು ಮುಕ್ತಾಯದ ಈ ಸಾಲುಗಳಲ್ಲಿ : ''ಚಿನ್ನಮ್ಮ ಪೀಂಚಲು ಇಬ್ಬರೂ ಮಾತು ನಿಲ್ಲಿಸಿ ನಿದ್ದೆ ಮಾಡುವವರಂತೆ ನಟಿಸುತ್ತಾ, ಗಡದ್ದಾಗಿ

ಹೊದ್ದುಕೊಂಡು ಬೆಚ್ಚಗೆ ಮಲಗಿದ್ದರು: ಮುಟ್ಟಾದ ಮೂರು ದಿನವಾದರೂ ಮಲೆನಾಡಿನ ಮಹಿಳೆಯರಿಗೆ ನಿವೃತ್ತಿ ಜೀವನದ ವಿರಾಮದ ಹಕ್ಕು ಇರುತ್ತಿತ್ತಷ್ಟೆ!''. 'ಕಾನೂರು ಹೆಗ್ಗಡತಿ'ಯಲ್ಲಿ ಈ ಸಾಮಾನ್ಯ ನೆಲೆ ಮೂಡುವುದು ಮುಕ್ತಾಯ ದೃಶ್ಯದ ಈ ಆರಂಭಿಕ ಸಾಲುಗಳಲ್ಲಿ : ''ಸೇರೆಗಾರ ಸೋಮಯ್ಯ ಸೆಟ್ಟರ ಆಳುಗಳೂ, ಬೇಲರೂ, ಸುತ್ತಮುತ್ತಲ ಹಳ್ಳಿಗಳ ಅನುಕೂಲಸ್ಥರೂ, ವಾಸುವಿನ ಸಹಪಾಠಿಗಳಾಗಿದ್ದ ಅಗ್ರಹಾರದ ವೆಂಕಟಪ್ಪಯ್ಯನವರ ಇಬ್ಬರು ಮಕ್ಕಳೂ, ಇನ್ನೂ ಅನೇಕರು ಬುದ್ಧಜಯಂತಿಯ ಉತ್ಸವಕ್ಕಾಗಿ ಹಸುರು ಹೂ ತಳಿರು ತೋರಣಗಳಿಂದಲೂ ವಿವಿಧ ಪರಿಮಳಗಳಿಂದಲೂ ತಪೋವನದಂತೆ ಶೋಭಿಸುತ್ತಿದ್ದ ಮಂದಿರಲ್ಲಿ ಕಿಕ್ಕಿರಿದಿದ್ದರು...''

ಈ ಎರಡೂ ಕಡೆ ಹರಡಿರುವುದು ಸಮಾಜದ ಎರಡೂ ತುದಿಗಳ ಆನಂದ; 'ಶ್ರೀ ಸಾಮಾನ್ಯತೆ'ಯ ಸಂಭ್ರಮ. ಜನರು ಒಗ್ಗೂಡಿ ಪಡೆಯುವ ಬಿಡುಗಡೆಯ ಆನಂದ; ಸಂಭ್ರಮ. ಈ ಆನಂದ - ಸಂಭ್ರಮಗಳ ಸೆಲೆ, ಪ್ರಕೃತಿ - ಸಂಸ್ಕೃತಿಗಳೆರಡರಲ್ಲೂ ಇದೆ ಎಂಬುದನ್ನೂ ನಾವು ಗಮನಿಸಬೇಕು.

ಇದೇ ಈ ಎರಡು ಕಾದಂಬರಿಗಳಲ್ಲಿನ ಬೀಜತತ್ವ; ದರ್ಶನ.

(ಈ ಲೇಖನದಲ್ಲಿ ಕೊಟ್ಟಿರುವ ಉಲ್ಲೇಖಗಳ ಪುಟ ಸಂಖ್ಯೆ 'ಕಾನೂರು ಹೆಗ್ಗಡಿತಿ'ಯ ಎರಡನೇ ಮುದ್ರಣ ಹಾಗೂ 'ಮಲೆಗಳಲ್ಲಿ ಮದುಮಗಳು'ವಿನ ೧೯೭೭ರ ಆವೃತ್ತಿಗಳಿಗೆ ಸಂಬಂಧಪಟ್ಟವಾಗಿದೆ.)

❑

(ಇದೇ ಲೇಖಕ ಸಂಪಾದಿಸಿರುವ 'ಕುವೆಂಪು: ಒಂದು ಪುನರನ್ವೇಷಣೆ ಕೃತಿಯಲ್ಲಿ ಈ ಲೇಖನ ಪ್ರಕಟವಾಗಿದೆ.)

ಗುತ್ತಿ - ಹೂವಯ್ಯ : ವಿಭಿನ್ನ ದೃಷ್ಟಿಕೋನಗಳು

ಕುವೆಂಪು ಅವರ ಕಾದಂಬರಿಗಳ ಎರಡು ಮುಖ್ಯ ಪಾತ್ರಗಳಾದ ನಾಯಿಗುತ್ತಿ ಹಾಗೂ ಹೂವಯ್ಯ ಪ್ರತಿನಿಧಿಸುವರೆಂದು ಸಾಮಾನ್ಯ ಪ್ರತೀತಿ ಇರುವ ವಿಭಿನ್ನ ದೃಷ್ಟಿಕೋನಗಳನ್ನು ಚರ್ಚಿಸುವ ಮೊದಲು, ಕುವೆಂಪು ಕಾದಂಬರಿಗಳಲ್ಲಿ ಬರುವ ಪಾತ್ರಗಳನ್ನು ಪ್ರವೇಶ ಮಾಡುವ ರೀತಿನೀತಿಗಳ ಬಗ್ಗೆ ಸ್ವಲ್ಪ ವಿಸ್ತಾರವಾಗಿ ಮಾತಾಡಬಯಸುವೆ. ಈಗಾಗಲೇ ಈ ಪಾತ್ರಗಳ ಬಗ್ಗೆ ಸಾಕಷ್ಟು ವಿಮರ್ಶೆ ಬಂದಿರುವುದರಿಂದ ನನ್ನ ವಿಮರ್ಶೆಯ ಹಾದಿಯನ್ನು ಹೇಳಿಬಿಡುವುದು ಉತ್ತಮವೆಂದು ತಿಳಿದಿದ್ದೇನೆ.

೧

ಕುವೆಂಪು ಅವರ ಎರಡು ಕಾದಂಬರಿಗಳನ್ನೂ ಕನ್ನಡದ ಎರಡು ಮಹತ್ವದ ಕಾದಂಬರಿಗಳೆಂದು ವಿಮರ್ಶಕರು ವರ್ಣಿಸಿರುವರಾದರೂ, ಈ ಕಾದಂಬರಿಗಳ ಪೂರ್ಣ ಪ್ರಮಾಣದ ವಿಮರ್ಶೆ ಈವರೆಗೆ ಬಂದಂತೆ ತೋರುವುದಿಲ್ಲ. ಇದೊಂದು ದೊಡ್ಡ ಆಶ್ಚರ್ಯವೇ. ತಮ್ಮ 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ'ದಲ್ಲಿ ಕುರ್ತುಕೋಟಿಯವರು 'ಕಾನೂರು ಹೆಗ್ಗಡಿತಿ' ಕುರಿತು ಬರೆದಿರುವ ವಿವರಣಾತ್ಮಕ ವಿಮರ್ಶೆಯನ್ನು ಬಿಟ್ಟರೆ ಅತಿ ಇತ್ತೀಚೆಗೆ ರಾಜೇಂದ್ರ ಚೆನ್ನಿ ಎಂಬ ನನ್ನ ವಾರಿಗೆಯ ಸಮರ್ಥ ವಿಮರ್ಶಕರೊಬ್ಬರು 'ಸಮಷ್ಟಿಯ ಸುಪ್ತಪ್ರಜ್ಞೆ' (collective unconscious) ಎಂಬ ಪರಿಕಲ್ಪನೆಯ ಮೂಲಕ ಕುವೆಂಪು ಅವರ ಕಾದಂಬರಿಗಳ ಒಟ್ಟು ಸ್ವರೂಪವನ್ನು ವಿವರಿಸುವ ಪ್ರಯತ್ನ ಮಾಡಿದ್ದಾರಾದರೂ, ಅವುಗಳ ಅಂತಿಮ ಆಶಯಗಳನ್ನು ಗುರುತಿಸುವ ದಾರಿ ತೋರುವುದಿಲ್ಲ.[೧]

ಕುವೆಂಪು ಅವರ ಕಾದಂಬರಿಗಳ ಪೂರ್ಣ ಪ್ರಮಾಣದ, ಸ್ವಯಂಪೂರ್ಣವಾದ, ಯಃಕಶ್ಚಿತ್ ಅನ್ನಿಸದ ವಿಮರ್ಶೆ ಬರದೇ ಇರುವುದಕ್ಕೆ ಕಾರಣವಿದೆ. ಅಡವಿಯೊಳಗಿನ ಬದುಕಿನ ಕಥೆ ಹೇಳುವ ಈ ಕಾದಂಬರಿಗಳೇ ಸ್ವತಃ ದಟ್ಟಡವಿಗಳಂತಿವೆ. ಕನ್ನಡ ಸಾಹಿತ್ಯ ವಿಮರ್ಶೆ ಎಂದೂ ಎದುರಿಸದಷ್ಟು ಅಸಂಖ್ಯಾತ ಪಾತ್ರಗಳು, ಜಾತಿ - ವರ್ಗ ಸ್ಥಿತಿಗಳು, ಕ್ರಿಮಿ, ಕೀಟಾದಿ ಮೃಗಪಕ್ಷಿ, ಕಾಡು, ಬೆಟ್ಟ, ಹೊಳೆ, ಮಳೆ, ಗಾಳಿಗಳ ಮಧ್ಯೆ ಬುದ್ಧಿಗಷ್ಟೇ ಗಮ್ಯವಾಗದ ಅನುಭವ

ಪ್ರಪಂಚಗಳು, ಅವುಗಳ ಪರಸ್ಪರ ಸಂಕೀರ್ಣ ಸಂಬಂಧಗಳು, ನೇರವಾಗಿ ನಡೆಯದೆ ಸುರುಳಿ ಸುತ್ತಿದಂತೆ ಪ್ರವರ್ತಿಸುವ ಕಾಲ - ಇವೆಲ್ಲವೂ ಸಿದ್ಧ ತರ್ಕ ಪ್ರಪಂಚದ ಉತ್ಪನ್ನವಾದ ಮಾನದಂಡಗಳಿಂದ ಸಜ್ಜಾದ ವಿಮರ್ಶೆಯನ್ನು ಅಧೀರ ಮಾಡುತ್ತವೆ. ಕಾದಂಬರಿ ಎಂದರೆ ದೊಡ್ಡ ಕಥೆಯೆಂದೋ, ಒಂದು ದೃಷ್ಟಿಕೋನವೆಂದೋ, ಬಂಡವಾಳಶಾಹಿ ಯುಗದ ಮಹಾಕಾವ್ಯವೆಂದೋ - ಅದರರ್ಥ ಏನೇ ಇರಲಿ - ತೀರ್ಮಾನಿಸಿ ಹೊರಟವರು ಈ ದಟ್ಟಡವಿಗಳಲ್ಲಿ ಕಳೆದು ಹೋಗುವ ಸಂಭವ ಉಂಟು. ಈವರೆಗಿನ ನಮ್ಮ ವಿಮರ್ಶೆಯ ಪಾಡೂ ಇದೇ ಆಗಿದೆ. ಕನ್ನಡ ವಿಮರ್ಶೆ ಕುವೆಂಪು ಕಾದಂಬರಿಗಳ ಎದುರಿನಲ್ಲಿ ಸ್ವಲ್ಪ ಸಾವಧಾನದಿಂದ ನಡೆದುಕೊಂಡಿದ್ದರೆ ಅದು ಹೊಸ ಪರಿಕರಗಳನ್ನೂ, ಸೂಕ್ಷ್ಮಗಳನ್ನೂ, ಆಯಾಮಗಳನ್ನೂ ಪಡೆದುಕೊಳ್ಳಬಹುದಿತ್ತು. ವಿಮರ್ಶೆಯೂ ಸೃಷ್ಟಿಶೀಲವಾಗುವ ಬೆರಗನ್ನು ನೋಡಬಹುದಿತ್ತು. ಆಗ ಇದೇ ಪರಂಪರೆಯ ಈ ದಶಕದ ಅಭಿವ್ಯಕ್ತಿಗಳಂತಿರುವ 'ಚಿದಂಬರ ರಹಸ್ಯ' ಹಾಗೂ 'ಕುಸುಮಬಾಲೆ'ಯಂತಹ ಕಾದಂಬರಿಗಳನ್ನು ಇನ್ನಷ್ಟು ಸಮರ್ಥವಾಗಿ ಅರಿತುಕೊಳ್ಳುವ ಸುಯೋಗವಿರುತ್ತಿತ್ತು.

ಕುವೆಂಪು ಅವರು ಸಮಸ್ತ ಸಾಹಿತ್ಯದಲ್ಲಿ ಪ್ರತಿಪಾದಿಸುತ್ತಾ ಬಂದಿರುವ ಪೂರ್ಣ ದೃಷ್ಟಿ ಹಾಗೂ ಅನಿಕೇತನ ಪರಿಕಲ್ಪನೆಗಳನ್ನು ನವೋದಯದ ಉದಾರವಾದೀ ಮಾನದಂಡಗಳು ಆರಾಧನೆಯ ಸುಲಭದಾರಿಯ ಮೂಲಕ ಗ್ರಹಿಸುವ ಆತುರ ತೋರಿದ್ದರೆ, ನವ್ಯದ ವ್ಯಕ್ತಿ ವಿಶಿಷ್ಟವಾದೀ ಮಾನದಂಡಗಳು ಅಸ್ತಿತ್ವವಾದೀ ತರ್ಕದ ಮೂಲಕ ಗ್ರಹಿಸುವ ಹಠ ತೋರಿ ಸೋತಿವೆ.

ಆದಿ - ಅಂತ್ಯಗಳ, ಮುಖ್ಯ - ಅಮುಖ್ಯಗಳ, ಅರ್ಥ - ವ್ಯರ್ಥಗಳ ಭೇದವಿಲ್ಲದ, ನೀರೆಲ್ಲವೂ ತೀರ್ಥವೆನಿಸುವ ಧ್ಯಾನದ ಸ್ಥಿತಿಯಲ್ಲಿನ ಕಾಣ್ಕೆಗಳಂತೆ ಮೂಡಿ ಬಂದಿರುವ ಈ ಕಾದಂಬರಿಗಳ ಮೈ ಮಧ್ಯೆ ಬೆನ್ನು ಹುರಿಗಳಂತೆ ಹರಿದು ಹೋಗಿರುವ ಅತೀಂದ್ರಿಯ ಅನುಭವಗಳ ಬೇರುಗಳು ಈ ಕಾದಂಬರಿಗಳ ಮೈ ರಚನೆಯಲ್ಲಿಯೇ ಇರುವುದನ್ನು ನಾವು ಗುರುತಿಸಬೇಕು. ಕುವೆಂಪು ಅವರ ಕಾದಂಬರಿಗಳನ್ನು - ಅವರ ಬಹುಪಾಲು ಸಾಹಿತ್ಯದಂತೆಯೇ - ಕಟ್ಟಿರುವುದು ಧ್ಯಾನದಲ್ಲಿ ದಕ್ಕಿರುವ ಸೃಷ್ಟಿಶೀಲತೆ ಎಂಬುದನ್ನು ಅರಿಯದೆ, ಈ ಕಾದಂಬರಿಗಳ ಮೈಮೇಲೆ ವಾಸ್ತವವಾದೀ ಕಾದಂಬರಿ ಪರಂಪರೆಯ ಮಾನದಂಡಗಳನ್ನು ಪ್ರಯೋಗಿಸಿ ಅರ್ಥ - ಬಂಧಗಳನ್ನು ಹುಡುಕಲೆಣಿಸುವ ವಿಮರ್ಶೆಗೆ ದಕ್ಕುವುದು, ದಿಕ್ಕಿಲ್ಲದಂತೆ ತೋರುವ ಅವುಗಳ ಜಡ ವಿವರಗಳು ಮಾತ್ರ. ನಮ್ಮ ಬಹುಪಾಲು ವಿಮರ್ಶೆ ಈ ವಿವರಗಳನ್ನೇ ಪರಿಶೀಲಿಸುತ್ತಾ ಅರ್ಥ, ಆಶಯಗಳನ್ನು ತಡಕಾಡಿ ಸೋತಿದೆ.

ಆದರೆ ಈ ಕಾದಂಬರಿಗಳನ್ನು, ಕಲಾವಿದನೊಬ್ಬನನ್ನು ಒಡಲಲ್ಲಿಟ್ಟುಕೊಂಡಿರುವ ಸಾಧಕನೊಬ್ಬನ ಸಾಕ್ಷೀಭೂತ ಪ್ರಜ್ಞೆಯಲ್ಲಿ ಮೈ ತಳೆದ ಕೃತಿಗಳೆಂದು ನೋಡಿದಾಗ ಈ ಕಾದಂಬರಿಗಳು ಮುಟ್ಟಿರುವ ಎತ್ತರಗಳ ಅರಿವಾದೀತು. ಕುವೆಂಪು ಅವರ ಮಾತುಗಳಲ್ಲೇ ಹೇಳುವುದಾದರೆ 'ಅವುಗಳಲ್ಲಿರುವುದು Cosmic vision brooding on local things'[೨]

ಸಾಕ್ಷೀಭೂತ ಪ್ರಜ್ಞೆಯ ನಿರಪೇಕ್ಷ ನೆಲೆಯಲ್ಲಿ ನಿಂತು ಬರೆಯಲೆಣಿಸುವ ಕುವೆಂಪು,

ಕಾಲದ ಒಂದು ಸಣ್ಣ ಚಲನೆಯಲ್ಲೇ ಅಳತೆ ಕಳೆದುಕೊಳ್ಳುವ ಮಾನದಂಡಗಳಿಗೆ ಸಿಗಲಾರದೆಂದೇ ನನ್ನ ಭಾವನೆ. ಕುವೆಂಪು ಅವರ ಈ ಸಾಕ್ಷೀಭೂತ ಪ್ರಜ್ಞೆ ಎಲ್ಲೆಲ್ಲಿ ವಿಚಲಿತಗೊಂಡಿದೆಯೋ ಅಲ್ಲಲ್ಲಿ ಕುವೆಂಪು ಅವರ ಕಲೆ ತನ್ನ ಸಮತೋಲನವನ್ನು ಕಳೆದುಕೊಂಡಿದೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಕೊನೆ ಕೊನೆಗೆ ಹೀಗಾಗಿದೆ. ಅದು ಅರಿವಿಗೆ ಬಂದೋ ಏನೋ ಕುವೆಂಪು 'ಮಲೆಗಳಲ್ಲಿ ಮದುಮಗಳು' ಎಂಬ ತಪಸ್ಸಿಗೆ ಕೂತರು ಎಂದೆನಿಸುತ್ತದೆ. ಅವರು ತಪಸ್ಸಿಗೆ ಕೂತಿರುವುದಾದರೂ ಎಲ್ಲಿ? ಈ ಕಾದಂಬರಿಯ ಎಲ್ಲ ಚಲನೆಯನ್ನೂ, ನಾಟಕವನ್ನೂ ತನ್ನೆಡೆಗೆ ಸೆಳೆಯುವ; ದುರ್ಗಮವೂ, ರುದ್ರ ಪ್ರಶಾಂತವೂ, 'ನಂದಾಬೆಂಕಿ'ಯ ಆವಾಸಸ್ಥಾನವೂ ಆದ ಹುಲಿಕಲ್ಲು ನೆತ್ತಿಯಲ್ಲಿ. 'ಕಾನೂರು ಹೆಗ್ಗಡಿತಿ'ಯಲ್ಲಿ ಈ ಶಕ್ತಿಬಿಂದು ಇರುವುದು ಚಂದ್ರಯ್ಯ ಗೌಡರ ಅಡುಗೆ ಮನೆಯ ಕಡೆಗೋಲು ಕಂಬದಲ್ಲಿ. ನನ್ನ ಈ ಮಾತುಗಳು ನಿಚ್ಚಳವಾಗಿ ಅರ್ಥವಾಗಲೆಂದು 'ಕಾನೂರು ಹೆಗ್ಗಡಿತಿ'ಯ 'ಕಡೆಗೋಲು ಕಂಬದ ಸಾಕ್ಷಿಯಲ್ಲಿ' ಎಂಬ ಅಧ್ಯಾಯದ ಒಂದು ಪ್ಯಾರಾವನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ :

> ''... ಯಾರಾದರೂ ಪ್ರಾಕ್ತನ ವಿಮರ್ಶನ ವಿಚಕ್ಷಣರು ಆ ಅಡುಗೆ ಮನೆಯನ್ನು ಪ್ರವೇಶಿಸಿದ್ದರೆ ಪುರಾಣ ಪ್ರಸಿದ್ಧವಾದ ಗವಿಯನ್ನೋ ಅಥವಾ ಪಾಳು ಬಿದ್ದ ದೇವಾಲಯವನ್ನೋ ಮನಸ್ಸಿಗೆ ತರುತ್ತಿತ್ತು. ಅದರ ವಾತಾವರಣ ಅಷ್ಟೊಂದು ಪೂರ್ವಿಕತೆಯಿಂದ ತುಂಬಿಕೊಂಡಿತ್ತು!
>
> ಅಲ್ಲಿ ಅನೇಕ ತಲೆಮಾರುಗಳು ತಿಂದುಂಡು ಹೋಗಿದ್ದುವು. ಆ ಮೂರಡಿಯ ಎತ್ತರದ ಕಡೆಗೋಲು ಕಂಬವು ಶತಮಾನಗಳಿಗೆ ಸಾಕ್ಷಿಯಾಗಿ ನಿಂತಿತ್ತು. ಎಷ್ಟು ಜನ ಹೆಣ್ಣುಗಳು ಅದರ ಮುಂದೆ ಕುಳಿತು ಪ್ರಾತಃಕಾಲದಲ್ಲಿ ಮೊಸರು ಕಡೆದಿದ್ದಾರೆ! ಅದಕ್ಕೆ ಎಷ್ಟು ಕೋಮಲ ಕರಗಳ ಸ್ಪರ್ಶವಾಗಿದೆ! ಎಷ್ಟು ಕಂಠಗಳು, ಎಷ್ಟು ರೂಪಗಳು, ಎಷ್ಟು ವಿಧವಾದ ಸಂಭಾಷಣೆಗಳು, ಎಷ್ಟು ಕ್ಷುದ್ರ ಕಲಹಗಳು ಅದಕ್ಕೆ ತಿಳಿದಿವೆ! ವಾಸುವಿನ ತಾಯಿ, ಚಂದ್ರಯ್ಯ ಗೌಡರ ತಾಯಿ, ಅವರ ಅಜ್ಜನ ತಾಯಿ, ಅವರ ಅಜ್ಜನಜ್ಜನ ತಾಯಿ - ಎಲ್ಲರೂ ಪರಿಚಿತರು ಆ ಕಡೆಗೋಲು ಕಂಬಕ್ಕೆ. ಎಲ್ಲಿಯಾದರೂ ಮಾತಾಡುವ ಶಕ್ತಿ ಬಂದರೆ ಎಷ್ಟು ಗುಟ್ಟುಗಳು ರಟ್ಟಾಗಿ ಹೋಗುತ್ತವೆ! ಎಷ್ಟು ಸ್ನೇಹ ಪ್ರೇಮಗಳು ನುಚ್ಚು ನೂರಾಗಿ ಮಣ್ಣುಗೂಡುತ್ತವೆ! ಎಷ್ಟು ದ್ವೇಷ ಮಾತ್ಸರ್ಯಗಳು ಹಾಳಾಗಿ, ಮತ್ತೆ ಸ್ನೇಹ ಶಾಂತಿಗಳು ಮೂಡುತ್ತವೆ! ಅದಕ್ಕೆಲ್ಲಿಯಾದರೂ ಬಾಯಿ ಬಂದರೆ ದೇವರೇ ಗತಿ! ರಾಮಾಯಣ ಮಹಾಭಾರತಗಳಿಗಿಂತಲೂ ದೊಡ್ಡ ಪುರಾಣವಾಗಿ ಹೋಗುತ್ತದೆ! ''ಅಯ್ಯೋ ನಾವು ರಾಮ, ಸೀತೆ, ಹನುಮಂತ, ರಾವಣ, ಪಂಚಪಾಂಡವರು, ಕೃಷ್ಣ, ಕೌರವ, ದ್ರೌಪದಿ - ಇವರುಗಳ ಕಥೆಯೇ ಹೆಚ್ಚೆಂದು ತಿಳಿದಿದ್ದೆವಲ್ಲಾ!'' ಎಂದು ವಾಲ್ಮೀಕಿ,

ವ್ಯಾಸಾದಿ ಕವಿವರ್ಯರೂ ನಾಚಿ ತಲೆಬಾಗಬೇಕಾಗುತ್ತದೆ. ಸದ್ಯಕ್ಕೆ ಅದಕ್ಕೆ ಬಾಯಿಲ್ಲ; ಅಥವಾ ಇದ್ದರೂ ಇಲ್ಲದವರಂತೆ ನಟಿಸುತ್ತಿದೆ. ಆದ್ದರಿಂದ ಅವರೆಲ್ಲರೂ ಬದುಕಿಕೊಂಡಿದ್ದಾರೆ!''[೩]

ಜಡಚೇತನಗಳು ಮೆಲ್ಲಗೆ ಕಣ್ದೆರೆಯುವ ಒಂದು ಬದುಕಿನ ಅಂಗಳವನ್ನು ಚಿತ್ರಿಸುವ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ, ಜಡವಾಗಿ ಕೂತಂತೆ ಕಾಣುತ್ತಿದ್ದರೂ ತನ್ನೊಳಗೆ ಚೇತನಗಳನ್ನು ಜಾಗೃತಗೊಳಿಸುವ ಸ್ಪಂದನವನ್ನು ಇಟ್ಟುಕೊಂಡಂತಿರುವ ಹುಲಿಕಲ್ಲು ನೆತ್ತಿ, ಸಾಕ್ಷೀಭೂತ ಪ್ರಜ್ಞೆಯ ಕೇಂದ್ರವಾಗಿರುವುದೂ; ಮೆಲ್ಲಗೆ ಕಣ್ದೆರೆದಿರುವ ಚೇತನಗಳು ಪೂರ್ಣ ಬೆಳಕನ್ನು ತಮ್ಮ ಕಣ್ಣುಗಳೊಳಕ್ಕೆ ತುಂಬಿಕೊಳ್ಳಲು ಹವಣಿಸುವ ಬದುಕನ್ನು ಚಿತ್ರಿಸುವ, 'ಕಾನೂರು ಹೆಗ್ಗಡಿತಿ' ಕಾದಂಬರಿಗೆ ಬೆಣ್ಣೆ ಕಡೆಯುವ ಚಲನಶೀಲ ಕಡೆಗೋಲು ಸಾಕ್ಷೀಭೂತ ಪ್ರಜ್ಞೆಯ ಪ್ರತೀಕವಾಗಿರುವುದೂ, ವಿಮರ್ಶೆಯ ನೆಲೆಯನ್ನು ಪುನರ್ರೂಪಿಸಿಕೊಳ್ಳುವ ದೃಷ್ಟಿಯಿಂದ ಗಮನಾರ್ಹ ಸಂಗತಿಗಳಾಗುತ್ತವೆ.

ಈ ಹಿನ್ನೆಲೆಯಲ್ಲಿ ಈ ಕಾದಂಬರಿಗಳ ಪಾತ್ರಗಳನ್ನು ನೋಡಿದಾಗ ಈ ಎಲ್ಲ ಪಾತ್ರಗಳು ಒಂದು ದಿಕ್ಕಿನೆಡೆಗೆ ತುಡಿಯುವ ಪರಿಘಟನೆ ಕಾಣುತ್ತದೆ. ಈ ದಿಕ್ಕೇ ಈ ಎರಡೂ ಕಾದಂಬರಿಗಳ ಕೇಂದ್ರ ಪ್ರಜ್ಞೆ ಎನ್ನಬಹುದು - ಕೇಂದ್ರ ಪ್ರಜ್ಞೆ ಎನ್ನುವುದನ್ನು ಹುಡುಕಲೇಬೇಕಾದರೆ. ಈ ಎರಡೂ ಕಾದಂಬರಿಗಳ ಪಾತ್ರಗಳು ತಂತಮ್ಮ ಸಂಚಿತ ಶಕ್ತ್ಯಾನುಸಾರ ಹಾಗೂ ತಮ್ಮನ್ನು ಸುತ್ತಿಕೊಂಡಿರುವ ವಸ್ತು ಪ್ರಪಂಚದ ಸೆಳೆತಗಳನ್ನವಲಂಬಿಸಿ, ಸಂಪೂರ್ಣ ಜಾಗೃತಿಯ ಕಡೆಗೆ - ಅದನ್ನು ನಿಮ್ಮ ತಾತ್ವಿಕ ಹಿನ್ನೆಲೆಗನುಸಾರ ಮುಕ್ತಿ ಎನ್ನಿ, ಸರ್ವೋದಯ ಎನ್ನಿ, ವಿಮೋಚನೆ ಎನ್ನಿ - ದಾರಿ ಸವೆಸುವ ಪಯಣಿಗರಾಗಿ ಕಾಣುತ್ತವೆ. ಅವುಗಳ ಮೇಲೆ ತತ್ವ ಅಥವಾ ಮೌಲ್ಯಗಳ ಸಾಪೇಕ್ಷತೆಯ ಭಾರವಿಲ್ಲ. ತತ್ವ - ಮೌಲ್ಯಗಳೇನಿದ್ದರೂ - ಅವುಗಳ ಉಲ್ಲಂಘನೆಯೂ ಸೇರಿದಂತೆ - ಈ ದಾರಿ ಸವೆಸುವುದಕ್ಕೆ ಊರುಗೋಲುಗಳಷ್ಟೇ. ಇಂದು ನಾವು ವಿಶ್ಲೇಷಣೆಗೆ ತೆಗೆದುಕೊಂಡಿರುವ ಗುತ್ತಿ ಮತ್ತು ಹೂವಯ್ಯ - ಈ ಎರಡು ಪಾತ್ರಗಳು ಈ ದಾರಿಯ ಎರಡು ತುದಿಗಳಲ್ಲಿರುವಂತಹವರು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕೊನೆಯಲ್ಲಿ ಗುತ್ತಿ ಈ ಪಯಣದ ಮೊದಲ ಹೆಜ್ಜೆ ಇಟ್ಟ ತಲ್ಲಣದ ಸೂಚನೆ ಇದ್ದರೆ, 'ಕಾನೂರು ಹೆಗ್ಗಡಿತಿ' ಕಾದಂಬರಿಯ ಕೊನೆಯಲ್ಲಿ ಹೂವಯ್ಯ ಈ ಪಯಣದ ಕೊನೆಯ ಹೆಜ್ಜೆ ಇಟ್ಟ ಪ್ರಸನ್ನತೆಯ ಸೂಚನೆ ಇದೆ. ಈ ಎರಡೂ ತುದಿಗಳ ಮಧ್ಯೆ ಬದುಕಿನ ಹೋರಾಟವಿದೆ. ಈ ಹೋರಾಟದ ಫಲವಾಗಿ ಅನೇಕ ಪಾತ್ರಗಳು ಈ ಪಯಣದ ಹಾದಿಗೆ ಬೀಳುತ್ತವೆ, ಇಲ್ಲವೇ ದಾರಿ ತಪ್ಪುತ್ತವೆ. ಹೀಗಾಗಿ ಈ ಕಾದಂಬರಿಗಳು ಸಾರತಃ ಒಂದು ಮಹಾ ಪ್ರಯಾಣದ ಕಥೆಗಳು. ಮೊದಲನೆಯದು ಹುಲಿಕಲ್ಲು ನೆತ್ತಿ ತನ್ನ ಸುಷುಪ್ತಿ ಸ್ಥಿತಿಯಲ್ಲಿ ಕಂಡ ಕಥೆಯಾದರೆ, ಎರಡನೆಯದು ಕಡೆಗೋಲು ಕಂಬ ತನ್ನ ಕ್ರಿಯಾಶೀಲ ಸ್ಥಿತಿಯಲ್ಲಿ ಕಂಡ ಕಥೆ. ಈ ಅರ್ಥದಲ್ಲಿ ಗುತ್ತಿ ಮೊದಲ ಕಥೆಯ ನಾಯಕನಾದರೆ, ಹೂವಯ್ಯ ಎರಡನೇ ಕಥೆಯ ನಾಯಕ.

೨

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಾಣುವ ಮಹಾ ಪ್ರಯಾಣದಲ್ಲಿ ಅತ್ಯಂತ ಹಿಂದಿರುವವನು ಗುತ್ತಿ. ಹೊಲೆಯ ಜಾತಿಗೆ ಸೇರಿದ ಇವನು ಕುಳ್ಳನಾದರೂ ಕಟ್ಟುಮಸ್ತಾಳು. ಸಿಂಬಾವಿ ಭರಮೈ ಹೆಗಡೆಯವರ ಜೀತದಾಳು. ಆದರೂ, ಆತನೂ ಒಡೆಯ - ತಾನು ಸಾಕಿ ಬೆಳೆಸಿದ ದೈತ್ಯಶಕ್ತಿಯ 'ಹುಲಿಯ' ಎಂಬ ನಾಯಿಗೆ. ಕಾದಂಬರಿ ಆರಂಭ ವಾಗುವುದೇ ಗುತ್ತಿ ತನ್ನ ಒಡೆಯನ ಸೇವಾರ್ಥ ಹೊರಡುವ ಪ್ರಯಾಣದೊಂದಿಗೆ. ಆ ಸೇವೆಯಾದರೂ ಎಂತಹುದು? ಬದುಕಿನ ಹೋರಾಟಕ್ಕೆ ಬೀಜರೂಪಿಯಾಗಿರುವ 'ಕಾಮ' ಪ್ರೇರಿತವಾದ ಸಂದೇಶವನ್ನು ಮುಟ್ಟಿಸುವ ಕೆಲಸವದು. ಒಡೆಯನ ಎರಡನೇ ಸಂಬಂಧ ಕುದುರಿಸುವ ಪತ್ರ ಹೊತ್ತ ಅವನು ಇನ್ನೊಂದು ಉದ್ದೇಶವನ್ನೂ ಅದರ ಹಿಂದೆ ಅಡಗಿಸಿ ಕೊಂಡಿದ್ದಾನೆ. ಅದು ಅವನ 'ಕಾಮ'ಕ್ಕೆ ಸಂಬಂಧಿಸಿದ್ದು. ತನ್ನ ಈ ಪ್ರಯಾಣದ ಹಿಂದೆ ತಾನು ಮೆಚ್ಚಿರುವ ತಿಮ್ಮಿಯನ್ನು ಹಾರಿಸಿಕೊಂಡು ಬರುವ ಹುನ್ನಾರವೂ ಇದೆ. ಈ ಪ್ರಯಾಣದ ಆರಂಭವನ್ನು ಕುವೆಂಪು ಧ್ವನಿಪೂರ್ಣವಾಗಿ ವರ್ಣಿಸಿರುವುದು ಹೀಗೆ :

> ''ಗುತ್ತಿ ಅಂದಾಜಿನ ಮೇಲೆ ಕಾಲು ಹಾಕುತ್ತಿದ್ದನು. ನಾಗರಿಕರಿಗೆ ಭೀಕರವಾಗಿ ಕಾಣುವ ವರ್ಷಾಕಾಲದ ಆ ಭಯಂಕರ ಪರ್ವತಾರಣ್ಯದ ರುದ್ರಪ್ರಕೃತಿ ಅವನಿಗೆ ಬಹುಕಾಲದ ಪರಿಚಯದಿಂದ ಸಾಧಾರಣವಾಗಿತ್ತು. ಅವನೂ ಆ ಪ್ರಕೃತಿಯ ಒಂದಂಶವಾಗಿದ್ದನು: ಬೆಟ್ಟದಲ್ಲಿ ಬಂಡೆಯಂತೆ, ಕಾಡಿನಲ್ಲಿ ಮರದಂತೆ ಅದರ ಒಂದಂಗವಾಗಿದ್ದನು.''[೪]

ಹೀಗೆ ಕಾಮದ ಮೊಟ್ಟೆಯನ್ನು ತನ್ನ ಒಡಲಲ್ಲಿಟ್ಟುಕೊಂಡಿದ್ದರೂ, ಜಡಚೇತನನಾಗಿ ಹೊರಟ ಗುತ್ತಿ ತನ್ನ ಪ್ರಯಾಣದಲ್ಲಿ, ಜಾತಿ ವ್ಯವಸ್ಥೆಯೆಂಬ ಮಹಾನಿದ್ರೆಯಲ್ಲಿ ಮುಳುಗಿ ಈಗೀಗ ಕೊಂಚ ಮಂಪರು ಕಳೆದುಕೊಳ್ಳುತ್ತಿರುವ ಪ್ರಪಂಚವನ್ನು ಪ್ರವೇಶಿಸುತ್ತಾನೆ. ಗೌಡರು, ಸೇರೆಗಾರರು, ಶೆಟ್ಟರು, ಹಳೆಪೈಕದವರು, ಬೇಲರು, ಬಿಲ್ಲವರು, ಹಸನವರು ಇತ್ಯಾದಿ ಹಲವಾರು ಜಾತಿಗಳು, ಮತಾಂತರ, ಮದುವೆಯಲ್ಲಿ ಪಲ್ಲಕ್ಕಿ ಬಳಸುವ ಆಸೆ, ಮದುವೆ ಮನೆಯಲ್ಲಿ ವಾಲಗ ಊದುವ ಪ್ರತಿಷ್ಠೆ ಇತ್ಯಾದಿಗಳ ಮೂಲಕ ಮೇಲ್ಮುಖ ಚಲನೆಯ ಆಶಯವನ್ನು ಪ್ರಕಟಿಸುತ್ತಿರುವ ಆವರಣದಲ್ಲಿ ಗುತ್ತಿ, ಈ ಸ್ತರದ ಆಶಯಗಳೇ ಇಲ್ಲದ ಸಮಾಜವೊಂದರ ಪ್ರತಿನಿಧಿಯಾಗಿ ವರ್ತಿಸುತ್ತಾನೆ. ತನ್ನೊಡಲೊಳಗೆ ಮಹಾ ಆಶಯವನ್ನಿಟ್ಟುಕೊಂಡಿರುವ ಜೀಸೆಕಲ್ಲು ಪ್ರಸಂಗದಲ್ಲಿ ಅವನು ಮೂಕ ಪ್ರೇಕ್ಷಕ ಮಾತ್ರ. ಅವನಿಗೊಂದೇ ಒತ್ತಡ - ತಿಮ್ಮಿಯನ್ನು ತನ್ನವಳನ್ನಾಗಿಸಿಕೊಳ್ಳುವುದು; ಅದೂ ಅವಳು ಇನ್ನೊಬ್ಬನೊಂದಿಗೆ ಓಡಿ ಹೋಗಿದ್ದವಳು ಎಂಬುದು ಗೊತ್ತಿದ್ದರೂ. ಆದರೆ ಆ ಆಶಯದ ಹಿಂದೆಯೂ ಭಯವಿದೆ, ನಿಸ್ಸಹಾಯಕತೆ ಇದೆ - ತಿಮ್ಮಿ ಅವನಂತೆಯೇ ಇನ್ನೊಬ್ಬ ಒಡೆಯರ ಜೀತದಾಳುವಿನ ಮಗಳು;

ಆ ಒಡೆಯರ ಒಪ್ಪಿಗೆ ಇಲ್ಲದೆ ಅದಾಗುವುದಿಲ್ಲ. ಆದರೆ ಆ ಒಡೆಯರಿಗೆ ಈ ಸಂಬಂಧ ಸರ್ವಥಾ ಒಪ್ಪಿಗೆ ಇಲ್ಲ - ಏಕೆಂದರೆ ಒಂದು ಹೆಣ್ಣಾಳು ತಮ್ಮ ದುಡಿಮೆಗೆ ತಪ್ಪುವುದು ಬೇಕಿಲ್ಲ. ಆದರೂ ಗುತ್ತಿ ಆ ಸಾಹಸಕ್ಕೆ ಕೈ ಹಾಕಿದ್ದಾನೆ. ಹೀಗೆ ಗುತ್ತಿಯ ಚೇತನ ಜಡತೆಯ ವಿರುದ್ಧ ಆದಿಮ ಪ್ರವೃತ್ತಿಯ ಮೂಲಕ ಒಳಗೇ ಬಂಡೇಳುತ್ತದೆ. ಅವನು ಭಯದಲ್ಲೇ ತನ್ನ ಈ ಒಳ ಬಂಡಾಯದ ಮೊದಲ ಹೆಜ್ಜೆ ಇಡುತ್ತಾನೆ - ತಿಮ್ಮಿಯನ್ನು ಅವಳ ಮನೆಯಿಂದ ಹಾರಿಸಿಕೊಂಡು ಬರುವ ಮೂಲಕ. ಕಗ್ಗಾಡಿನ ಮಧ್ಯೆ ತಿಮ್ಮಿಯನ್ನು ಸಾಗಿಸಿಕೊಂಡು ಬಂದು ಹುಲಿಕಲ್ಲು ನೆತ್ತಿಯ ಮೇಲೆ ರಾತ್ರಿ ಕಳೆಯುವುದರೊಂದಿಗೆ ಈ ಒಳ ಬಂಡಾಯ ಒಂದು ಹಂತ ಮುಟ್ಟುತ್ತದೆ. ಹಾಗೆಯೇ ಅಲ್ಲಿ ಹುಲಿಯ ಕುರ್ಕನ ಮೇಲೆ ಬಿದ್ದು ಮಾರಕವಾಗಿ ಗಾಯಗೊಳ್ಳುವ ಧ್ವನಿಪೂರ್ಣ ಪ್ರಸಂಗದೊಂದಿಗೆ ಅದು ದಾರುಣವಾದ ಎರಡನೇ ಹಂತ ಪ್ರವೇಶಿಸುತ್ತದೆ. ಆದರೆ ಈ ಮೊದಲನೇ ಹಂತಕ್ಕೂ ತನ್ನದೇ ಆದ ಅರ್ಥಸಾಂಗತ್ಯವಿದೆ. ಹುಲಿಕಲ್ಲು ನೆತ್ತಿಯ ಮೇಲೆ ಅವರಿಬ್ಬರೂ ಕಳೆದ ಮೊದಲ ರಾತ್ರಿಯ ನಂತರ ಬೆಳಗಾದ ಪರಿ ಹೀಗೆ:

> ''ಅಯ್ಯೋ ಅಯ್ಯೋ ಅಯ್ಯೋ! ಬಾವ ಬಾವ ಬಾವ! ಅಲ್ನೋಡು ಅಲ್ನೋಡು ಅಲ್ನೋಡು...'' ಮುಂದೆ ಮಾತು ನಿಂತು, ಕೈ ಮುಗಿದುಕೊಂಡು ಭಾವಪರವಶಳಾಗಿ ನಿಂತುಬಿಟ್ಟಳು ತಿಮ್ಮಿ.
>
> ಪೂರ್ವ ದಿಗಂತದಿಂದ ಕೆಂಡದುಂಡೆಯಾಗಿ ಕಿರಣವಿಲ್ಲದ ಸೂರ್ಯ ಮೇಲೇಳುತ್ತಿದ್ದನು. ಕಣಿವೆಗಳನ್ನು ತುಂಬಿದ್ದ ಆ ಮಂಜಿನ ನೊರೆಯ ಸಮುದ್ರ, ಹಸಿರು ದ್ವೀಪಗಳಂತೆ ತಲೆಯೆತ್ತಿದ್ದ ಮಲೆ ನೆತ್ತಿಗಳು, ಮೂಡು ಬಾನಿನಲ್ಲಿ ಸಾಗುತ್ತಿದ್ದ ಆ ಮೋಡಗಳ ವರ್ಣಲೀಲೆ, ಇವುಗಳ ಸುವಿಸ್ತೃತ ಭಿತ್ತಿ ವೇದಿಕೆಯಲ್ಲಿ ಆವಿರ್ಭವಿಸುತ್ತಿದ್ದ ಆ ಚೈತ್ರ ರವಿಯ ಸೌಂದರ್ಯವು ತಿಮ್ಮಿಯಂತಹವಳಿಗೂ ಹೃದಯದಲ್ಲಿ ಭೂಮಾನುಸಂಚಾರವಾಗುವಂತೆ ಮಾಡಿತ್ತು.''[೫]

ಹೀಗೆ ಹೊಸ ಶಕ್ತಿಗೆ ಜಾಗೃತಗೊಂಡ ಎರಡು ದಲಿತ ಚೇತನಗಳು ಸಾಮಾಜಿಕ ಕೋಲಾಹಲಕ್ಕೆ ಹೇತುವಾಗುತ್ತವೆ. ತಿಮ್ಮಿಯ ಅಪಹರಣ ಬಹಿರಂಗವಾಗಿ, ಅದರಿಂದುಂಟಾದ ಸಾಮಾಜಿಕ ಗೊಂದಲದಲ್ಲಿ ಇನ್ನಾವುದೋ ಕಾರಣಕ್ಕೆ ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಂಡ ಗುತ್ತಿ, ತಾಯಿಯಂತೆ ತನ್ನನ್ನು ಪೊರೆದಿರುವ ಕಾಡಿನ ಸಹಾಯದಿಂದಲೇ ಪೊಲೀಸರಿಗೆ ಗಸ್ತು ಕೊಟ್ಟು, ತನ್ನಂತೆಯೇ ಮೋಹವಶನಾಗಿರುವ ಮುಕುಂದಯ್ಯನೆಂಬ, ಅಧ್ಯಾತ್ಮದ ಸ್ಪರ್ಶ ಪಡೆದಿರುವ ಮೇಲು ಜಾತಿಯ ಯುವಕನ ಪ್ರೇಮಿಯನ್ನು ಅಪಹರಿಸುವ ಸಾಹಸದಲ್ಲಿ ನೆರವಾಗಿ ಅದಕ್ಕೆ ಪ್ರತಿಫಲವೆಂಬಂತೆ ತಿಮ್ಮಿಯನ್ನು ವಾಪಸು ಪಡೆಯುತ್ತಾನೆ. ಈ ಎಲ್ಲ ಕೋಲಾಹಲದ ತಲ್ಲಣದ ಘಟ್ಟದಲ್ಲೇ ಗುತ್ತಿಗೆ ಮೊದಲ 'ದರ್ಶನ'ವಾಗುವುದು. ಪೊಲೀಸರಿಗೆ ಕೈಕೊಟ್ಟು ಕಾಡಿಗೆ ಬಿದ್ದ ಗುತ್ತಿ, ಸುತ್ತಲೂ ತನ್ನ ಶತ್ರುಗಳಿದ್ದಾರೆಂಬ ಭಯದಲ್ಲಿ ದಿಕ್ಕು ತೋಚದವನಾಗುತ್ತಾನೆ:

''ಇದ್ದಕ್ಕಿದ್ದ ಹಾಗೆ ಏನೋ ಮಿಂಚು ಹೊಳೆದಂತಾಯ್ತು ಗುತ್ತಿಗೆ. 'ನಾನು ಹೊಲೇರವನಲ್ಲದೆ ಬ್ಯಾರೆ ಜಾತಿಗೆ ಸೇರಿದವನಾಗಿದ್ದರೆ ಹೀಂಗಾಗ್ತಿತ್ತೇ?' ಎಂದುಕೊಂಡನು. 'ಗೌಡರ ಜಾತಿಗೆ? ಸೆಟ್ಟರ ಜಾತಿಗೆ? ಬಿರಾಂಬರ ಜಾತಿಗೆ?'... ಊಂಹ್ಞು ಈ ಜಲ್ಮದಾಗೆ ಅದೆಲ್ಲಿ ಸಾಧ್ಯ? 'ಸಾಬರ ಜಾತಿಗೆ ಕಿಲಸ್ತರ ಜಾತಿಗೆ? ... ಥೂ ಥೂ ಥೂ!'' ತನ್ನ ತಲೆಯಲ್ಲಿ ಸುಳಿದಿದ್ದ ಏನನ್ನೋ ಉಗುಳಿ ನಿರಾಕರಿಸಿದನು. ಆದರೂ ಬೆಟ್ಟಳ್ಳಿ ಹಕ್ಕಲಿನಲ್ಲಿ ದೇವಯ್ಯ ಗೌಡರಿಗೆ ಬೈಸಿಕಲ್ಲು ಕಲಿಸುತ್ತಿದ್ದಾಗ, ಹೊತ್ತು ಮುಳುಗಿದ ಮೇಲೆ ಬೈಗಿನ ಹೊತ್ತಿನಲ್ಲಿ, ತೀರ್ಥಹಳ್ಳಿಯಲ್ಲಿ ಪಾದ್ರಿ ಮಾಡಿದ್ದ ಪ್ರಾರ್ಥನೆಯೂ, ಆಮೇಲೆ ಅವನು ಹೇಳಿದ ಉಪದೇಶದ ಭಾಷಣದ ಕೆಲವು ಭಾಗಗಳೂ ಅವನ ನೆನಪಿಗೆ ಬಂದವು. ಅದರ ಜೊತೆ ಜೊತೆಗೇ ಐಗಳೂ ಮುಕುಂದಯ್ಯನೂ 'ಪರ್ಸಂಗ'ದಲ್ಲಿ ಭಾರತ ರಾಮಾಯಣ ಓದುತ್ತಾ ಕಥೆ ಹೇಳುತ್ತಾ ಹೇಳುತ್ತಿದ್ದ ಹಿತೋಪದೇಶಗಳೂ ಮನಸ್ಸಿನಲ್ಲಿ ಸುಳಿಯತೊಡಗಿದವು. ಅಲ್ಲದೆ ಭಾಗವತರಾಟಗಳಲ್ಲಿ ತಾನು ಕೇಳಿ ಗ್ರಹಿಸಿದ್ದ ಕೆಲವು ವಿಚಾರಗಳೂ ಅವನ ಸುಪ್ತಚಿತ್ತದಿಂದ ಆಪತ್ಸಮಯಾನುಸಂಗಿಗಳಾಗಿ ಮೂಡಿ ಸುಳಿಯತೊಡಗಿದವು. ಅಳುವುದನ್ನು ನಿಲ್ಲಿಸಿ, ಏನೋ ಧೈರ್ಯ ಬಂದವನಂತೆ ಉಸಿರೆಳೆದು ನೆಟ್ಟಗೆ ಕುಳಿತು, ತನಗೆ ತಿಳಿದಂತೆ, ಒರಟು ಒರಟಾಗಿ, ಆದರೂ ಭಾವಪೂರ್ವಕವಾಗಿ, ಭಕ್ತಿಯಿಂದ ಭಗವಂತನಿಗೆ ಮೊರೆಯಿಟ್ಟನು. ಅವನು ಮೊರೆಯಿಟ್ಟ ರೀತಿಯ ಮತ್ತು ಅದರ ಭಾಷೆಯ ಸರಿಯಾದ ಅರ್ಥ ಭಗವಂತನೊಬ್ಬನಿಗೇ ಆಗತಕ್ಕದ್ದಾಗಿತ್ತು! ಅವನ ಭಗವಂತನೂ ಅಷ್ಟೇ ಜಟಿಲ ಸ್ವರೂಪದವನಾಗಿದ್ದನು; ಸಾಕಾರ, ನಿರಾಕಾರ, ಆ ಆಕಾರ, ಈ ಆಕಾರ ಎಲ್ಲವೂ ಆಗಿಯೂ, ಯಾವುದೂ ಆಗಿರದೆ, ಬರಿಯ ಗುತ್ತಿಯ ಭಾವ ಮಾತ್ರನಾಗಿದ್ದು, ಎಂತಹ ವೇದಾಂತಿಯ ದರ್ಶನವೂ ತತ್ತರಿಸುವಂತಿತ್ತು! ಅಂತೂ ಏರಿತ್ತು ಹೊಲೆಯನ ಹೃದಯದ ಪ್ರಾರ್ಥನೆ, ಭಗವಂತನ ಚರಣಾರವಿಂದಗಳಿಗೆ!''[೬]

ನಂತರ, ಗುತ್ತಿ ಈ ಪರಿಚಿತ ನಾಡನ್ನೇ ಬಿಟ್ಟು ತಿಮ್ಮಿಯೊಂದಿಗೆ ಹೊಸ ಬದುಕನ್ನು ಅರಸುತ್ತಾ ತುಂಗಾ ನದಿಯ ಪ್ರವಾಹವನ್ನು ದಾಟಿ; ತನ್ನ ಹಳೆಯ ಒಡೆಯರಿಗೆ ಹೋಲಿಸಿದಂತೆ ಸ್ವಲ್ಪ ನಾಗರೀಕರಂತೆ ಕಾಣುವ ಹೊಸ ಒಡೆಯರ ನಾಡಿಗೆ ಹೋಗುತ್ತಾನೆ. ಹೋಗುವಾಗ, ಹಿಂದಿನ ಜನ್ಮದ ಕರ್ಮದಂತೆ ಸದಾ ತನ್ನ ಬೆನ್ನ ಹಿಂದೆ ಬಿದ್ದಿರುವ 'ಹುಲಿಯ'ನನ್ನು ನದಿಯ ಪ್ರವಾಹದಲ್ಲಿ ಕಳೆದುಕೊಳ್ಳುತ್ತಾನೆ.

ಕಾಮುವೇ ನೆಪವಾಗಿ ತನ್ನ ಜಾತಿ ಮೂಲವಾದ ಅಸಹಾಯಕತೆ, ಕೀಳ್ತನಗಳಿಗೆ ಜಾಗೃತ ವಾದ ಒಂದು ಚೇತನ ಹೊಸ ಹುಟ್ಟನ್ನರಸುತ್ತಾ ಹೊಸ ನಾಡಿಗೆ ಹೋಗುವುದರೊಂದಿಗೆ ಗುತ್ತಿಯ ಕಥೆ ಮುಗಿದರೆ, ಈಗಾಗಲೇ ಜಾಗೃತಾವಸ್ಥೆಯಲ್ಲಿರುವ ಒಂದು ಚೇತನ,

ಪೂರ್ಣ ಜಾಗೃತಾವಸ್ಥೆಯ ಕಡೆ ಪಯಣ ಹೊರಡುವುದರೊಂದಿಗೆ ಹೂವಯ್ಯನ ಕಥೆ ಆರಂಭವಾಗುತ್ತದೆ.

೩

ಗುತ್ತಿಯನ್ನು ಸುತ್ತಿಕೊಂಡಿದ್ದ ಪ್ರಪಂಚ ತನ್ನೆಲ್ಲಾ ರೋಚಕ ಕ್ರಿಯೆಗಳ ಹೊರತಾಗಿಯೂ, ಮೂಲತಃ ಸರಳವೂ ಮುಗ್ಧವೂ ನಿಸರ್ಗ ಕೇಂದ್ರಿತವೂ ಆಗಿದ್ದರೆ, ಹೂವಯ್ಯ ಎದುರಿಸಬೇಕಾದ ಪ್ರಪಂಚ ನಿಸರ್ಗವನ್ನು ದಾಟಲು ಹಾತೊರೆಯುವ ಬುದ್ಧಿಯ ಸೋಂಕು ಪಡೆದ ಸಂಬಂಧಗಳಿಂದ ಆವೃತವಾದ ಮನುಷ್ಯ ಕೇಂದ್ರಿತ ಪ್ರಪಂಚ. ಎರಡೂ ಕಥೆಗಳೂ ನಡೆಯುವುದೂ ಕಾಡು, ಬೆಟ್ಟ, ಮಳೆ, ಹೊಳೆ, ಮೃಗ, ಪಕ್ಷಿಗಳ ಮಧ್ಯವೇ ಆದರೂ ಇವ್ಯಾವುವೂ, ಗುತ್ತಿಯ ಕಥೆಯನ್ನು ಆವರಿಸಿ ಅದಕ್ಕೆ ಚಾಲನೆ ಕೊಡುವಂತೆ ಹೂವಯ್ಯನ ಪ್ರಪಂಚವನ್ನು ಆವರಿಸಿ ಚಾಲನೆ ಕೊಡುವುದಿಲ್ಲ. ಗುತ್ತಿಯನ್ನು ನಿಸರ್ಗ ಶಿಕ್ಷಿಸಿ, ಲಾಲಿಸಿ ತಾಯಿಯಂತೆ ಪೊರೆದರೆ ಹೂವಯ್ಯ ನಿಸರ್ಗವನ್ನು ಅರಿತು ಅದರೊಂದಿಗೆ ಸಮರಸ ಸಾಧಿಸಲು ತೊಡಗುತ್ತಾನೆ. ಹೂವಯ್ಯ ಇರುವುದು ಯೋಚಿಸುವ ಮನುಷ್ಯನ ಪ್ರಪಂಚದಲ್ಲಿ. ಗುತ್ತಿಯಿಂದ ಸಹಾಯ ಪಡೆದ ಮುಕುಂದಯ್ಯನೇ ಇಲ್ಲಿ ಜಾಗೃತಿಯ ಹಲವಾರು ಹಂತಗಳನ್ನು ದಾಟಿ ಹೂವಯ್ಯನಾಗಿದ್ದಾನೆ:

> ''...ಆತನ ಕಣ್ಣುಗಳು ಅಷ್ಟೇನೂ ಅತಿಶಯ ವಿಸ್ತಾರವಾಗಿರದಿದ್ದರೂ ಉಜ್ವಲವಾಗಿ, ಮರ್ಮಭೇದೀದೃಷ್ಟಿಯುತವಾಗಿ, ಯೋಗಿಯ ನಯನಗಳಂತೆ ಅಂತರ್ಮುಖವಾಗಿ, ತಿಳಿದವರಲ್ಲಿ ಗೌರವ ಭಾವವನ್ನೂ, ತಿಳಿಯದವರಲ್ಲಿ ಮೋಹವನ್ನೂ ಉದ್ರೇಕಿಸುವಂತಿದ್ದವು. ಮೂಗು ಉದ್ದವಾಗಿ ತುದಿಯಲ್ಲಿ ಶುಕ ಚಂಚುವಿನಂತೆ ಬಾಗಿತ್ತು; ಸೃಷ್ಟಿಯ ರಹಸ್ಯಗಳನ್ನು ಕುಟುಕಿ ಒಳಹೊಕ್ಕು ನೋಡುತ್ತವೆ ಎನ್ನುವಂತಿತ್ತು. ...ಒಟ್ಟಿನಲ್ಲಿ ಆತನ ಸರಳ ಸೌಂದರ್ಯವೇ, ಒಂದು ಗಂಭೀರ ಭೋಗವಾಗಿತ್ತು''[೭].

ಕಾಡಿನ ಮಧ್ಯದ ಮಂಟಪವೊಂದರಲ್ಲಿ ಯೋಗಿಯೊಬ್ಬನ ದರ್ಶನದ ಮೂಲಕ ಪಡೆದ ಹೊಸ ಮಿಂಚಿನ ಭಾಗ್ಯ ಮಾತ್ರ ಮುಕುಂದಯ್ಯನದಾಗಿದ್ದರೆ, ಹೂವಯ್ಯ ಇಂತಹ ಹಲವಾರು ಮಿಂಚುಗಳ ಬೆಳಕನ್ನು ಹೀರಿ ಆ ಎಲ್ಲ ಬೆಳಕಿನಿಂದ ಕಾಡಿನ ಜಗತ್ತನ್ನು ಬೆಳಗಿಸುವ ಆಶಯದ ತತ್ತಿಯಂತಿದ್ದಾನೆ. ವರ್ಡ್ಸ್‌ವರ್ತ್, ಮ್ಯಾಥ್ಯೂ ಆರ್ನಾಲ್ಡ್‌ರಂತಹ ಪಾಶ್ಚಾತ್ಯ ಲೇಖಕರ ವಿಚಾರ ಅನುಭೂತಿಗಳಿಂದ ಪ್ರಫುಲ್ಲಿತನಾಗಿರುವ ಹೂವಯ್ಯ, ತನ್ನ ಜಗತ್ತಿನಲ್ಲಿ ಒಂಟಿಯಾಗಿದ್ದಾನೆ. ನಿಸರ್ಗದ ಅನುಪಮವಾದ ಹಾಗೂ ದೈವೀಕವೆನಿಸುವ ಸೌಂದರ್ಯದಿಂದ ಭಾವಾವಿಷ್ಟನಾಗುವ ಅವನು, ತಮ್ಮ ಸಂಕೀರ್ಣ ಕಾಮ ಹಾಗೂ ಆಸ್ತಿ ಸಂಬಂಧಗಳ ಗೋಜಲಿನಲ್ಲಿ ಈ ದೈವೀಕ ಸೌಂದರ್ಯಕ್ಕೆ ಕುರುಡಾಗಿರುವ ಸುತ್ತಲ ಪ್ರಪಂಚದ ಕಣ್ಣಿಗೆ ರೋಗಿಯಂತೆ ಕಾಣುತ್ತಾನೆ.

ನಮ್ಮ ಅನೇಕ ವಿಮರ್ಶಕರ ಕಣ್ಣಿಗೂ ಹಾಗೇ ಕಂಡಿದ್ದಾನೆ.

ಹೂವಯ್ಯನ ಈ 'ರೋಗಿತನ'ವೇ ಆತ ತಾನು ಬದುಕುವ ಪ್ರಪಂಚವನ್ನು ನಿರ್ಣಾಯಕವಾಗಿ ನಿಯಂತ್ರಿಸುವ ಶಕ್ತಿ ಪಡೆದುಕೊಂಡಿರುವ ಪುರೋಹಿತಶಾಹಿಯ ವಿರುದ್ಧ ಕ್ರಿಯಾಶೀಲವಾಗುವಂತೆ ಮಾಡುವುದು. ಸರಿ - ತಪ್ಪುಗಳ ವಿಮರ್ಶೆಯ ಮಾನದಂಡಗಳ ವಾರಸುದಾರನಂತೆ ವರ್ತಿಸುವ ವೆಂಕಪ್ಪ ಜೋಯಿಸನ ಯಂತ್ರ, ಮಂತ್ರ, ತಂತ್ರಗಳಿಂದ ಜರ್ಝರಿತವಾಗಿ ಹೋಗಿರುವ ಬದುಕನ್ನು ಘನತೆಯ ಕಡೆಗೆ, ಜ್ಞಾನದ ಕಡೆಗೆ ಹಾಗೂ ಸಮತೆಯ ಕಡೆಗೆ ಒಯ್ಯುವ ಪ್ರಯತ್ನದಲ್ಲಿ ಹೂವಯ್ಯ ಮಾಗುತ್ತಾನೆ. ಈ ಪ್ರಯತ್ನದೊಂದಿಗೇ ಅವನ ಪ್ರೇಮ ಪ್ರಕರಣವೂ ಹೆಣೆದುಕೊಂಡಿದೆ. ಚಿನ್ಮಮ್ಮನನ್ನು ಪ್ರೇಮಿಸಿದ ಮುಕುಂದಯ್ಯನ ನಿಸರ್ಗ ಸಹಜವಾದ ಪ್ರೇಮದ ಏಕಾಗ್ರತೆ ಹೂವಯ್ಯನಲ್ಲಿಲ್ಲ. ಹೂವಯ್ಯ ಪ್ರೇಮದ ಬಗ್ಗೆ ಯೋಚಿಸಿ, ವಿಶ್ಲೇಷಿಸಿ, ಅಹಂಕರಿಸಿ ಆತ್ಮವಂಚನೆಗೆ ಈಡಾಗಿ ನರಳುತ್ತಾನೆ. ಈ ನರಳುವಿಕೆಯ ಬೆಂಕಿಯಲ್ಲಿ ಬೆಂದು ಪುಟವಿಟ್ಟ ಚೇತನದಂತೆ, ಎಲ್ಲ ನರಳುವಿಕೆಗೆ ಅತೀತವಾದ ಆನಂದದಲ್ಲಿ ಬೆಳಗುವ ಮನುಷ್ಯನಾಗುತ್ತಾನೆ, ಬುದ್ಧನಾಗುತ್ತಾನೆ.

ಹೂವಯ್ಯನ ಈ ಮಾಗುವ ಕ್ರಿಯೆಯನ್ನು ಕುವೆಂಪು ಅವರ 'ರಸಋಷಿ'ತನದಲ್ಲಿ ಹುಟ್ಟಿದ ಭೋಳೆತನವೆಂದು ಬಗೆಯುವವರೂ ಇದ್ದಾರೆ. ಹೀಗಾಗಿ ಹೂವಯ್ಯನ ಪಾತ್ರ ಆತ ಬದುಕುವ 'ಉದ್ದೇಶರಹಿತವೂ, ಜೀವಂತವೂ ಆದ ಅನುಭವದ ವಿವರಗಳ ಪ್ರಪಂಚ'ದೊಡನೆ ಸ್ಪಷ್ಟ್ಯಾತ್ಮಕವಾಗಿ ತೊಡಗಿಸಿಕೊಳ್ಳುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದವರೂ ಇದ್ದಾರೆ.[೮] ಇದು ಈ ಹಿಂದೆ ನಾನು ಪ್ರಸ್ತಾಪಿಸಿದ ಆರಾಧನೆಯ ಸುಲಭದಾರಿಯ ವಿಮರ್ಶಕರು ಚಲಾವಣೆಗೆ ತಂದ 'ರಸಋಷಿ' ಎಂಬ ಅಭಿದಾನಕ್ಕೆ ಪ್ರತಿಕ್ರಿಯಿಸುವ ಭರದಲ್ಲಿ ದಾರಿ ತಪ್ಪಿರುವ ವಿಮರ್ಶೆಯಾಗಿದೆ. ನಮ್ಮಲ್ಲಿ ಬುದ್ಧನನ್ನು ಆರಾಧಿಸುವ ಅಥವಾ ತಿರಸ್ಕರಿಸುವ ಎರಡೂ ಪಂಥಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ಎರಡೂ ಮನಸ್ಸುಗಳನ್ನು ನಿಯಂತ್ರಿಸುವ ಶಕ್ತಿ ಒಂದೇ ಎಂಬುದು ಗೊತ್ತಾಗುತ್ತದೆ. ಅದು, ಮನುಷ್ಯರು ಬುದ್ಧರಾಗುವ ಸಾಧ್ಯತೆಯ ಭಯ. ಒಬ್ಬರು ಆರಾಧನೆಯ ಮೂಲಕ ಆ ಭಯವನ್ನು ನಿವಾರಿಸಿಕೊಳ್ಳಲೆತ್ನಿಸಿದರೆ, ಇನ್ನೊಬ್ಬರು ಆ ಸಾಧ್ಯತೆಯನ್ನು ಪಾರಿಭಾಷಿಕವಾಗಿ ತಿರಸ್ಕರಿಸುವ ಮೂಲಕ ಆ ಭಯವನ್ನು ಗೆಲ್ಲಬಯಸುತ್ತಾರೆ.

ಹೂವಯ್ಯ ಮಾಗುವುದು ಪ್ರತ್ಯೇಕತೆಯಲ್ಲಲ್ಲ. ಅವನು ಬದುಕಿನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವಂತೆಯೇ ಲೋಕವನ್ನು ಹೊಸದಾಗಿ ಗ್ರಹಿಸುವ ಪ್ರಯತ್ನದಲ್ಲಿ ತೊಡಗಿರುತ್ತಾನೆ. ಧ್ಯಾನ ಮಾರ್ಗ ಈ ಪ್ರಯತ್ನದಲ್ಲಿ ಅವನಿಗೆ ನೆರವಾಗಿ ಬರುತ್ತದೆ. ಹೂವಯ್ಯನ ಧ್ಯಾನದ ಬೇರುಗಳು ಇರುವುದಾದರೂ ಎಲ್ಲಿ? ತನ್ನ ಅಹಂಕಾರ, ವೆಂಕಪ್ಪ ಜೋಯಿಸನ ಅವಿದ್ಯೆ, ಚಂದ್ರಯ್ಯ ಗೌಡರ ಮೃಗೀಯತೆ, ಸೀತೆಯ ಸಂಕಟ, ರಾಮಯ್ಯನ ಮನೋವಿಕಾರ, ಓಬಯ್ಯನ ಪಾಪಪ್ರಜ್ಞೆ, ಸೇರೆಗಾರನ ಕಾಮುಕತನ ಹಾಗೂ ಸುಬ್ಬಮ್ಮನ ದುರಂತದಿಂದ ಜರ್ಝರಿತವಾಗಿರುವ ಪ್ರಪಂಚದಲ್ಲಿಯೇ. ಈ ಪ್ರಪಂಚವನ್ನು 'ಉದ್ದೇಶರಹಿತ'ವೆಂದು

ಭಾವಿಸುವ ಮನಸ್ಸು ಹೂವಯ್ಯನನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲಾರದು. ಧ್ಯಾನವೆಂದರೆ ತಾನು ಬದುಕುತ್ತಿರುವ ಲೋಕದೊಂದಿಗೆ ಹೊಸ ಸಮತೋಲನ ಸಾಧಿಸಿಕೊಳ್ಳುವ, ಲೋಕವನ್ನು ಅದರ ಪಾರದರ್ಶಕ ಗುಣದೊಂದಿಗೆ ದಕ್ಕಿಸಿಕೊಳ್ಳುವ ಮತ್ತು ಆ ಮೂಲಕ ಆ ಲೋಕದಲ್ಲಿ ತನ್ನನ್ನು ಹೊಚ್ಚ ಹೊಸದಾಗಿ ಗುರುತಿಸಿಕೊಳ್ಳುವ ಕ್ರಿಯೆ ಎಂಬ ತಿಳುವಳಿಕೆ ಇಲ್ಲದವರಿಗೆ ಹೂವಯ್ಯ ಪರಕೀಯನೇ. ಧ್ಯಾನವೆಂದೊಡನೆ ಒಂದು ಅಲೌಕಿಕ ಅನುಭವ ವೆಂದೂ, ಅಲೌಕಿಕವೆಂದೊಡನೆ ಲೋಕಹೀನವಾಗುವುದೆಂದೂ ನಮ್ಮ ಮಾಯವಾದೀ ಪರಂಪರೆ ಪ್ರತಿಪಾದಿಸುತ್ತಾ ಬಂದಿರುವ ನಂಬಿಕೆಯ ಫಲವಿದು. ಹೂವಯ್ಯನ ಪಾತ್ರದ ಮೂಲಕ ಕುವೆಂಪು ಈ ನಂಬಿಕೆಯನ್ನು ಸ್ಫೋಟಗೊಳಿಸಲು ಯತ್ನಿಸಿದ್ದಾರೆ.

ಇಷ್ಟೆಲ್ಲಾ ಹೇಳಿದ ಮೇಲೂ, ಕುವೆಂಪು ಕಾದಂಬರಿಯ ಕೊನೆಯ ಎರಡು ಅಧ್ಯಾಯಗಳಲ್ಲಿ ಹೂವಯ್ಯನನ್ನು ಚಾರಿತ್ರಿಕ ಪಾತ್ರವಾಗಿ ಕಡೆದಿಡಲು ಮಾಡಿರುವ ಪ್ರಯತ್ನವನ್ನು ಕಾದಂಬರಿಯ ಒಟ್ಟು ಕಲಾತ್ಮಕ ಚೌಕಟ್ಟಿನಲ್ಲಿ ಅರ್ಥ ಮಾಡಿಕೊಳ್ಳುವುದು ಕಷ್ಟ. ನಿರ್ಮೋಹಿ ಯಾದ ಹೂವಯ್ಯನನ್ನು ಕುವೆಂಪು ಮೋಹಿಸತೊಡಗುತ್ತಾರೆ! ಕಡೆಗೋಲು ಕಂಬ ಇದ್ದಕ್ಕಿದ್ದಂತೆ ತಿರುಗುವುದು ನಿಂತು ಅವಶೇಷದ ರೂಪ ತಾಳುತ್ತದೆ. ಇಲ್ಲಿ ವಿಚಲಿತಗೊಂಡಿರುವ ಲೇಖಕರ ಸಾಕ್ಷೀಭೂತಪ್ರಜ್ಞೆ ಇಡೀ ಕಾದಂಬರಿಯ ಬಂಧವನ್ನು ಬಚ್ಚಿಟ್ಟುಬಿಡುತ್ತದೆ. ಹೀಗೆ ಹೂವಯ್ಯ ಹೂವಿನಂತೆ ಸಹಜವಾಗಿ ಅರಳಿ ನಿಂತು, ಕೊನೆಯಲ್ಲಿ ಬುದ್ಧದೇವನ ಪಾದಾರವಿಂದಗಳಿಗೆ ಕುವೆಂಪು ಅವರಿಂದ ಅರ್ಪಿತವಾಗುವ ಪೂಜಾವಸ್ತುವಾಗಿ ಬಿಡುತ್ತಾನೆ. ಇದಕ್ಕೆ ಕಾರಣವನ್ನು ಕಾದಂಬರಿಯನ್ನು ಕಟ್ಟಿರುವ ಲೇಖಕರ ಸೃಷ್ಟಿಶೀಲತೆಯ ಹೊರವಲಯದಲ್ಲೇ ಹುಡುಕಬೇಕಾಗುತ್ತದೆ.

೪

ಇಷ್ಟೆಲ್ಲಾ ಆದರೂ, ಗುತ್ತಿ ಹಾಗೂ ಹೂವಯ್ಯ ಕನ್ನಡ ಸಂಸ್ಕೃತಿಯ ಸೃಷ್ಟಿಶೀಲತೆ ಕಡೆದಿರುವ ಎರಡು ಅಪೂರ್ವ ಪಾತ್ರಗಳು ಎಂಬುದನ್ನು ತಳ್ಳಿಹಾಕಲಾಗುವುದಿಲ್ಲ. ಆದರೆ ಇವೆರಡೂ ವಿಭಿನ್ನ ದೃಷ್ಟಿಕೋನಗಳನ್ನು ಪ್ರತಿನಿಧಿಸುತ್ತವೆಯೇ ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಏಕೆಂದರೆ ಇವೆರಡೂ ಒಂದು ಸಂಸ್ಕೃತಿಯ ಪ್ರಜ್ಞೆ ವಿಕಾಸಗೊಳ್ಳುವ ಎರಡು ವಿಭಿನ್ನ ಹಂತಗಳಲ್ಲಿ ಕಾಣಿಸಿಕೊಳ್ಳುವ ಪಾತ್ರಗಳು. ಒಂದು ಅಂತಃಪ್ರವೃತ್ತಿ (instinct) ಮೂಲವಾದ ಅಭಿವ್ಯಕ್ತಿ ಕ್ರಮದಲ್ಲಿ ವಿನ್ಯಾಸಗೊಂಡಿದ್ದರೆ, ಇನ್ನೊಂದು ವಿಚಾರ, ವಿಶ್ಲೇಷಣೆ, ಅರಿವು ಒತ್ತಾಯಿಸುವ ಅಭಿವ್ಯಕ್ತಿ ಕ್ರಮದಲ್ಲಿ ವಿನ್ಯಾಸಗೊಂಡಿದೆ. ಆದರೆ ಈ ಎರಡು ಪ್ರಜ್ಞಾ ವಿನ್ಯಾಸಗಳು ಇಂದಿಗೂ ನಮ್ಮ ಸಂಸ್ಕೃತಿಯಲ್ಲಿ ಒಟ್ಟೊಟ್ಟಿಗೆ ಜೀವಂತವಿರುವ ಮಾದರಿಗಳಾಗಿವೆ ಎಂಬುದು ಬೇರೆ ಮಾತು.

ಟಿಪ್ಪಣಿಗಳು

೧. ಕುವೆಂಪು ಮತ್ತು ಕನ್ನಡ ಕಾದಂಬರಿ, ಅಧ್ಯಯನ (ವಿಮರ್ಶಾ ಲೇಖನಗಳು)

೨. ನೆನಪಿನ ದೋಣಿಯಲ್ಲಿ, ಸಂಪುಟ ೨

೩. ಕಾನೂರು ಹೆಗ್ಗಡಿತಿ, ಪುಟ - ೫೨, ಐದನೆಯ ಮುದ್ರಣ

೪. ಮಲೆಗಳಲ್ಲಿ ಮದುಮಗಳು, ಪುಟ - ೭, ಎರಡನೆಯ ಮುದ್ರಣ

೫. ಮಲೆಗಳಲ್ಲಿ ಮದುಮಗಳು, ಪುಟ - ೨೧೭, ಎರಡನೆಯ ಮುದ್ರಣ

೬. ಮಲೆಗಳಲ್ಲಿ ಮದುಮಗಳು, ಪುಟ - ೪೭೨, ಎರಡನೆಯ ಮುದ್ರಣ

೭. ಕಾನೂರು ಹೆಗ್ಗಡಿತಿ, ಪುಟ - ೧, ಐದನೆಯ ಮುದ್ರಣ

೮. ಡಾ. ಯು.ಆರ್. ಅನಂತಮೂರ್ತಿ, ಪುಟ - ೧೬೯, 'ಪ್ರಜ್ಞೆ ಮತ್ತು ಪರಿಸರ' (ಎರಡನೇ ಮುದ್ರಣ)

❑

(ಕರ್ನಾಟಕ ಸಾಹಿತ್ಯ ಅಕಾಡೆಮಿ 'ಕುವೆಂಪು ಕಾದಂಬರಿಗಳು' ಕುರಿತು ಚಿಕ್ಕಮಗಳೂರಿನಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧ - 1989)

ಮಾಸ್ತಿ ಕಥೆಗಳು : ಒಂದು ನೋಟ

ಮಾಸ್ತಿಯವರನ್ನು ಕನ್ನಡದ ಸಣ್ಣಕತೆಗಳ ಪಿತಾಮಹ ಎಂದು ಕರೆಯುತ್ತಾರೆ. ಅವರು ಕಥೆಯಷ್ಟೇ ಅಲ್ಲ, ಕಾದಂಬರಿ, ನಾಟಕ, ಕಾವ್ಯ, ವಿಚಾರ, ವಿಮರ್ಶೆ ಇತ್ಯಾದಿ ಇತರೆ ಸಾಹಿತ್ಯ ಪ್ರಕಾರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದರೂ, ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದ್ದು ಅವರ ಒಂದು ಕಾದಂಬರಿಗಾದರೂ, ಮಾಸ್ತಿ ಆಧುನಿಕ ಕನ್ನಡ ಸಾಹಿತ್ಯಲೋಕದಲ್ಲಿ ಚಿರಸ್ಥಾಯಿಯಾದ ಸ್ಥಾನ ಪಡೆಯುವುದು ಕಥೆ ಹೇಳುವ ಕಲೆಯಲ್ಲಿ ಅವರು ಸಾಧಿಸಿರುವ ಹೆಗ್ಗಳಿಕೆಯಿಂದಲೇ. ನೀವು ಅವರ ಕಾದಂಬರಿಗಳನ್ನೇ ಓದಿ, ಕಾವ್ಯವನ್ನೇ ಓದಿ, ನಾಟಕಗಳನ್ನೇ ಓದಿ, ಅಲ್ಲಿ ಮಾಸ್ತಿ ನಮಗೆ ಕಾಣುವುದು ಕಥೆಗಾರರಾಗಿಯೇ. ಕಥೆ ಹೇಳುವುದು ಮಾಸ್ತಿಯವರ ಗೀಳೋ ಎಂಬಂತೆ, ಅವರ ಕಾದಂಬರಿ, ನಾಟಕ ಹಾಗೂ ಕಾವ್ಯ ಧನ್ಯತೆಯನ್ನು ಪಡೆದಿರುವುದು, ಅವುಗಳೊಳಗಿನ ಕಥೆಗಾರ ಮಾಸ್ತಿಯ ಕಸುಬುದಾರಿಕೆಯಿಂದಲೇ ಎಂದು ನನ್ನ ಭಾವನೆ.

ಮಾಸ್ತಿ ಕನ್ನಡದ ಮೊದಲ ಕಥೆಗಾರರೇನಲ್ಲ. ಪಂಜೆ ಮಂಗೇಶರಾಯರನ್ನು ಹೊಸಗನ್ನಡದ ಮೊದಲ ಕಥೆಗಾರರೆಂದು ಗುರುತಿಸಲಾಗುತ್ತದೆ. ಆದರೆ ಹೊಸಗನ್ನಡ ಕಥೆಗೊಂದು ತನ್ನದೇ ರೂಪ ಕೊಟ್ಟು, ಆ ಸಾಹಿತ್ಯ ಪ್ರಕಾರವನ್ನು ಒಂದು ಮಾರ್ಗವಾಗಿ ಪಳಗಿಸಿದವರು ಮಾಸ್ತಿಯೇ. ಕಾಲ ಕಳೆಯಲು ಮಾತ್ರ ಓದಬಹುದಾದಂತಹ ಕಥೆಗಳನ್ನು ಬರೆಯುವ ಇತ್ತೀಚಿನ ಒಂದಿಬ್ಬರು ಕಥೆಗಾರರನ್ನು ಬಿಟ್ಟರೆ, ಕನ್ನಡದಲ್ಲಿ ಮಾಸ್ತಿಯವರಷ್ಟು ಕಥೆಗಳನ್ನು ಬರೆದವರು ಇನ್ನೊಬ್ಬರಿಲ್ಲ. ಅವರು ತಮ್ಮ ಸುಮಾರು ೭೫ ವರ್ಷಗಳಷ್ಟು ದೀರ್ಘವಾದ ಕಥೆಗಾರಿಕೆಯ ಬಾಳುವೆಯಲ್ಲಿ ನೂರಕ್ಕೂ ಹೆಚ್ಚು ಕಥೆಗಳನ್ನು ಕನ್ನಡಿಗರಿಗೆ ಹೇಳಿದ್ದಾರೆ. ಈಗ ೭೫ ವರ್ಷಗಳಲ್ಲಿ ಕನ್ನಡ ಕಥಾ ಪ್ರಪಂಚ ಕೂಡ ಸಾಕಷ್ಟು ಬದಲಾಗಿದೆ. ಸರಿಸುಮಾರಾಗಿ ಮಾಸ್ತಿಯವರ ಜೊತೆ ಜೊತೆಗೇ ಎ.ಆರ್. ಕೃಷ್ಣಶಾಸ್ತ್ರಿ, ಕುವೆಂಪು, ಬೇಂದ್ರೆ, ಆನಂದಕಂದ, ದೇವುಡು, ನರಸಿಂಹ ಶಾಸ್ತ್ರಿ, ಸಿ.ಕೆ. ವೆಂಕಟರಾಮಯ್ಯ, ರಂ. ಶ್ರೀ. ಮುಗಳಿ; ನಂತರದಲ್ಲೇ 'ಆನಂದ', ಕೊಡಗಿನ ಗೌರಮ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮಿರ್ಜಿ ಅಣ್ಣಾರಾಯ, ಬಾಗಲೋಡಿ ದೇವರಾಯ ಮುಂತಾದವರು ಕಥೆಗಳನ್ನು ಬರೆದರು. ಇವರಲ್ಲಿ ಕೆಲವರಂತೂ ಮಾಸ್ತಿಯವರಂತೇ, ಮಾಸ್ತಿಯವರಷ್ಟೇ ಚೆನ್ನಾಗಿ ಕಥೆಗಳನ್ನು ಬರೆದರು. ಅದರ ನಂತರ ಪ್ರಗತಿಶೀಲ ಕಥೆಗಾರಿಕೆ ಬಂತು. ಅ.ನ.ಕೃ., ತ.ರಾ.ಸು., ನಿರಂಜನ, ಚದುರಂಗ,

ಶಬ್ದಯುಗ. ಕೃಷ್ಣಮೂರ್ತಿ ಪುರಾಣಿಕರ ಕಾಲ. ಜನಜಾಗೃತಿಯ ಹುಮ್ಮಸ್ಸು ಢಾಳಾಗಿ ಕಾಣುವ ಕಥೆಗಾರಿಕೆಯ ಕಾಲ ಇದು. ಇದರ ಸುತ್ತಮುತ್ತಲೇ ಎಂ.ಕೆ. ಇಂದಿರಾ, ವಾಣಿ, ತ್ರಿವೇಣಿ, ಅನುಪಮಾ ನಿರಂಜನ ಮುಂತಾದ ಆ ಕಾಲಕ್ಕೆ ಎಚ್ಚೆತ್ತ ಮಹಿಳೆಯರ ಕಥಾಲೋಕದ ಅನಾವರಣವಾಯಿತು.

ಆದರೆ ಅರವತ್ತರ ಹೊತ್ತಿಗೆ ಕನ್ನಡ ಸಾಹಿತ್ಯ ಲೋಕದ ಮೇಲೆ ಬಿರುಗಾಳಿಯಂತೆ ಎರಗಿದ ನವ್ಯ ಚಳುವಳಿ ಕೆಲಕಾಲ ಎಲ್ಲವನ್ನೂ ಬುಡಮೇಲುಗೊಳಿಸಿತು. ಈ ಕಾಲದಲ್ಲೇ ಮಾಸ್ತಿಯವರ ಕತೆಗಳನ್ನು ಸೌತೆಕಾಯಿಗೆ ಹೋಲಿಸಿ, ಇದನ್ನು ಯಾವ ಬುಟ್ಟಿಯಲ್ಲಾದರೂ ಹಾಕಿಕೊಂಡು ಹೋಗಬಹುದಾದಂತಹ ಸಾಮಾನ್ಯ ಕಾಯಿಪಲ್ಲೆ ಎಂದದ್ದು.

ಆದರೆ ಈಗ ಆ ಕಾಲವೂ ಮುಗಿದಿದೆ. ಸುಮಾರು ೨೫ ವರ್ಷಗಳ ಹಿಂದೆ ಟೀಕೆಯ ರೂಪದಲ್ಲಿ ಆಡಿದ ಈ ಮಾತುಗಳು ಈಗ ಯಾಕೋ ಒಂದರ್ಥದಲ್ಲಿ ಮೆಚ್ಚುಗೆಯ ಮಾತುಗಳಾಗಿ ಕಾಣುತ್ತಿವೆ. ಕನ್ನಡ ಸಾಹಿತ್ಯ ಚಕ್ರ ಈ ಶತಮಾನದಲ್ಲಿ ಒಂದು ಸುತ್ತನ್ನು ಪೂರ್ಣಗೊಳಿಸುತ್ತಿರುವಂತಿದೆ. ಒಂದು ಜನಾಂಗ ಯಾವುದೇ ಕಾಲದಲ್ಲಿ ಹೆಮ್ಮೆ ಪಟ್ಟುಕೊಳ್ಳಬಹುದಾದಂತಹ ಬೇಂದ್ರೆ, ಮಾಸ್ತಿ, ಕುವೆಂಪು, ಕಾರಂತರಂತಹ ಬರೆಹಗಾರರು ಕಾಲದ ಗರ್ವದಿಂದ ಮೆರೆಯುವ ಎಲ್ಲ ವಿಮರ್ಶೆಗಳನ್ನೂ ಧಿಕ್ಕರಿಸಿ ನಿಲ್ಲುವ ಕಲೆಗಾರರು ಎಂಬುದನ್ನು ಈಗ ನಾವು ಕಾಣುತ್ತಿದ್ದೇವೆ. ಈ ನಾಲ್ವರಲ್ಲಿ ಬೇಂದ್ರೆ ಅವಧೂತರಂತೆ, ಕುವೆಂಪು ಋಷಿಯಂತೆ, ಕಾರಂತರು ಮುನಿಯಂತೆ ಬದುಕನ್ನು ಎದುರಿಸಿದವರಾದರೆ ಮಾಸ್ತಿ ಸಂತರಂತೆ ಬದುಕನ್ನು ಮೌನವಾಗಿ ಗಮನಿಸಿದರು. ಹಾಗೆ ನೋಡಿದರೆ ಮಾಸ್ತಿ, ಸಾಹಿತ್ಯವನ್ನು ಬದುಕನ್ನು ಅರ್ಥ ಮಾಡಿಕೊಳ್ಳುವ ಸಾಧನವನ್ನಾಗಿ ಬಳಸಿಕೊಳ್ಳಲಿಲ್ಲ. ಬದಲಾಗಿ, ಅದನ್ನು ಒಂದು ಒಟ್ಟಂದಕ್ಕೆ ತಂದು ಬಿಂಬಿಸುವ ಮುಕುರವಾಗಿ ಬಳಸಿಕೊಂಡರು. ಮಾಸ್ತಿಯವರ ಸೋಲು, ಗೆಲುವೂ ಅಡಗಿರುವುದು ಈ ಹಂತದಲ್ಲೇ ಎಂದು ನನ್ನ ಭಾವನೆ. ಆದರೆ ಈ ಸೋಲು - ಗೆಲುವುಗಳ ವಿಮರ್ಶೆಯ ಮಾತನ್ನು ಅರ್ಥಹೀನಗೊಳಿಸಬಲ್ಲ ಕಥನಕ್ರಮವನ್ನೂ ಮಾಸ್ತಿ ಬೆಳೆಸಿ ಹೋಗಿದ್ದಾರೆ ಎಂಬುದನ್ನು ನಾವು ಮರೆಯುವ ಹಾಗಿಲ್ಲ. ಇದಕ್ಕೆ ಅತ್ಯುತ್ತಮ ಉದಾಹರಣೆ ಅವರ ಕೊನೆಯ ಕತೆ 'ಮಾಯಣ್ಣನ ಕನ್ನಡಿ'. 'ಬುದ್ಧ ಹೇಳಿದ ಸಂಗತಿ'ಯಂತಿರುವ ಈ ಕತೆಯ ಸೋಲು - ಗೆಲುವುಗಳನ್ನು ಸದ್ಯ ಚಾಲ್ತಿಯಲ್ಲಿರುವ ನಮ್ಮ ವಿಮರ್ಶೆಯ ತರ್ಕ ಪರಿಶೀಲಿಸಬಲ್ಲುದೇ ಎಂಬ ಪ್ರಶ್ನೆ ಇದ್ದೇ ಇದೆ.

೨

ಮಾಸ್ತಿಯವರಿಗೆ, ಬರೆಯಹೊರಡುವ ವೇಳೆಗಾಗಲೇ ಬದುಕೆಂದರೆ ಏನು ಎಂಬುದು ಗೊತ್ತಿತ್ತು. ಅಥವಾ ಬದುಕನ್ನು ಕುರಿತು ತಮ್ಮ ನಂಬಿಕೆಗಳಲ್ಲಿ ಅಚಲ ವಿಶ್ವಾಸವಿತ್ತು. ಉಪನಿಷತ್ತುಗಳ, ಪುರಾಣಗಳ ಹಾಗೂ ಬೌದ್ಧಧರ್ಮದ ಕಾವ್ಯಗಳು ಅವರಿಗೆ ಬದುಕನ್ನು

ಗ್ರಹಿಸಲು ಬೇಕಾದ ಒಳಸತ್ವವನ್ನು ಒದಗಿಸಿದ್ದವು. ಅದಕ್ಕೇ ಬದುಕು ಅವರಿಗೆ ಒಂದು ಹೊಚ್ಚ ಹೊಸ ಅನುಭವವಾಗದೆ, ಇತಿಹಾಸದ ಇನ್ನೊಂದು ಮಂದಹಾಸವಾಗಿ ಮಾತ್ರ ನಮ್ಮನ್ನು ಕೆಣಕುತ್ತದೆ. ಮಾಸ್ತಿ ಮೊದಲ ಕತೆ ಬರೆದಾಗ ಹೇಗಿದ್ದರೋ ಕೊನೆಯ ಕತೆ ಬರೆದಾಗಲೂ ಹಾಗೇ ಇದ್ದರು ಎಂಬುದು ಸಾಮಾಜಿಕ ಮಹತ್ವವುಳ್ಳ ಆಶ್ಚರ್ಯವಷ್ಟೇ ಅಲ್ಲ, ಸಾಹಿತ್ಯದ ಮಹತ್ವವುಳ್ಳ ಪ್ರಶ್ನೆಯೂ ಆಗಿದೆ.

ಕಳೆದ ೭೫ ವರ್ಷಗಳ ಸಾಮಾಜಿಕ ಅಲ್ಲೋಲ ಕಲ್ಲೋಲಗಳು ಅವರನ್ನು ಅಲುಗಾಡಿಸಿಯೇ ಇಲ್ಲವೇ? ಅವರ ಸಾಹಿತ್ಯದ ಒಳಹೊರಗನ್ನು ಕೊಂಚವೂ ಬದಲಾಯಿಸಲೇ ಇಲ್ಲವೇ? ನನ್ನ ಮಟ್ಟಿಗೆ ಮೊದಲ ಪ್ರಶ್ನೆಗೆ ಹೌದು ಎಂಬ, ಎರಡನೇ ಪ್ರಶ್ನೆಗೆ ಇಲ್ಲ ಎಂಬ ಉತ್ತರ ಕೊಡಬಲ್ಲೆ. ೫೦ ವರ್ಷಗಳ ಹಿಂದೆ ಕುವೆಂಪು 'ಶೂದ್ರ ತಪಸ್ವಿ' ಬರೆದಾಗ ಶಂಭೂಕನೆಂಬ ಶೂದ್ರನಿಗೆ ತಪಸ್ಸಿನ ಹಕ್ಕನ್ನು ರಾಮನ ಮೂಲಕ ಎತ್ತಿ ಹಿಡಿದಾಗ ಮಾಸ್ತಿ ಅಸಮಾಧಾನಗೊಂಡರು; ಪ್ರತಿಭಟಿಸಿದರು. ಇತ್ತೀಚೆಗೆ ಪೋಲಂಕಿ ರಾಮಮೂರ್ತಿಯವರು ಸೀತಾಯಣ ಎಂಬ ರಾಮಾಯಣದ ಹೊಸ ವ್ಯಾಖ್ಯಾನ ಬರೆದು ಸೀತೆಯ ಮೇಲಿನ ಪಾತಿವ್ರತ್ಯದ ಭಾರವನ್ನು ಇಳಿಸಲು ಪ್ರಯತ್ನಿಸಿದಾಗ ಮತ್ತೆ ಮಾಸ್ತಿ ಕ್ರುದ್ಧರಾದರು : ''ಅವನ್ಯಾವನೋ ಇಂಗ್ಲಿಷ್ ಮೇಷ್ಟ್ರಂತೆ, ತನಗನ್ನಿಸಿದ್ದನ್ನೆಲ್ಲಾ ಬರೆದು ಸೀತೆಯ ಮಾನ ತೆಗೆಯೋದಕ್ಕೆ ಹೊರಟಿದ್ದಾನಂತೆ'' ಎಂಬ ಸಂಯಮರಹಿತವಾದ ಮಾತುಗಳನ್ನಾಡಿದರು. ಆದರೆ ಈ ತರಹದ ಬಿರುಸಾದ ಅಸಮಾಧಾನ, ಪ್ರತಿಭಟನೆ ಅಥವಾ ಕ್ರುದ್ಧತೆ ಅವರ ಸಾಹಿತ್ಯವನ್ನೆಂದೂ ಪ್ರವೇಶಿಸಲೇ ಇಲ್ಲ.

ಸಾಹಿತ್ಯ ಮತ್ತು ಸಮಾಜಗಳ ಸಂಬಂಧ ಗಾಢ ವಿಶ್ಲೇಷಣೆಗೆ ಒಳಗಾಗಿರುವ ಈ ದಿನಗಳಲ್ಲಿ, ಇದೊಂದು ವಿರೋಧಾಭಾಸವಾಗಿಯೇ ಕಂಡೀತು; ಕಂಡಿದೆ. ಅದಕ್ಕೇ ಹಲವಾರು ಬಾರಿ ಮಾಸ್ತಿ ಸನಾತನಿ, ಗೊಡ್ಡು ಎಂಬೆಲ್ಲಾ ಟೀಕೆ ದುರಾಗ್ರಹಗಳಿಗೆ ಈಡಾಗಿದ್ದಾರೆ. ಆದರೆ ಸಾಹಿತ್ಯವನ್ನು ನಾವೇಕೆ ಓದುತ್ತೇವೆ ಎಂಬ ಮೂಲಭೂತ ಪ್ರಶ್ನೆ ಕೇಳಿಕೊಂಡು, ಈ ವಿರೋಧಾಭಾಸವನ್ನು ಗಮನಿಸುವಷ್ಟಕ್ಕೆ ನಿಲ್ಲದೆ, ಮಾಸ್ತಿ ಈ ವಿರೋಧಾಭಾಸವನ್ನು ಹೇಗೆ ಗೆದ್ದಿದ್ದಾರೆ ಅನ್ನುವುದರ ಅಭ್ಯಾಸ ಮಾಡಿದರೆ ಒಳಿತು ಎಂದು ನನ್ನ ಭಾವನೆ. ಸಾಹಿತ್ಯ ಇರುವುದು ಅದರಿಂದ ಕಲಿಯಬೇಕಾದ್ದನ್ನು ಕಲಿಯುವುದಕ್ಕೆ; ಕಲಿಯಬಾರದ್ದನ್ನು ಕಲಿಯಲಿಕ್ಕಲ್ಲ.

ಶ್ರೇಷ್ಠ ಸಾಹಿತ್ಯದ ಶಕ್ತಿ ಇರುವುದಾದರೂ ಎಲ್ಲಿ? ಅದರ ಗುರಿಯಾದರೂ ಯಾವುದು? ಶ್ರೇಷ್ಠ ಸಾಹಿತ್ಯದ ಶಕ್ತಿ ಇರುವುದು ಅದರ ತಾಯ್ತನದಲ್ಲಿ ಎಂದು ನನ್ನ ನಂಬಿಕೆ. ಓದುವವರೆಲ್ಲರನ್ನೂ ಅದು ತಾಯಿಯಂತೆ ಸಾಂತ್ವನಗೊಳಿಸುತ್ತದೆ. ಶ್ರೇಷ್ಠ ಸಾಹಿತ್ಯದ ಗುರಿ, ಬದುಕಿನ ಚೆಲುವಿನ ಮೂಲಕ ಅದರಲ್ಲಿ ಪ್ರೀತಿ, ವಿಶ್ವಾಸ ಹುಟ್ಟಿಸುವುದು. ದೈನಂದಿನ ಅಲ್ಲೋಲ ಕಲ್ಲೋಲಗಳನ್ನು, ಅದರ ವಿವರಗಳನ್ನು, ಆ ವಿವರಗಳಲ್ಲಿ ಹುಟ್ಟುವ ನೋವು ವಿಷಾದಗಳನ್ನು ಕಥೆಗಾರ ತಾಯಿಯಂತೆ ಮೈದಡವಿ ಮರೆಸಿ, ಈ ಅಲ್ಲೋಲ ಕಲ್ಲೋಲಗಳು, ಅದರ ವಿವರಗಳು, ಒಟ್ಟು ಬದುಕನ್ನು ಚೆಲುವಾಗಿಸಿಕೊಳ್ಳಲು ಹೇಗೆ ದುಡಿಯುತ್ತವೆ ನೋಡಿ ಎಂದು ಕಥೆಯ

ಕೊನೆಯಲ್ಲಿ ದರ್ಶನ ಕೊಡುವ ಮೂಲಕ ಮನುಷ್ಯನನ್ನು ಎತ್ತರಕ್ಕೆ ಕರೆದೊಯ್ಯುವ ಮಾರ್ಗ ಮಾಸ್ತಿಯವರದ್ದು. ಉದಾತ್ತತೆಯಲ್ಲಿರಳುವ ಪರಮೋತ್ಕೃಷ್ಟ ಸಾರವನ್ನಷ್ಟೇ ನಾವು ಏಕಾಗ್ರತೆಯಿಂದ ಹೀರಬೇಕು ಎನ್ನುವ ಜೀವನಧೋರಣೆ ಅವರ ಬದುಕು ಮತ್ತು ಬರೆಹಗಳನ್ನು ಬೆಸೆದಿದೆ. ಈ ಧೋರಣೆಯನ್ನು ಒಪ್ಪಿದವರಿಗೆ ಮಾಸ್ತಿಯವರ ಕಥೆಗಳು ಹೊಸ ಲೋಕವನ್ನೇ ತೆರೆಯುತ್ತವೆ.

೩

ಮಾಸ್ತಿಯವರ ಕಥಾಲೋಕ ಪುರಾಣಕಾಲದಿಂದ ಇಂದಿನವರೆಗೂ ಹಬ್ಬಿದೆ. ಆದರೆ ಇಲ್ಲಿ ಪುರಾಣಕಾಲ ಪ್ರಾಚೀನ ಎನ್ನಿಸುವುದಿಲ್ಲ. ಇವರ ಕಥಾಲೋಕದಲ್ಲಿ ಪ್ರವೇಶಿಸದ ಪಾತ್ರಗಳೇ ಇಲ್ಲ. ಶ್ರೀಕೃಷ್ಣನಿಂದ ಹಿಡಿದು ಬಿಳಿಗಿರಿರಂಗನ ಬೆಟ್ಟದ ಸೋಲಿಗರ ರಂಗನವರೆಗೆ ಎಲ್ಲರೂ ಇಲ್ಲಿನ ಪಾತ್ರಗಳೇ. ಅಷ್ಟೇ ಅಲ್ಲ, ಕಾಣುವ ಕಣ್ಣಿದ್ದರೆ ಸೋಲಿಗರ ಈ ರಂಗನೇ ಶ್ರೀಕೃಷ್ಣನಾಗಬಲ್ಲ, ಇವರ ಕಥೆಗಳಲ್ಲಿ. ಬೇಕಾದರೆ 'ಬಿಳಿಗಿರಿ ರಂಗ' ಕಥೆಯನ್ನು ಓದಿ ನೋಡಿ.

'ಇರುವೆಗಳ ಲೋಕ' ಎಂಬ ಕಥೆ ಇರುವೆಗಳ ಲೋಕದ ವೈಚಿತ್ರ್ಯವನ್ನು ಹೇಳುತ್ತಲೇ ಜೀವ ಜಗತ್ತಿನ ಐಕ್ಯತೆಯನ್ನೂ, ಅದನ್ನು ಒಡೆದು ಬೆಳೆಯಲೆಣಿಸುವ ಮನುಷ್ಯ ಪ್ರಯತ್ನದ ಅಸಹಾಯಕತೆಯನ್ನೂ ಸೂಕ್ಷ್ಮವಾಗಿ ಹೇಳುತ್ತದೆ. ರಾಮಾಯಣದ ದುರಂತ ಆರಂಭವಾದುದನ್ನು ದಾರ್ಶನಿಕವಾಗಿ ನೋಡಲೆಣಿಸುವ ಈ ಕಥೆ ವಸಿಷ್ಠನ ಈ ಮಾತುಗಳೊಂದಿಗೆ ಕೊನೆಗೊಳ್ಳುತ್ತದೆ : ''ಆಗಬೇಕಾದ್ದು ಆಗಿದೆ. ಆಗಬೇಕಾದ್ದು ಆಗುತ್ತದೆ. ಬೇರೆ ಮಾಡುವುದು ಹಿಂದೂ ಸಾಧ್ಯವಿಲ್ಲ; ಇಂದೂ ಸಾಧ್ಯವಿಲ್ಲ, ಮುಂದೂ ಸಾಧ್ಯವಿಲ್ಲ. ವಿಧಿಯ ಕೈಯಲ್ಲಿ ಮನುಷ್ಯ ಇರುವೆಗಿಂತ ಹೆಚ್ಚಲ್ಲ. ಮಾನವ ಲೋಕ ಇರುವೆಯ ಲೋಕ ಬೇರೆ ಅಲ್ಲ''.

ಮನುಷ್ಯನ ಅಹಂಕಾರವನ್ನು ಬೆಚ್ಚಿ ಬೀಳಿಸುವ ಈ ಥಣ್ಣನೆಯ ಮಾತುಗಳು ನಮ್ಮೊಳಗಿನ ಸಿನಿಕತನ, ಮಾಸ್ತಿ ವಿಧಿವಾದಿ ಎಂಬ ತೀರ್ಮಾನಕ್ಕೆ ದೂಡಬಹುದು. ಆದರೆ ಮಾಸ್ತಿ ಎಂತಹ ವಿಧಿವಾದಿ? ಇದಕ್ಕೆ ಉತ್ತರ ಅವರ ಇತ್ತೀಚಿನ 'ಶ್ರೀ ಕೃಷ್ಣನ ಅಂತಿಮ ದರ್ಶನ' ಎಂಬ ಕಥೆಯಲ್ಲಿದೆ. ಇಲ್ಲಿ ಶ್ರೀಕೃಷ್ಣನಿಗೂ ಸಾವು ಬಂದಿದೆ. ಅರ್ಜುನನಿಗೆ ಏನೂ ಅರ್ಥವಾಗದಾಗಿದೆ. ದೇವರ ಅವತಾರವಾಗಿರುವ ಶ್ರೀಕೃಷ್ಣ ಸಾವಿನ ಎದುರು ಅಸಹಾಯಕನೇ? ಅರ್ಜುನ ಬೇಡಿಕೊಳ್ಳುತ್ತಾನೆ : ''ಕೃಷ್ಣ ಹಾಗೆ ಮಾಡಬೇಡ. ನೀನಿಲ್ಲದೆ ನಾವು ಯಾರು ಇರುವುದು ಸಾಧ್ಯ?'' ಕೃಷ್ಣ ಸಮಾಧಾನ ಮಾಡುತ್ತಾನೆ : ''ವಿಧಿ ಅದನ್ನೂ ಯೋಚಿಸದೆ? ಲೋಕದ ಕ್ರಮ ನನಗಾಗಿ, ನಿನಗಾಗಿ ಬೇರೆ ಆದೀತೆ ತಮ್ಮ? ಅದನ್ನು ಒಪ್ಪಿಕೋ. ಅದರ ಎದುರಿಗೆ ತಲೆಬಾಗು''. ನಂತರ ಹೇಳುತ್ತಾನೆ : ''ಸೃಷ್ಟಿ ಎಲ್ಲ ದೇವರೇ. ದೇವರಲ್ಲದೆ ಬೇರೆ ಏನೂ ಇಲ್ಲ. ಇರುವುದೆಲ್ಲ ಈ ಅರ್ಥದಲ್ಲಿ ಅವನ ಅವತಾರವೇ. ಸುರ, ನರ, ಕಿನ್ನರ, ಕಿಂಪುರುಷ, ಕ್ರಿಮಿ, ಕೀಟ ಎಲ್ಲ ಬ್ರಹ್ಮ. ಬ್ರಹ್ಮ ಸೃಷ್ಟಿ ಮಾಡಿತು... ಆ ನಿಯಮಗಳಂತೆ ಸೃಷ್ಟಿ ಹೆಜ್ಜೆ ಹಾಕುತ್ತಾ ಇದೆ. ಹೆಜ್ಜೆ ಯಾವುದೇ ಬೇರೆ ಆಗೋ ಹಾಗಿಲ್ಲ''. ವಿಧಿಯನ್ನು, ಸಾವಿನೊಂದಿಗೆ ಕೊನೆಗೊಳ್ಳುವ ಮನುಷ್ಯನ

ಆ ಎಲ್ಲ ಅಸಹಾಯಕತೆಗಳ ಪ್ರತೀಕವಾಗಿ ಕಾಣುವ ಮಾಸ್ತಿ, ಸಾವಿನ ಕ್ಷಣದಲ್ಲಿ ಕೃಷ್ಣನ ಬಾಯಿಯಿಂದ ಈ ಮಾತುಗಳನ್ನು ಹೇಳಿಸುತ್ತಾರೆ : ''ತನ್ನ ಗುರಿ ಲೋಕದ ಸುಖ ಎಂದುಕೊಂಡವನು ಲೋಕದ ಸುಖವನ್ನೇ ಬಯಸುತ್ತಾನೆ, ಅದಕ್ಕಾಗಿ ದುಡಿಯುತ್ತಾನೆ. ಅದಕ್ಕಾಗಿ ತನ್ನ ಪ್ರಾಣವನ್ನು ಬೇಕಾದರೂ ಒಪ್ಪಿಸಿಬಿಡುತ್ತಾನೆ. ಈ ಸ್ಥಿತಿಯನ್ನು ಮುಟ್ಟುವುದು ಮನುಷ್ಯ ಪ್ರಾಣಿಯ ಅಪೇಕ್ಷೆ ಆಗಬೇಕು''.

ದೇವರನ್ನು ಮನುಷ್ಯನನ್ನಾಗಿ ಮಾಡಿ ತೋರಿಸಿ, ಹಾಗೇ ಮನುಷ್ಯ ಕೂಡಾ ದೇವರಾಗಬಲ್ಲ ಎಂಬ ಧ್ವನಿಯನ್ನು ಪ್ರಕಟಪಡಿಸುವ ಈ ಕಥೆಯ ಆಶಯ ಮಾಸ್ತಿಯವರ ಬಹುತೇಕ ಎಲ್ಲ ಕಥೆಗಳ ಹಿಂದೆಯೂ ಕೆಲಸ ಮಾಡಿದೆ.

'ಬೈಚೇಗೌಡ' ಎಂಬ ಕಥೆಯಲ್ಲಿ ಬ್ರಾಹ್ಮಣನೊಬ್ಬನಿಂದ ಬದುಕನ್ನೇ ಹಾಳು ಮಾಡಿಕೊಂಡ ಮುಗ್ಧ ರೈತನೊಬ್ಬ ಅದೇ ಬ್ರಾಹ್ಮಣನ ಕುಟುಂಬದ ರಕ್ಷಕನಾಗುವುದು ಇದೇ ಮನಃಸ್ಥಿತಿಯಲ್ಲೇ. ಮಾಸ್ತಿ ಇಂತಹ ಮುಗ್ಧ ರೈತ ಬೈಚೇಗೌಡನನ್ನು ಕಥೆಯ ಕೊನೆಯಾಗಿ ಬರುವ ಒಂದೇ ವಾಕ್ಯದಲ್ಲಿ ಧ್ವನಿಪೂರ್ಣವಾಗಿ ಬೀಳ್ಕೊಡುವ ರೀತಿ ಇದು : 'ಹೀಗೆಂದು ಬೈಚೇಗೌಡ **ತನ್ನಂತೆ ನಡೆದನು**'.

'ಮೊಸರಿನ ಮಂಗಮ್ಮ' ಕಥೆಯಲ್ಲಿ ಅತ್ತೆ - ಸೊಸೆಯರ ನಡುವ ಕುಟುಂಬ ಯಜಮಾನ್ಯಕ್ಕೆ ನಡೆಯುವ ಶೀತಲ ಸಮರದಲ್ಲಿ ಕೊನೆಗೆ ಅತ್ತೆ ಸೊಸೆಯರಿಬ್ಬರೂ ಈ ಸಮರದ ಕೊನೆಯನ್ನು ಊಹಿಸಿ ಭೀತರಾಗಿ ಮತ್ತೆ ಒಂದಾಗುವುದೂ; ಬುದ್ಧನಿಂದ ಸತ್ಯ ತಿಳಿಯಲು ಸಂಸಾರ ತೊರೆದು ಹೋದ 'ಸಾರಿಪುತ್ರನ ಕೊನೆಯ ದಿನಗಳು' ಕಥೆಯ ಸಾರಿಪುತ್ರ ಬುದ್ಧ ನಿರ್ವಾಣ ಹೊಂದಿದ ನಂತರ ಮತ್ತೆ ತನ್ನ ಸಂಸಾರವನ್ನು ಹುಡುಕಿಕೊಂಡು ಹೋಗಿ ಹೆಂಡತಿಯನ್ನು ಭಿಕ್ಷುಣಿಯಾಗಿಸಿಕೊಂಡು ಬೌದ್ಧ ಧರ್ಮದ ಪ್ರಸಾರಕ್ಕೆ ಹೊರಟದ್ದೂ; 'ಪಂಡಿತನ ಮರಣಶಾಸನ'ದ ಪಂಡಿತ ವಿಶಾಲಾಕ್ಷ ಪಂಡಿತ ತನ್ನ ಧಾರ್ಮಿಕ ತೀವ್ರ ಭಿನ್ನಾಭಿಪ್ರಾಯಗಳ ಹೊರತಾಗಿಯೂ ತಿರುಮಲಾರ್ಯನಿಗೆ ಅಮಾತ್ಯ ಪಟ್ಟ ಕೊಡಬೇಕೆಂದು ಚಿಕ್ಕದೇವರಾಜ ಒಡೆಯರಿಂದ ಮಾತು ಪಡೆದು ''ನನಗೆ ಮಠದಿಂದ ಆಗುವುದು ಏನು? ಈ ಜೀವ ಎತ್ತಲಿಂದ ಬಂದಿತ್ತೋ ಅತ್ತ ಹೋಗುತ್ತದೆ. ಅದರ ದಾರಿಯನ್ನು ತಿದ್ದುವುದಕ್ಕೆ ಯಾರಿಗೆ ಯೋಗ್ಯತೆ ಇದೆ?'' ಎಂದೆನ್ನುತ್ತಾ ಕೊನೆಯುಸಿರೆಳೆಯುವುದೂ; 'ವೆಂಕಟಿಗನ ಹೆಂಡತಿ' ಕಥೆಯ ಕೂಲಿಗರ ವೆಂಕಟಿಗ ದಾರಿತಪ್ಪಿದ್ದ ಹೆಂಡತಿ ಹಾಳಾಗಿ ಮತ್ತೆ ಅವನನ್ನೇ ಆಶ್ರಯಿಸಿ ಬಂದಾಗ ಮತ್ತು ತನ್ನೂರಾದ ತಿರುಪತಿಗೆ ಹಿಂದಿರುಗುವುದು ಬೇಡವೆಂದಾಗ ''ಅದೇ ದೇವರ ಇಷ್ಟ ಅಂತ ಕಾಣ್ತದೆ. ಊರಿಗೆ ಹೋದರೆ ಹೊಟ್ಟೆ ಹೊರೆಯುವ ನೆಪದಲ್ಲಿ ನನ್ನ ಅಪ್ಪನ ಬೆಟ್ಟವನ್ನು ಹತ್ತಿ ಇಳಿಯಬಹುದಾಗಿತ್ತು. ವಾರದಲ್ಲಿ ತಿಂಗಳಲ್ಲಿ ಅವನ ಮುಖತಿಲಕವನ್ನು ನೋಡಬಹುದಾಗಿತ್ತು. ಇವಳಿಗೆ ಅತ್ತ ಹೋಗುವ ಮನಸ್ಸಿಲ್ಲ. ಜೊತೆಯ ಜೀವಕ್ಕೆ ಒಲ್ಲದ್ದನ್ನು ನಾನೇಕೆ ಬೇಕು ಎನ್ನಲಿ? ದೂರದಲ್ಲೇ ಇರ್ತೇನೆ, ದೇವರೇ ಎನ್ನುತ್ತೇನೆ. ನನ್ನಪ್ಪ ಕಾಪಾಡಿಕೊಳ್ಳುತ್ತಾನೆ'' ಎಂದು ತನ್ನ ಸರಳತನದಲ್ಲೇ ಅತ್ಯುನ್ನತವಾದ ದಾರ್ಶನಿಕತೆಯನ್ನು ಮುಟ್ಟುವುದೂ - ಇದೇ ಮನಃಸ್ಥಿತಿಯಲ್ಲಿ.

ಮಾಸ್ತಿಯವರ ಕಥೆಗಳಲ್ಲಿ ಸಾಮಾನ್ಯ ಮನುಷ್ಯ, ಅತ್ಯುತ್ಕೃಷ್ಟವಾದ ಮೌಲ್ಯಗಳನ್ನು ತನ್ನದಾಗಿಸಿಕೊಂಡು ಬದುಕಿನ ಚೆಲುವನ್ನು ಏಕಾಗ್ರತೆಯಿಂದ ಹೀರತೊಡಗುವುದು ಹೀಗೆ. ಆದರೆ ಎಲ್ಲೂ ಈ ಅವಸ್ಥಾಂತರ ಅಸಹಜ ಎನ್ನಿಸುವುದಿಲ್ಲ.

ಮಾಸ್ತಿಯವರ ಕಥೆಗಾರಿಕೆಯಲ್ಲಿನ ಕಸುಬುದಾರಿಕೆ ಕಾಣುವುದು ಇಲ್ಲೇ. ಈ ಎಲ್ಲ ಕಥೆಗಳಲ್ಲಿ 'ಒಳ್ಳೆಯದು - ಕೆಟ್ಟದು', 'ಸರಿ - ತಪ್ಪು'ಗಳ ನಡುವಣ ಸಂಘರ್ಷ ತಾರಕಕ್ಕೇರಿ ರಂಪವಾಗದೆ ಇದು ಕಥೆಯೋ ನಿಜವಾದ ಬದುಕೋ ಎಂಬ ಬೆರಗನ್ನು ಉಂಟುಮಾಡುತ್ತಾ ಮಂದ್ರಸ್ಥಾಯಿಯಲ್ಲೇ ಧ್ಯಾನದಂತೆ ನಮ್ಮನ್ನು ಆವರಿಸಿಕೊಳ್ಳುತ್ತದೆ. ಮಾಸ್ತಿಯವರ ಸರಳಗನ್ನಡದ ಬೆಡಗು, ತಿಳಿಹಾಸ್ಯವೋ ಅನುಕಂಪೆಯೋ ಎಂದು ತಿಳಿಯಲಾಗದ ವಿಶಿಷ್ಟ ರೀತಿಯ ರಸಾರ್ದ್ರ ಶೈಲಿ, ದೂರ ನಿಂತೂ ಹತ್ತಿರದವರಾಗಿ ಕಥೆ ಹೇಳಬಲ್ಲ ಸಕ್ರಿಯ ನಿರ್ಲಿಪ್ತತೆ ಅವರನ್ನು ದೊಡ್ಡ ಕಲೆಗಾರರನ್ನಾಗಿ ಮಾಡಿದೆ.

'ಆಚಾರ್ಯರ ಪತ್ನಿ' ಕಥೆಯ ಕೊನೆಯ ಪ್ಯಾರಾ ಮಾಸ್ತಿಯವರ ಈ ಕಲೆಗಾರಿಕೆಯ ಒಳನೋಟವೊಂದನ್ನು ನಮಗೆ ನೀಡುತ್ತದೆ. ಪೂರ್ತಿಯಾಗಿ ಮಾಸ್ತಿಯವರ ಮನಸ್ಸಿನಲ್ಲಿ ನಡೆಯುವ ಈ ಕತೆ ಪೂರ್ಣಗೊಂಡ ನಂತರ ಬರುವ ಪ್ಯಾರಾ ಇದು, ಅದು ಹೀಗಿದೆ :

> ''ಮನಸ್ಸಿನಲ್ಲಿ ಇಷ್ಟು ಕಥೆ ನಡೆಯುವ ವೇಳೆಗೆ ನಾನು ಸ್ವಲ್ಪ ಕ್ಷುಣ್ಣನಾಗಿದ್ದೆನು. ನಾನು ಎಲ್ಲಿ ಕುಳಿತಿದ್ದೇನೆಂದು ನೋಡಿದೆನು. ಅದು ಹೊಂಡದ ಪಕ್ಕದ ಒಂದು ಅರಳಿಯ ಮರದ ಅಡಿ. ದೇವಾಲಯದ ಕಡೆ, ಹೊಂಡದ ಕಡೆ, ಊರ ಕಡೆ, ನೋಡಿದೆನು. ಮುಳುಗುವ ಯೋಚನೆಯಲ್ಲಿದ್ದ ಸೂರ್ಯನ ಬೆಳಕು ಶತಮಾನಗಳ ಚರಿತ್ರೆಯ ಮೇಲೆ, ಮೊಟ್ಟೆಗೆ ಕಾವು ಕೊಡುವ ಹಕ್ಕಿಯ ರೆಕ್ಕೆಯಂತೆ, ಕೋಟ್ಯಾಂತರ ಜೀವಗಳ ಬದುಕನ್ನು ಹೊದೆದಿರುವ ಕಡಲ ತೆರೆಯಂತೆ ಕವಿದು ತೊಳಗುತ್ತಿತ್ತು. ಯಾವುದೋ ಮೂಕ ಯಾತನೆ, ಯಾವುದೋ ಮೂಕ ಆಸೆ. ನನ್ನ ಮನಸ್ಸನ್ನು ಕಲಕಿದ್ದವು. ಒಬ್ಬ ಯತಿ ಒಬ್ಬ ಸುಮಂಗಲಿ ಒಬ್ಬ ಭಕ್ತ ಅವನ ಪತ್ನಿ ಇವರ ಮಗ; ಇವರ ಮೂರ್ತಿಗಳನ್ನು ಕಲ್ಪಿಸಿಕೊಳ್ಳುತ್ತಾ ಆ ಸ್ಥಳದಿಂದ ಕದಲಿ ಬಂದೆನು''.

ಮಾಸ್ತಿಯವರ ಲಾಂಛನದಂತೆ ಅವರ ಹಣೆಯ ಮೇಲೆ ಸದಾ ರಾರಾಜಿಸುತ್ತಿದ್ದ ಒಂಟಿ ಕೆಂಪುಗೆರೆಯ ಮೂಲಪುರುಷರಾದ ರಾಮಾನುಜಾಚಾರ್ಯರು, ತಮ್ಮ ಧಾರ್ಮಿಕ ಕೆಲಸದಲ್ಲಿ ಸಹಕರಿಸುತ್ತಿಲ್ಲ ಎಂದು ಪತ್ನಿಯನ್ನು ತೊರೆದು ಬಂದರೆಂಬ ಸಂಗತಿಯ ಹಿನ್ನೆಲೆಯಲ್ಲಿ ಆ ಹೆಣ್ಣಿನ ಮೇಲಿನ ಅನುಕಂಪದಿಂದೆಂಬಂತೆ ರಚಿತವಾದ ಈ ಕಥೆ ಇದೇನು ಕೇವಲ ಊಹೆಯೋ ಇತಿಹಾಸವೋ ಅಥವಾ ವರ್ತಮಾನವೋ ಎಂದು ಓದುಗರನ್ನು ಕಣ್ಣುಜ್ಜಿ ನೋಡಿಕೊಳ್ಳುವಂತೆ ಮಾಡುತ್ತದೆ. ಇಲ್ಲಿನ ಕಥೆಗಾರಿಕೆಯ ಪ್ರತಿಭೆ ಊಹೆಯನ್ನು ಇತಿಹಾಸದಷ್ಟು ಅಧಿಕೃತ ಮಾಡುವ, ವರ್ತಮಾನದಷ್ಟು ಪ್ರಸ್ತುತ ಮಾಡುವ ಮಾಂತ್ರಿಕತೆಯನ್ನು ಸಾಧಿಸಿಕೊಂಡಿದೆ.

ಕಿರು ಪ್ರವಾಸಕಥನದಂತೆ ಆರಂಭವಾಗುವ ಈ ಕಥೆಯಲ್ಲಿ ಪಾಳುಗುಡಿ, ಕೊಳ, ಬಿಳಿಯ ಕೊಕ್ಕರೆ ಇತ್ಯಾದಿ ವಾಸ್ತವ ಸಂಕೇತಗಳ ಮೂಲಕ ವರ್ತಮಾನ ಹಾಗೂ ಇತಿಹಾಸಗಳನ್ನು ಮಾಂತೇಜ್ ಮಾಡುವ ಮೂಲಕ ಮಾಸ್ತಿ ಸಾಧಿಸಿರುವ ಅತ್ಯುನ್ನತವಾದ ಸೃಷ್ಟಿಶೀಲತೆ, ಕಥೆಯ ಶಿಲ್ಪದ ಬಗ್ಗೆ ಆಧುನಿಕರು ಕಟ್ಟಿಕೊಂಡಿರುವ ಸಿದ್ಧಾಂತಗಳನ್ನೆಲ್ಲಾ ತನ್ನೊಂದು ಮಂದಸ್ಮಿತದಿಂದ ತಲೆಕೆಳಗು ಮಾಡಬಲ್ಲುದಾಗಿದೆ. ಕಥೆಯ ಪ್ರತಿಯೊಂದು ಗಮನದೊಂದಿಗೂ ದಟ್ಟ ಹಾಗೂ ಸಂಕೀರ್ಣವಾಗುತ್ತಾ ಹೋಗುವ ವಿಷಾದ ನಮ್ಮೆಲ್ಲಾ ವಸ್ತು ಮತ್ತು ರೂಪ, ಸಾವಯವ ಶಿಲ್ಪ - ಸಮಗ್ರೀಕರಣಗಳ ಚರ್ಚೆಯನ್ನು ಇಡಿಯಾಗಿ ಮುಂಡಾಮೋಚ ಮಾಡಿ ಕೂರಿಸಿಬಿಡುತ್ತದೆ.

ಮಾಸ್ತಿಯವರು ಇಂತಹುದೇ ಅನುಪಮ ಕಲೆಗಾರಿಕೆಯನ್ನು 'ವೆಂಕಟಶಾಮಿಯ ಪ್ರಣಯ', 'ಮಸುಮತ್ತಿ', 'ಮಂತ್ರೋದಯ' ಹಾಗೂ 'ಒಂದು ಹಳೆಯ ಕಥೆ'ಯಲ್ಲಿ ಕಾಣಬಹುದು. ಈಷೋಪನಿಷತ್ತಿನ ಉದಯವನ್ನು ಸಾರುವ 'ಮಂತ್ರೋದಯ' ಕಥೆಯಂತೂ ಇಡೀ ಈಶೋಪನಿಷತ್ತೇ ಕಥೆಯಾಗಿ ಅರಳಿದಂತೆ, ಮನುಷ್ಯ ನಿಸರ್ಗ ಹಾಗೂ ಮೃತ್ಯು ಒಂದೇ ಬಿಂದುವಿನಲ್ಲಿ ಲೀನವಾಗಿ ಮನುಷ್ಯನ ವಿಚಾರವನ್ನು ನೀರಾಗಿಸಬಲ್ಲ ಹೊಸದೊಂದು ಸತ್ಯವನ್ನು ಮಿನುಗಿಸುತ್ತದೆ.

'ಜೋಗ್ಯೋರ ಅಂಜಪ್ಪನ ಕೋಳಿ ಕತೆ', 'ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜ ವೃಕ್ಷಗಳು', 'ಬಾದಷಹನ ದಂಡನೆ' ಹಾಗೂ 'ಇಲ್ಲಿಯ ತೀರ್ಪು' ನ್ಯಾಯ ಪರಿಕಲ್ಪನೆಯ ಸೂಕ್ಷ್ಮಗಳು ಬದುಕಿನಾಳದ ಬೇರುಗಳನ್ನು ಹೇಗೆ ಅಲ್ಲಾಡಿಸಬಲ್ಲವು ಎಂಬುದನ್ನು ಒಂದೊಂದು ಹಂತದಲ್ಲಿ ಪರಿಶೀಲನ ಮಾಡುವ ಪ್ರಯತ್ನಗಳು. ಆದರೆ ಇಲ್ಲೆಲ್ಲೂ ಮಾಸ್ತಿ ತೀರ್ಪು ನೀಡುವ ಹವಣಿಕೆಯ ಯಾವುದೇ ಸೂಚನೆ ನೀಡದಷ್ಟು ಮೂರನೆಯವರಾಗಿ ನಮ್ಮ ನಿಮ್ಮಂತೆಯೇ ನಿಂತು ಮೂಕವಿಸ್ಮಿತರಾಗುತ್ತಾರೆ. ಇಲ್ಲಿ ನ್ಯಾಯದ ಲೌಕಿಕ ಹಾಗೂ ಅಲೌಕಿಕ ಮಿತಿಗಳು ನ್ಯಾಯದ ಹಿಂದಿರುವ ಅಹಂಕಾರವನ್ನೂ ನೋವನ್ನೂ ಅಣಕಿಸಿ ನಗುತ್ತವೆ.

'ಅಲೆಕ್ಸಾಂಡರನ ಗುರುದಕ್ಷಿಣೆ' ಎಂಬ ಕಥೆ ಮಾಸ್ತಿಯವರ ಜೀವನಗ್ರಹಿಕೆಯ ಕ್ರಮವನ್ನು ಇಡಿಯಾಗಿ ಸಂಕೇತಿಸುವ ಕಥೆ. ಜೈತ್ರಯಾತ್ರೆಗೆ ಹೊರಟ ಅರಿಸ್ಟಾಟಲ್‌ನ ಶಿಷ್ಯ ಅಲೆಗ್ಸಾಂಡರ್ ತನ್ನ ಪ್ರತಿಯೊಂದು ವಿಜಯದ ನಂತರವೂ ತನ್ನ ಗುರುವಿನ ವಿಚಾರ ಪ್ರಚಾರಕ್ಕೆಂದು ಗುರುದಕ್ಷಿಣೆ ರೂಪದಲ್ಲಿ ಹೊನ್ನು ಕಳಿಸುತ್ತಿರುತ್ತಾನೆ. ಆದರೆ ಒಮ್ಮೆ ಒಂದು ದೇಶದಲ್ಲಿ ಅಲೆಗ್ಸಾಂಡರಿಗೆ ಸೋತ ಜನ ಅವನನ್ನು ದೇವರೆಂದು ಓಲೈಸಿ ಅವನಲ್ಲಿ ದೈವತ್ವದ ಅಮಲೇರಿಸುತ್ತಾರೆ. ಆದರೆ ಅವನ ಜೊತೆಗೆ ತತ್ವಜ್ಞಾನದ ವಿಚಾರ ವಿಮರ್ಶೆಗೆಂದು ಅರಿಸ್ಟಾಟಲ್ ಕಳಿಸಿದ್ದ ತನ್ನ ಸೋದರ ಸೊಸೆಯ ಮಗ ಕ್ಲಿಯಾಂತೀಸ್ ಅಲೆಗ್ಸಾಂಡರನ ಈ ಸ್ವದೇವತ್ವವನ್ನು ಖಂಡಿಸುತ್ತಾನೆ. ಕೊನೆಗೆ ಅಲೆಗ್ಸಾಂಡರನಿಂದ ಕೊಲ್ಲಲ್ಪಡುತ್ತಾನೆ. ಅರಿಸ್ಟಾಟಲ್‌ಗೆ ಈ ಸುದ್ದಿ ಕಾಗದದ ಮೂಲಕ ಮುಟ್ಟುತ್ತದೆ. ಅವನ ತತ್ವಜ್ಞಾನವೇ ಕೊಲೆಯಾದಂತೆನಿಸುತ್ತದೆ. ಆಗ ಬರುವ ಕಥೆಯ ಕೊನೆಯನ್ನು ಅದರ ಗಂಭೀರ ನಿರ್ಲಿಪ್ತಿಗಾಗಿ ಗಮನಿಸಿ :

''ಅರಿಸ್ಟಾಟಲ್ ತನ್ನ ಅಳುವನ್ನು ತಡೆದುಕೊಂಡನು. 'ರಾಜನು ಇದುವರೆಗೆ ಕೊಟ್ಟ ಗುರುದಕ್ಷಿಣೆ ಒಂದು ತೆರನಾಯಿತು. ಇದು ಇನ್ನೊಂದು ತೆರ' ಎಂದನು.

ಸೊಸೆ 'ಅದನ್ನು ಹೇಗೆ ಸಮಾಧಾನವಾಗಿ ತೆಗೆದುಕೊಂಡೆಯೋ ಇದನ್ನೂ ಸಮಾಧಾನವಾಗಿ ತೆಗೆದುಕೋ' ಎಂದಳು. ಕಾಗದವನ್ನು ಮತ್ತೆ ಮಾವನ ಎದುರಲ್ಲಿಟ್ಟು ತನ್ನಷ್ಟಕ್ಕೆ ತಾನು ಅಳುವುದಕ್ಕೆ ಮನೆಯೊಳಕ್ಕೆ ಹೋದಳು''.

೪

ಇದು ಮಾಸ್ತಿಯವರ ಬದುಕು ಮತ್ತು ಕಲೆ. ಇಲ್ಲಿಗೇ ನಾನು ಈ ಪ್ರಬಂಧವನ್ನು ಮುಗಿಸಬಹುದಿತ್ತು. ಆದರೆ ಅವರ 'ಕವಿಯ ಬಾಳ ಕೊನೆಯ ದಿನಗಳು' ಕಥೆಯ ಕೊನೆಯ ಭಾಗವನ್ನು ಉಲ್ಲೇಖಿಸದೇ ಹೋದರೆ ಈ ಪ್ರಬಂಧ ಅಪೂರ್ಣ ಎನ್ನಿಸೀತು ಎಂಬ ಅಳುಕು ನನಗೆ. ಯಾಕೆಂದರೆ ಇದು ಮಾಸ್ತಿಯವರ ಎಲ್ಲ ಕಥೆಗಳ ಹಿಂದಿನ ಚೇತನದಂತಿರುವ ಅವರ ಮಾನಸಿಕ ಒಳತೋಟಿಯ ಕನ್ನಡಿಯಂತಿದೆ. ಹಾಗೂ ಇದು ಮಾಸ್ತಿ ತಮಗೆ ತಾವೇ ಅರ್ಪಿಸಿಕೊಂಡ ಶ್ರದ್ಧಾಂಜಲಿಯಂತಿದೆ :

''ತಾನು ಅನುಭವದಲ್ಲಿ ಸುಖವನ್ನು ಹುಡುಕಿದ್ದನು. ಅದು ಅಲ್ಲಿ ಸ್ವಲ್ಪ ಸಿಕ್ಕಿತ್ತು. ಆಸೆಯನ್ನು ಹಿಡಿತದಲ್ಲಿಟ್ಟು ನೀತಿಯನ್ನು ಅಪ್ಪಿದ್ದನು. ಅದು ಆಗ ಸುಖವನ್ನು ತಂದಂತೆ ಕಾಣದಿದ್ದರೂ ಆಮೇಲೆ ಸುಖಕ್ಕೂ ಹತ್ತು ಮಡಿಯ ತೃಪ್ತಿಯನ್ನು ತಂದಿತು. ಸುಖ, ಸುಖ, ತೃಪ್ತಿ. ಸುಖವನ್ನು ಮನುಷ್ಯನು ಅನುಭವದಲ್ಲಿ ಹುಡುಕಬೇಕೆ, ಬಿಡುವುದರಲ್ಲಿ ಹುಡುಕಬೇಕೆ? ಯಾವುದು ಒಳ್ಳೆಯದು? ತ್ಯಾಗವೇ, ಭೋಗವೇ? ನೇಮವೇ ಇಚ್ಛೆಯೇ? ಆಂತರಿಕ ಸಂಬಂಧವಿದೆಯೆಂದು ಪ್ರೇಯಸಿಯನ್ನು ಮಾಡಿಕೊಳ್ಳುವುದೇ, ನೀತಿಯೆಂಬ ಕಾರಣದಿಂದ ಏಕಪತ್ನೀವ್ರತನಾಗಿರುವುದೇ?

ಕವಿ ಈ ಯೋಚನೆಯನ್ನು ಮನಸ್ಸಿನಲ್ಲಿ ತಿರುವು ಹಾಕುತ್ತಾ ಸ್ವಲ್ಪ ಹೊತ್ತು ಮಲಗಿದ್ದನು. ತುಂಬ ಯೋಚನೆ ಮಾಡಿ ಮನಸ್ಸು ಸೋತಿತ್ತು. ಯಾವುದು ಸರಿ, ಯಾವುದು ಸರಿ ಎನ್ನುವ ಪ್ರಶ್ನೆ ಅದರಲ್ಲಿ ಸುರುಳಿ ಸುತ್ತುತ್ತಿತ್ತು. ಯಾವುದು ಸರಿಯೋ? ಮನುಷ್ಯನಿಗೆ ಈಗ ಇರುವ ತಿಳಿವಿಂದ ಇದೇ ಸರಿಯೆಂದು ಹೇಳುವುದು ಕಷ್ಟ. ಇನ್ನು ಸ್ವಲ್ಪ ಬೆಳಕಿದ್ದರೆ ಯಾವುದು ಸರಿಯೆಂದು ಹೇಳಬಹುದು. ಇನ್ನು ಸ್ವಲ್ಪ ಬೆಳಕು ಬೇಕು. ಹೀಗೆ ಯೋಚಿಸುತ್ತಾ ಕವಿ ಒಂದು ಪಕ್ಕಕ್ಕೆ ಹೊರಳಿದನು. ಮಂಚ ಸ್ವಲ್ಪ ಕಿರುಗುಟ್ಟಿತು. ಸೇವಕನು ಬದಿಗೆ ಬಂದನು. ಇವನು ಬಂದ ಸಪ್ಪಳದಿಂದ ಇರಬೇಕು, ಕವಿ ಕಣ್ಣೆರೆದನು. ಅವನು ಸೇವಕನನ್ನು ಕುರಿತು 'ಕಿಟಕಿ ತೆರೆ ಇನ್ನಷ್ಟು ಬೆಳಕು ಬರಲಿ' ಎಂದನು. ಸೇವಕನು ಹೋಗಿ ಕಿಟಕಿಯನ್ನು ಸ್ವಲ್ಪ ತೆರೆದು ಮರಳಿ

ಹಾಸಿಗೆಯ ಬಳಿ ಬಂದನು. ಆ ವೇಳೆಗೇ ಕವಿ ಉಸಿರು ಸೋತು ಹೋಗಿತ್ತು. ಗಂಟಲಲ್ಲಿ ಏನೋ ಕಟ್ಟಿ ಕೇಳಿದಂತಾಗಿ ಸೇವಕನು ಓಡಿ ಹೋಗಿ ಸೊಸೆ ಅಟಲಿಯನ್ನು ಕರೆದು ಬಂದನು. ಒಂದು ಕ್ಷಣ ಬಿಟ್ಟು ಅವಳೂ ಬಂದಳು. ಆ ವೇಳೆಗೇ ಕವಿಯ ಪ್ರಾಣಪಕ್ಷಿ ನಿರಾಯಾಸವಾಗಿ ದೇಹವನ್ನು ಬಿಟ್ಟು ಬೆಳಕಿನ ಕಡೆಗೆ ಹಾರಿತ್ತು.''

❑

(ಕಾರ್ಕಳದ ಭುವನೇಂದ್ರ ಕಾಲೇಜಿನವರು ಏರ್ಪಡಿಸಿದ್ದ ಮಾಸ್ತಿ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧ - 1986)

ಮಾಸ್ತಿ ಕಥೆಗಳಲ್ಲಿ ಧರ್ಮ

ಮಾಸ್ತಿ ದೇವರು ಹಾಗೂ ಧರ್ಮಗಳಲ್ಲಿ ಅಚಲ ನಂಬಿಕೆ ಉಳ್ಳವರು. ದೇವರು - ಧರ್ಮವೆಂದೊಡನೆ ಗಲಭೆ, ಗೊಂದಲ, ರಕ್ತಗಳಷ್ಟೇ ನೆನಪಾಗುವ ಇತ್ತೀಚಿನ ದಿನಗಳಲ್ಲಿ ಮಾಸ್ತಿಯವರ ಆ ಅಚಲ ನಂಬಿಕೆ ನಮ್ಮನ್ನು ಅವರ ಬಗ್ಗೆ ಒಂದು ವಾರೆಯಾದ ನಿಲುವಿನತ್ತ ದೂಡಬಹುದಾದ ಸಾಧ್ಯತೆಯೂ ಇದೆ. ಕಥೆ -ಕಾದಂಬರಿ - ಕಾವ್ಯಗಳ ಹೊರತಾಗಿ, ತಮ್ಮ ಕಾಲದ ಸಾಮಾಜಿಕ ಬದುಕಿನ ಬಗೆಗಿನ ಅವರ ಬರಹಗಳಲ್ಲಿ (ಉದಾ : 'ಜೀವನ' ಪತ್ರಿಕೆಯ ಸಂಪಾದಕೀಯಗಳು, ಆತ್ಮಚರಿತ್ರೆ 'ಭಾವ'ದ ಸಂಪುಟಗಳು ಇತ್ಯಾದಿ) ನಮ್ಮ ಈ ವಾರೆನೋಟಕ್ಕೆ ಸಮರ್ಥನೆಯಾಗಿ ಅನೇಕ ಸಾಕ್ಷ್ಯಗಳೂ ದೊರೆಯುತ್ತವೆ. ಇಂತಹ ಬರಹಗಳನ್ನು ಪರಿಶೀಲಿಸಿದ ವಿಮರ್ಶಕರೂ ಕೂಡಾ ಅಲ್ಲಿ ವ್ಯಕ್ತವಾಗುವುದು ಸಂಕುಚಿತವಾದ 'ಹಿಂದೂ ರಾಷ್ಟ್ರೀಯತೆ' ಎಂದು ಗುರುತಿಸಿದ್ದಾರೆ. *(ಎಚ್.ಎಸ್. ರಾಘವೇಂದ್ರ ರಾವ್ : ಮಾಸ್ತಿ ಮತ್ತು ಆಧುನಿಕ ಕನ್ನಡದ ವೈಚಾರಿಕತೆ : ನಿಲುವು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು)* ನಿಜಜೀವನದಲ್ಲಿ ಮಾಸ್ತಿ ಸಂಪ್ರದಾಯವಾದಿಯಾಗಿಯೇ ಬಾಳಿದವರು ಎಂದು ಅವರನ್ನು ಹತ್ತಿರದಿಂದ ಬಲ್ಲವರೂ ಹೇಳುತ್ತಾರೆ. ಹೀಗಿರುವಾಗ, ಕನ್ನಡದ ಸಣ್ಣ ಕಥೆಗಳ ಪಿತಾಮಹರೆಂದೇ ಹೆಸರಾಗಿರುವ ಮಾಸ್ತಿ, ತಾವು ಕತೆ ಬರೆಯುವಲ್ಲಿ ಇರುವ ಏಕೈಕ ಉದ್ದೇಶ ಜೀವನ ತಮಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರ ನೀಡುವುದೇ ಆಗಿದೆ ಎಂದಿರುವುದು ಕುತೂಹಲ ಹುಟ್ಟಿಸುತ್ತದೆ *(ಮುನ್ನುಡಿ : ಸಣ್ಣ ಕತೆಗಳು - ೧೪)*; ಹಾಗೇ ಬಹು ಮುಖ್ಯ ಪ್ರಶ್ನೆಯೊಂದನ್ನು ಕೂಡಾ : ಸಂಪ್ರದಾಯಬದ್ಧ ಜೀವನ ನೀಡಿದ ದರ್ಶನಗಳಿಂದ ಸ್ಫೂರ್ತವಾದ ಅವರ ಕಥೆಗಳೂ ಸಂಪ್ರದಾಯವಾದೀ ಕಥೆಗಳೇ ಆಗಿರಬೇಕಲ್ಲವೇ?

ಈ ಪ್ರಶ್ನೆಗೆ ಉತ್ತರ ಈ ಪ್ರಶ್ನೆಯಲ್ಲಿರುವ ತರ್ಕದಷ್ಟು ಸರಳವಾಗಿರಲಾರದು. ಏಕೆಂದರೆ ನಿಜ ಜೀವನದ ಪಾತಳಿಯಿಂದ ದರ್ಶನದ ಪಾತಳಿಗೆ, ದರ್ಶನದ ಪಾತಳಿಯಿಂದ ಕಥೆಗಾರಿಕೆಯ ಪಾತಳಿಗೆ ತರ್ಕದ ಮೂಲಕ ಜಿಗಿಯಲಾಗದು. ಅಥವಾ ಈ ಮೂರೂ ಪಾತಳಿಗಳಲ್ಲಿ ಕ್ರಿಯಾಶೀಲವಾಗಿರುವ ತರ್ಕಗಳೇ ಬೇರೆ ಬೇರೆ ಸ್ವರೂಪದವಾಗಿರುತ್ತವೆ. ನಿಜ ಜೀವನ ಎನ್ನುವುದು ನಿಸರ್ಗಯುಕ್ತವಾಗಿ, ತನ್ನನ್ನು ಜೈವಿಕವಾಗಿ ಇಡಿಯಾಗಿ ಸಂರಕ್ಷಿಸಿಕೊಳ್ಳುವ ಕಾಳಜಿಯ ಫಲವಾಗಿದ್ದರೆ, ದರ್ಶನ ಈ 'ತನ್ನನ್ನು ಜೈವಿಕವಾಗಿ ಇಡಿಯಾಗಿ ಸಂರಕ್ಷಿಸಿಕೊಳ್ಳುವ' ಹೋರಾಟದ

ಸೋಲು ಗೆಲುವುಗಳೆರಡರಿಂದಲೂ ಹೊರಹೊಮ್ಮುವ ಸಾಮಾನ್ಯ ಸತ್ಯವನ್ನು ಕಂಡುಕೊಳ್ಳುವ ಕಾಳಜಿಯ ಫಲವಾಗಿರುತ್ತದೆ. ಕಥೆಗಾರಿಕೆ ಈ ಎರಡೂ ಕಾಳಜಿಗಳು ಒಟ್ಟೊಟ್ಟಿಗೇ ಕ್ರಿಯಾಶೀಲ ವಾಗಿರುವುದರ ವಿಶಿಷ್ಟ ಫಲವಾಗಿರುತ್ತದೆ. ಆದರೆ ಒಂದು ಮುಖ್ಯ ವ್ಯತ್ಯಾಸವೆಂದರೆ ಮೊದಲನೇ ಎರಡು ಪ್ರಕ್ರಿಯೆಗಳು ಕಾಲ ದೇಶಗಳ ವಾಸ್ತವ ಬಂಧನಕ್ಕೆ ಬದ್ಧವಾಗಿದ್ದರೆ ಮೂರನೆಯ ಪ್ರಕ್ರಿಯೆ ಈ ವಾಸ್ತವ ಬಂಧನಗಳ ಬದ್ಧತೆಯನ್ನು ಮೀರಿ ನಡೆಯುವಂತಹದ್ದು. ಹೀಗಾಗಿ ಕಥಾಲೋಕ ಕಾಲ ದೇಶಗಳ ಹೆಣಿಗೆಯನ್ನು ಪುನರ್ರೂಪಿಸಬಯಸುವ ಮನುಷ್ಯನ ಹಂಬಲದ ಲೋಕವೂ ಹೌದು. ಮನುಷ್ಯ ಅರ್ಧ ತಾನೇನಾಗಿರುವನೋ ಅದಾಗಿದ್ದರೆ, ಇನ್ನರ್ಧ ತಾನೇನಾಗಲು ಹಂಬಲಿಸುತ್ತಿರುತ್ತಾನೋ ಅದಾಗಿರುತ್ತಾನಂತೆ. ಅಂದರೆ ಮನುಷ್ಯ, ತನ್ನ ಪೂರ್ಣತೆಯನ್ನು ಪಡೆಯುವುದು ತನ್ನ ಹಂಬಲದಲ್ಲಿ. ಹೀಗಾಗಿ ಒಬ್ಬ ಮನುಷ್ಯನ ನಿಜವಾದ ನೆಲೆ ಗೊತ್ತಾಗುವುದು ಆತನ ಹಂಬಲ ಲೋಕದಲ್ಲೇ. ವಿಶೇಷತಃ ನಮ್ಮ ಹಿಂದಿನ ತಲೆಮಾರಿನ ಲೇಖಕನೊಬ್ಬ ನಮಗೆ ಪ್ರಸ್ತುತವಾಗುವುದು ಆತನ ಹಂಬಲ ಲೋಕದ ನೆಲೆಗಳಲ್ಲೇ ಇರಬಹುದು. ಹೀಗಾಗಿ ಮಾಸ್ತಿಯವರ ಹಂಬಲ ಲೋಕವಾದ ಕಥಾ ಲೋಕದಲ್ಲೇ ಬಹುಶಃ ಅವರ ನಿಜವಾದ ನೆಲೆಗಳು ದಕ್ಕುವುದು. ಹಾಗೇ ಅವರ ದೇವರು ಮತ್ತು ಧರ್ಮಗಳ ನೆಲೆಗಳು ಕೂಡಾ.

ತಾವು ನಿಜ ಜೀವನದಲ್ಲಿ ಕಂಡ ದರ್ಶನವನ್ನು ವಿವರಿಸುವ ಚಿತ್ರ ಕೊಡುವುದೇ ಕಥೆ ಹೇಳುವುದಕ್ಕಿರುವ ಏಕೈಕ ಉದ್ದೇಶವೆನ್ನುವ ಮಾಸ್ತಿಯವರಿಗೆ, ಮೊದಲಾಗಿ ತಮ್ಮ ದರ್ಶನವನ್ನು ಇತರರಿಗೆ ವಿವರಿಸುವ ಹಂಬಲವಾದರೂ ಏಕೆ ಉಂಟಾಯಿತು? ನಮ್ಮ ಜೊತೆಯ ಜೀವದ ಬಗ್ಗೆ ಬೇರೆ ಜೀವಕ್ಕೆ ಹೇಳುವುದೂ ಒಳ್ಳೆಯ ಕೆಲಸವೆಂಬ ನಂಬಿಕೆಯೇ ಈ ಹಂಬಲಕ್ಕೆ ಪ್ರೇರಣೆ *(ಪ್ರಸ್ತಾವನೆ : ಸಣ್ಣ ಕತೆಗಳು - ೧೫)*. ಅಂದರೆ ಮಾಸ್ತಿಯವರಿಗೆ ಕಥೆ ಹೇಳುವುದು ಒಂದು ಒಳ್ಳೆಯ ಕೆಲಸ. ಒಳ್ಳೆಯ ಕೆಲಸ ಏಕೆಂದರೆ, ಜೊತೆಯ ಜೀವಕ್ಕೆ ಇನ್ನಷ್ಟು ಜೊತೆಗಳನ್ನು ಕಲ್ಪಿಸುವ ಕೆಲಸ ಅದು. ಅಂದರೆ ಮಾಸ್ತಿಯವರ ಪ್ರಕಾರ, ಕಥೆಗಾರಿಕೆಯ ಆತ್ಯಂತಿಕ ಸಾರ್ಥಕತೆ ಇರುವುದು ಜೀವ ಜಗತ್ತಿನ ಅನ್ಯೋನ್ಯತೆಯ ಮೂಲಕ ಏಕತೆಯನ್ನು ಕಲ್ಪಿಸುವಲ್ಲಿ. ಧರ್ಮದ ಮೂಲ ಪ್ರೇರಣೆಯೂ ಇದೇ ಆಗಿರುವುದರಿಂದ, ಮಾಸ್ತಿ ಕಥೆ ಬರೆಯುವುದೇ ಒಂದು ಧಾರ್ಮಿಕ ಆಚರಣೆಯಾಗಿ ಎಂದೂ ಹೇಳಬಹುದು. ಮಾಸ್ತಿ ಕಥೆಗಳಲ್ಲಿ ಧರ್ಮ ಕ್ರಿಯಾಶೀಲವಾಗುವ ಬಗೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾದ್ದು ಈ ಹಿನ್ನೆಲೆಯಲ್ಲಿ.

ಮಾಸ್ತಿ ಧರ್ಮವನ್ನು ಒಂದು ತತ್ವವಾಗಿ ಕಥಾ ಶರೀರದ ಮೂಲಕ ಸ್ವೀಕರಿಸಿರುವ ಬಗೆಯನ್ನು ಅರ್ಥ ಮಾಡಿಕೊಳ್ಳಲು ನಾವು ಅವರ 'ಶ್ರೀ ಕೃಷ್ಣನ ಅಂತಿಮ ಸಂದರ್ಶನ' ಕಥೆಯನ್ನು ನೋಡಬೇಕು. ಇಲ್ಲಿ ಧರ್ಮ ಸಂಸ್ಥಾಪನಾಚಾರ್ಯನೆನಿಸಿರುವ, ದೇವರ ಅವತಾರವೇ ಎನಿಸಿರುವ ಶ್ರೀಕೃಷ್ಣನ ವಂಶವೇ ಕೆಟ್ಟತನ ಹಾಗೂ ದುಷ್ಟ ಚಟಗಳಿಗೆ ಬಲಿಯಾಗಿ ನಾಶ ವಾಗುತ್ತಿದೆ. ಶ್ರೀ ಕೃಷ್ಣ ಇದಕ್ಕೆ ಕೇವಲ ಮೂಕಸಾಕ್ಷಿಯಾಗಿ ಸಾವನ್ನು ಎದುರು ನೋಡುತ್ತಿದ್ದಾನೆ. ಈತನನ್ನು ದೇವರೆಂದೇ ನಂಬಿದ ಅರ್ಜುನ ಇದನ್ನೆಲ್ಲಾ ನೋಡಿ ಸ್ತಂಭೀಭೂತನಾಗಿದ್ದಾನೆ;

ದುಃಖಿತನಾಗಿದ್ದಾನೆ. ''ಅವತಾರ ಪುರುಷನೇ ಹೀಗೆ ಅಸಹಾಯಕನಾಗಬಹುದೇ?'' ಎಂಬುದು ಅವನ ಪ್ರಶ್ನೆ. ಆಗ ಕೃಷ್ಣ ಹೇಳುತ್ತಾನೆ :

''ಲೋಕವನ್ನು ನಡೆಸೋ ಸಂಕಲ್ಪ ಯಾರದು? ದೇವರದೇ. ದೇವರ ಅವತಾರ ಅದನ್ನು ಪಡೆಯುತ್ತದೆಯೇ? ನಿಮ್ಮದೇ ಚರಿತ್ರೆಯಲ್ಲಿ ಏನೇನು ಅನರ್ಥ ನಡೆಯಿತು. ಇದೇ ಅವತಾರ ಏಕೆ ಸುಮ್ಮನಿತ್ತು? ಅನರ್ಥವನ್ನು ತಡೆಯದೆ ಬಿಟ್ಟಿತು? ...ದೇವರು ಅನ್ನೋದು ಏನಪ್ಪ? ಸೃಷ್ಟಿಯನ್ನು ಮಾಡಿರುವ ತತ್ವ. ಸೃಷ್ಟಿಯಲ್ಲಿ ಎಲ್ಲವನ್ನೂ ಅದರದರ ಸ್ಥಳದಲ್ಲಿ ಇರಿಸಿರುವ ತತ್ವ. ಎಲ್ಲವನ್ನೂ ಅದರದರ ದಾರಿಯಲ್ಲಿ ನಡೆಸುತ್ತಿರುವ ತತ್ವ. ಎಂದರೆ ಸುರರು, ಅಸುರರು ಇಬ್ಬರಿಗೂ ದೊರೆ. ಇಬ್ಬರನ್ನೂ ನಡೆಸುವ ತತ್ವ ನಾನು ಅಂತ ಇಲ್ಲಿ ಕುಳಿತಿರುವ ನಾನು ಇದು ಆಗೋದು ಸಾಧ್ಯವೇ ಅಪ್ಪಾ? ಸರ್ವವನ್ನೂ ನಡೆಸುತ್ತಿರುವುದು ದೇವರು. ಅವನು ಸರ್ವದಲ್ಲಿಯೂ ಅಂತರ್ಯಾಮಿಯಾಗಿದ್ದಾನೆ. ಇರುತ್ತಾ ಈ ಎಲ್ಲರಲ್ಲಿ ಒಂದಾಗಿರುವ ದೈವದಿಂದ ಪ್ರತ್ಯೇಕವಾದ ಒಂದು ತತ್ವ ಒಟ್ಟು ದೇವರ ಸ್ಥಾನವನ್ನು ಹಿಡಿಯುವುದು ಸಾಧ್ಯವಿಲ್ಲ. ಏಕೆ? ಇದರದೂ ಒಂದು ಆಟ ಇದೆ. ಇದು ಆ ಆಟವನ್ನು ಆಡಬೇಕು. ಎಲ್ಲವನ್ನೂ ನಡೆಸುವ ದೇವರೂ ಆಗಿ, ಆಟವನ್ನು ಆಡುತ್ತಿರುವ ನಾನೂ ಆಗಿ ನಡೆಯುವುದು ದೇವರಿಗೆ ಸಾಧ್ಯ. ನನಗೆ ಅಲ್ಲ. ಈ ತೊಡಕು, ಅವತಾರಗಳ ಕಲ್ಪನೆಯಲ್ಲಿ ಸೇರಿಕೊಂಡಿದೆ. ಮನುಷ್ಯನ ಬುದ್ಧಿಗೆ ಇದನ್ನು ಬಿಡಿಸುವ ಶಕ್ತಿ ಇಲ್ಲ. ದೇವರು ಒಂದೇ ಆಗಿರುತ್ತಾನೆ. ಬೇರೆ ಬೇರೆಯಾದ ಕೋಟಿ ಕೋಟಿಯಾಗಿಯೂ ನಡೆಯುವ ಈ ಕ್ರಮ ಮನಸ್ಸನ್ನು ಸೋಕಬಹುದು. ಆದರೆ ವಿವರವಾಗಿ ತಿಳಿಯಲು ಬರುವುದಿಲ್ಲ''.

ಅರ್ಜುನನ ಪ್ರಶ್ನೆ : ''ಹೀಗೆಂದರೆ ಒಂದೊಂದು ಜೀವದ ಜೀವ ತನ್ನ ದಾರಿಯನ್ನು ಹೇಗೆ ಕಾಣಬೇಕು?''

ಕೃಷ್ಣ ಹೇಳುತ್ತಾನೆ :

''ಅದು ಪ್ರಶ್ನೆಯೇ ಅಲ್ಲ. ನೀ ಆಗಲಿ, ನಾ ಆಗಲಿ, ಯಾರೇ ಆಗಲಿ, ಯಾವುದೇ ಹೊತ್ತಿನಲ್ಲಿ, ಯಾವುದೇ ಸ್ಥಳದಲ್ಲಿ ಯಾವುದೇ ಸನ್ನಿವೇಶದಲ್ಲಿ ನಿಂತಿದ್ದೇವೆ. ಆಗ ಅಲ್ಲಿ ನನಗೆ ಸರಿ ಎಂದು ಕಂಡ ರೀತಿ ನಡೆಯಬೇಕು. ಬಹು ವೇಳೆ ಇದು ಸ್ಪಷ್ಟವಾಗಿರುತ್ತದೆ. ಅಷ್ಟು ಸ್ಪಷ್ಟವಲ್ಲ ಅನ್ನೋ ಕೆಲವು ವೇಳೆ ಉಂಟು. ಆಗ ಸ್ವಲ್ಪ ಯೋಚನೆ ಮಾಡಿದರೆ ತಿಳಿಯುತ್ತೆ. ಇನ್ನಷ್ಟು ಯೋಚನೆ ಮಾಡಿದವನಿಗೆ ಸ್ಪಷ್ಟವಾಗಿ ಕಾಣುತ್ತೆ. ತನ್ನ ಸುಖ ಯಾವುದು ಅಂತ ಯೋಚನೆ ಮಾಡಿದ ಮನುಷ್ಯ ದಾರಿ ತಪ್ಪುತ್ತಾನೆ. ಸಮುದಾಯದ

ಸುಖ ಯಾವುದು ಅಂತ ಯೋಚನೆ ಮಾಡಿದ: ಸರಿಯಾಗಿ ನಡೆಯುತ್ತಾನೆ. ಆ ಸಮುದಾಯ ಎಷ್ಟು ದೊಡ್ಡದಾದರೆ ಆ ನಡತೆ ಅಷ್ಟು ಒಳ್ಳೆಯದಾಗುತ್ತೆ. ತನ್ನ ಗುರಿ ಲೋಕದ ಸುಖ ಎಂದುಕೊಂಡವನು ಲೋಕದ ಸುಖವನ್ನೇ ಬಯಸುತ್ತಾನೆ. ಅದಕ್ಕಾಗಿ ದುಡಿಯುತ್ತಾನೆ. ಅದಕ್ಕಾಗಿ ತನ್ನ ಪ್ರಾಣವನ್ನು ಬೇಕಾದರೂ ಒಪ್ಪಿಸಿಬಿಡುತ್ತಾನೆ. ಈ ಸ್ಥಿತಿಯನ್ನು ಮುಟ್ಟುವುದು ಮನುಷ್ಯ ಪ್ರಾಣಿಯ ಅಪೇಕ್ಷೆ ಆಗಬೇಕು''.

ಹೀಗೆ ದೇವರು, ದೇವರ ಅವತಾರ ಹಾಗೂ ಧರ್ಮಗಳನ್ನು ಆಧ್ಯಾತ್ಮಿಕ ಪರಿಭಾಷೆಯಿಂದ ಜನಸಾಮಾನ್ಯರ ಭಾಷೆಗೆ ತಂದಿರಿಸುವ ಮೂಲಕ ಮಾಸ್ತಿ ಆಧ್ಯಾತ್ಮವನ್ನು ಸಾಮಾಜೀಕರಿಸುವ ಪ್ರಯತ್ನ ಮಾಡುತ್ತಾರೆ. ಭಾಷೆ ಎಂದರೆ ಇಲ್ಲಿ ಬರೀ ಭಾಷೆಯಲ್ಲ; ಕಥೆಯ ಭಾಷೆ; ಕಥೆಯ ಒಟ್ಟಾರೆ ವ್ಯಕ್ತಿತ್ವ : ಇಲ್ಲಿ ಶ್ರೀಕೃಷ್ಣ, ರುಕ್ಮಿಣಿ, ಸತ್ಯಭಾಮೆ, ಬಲರಾಮ, ಯುಧಿಷ್ಠಿರ, ವ್ಯಾಸ ಎಲ್ಲರೂ ನಮ್ಮ ಮಧ್ಯೆ ಬಾಳುವೆ ಮಾಡುತ್ತಿರಬಹುದಾದ ಮನುಷ್ಯರಾಗುತ್ತಾರೆ. ಹಾಗೆನ್ನಿಸಲು ಕಾರಣ ಕಥೆ ಕಟ್ಟಿಕೊಡುವ ವಾಸ್ತವವಾದಿ ವಿವರಗಳು. ಕೃಷ್ಣನನ್ನು ಕಾಣಲು ಅರ್ಜುನ ಹಸ್ತಿನಾವತಿಯಿಂದ ದ್ವಾರಕೆಗೆ ರಥ ನಿಧಾನ ಎಂದು ಕುದುರೆಯ ಮೇಲೆ ಹೊರಟದ್ದು, ಆ ನಗರಗಳಿಗಿರುವ ದೂರ, ಆ ಪ್ರಯಾಣಕ್ಕೆ ಹಿಡಿದ ದಿನಗಳು, ದ್ವಾರಕೆಯಲ್ಲಿ ಸೇವಕರನ್ನು ವಿಚಾರಿಸಿ ಕೃಷ್ಣ ಈಗ ಎಲ್ಲಿದ್ದಾನೆ ಎಂದು ತಿಳಿಯುವುದು, ಕೃಷ್ಣನನ್ನು ಕಾಣಲು ಅರ್ಜುನ ಬಂದಾಗ ಆಗಿದ್ದ ಹೊತ್ತು, ಅಲ್ಲಿ ಕೃಷ್ಣನ ಊಟಕ್ಕಾಗಿ ರುಕ್ಮಿಣಿ ಮಾಡಿದ್ದ ಋತ್ತಿಯ ಏರ್ಪಾಡು, ಅವರಿಬ್ಬರ ಊಟಕ್ಕಾಗಿ ಅಲ್ಲಿ ನಡೆದ ಸಿದ್ಧತೆ, ಯುಧಿಷ್ಠಿರನಿಗೆ ವಿಷಯ ತಿಳಿಸಲು ಬೇಹನ್ನು ಅಟ್ಟಲು ನಿರ್ಧರಿಸುವುದು, ರುಕ್ಮಿಣಿ ಹಾಗೂ ಕೃಷ್ಣನ ಇತರ ಸತಿಯರನ್ನೂ, ಬಲರಾಮನನ್ನೂ ಅರ್ಜುನ ಭೇಟಿ ಮಾಡಿ ಮಾತಾಡಿಸುವುದು, ಆ ಮಾತುಕತೆಯ ವಿವರ, ಆ ರಾತ್ರಿ ಅರ್ಜುನ ತಂಗಿದ ಭವನದ ಹೆಸರು, ಇತ್ಯಾದಿ ವಾಸ್ತವವಾದೀ ಮಾಹಿತಿಗಳಿಂದ ವಿನ್ಯಾಸಗೊಂಡ ಕಥೆಗಾರಿಕೆಯ ಮೂಲಕ ಮಾಸ್ತಿ ಒಂದು ಪೌರಾಣಿಕ ಕಲ್ಪನೆಯನ್ನು ಒಂದು ಸಾಮಾಜಿಕ ಘಟನೆಯನ್ನಾಗಿ ಪರಿವರ್ತಿಸಿಬಿಡುತ್ತಾರೆ. ಮಾಸ್ತಿಯವರಿಗೆ ಆಧ್ಯಾತ್ಮ ಆತ್ಮಶಾಸ್ತ್ರ ಮಾತ್ರವಲ್ಲ, ಸಮಾಜಶಾಸ್ತ್ರವೂ ಹೌದು ಎಂಬುದನ್ನು ಕಥೆ ಇಡಿಯಾಗಿ ಧ್ವನಿಸುತ್ತದೆ. ಇಲ್ಲಿ ಗಮನಿಸಬೇಕಾದದ್ದು, ಕಥೆ ಧರ್ಮದ ಆಧ್ಯಾತ್ಮಿಕ ಕಳೆಯನ್ನು ಕಳೆದಿಲ್ಲ. ಆದರೂ ಕಥೆ ಆಧ್ಯಾತ್ಮಿಕ ಕಥೆ ಅನ್ನಿಸುವುದಿಲ್ಲ.

ಹೀಗೆ ಧರ್ಮದ ಆಧ್ಯಾತ್ಮಿಕ ಕಳೆಯನ್ನು ಕಳೆಯದೆಯೇ ಧರ್ಮವನ್ನು ವಾಸ್ತವಗೊಳಿಸುವ ಮಾಸ್ತಿಯವರ ಇನ್ನೆರಡು ರೀತಿಯ ಪ್ರಯತ್ನಗಳನ್ನು ನಾವು ಅವರ 'ಸಾರಿಪುತ್ರನ ಕಡೆಯ ದಿನಗಳು' ಹಾಗೂ 'ಮಂತ್ರೋದಯ' ಕಥೆಗಳಲ್ಲಿ ನೋಡಬಹುದು.

ಒಂದು ಧರ್ಮದ ಅವನತಿ ಮತ್ತು ಮತ್ತೊಂದು ಧರ್ಮದ ಉದಯ ಕಾಲಗಳ ಸಂದರ್ಭವನ್ನು ಚಿತ್ರಿಸುವ 'ಸಾರಿಪುತ್ರನ ಕಡೆಯ ದಿನಗಳು' ಒಂದು ಧರ್ಮದ ಅವನತಿಯೇ ಮತ್ತೊಂದು ಧರ್ಮದ ಉದಯಕ್ಕೆ ಕಾರಣವಾಗುತ್ತದೆ ಎಂಬುದನ್ನು ಸೂಚಿಸುತ್ತದೆ. ಹಾಗೆಯೇ

ಇರುವುದೊಂದೇ ಧರ್ಮ, ಅದು ಕಾಲದ ಕಾರ್ಖಾನೆಯಲ್ಲಿ recycle ಆಗುತ್ತಿರುತ್ತದೆ ಎಂಬುದನ್ನು ಹೇಳುತ್ತದೆ. ವೈದಿಕ ಧರ್ಮದಲ್ಲಿ ಬೆಳೆದ ನರಸಿಂಹ ಶರ್ಮ ಬೌದ್ಧ ಧರ್ಮದ ಅನುಯಾಯಿಯಾಗಿ ಸಾರಿಪುತ್ರನಾದುದು ವೈದಿಕ ಧರ್ಮ ಅವನ ಕಾಲಕ್ಕಾಗಲೇ ಬರೀ ಪಾಂಡಿತ್ಯವಾಗಿ ಜಡಗೊಂಡಿದರಿಂದ. ಆತ ಬೌದ್ಧ ಧರ್ಮಕ್ಕೆ ಬಂದಾಗ ಗೊತ್ತಾಗುತ್ತದೆ, ವೇದ ಧರ್ಮ ಬುದ್ಧ ಗುರುವಿನ ಮೂಲಕ ತನ್ನ ಕಲ್ಮಶಗಳನ್ನೆಲ್ಲಾ ತೊಳೆದುಕೊಂಡು ಹೊಸ ಜೀವ ಪಡೆದಿದೆ ಎಂದು. ಕಥೆಯಲ್ಲಿ ಬರುವ ಸಾರಿಪುತ್ರ ಹಾಗೂ ಬುದ್ಧನ ನಡುವಣ ಈ ಸಂಭಾಷಣೆಯನ್ನು ಗಮನಿಸಿ :

''ತಾವು ದೇವರ ಒಂಭತ್ತನೆಯ ಅವತಾರವೇ? ನನಗೆ ತಿಳಿಸಬೇಕು''

''ನೀನು ಬ್ರಾಹ್ಮಣ ಕುಲದಲ್ಲಿ ಜನಿಸಿದವನು. ನಿನಗೆ ಇನ್ನೂ ಈ ರೀತಿಯ ನಂಬುಗೆ ಹೋಗಲಿಲ್ಲ''

''ಮೊದಲು ಸ್ವಲ್ಪ ಅಸ್ಥಿರವಾಗಿತ್ತು. ನಿಮ್ಮನ್ನು ನೋಡಿದ ಮೇಲೆ ಸ್ಥಿರವಾಗುತ್ತ ಬಂದಿದೆ''

''ದೇವರು ಎನ್ನದಿದ್ದರೆ ನಿಮಗೆ ತೃಪ್ತಿಯಿಲ್ಲವೋ?''

''ಇಲ್ಲ''

''ಹಾಗಾದರೆ ನಿನಗೊಬ್ಬ ದೇವರು ಬೇಕು''

''ಹೌದು''

''ನನ್ನನ್ನು ದೇವರೆಂದೆಣಿಸಿ ಪೂಜಿಸುವುದು ಸಾಧ್ಯವೋ?''

''ಸಾಧ್ಯ''

''ಹಾಗಾದರೆ ಪೂಜಿಸು''

''ನಾನು ಧನ್ಯ''

ದೈವಶಾಸ್ತ್ರವನ್ನು ಮನಃಶಾಸ್ತ್ರವನ್ನಾಗಿ ಪರಿವರ್ತಿಸಿ ನೋಡುವ ಈ ಸಂಭಾಷಣೆ ವೈದಿಕ ಹಾಗೂ ಬೌದ್ಧ ಧರ್ಮಗಳ ನಡುವಣ ಸಂಭಾಷಣೆಯೂ ಆಗಿ ಪರಿವರ್ತಿತವಾಗಿದೆ. ಈ ಪರಿವರ್ತನ ಶೀಲತೆಯ ಅರಿವೇ ಇಡೀ ಕಥೆಯನ್ನು ಕಟ್ಟಿರುವುದು. ಬೌದ್ಧನಾದ ಸಾರಿಪುತ್ರ ಜಡಗೊಂಡದ್ದೆಂದು ತಾನು ಕಂಡುಕೊಂಡ ವೈದಿಕ ಧರ್ಮಕ್ಕೇ ಅಂಟಿಕೊಂಡಿರುವ ತನ್ನ ಸಂಸಾರವನ್ನು ನೋಡಲು ಹೋಗುವ ಪ್ರೇರಣೆಯಾಗುವುದೂ, ನಂತರ ತನ್ನ ಸಂಸಾರವನ್ನು ಕೂಡಿಕೊಂಡು ಬೌದ್ಧ ಧರ್ಮದ ಪ್ರಚಾರಕ್ಕೆ ಹೊರಡುವುದೂ ಇದೇ ಪರಿವರ್ತನಶೀಲತೆಯ ಅರಿವಿನಿಂದ. ಆದರೆ ಈ ಪರಿವರ್ತನಶೀಲತೆಯ ಅರಿವೂ ಮಸಕಾಗುವ ದಿನ ದೂರವಿಲ್ಲ ಎಂಬುದರ ಸೂಚನೆಯೂ ಈ ಕಥೆಯ ಕೊನೆಯಲ್ಲಿ ಬಂದು ಕಥೆ ಎಲ್ಲಿಂದ ಹೊರಟಿತ್ತೋ ಅಲ್ಲಿಗೇ ಬಂದು ಸೇರಿ ತನ್ನ ಪೂರ್ಣತೆಯನ್ನು ಗಳಿಸಿಕೊಳ್ಳುತ್ತದೆ : ಸಾರಿಪುತ್ರ ತನ್ನ ಸಂಸಾರವನ್ನು ಕೂಡಿಕೊಂಡು ಬೌದ್ಧ ಧರ್ಮದ ಪ್ರಚಾರಕ್ಕೆಂದು ಹೊರಟಿದ್ದಾದರೂ ಎಲ್ಲಿಗೆ? ಪುಳಿಂದ ರಾಜನು ಅಜಂತಾದ ಬಳಿ

ಐದು ನೂರು ಜನ ಶ್ರಮಣರನ್ನು ಸಾಕಲು ಕಟ್ಟಿಸಲು ಉದೇಶಿಸಿದ್ದ ವಿಹಾರಕ್ಕೆ; ಅದರ ಉಸ್ತುವಾರಿ ನೋಡಿಕೊಳ್ಳಲು... ಕಥೆ ಮತ್ತು ಧರ್ಮ ಒಟ್ಟೊಟ್ಟಿಗೇ ಒಂದು ಸುತ್ತು ಮುಗಿಸಿ ಕಾಲದ ಕಾರ್ಖಾನೆಯಲ್ಲಿ recyclingಗೆ ಸಿದ್ಧವಾಗುತ್ತಿವೆ... ಮಾಸ್ತಿ ಈ ವಿನ್ಯಾಸದ ಮೂಲಕ ಹೇಳುವುದೇನು? ಧರ್ಮ ಮತ್ತು ಕಥೆ ಈ ಎರಡೂ ಕಾಲವಿನ್ಯಾಸಗಳಾಗಿ ಅಭಿನ್ನ ಎಂದೇ?

ಹಾಗೇ ಅನ್ನಿಸುತ್ತದೆ 'ಮಂತ್ರೋದಯ' ಕಥೆ ಓದಿದಾಗ. ಇಲ್ಲಿ ಬರುವ ಧರ್ಮ ಸಂಬಂಧಿ ಸಂವಾದಗಳನ್ನಷ್ಟೇ ನೋಡಿದಾಗ ಕಥೆಯೇ ಅಲ್ಲ ಅನ್ನಿಸುವ ಇದು ಕಥೆಯಾಗುವುದು ಧರ್ಮವನ್ನು ಇಲ್ಲಿ ಕಾಲವಿನ್ಯಾಸವನ್ನಾಗಿ ಪ್ರಸ್ತುತಪಡಿಸುವ ಮಾಸ್ತಿಯವರ ಸೃಜನಶೀಲತೆಯಲ್ಲಿ. ಇದು ಧರ್ಮದ ಸೃಜನಶೀಲತೆಯೂ ಹೌದು. ''ಲೋಕದ ಕರ್ಮ ಮಾಡಿಕೊಂಡು ನೂರು ವರ್ಷ ಬಾಳು'' ಎಂಬ ತಂದೆಯ ಅಪ್ಪಣೆಯನ್ನು ವಾಮದೇವ ದ್ವೈಪಾಯನ ಆರುಣೇಯ ಮಹರ್ಷಿ ಆಶೀರ್ವಾದವನ್ನಾಗಿ ಮಾರ್ಪಡಿಸಿಕೊಳ್ಳುವುದು ನೂರು ವರ್ಷಗಳ ಆ ಕಾಲವನ್ನು ಕರ್ಮವನ್ನಾಗಿ ವಿನ್ಯಾಸಗೊಳಿಸಿ ಧರ್ಮವನ್ನು ಕಂಡುಕೊಳ್ಳುವ ಮೂಲಕ. ಆತನಿಗೆ ಕರ್ಮವೇ ಕಾಲದ ಅತ್ಯುತ್ಕೃಷ್ಟ ವಿನ್ಯಾಸ; ಆದುದರಿಂದ ಅದೇ ಧರ್ಮ. ತಮ್ಮದೊಂದು ಉಪನಿಷತ್ತು ಬೇಡವೇ ಎಂದು ಯಾರೋ ಕೇಳಿದಾಗ 'ಮಾನವನ ಉಪನಿಷತ್ತು ಮಾತಿನಲ್ಲಿದೆ, ಈಶನ ಉಪನಿಷತ್ತು ಲೋಕದಲ್ಲಿದೆ' ಎನ್ನುವ ಮಹರ್ಷಿ 'ಇದೇ ನನ್ನ ಉಪನಿಷತ್ತು' ಎಂದು ತಾನು ಮೈ - ಮನಸ್ಸುಗಳನ್ನು ಏಕತ್ರಗೊಳಿಸಿ ಬೆಳೆಸಿದ ನಂದನವನವನ್ನು ತೋರಿಸುತ್ತಾನೆ. ಜೀವನ ಪೂರ್ತಿ ಪಾಠ ಕೇಳದೆ, ಚರ್ಚೆ ಮಾಡದೆ 'ದಿನ ದಿನದ ಕರ್ಮಚಕ್ರವನ್ನು ಮರಳಿ ಸುತ್ತು'ವುದರಲ್ಲೇ ತಾನು ಕಂಡುಕೊಂಡ ಬದುಕಿನ ಸತ್ಯಗಳನ್ನು (ಇವೇ ಮುಂದೆ ಸಂಗ್ರಹಗೊಂಡು ಈಶೋಪನಿಷತ್ತು ರಚಿತವಾಗುವುದು) ಮಹರ್ಷಿ ತನ್ನ ಇಚ್ಛಾ ಮರಣದ ದಿನ ಸಮೀಪದವರ ಪ್ರಾರ್ಥನೆಯ ಮೇರೆಗೆ ನಿರೂಪಿಸುತ್ತಾನೆ :

> ''ಎಲ್ಲವೂ ಒಂದೇ ಆತ್ಮ. ಇದನ್ನು ಅಭ್ಯಾಸ ಮಾಡು. ಆಗ ದುಷ್ಟವೆನ್ನುವುದರ ವಿಷಯದಲ್ಲಿ ಕನಿಕರವೇ ಮೂಡುತ್ತದೆ; ಬೇಸರ ಮೂಡುವುದಿಲ್ಲ. ನಿನ್ನ ಕಾಲು ಕೆಸರಾದಾಗ ಕಾಲನ್ನು ನೋಯಿಸದೆ ಕೆಸರನ್ನು ತೊಳೆಯುತ್ತೀಯೆ. ಈ ಎಚ್ಚರದ ಕಾರಣ ಕಾಲು ನೀನೇ, ಬೇರೆ ಅಲ್ಲ ಎಂಬುದರ ಅರಿವು. ಎಲ್ಲ ಜೀವದ ವಿಷಯದಲ್ಲಿ ಇದು ನಾನೇ ಎಂಬ ಭಾವ ಇದೇ ತಾಳ್ಮೆಯನ್ನು ತರುತ್ತದೆ''.
>
> ''ಎಲ್ಲವೂ ನಾನೇ ಅನ್ನುವಾಗ ಸ್ವಾರ್ಥವೇ ಬೆಳೆದು ಪರಹಿತ ಮರೆಯಬಹುದಲ್ಲವೇ?''
>
> ''ಎಲ್ಲವೂ ನಾನೇ ಎನ್ನುವುದು ಚರ್ಚೆ ಮಾತ್ರ ಆದಾಗ ಹೀಗಾಗುವುದು ಸಾಧ್ಯ. ಅನುಭವವಾದಾಗ ಸಾಧ್ಯವಿಲ್ಲ. ಕಾಲನ್ನು ಜಿಗುಟಿ ಕೈ, ಕೈಯನ್ನು ಕಚ್ಚಿ ಬಾಯಿ ಯಾವ ಸುಖವನ್ನೂ ಪಡೆಯುವುದಿಲ್ಲ. ಕಾಲಿಗೆ ಪೆಟ್ಟಾದಾಗ ಅದನ್ನು ಕೈ ಸವರುತ್ತದೆ. ಕೈ ಸುಟ್ಟಾಗ ಬಾಯಿ ಅದನ್ನು

ಊದುತ್ತದೆ. ಒಂದು ಎಂದು ಬಾಯಲ್ಲಿ ಹೇಳುವುದಲ್ಲ, ಒಂದು ಎಂದು ಬಾಳುವುದು ಗುರಿ. ಹೀಗೆ ಬಾಳುವ ಜೀವಕ್ಕೆ ಮೋಹ ಮಾತ್ರ ಅಳಿಯುವುದಿಲ್ಲ. ಶೋಕವೂ ಇಲ್ಲವಾಗುತ್ತದೆ''.

ಮೋಹ ಅಳಿಯುವ, ಶೋಕ ಇಲ್ಲವಾಗುವ - ಧರ್ಮಸಾಧನೆಯ ಇಂತಹ ಮಾತುಗಳು ಕರ್ಮಸಾಕ್ಷ್ಯದಲ್ಲಿ ಮಾತ್ರ ಸತ್ಯವೆನ್ನಿಸಬಲ್ಲವು. ಹಾಗೆ ನೋಡಿದರೆ, ಮಾಸ್ತಿಯವರ ಎಲ್ಲ ಕಥೆಗಳಲ್ಲಿ ಧರ್ಮ ಪ್ರಕಟವಾಗುವುದು ಕರ್ಮಸಾಕ್ಷ್ಯದಲ್ಲೇ ಎಂಬುದನ್ನು ನಾವು ಗಮನಿಸಬೇಕು. ಕರ್ಮಸಾಕ್ಷ್ಯವಿಲ್ಲದ ಧರ್ಮ ಅಪೂರ್ಣ, ಪಾರ್ಶ್ವವಾಯು ಪೀಡಿತವಾಗಬಲ್ಲುದು ಎಂಬುದನ್ನು ಮಾಸ್ತಿಯವರು ಬಲ್ಲರು. 'ಒಂದು ಹಳೆಯ ಕತೆ' ಇದಕ್ಕೆ ಒಂದು ಸುಂದರ ಉದಾಹರಣೆ. ಸುಂದರ ಏಕೆಂದರೆ ಇಲ್ಲಿ ಧರ್ಮದ ಸೌಂದರ್ಯವೇ ಕಥೆಯ ಸೌಂದರ್ಯವೂ ಆಗಿ ಮೂರ್ತೀಭವಿಸಿದೆ. ಎಲ್ಲ ಮೋಹಗಳ ತಾಯಿಮೋಹವೆನಿಸಿರುವ ಗಂಡು ಹೆಣ್ಣುಗಳ ಮೋಹವನ್ನು ಅದರೆಲ್ಲಾ ಭಾವ ಸೂಕ್ಷ್ಮಗಳೊಂದಿಗೆ ಪರಿಶೀಲಿಸುವ ಈ ಕಥೆ, ಮನುಷ್ಯ ನಿರ್ಮೋಹಿಯಾಗಲು, ಶಾಂತನಾಗಲು ಸಾಧ್ಯವಾಗುವುದು ಮೋಹವನ್ನು ಮಾಯೆಯೆಂದು ನಿರಾಕರಿಸುವುದರಿಂದ ಅಲ್ಲ, ಅದನ್ನು ಕರ್ಮವಾಗಿ ಅನುಭವಿಸಿ ಅರಿಯುವುದರಿಂದ ಎಂಬುದನ್ನು ತನ್ನೆಲ್ಲಾ ಮೋಹಕತೆಯಿಂದಲೇ ಹೇಳುತ್ತವೆ. ಸ್ತ್ರೀರೂಪದ ಆಕರ್ಷಣೆಯಿಂದ ಯಾರೂ ಹೊರತಲ್ಲ ಎಂಬ ವ್ಯಾಸ ವಾಕ್ಯವನ್ನು, ಇದರಿಂದ ಸಂನ್ಯಾಸಿ ಮಾತ್ರ ಹೊರತು ಎಂದು ತಿದ್ದಿಸಿದ ಮಹಾಸಂನ್ಯಾಸಿಯೊಬ್ಬ ಸ್ತ್ರೀರೂಪ ತನ್ನೆಲ್ಲಾ ಮೋಹಕತೆಯೊಂದಿಗೆ ಎದುರಾದಾಗ ತನ್ನ ಸಂನ್ಯಾಸಧರ್ಮ ಹೆಳವಾಗಿ ಓಲಾಡುವುದನ್ನು ಕಂಡು ತಲ್ಲಣಗೊಳ್ಳುತ್ತಾನೆ. ಈ ತಲ್ಲಣ ಉಂಟಾಗುವುದು ಈವರೆಗೆ ದೂರದ ನೋಟವಾಗಿ ಮಾತ್ರ ಕಂಡಿದ್ದ ಹೆಣ್ಣಿನ ಸೌಂದರ್ಯ ಈಗ ಹತ್ತಿರ ಬಂದು ದೇಹವನ್ನು ಸ್ಪರ್ಶಿಸಿದಾಗ. ದೂರದಲ್ಲಿದ್ದಾಗ ನಿರ್ಗುಣ ತತ್ವವಾಗಿ ಅಜೀವವಾಗಿದ್ದ ಮೋಹ ಈಗ ಸಗುಣ ಕರ್ಮವಾಗಿ ದೇಹವನ್ನು ಸೋಂಕಿ ಸಜೀವವಾಗಿದೆ. ಈ ಸಂದರ್ಭವನ್ನು ಮಾಸ್ತಿ ಚಿತ್ರಿಸುವ ರೀತಿ ಎಷ್ಟು ಸಜೀವವಾಗಿದೆ ನೋಡಿ :

> ... ಅಂದುಗೆಯ ಶಬ್ದ ಹತ್ತಿರ ಹತ್ತಿರ ಬಂದು ಕೊನೆಗೆ ಒಬ್ಬ ಯುವತಿ ಬಾಗಿಲ ಬಳಿ ನಿಂತು 'ಅಮ್ಮ ಈ ಮನೆಯಲ್ಲಿ ಯಾರಮ್ಮ' ಎಂದಳು.
>
> ಕತ್ತಲು ಮುಸುಕುತ್ತಾ ಬಂದಿದ್ದುದರಿಂದ ಮಾತನಾಡಿದವಳ ರೂಪು ಮೊದಲಾದುದು ಸಂನ್ಯಾಸಿಗೆ ತಿಳಿಯಲಿಲ್ಲ. ಅಗ್ಗಿಷ್ಟಿಕೆಯ ಬೆಳಕಿನಿಂದ ಸ್ವಲ್ಪ ಮಟ್ಟಿಗೆ ಕಾಣುತ್ತಿತ್ತು. ಹೆಂಗಸು ಸ್ವಲ್ಪ ದೂರದಿಂದ ಮಳೆಯಲ್ಲಿ ನೆನೆದಿರಬೇಕು. ಬಟ್ಟೆ ತೀರ ಒದ್ದೆಯಾದಂತೆ ಕಾಣುತ್ತಿತ್ತು.
>
> ಸಂನ್ಯಾಸಿ ''ನೀವು ಯಾರಮ್ಮ'' ಎಂದನು.
>
> ''ಸ್ವಾಮಿ, ಇದು ಯಾರ ಮನೆ, ತಮ್ಮ ಮನೆಯೇ?''

''ಇದು ದೇವರ ಮನೆ ತಾಯಿ. ಯಾತಕ್ಕೆ? ಇದೊಂದು ಮಠ''

''ಇಲ್ಲಿ ಯಾರಾದರೂ ಹೆಂಗಸರಿದ್ದಾರೆಯೇ?''

''ಇಲ್ಲವಮ್ಮ. ಯಾಕೆ? ನೀನು ಯಾರು ತಾಯಿ? ಇಲ್ಲಿಗೇನು ಬಂದೆ?''

ಸ್ತ್ರೀ ಸ್ವಲ್ಪ ಹತ್ತಿರ ಬಂದು ಕಾವಿಯ ಬಟ್ಟೆಯನ್ನು ನೋಡಿ ''ತಾವು ಇಲ್ಲಿಯ ಸ್ವಾಮಿಗಳೋ?'' ಎಂದಳು.

''ಹೌದು ತಾಯಿ ನಾನು ಇಲ್ಲಿ ಕಾವಲುಗಾರ''

''ಅಪ್ಪಾ ನನಗೆ ಯಾಕೋ ಭಯವಾಗುತ್ತದೆ. ಇಲ್ಲಿ ಹೆಂಗಸರಿಲ್ಲವೆಂದು ಇನ್ನೂ ಬಹಳ ಭಯವಾಯಿತು. ಆದರೆ ತಮ್ಮನ್ನು ನೋಡಿ ಧೈರ್ಯ ಬಂತು. ನಮ್ಮ ತಂದೆಯ ಹಾಗೆ ಸಿಕ್ಕಿದಿರಿ. ತಾವು ಸಂನ್ಯಾಸಿಗಳು. ಯಾರೂ ಏನೂ ಸಂದೇಹಪಟ್ಟು ನನ್ನ ವಿಷಯದಲ್ಲಿ ಆಡಿಕೊಳ್ಳುವ ಹಾಗೆ ಇಲ್ಲ. ಅಯ್ಯೋ! ನಮ್ಮ ಯಜಮಾನರು ಏನಾದರೋ ತಿಳಿಯಲಿಲ್ಲವಲ್ಲ. ನಾನೇನು ಮಾಡಲಿ'' ಎಂದು ಹೆಂಗಸು ಅಳತೊಡಗಿತು.

ಸಂನ್ಯಾಸಿಯ ಮನಸ್ಸು ಕಳವಳಗೊಂಡಿತು. ಅವನು ''ಅಮ್ಮ, ನಿಮ್ಮ ಯಜಮಾನರು ಏನೋ ಆದರೆಂದರೇನು? ಜೊತೆಯಾಗಿ ಬಂದಿರಾ? ಎಲ್ಲಿಂದ ಬಂದಿರಿ?'' ಎಂದು ಕೇಳಿದನು.

ಅವಳ ಕಳವಳವನ್ನು ನೋಡಿ ಸಂನ್ಯಾಸಿಗೆ ಕಳವಳವಾದದ್ದಲ್ಲದೆ ಸ್ತ್ರೀ ರೂಪಿಗೆ ಮನಸ್ಸು ಸೋಲುವುದಿಲ್ಲವೆಂಬುದನ್ನು ತೋರಿಸುವುದಕ್ಕೆ ಒಳ್ಳೆಯ ಅವಕಾಶವಿದು ಎಂದೋ ಏನೋ ಮನಸ್ಸಿನಲ್ಲಿ ಸ್ವಲ್ಪ ಉತ್ಸಾಹವೂ ಉಂಟಾಯಿತು. ಅವಳು ಹತ್ತಿರ ಬಂದಾಗ ಮಳೆಯಿಂದ ತೊಯಿದು ಅವಳ ಮೈಗೆ ಅಂಟಿಕೊಂಡಿದ್ದ ಆ ಸೀರೆಯನ್ನು ಅವನು ಮೇಲಿನಿಂದ ಕೆಳಗಿನವರೆಗೂ ನೋಡಿದನು. ಅಸಹಾಯೆಯಾದ ಸ್ತ್ರೀ ಎಂಬುದರಿಂದ ಅವಳ ಪರವಾಗಿ ಸ್ವಲ್ಪ ಉತ್ಸಾಹವನ್ನೂ ಅನುಭವ ಮಾಡಿದನು. ಸಂನ್ಯಾಸಿ ಹೀಗೆ ಮಾಡಿದ್ದು ತಪ್ಪಾಯಿತು.

ಸಂನ್ಯಾಸಿ ಹೀಗೆ ಮಾಡಿದ್ದು ತಪ್ಪಾಯಿತು ಎಂದು ಇಲ್ಲಿ ಮಾಸ್ತಿ ಹೇಳುತ್ತಿರುವುದು ಕಥೆಯ ಒಂದು ಭಾಗವಾಗಿ ಮಾತ್ರ - ಅದು ಅವರ ವೈಯಕ್ತಿಕ ಅಭಿಪ್ರಾಯವಲ್ಲ - ಅದೂ ಸಂನ್ಯಾಸಿ ನಂಬಿಕೊಂಡಿದ್ದ ತತ್ವದ ನೆಲೆಯಿಂದ ಎಂಬುದನ್ನು ನಾವು ಗಮನಿಸಬೇಕು. ಸಂನ್ಯಾಸಿ ಹೀಗೆ ಮಾಡಿದ್ದು ತಪ್ಪು, ಏಕೆಂದರೆ ಹೀಗೆ ಮಾಡಿದ್ದರಿಂದ ದೇವರ, ಧರ್ಮದ ಕಾವಲುಗಾರನೆಂದು ಹೇಳಿಕೊಂಡ ಈತನೇ ಈಗ ಕಳ್ಳನೂ ಆಗತೊಡಗಿದ್ದಾನೆ. ಕಾರಣ? ಅಹಂಕಾರ ಉದ್ದೀಪನಗೊಂಡಿದೆ. ಅದು ಉದ್ದೀಪನಗೊಳ್ಳಲು ಕಾರಣ? ಮುನ್ನಿರಳ ಶಾಂತಿಯನ್ನು ಕಲಕುತ್ತಾ ಕತ್ತಲನ್ನು ಕವಿಸುತ್ತಾ ಆರಂಭವಾದ ಮಳೆಯ ಮಧ್ಯೆ 'ತತ್ವ' ಕಿವಿ, ಕಣ್ಣು, ಮೂಗು,

ನಾಲಗೆ, ಚರ್ಮಗಳನ್ನು ಪಡೆದುಕೊಂಡು ಜೀವಂತವಾಗಿ ಹತ್ತಿರ ಹತ್ತಿರಕ್ಕೆ ಸುಳಿಯತೊಡಗಿದೆ. ಇವೆಲ್ಲವನ್ನೂ ಒಟ್ಟಿಗೆ ಎದುರುಗೊಳ್ಳಲು ಸಂನ್ಯಾಸಿಯ ಬಳಿ ಇರುವುದು ಅಗ್ಗಿಷ್ಟಿಕೆಯ ಬೆಳಕು ಮಾತ್ರ. ಅವನು ಅಸಹಾಯಕನಾಗಿ ಅಹಂಕಾರದ ಮೊರೆ ಹೋಗುತ್ತಾನೆ. ಕರ್ಮವನ್ನು ಆಹ್ವಾನಿಸುತ್ತಾನೆ. ಅನುಭವಿಸಿ ಸತ್ಯವನ್ನು ಕಾಣುತ್ತಾನೆ.

ಇದೇ ಲೋಕದ ಧರ್ಮ ಎಂಬುದನ್ನು ಮಾಸ್ತಿ ಕಥೆಯಲ್ಲಿ ಇಡಿಯಾಗಿ ಹೇಳುತ್ತಾರೆ. ಲೋಕದ ಪ್ರತಿಯೊಂದು ಘಟನೆಯಲ್ಲೂ - ಅದು ಸಂಜೆಯಾಗಿರಲಿ, ಮಳೆಯಾಗಿರಲಿ, ಮನುಷ್ಯ ದೇಹವೇ ಆಗಿರಲಿ, ಮನಸ್ಸೇ ಆಗಿರಲಿ - ಮೋಹದ ಸಂಚಿದೆ, ಕರ್ಮದ ಆಹ್ವಾನವಿದೆ, ಸೌಂದರ್ಯದ ಅವಿರ್ಭಾವವಿದೆ, ಶಾಂತಿಯ ನೆಲೆಯಿದೆ, ದೇವಲೋಕದ ಹೊಸ್ತಿಲಿದೆ ಎಂಬುದನ್ನು ಕಥೆಯ ಪ್ರತಿಚಲನೆಯಲ್ಲೂ (ಈ ಕಥೆಯಲ್ಲಿ ಬರುವ ಸಂಜೆಯ, ಹೆಣ್ಣಿನ ಹಾಗೂ ಸ್ಪರ್ಶದ ವರ್ಣನೆಗಳನ್ನು ನೋಡಿ) ತಮ್ಮ ಅದ್ಭುತ ಕಥೆಗಾರಿಕೆಯ ಮೂಲಕ ಕಾಣಿಸಿಕೊಡುವ ಮಾಸ್ತಿ ಇದರ ಮಧ್ಯದಿಂದಲೇ ಲೋಕದ ಧರ್ಮವನ್ನು ಮನುಷ್ಯ ಕರ್ಮದ ಮೂಲಕವೇ (ಅಂದರೆ ಅಹಂಕಾರ ನಷ್ಟದ ಮೂಲಕವೇ) ಕಾಣಬೇಕಾಗುತ್ತದೆ ಎಂದೂ ಸೂಚಿಸುತ್ತಾರೆ.

ಇದೇ ವಸ್ತುವನ್ನು ಮಾಸ್ತಿ 'ಗೌತಮಿ ಹೇಳಿದ ಕಥೆ'ಯಲ್ಲಿ ಇನ್ನಷ್ಟು ಮುಂದಕ್ಕೆ ಒಯ್ಯುತ್ತಾರೆ. ಲೋಕಧರ್ಮವನ್ನು ಒಂದು ವಿಶಿಷ್ಟ ಮನುಷ್ಯ ಸಂದರ್ಭದಲ್ಲಿಟ್ಟು ನೋಡುವ ಪ್ರಯತ್ನ ಮಾಡುತ್ತಾರೆ. ಮೋಹಕ್ಕೆ ಒಳಗಾದ ಮನುಷ್ಯ, ಮನಸ್ಸಿನ ಎಚ್ಚರ ಕಳೆದುಕೊಂಡರೆ ಧರ್ಮವನ್ನು ಕಾಣಿಸಿಸುವ ಕರ್ಮವೇ ಆತನನ್ನು / ಆಕೆಯನ್ನು ಅಧರ್ಮಕ್ಕೂ ಎಳೆದೊಯ್ದೀತು ಎಂದು ಸೂಚಿಸುವ ಪ್ರಯತ್ನವನ್ನು ಈ ಕಥೆಯಲ್ಲಿ ನೋಡಬಹುದು. ಜೊತೆಗೆ ಮೋಹವೆಂಬುದು ಪ್ರಕೃತಿಯ ಒಂದು ಚಲನೆ ಹೇಗೋ ಮನಸ್ಸಿನ ಒಂದು ಚಲನೆ ಮಾತ್ರ; ಹೀಗಾಗಿ ಮನಸ್ಸನ್ನು ಜಾಗೃತಗೊಳಿಸಿಕೊಳ್ಳುವ ಕರ್ಮದ ಮೂಲಕವೇ ಮೋಹವನ್ನು ಇಲ್ಲವಾಗಿಸಿಕೊಳ್ಳಬಹುದೆಂಬ ಇಂಗಿತವೂ ಈ ಕಥೆಯಲ್ಲಿ ಪ್ರಕಟವಾಗುತ್ತದೆ :

> ... ಮಾಲಿನಿ ಕೆಲವು ನಿಮಿಷ ಸುಮ್ಮನಿದ್ದಳು. ತಟ್ಟನೆ ದತ್ತನ ಮುಖವನ್ನು ತನ್ನ ಎದೆಯ ಬಳಿಗೆ ಸೆಳೆಯಲು ಕೈ ಚಾಚಿದಳು.
>
> ದತ್ತನು ಅಷ್ಟೇ ವೇಗದಿಂದ ಹಿಂದಕ್ಕೆ ಸರಿದನು. ನೆಲದ ಮೇಲೆ ದಂಡದಂತೆ ಬಿದ್ದು ಅವಳ ಕಾಲೆರಡನ್ನೂ ತನ್ನ ಎರಡೂ ಕೈಯಿಂದ ಹಿಡಿದುಕೊಂಡನು. 'ನೀನು ನನ್ನನ್ನು ಕಾಪಾಡಬೇಕು. ಪರೀಕ್ಷೆ ಮಾಡಬೇಡ. ನೀನು ಹೆಣ್ಣು, ಆದಿಶಕ್ತಿ; ನಿನಗೆ ಪತನವೆಂಬುದಿಲ್ಲ. ನಾನು ಹೆಣ್ಣಲ್ಲ. ನನಗೆ ನಿನಗಿರುವ ಆತ್ಮಶುದ್ಧಿಯಿಲ್ಲ. ನೀನು ಅನುಗ್ರಹಿಸಿದರೆ ನಾನು ಮುಂದುಗಾಣುತ್ತೇನೆ. ಹಠ ಮಾಡಿದೆಯೋ ನಾನು ಬಟ್ಟೆಗೆಟ್ಟೆ. ನನ್ನ ಮೇಲೆ ಅನುಗ್ರಹ ಮಾಡು. ನನ್ನನ್ನು ಕಾಪಾಡು, ಎಂದು ದೈನ್ಯದಿಂದ ಬೇಡಿಕೊಂಡನು.
>
> ಮಾಲಿನಿಯ ಪುಣ್ಯ ಚೆನ್ನಾಗಿತ್ತು. ದತ್ತನ ಧ್ವನಿಯಲ್ಲಿ ಕೇಳಿದ ಅಂಗಲಾಚಿಕೆಯ ಎಳೆ ಅವಳ ಬಾಳಿನ ಯಾವುದೋ ಒಂದು ಕಳೆಯನ್ನು

ಮುಟ್ಟಿತು. ಅವಳಿಗೇ ತಿಳಿಯದಂತೆ ಅವಳನ್ನು ಆಸೆ ಅಲ್ಲಿಗೆ ಎಳೆದು ತಂದಂತೆ. ಅವಳಿಗೇ ತಿಳಿಯದೆ ಆ ಕಳೆ ಅವಳ ದೃಷ್ಟಿಯನ್ನು ತಡೆದಿದ್ದ ಒಂದು ತೆರೆಯನ್ನು ಹರಿಯಿತು. ತನ್ನ ಆಸೆಯನ್ನು ಸಹಿಸಬಲ್ಲ ಹಿರಿಯನೆಂದು ಕಂಡಿದ್ದ ದತ್ತ ಅವಳಿಗೆ. ಆ ಕ್ಷಣ ತನ್ನ ಸಹಾಯದಿಂದ ಮಾತ್ರ ಬದುಕಬಲ್ಲ ನಿಸ್ಸಹಾಯ ಬಾಲಕನಾಗಿ ಕಂಡನು. ಗಂಡೆಂದು ಅವನನ್ನು ಅಪ್ಪಿಕೊಳ್ಳಬಯಸಿದ ತೋಳು ಆಗ ಅವನನ್ನು ಮಗುವಂತೆ ಸಂತೈಸಲು ಬಯಸಿತು. ಅವಳು ಅವನನ್ನು ಹತ್ತಿರಕ್ಕೆ ಎಳೆದುಕೊಂಡಳು. ಮಗುವಂತೆ ಕುರುಳಲ್ಲಿ ಬೆರಳಾಡಿಸಿದಳು. ಕೆನ್ನೆಯನ್ನು ಬೆನ್ನನ್ನು ಕೈಯಿಂದ ಸವರಿದಳು. ತಲೆಯನ್ನು ಎತ್ತಿ ಹಿಡಿದು ಮುಖಕ್ಕೆ ಒಂದು ಮುತ್ತನ್ನು ಕೊಟ್ಟಳು. ಅನಂತರ ಕ್ಷಣ ಎದ್ದು ನಿಂತಳು.

ದತ್ತನೂ ನೆಲದಿಂದೆದ್ದು ಇವಳೆದುರು ನಿಂತನು. ಮಾಲಿನಿ, 'ನಿನ್ನ ಮಾತೇ ಸರಿ. ನಾನು ಬರುತ್ತೇನೆ' ಎಂದಳು. ಎದುರು ಮಾತಿಗೆ ಕಾಯದೆ ಸಾವಧಾನವಾಗಿ ತನ್ನ ಕುಟೀರಕ್ಕೆ ಹೋದಳು.

ಇಲ್ಲಿ ನಾವು ಗಮನಿಸಬೇಕಾದದ್ದು ಹೆಣ್ಣಿನ ಮೋಹ ಮತ್ತು ತಾಯಿಯ ಪ್ರೇಮ ಒಂದೇ ಚಲನೆಯ ಎರಡು ಭಾವ ಪರಿಣಾಮಗಳು ಎಂಬುದನ್ನು ಮಾಸ್ತಿ ನಿರೂಪಿಸಿರುವ ರೀತಿ. ಹೆಣ್ಣಿನಲ್ಲಿನ ಮೋಹ; ತಾಯಿಯಲ್ಲಿನ ಪ್ರೇಮ ಎರಡೂ ಲೋಕ ಧರ್ಮದ ಅಭಿವ್ಯಕ್ತಿಗಳೇ. ಇಲ್ಲಿ ದ್ವಂದ್ವವಿಲ್ಲ. ದ್ವಂದ್ವವಿರುವುದು ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಮನುಷ್ಯ ಸಂದರ್ಭದಲ್ಲಿ. ಈ ದ್ವಂದ್ವವನ್ನು ಮನುಷ್ಯ, ಮನಸ್ಸನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಪರಿಹರಿಸಿಕೊಳ್ಳಬಹುದು. ಇಲ್ಲಿ ಮನಸ್ಸಿನ ಸ್ವಚ್ಛತೆ ಎಂದರೆ ಮತ್ತೇನಲ್ಲ; ಅದರಲ್ಲಿ ತನ್ನ ನಿಜ ಮುಖವನ್ನು ಗುರುತಿಸಿಕೊಳ್ಳುವ ಸ್ಪಷ್ಟತೆ. ಇದನ್ನು ಪ್ರಜ್ಞೆ ಎಂದೂ ಕರೆಯಬಹುದೇನೋ. ಅಂದರೆ ದತ್ತ ಆ ಸಂದರ್ಭದಲ್ಲಿ ವರ್ತಿಸಿದ ರೀತಿಯನ್ನು ನಿಯಂತ್ರಿಸಿದ್ದು ಆತನ ಪ್ರಜ್ಞೆ. ಈ ಪ್ರಜ್ಞೆ ಎಲ್ಲಿಂದ ಬಂತು? ಕಥೆಯ ಈ ಭಾಗ ಅದನ್ನು ವಿವರಿಸುತ್ತದೆ :

'ಚಿಕ್ಕಂದು ನಾವು ಜೊತೆಯಾಗಿ ನಡೆದಾಗ ಭಾರದ್ವಾಜನಿಗೆ ಪ್ರತಿಯಾಗಿ ನಿನಗೆ ಗುರುಗಳು ಆಜ್ಞೆ ಮಾಡಿದ್ದರೆ ನೀನು ನನ್ನನ್ನು ಮದುವೆಯಾಗುತ್ತಿರಲಿಲ್ಲವೇ?' ಎಂದು ಇವಳು ಕೇಳಿದಳು. ಅವನು 'ಆಗುತ್ತಿದ್ದನೇನೋ. ಅಣ್ಣ ಆಗಲಿ ಅಂದಂತೆ ನಾನೂ ಅನ್ನಬಹುದಾಗಿತ್ತು. ಆದರೆ ಅದು ಈಗ ಏಕೆ ಬರುತ್ತದೆ? ನೀನು ನನಗೆ ಅತ್ತಿಗೆಯಾದೆ. ನಾನು ನಿನ್ನನ್ನು ಅತ್ತಿಗೆ ಎಂದು ಭಾವಿಸಿ ಬೆಳೆದು ಬಿಟ್ಟಿದ್ದೇನೆ. ಈಗ ಅತ್ತಿಗೆಯನ್ನು ಪತ್ನಿಯೆಂದು ಭಾವಿಸಲಾರೆ' ಎಂದನು. 'ಈ ಅಣ್ಣ ಅತ್ತಿಗೆ ಎಂಬ ಮಾತು ಕಲ್ಪನೆಯದಲ್ಲವೇ?' ಎಂದು ಅವಳು ಕೇಳಿದಳು. ಅವನು 'ಹೌದು, ಕಲ್ಪನೆ' ಎಂದು ಒಪ್ಪಿದನು. ಆದರೆ ಆ ಕಲ್ಪನೆ ಬಾಳ ಆಳವನ್ನು ಸೋಕಿತ್ತು. ಅದನ್ನು

ತಪ್ಪಿಸುವುದು ಹೇಗೆ? ಅವಳನ್ನು ನೋಡುವ ಕ್ಷಣವೆಲ್ಲ ಅವನಿಗೆ ಪಕ್ಕದಲ್ಲಿ ಭಾರದ್ವಾಜನು ಕಾಣುವನು. ಭಾರದ್ವಾಜ ಕಲ್ಪನೆಯಲ್ಲವಲ್ಲ...

ಹಾಗಾದರೆ ಲೋಕಧರ್ಮವೇ ಆಗಿರುವ ಮಾಲಿನಿಯ ಮೋಹಕ್ಕೇನು ಅರ್ಥ? ಅದು ಮನುಷ್ಯ ಸಂದರ್ಭದಲ್ಲಿ ಅಧರ್ಮವಾಗಿ ಬಿಡುವುದೇ? ಹೌದು ಎನ್ನುತ್ತಾರೆ ಮಾಸ್ತಿ. ಯಾಕೆಂದರೆ ಮಾಲಿನಿಯ ಮೋಹ ಇಲ್ಲಿ ಪ್ರಜ್ಞೆ ಇಲ್ಲದೆ ಹಿಂಸೆಯ ರೂಪ ತಾಳಿದೆ. ಜೀವಗಳ ಅನ್ಯೋನ್ಯತೆ ಸಾಧಿತವಾಗದಾಗಿದೆ. ದತ್ತ ತನ್ನ ಪ್ರಜ್ಞೆಯ ನೆಚ್ಚಿಕೆಯಿಂದ ಆ ಹಿಂಸೆಯನ್ನೇ ಪ್ರೇಮವನ್ನಾಗಿ ಪರಿವರ್ತಿಸಿ ಅನ್ಯೋನ್ಯತೆಯನ್ನು ಸಾಧ್ಯ ಮಾಡುತ್ತಾನೆ. ಹೀಗೆ ಮಾಸ್ತಿಯವರ ಪ್ರಕಾರ ಮನುಷ್ಯ ಲೋಕದಲ್ಲಿ ಧರ್ಮ ಪ್ರಕಟವಾಗುವುದು ಪ್ರಜ್ಞೆಯ ಮೂಲಕ. ಆ ಪ್ರಜ್ಞೆ ಮೂಡುವುದು ಬಾಳ ಆಳವನ್ನು ಸೋಕುವ ಅನುಭವದ ಮೂಲಕ. ಅಂತಹ ಪ್ರಜ್ಞೆ ಎಂತಹ ಹಿಂಸೆಯನ್ನೂ ಪ್ರೇಮವನ್ನಾಗಿ ಪರಿವರ್ತಿಸಬಲ್ಲುದು.

ಈ ಕಥೆಯನ್ನು ಮಾಸ್ತಿ ದತ್ತನ ಪರವಾಗಿ ವಾಲಿಸಿದ್ದರೆಂದು ಹೇಳಿ ಮಾಲಿನಿ ಬಗ್ಗೆ ದುಃಖ ಪಡುವವರೂ ಉಂಟು. ಆದರೆ ಕಥೆಯ ಬೆಳವಣಿಗೆಯ ಪ್ರತಿ ಹಂತ ಹಾಗೂ ಪ್ರತಿ ವಿವರವನ್ನು ಪ್ರಜ್ಞೆ ಇಟ್ಟು ಓದಿದವರಿಗೆ ಇವರೆಲ್ಲರಿಗಿಂತ ಹೆಚ್ಚು ಸ್ವತಃ ಮಾಸ್ತಿಯವರೇ ಮಾಲಿನಿ ಬಗ್ಗೆ ದುಃಖಿತರಾಗಿದ್ದಾರೆಂಬುದು ಗೊತ್ತಾಗುತ್ತದೆ. ತನ್ನ ಕಥೆ ಹೇಳುತ್ತ ಹೇಳುತ್ತಾ ಮಾಲಿನಿ (ಗೌತಮಿ) ಗದ್ಗದಿತಳಾಗಿ ಕಣ್ಣೀರೊರಸಿಕೊಳ್ಳಲು 'ಯಾರೋ ಕರೆದಂತಾಯಿತು' ಎಂದು ಹೊರಗೆ ಹೋಗುವುದಾದರೂ ಯಾರ ಬಳಿಗೆ ಎಂದುಕೊಂಡಿದ್ದೀರಿ? ಮಾಸ್ತಿಯವರ ಬಳಿಗೇ. ಯಾಕೆಂದರೆ ಇಲ್ಲಿ ಸೃಷ್ಟಿಯಾಗಿರುವುದು ಮಾಸ್ತಿಯವರ ಪ್ರಜ್ಞಾಲೋಕ.

ಕಥೆಯಲ್ಲಿ ಹುಟ್ಟುವ ದುಃಖ ಕಥೆಯ ಒಂದು ಅವಿಭಾಜ್ಯ ಅಂಗವಾಗಿಯೇ, ಕಥೆಗಾರನ ಹೆಗಲ ಮೇಲೆ ಸಾಂತ್ವನ ಪಡೆಯುವ ಈ ಕಥಾ ವಿನ್ಯಾಸ ಕಥೆಗಾರನಲ್ಲಿ ಅಂತರ್ಗತವಾಗಿರುವ ಪ್ರತಿಭೆ ಮತ್ತು ಪ್ರಜ್ಞೆಗಳೆರಡನ್ನೂ ಅವಿಭಾಜ್ಯವಾಗಿ ಹಿಡಿದಿಡಬಲ್ಲಷ್ಟು ಸೂಕ್ಷ್ಮ ಸಮತೋಲನದಲ್ಲಿದೆ. ಬಹುಶಃ ಇದೇ ಲೋಕವಿನ್ಯಾಸದಲ್ಲಿ ಕಾಣುವ ಮೋಹ ಹಾಗೂ ಶಾಂತಿಗಳ ಮತ್ತು ಕರ್ಮ ಹಾಗೂ ಕರುಣೆಗಳ ಸೂಕ್ಷ್ಮ ಸಮತೋಲನ. ಅಂದ ಹಾಗೆ, ಲೋಕದಲ್ಲಿ ಕಥೆ ಅಥವಾ ಧರ್ಮ ಹುಟ್ಟುವುದು ಈ ಸೂಕ್ಷ್ಮ ಸಮತೋಲನ ಸ್ಥಿತಿಯಲ್ಲಿಯೇ ಅಲ್ಲವೇ?

ಈ ಸ್ಥಿತಿ ಜಡ ಅಥವಾ ಸಂಪ್ರದಾಯವಾದಿ ಆಗಲು ನಿರಾಕರಿಸುವಂತಹ ಸೃಜನಶೀಲ ಸ್ಥಿತಿ. ಮಾಸ್ತಿಯವರ ಎಲ್ಲ ಕಥೆಗಳನ್ನು ಕಟ್ಟಿರುವುದು ಈ ಸೃಜನಶೀಲತೆಯೇ. ಅವು ಈವರೆಗೆ ವಿಶ್ಲೇಷಿಸಿದ ಇತಿಹಾಸ - ಪುರಾಣ ಕಥೆಗಳೇ ಆಗಿರಬಹುದು ಅಥವಾ ಅವರು ತಾವು ಬದುಕಿದ ಕಾಲದ ಆವರಣದಲ್ಲಿ ಕಟ್ಟಿಕೊಡುವ 'ಸಾಮಾಜಿಕ'ವೆಂದು ಕರೆಯಬಹುದಾದ ಕಥೆಗಳೇ ಆಗಬಹುದು. ಏಕೆಂದರೆ ಮಾಸ್ತಿಗೆ ಇರುವುದೊಂದೇ ಧರ್ಮ, ಇರುವುದೊಂದೇ ಕಥೆ. ಹಾಗೇ ಅವೆರಡೂ ಅವಿಭಾಜ್ಯವಾದವು. ಆಯಾ ಕಾಲದ, ದೇಶದ ವಿವರ ಹಾಗೂ ಭಾಷೆಗಳ ಮೂಲಕ ಅವರು ಈ ಅವಿಭಾಜ್ಯತೆಯನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ಹೀಗಾಗಿ ಅವರ ಕಥೆಗಳ ಬಿಡಿ ವಿವರಗಳನ್ನೋ 'ಭಾಷೆ'ಗಳನ್ನೋ ಹಿಡಿದುಕೊಂಡು ನಾವು ಮಾಸ್ತಿಯನ್ನು ಯಾವುದೋ ಒಂದು

ಗುಂಪಿಗೆ, ಸಂಪ್ರದಾಯಕ್ಕೆ ಸೇರಿಸಲು ಕಾತರಿಸುತ್ತೇವೆ. ಇಂತಹ ಕಾತುರತೆಯ ಮೂಲ ನೆಲೆ ಇರುವುದು ಕಥೆಯನ್ನು ಹೀಗೆ ಭೌತಿಕವಾಗಿ ವಿಭಾಜಿಸಿ ನೋಡುವ ಪಾಶ್ಚಿಮಾತ್ಯ ಕಥಾ ಮೀಮಾಂಸೆಯಲ್ಲಿ. ಇದು ಮಾಸ್ತಿ ಕಥಾ ಧರ್ಮಕ್ಕೆ ಒಗ್ಗಲಾರದು.

ಹಾಗಾದರೆ ಧರ್ಮದ ಕಾಲ ದೇಶಗಳ ವೇಷ ಲಕ್ಷಣಗಳಾದ ನೀತಿ, ನೇಮ, ವಿಧಿ ನಿಷೇಧಗಳನ್ನು ಮಾಸ್ತಿ ತಮ್ಮ ಕಥೆಗಳಲ್ಲಿ ನಿರ್ವಹಿಸುವ ರೀತಿ ಎಂತಹದು? ಇದಕ್ಕೆ ಉದಾಹರಣೆಗಳಾಗಿ ನಾವು 'ವೆಂಟಕಶಾಮಿಯ ಪ್ರಣಯ', 'ವೆಂಕಟಿಗನ ಹೆಂಡತಿ', 'ಸಂನ್ಯಾಸವಲ್ಲದ ಸಂನ್ಯಾಸ', 'ಆಚಾರವಂತ ಅಯ್ಯಂಗಾರ್ರು', 'ಡೂಬಾಯಿ ಪಾದ್ರಿಯ ಪತ್ರ', 'ಪಂಡಿತನ ಮರಣಶಾಸನ', 'ಶಾಲೆಯ ಆಚಾರ್ಯರು', 'ಪಕ್ಷಿಜಾತಿ', 'ಕರಿಯ ಸವಾರ' ಮುಂತಾದ ಕಥೆಗಳನ್ನು ನೋಡಬಹುದು. ಕಥೆಗಳಲ್ಲಿ ವರ್ಣಾಶ್ರಮ ಚೌಕಟ್ಟನ್ನು ಮೀರಿ ನಿಂತ ವಿವಾಹೇತರ, ನಿಷಿದ್ಧ ಸಂಬಂಧಗಳು, ಜಾತಿ ಸಂಬಂಧ ಕಟ್ಟಳೆ - ಕಲಹಗಳು, ಶ್ರೇಷ್ಠತೆಯ ಹಮ್ಮುಗಳು, ಹಿಂಸೆ ಮುಂತಾದ ಪ್ರಶ್ನೆಗಳು ಎದುರಾಗುತ್ತವೆ. ಆದರೆ ಮಾಸ್ತಿ ಇಲ್ಲಿ ಎಲ್ಲಿಯೂ ಸಂಪ್ರದಾಯವಾದಿಯಂತೆ ಜಡರಾಗುವುದಿಲ್ಲ. 'ಶಾಲೆಯ ಆಚಾರ್ಯರು' ಕಥೆಯಲ್ಲಿ ಬರುವ ಈ ಮಾತನ್ನು ಗಮನಿಸಿ : ''ಮನುಷ್ಯ ಏನೇ ಆದರೂ ಉಳಿಯಬಹುದು, ಸೊಕ್ಕಿ ಉಳಿಯಲಾಗದು. ಅದರಲ್ಲೂ ಬ್ರಾಹ್ಮಣನಾಗಿರುತ್ತೇನೆ ಅನ್ನೋ ಬ್ರಾಹ್ಮಣ ಸೊಕ್ಕಿದನೋ ಚಂಡಾಳನಾದ. ಅವನಿಗೆ ದುರ್ಗತಿ, ಅವನ ಹಿರೇರಿಗೆ ಸ್ವರ್ಗದಿಂದ ಚ್ಯುತಿ''.

ವರ್ಣಾಶ್ರಮದ ಚೌಕಟ್ಟು ಇನ್ನು ಹೆಚ್ಚು ಕಾಲ ಉಳಿಯುವಂತಹದಲ್ಲ ಎಂಬುದು ಮಾಸ್ತಿಯವರಿಗೆ ಗೊತ್ತು. 'ಡೂಬಾಯಿ ಪಾದ್ರಿಯ ಪತ್ರ' ಕಥೆಯಲ್ಲಿ ಪಾದ್ರಿಯೊಬ್ಬ ''ಹಿಂದೂ ಧರ್ಮ ಉಳಿಯುವ ಧರ್ಮವಲ್ಲ, ಈ ದೇಶಕ್ಕೆ ಕ್ರೈಸ್ತ ಧರ್ಮವೇ ಗತಿ'' ಎಂದು ಭಾವಿಸುತ್ತಾ ಹೀಗೆ ಬರೆಯುತ್ತಾನೆ :

> ''ಈ ಮತದ ಮುಖ್ಯ ವರ್ಗದವರಾದ ಬ್ರಾಹ್ಮಣರು, ಡಾಂಭಿಕರು, ಅಹಂಕಾರಿಗಳು, ಮತಾಭಿಮಾನ ವಿಹೀನರು. ತಾವು ಸೃಷ್ಟಿಯಲ್ಲಿ ಉಳಿದ ಎಲ್ಲ ಜನಕ್ಕಿಂತಲೂ ಶ್ರೇಷ್ಠರೆಂದು ಇವರ ಭಾವನೆ... ಇವರು ಭೂಮಿಗೆ ದೇವತೆಗಳು; ಉಳಿದ ಜನರೆಲ್ಲ ಇವರಿಗೆ ಕಡಿಮೆ; ಜನ್ಮ ಜನ್ಮಾಂತರ ಪ್ರಯತ್ನ ಪಟ್ಟು ಬ್ರಾಹ್ಮಣರಾಗಬೇಕು. ಇಂಥ ಭಾವನೆಯಿಂದ ಇವರು ವರ್ತಿಸುವುದರ ಫಲವೇನೆಂದರೆ ಹಿಂದಿನಿಂದ ನಡೆದಂತೆ ನಡೆಯೋಣವೆನ್ನುವವರು ಇವರ ಅಹಂಕಾರವನ್ನು ಹೇಗೋ ಸಹಿಸಿಕೊಂಡು ಹೋಗುತ್ತಾರೆ. ಉಳಿದವರು ಇವರು ನಮಗೆ ಬೇಡವೆನ್ನುತ್ತಾರೆ... ಇಷ್ಟಾಗಿ ಇವರನ್ನು ದೊಡ್ಡವರೆಂದೇ ಒಪ್ಪಿಕೊಂಡರೆ ಉಳಿದವರಿಗೆ ಏನು ಪ್ರಯೋಜನ ಎಂದರೆ ಇವರನ್ನು ದೊಡ್ಡವರೆಂದದ್ದೇ ಪ್ರಯೋಜನ...''

ಹಾಗೆ ನೋಡಿದರೆ ಈ ಎಲ್ಲ ಕಥೆಗಳಲ್ಲಿ ನೀತಿ-ನೇಮ-ವಿಧಿ-ನಿಷೇಧಗಳೆಲ್ಲಾ ಧರ್ಮದ

ಪ್ರಶ್ನೆಗಳಾಗಿ ಕಟ್ಟಿಕೊಳ್ಳುವುದೇ ಇಲ್ಲ. ಸಂದರ್ಭದ ಗಾಂಭೀರ್ಯ ಹಾಗೂ ವ್ಯಂಗ್ಯಗಳೇ ಪ್ರಧಾನವಾಗಿ ಈ ಪ್ರಶ್ನೆಗಳು ಮನುಷ್ಯ ಸಂಬಂಧಗಳ ತೀವ್ರತೆ, ನಿಜತ್ವ, ಪಾವಿತ್ರ್ಯ, ಆದರ್ಶಗಳ ಗಟ್ಟಿತನ ಹಾಗೂ ವಿವೇಕದ ಉಜ್ವಲತೆಗಳ ನಿಕಷದಲ್ಲೇ ತೀರ್ಮಾನವಾಗುತ್ತವೆ. ನೀತಿ - ನೇಮ-ವಿಧಿ-ನಿಷೇಧಗಳೇನಿದ್ದರೂ ಧರ್ಮದ ತೊಗಟೆ ಮಾತ್ರವಾಗಿದ್ದು ಅವು ಕಾಲದಲ್ಲಿ ಬಿದ್ದು ಹೋಗಿ ಹೊಸ ತೊಗಟೆ ಮೂಡುವುದು ಪ್ರಕೃತಿಧರ್ಮವೆಂಬ ಅರಿವೇ ಈ ಎಲ್ಲ ಕಥೆಗಳಲ್ಲಿ ಕಾಣುವುದು. ಈ ಅರಿವು ತನ್ನ climax ಮುಟ್ಟುವುದು 'ಕರಿಯ ಸವಾರ' ಕಥೆಯಲ್ಲಿ. ಹಿಂಸೆ ನಿಷಿದ್ಧವಾಗಿರುವ ಬೌದ್ಧ ಧರ್ಮದ ಭಿಕ್ಷುವೊಬ್ಬ ಬೌದ್ಧ ಧರ್ಮವನ್ನು ಹಠದಿಂದ ನಾಮಾವಶೇಷ ಮಾಡತೊಡಗಿದ್ದ ಅರಸನನ್ನು ಕೊಂದು ಗುರುವಿನ ಬಳಿ ಕ್ಷಮೆ ಕೋರಲು ಬಂದಾಗ ಆ ಬೌದ್ಧ ಗುರು ಅವನನ್ನು ಬರಮಾಡಿಕೊಳ್ಳುವುದು ಹೀಗೆ : ''ಧರ್ಮದ ಹೊರಗಿನ ಅರಸನನ್ನು ಆಡಿಸಿದ ದೆವ್ವಗಳು ಧರ್ಮದ ಒಳಗಿರುವ ನಿನ್ನನ್ನೂ ಬಿಡಲಿಲ್ಲ. ಇದು ನನ್ನ ನಿತ್ರಾಣವೋ, ಇಲ್ಲ ಬುದ್ಧ ಗುರುವೇ ನಿಸ್ಸತ್ವನೋ! ಬಾ, ಕಾಲು ಹಿಡಿದುಕೋ; ಪಾತಕ ಆಡಿಸದಂತೆ ಕಾಪಾಡಬಲ್ಲೆನೇ ನೋಡೋಣ''.

ಎಂತಹ ಅರಿವು ಇದು? ಧರ್ಮ ಎಲ್ಲವನ್ನೂ ಮೀರುವುದು ತನ್ನನ್ನು ತಾನು ಮೀರುವ ಮೂಲಕ ಎಂಬ ಹೊಳಹುಳ್ಳ ಈ ಅರಿವು ಮಾಸ್ತಿಯವರ ಧಾರ್ಮಿಕ ಅರಿವಿನ ಆಳ ಅಗಲಗಳನ್ನು ಪರಿಚಯಿಸುತ್ತದೆ.

ನಿಜ, ಮಾಸ್ತಿಯವರಿಗೆ ಕೆಡುಕನ್ನು ಮುಖಾಮುಖಿಯಾಗಿ ಎದುರಿಸುವ ಆಸಕ್ತಿ ಇಲ್ಲ. ಒಳಿತನ್ನು ಹುಡುಕುವ ನಿಷ್ಠೆ - ಏಕಾಗ್ರತೆಗಳಲ್ಲೇ ಕೆಡುಕನ್ನು ಇಲ್ಲವಾಗಿಸಬಹುದು ಎಂದು ನಂಬಿದವರು ಅವರು. ಏಕೆಂದರೆ ಕೆಡುಕಿಗೆ ನಿರ್ದಿಷ್ಟ ರೂಪವಿಲ್ಲ; ನಿಜ ಸ್ವರೂಪವೆಂಬುದಿಲ್ಲ. ಹೀಗಾಗಿ ಅದನ್ನು ಪ್ರತ್ಯಕ್ಷವಾಗಿ ಎದುರಿಸುವುದು ಸುಲಭವಲ್ಲವೆಂಬ ಅರಿವಷ್ಟೇ ಅಲ್ಲ, ಮಾಯಾವಿಯಾದ ಕೆಡುಕಿನ ಬಲೆಗೆ, ಅದನ್ನು ಎದುರಿಸುವವನೇ ಆಕಸ್ಮಿಕವಾಗಿ ಬೀಳಬಹುದೆಂಬ ಎಚ್ಚರಿಕೆ ಕೂಡಾ ಮಾಸ್ತಿ ತಮ್ಮ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಕೆಲಸ ಮಾಡಿದೆ. ಕೆಡುಕನ್ನು ಇಲ್ಲವಾಗಿಸುವುದೇ ಮನುಷ್ಯನ ನಿಜವಾದ ತುಡಿತವಾಗಿದ್ದರೆ ಒಳಿತನ್ನು ಹುಡುಕುತ್ತಾ ಮಾನ್ಯ ಮಾಡುತ್ತಾ ಹೋಗುವುದೇ ಅದಕ್ಕೆ ನಿಜವಾದ ಮಾರ್ಗ ಎಂಬ ಭಾವ ಅವರ ಎಲ್ಲಾ ಕಥೆಗಳಲ್ಲೂ ಅಂತರ್ಗತವಾಗಿ ಹರಿದಿದೆ. ಈ ಮಾರ್ಗ ಸಹನೆಯ, ಸಂಯಮದ, ಪ್ರೀತಿಯ, ಕರುಣೆಯ ಅಂತಃಕರಣದ ಮಾರ್ಗ. ಮಾಸ್ತಿಯವರ ಈ ಮಾರ್ಗದ ಆಯ್ಕೆಯೇ ಅವರ ಕಥೆಗಳಲ್ಲಿನ ಅನುಭವದ ಹಾಗೂ ಶಿಲ್ಪದ ಆಯ್ಕೆಯೂ ಆಗಿದೆ. ಇದನ್ನು ಒಟ್ಟಾರೆಯಾಗಿ ಪಲಾಯನವಾದಿ ಮಾರ್ಗ ಎಂದು ಕರೆಯುವವರೂ ಇದ್ದಾರೆ. ಆದರೆ ಇವರು ಧರ್ಮವನ್ನೂ ಪಲಾಯನವಾದ ಎಂದು ಕರೆಯುವವರಾದ್ದರಿಂದ ಈ ಬಗ್ಗೆ ಇನ್ನು ಹೆಚ್ಚು ಮಾತು ಅನವಶ್ಯಕ ಎಂದು ನಾನು ಭಾವಿಸುತ್ತೇನೆ.

❑

(ಸಾಹಿತ್ಯ ಸಂವಾದ : ೨೨ - ೨೪, 'ಮಾಸ್ತಿ ವಿಶೇಷಾಂಕ'ದಲ್ಲಿ ಪ್ರಕಟ)

‘ಚೆನ್ನಬಸವನಾಯಕ’ : ಇತಿಹಾಸವೆಂಬ ಕನ್ನಡಿ

ಇದು ಐತಿಹಾಸಿಕ ಕಾದಂಬರಿಗಳ ವಿಚಾರ ಸಂಕಿರಣ ಎಂದು ವ್ಯವಸ್ಥಾಪಕರು ಹೇಳಿದ್ದಾರೆ. ಹೀಗಾಗಿ ಮಾಸ್ತಿಯವರ ‘ಚೆನ್ನಬಸವನಾಯಕ’ ಕಾದಂಬರಿಯನ್ನು ಒಂದು ಐತಿಹಾಸಿಕ ಕಾದಂಬರಿಯೆಂದೇ ಪರಿಗಣಿಸಿ ನಾನು ಮಾತನಾಡಬೇಕಾದ ನಿರೀಕ್ಷೆಯುಂಟು. ಅಲ್ಲದೆ ಈ ಕಾದಂಬರಿಯನ್ನು ಕುರಿತ ಈವರೆಗಿನ ಎಲ್ಲ ವಿಮರ್ಶೆಯೂ, ಟೀಕೆ ಟಿಪ್ಪಣಿಗಳೂ ಈ ಪರಿಗಣನೆಯ ಮೇಲೆ ನಡೆದಿವೆ. ಆದರೆ ಈ ಕಾದಂಬರಿಯನ್ನು ಐತಿಹಾಸಿಕ ಕಾದಂಬರಿ ಎಂದು ಅಥವಾ ಎಂದಷ್ಟೇ ನೋಡಬಹುದೇ? ಅಕಸ್ಮಾತ್ ನೋಡಿದರೂ ಅದರ ಪೂರ್ಣ ಸತ್ಯ ದಕ್ಕೀತೆ ಎಂಬ ಬಗ್ಗೆ ನನಗೆ ಸಂದೇಹವಿದೆ. ‘ಚೆನ್ನಬಸವನಾಯಕ’ ಕಾದಂಬರಿಯನ್ನು ಓದಿ ಮುಗಿಸಿದಾಗ ಅದು ಬಿಟ್ಟುಕೊಡುವ ಮತ್ತು ಕೊಡದ ಎರಡೂ ಅರ್ಥಗಳನ್ನು ಗ್ರಹಿಸತೊಡಗಿದಾಗ, ಇದನ್ನು ಐತಿಹಾಸಿಕ ಕಾದಂಬರಿಯೆಂದು ಪ್ರವೇಶ ಮಾಡುವುದೇ, ನಾವು ಇದನ್ನು ಇಡಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ಇಡಬಹುದಾದ ಮೊದಲ ತಪ್ಪು ಹೆಜ್ಜೆಯೇನೋ ಎಂಬ ಅನುಮಾನ ಮೂಡುತ್ತದೆ. ಇತಿಹಾಸ ಹಾಗೂ ಐತಿಹಾಸಿಕ ಎಂಬ ಶಬ್ದಗಳ ಪ್ರಚಲಿತ ಅರ್ಥಗಳ ಹಿನ್ನೆಲೆಯಲ್ಲಿ ನನ್ನ ಈ ಅನುಮಾನ. ಹಾಗೆ ನೋಡಿದರೆ ಯಾವುದು ಇತಿಹಾಸ ಅಥವಾ ಐತಿಹಾಸಿಕವಲ್ಲ? ಬಗೆದು ನೋಡಬಲ್ಲವನಿಗೆ ದಾಟಿದ ಪ್ರತಿಯೊಂದು ಕ್ಷಣವೂ ಇತಿಹಾಸವೇ. ಆದರೆ ಹೀಗೆ ಬಗೆದು ನೋಡಿದಾಗ ಸಿಗುವುದು ಬರೀ ಇತಿ-ಹಾಸವೇ? ‘ಚೆನ್ನಬಸವನಾಯಕ’ ಓದಿದಾಗ ನಮಗೆ ಎದುರಾಗುವುದು ಇಂಥ ಪ್ರಶ್ನೆಯೇ.

ನಿಜ, ಮಾಸ್ತಿ ಈ ಕಾದಂಬರಿಯನ್ನು ಸಾಂಪ್ರದಾಯಿಕ ಐತಿಹಾಸಿಕ ಕಾದಂಬರಿಯಂತೆಯೇ ಮುಗಿಸುತ್ತಾರೆ. ಕೊನೇ ವಾಕ್ಯದಲ್ಲಿ ಅದಕ್ಕೆ ಒಂದು ಪೌರಾಣಿಕ ಸ್ಪರ್ಶ ನೀಡುವ ಪ್ರಯತ್ನವನ್ನೂ ಮಾಡುತ್ತಾರೆ. ಅವರು ಕೇಳುತ್ತಾರೆ : ‘ಚೆನ್ನಬಸವನಾಯಕ ಇನ್ನು ಬರುವುದುಂಟೆ? ಇತಿಹಾಸ, ಕನಸಪಟ. ಯಾವ ಕನಸೂ ಮತ್ತೆ ಕಾಣುವುದಿಲ್ಲ. ಆದರೆ ಕನಸಿನ ಹಿಂದಿರುವ ಮನಸ್ಸು ಅಂತೇ ಇರುತ್ತದೆ. ಚೆನ್ನಬಸವನಾಯಕ ದುರ್ದೈವದ ಝುಂಝೂವಾತದಲ್ಲಿ ಸಿಕ್ಕಿದ ಒಂದು ಹಕ್ಕಿಯಾದನು. ಅವನ ರೆಕ್ಕೆ ಅವನ ಅದೃಷ್ಟದ ಹೊಡೆತವನ್ನು ತಡೆಯಲಾರದೆ ಮುರಿಯಿತು. ಆದರೂ ಅವನ ಜೀವ ಸೋತನೆನ್ನಲಿಲ್ಲ. ದುರ್ದೈವವನ್ನು ಎದುರಿಸಿ ನಿಂತಿತು. ತಲೆ ಮಣಿಯದೆ ನಂದಿತು. ಅದರಿಂದ ಈಗ ಅದು ಸಂಪ್ರದಾಯವಾಗಿ ಜೀವಿಸಬಲ್ಲದು.

ನಾಯಕನ ಆ ಸ್ವಾಭಿಮಾನ, ಆ ದೇಶಪ್ರೇಮ, ಅವನ ಸ್ವಜನವಾತ್ಸಲ್ಯ, ನಾಡಿನ ಜೀವನದಲ್ಲಿ ಎಂದೂ ಬೇಕಾದ ವಸ್ತುಗಳು; ಎಂದೂ ತಪ್ಪದ ಅವು ಆ ಜೀವನದಲ್ಲಿ ಕಾಣಲಿ; ನಿತ್ಯದ ಅವತಾರವಾಗಿ ಜನತೆಯನ್ನು ಕಾಪಾಡಲಿ''.

ಹಾಗೆ ನೋಡಿದರೆ ಈ ಹಾರೈಕೆಯ ಮಾತುಗಳು ಇತಿಹಾಸದ ಪರಿಭಾಷೆಗೆ ಸೇರಿದವುಗಳಲ್ಲ. ಅಷ್ಟೇ ಅಲ್ಲ, ಈ ಮಾತುಗಳು ಕಾದಂಬರಿಯ ಮೈಯಿಂದ ಒಡಮೂಡಿದವೂ ಅಲ್ಲ. ಏಕೆಂದರೆ ಇಡೀ ಕಾದಂಬರಿಯಲ್ಲಿ ಎಲ್ಲೂ ಚೆನ್ನಬಸವನಾಯಕ ಹೀಗೆ ಧೀರೋದಾತ್ತ ನಾಯಕನಂತೆ ಪ್ರಕಟವಾಗುವುದಿಲ್ಲ. ನಿಜವಾಗಿ ನೋಡಿದರೆ ಈ ಕಾದಂಬರಿಯ ನಾಯಕ ನೇಮಯ್ಯ, ಪ್ರತಿ - ನಾಯಕ ಹೈದರಾಲಿ. ಒಂದು ಕಲ್ಪನೆಯ ಪಾತ್ರ, ಇನ್ನೊಂದು ಐತಿಹಾಸಿಕ ಪಾತ್ರ. ಕಾದಂಬರಿ ಕಟ್ಟಿಕೊಡುವ ಒಟ್ಟು ಬದುಕಿನ ಚಿತ್ರದಲ್ಲಿ, ಆ ಜೀವನ ಸಂಘರ್ಷದಲ್ಲಿ ನಿರ್ಣಾಯಕವೆಂಬಂತೆ ಗೆಲ್ಲುವವರು ಇವರಿಬ್ಬರೇ - ಆದರೆ ಬೇರೆ ಬೇರೆ ಅರ್ಥಗಳಲ್ಲಿ, ನೆಲೆಗಳಲ್ಲಿ. ನೇಮಯ್ಯ ಆಟವಾಡದೆ ಗೆದ್ದರೆ, ಹೈದರಾಲಿ ಆಟವಾಡಿ ಗೆಲ್ಲುತ್ತಾನೆ. ಆದರೆ ಇದರಲ್ಲಿ ನಿಜವಾದ ಗೆಲುವು ಯಾರದು? ಮಹಾಭಾರತದಲ್ಲಿ ನಿಜವಾದ ಗೆಲುವು ಯಾರದು ಎಂಬ ಪ್ರಶ್ನೆಯಷ್ಟೇ ಗಹನವಾದ ಪ್ರಶ್ನೆ ಇದು - ಈ ಕಾದಂಬರಿಯ ಚೌಕಟ್ಟಿನ ಮಟ್ಟಿಗಾದರೂ.

೨

'ಚೆನ್ನಬಸವನಾಯಕ'ದ ಅರ್ಧಕ್ಕರ್ಧ ಪಾತ್ರಗಳು ಕಾಲ್ಪನಿಕವೆಂದು ಮಾಸ್ತಿಯವರೇ ಮುನ್ನುಡಿಯಲ್ಲಿ ಹೇಳಿದ್ದಾರೆ. ಈ ಕಾದಂಬರಿಯ ನಿಜವಾದ ನಾಯಕನೆಂಬಂತೆ ಮೂಡುವ ನೇಮಯ್ಯನೂ ಇಂತಹ ಕಾಲ್ಪನಿಕ ಪಾತ್ರಗಳಲ್ಲಿ ಒಂದು. ಜೊತೆಗೆ ಈ ಕಾದಂಬರಿಗೆ ಮುಖ್ಯ ಪ್ರೇರಣೆ, ಚೆನ್ನಬಸವನಾಯಕ ಇದ್ದು ಹೋದ ನಾಡಿನಲ್ಲಿ ಈಗ - ಅಂದರೆ ಒಂದೂವರೆ ಶತಮಾನಗಳ ನಂತರ ಕೇಳಿದ ಜಾನಪದ ಕಥೆ ಮತ್ತು ಹಾಡುಗಳೇ. ಇತಿಹಾಸವೇನಿದ್ದರೂ ಇಲ್ಲಿ ನೆಪ ಅಷ್ಟೇ ಅಥವಾ ಹೆಚ್ಚೆಂದರೆ, ಮಾಸ್ತಿಯವರೇ ಮುನ್ನುಡಿಯಲ್ಲಿ ಹೇಳಿರುವ ಹಾಗೆ ಒಂದು 'ತಡಿಕೆ' ಅಷ್ಟೆ. ಅವರು ಹೇಳುತ್ತಾರೆ : 'ಇತಿಹಾಸದ ವಿವರವನ್ನು ಬಲ್ಲವರು ಕತೆಯನ್ನು ಓದಿದರೆ, ಇದರ ಸಂಗತಿಗಳು ಅದರ ತಡಿಕೆಯ ಮೇಲೆ ತಮ್ಮದೇ ಆದ ಒಂದು ನಿಯಮವನ್ನು ಅನುಸರಿಸಿ ಬೆಳೆದಿರುವುದನ್ನು ಕಾಣುವರು. ಈ ತಂತ್ರ ಇಂಥ ಕತೆಗಳಲ್ಲೇ ವಾಡಿಕೆಯಾದದ್ದೇ, ಅಷ್ಟೇ ಅಲ್ಲ, ಮುಂದೊಮ್ಮೆ ಈ ಕಾದಂಬರಿಯ ಬಗ್ಗೆ ಸಮಾಜದ ಒಂದು ವರ್ಗದಿಂದ ಅಪಸ್ವರ ಎದ್ದಾಗ ''ಈಗ... ಕಥೆಯ ಓಘವನ್ನು ಬೇರೆ ಮಾಡಲಾರೆ. ಹಿಂದೆ ಒಂದು ಆಧಾರವನ್ನು ಅನುಸರಿಸಿ ಬರೆದಾಯಿತು, ಬರೆದದ್ದು ಈಗ ಹಾಗೆಯೇ ನಿಲ್ಲಬೇಕಾಗಿದೆ. ಈ ಬಗ್ಗೆ ನಾನು ಇಂಥ ಎಲ್ಲ ನನ್ನ ಜನರ ಕ್ಷಮೆಯನ್ನು ಬೇಡುತ್ತೇನೆ'' ಎನ್ನುತ್ತಾರೆ. ಕ್ಷಮೆಯಾದರೂ ಬೇಡುವೆ, ಕಥೆಯ ಓಘವನ್ನು ಬದಲಿಸಲಾರೆ ಎಂಬಷ್ಟು ಅಚಲರಾಗುವಂತೆ ಮಾಸ್ತಿಯವರನ್ನು ಈ ಕಥೆಗೆ ಬದ್ಧರನ್ನಾಗಿ ಮಾಡಿರುವ ನಂಬಿಕೆಯಾದರೂ ಯಾವುದು? ಅದೂ, ಇತಿಹಾಸದ

ಇದನ್ನು ಅರಿಯಲು ನಾವು ಕಥೆಗಾರಿಕೆಯನ್ನು ಕುರಿತು ಮಾಸ್ತಿಯವರ ನಂಬಿಕೆಯನ್ನು ಅನುಸರಿಸಿಕೊಂಡು ಹೋಗಬೇಕು. ತಮ್ಮ ಒಟ್ಟು ಕಥೆಗಾರಿಕೆಯ ಹಿಂದಿನ ಪ್ರೇರಣೆಯನ್ನು ವಿವರಿಸುತ್ತಾ ಅವರು ಹೀಗೆ ಹೇಳುತ್ತಾರೆ, ''ನನ್ನ ಕತೆಗಳನ್ನು ಬರೆಯುವಲ್ಲಿ ನನ್ನ ಉದ್ದೇಶ ಒಂದೇ ಒಂದು ಎಂದು ನಾನು ಹಲವು ಸಂದರ್ಭಗಳಲ್ಲಿ ಸೂಚಿಸಿದ್ದೇನೆ. ಆ ಉದ್ದೇಶ, ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು. ಇಂದಿನ, ಹಿಂದಿನ, ನಮ್ಮ ನಾಡಿನ, ನಮ್ಮ ರಾಷ್ಟ್ರದ, ಬೇರೆ ಹತ್ತು ರಾಷ್ಟ್ರಗಳ ಬಹು ತೆರನ ಜೀವನ ಚಿತ್ರಗಳು ನನ್ನ ಕತೆಗಳಲ್ಲಿ ಕಾಣುತ್ತವೆ. ಇವು ಸತ್ಯವನ್ನು ಬಿಂಬಿಸಿವೆ. ಸ್ಫುಟವಾಗಿವೆ. ಇಷ್ಟೋ ಅಷ್ಟೋ ರಸಾನುಭವವನ್ನು ನೀಡುತ್ತವೆ ಎಂದು ಓದುವವರಿಗೆ ಕಂಡರೆ ನನ್ನ ಕೆಲಸ ಸಾರ್ಥಕ ಆಯಿತು. ಇದರ ಆಚೆಗೆ ಇವನ್ನು ಓದುವವರು ಇವುಗಳಲ್ಲಿ ಜೀವನವನ್ನು ಕುರಿತು ಇಂಥ ಅಂಥ ನೀತಿ ಮುಂತಾದವನ್ನು ನಿರೂಪಿಸುವ ಉದ್ದೇಶ ಇದೆ ಎಂದು ಭಾವಿಸಬಹುದು. ದಿಟವಾದ ಜೀವನದಿಂದ ಒಂದು ಭಾವ ತೋರುವಂತೆ ಜೀವನದ ಒಂದು ದಿಟವಾದ ಚಿತ್ರದಿಂದಲೂ ಒಂದು ಭಾವ ತೋರುವುದು ಸಹಜ. ಅದರಿಂದ ಓದುವವರಿಗೆ ಪ್ರಯೋಜನ, ಸಂತೋಷ ಆಗುವುದಾದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ'' *(ಮುನ್ನುಡಿ : ಸಣ್ಣ ಕಥೆಗಳು - ೧೪)*

ಕಥೆಯ ಓಘವನ್ನು ಬದಲಾಯಿಸಲಾರೆ ಎಂಬ ಹಠದ ಹಿಂದಿನ ನಂಬಿಕೆ ಇಲ್ಲಿದೆ. ತಾವು ಜೀವನದಲ್ಲಿ ಕಂಡುಕೊಂಡ ದರ್ಶನವನ್ನು ವಿವರಿಸುವ, ಜೀವನದ ಒಂದು ದಿಟವಾದ ಚಿತ್ರವನ್ನು ಕೊಡುವ ಮೂಲಕ ಉಂಟುಮಾಡುವ ಭಾವ ಇಲ್ಲಿ ಮುಖ್ಯ. ಓಘವನ್ನು ಬದಲಾಯಿಸಿದರೆ ಇಲ್ಲಿ ಎಲ್ಲ ತಲೆಕೆಳಕಾಗುತ್ತದೆ, ದರ್ಶನದಿಂದ ಹಿಡಿದು ಭಾವದವರೆಗೆ. ಅಂದರೆ, ಕಥೆಗಾರಿಕೆಯನ್ನು ಕುರಿತ ಕಥೆಗಾರನ ನಂಬಿಕೆಯೇ ಹಾಳಾಗುತ್ತದೆ. ಹಾಗಾದಾಗ ಕಥೆಗಾರಿಕೆಯಲ್ಲಿ ಇನ್ನೇನು ಉಳಿಯಬಲ್ಲುದು? ಇದೀಗ ಮುಖ್ಯ ಪ್ರಶ್ನೆ : ಹಾಗಾದರೆ ಮಾಸ್ತಿಗೆ ಇಲ್ಲಿ ಇತಿಹಾಸದ ಹಂಗೇಕೆ? ನಿಜವಾದ ಮಾಸ್ತಿಗೆ ಇಲ್ಲಿ ಇತಿಹಾಸದ ಹಂಗೇ ಇಲ್ಲ. ಇತರ ಕಥೆಗಳಲ್ಲಿ ಸಮಕಾಲೀನ ಜೀವನವನ್ನು ಅವಲಂಬಿಸಿದ ಮಟ್ಟಿಗಷ್ಟೇ ಇಲ್ಲಿ ಇತಿಹಾಸವನ್ನು ಅವರು ಅವಲಂಬಿಸಿದ್ದಾರೆ. ಇತಿಹಾಸವೇನಿದ್ದರೂ ಇಲ್ಲಿ ಕನ್ನಡಿ - ಒಂದು ದಿಟದ ಚಿತ್ರವನ್ನು ಕೊಡುವ ಕನ್ನಡಿ.

೩

ಹೀಗೆ ಇತಿಹಾಸವೆಂಬ ಕನ್ನಡಿ ('ಅದರ ಕನಸಿನ ಹಿಂದಿರುವ ಮನಸ್ಸು ಅಂತೇ ಇರುತ್ತದೆ') ಬಳಸಿ ಮಾಸ್ತಿ ವಿವರಿಸುತ್ತಿರುವ ದರ್ಶನವಾದರೂ ಯಾವುದು? ಉಂಟು ಮಾಡುತ್ತಿರುವ ಭಾವವಾದರೂ ಎಂತಹುದು? ಇದನ್ನು ಅರ್ಥಮಾಡಿಕೊಳ್ಳಲು ಮಾಸ್ತಿ ಬಳಸಿರುವ ಕನ್ನಡಿಯ ಗುಣವನ್ನು ಅರಿಯಬೇಕು. ಬೌದ್ಧ ಧರ್ಮದ ಝೆನ್ ಶಾಖೆಯ ಪ್ರಕಾರ

ಮನಸ್ಸನ್ನು ಕನ್ನಡಿಯಂತೆ ಹದಗೊಳಿಸಿಕೊಳ್ಳಬೇಕಂತೆ, ಸದಾ ಸ್ವಚ್ಛಗೊಳಿಸಿಕೊಳ್ಳುತ್ತಿರಬೇಕಂತೆ - ಸತ್ಯವನ್ನು ಅರಿಯಲು. 'ಕನ್ನಡಿಯನ್ನು ನೋಡಿ - ಅದು ಏನನ್ನೂ ಸ್ವೀಕರಿಸುವುದಿಲ್ಲ, ಏನನ್ನೂ ತಿರಸ್ಕರಿಸುವುದಿಲ್ಲ, ಅದು ಸುಮ್ಮನೆ ಎಲ್ಲವನ್ನೂ ಗ್ರಹಿಸುತ್ತದೆ' ಎನ್ನುತ್ತಾರೆ ಝೆನ್ ಗುರುಗಳು. ಮಾಸ್ತಿ ಇತಿಹಾಸವನ್ನು ಕನ್ನಡಿಯಾಗಿ ಬಳಸುವುದು ಈ ರೀತಿ. ಎಲ್ಲವೂ ಕಾಣುತ್ತದೆ, ಎಲ್ಲವೂ ಅರ್ಥವಾಗುತ್ತದೆ. ಆದರೆ ಯಾವುದು ಚೆನ್ನ ಅಥವಾ ರೂಕ್ಷ ಎಂದು ಸೂಚಿಸುವ ಗೊಡವೆಗೆ ಹೋಗುವುದಿಲ್ಲ. ಅದೇನಿದ್ದರೂ ಆ ಚಿತ್ರ ನೋಡಿ ಮೂಡುವ ಭಾವದಲ್ಲಿ ತೀರ್ಮಾನವಾಗುವಂತಹುದು. 'ಮಾಯಣ್ಣನ ಕನ್ನಡಿ' ಎಂಬ ತಮ್ಮ ಕೊನೆಯ ಮತ್ತು ನೂರನೆಯ ಕತೆಯಲ್ಲಿ ಒಬ್ಬ ಗುರುವಿನ ಬಾಯಲ್ಲಿ ಮಾಸ್ತಿ ಈ ಮಾತನ್ನು ಹೇಳಿಸುತ್ತಾರೆ : ''ಆಟದ ಸರಿ ತಪ್ಪನ್ನು ಕುರಿತು ವಿಚಾರ ಮಾಡುವುದು, ತೀರ್ಪಿಗೆ ಬರುವುದು ಸರಿ ಆಗಲಾರದು. ಮನುಷ್ಯನ ಬುದ್ಧಿಗೆ ಮಿತಿಯುಂಟು. ಈ ಮಿತಿಯಿಲ್ಲದ ಬೇರೆ ವಿಚಾರ, ಬೇರೆ ತೀರ್ಪು ಈ ಮಿತಿಯ ಬುದ್ಧಿಗೆ ನಿಲುಕುವುದಿಲ್ಲ'' ಅಷ್ಟೇ ಅಲ್ಲ, ಆ ಗುರು ಮುಂದುವರಿದು ಹೇಳುವರು : ''ತಾವು ಇದನ್ನು ಒಪ್ಪಬೇಕು ಎಂದು ನಾನು ಹೇಳುತ್ತಿಲ್ಲ. ಒಪ್ಪದಿದ್ದರೆ ತಪ್ಪಲ್ಲ. ಆ ಒಪ್ಪದಿರುವ ಭಾವವೂ ದೈವದ ಪ್ರೇರಣೆಯೇ. ಹೀಗೆಂದ ಮೇಲೂ ಕನ್ನಡಿಯಲ್ಲಿ ಕಂಡ ಚಿತ್ರ ಗಮನಕ್ಕೆ ಅರ್ಹವಾದದ್ದು''.

ಇಂತಹುದೇ ಮಾತುಗಳನ್ನಾಡುವ ಗುರುವೊಬ್ಬರು - ಈತ ದತ್ತಾತ್ರೇಯ ಪೀಠದ ಸಿದ್ಧರು - 'ಚೆನ್ನಬಸವನಾಯಕ'ದಲ್ಲೂ ಬರುತ್ತಾರೆ. ಚೆನ್ನಬಸವನಾಯಕ ಮರಣಶಯ್ಯೆಯಲ್ಲಿ ಮಲಗಿರುವಾಗ ಹೇಳುತ್ತಾನೆ: ''ತೆರೆಯಾಚೆ ಏನೋ ಇರಬೇಕು. ಅದೇನು ಅನ್ನೋದು ತಿಳಿಯಲಿಲ್ಲ. ಮರದ ಮೋಟು ಮನುಷ್ಯನಾಗುತ್ತದೆ; ಸುಳಿದ ಮೆರೆದ ಮನುಷ್ಯ ದೆವ್ವ ಆಗುತ್ತಾನೆ. ಕಾರ್ಯಕ್ಕೆ ಕಾರಣ ಎಂದಾಗ ಇರಬಹುದೇ ಅನ್ನಿಸುತ್ತದೆ. ಒಂದೇ ಕ್ಷಣ, ತಿರುಗಿ ಅದು ಕಟ್ಟು ಕತೆ ಅನ್ನಿಸುತ್ತದೆ''

ಸಿದ್ಧ : ''ಇದನ್ನೇ ವೈದಿಕಮಂದಿ ಮಾಯೆ ಎನ್ನುತ್ತಾರೆ. ನೀರಿನ ಪಾಚಿ ಇಂತೇ. ಅಲಸಿದರೆ ನೀರು ಕಂಡೀತು. ಕೈಯೆತ್ತಿ, ಮತ್ತೆ ಪಾಚಿ. ಒಳ್ಳೆಯದು - ನೀವು ಯಾವುದನ್ನೂ ಒಪ್ಪಲೇಬೇಕು ಎಂತ ಅನ್ನುವುದಿಲ್ಲ. ನಿಮ್ಮ ಸ್ವಭಾವದಂತೆ ನೀವು ನಂಬಿರಿ''

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಕಾದಂಬರಿ ಆರಂಭವಾಗುವುದೂ ಇದೇ ಸಿದ್ಧರ ಪೀಠದ ಬಳಿಯಿಂದಲೇ. ಮಾಸ್ತಿಯವರ ಮನಸ್ಸಿನಲ್ಲಿ ಇತಿಹಾಸವೆಂಬ ಕನಸಿನ ಪಟ ಬಿಚ್ಚಿಕೊಳ್ಳುವುದೂ, ಕಥೆಗೆ ಓಘ ದೊರೆಯುವುದೂ ಈ ಪೀಠವಿರುವ ಸ್ಥಳದಲ್ಲಿ ನಿಂತು ಸ್ಥಳದ ಮಹಿಮೆಯಿಂದ ಮೈದುಂಬಿಕೊಂಡು ಸುತ್ತ ಒಮ್ಮೆ ವಿಹಂಗಮ ನೋಟ ಬೀರಿದಾಗ. ಅಂದರೆ ಇಡೀ ಕಾದಂಬರಿ ದೈವದ ಆಟ ಅಥವಾ ವಿಧಿವಿಲಾಸ...

ಹಾಗಾದರೆ ಮನುಷ್ಯ ಪ್ರಯತ್ನವೆಂಬುದಕ್ಕೆ ಇಲ್ಲಿ ಸ್ಥಾನವೇ ಇಲ್ಲವೇ? ಹಾಗೆ ನೋಡಿದರೆ ಇಡೀ ಕಾದಂಬರಿಯ ತುಂಬಾ ನಡೆದಿರುವುದು ಮನುಷ್ಯ ಪ್ರಯತ್ನವೇ. ಎಷ್ಟಾದರೂ ಇಲ್ಲಿ ನಡೆದಿರುವ ಆಟ, ಆಟಗಳ ಆಟವೆನಿಸಿರುವ ರಾಜಕಾರಣ. ಆದರೆ ಇಲ್ಲಿ ಚೆನ್ನಬಸವನಾಯಕನೂ ಸೇರಿದಂತೆ ಬಹುತೇಕ ಎಲ್ಲರೂ ಮನುಷ್ಯ ಪ್ರಯತ್ನವೆಂಬ ಪರೀಕ್ಷೆಯಲ್ಲಿ ಸೋತು

ಸುಣ್ಣವಾಗುತ್ತಾರೆ. ಇವರಲ್ಲಿ ದೈವಕೃಪೆಗಾಗಿ ಹಲವಾರು ಸಾಧನೆ ಮಾಡಿದವರೂ ಸೇರುತ್ತಾರೆ. ಉದಾಹರಣೆಗೆ ಅನೇಕ ದೇವತೆಗಳ ಸೇವೆ ಮಾಡಿ ಕೊನೆಗೆ ಕಾಪಾಲಿಕನಾಗುವ ಹಂಪಯ್ಯ. ಇತರರು ಆಯಾಸದಲ್ಲಿ ಸೋತರೆ ಈತ ಹುಚ್ಚನಾಗಿ ಸತ್ತು ಸೋಲುತ್ತಾನೆ. ಇದೇ ಮಾಸ್ತಿಯವರ ಕಥೆಗಾರಿಕೆಯ ಮರ್ಮ ಕೂಡ. ದೈವದ ಆಟದಲ್ಲಿ ದೇವರ ಸೇವಕನೂ ಸೋಲುತ್ತಾನೆ - ಅದು ಎಲ್ಲರಿಗಿಂತ ಹೀನಾಯವಾದ, ಭಯಾನಕವಾದ ಸೋಲು. ಸೋಲು ಅಂದರೆ ಇಲ್ಲಿ ತಾನು ಹಾಕಿಕೊಂಡ ಗುರಿ ಮುಟ್ಟದಿರುವುದು. ಈ ಅರ್ಥದಲ್ಲಿ ಈ ಇಡೀ ಕಾದಂಬರಿಯಲ್ಲಿ ಆಟವಾಡಿ ಗೆಲ್ಲುವವರು ಇಬ್ಬರೇ - ಹೈದರಾಲಿ ಮತ್ತು ಮಲ್ಲಿಗೆ ಎಂಬ ಜೀತದ ಹೆಣ್ಣುಮಗಳು. ಇವರಿಬ್ಬರ ಗೆಲುವಿನ ಗುಟ್ಟೇ ಇಡೀ ಕಾದಂಬರಿಯ ಆಂತರಿಕ ಹಾಗೂ ಬಾಹ್ಯ - ಈ ಎರಡೂ ಸ್ತರಗಳ ಐಕ್ಯತೆಯ ಗುಟ್ಟು.

೪

ಮನುಷ್ಯನಾಗಿ ಹುಟ್ಟಿದ ಮೇಲೆ ಆಸೆ ಇದ್ದೇ ಇರುವುದು ಸಹಜ. ಆದರೆ ಆ ಆಸೆಯನ್ನು ಹದ ಮಾಡುವ ಆಂತರ್ಯದ ಒಳದನಿಗೆ ಬಾಗುವ ಪ್ರಜ್ಞಾಪೂರ್ವಕ ವಿನಯವೂ ಇರಬೇಕು. ಹೈದರಾಲಿಗೆ ರಾಜ್ಯ ಕಟ್ಟುವ ಆಸೆ. ಆದರೆ ಆ ಆಸೆ ಎಂದೂ ತಿಂದ ಮನೆಗೆ ಎರಡು ಬಗೆಯಬಾರದು - ನಮಕ್ ಹರಾಮಿಯಾಗಬಾರದು - ಎಂಬ ಆಂತರ್ಯದ ನಂಬಿಕೆಯನ್ನು ಉಲ್ಲಂಘಿಸಿ ಹೋಗುವಷ್ಟು ವ್ಯಸನವಾಗುವುದಿಲ್ಲ. ಈ ನಂಬಿಕೆಯ ಒಂದು ಶಕ್ತಿಯಾಗಿ, ರಕ್ಷೆಯಾಗಿ ಅವನು ಬೆಳೆಯುತ್ತಾ ಹೋಗುತ್ತಾನೆ. (ಆದರೆ ಇಂತಹ ನಂಬಿಕೆಯಿಲ್ಲದ ಟಿಪ್ಪೂ ಸುಲ್ತಾನ ಮುಂದೆ ನಾಶವಾಗುವನು ಎಂಬುದರ ಸೂಚನೆಯೂ ಈ ಕಾದಂಬರಿಯಲ್ಲಿದೆ.) ಮಲ್ಲಿಗೆಯೂ ಅಷ್ಟೇ - ತಾನು ಇಷ್ಟಪಟ್ಟವನನ್ನು ಮದುವೆಯಾಗಬೇಕೆಂಬ ಆಸೆ, ಎಂದೂ ತನ್ನನ್ನು ಸಾಕಿ ಸಲಹಿರುವ ವಸ್ತಾರೆಯ ಹೆಗ್ಗಡಿತಿಯನ್ನು ನೋಯಿಸಬಾರದೆಂಬ ಆಂತರ್ಯದ ನಂಬಿಕೆಯನ್ನು ಉಲ್ಲಂಘಿಸಿ ಹೋಗುವಷ್ಟು ಲಂಪಟವಾಗುವುದಿಲ್ಲ. ಅವಳ ಈ ನಂಬಿಕೆಯೇ ಅವಳಿಗೆ ಸಹಜವೆಂಬಂತೆ ದಾರಿ ತೋರಿಸುತ್ತಾ ಅವಳನ್ನು ಗುರಿ ಮುಟ್ಟಿಸಿ ನಲಿಸುತ್ತದೆ. ಇವರಿಬ್ಬರಿಗೂ ದೈವ ಅಥವಾ ಧರ್ಮ ಎಂದರೆ ಇದೇ.

ಆದರೆ ಮಿಕ್ಕವರಿಗೆ ತಮ್ಮ ಆಸೆಗಳನ್ನು ಹದದಲ್ಲಿರಿಸಬಲ್ಲ ಧರ್ಮವೇ ಅರಿವಿಗೆ ಬಾರದೆ, ಬರೀ ಕ್ಷೋಭೆಗೊಳಗಾಗುತ್ತಾರೆ, ಸೋಲುತ್ತಾರೆ. ಎಷ್ಟೇ ಸದುದ್ದೇಶವಿದ್ದರೂ ಚೆನ್ನಬಸವನಾಯಕ ದುರಂತಕ್ಕೆ ಸಿಕ್ಕುವುದು ಹೀಗೆಯೇ. ತಾಯಿಯ ತಪ್ಪನ್ನು ಕ್ಷಮಿಸಲಾಗದಷ್ಟು ಉದ್ವಿಗ್ನ ಆತ. ಮೌನವೆಂಬುದೇ ಇಲ್ಲ ಅವನಲ್ಲಿ - ಆಂತರ್ಯಕ್ಕೆ ಕಿವಿಗೊಡಲು. ಮೌನದಿಂದ ಹದಗೊಳ್ಳದ ಈ ಉದ್ವಿಗ್ನತೆಯೇ ಅವನನ್ನು ಎಚ್ಚರಿಕೆಯಿಲ್ಲದ ಸಾಹಸಿಯನ್ನಾಗಿ ಹುರಿದುಂಬಿಸಿ ಅವನನ್ನು, ಅವನನ್ನು ನಂಬಿದ ಜೀವಿಗಳ ಜೊತೆಗೇ, ನಾಶಮಾಡುತ್ತದೆ. ಇನ್ನು ವೀರಮ್ಮಾಜಿ, ಮೈಸೂರು ಒಡೆಯರ ಮಾತೇ ಬೇಡ. ಅರಮನೆಗಳೆಂಬ ಹುತ್ತಗಳಲ್ಲೇ ಅವರ ವಾಸ. ಧರ್ಮವೆಂಬುದು

ಸುಳಿಯುದ ಜಾಗ ಅದು...

ಕಾದಂಬರಿಯಲ್ಲಿ ನಡೆಯುವ ಈ ಎಲ್ಲ ತೆರನ ಆಟಗಳಿಗೆ ಸಂವಾದಿಯಾಗುವ ಆಟ ನೇಮಯ್ಯನದು. ಕಾದಂಬರಿಯ ಅತಿ ಮುಖ್ಯ ಕಲ್ಪನೆಯ ಪಾತ್ರವಾದ ನೇಮಯ್ಯ, ಮಾಸ್ತಿಯವರ ಸೂಕ್ಷ್ಮ ಕಲೆಗಾರಿಕೆಗೆ ಹೇಗೋ ಹಾಗೆ ಅವರ ಸೂಕ್ಷ್ಮವಾದ ಧಾರ್ಮಿಕ ನಿಲುವಿಗೂ ಪ್ರತೀಕವಾಗಿದ್ದಾನೆ. 'ಸದಾ ಶೃತಿಯಲ್ಲಿರುವ ವಾದ್ಯದಂತೆ, ಯಾರು ಯಾವಾಗ ಹೇಗೆ ಮೀಟಿದರೂ ಸುಮಧುರ ನಾದ ಹೊರಡಿಸುವ' ವ್ಯಕ್ತಿತ್ವ ಈತನದು. ಸೋತವರ ಜೊತೆಗಿದ್ದೂ ಸೋಲದ ಜೀವ ಇದು. ಏಕೆಂದರೆ ಈ ಜೀವ ಸದಾ ಇನ್ನೊಬ್ಬರನ್ನು ಅರಿಯುವ, ಕ್ಷಮಿಸಿಬಿಡುವ, ಬಿಗಡಾಯಿಸುವ ಸಂದರ್ಭವನ್ನು ತಿಳಿಗೊಳಿಸಲೆತ್ನಿಸುವ, ಅದು ಅಸಾಧ್ಯವಾದಾಗ ಮೌನಿಯಾಗಿ ಬಿಡುವ ಜೀವ. ಈತನಿಗೆ ಆಟದ ಗುರಿ ತನ್ನ ಹೊರಗಿಲ್ಲ, ತಾನೇ ಗುರಿ. ಇಡೀ ಕಾದಂಬರಿಯ ದುರಂತಕ್ಕೆ ಮೂಕ ಸಾಕ್ಷಿ ಈತ. ದತ್ತಾತ್ರೇಯ ಪೀಠಕ್ಕೆ ತಪಸ್ಸಿಗೆ ಹೋಗಬೇಕೆಂದಿದ್ದು, ತಮ್ಮನ ಮಗಳನ್ನು ಸಾಕುವ ಜವಾಬ್ದಾರಿಯಿಂದಾಗಿ ಆಟದ ಕಣದಲ್ಲಿರಬೇಕಾಗಿ ಬಂದ ಈತ, ಎಲ್ಲ ಆಟ ಮುಗಿದ ಮೇಲೆ ಪೀಠಕ್ಕೆ ಹೊರಟುಹೋಗುತ್ತಾನೆ. ಪಲಾಯನವಾಗಿ ಅಲ್ಲ, ತನ್ನ ಪಾತ್ರವಾಡಿ ಹೋಗುವುದು. ಇದು ಗೆಲುವಲ್ಲದಿದ್ದರೆ ಇನ್ನಾವುದು ಗೆಲುವು?

ಹಾಗಾದರೆ ಅಂತಿಮ ಪ್ರಶ್ನೆ : ಈ ದೊಡ್ಡ ಆಟದಲ್ಲಿ ನಿಜವಾದ ಗೆಲುವು ಯಾರದು? ಹೈದರನದೋ, ನೇಮಯ್ಯನದೋ ಅಥವಾ ಏನಾದರೂ ಮಲ್ಲಿಗೆಯದೋ? ಈ ಪ್ರಶ್ನೆಗೆ ಉತ್ತರ ಇಡೀ ಕಾದಂಬರಿಯ ಆಟದ ಅಂಕಣದ ಮಧ್ಯೆ ಇದ್ದೂ ಇಲ್ಲದ ಹಾಗೆ ಇರುವ ಮಠದ ಅಯ್ಯ, ಈ ವಿಚಿತ್ರ ಆಟದಿಂದ ಬೇರೆಗಾಗಿರುವಂತೆ ತೋರುವ ರಾಯಸದ ವೀರಣ್ಣನಿಗೆ ಹೇಳುವ ಈ ಮಾತುಗಳಲ್ಲಿ ದೊರೆಯುತ್ತದೆ :

''ಕರಿ ಮನೆ ಕಾಯಿ ಕೆಂಪಿನ ದಾಳಕ್ಕೆ ನಡೆಯೋದಿಲ್ಲ. ಕೆಂಪಿನ ಮನೆ ಕಾಯಿ ಕರೀದಾಳಕ್ಕೆ ನಡೆಯೋದಿಲ್ಲ. ಅದರದರ ಆಶೆ ಆದುದನ್ನು ನಡೆಸುತ್ತದೆ. ಆಶೆನೋ ದಿನದಿನಕ್ಕೆ ಬೇರೆ ಆಗತದೆ. ದೇವರು ನಿಮ್ಮನ್ನು ಅನ್ಯಾಯಕ್ಕೆ ಹೇಸೋವರನ್ನ ಮಾಡಿದ್ದಾನೆ, ಬದುಕಿಸಿದ್ದಾನೆ. ಬದುಕಿಸಿದೇ ಅಂತ ಕೈ ಮುಗಿಯಿರಿ, ಒಳ್ಳೇ ದಾರೀಲಿ ನಡೀರಿ... ಅಂದರೆ ಈ ಚರ್ಚೆ ಬಹಳ ತಾವ ಮಾಡಬೇಡಿರಿ. ಏನು ತಿರುವಿ ಹಾಕಿದರೂ ಮನಸ್ಸಿನಾಗೆ ತಿರುವಿ ಹಾಕಿರಿ. ನಡೆಯೋ ನಡೆ ಕೆಡಿಸಬೇಡಿರಿ''

ಇಡೀ ಕಾದಂಬರಿ ಸೂಚಿಸುವುದು, ಇತಿಹಾಸದ ಕನ್ನಡಿ ತೆರೆದು ತೋರುವುದು, ಧರ್ಮ, ದೈವ ಹಾಗೂ ರಾಜಕಾರಣಗಳ ಈ ಸೂಕ್ಷ್ಮ ಸಮತೋಲನ ಆಟವನ್ನೇ. ಈ ಆಟದ ನಡೆಯನ್ನು ಸೂಕ್ಷ್ಮವಾಗಿ ಗಮನಿಸಿರಿ : ಈ ಕಾದಂಬರಿಯ ನಾಟಕದ ಪ್ರೇರಣಾ ಸ್ಥಳವಾದ ದತ್ತಾತ್ರೇಯ ಪೀಠದಲ್ಲೇ ಈ ಆಟದ ಮೊದಲ ಕಾಯಿ ಚಲಿಸಿದೆ. ಇಲ್ಲಿನ ಬೂದಿ ಜೋಗಿಗಳು, ಸಿದ್ಧರು ಅಲ್ಲಿಗೆ ಬೂಂದ್ ಬೀಜದೊಂದಿಗೆ ಆಗಮಿಸಿದ ಮುಸ್ಲಿಂ ಸಂತರನ್ನು 'ಪ್ರಜ್ಞಾಪೂರ್ವಕ'ವಾಗಿ ಸ್ವಾಗತಿಸಿದ್ದಾರೆ. ಹೊಸ ಧಾರ್ಮಿಕ ಸಂಶ್ಲೇಷಣೆ ಆರಂಭವಾಗಿದೆ. ಆದರೆ ಕಾಲದ ಕರೆಗೆ ಮನುಷ್ಯನ ಪ್ರಜ್ಞೆ ಓಗೊಡುವ ಈ ಕ್ರಿಯೆ ಒಳಗೆ ಎಷ್ಟು ತುರ್ತಿನದೋ, ಸೂಕ್ಷ್ಮವೋ ಅಷ್ಟೇ

ಆತಂಕಕಾರಿ ಹಾಗೂ ರೂಕ್ಷವಾಗಿದೆ ಹೊರಗೆ : ಕ್ಲೀಬವಾಗಿ ಹೋಗಿ ಕುಸಿಯುತ್ತಿರುವ ಮೈಸೂರೊಡೆಯರ ಹಿಂದೂ ಸಾಮ್ರಾಜ್ಯದ ಮೇಲೆ ಮುಸ್ಲಿಂ ಪ್ರಭುತ್ವದ ನೆರಳು ಬೀಳತೊಡಗಿದೆ. ಜೊತೆಗೆ ಇಂಗ್ಲೀಷ್ ವ್ಯಾಪಾರಿಗಳ ಪ್ರವೇಶವೂ ಆಗಿದೆ. ಹೊಸ ರಾಜಕೀಯ ಸಂಶ್ಲೇಷಣೆಯ ತಳಮಳವು ರಾಜ, ಪ್ರಜೆ ಎನ್ನದೆ ಎಲ್ಲರನ್ನೂ ಕಂಗೆಡಿಸಿದೆ. ಬಿದನೂರು ಸಂಸ್ಥಾನ ಇದಕ್ಕೇನೂ ಹೊರತಲ್ಲ. ತಾಯಿ - ಮಗ ರಾಜ್ಯಾಧಿಕಾರಕ್ಕಾಗಿ ಎದುರು ಬದುರು ನಿಂತು, ಇಡೀ ಕಾದಂಬರಿಯನ್ನು ಆವರಿಸುವ ದುರಂತ ನಾಟಕಕ್ಕೆ ನಾಂದಿ ಗೀತೆ ಹಾಡಿದ್ದಾರೆ. ಈ ನಾಟಕದ ಮೊದಲಂಕದಲ್ಲಿ ಚೆನ್ನಬಸವನಾಯಕನ ಪತ್ನಿ ಶಾಂತವ್ವೆ ತನ್ನ ಗಂಡನ, ಸಂಸಾರದ ಹಾಗೂ ರಾಜ್ಯದ ಒಳಿತನ್ನು ಕೋರಿ ಸಲ್ಲಿಸಿದ ಪೂಜೆ ನಾಟಕದ ಕೊನೆಯಂಕದ ಹೊತ್ತಿಗೆ ತಾನು, ರಾಜ್ಯ, ಸಂಸಾರ, ಗಂಡ - ಹೀಗೆ ಎಲ್ಲರ, ಎಲ್ಲದರ ಸರ್ವನಾಶದೊಂದಿಗೆ ಫಲಿಸುವಂತಹ 'ದುರ್ದೈವದ ಝುಂಝಾವಾತ'ಕ್ಕೆ ಸಾಕ್ಷೀಭೂತವಾಗಿದೆ ಆಟ ಆರಂಭಿಸಿದ ಈ ಪೀಠ.

ಹಾಗಾದರೆ ಒಟ್ಟಾರೆ ಮಾಸ್ತಿ ತಮ್ಮ ಈ ಕಥಾ ಸಂವಿಧಾನದ ಮೂಲಕ ಹೇಳುತ್ತಿರುವುದಾದರೂ ಏನು? ಧರ್ಮದ ಬಿಕ್ಕಟ್ಟೇ ಎಲ್ಲ ದುರ್ದೈವದ ಝುಂಝಾವಾತದ ಮೂಲ ಎಂದೇ? ಇರಬಹುದೆನ್ನಿಸುತ್ತದೆ. ಧರ್ಮವೆಂದರೇನು ಎಂಬುದನ್ನು ಇಡೀ ಕಾದಂಬರಿಯ ಪ್ರತಿ ಹಂತದಲ್ಲು, ಪ್ರತಿ ಪಾತ್ರದ ನಡೆಯ ಹಿನ್ನೆಲೆಯಲ್ಲೂ - ಅಂದರೆ ರಾಜಕೀಯವಾಗಿ - ಮಾಸ್ತಿ ಅರ್ಥೈಸಿರುವ ಬಗೆಯನ್ನು ಗಮನಿಸಿದಾಗ : ಅವರ ಪ್ರಕಾರ ದೈವ, ಧರ್ಮ, ರಾಜಕಾರಣಗಳು ಬೇರೆ ಬೇರೆ ಅಲ್ಲವೇ ಅಲ್ಲ. ಅದನ್ನು ಬೇರೆ ಬೇರೆ ಮಾಡುವುದು ಮನುಷ್ಯನ ಕ್ಲೈಬ್ಯತೆ. ಇದೇ ಮಾಸ್ತಿ ಇತಿಹಾಸವೆಂಬ ಕನ್ನಡಿ ಹಿಡಿದು ಬಿಂಬಿಸುತ್ತಿರುವ ದರ್ಶನ, ಉಂಟು ಮಾಡುತ್ತಿರುವ ಭಾವ ಎಂದು ತೋರುತ್ತದೆ.

❑

(೨೬.೧.೧೯೯೨ರಂದು ದಕ್ಷಿಣ ಕನ್ನಡದ ಬಿಳಿನೆಲೆಯಲ್ಲಿ ಏರ್ಪಡಿಸಲಾಗಿದ್ದ ನಿರಂಜನ - ಮಾಸ್ತಿ ಅವರ ಐತಿಹಾಸಿಕ ಕಾದಂಬರಿಗಳನ್ನು ಕುರಿತ ವಿಚಾರಸಂಕಿರಣದಲ್ಲಿ ಆಡಿದ ಮಾತುಗಳು)

ಜಿ.ಎಸ್.ಎಸ್. ಕಾವ್ಯ : ಸಾಮಾಜಿಕ ಆಯಾಮಗಳು

ಒಬ್ಬ ಕವಿ ತನ್ನ ಇಡೀ ಜೀವಮಾನದಲ್ಲಿ ಬರೆಯುವ ಕವಿತೆ ಒಂದೇ ಎಂಬ ಮಾತಿದೆ. ಅಂದರೆ ಆತ ಎಷ್ಟೆಲ್ಲ ಕವಿತೆಗಳನ್ನು ಬರೆದರೂ ಅವೆಲ್ಲವೂ ಸೇರಿ ಒಂದು ಕವಿತೆಯಾಗಲು ಹವಣಿಸುತ್ತಿರುತ್ತವೆ ಅಥವಾ ಆತನ ಪ್ರತಿಯೊಂದು ಕವಿತೆಯೂ ಆತ ಬರೆಯಬೇಕೆಂದು ಬಯಸಿಯೂ ಬರೆಯಲಾಗದಿರುವ ಒಂದು ಮಹಾಕವಿತೆಯ ಅಭ್ಯಾಸ ಅಥವಾ ಪದ್ಧತಿ ಗಳಂತಿರುತ್ತವೆ. ಈ ಮಾತನ್ನು ಇಂದು ಚರ್ಚಿಸುತ್ತಿರುವ, ಸನ್ಮಾನಿಸುತ್ತಿರುವ ಕವಿ ಜಿ.ಎಸ್. ಶಿವರುದ್ರಪ್ಪನವರಿಗೆ ಅನ್ವಯಿಸಿ ನೋಡಿದಾಗ ನಾವು ಕಾಣುವುದು ಅವರ ಮೊದಲ ಕವನ ಸಂಕಲನ 'ಸಾಮಗಾನ'ದ ಕವಿತೆಗಳೇ, ಈಗ, ಇನ್ನೂ ಪ್ರಕಟವಾಗಬೇಕಾದ ಅವರ ಹದಿಮೂರನೇ ಸಂಕಲನದ ಕವನಗಳಲ್ಲಿ ಜನ್ಮಾಂತರ ಪಡೆಯುತ್ತಿರುವ ವಿಸ್ಮಯವನ್ನು.

೧೯೯೭, ಜಿ.ಎಸ್.ಎಸ್. ಅವರ ಕಾವ್ಯಕರ್ಮದ ೫೦ನೇ ವರ್ಷ. ನಾನು ಕಾವ್ಯಕರ್ಮ ಎಂದೆ; ಕಾವ್ಯತಪಸ್ಸು ಎನ್ನಲಿಲ್ಲ. ಕಾವ್ಯವನ್ನು ತಪಸ್ಸು ಎಂದೇ ಬಗೆದಂತೆ ಪದ್ಯ ಬರೆಯುತ್ತಿದ್ದ ಕುವೆಂಪು ಅವರ ಪ್ರಿಯ ಶಿಷ್ಯರಾಗಿಯೂ, ಅವರಂತೆಯೇ ಅದ್ವೈತ ತತ್ವ ದೃಷ್ಟಿಕೋನದ ಪದ್ಯಗಳೊಡನೆಯೇ ಕಾವ್ಯರಚನೆ ಆರಂಭಿಸಿದರೂ ಜಿ.ಎಸ್.ಎಸ್. ಅವರು ಕುವೆಂಪು ಅವರಂತೆ ಕಾವ್ಯದ ಎಲ್ಲ ರಸಗಳನ್ನು ಆತ್ಯಂತಿಕವಾಗಿ ಆಧ್ಯಾತ್ಮದ ಮೂಸೆಯಲ್ಲಿ ಕರಗಿಸಿ ಅರ್ಥ ಹೊಳೆಸುವ ರಸಋಷಿಯಾಗಲು ನಿರಾಕರಿಸಿದವರು. ನಿರಾಕರಿಸಿದವರು ಎನ್ನುವುದಕ್ಕಿಂತ ಕಾವ್ಯ ಲೋಕದ ಹೊಸ ರೀತಿಯ ಒತ್ತಡಗಳಿಗೆ ಒಡ್ಡಿಕೊಂಡವರು ಎನ್ನಬಹುದೇನೋ... ಏಕೆಂದರೆ ಕುವೆಂಪು ಪ್ರಧಾನವಾಗಿ ಸ್ವಾತಂತ್ರ್ಯ ಪೂರ್ವದ ಕವಿಯಾದರೆ ಜಿ.ಎಸ್.ಎಸ್. ಸ್ವತಂತ್ರ ಭಾರತದ ಕವಿ. ಅವರು ಎದುರಿಸಬೇಕಾಗಿ ಬಂದ ಹೊಸ ರೀತಿಯ ಒತ್ತಡಗಳು ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ ಜೀವನದಲ್ಲಿ ಉಂಟಾದ ಹೊಸ ನಿರೀಕ್ಷೆ, ಆಶಯ, ಆತ್ಮವಿಮರ್ಶೆ, ಸಿನಿಕತೆ, ವಿಷಾದ ಹತಾಶೆಗಳ ಕಂಪನಗಳಿಂದುಂಟಾದ ಒತ್ತಡಗಳು. ಅದಕ್ಕೇ ಇವರದ್ದು ಕಾವ್ಯಕರ್ಮ. ಇವರ ಮೊದಲ ಸಂಕಲನ 'ಸಾಮಗಾನ'ದ (೧೯೫೧) ಕೊನೆಯ ಪದ್ಯಗಳನ್ನು ಬರೆಯುವ ಹೊತ್ತಿಗೇ 'ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ; ಹಾಡುವುದು ಅನಿವಾರ್ಯ ಕರ್ಮ ನನಗೆ' ಎಂಬ ಅರಿವೂ ಇವರಿಗೆ ಉಂಟಾಗಿರುವುದನ್ನು ನಾವು ಗಮನಿಸಬೇಕು. ಅಂದರೆ ಕವಿಗೆ ಕಾವ್ಯ ತನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗ; ತಾನು ಹಾಡದೆ ತನ್ನ ವ್ಯಕ್ತಿತ್ವವನ್ನು ಬೆಳಗಿಸಲಾಗದು ಎಂಬ ಮನವರಿಕೆ ಉಂಟಾಗಿದೆ. ಆದರೆ ಇದೇ ಕವಿ, ಇವರ ಕಾವ್ಯಜೀವನದ ನಿರ್ಣಾಯಕ

ಘಟ್ಟವನ್ನು ಪ್ರತಿನಿಧಿಸುವರೆಂದು ಭಾವಿಸಬಹುದಾದ 'ಪ್ರೀತಿ ಇಲ್ಲದ ಮೇಲೆ' (೧೯೮೭) ಎಂಬ ತಮ್ಮ ಹತ್ತನೇ ಕವನ ಸಂಕಲನದ ಹೊತ್ತಿಗೆ 'ಯಾವ ಹಾಡ ಹಾಡಲಿ? ಯಾವ ಹಾಡಿನಿಂದ ನಿಮಗೆ ನೆಮ್ಮದಿಯನು ನೀಡಲಿ?' ಎಂಬ ಪ್ರಶ್ನೆ ಕೇಳುವಂತಹ ದಟ್ಟ ವಿಷಾದಕ್ಕೆ ಒಳಗಾಗಿದ್ದಾರೆ :

ಸುತ್ತಮುತ್ತ ಮನೆಮಠಗಳು
ಹೊತ್ತಿಕೊಂಡು ಉರಿಯುವಲ್ಲಿ
ಸೋತು ಮೂಕವಾದ ಬದುಕು
ನಿಟ್ಟುಸಿರೊಳು ತೇಲುವಲ್ಲಿ
ಯಾವ ಹಾಡ ಹಾಡಲಿ?
ಉರಿವ ಕಣ್ಣ ಚಿತೆಗಳಲ್ಲಿ
ಇರುವ ಕನಸು ಸೀಯುವಲ್ಲಿ
ಎದೆ ಎದೆಗಳ ಜ್ವಾಲಾಮುಖಿ
ಹೊಗೆ ಬೆಂಕಿ ಕಾರುವಲ್ಲಿ
ಯಾವ ಹಾಡ ಹಾಡಲಿ?
ಬೆಳಕಿಲ್ಲದ ದಾರಿಯಲ್ಲಿ
ಪಾಳುಗುಡಿಯ ಸಾಲಿನಲ್ಲಿ
ಬಿರುಗಾಳಿಯ ಬೀಡಿನಲ್ಲಿ
ಕುರುಡು ಪಯಣ ಸಾಗುವಲ್ಲಿ
ಯಾವ ಹಾಡ ಹಾಡಲಿ?

ಎಂಬ ಎಡೆಬಿಡದೆ ಕಾಡುವ ಪ್ರಶ್ನೆಯ ಬೇಗೆಯಲ್ಲಿ ಕವಿ ತಮ್ಮ ಕಾವ್ಯ ಕರ್ಮದ ಅಂತಿಮ ಬಿಕ್ಕಟ್ಟಿನ ಸೂಚನೆ ನೀಡುತ್ತಾರೆ. 'ಕೇಳುವವರಿಹರೆಂದು ನಾ ಬಲ್ಲೆನದರಿಂದ ಹಾಡುವೆನು ಮೈದುಂಬಿ ಎಂದಿನಂತೆ / ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ' ಎಂಬ ಆತ್ಮವಿಶ್ವಾಸದೊಡನೆ ಹಾಡತೊಡಗಿದ್ದ ಕವಿ ಇಂತಹ ಬಿಕ್ಕಟ್ಟಿಗೆ ಎದುರಾದುದಾದರೂ ಹೇಗೆ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದರಲ್ಲೇ ಜಿ.ಎಸ್.ಎಸ್. ಅವರ ಕಾವ್ಯದಲ್ಲಿನ ಸಾಮಾಜಿಕ ದರ್ಶನ ಅಥವಾ ಸಾಮಾಜಿಕ ಆಯಾಮಗಳ ಅನಾವರಣವಾಗುತ್ತದೆ. ಈ ಅನಾವರಣದಲ್ಲಿ ಗೋಚರವಾಗುವ ಒಂದು ಕುತೂಹಲದ ಸಂಗತಿ ಎಂದರೆ 'ನಂಬಿಕೆ'ಯ ಕವಿಯಾಗಿ ಕವನ ರಚನೆಗೆ ತೊಡಗಿದ ಜಿ.ಎಸ್.ಎಸ್., ಕ್ರಮೇಣ ಈ ನಂಬಿಕೆಯನ್ನು ಪ್ರಶ್ನಿಸುವ, ಪರೀಕ್ಷಿಸುವ ಸಾಮಾಜಿಕ ಕವಿಯಾಗಿ ಮಾರ್ಪಟ್ಟು ನಂತರದಲ್ಲಿ, ಅಂದರೆ ಇತ್ತೀಚಿನ ಕವನಗಳಲ್ಲಿ ಈ ನಂಬಿಕೆ, ಪರೀಕ್ಷೆಗಳನ್ನು ದಾಟಿ ನಿಂತ ಸತ್ವವೊಂದರ ಸ್ಪರ್ಶ ಮಾಡಿದವರಂತೆ ಹೊಸತೊಂದು ಸಮತೋಲನದಲ್ಲಿ ಬರೆಯತೊಡಗಿರುವುದು.

೨

ಶಿವರುದ್ರಪ್ಪನವರು ಕುವೆಂಪು ಅಥವಾ ಮಾಸ್ತಿಯವರಂತೆ ಸಾಧಕರಾದ ಲೇಖಕರು ಅಲ್ಲ. ಅತೀತತೆಯನ್ನು ಸಾಧಿಸಿಕೊಂಡು ಅದರ ಬೆಳಕಿನಲ್ಲಿ ಬರೆದವರು ಅವರಿಬ್ಬರು. ಆದರೆ ಜಿ.ಎಸ್.ಎಸ್. ಹಾಗಲ್ಲ. ಬರೆವಣಿಗೆಯನ್ನೇ ಅತೀತಯೆ ಸಾಧನೆಗಾಗಿ ಮಾಧ್ಯಮ ಮಾಡಿಕೊಂಡವರು. ಅತೀತತೆ, ಅಂದರೆ ಇಂದ್ರಿಯ ಗಮ್ಯ ಲೋಕದಾಚೆಗಿನ ತತ್ವದೆಡೆಗಿನ ಇವರ ಒಲವು, ಇವರ ಆರಂಭಿಕ ಕವನಗಳಲ್ಲೇ ವ್ಯಕ್ತವಾಗಿದೆ. ಇವರ ಮೊದಲ ಕವನ 'ವೀಣಾಧ್ವನಿ'ಯೇ ಒಂದು ಅದ್ವೈತ ತತ್ವ ಸಾರುವ ಕವನ. ವೀಣಾ ಮಧುರನಾದ ಇಲ್ಲಿ 'ಕಾಲ ದೇಶಾತೀತ'ವಾಗಿ, 'ಭಾವ ಭಾಷಾತೀತ'ವಾಗಿ, 'ಸಚ್ಚಿದಾನಂದ ಅನಂತರೂಪವನು ನನ್ನ ಸಾಂತತೆಯಲ್ಲಿ ಸೆರೆಗೈದು ತೋರುತಿದೆ' ಎಂದು ಭಾಸವಾಗಿದೆ ಕವಿಗೆ. ಈ ಸಾಂತ - ಅನಂತಗಳ ದ್ವಂದ್ವ ಉಂಟುಮಾಡುವ ವಿಸ್ಮಯ ಇವರ ಇಡೀ ಕಾವ್ಯ ಜೀವನದುದ್ದಕ್ಕೂ ಒಂದು ಹಿನ್ನೆಲೆಯಾಗಿ ಕೆಲಸ ಮಾಡುತ್ತಾ ಬಂದಿರುವುದನ್ನು ನಾವು ಇವರ ಎಲ್ಲ ಹನ್ನೊಂದು ಕವನ ಸಂಕಲನಗಳಲ್ಲೂ ಕಾಣಬಹುದಾಗಿದೆ. ಇವರ ಇನ್ನೊಂದು ಸಂಕಲನ 'ತೀರ್ಥವಾಣಿ' (೧೯೫೩) ಪೂರ್ಣವಾಗಿ, ಶ್ರೀ ರಾಮಕೃಷ್ಣ ವಚನವೇದಕ್ಕಾಗಿ ಅನುವಾದ ಮಾಡಿದ ಭಕ್ತಿಗೀತೆಗಳ ಸಂಕಲನವೇ ಆಗಿದೆ. ಮೊದಲ ಸಂಕಲನ 'ಸಾಮಗಾನ' ಈ 'ತೀರ್ಥವಾಣಿ'ಗೆ ಒಂದು ಹಿನ್ನೆಲೆಯಾಗಿ ನಿಂತಂತೆ, ಮುಗ್ಧ ನಂಬಿಕೆ ಹಾಗೂ ಅದರಿಂದ ಹುಟ್ಟುವ ಸರಳ ಆದರೆ ಸುಂದರವಾದ ಕಲ್ಪನಾ ಚಿತ್ರಗಳನ್ನು ಬಿಡಿಸುವ ಲಯಬದ್ಧ ಸಾಲುಗಳಿಂದ ಅನುರಣಿತವಾಗಿದೆ. ಎಂತಿದ್ದರೂ ಇದರ ಶೀರ್ಷಿಕೆ 'ಸಾಮಗಾನ' ತಾನೆ!

ಎರಡನೇ ಕವನ ಸಂಕಲನ 'ಚೆಲವು ಒಲವು' (೧೯೫೩). ಇದೀಗ ಅನ್ವೇಷಣೆ ಆರಂಭ. ಚೆಲುವು ಒಲವುಗಳೆಂಬ ಲೋಕರುಚಿಗಳ ನಿಕಷದಲ್ಲಿ ನಂಬಿಕೆಯ ಪರೀಕ್ಷೆ. ಈ ಪರೀಕ್ಷೆ ಮುಂದೆ ಬಹುಶಃ 'ಅನಾವರಣ' (೧೯೬೩) ಸಂಕಲನದ ಹೊರತಾಗಿ, ಮಿಕ್ಕೆಲ್ಲ ಕವನ ಸಂಕಲನಗಳಲ್ಲಿನ ಅನೇಕ ಕವನಗಳ ('ಮಲ್ಲಿಗೆ', 'ಸುಂಟರಗಾಳಿ', 'ನಕ್ಷತ್ರಲೋಕ', 'ಜಡೆ', 'ಯಾರು', 'ಕೃಷ್ಣಶಕ್ತಿ', 'ಹುಟ್ಟಿದ ಹಬ್ಬ', 'ಕನಸಿನಿಂದ ನನಸಿಗೆ', 'ಆವಾಹನೆ', 'ಶಾಕುಂತಲ', 'ಸಂಧ್ಯೆ', 'ಆದಿಕವಿಗೆ', 'ಒಂದು ಸಂಜೆ', 'ವ್ಯಕ್ತಿತ್ವ', 'ನಿನ್ನ ನಗು', 'ವರ್ಷಕ್ಕೊಮ್ಮೆ', 'ಪುರಿ ಜಗನ್ನಾಥನ ದೇಗುಲದಲ್ಲಿ...' ಇತ್ಯಾದಿ) ವಸ್ತುವಾಗಿ ಬೆಳೆದು ಕಾವ್ಯದ ಕಸಬುದಾರಿಕೆಯಲ್ಲಿ ಹದಗೊಂಡು ಅವರ ಈವರೆಗಿನ ಕೊನೆಯ ಸಂಕಲನ 'ಚಕ್ರಗತಿ'ಯ ಕೊನೆಯ ಕವನ 'ಅಸ್ತಮಾನ'ದಲ್ಲಿ ತಾನೇ ತಾನಾಗಿ ಜಿ.ಎಸ್.ಎಸ್. ಅವರ ಕಾವ್ಯಸಾಧನೆಯ ಉತ್ತುಂಗ ಶಿಖರದಂತೆ ಒಂದು ಕವಿತೆಯಾಗಿ ಹೊರಹೊಮ್ಮುತ್ತದೆ. ಶ್ರೀಕೃಷ್ಣನ ಸಾವನ್ನು ಚಿತ್ರಿಸುವ ಈ ಕವನದಲ್ಲಿ ಶ್ರೀಕೃಷ್ಣನೇ ಇಲ್ಲ. ಇದ್ದರೂ ಆತ ಲೋಕದ ವಿವಿಧ ರೂಪಗಳಲ್ಲಿ, ಬಣ್ಣಗಳಲ್ಲಿ ಪಡಿಮೂಡಿದ್ದಾನಷ್ಟೇ. ಆತನಿಗೆಂತಹ ಸಾವು?

... ಶ್ರೀ ಹರಿಪಾದ

ಅಪೂರ್ವ ಪಕ್ಷಿಯ ಹಾಗೆ ತೋರಿರಲು ದಟ್ಟ ಪೊದೆ
ಗಳ ನಡುವೆ, ಕೂಡಲೇ ಹೂಡಿ ಬಿಲ್ಲಿಗೆ ಬಾಣ
ಬಿಟ್ಟನು ಗುರಿಗೆ. ತಾಗಿದ್ದೆ ತಡ ಛಿಲ್ಲೆಂದು
ಚಿಮ್ಮಿತು ರಕ್ತ: ಕೆಂಪಾಯ್ತು ನೀಲಿಯ ಗಗನ:
ಹೊಲದಲ್ಲಿ ಗೇಯುತ್ತಿದ್ದ ಆ ರೈತ ಕಂಡನೊಂ
ದದ್ಭುತವ : ಇದ್ದಕ್ಕಿದ್ದಂತೆ ಸಂಜೆಯ ಸೂರ್ಯ
ಜಗ್ರನೆ ಜಾರಿ ಕಡಲೊಳಗೆ, ಪಾಂಚಜನ್ಯದ
ಮೊಳಗು ಒಂದೇ ಒಂದು ಕ್ಷಣ ಪರಮಾಶ್ಚರ್ಯ
ಪ್ರಭೆಯಾಗಿ ವ್ಯಾಪಿಸಿತು ಭೂಮಿ - ವ್ಯೋಮಗಳನ್ನು
ಬೆರಗಾಗಿ, ನೇಗಿಲ ಹೊತ್ತು ನಡೆದನು ರೈತ
ಇಡೀ ದಿವಸ ಹರಗಿ ಹದಮಾಡಿದ್ದ ಹೊಲದೊ
ಳಗೆ ಬೀಜ ಬಿತ್ತುವ ಬಗ್ಗೆ ಯೋಚಿಸುತ್ತ.

ಲೋಕದ ಪ್ರತಿರೂಪದಂತಿದ್ದ ಅಥವಾ ಯಾರಿಗೆ ಲೋಕವೇ ಪ್ರತಿರೂಪವಾಗಿತ್ತೋ ಆತನೇ ಸತ್ತರೂ, ಲೋಕಚಕ್ರ ಬೀಜ ಬಿತ್ತುತ್ತ ಸುತ್ತುತ್ತಲೇ ಇದೆ. ಇದೇ ಚೋದ್ಯ. ಈ ಕರ್ಮಚಕ್ರದ ಚೋದ್ಯವನ್ನು ಮೌನದೊಳಗೆ ಅರಿಯುವ ಪ್ರತಿಭೆ ಈ ಕವನದಲ್ಲಿದೆ. ಹಾಗೇ ಜಿ.ಎಸ್.ಎಸ್. ಅವರ ಕಾವ್ಯಚಕ್ರ ಒಂದು ಸುತ್ತು ಮುಗಿಸುತ್ತಿರುವ ಸೂಚನೆಯೂ ಇಲ್ಲಿದೆ : (ಆರಂಭಿಕ ಕವನಗಳ) ನಂಬಿಕೆ ಇಲ್ಲಿ ಅನುಭವದ (ಕರ್ಮಚಕ್ರದ) ಮೂಲಕ ಅನುಭಾವವಾಗಿ ಮಾಗುತ್ತಿದೆ. ಈ ಅರ್ಥದಲ್ಲೇ ನಾನು ಎಲ್ಲ ಪ್ರತಿಭಾವಂತ ಕವಿತೆಗಳಂತೆ ಶಿವರುದ್ರಪ್ಪನವರೂ ತಮ್ಮ ಮೊದಲ ಕವನ ಸಂಕಲನದ ಪದ್ಯಗಳನ್ನೇ ಈಗಲೂ ಮತ್ತೆ ಮತ್ತೆ ಬರೆಯುತ್ತಾ ಅವುಗಳಿಗೆ ಹೊಸಜನ್ಮ ನೀಡುವ ವಿಸ್ಮಯ ಸೃಷ್ಟಿಸುತ್ತಿದ್ದಾರೆಂದು ಹೇಳಿದ್ದು. ಇಂತಹ ಕವಿ ಚಾರಿತ್ರಿಕ ಅನಿವಾರ್ಯತೆಗಳಿಂದಾಗಿ ಲೋಕಮಗ್ನತೆಗೆ ಈಡಾದಾಗಲೂ ಅಗ್ಗದ ಕಾವ್ಯ ಸೃಷ್ಟಿಸಲಾರ. ಜಿ.ಎಸ್.ಎಸ್. ಅವರ ಸಾಮಾಜಿಕವೆಂದು ವರ್ಗೀಕರಿಸಬಹುದಾದ ಬಹಳಷ್ಟು ಕವನಗಳು ಕೇವಲ ಪ್ರತಿಕ್ರಿಯೆಗಳು ಅಥವಾ ಆವೇಶಾತ್ಮಕ ಹೇಳಿಕೆಗಳಾಗದೆ ಪಾರಾಗಿರುವುದಕ್ಕೇ ಇದೇ ಮುಖ್ಯ ಕಾರಣವೆಂದು ನಾನು ಭಾವಿಸುತ್ತೇನೆ. ಏನಾದರೂ ಇವು, ಕವಿ ತನ್ನ ಕಾವ್ಯಚಕ್ರದ ಒಂದು ಪೂರ್ಣ ಸುತ್ತನ್ನು ಮುಗಿಸುವಾಗ ನಡೆಸಿದ ಪ್ರಯೋಗಗಳು ಹಾಗೂ ಅಭ್ಯಾಸಗಳೇ ಅಲ್ಲವೇ? ಈ ಪ್ರಯೋಗ - ಅಭ್ಯಾಸಗಳ ಒಂದು ಸ್ಥೂಲ ಪರಿಶೀಲನೆ ಜಿ.ಎಸ್.ಎಸ್. ಅವರ ಕಾವ್ಯದ ಸಾಮಾಜಿಕ ಆಯಾಮಗಳನ್ನೂ, ಜೊತೆ ಜೊತೆಗೇ ಅದರ ವಿಕಾಸದ ಹಾದಿಯ ವಿನ್ಯಾಸ - ಗತಿಗಳನ್ನು ಪರಿಚಯಿಸುತ್ತದೆ.

ಹಾಗೆ ನೋಡಿದರೆ ಜಿ.ಎಸ್.ಎಸ್. ಅವರ ಆರಂಭಿಕ ನಂಬಿಕೆಯ ಕವನಗಳಲ್ಲೇ ಸಾಮಾಜಿಕತೆ ಅಂತರ್ಗತವಾಗಿದೆ. ಅತೀತವನ್ನು ಸಾಧಿಸುವುದು ಎಂದರೆ ಲೋಕವನ್ನು ಅರ್ಥೈಸಿಕೊಂಡು ಅದನ್ನು ದಾಟಿ ನಿಲ್ಲುವುದು. ಲೋಕವನ್ನು ಅರ್ಥೈಸಿಕೊಳ್ಳುವುದೆಂದರೆ ಲೋಕದ ದುಃಖವನ್ನು ಅರ್ಥೈಸಿಕೊಳ್ಳುವುದು; ಲೋಕದ ದುಃಖದೊಂದಿಗೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದು. ಇದು ತಾತ್ವಿಕವಾಗಿ ಬುದ್ಧ - ಬಸವ - ರಾಮಕೃಷ್ಣ - ವಿವೇಕಾನಂದರ ದಾರಿ. ಈ ದಾರಿಯಲ್ಲೇ ನಡೆದು ಸಾಧಿಸಿಕೊಂಡ ಅದ್ವಯ ದೃಷ್ಟಿಕೋನದಿಂದಾಗಿ, ಜಲಗಾರನಲ್ಲಿ ಶಿವನನ್ನು ಕಾಣಲು ಹಿಂಜರಿಯದ ಕುವೆಂಪು ಅವರ ಪ್ರಿಯ ಶಿಷ್ಯರಾದ ಜಿ.ಎಸ್.ಎಸ್. ಅವರ ಕಾಣ್ಕೆ ಕೂಡಾ ಅದೇನೇ. 'ಅಲ್ಲಿ - ಇಲ್ಲಿ' ಎಂಬ ಅವರ ಎರಡನೇ ಕವನದಲ್ಲೇ ಶಿವನು 'ಉಡುಗಣವೇಷ್ಟಿತ ಚಂದ್ರ ಸುಶೋಭಿತ ದಿವ್ಯಾಂಬರ ಸಂಚಾರಿ / ಕಣ್ಣ ನೀರಿನಲಿ ಮಣ್ಣಧೂಳಿನಲಿ ಹೊರಳುತ್ತಿರುವರ ಸಹಚಾರಿ'ಯಾಗಿ ಕಾಣುತ್ತಾನೆ. ಅಷ್ಟೇ ಅಲ್ಲ, ಮುಂದಿನ ಒಂದು ಕವನದಲ್ಲಿ ಕಣ್ಣೀರೇ ಜಗದ ಹೃದಯ ಇರಬಹುದೆಂಬ ಭಾವವೂ ಇವರನ್ನಾವರಿಸುತ್ತದೆ. 'ಕಣ್ಣೀರು' ಎಂಬ ಕವನದ ಕೊನೆಯ ಈ ಮೂರು ಸಾಲುಗಳನ್ನು ಗಮನಿಸಿ :

ಕಣ್ಣೀರಿನಲಿ ಕಾಲದೇಶಗಳು ಕರಗುವುವು
ವಿಶ್ವದಲಿ ತೇಲುವೀ ಬ್ರಹ್ಮಾಂಡಗಳು ಎಲ್ಲ -
ಕಣ್ಣೀರಿನುಂಡೆಗಳೋ, ಬಲ್ಲವನೆ ಬಲ್ಲ!

ಹಾಗೇ 'ಹಣತೆ' ಎಂಬ ಕವನದಲ್ಲಿ

ಈ ಮುರುಕು ಗುಡಿಸಲಲಿ
ಕಿರುಹಣತೆ ಬೆಳಗುತಿದೆ
ಧ್ಯಾನಸ್ಥಯೋಗಿಯೊಲು ಸ್ಥಿಮಿತವಾಗಿ
ಬಡವರಾತ್ಮದ ಹಣತೆ
ಇಂತೆ ಬೆಳಗುವುದಲ್ತೆ
ಅಜ್ಞಾತವಾಸದಲಿ ದೀನವಾಗಿ!

ಎಂದು ಹೇಳುವಾಗಾಗಲೀ ಅಥವಾ 'ನೆಲದ ಕರೆ' ಎಂಬ ಕವನದಲ್ಲಿ

ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ
ನಾಲ್ಕು ಹನಿಯ ಚೆಲ್ಲಿ
ದಿನ ದಿನವು ಕಾದು ಬಾಯಾರಿ ಬೆಂದೆ
ಬೆಂಗದಿರ ತಾಪದಲ್ಲಿ.

....

ಓ ಬನ್ನಿ ಬನ್ನಿ, ಓ ಬನ್ನಿ ಬನ್ನಿ,
ನನ್ನೆದೆಗೆ ತಂಪ ತನ್ನಿ
ನೊಂದ ಜೀವರಿಗೆ ತಂಪನೀಯುವುದೆ
ಪರಮಪೂಜೆಯೆನ್ನಿ!

ಎಂದು ಹೇಳುವಾಗಾಗಲೀ, ಕವಿಗೆ ಲೋಕವನ್ನು ದಾಟುವುದೆಂದರೆ ದುಃಖವನ್ನು ದಾಟುವುದು. ಅದೇ ಅತೀತದೆಡೆಗೆ ನಮ್ಮನ್ನು ಕೊಂಡೊಯ್ಯುವುದು ಎಂಬ ತಿಳುವಳಿಕೆ ಇರುವುದು ಗೊತ್ತಾಗುತ್ತದೆ. ಅಂದರೆ ಅತೀತದ ಹಾದಿಯನ್ನು ಲೋಕದೊಳಗೇ ಹುಡುಕಿಕೊಂಡು ಹೊರಟಿರುವ ಸಹಜತೆಯ ಸೂಚನೆಯೂ ಇಲ್ಲಿದೆ.

ಜಿ.ಎಸ್.ಎಸ್. ಅವರ ಕಾವ್ಯದ ಮುಂದಿನ ಘಟ್ಟವೆಲ್ಲ ಲೋಕದೊಡನೆ ವ್ಯವಹರಿಸಿದುದರ ಅನುಭವಗಳ ಒರೆಗಲ್ಲಿನ ಮೇಲೆ ಒಳಗಿನ ನಂಬಿಕೆಯನ್ನು ತಿಕ್ಕಿ ತೀಡುವುದಕ್ಕೆ ಮೀಸಲಾದದ್ದು. ಈ ಹಿನ್ನೆಲೆಯಲ್ಲಿ 'ದೇವಶಿಲ್ಪಿ' (೧೯೫೬) ಸಂಕಲನದ 'ಇದು ಲೋಕವಂತೆ' ಕವನದಲ್ಲಿ ಮೊದಲ ಬಾರಿಗೆ ವ್ಯಕ್ತವಾಗಿರುವ ಕವಿಯ ಈ ಸಿನಿಕತೆಯನ್ನು ಗಮನಿಸಿ :

ಹೊಗಳುಭಟ್ಟರ ಸಂತೆ –
ಇದು ಲೋಕವಂತೆ!
ಎಲ್ಲೆಲ್ಲಿಯೂ ಇವರೆ,
ಕಂತೆ ಕಂತೆ!
ಆದರ್ಶ – ಗೀದರ್ಶ
ಬರಿ ಬಣಗು ಕಂಥೆ
ಪುಸ್ತಕದ ಬದನೆ ಕಾಯ್
ತಿನುವುದಕೆ ಬಂತೆ?
....
ಹೊಗಳಿ ಹೊಗಳಿಸಿಕೊಳುವ
ಚಿಂತೆಯೇ ಚಿಂತೆ
ಒಂಟೆ ಮದುವೆಗೆ ಕತ್ತೆ
ಪದ ಹೇಳಿತಂತೆ...!

ಆದರೆ ಕವಿತೆಯ ಜಾಳುತನಕ್ಕೂ ಕಾರಣವಾಗಿರುವ ಈ ಸಿನಿಕತೆ ಇನ್ನೂ ಈ ಕವಿಯನ್ನು ಪೂರ್ಣ ಆವರಿಸಿಲ್ಲ ಎಂಬುದು ಅವರ ಮುಂದಿನ 'ದಾರಿ' ಎಂಬ ಪದ್ಯದಲ್ಲಿ ಸ್ಪಷ್ಟವಾಗುತ್ತದೆ :

ಹರಿದಾರಿ ಹರಿದಾರಿ ಹರಿದಿರುವ ದಾರಿ
ಅಲ್ಲಿಯೂ ದಾರಿ ಇಲ್ಲಿಯೂ ದಾರಿ
ಎಲ್ಲಿಯೂ ನೂರು ದಾರಿ

....

ನಡೆದುದೇ ದಾರಿ ನುಡಿದುದೇ ದಾರಿ

ಎಂಬ ರೀತಿಯಲ್ಲಿ

ನೂರು ದಾರಿಗಳ ಜೇಡಜಾಲದಲಿ

ದಿಕ್ಕು ತಪ್ಪಿ ಅಲೆದು

ಇದ ಪ್ರಗತಿಯೆಂದು ಕರೆದು

ತಡಕಾಡುತಿಹುದು ಮನುಕುಲವು ನೋಡು

ಆ ಜ್ಯೋತಿ ಪಥವ ಮರೆದು.

ಈ ಜ್ಯೋತಿ ಪಥದ ನೆನಪು ಮರೆವುಗಳ ಉಯ್ಯಾಲೆ 'ದೀಪದ ಹೆಜ್ಜೆ' (೧೯೫೯) ಹಾಗೂ 'ಕಾರ್ತೀಕ' (೧೯೬೨) ಕವನ ಸಂಕಲನದುದ್ದಕ್ಕೂ ಜೀಕಿರುವುದನ್ನು ನಾವು ಗಮನಿಸಬಹುದು. ಈ ಜೀಕು ಶಿವರುದ್ರಪ್ಪನವರ ಈ ಘಟ್ಟದ ಕಾವ್ಯಕ್ಕೆ ಹೊಸ ಚಲನೆಯೊಂದಿಗೆ ಆಳ ಹಾಗೂ ವಿಸ್ತಾರಗಳನ್ನು ತಂದುಕೊಟ್ಟಿದೆ. 'ದೀಪದ ಹೆಜ್ಜೆ' ಕವನ ಸಂಕಲನವಂತೂ ಜಿ.ಎಸ್.ಎಸ್. ಅವರ ಕಾವ್ಯ ಪ್ರಯೋಗಶೀಲತೆಯ ಅತ್ಯುತ್ತಮ ಉದಾಹರಣೆಗಳಿಂದ ತುಂಬಿ ಹೋಗಿದೆ. ನಂಬಿಕೆಯನ್ನು ಅನುಭವಗಳ ಒರೆಗಲ್ಲಿಗೆ ಹಚ್ಚಿ ಪರಿಶೀಲಿಸಿದಾಗ ಕಂಡ ಬದುಕಿನ ಕಟು ನಿಷ್ಠುರತೆ ಕವಿಯ ಹೃದಯಕ್ಕೆ ಬಲವಾಗಿ ತಾಕತೊಡಗಿರುವುದನ್ನು ಇಲ್ಲಿನ ಕವನಗಳಲ್ಲಿ ನೋಡಬಹುದು. 'ಇವನು' ಕವನದ ಈ ಸಾಲುಗಳನ್ನು ಕವಿ ಬದುಕನ್ನು ಈಗ ಮುಗ್ಧತೆಯನ್ನು ಮೆಟ್ಟಿ ನಿಂತ ಹೊಸ ನಿಷ್ಠುರತೆಯಿಂದ ನೋಡಲು ನಡೆಸಿರುವ ಪ್ರಯತ್ನದ ದೃಷ್ಟಿಯಿಂದ ಗಮನಿಸಿ :

ತಲೆಯ ತಪ್ಪಲೆಯಲ್ಲಿ

ವಿಚಾರಗಳ ಕುದಿತ

ಎದೆಯ ಗೂಡೊಳಗೆನಿತೊ

ಮುರಿದ ಗಡಿಯಾರಗಳ ತುಡಿತ

ಸಿನಿಮ - ಹೋಟೆಲ್ - ಸರ್ಕಸ್ - ಆ ದೊಂಬರಾಟ

ಇಸ್ಪೀಟು - ಸಿಗರೇಟು - ಹಾವಾಡಿಗನ ಮಾಟ

ಕಾವ್ಯಪಾರಾಯಣ - ಭಾಷಣ - ಹರಿಕತೆಯ ಸವಿಯೂಟ

ಓ ಎಷ್ಟೊಂದು - ನೋವ ಮರೆಯಲು ಮಾನವನು

ಮಾಡಿರುವ ಹೂಟ

ಹಾಗೇ 'ಸಂಜೆದಾರಿ' ಎಂಬ ಕವನದ ಕಟುವಿಷಾದದ ಈ ಬಹು ಚಿತ್ರವತ್ತಾದ ಸಾಲುಗಳು:

ಕೈಹಿಡಿದ ಸರಪಳಿಯ ಜಗ್ಗುತಿದೆ ಕರಿನಾಯಿ

ಹೊಳೆ ಹೊಳೆವ ಕೆಂಗಣ್ಣು ಜೋಲ್ವ ನಾಲಗೆ ಬಾಯಿ

ಸಂಜೆ ಮುಗಿಲಿನ ಕೆಳಗೆ
ದೂರದೂರದವರೆಗೆ
ಮುಗಿವಿರದ ಪ್ರಶ್ನೆಯೊಲು ಹಾಸಿರಲು ಟಾರ್‌ಬೀದಿ,
ಕೈಹಿಡಿದ ಸರಪಳಿಯ ಜಗ್ಗುತಿದೆ ಕರಿನಾಯಿ ಮುಂದೆ ಮುಂದೆ
ಹಿಡಿದ ಕೈ ಸಾಗುತಿದೆ ಹಿಂದೆ ಹಿಂದೆ...!

ಈ ಕಟುಸತ್ಯದ ಅನುಭೂತಿ ಮುಂದಿನ ಇನ್ನೂ ಅನೇಕ ಕವನಗಳಲ್ಲಿ ಘನಗೊಂಡು 'ಕಾರ್ತೀಕ' ಸಂಕಲನದ 'ಕನಸಿನಿಂದ ನನಸಿಗೆ' ಎಂಬ ಕವನದಲ್ಲಿ ಈ ಬೆರಗು ಸೃಷ್ಟಿಯಾಗುವುದು :

ಯಾವ ಮಗ್ಗ ಇದು! ಯಾರು ನೇಯುವರೋ, ಕಾಣದಲ್ಲ ಲಾಳಿ!
ಕನಸಿನಿಂದ ಎಚ್ಚರದ ದಡಕೆ ಬಂದಿರುವ ಸೊಗದ ದಾಳಿ!
ದಿನವು ಹಡಗುಗಳು ಬಂದು ತಂಗುವುವು ಈ ತೆಂಗು ತೀರದಲ್ಲಿ
ಏನು ಬರುವುವೋ, ಎಷ್ಟು ಬರುವುವೋ, ಹೇಗೆ ಬರುವುವೋ
... ನಿಲುವು ಪ್ರಶ್ನೆಯಲ್ಲಿ!

೪

ಆದರೆ ಈ ಬೆರಗು, ಪ್ರಶ್ನೆ ಇದ್ದಕ್ಕಿದ್ದಂತೆ ಸ್ತಬ್ಧಗೊಂಡಂತೆ ಜಿ.ಎಸ್.ಎಸ್. ಅವರ ಕಾವ್ಯ ಒಂದು ಮಹಾನ್ ಸ್ಥಿತ್ಯಂತರವನ್ನು ಕಾಣುತ್ತದೆ, ಮುಂದಿನ ಕವನ ಸಂಕಲನಗಳಲ್ಲಿ. ಯಾಕೆ ಹೀಗೆಂದು ಕಾವ್ಯದ ಹೊರಗೆ ಕಾರಣಗಳನ್ನು ಹುಡುಕಲು ಹೊರಟರೆ, ಇದು ನೆಹರೂ ಆಡಳಿತದ ಇಳಿಗಾಲದ ದಿನಗಳು, ಮೌಲ್ಯಗಳ ಇಳಿದಾರಿಯ ದಿನಗಳು ಎಂಬುದು ಗೋಚರವಾಗುತ್ತದೆ. ಶಿವರುದ್ರಪ್ಪನವರ ಕಾವ್ಯಕ್ಕೆ ನಗರಪ್ರಜ್ಞೆಯ ಸೂಕ್ಷ್ಮಗಳೂ, ಉಪಮೆ -ಸಂಕೇತಗಳೂ ಹೊಸ ಉತ್ಸಾಹದೊಂದಿಗೆ ಪ್ರವೇಶಿಸಿದ ಕಾಲವಿದು. ಕವಿಯ ಮನಸ್ಸನ್ನು ಈಗ ಆಧುನಿಕ ಮಧ್ಯಮ ವರ್ಗದ ಪ್ರಜ್ಞೆ ಆವರಿಸಿಕೊಂಡಿರುವ ಸೂಚನೆಗಳನ್ನು ಇವರ ಮುಂದಿನ ಕವನ ಸಂಕಲನಗಳಾದ 'ಅನಾವರಣ' (೧೯೬೩) ಹಾಗೂ 'ತೆರೆದ ದಾರಿ' (೧೯೬೬)ಗಳ ಕವನಗಳಲ್ಲಿ ಕಾಣಬಹುದು. ಇಲ್ಲಿ ದೇವಿ, ಬೆಳದಿಂಗಳು, ಗುರು, ಹೂವು ಹಕ್ಕಿಗಳಿಗೆ ಬದಲಾಗಿ ಗಾಂಧಿ, ನೆಹರೂ, ಹಳೇಪೇಪರ್, ಖಾಲಿಶೀಶೆಯವನಲ್ಲದೆ; ನಾಯಿ, ಛತ್ರಿ, ಬಟ್ಟೆಯ ಅಂಗಡಿ, ಹೋಟೆಲ್, ರೇಡಿಯೋ ಮುಂತಾದ ಸಾಮಾಜಿಕ ವ್ಯಕ್ತಿತ್ವಗಳೂ ಪ್ರತೀಕಗಳೂ ಇವರ ಕಾವ್ಯವಸ್ತುಗಳಾಗಿರುವುದನ್ನು ನಾವು ಗಮನಿಸಬಹುದು. ಕವಿಯ ನಂಬಿಕೆ ಅಲ್ಲಾಡತೊಡಗಿವೆ. 'ಕುಲುಮೆಯ ಒಳಗೆ ಕಿಡಿಯಿಲ್ಲ', 'ನಾಯಿಗಳಿವೆ ಎಚ್ಚರಿಕೆ', 'ಕೋಗಿಲೆ ರಿಪೇರಿ' ಮುಂತಾದ ಕವನಗಳು ಕವಿಯ ಈ ವಿಚಲಿತ ಪ್ರಜ್ಞೆಗೆ ಸಾಕ್ಷಿಯಂತಿವೆ. ಕವಿ ಇಲ್ಲಿ ತಾನು ಪ್ರವೇಶಿಸಿರುವ ಅನುಭವ ಲೋಕದ ಎಲ್ಲ ತಲ್ಲಣ - ತರಂಗಾಂತರಗಳನ್ನೂ ನಿಭಾಯಿಸಲು ಬೇಕಾದ ತಕ್ಕ

ಕಾವ್ಯದ ಪರಿಕರಗಳಿಲ್ಲದೆ ತನ್ನ ಕಾವ್ಯವನ್ನು ವರ್ತಮಾನದ (ಸಾಮಾಜಿಕ) ಒತ್ತಡಗಳಿಗೆ ಒಪ್ಪಿಸಿ ಬಿಟ್ಟು ದಿಙ್ಮೂಢರಾಗಿ ಕೂತಂತೆ ತೋರುತ್ತದೆ. ಇದು ಆಧುನಿಕ ಮಧ್ಯಮವರ್ಗದ ಮಿತಿಗಳನ್ನು ಮೀರಲಾಗದ ಅಸಹಾಯಕ ಸ್ಥಿತಿಯೂ ಇರಬಹುದು.

ಇಲ್ಲಿಂದ ಮುಂದೆ ಸಾಮೂಹಿಕ ಸಮ್ಮೋಹಿನಿಗೊಳಗಾದಂತೆ ಜಿ.ಎಸ್.ಎಸ್. ಪೂರ್ಣವಾಗಿ ಸಾಮಾಜಿಕ ಕವಿಯಾಗಿ ಪರಿವರ್ತನೆಗೊಳ್ಳುತ್ತಾರೆ. ಮುಂದೆ, ದೇಶಾದ್ಯಂತ ನಿಧಾನವಾಗಿ ತೆರೆ ತೆರೆಗಳಾಗಿ ಇತ್ತೀಚಿನವರೆಗೂ ನಮ್ಮ ರಾಷ್ಟ್ರಜೀವನದ ದಡಗಳನ್ನು ಅಪ್ಪಳಿಸಿದ ಸಾಮಾಜಿಕ/ ರಾಜಕೀಯ ಪ್ರವಾಹಗಳು ಇವರ ಕಾವ್ಯವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಘಾಸಿಗೊಳಿಸಿರುವುದನ್ನು ನಾವು ನೋಡಬಹುದು. ಜಿ.ಎಸ್.ಎಸ್. ಇಲ್ಲೆಲ್ಲಾ ತಮ್ಮ ವ್ಯಕ್ತಿತ್ವದ ಲಾಲಿತ್ಯವನ್ನೇ ಕಳೆದುಕೊಂಡಂತೆ ತಮ್ಮ ಕವನಗಳಲ್ಲಿ ಅಸಮಾಧಾನ ಆಕ್ರೋಶಗಳೇ ಮೇಲುಗೈ ಸಾಧಿಸಲು ಬಿಟ್ಟಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಜಿ.ಎಸ್.ಎಸ್. ಅವರ ಕಾವ್ಯಜೀವನ ನವೋದಯದಲ್ಲಿ ಆರಂಭವಾದರೂ ಅದು ನಂತರ ಪ್ರಗತಿಶೀಲ, ನವ್ಯ ಹಾಗೂ ಬಂಡಾಯ ಎಂಬ ಮೂರೂ ಸಾಹಿತ್ಯ ಚಳವಳಿಗಳ ಮೂಲಕ ಹಾದು ಬರಬೇಕಾಯಿತು. ಈ ಮೂರೂ ಚಳವಳಿಗಳ ಒತ್ತಡ ಪರಿಣಾಮಗಳಿಗೆ ಜಿ.ಎಸ್.ಎಸ್. ಅವರ ಕಾವ್ಯ ಅನುಕ್ರಮವಾಗಿಯಲ್ಲದಿದ್ದರೂ, ಸಂದರ್ಭಾನುಸಾರ ಈಡಾಗಿರುವುದನ್ನು ನಾವು ಕಾಣಬಹುದು. ಅದರ ಮೊದಲ ಸೂಚನೆ 'ತೆರೆದ ದಾರಿ'ಯ 'ಸಾಕು ನಿಲ್ಲಿಸು ಸಾಮಗಾನ' ಎಂಬ ಕವನದಲ್ಲಿ ಕಾಣಸಿಗುತ್ತದೆ. ಈ ಇವರ ಮೊದಲ ಕವನ ಸಂಕಲನದ ಹೆಸರು 'ಸಾಮಗಾನ' ಎಂಬುದನ್ನು ನೆನಪಿಸಿಕೊಂಡಾಗ ಜಿ.ಎಸ್.ಎಸ್. ಇಲ್ಲಿ ತಮ್ಮ ಆವರೆಗಿನ ಕಾವ್ಯವನ್ನೇ ಧಿಃಕರಿಸಿ ನಿಂತಂತೆ ತೋರುತ್ತದೆ! ಕವಿ ತಮ್ಮ ಕಾವ್ಯದ ಬಗ್ಗೆ ತಾವೇ ನಂಬಿಕೆ ಕಳೆದುಕೊಂಡಿದ್ದಾರೆಯೇ? ಈ ಕವನದಲ್ಲಿ ಮೊದಲ ಬಾರಿಗೆ ಕವಿ ಸಾಮಾಜಿಕವಾಗಿ ಆಸ್ಫೋಟಿಸುತ್ತಾರೆ :

> **ದೇಶದಾದ್ಯಂತ ಅಣೆಕಟ್ಟುಗಳ ಕಟ್ಟಿ ನಾವು**
> **ಬೆಳೆದಿದ್ದೇನು, ಬರಿ ಹಸಿವೆ?**
> ....
> **ಬಂತೆ ದೀಪಾವಳಿ? ಇಷ್ಟೊಂದು ಹಣತೆಗಳಲ್ಲಿ**
> **ಎಣ್ಣೆಯಿಲ್ಲ**
> **ಬರೀ ಮಾತುಗಳ ಕಡ್ಡಿ ಗೀಚುವಿಯಲ್ಲ,**
> **ನಿನಗೆ ನಾಚಿಕೆಯಿಲ್ಲ?**

ಹಾಗೇ 'ಸರಸ್ವತಿಗೆ' ಎಂಬ ಕವನದಲ್ಲಿ ತಾವು ನಂಬಿದ್ದ ಶಕ್ತಿ ಸರಸ್ವತಿಯನ್ನು ಹೀಗೆ ಕೇಳಿಕೊಳ್ಳುತ್ತಾರೆ.

> **ಓ ತಾಯಿ ಸರಸ್ವತೀ**
> **ನಿನ್ನ ವೀಣೆ ತಂತಿಗಳಲಿ**

ಜೇಡ ಬಲೆಯ ನೂತಿದೆ
ನಿನ್ನ ಪಾದಪೀಠದ ಕೆಳ-
ಗಿಲಿ ಹೆಗ್ಗಣ ಸೇರಿವೆ
....
....
ಓ ತಾಯಿ ಸರಸ್ವತೀ
ಏನಿದೆಂಥ ದುರ್ಗತಿ!
ಕಾಳಿಯಾಗಿ ಏಳು ತಾಯಿ
ಶೂಲವನ್ನು ತಾಳು ತಾಯಿ
ಕಲ್ಲಾದರೆ ನೀನೆ ಹೀಗೆ
ಹೇಳಿಕೊಳುವುದಾರಿಗೆ?

ಕವಿ ಸಾಮಾಜಿಕವಾಗಿ ಎಷ್ಟು ಅಶಾಂತಿಗೀಡಾಗಿದ್ದಾರೆ, ಅಸಹಾಯಕರಾಗಿದ್ದಾರೆ ಎಂಬುದನ್ನು ಈ ಸಾಲುಗಳಲ್ಲಿ ಕಾಣಬಹುದು. ಆದರೆ ಏಕೆ ಎಂಬ ಪ್ರಶ್ನೆಗಳನ್ನು ಉತ್ತರಿಸುವಷ್ಟು ಶಕ್ತಿ ಈ ಸಾಲುಗಳಲ್ಲಿ ಇಲ್ಲ. ಜಿ.ಎಸ್.ಎಸ್. ಅವರ ಕಾವ್ಯದ ಹುಟ್ಟುಗುಣವಾದ ಸರಳ ಲಯವಷ್ಟೇ ಇಲ್ಲಿಯ ಸಾಲುಗಳಿಗೆ ಕಾವ್ಯಶಕ್ತಿ ನೀಡಿರುವುದು. ಸಿಟ್ಟು, ಸೆಡವು, ಆಸ್ಫೋಟಗಳು ಈ ಕವಿಯ ಸಹಜ ಅಭಿವ್ಯಕ್ತಿ ರೂಪಗಳಲ್ಲ; ಇವುಗಳ ಪ್ರಯೋಗದಿಂದ ಇವರ ಕಾವ್ಯವು ಬಿರುಕು ಬಿಡತೊಡಗಿದೆಂಬುದನ್ನು ಈ ಘಟ್ಟದ ಇವರ ಅನೇಕ ಕವನಗಳಲ್ಲಿ ಕಾಣಬಹುದು. ಈ ಅಶಾಂತ ಘಟ್ಟ 'ದೋಷೋದ್ಧಾರಕ', 'ನಿತ್ಯಕಥೆ', 'ದಾಸಪಂಥ' ಮುಂತಾದ ಸಾಮಾಜಿಕ ಪರಿವೇಷವುಳ್ಳ ಕವನಗಳ ಮೂಲಕ ಕಾವ್ಯದೊಳಕ್ಕೆ ಅಶಾಂತಿಯ ಜೊತೆಗೆ ವ್ಯಂಗ್ಯ, ಕಟಕಿಗಳನ್ನೂ ತಂದುಕೊಳ್ಳುತ್ತಾ 'ಗೋಡೆ' (೧೯೭೨) ಎಂಬ ಜಿ.ಎಸ್.ಎಸ್. ಅವರ ಕಾವ್ಯಜೀವನದ ಈ ನಿರ್ಬಂಧಿತ ಘಟ್ಟಕ್ಕೆ ಅರ್ಥಪೂರ್ಣವೆನಿಸುವ ಶೀರ್ಷಿಕೆಯ ಕವನಸಂಕಲನವನ್ನು ಪ್ರವೇಶಿಸುತ್ತದೆ.

೫

ಇದೀಗ ಅವರ ಕಾವ್ಯಜೀವನದ ಹೊಸ ಸವಾಲು. ಸರಳ ವ್ಯಂಗ್ಯ, ಕಟಕಿಗಳಲ್ಲೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುವ ಅಶಾಂತಿ ಎಂಬ, ಸುತ್ತ ಎದ್ದಿರುವ ಗೋಡೆಯನ್ನು ದಾಟಿ ಮತ್ತೆ ಕಾವ್ಯದಲ್ಲಿ ಸಮತೆಯನ್ನು ಸಾಧಿಸಿಕೊಳ್ಳಬೇಕಾದ ಸವಾಲು. ಈ ಸವಾಲಿಗೆ ಆತ್ಮ ಪರಿವೀಕ್ಷಣೆಯೇ ಉತ್ತರ ಎಂಬುದು ಕವಿಗೂ ಈ ಹೊತ್ತಿಗೆ ಗೊತ್ತಾಗಿದೆ. ಇದರ ಹೊಳಹುಗಳು 'ಗೋಡೆ' ಮತ್ತು ಮುಂದಿನ ಇದರಂತೆಯೇ ಇನ್ನೊಂದು ಅರ್ಥಪೂರ್ಣ ಶೀರ್ಷಿಕೆಯುಳ್ಳ 'ಕಾಡಿನ ಕತ್ತಲಲ್ಲಿ (೧೯೮೨) ಎಂಬ ಕವನಸಂಕಲನಗಳ ಮುಖ್ಯ ಕವನಗಳಲ್ಲಿ ಕಾಣಬಹುದು. 'ಗಾಂಧಿ ಶತಮಾನೋತ್ಸವ' ಎಂಬ ಕವನದಲ್ಲಿ, ಹಬ್ಬಿರುವ ಮಬ್ಬಿನೊಳಗೆ ನಮ್ಮೆಲ್ಲರಲ್ಲೂ

ಅಂತಃಸಾಕ್ಷಿಯಾಗಿ ಅಡಗಿರುವ ಗಾಂಧಿಯನ್ನು ಕಲ್ಪಿಸಿಕೊಳ್ಳುವ ಪರಿ ಇದು :

ನಾವೂ ಇದ್ದೇವೆ -
ಮೂಲೆಯಲ್ಲಿ ಮಿಣ ಮಿಣ ಮೋಂಬತ್ತಿ ಮಬ್ಬಿನ ಸುತ್ತ
ಎಲೆ ತಿರುವಿ ಹಾಕುತ್ತ
ಅವರಿವರ ಪಾಚಿಗಟ್ಟಿದ ಮಾತಿನ ಮೇಲೆ ಕಾಲೂರಿ ನಡೆಯುತ್ತ,
ಗದ್ದುಗೆಯ ಮೇಲೆ ವಿರಾಜಿಸುವ ಹದ್ದುಗಣ್ಣಿನ
ಮೃಗರಾಜನೆದುರು ಪಂಚತಂತ್ರ ಪ್ರತಿಭೆಯಲ್ಲಿ ಬಾಲವಲ್ಲಾಡಿ -
-ಸುತ್ತಾ, ಗುಂಪಿನಲ್ಲಿ ಗೋವಿಂದವಾಗುತ್ತ,
ಬೇಯುವಲ್ಲೆಲ್ಲಾ ನುಗ್ಗಿ, ಕೈಗೆ ಸಿಕ್ಕಷ್ಟು ಲಪಟಾಯಿಸುತ್ತಾ
ಬೀದಿ ಧೂಳುಗಳ, ಗಲ್ಲಿಗಳ, ಕೊಳಕುಗಳ
ಕಿರುಚುಗಳ, ಬಣ್ಣಗಳ, ಕಣ್ಣುಗಳ ನಡೂಮಧ್ಯೆ
ನಾವೂ ಇದ್ದೇವೆ.
ಇದ್ದಕ್ಕಿದ್ದಂತೆ ಇದರೊಳಗೆ ಯಾರೋ
ಕೋಲು ಕುಟ್ಟುವ ಸದ್ದು ಕೇಳುತ್ತದೆ
ಯಾರೋ ಸಣ್ಣಗೆ ಕಣ್‌ತೆರೆದು ನಮ್ಮೊಳಗನ್ನೆಲ್ಲಾ
ಟಾರ್ಚ್ ಹಾಕಿ ಝಗ್ಗೆಂದು ಬಯಲಿಗೆಳೆದಂತೆ
ಭಯವಾಗುತ್ತದೆ.

ಅಂತಃಸಾಕ್ಷಿಯನ್ನೇ ಕಳೆದುಕೊಂಡಿರುವ ಇಡೀ ರಾಷ್ಟ್ರದ ಈ ದುರಂತಮಯ ಸ್ಥಿತಿಯನ್ನು ಮಹಾಭಾರತದ ಒಂದು ದೃಶ್ಯೋಪಮೆಯ ಮೂಲಕ ಕಾವ್ಯದ ಎಲ್ಲ ಆಂತರಿಕ ಕ್ರಿಯಾಶೀಲತೆಯೊಡನೆ ಹೊರಹೊಮ್ಮಿಸುವ ಚಿತ್ರವತ್ತತೆಯಲ್ಲಿ ಕಟ್ಟಿಕೊಡುವ 'ಭೀಮಾಲಾಪ', ಜಿ.ಎಸ್.ಎಸ್. ತಮ್ಮ ಸಾಮಾಜಿಕ ಕಾವ್ಯಪ್ರಯೋಗದಲ್ಲಿ ಸಾಧಿಸಿದ ಕೌಶಲ್ಯದ ಅತ್ಯುತ್ತಮ ಉದಾಹರಣೆಯಂತಿದೆ. ಕವಿ ತನ್ನನ್ನು ಇಲ್ಲಿ ದುಃಖ ಧ್ಯಾನಿತನಾಗಿರುವಂತೆ ತೋರುವ ಭೀಮನಿಗೆ ಹೋಲಿಸಿಕೊಂಡು ಬರೆಯುತ್ತಾರೆ :

ಸೀರೆ ಉಟ್ಟು, ಬಳೆ ತೊಟ್ಟು, ಕಾಲಿಗೆ
ಗೆಜ್ಜೆ ಕಟ್ಟಿದ್ದಾನೆ ಒಬ್ಬ;
ಇನ್ನೊಬ್ಬ ಕಾವಿ ಉಟ್ಟು ಮೂಲೆಗೆ ಕೂತಿದ್ದಾನೆ
ದನದ ಕೊಟ್ಟಿಗೆಯಲ್ಲಿ ಒಬ್ಬ, ಕುದುರೆ ಲಾಯದಲ್ಲಿ
ಮತ್ತೊಬ್ಬ
ಇದ್ದಾಳೆ ಇವಳು, ಅವರಿವರ ತಲೆಯ
ಹೇನು ಹೆಕ್ಕುತ್ತಾ

ಆಗಾಗ ನಮ್ಮನ್ನೂ ಕುಕ್ಕುತ್ತಾ
ನಾನೂ ಇದ್ದೇನೆ - ಅಡುಗೆ ಮನೆಯಲ್ಲಿ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು
ಹಳೆಯ ನೆನಪುಗಳನ್ನು ರುಬ್ಬುತ್ತಾ :

ಈ ದುಃಖಧ್ಯಾನ ಮುಗಿಯುವುದು ಈ ಎಚ್ಚರದಲ್ಲಿ -

ಗೆರೆ ದಾಟಬಾರದ ನಾನು ಕಾಯುತ್ತಿದ್ದೇನೆ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು ಕಾಯುತ್ತಿದ್ದೇನೆ

ಗೆರೆ ದಾಟಲಾರದ ಎಚ್ಚರ ಇಲ್ಲಿ ಕವಿತೆಯೊಳಗಿನ ಭೀಮನದು ಮಾತ್ರವಲ್ಲ; ಕವಿತೆ ಕಟ್ಟುವ ಕಸಬುದಾರಿಕೆಯ ಎಚ್ಚರ ಕೂಡಾ. ನವ್ಯರ ಮಧ್ಯ ಇದ್ದೂ, ಕವಿತೆ ಅನಗತ್ಯವಾಗಿ ಅಶ್ಲೀಲವಾಗಲು ಬಿಡದ ಜಿ.ಎಸ್.ಎಸ್. ಅವರ ಅಂತರ್ಯದ ಎಚ್ಚರ ಕೂಡಾ ಇದು. ನವ್ಯರ ಸಾಮಾಜಿಕ ಕ್ರೋಧಕ್ಕೂ ಈ ಕವಿಯ ಸಾಮಾಜಿಕ ಕ್ರೋಧಕ್ಕೂ ಇರುವ ವ್ಯತ್ಯಾಸ ಇದೇ. ನವ್ಯರು ಇದನ್ನು ವೈಯಕ್ತಿಕ ಕ್ರೋಧದ ಆಸ್ಫೋಟನೆಯ ಮೂಲಕ ವೈಯಕ್ತಿಕವಾಗಿ ಪರಿಹರಿಸಿಕೊಳ್ಳುವುದರಲ್ಲೇ ತೃಪ್ತರಾದರೆ, ಈ ಕವಿ 'ಸಾಮಾಜಿಕ ಧ್ಯಾನ'ವೆಂಬ 'ಅಪಶಬ್ದ'ದ ಮೂಲಕ ಕರೆಯಬಹುದಾದ - ಎಲ್ಲಕ್ಕೂ ಪ್ರತಿಕ್ರಿಯಿಸುತ್ತಲೇ ಅದನ್ನು ಅರಿಯುವ, ವಾಸ್ತವ ಸತ್ಯಕ್ಕೆ ದಟ್ಟ ವಿಷಾದದೊಡನೆ ಎಚ್ಚರಗೊಳ್ಳುವ - ವ್ಯವಧಾನದ ಕ್ರಮವನ್ನು ಅನುಸರಿಸುವರು. ಇದು ಜಿ.ಎಸ್.ಎಸ್. ಈ ಮುನ್ನ ಅನುಭವಿಸಿದ ಆಧುನಿಕ ಕಾವ್ಯ ಪರಿಕರಗಳ ಕೊರತೆಯನ್ನು ತುಂಬಿಕೊಳ್ಳುವ ಸೃಜನಶೀಲ ಪ್ರಯತ್ನವೂ ಆಗಿರಬಹುದು. ಆದುದರಿಂದಲೇ ಜಿ.ಎಸ್.ಎಸ್. ಅವರ ಕಾವ್ಯದಲ್ಲಿ ನವ್ಯಕಾವ್ಯದ ತೀವ್ರತೆ ಹಾಗೂ ತುರ್ತು (ಹಾಹಾಕಾರ) ಎದ್ದು ಕಾಣುವುದಿಲ್ಲ. ಆದರೆ, ಈ ತೀವ್ರತೆ ಹಾಗೂ ತುರ್ತುಗಳ ಹಿಂದಿರುವ ಅಹಂ ಮೂಲವಾದ ಅನಾಥಪ್ರಜ್ಞೆಗೆ ಪರ್ಯಾಪ್ತವಾದ ಸಾಮಾಜಿಕ ಆವೃತತೆಯಿಂದ ಹುಟ್ಟುವ ಆತ್ಮಸಾಕ್ಷ್ಯತ್ವದ ಪಾರದರ್ಶಕ ಬೆಳಕಿದೆ. ಜಿ.ಎಸ್.ಎಸ್. ತಮ್ಮ ಕಾವ್ಯ ಪ್ರಯೋಗದ ಮೂಲಕ ಕಂಡುಕೊಂಡ ಸಾಮಾಜಿಕ ಸತ್ಯದ ಈ ಪಾರದರ್ಶಕ ರೂಪವನ್ನು, ಅವರ 'ದುಃಸ್ವಪ್ನ' ಎಂಬ ಕವನದಲ್ಲಿ ಕಾಣಬಹುದು.

ಕಂಡೆ
ಎಂತೆಂಥವರು ಏನೇನೋ ಆದದ್ದ ಕಂಡೆ
ಗೊಮ್ಮಟನಾಗಿ ನಿಂತಿದ್ದ ಮಹಾಮೂರ್ತಿ
ಕರಗಿ ಕೊಚ್ಚೆಯಾಗಿ ಹರಿದಿದ್ದ ಕಂಡೆ
ಇಂದ್ರನೈರಾವತಕ್ಕೆ ತೊಣಚೆ ಹತ್ತಿ
ಬೀದಿನಾಯಾಗಿ ಬೂದಿಯಲ್ಲಿ ಹೊರಳಾಡಿದ್ದ ಕಂಡೆ

ನಿಗಿನಿಗಿ ಉರಿದ ಉಜ್ವಲವಾದ ಮಾತೆಲ್ಲ
ಬರೀ ಬೂದಿಯಾಗಿ ತೆಪ್ಪಗಾದದ್ದ ಕಂಡೆ
ಕೊಳಕುಮಂಡಲಕ್ಕೆ ಏಳು ಹೆಡೆ ಮೂಡಿ
ಮಾನಸ ಸರೋವರದಲ್ಲಿ ಜಲಕ್ರೀಡೆಯಾಡಿದ್ದ ಕಂಡೆ.

- ಹೀಗೆ ಅವನತಿಯ, ತಲ್ಲಣಗೊಳಿಸುವ ಚಿತ್ರ ಕೊಡುತ್ತಾ ಸಾಗುವ ಈ ಕವನ,

ಕಂಡು ಎಚ್ಚರಗೊಂಡೆ
ಎಚ್ಚರವೆಲ್ಲ ನಿಗಿನಿಗಿ ಉರಿವ ಕೆಂಡದ ಉಂಡೆ.

ಎಂಬ ಅರಿವು - ಎಚ್ಚರಗಳ ಸಾಮಾಜೀಕರಣದಲ್ಲಿ ಮುಗಿಯುತ್ತದೆ. ಈವರೆಗಿನ ಸಿಟ್ಟು, ವ್ಯಂಗ್ಯ, ವಿಷಾದಗಳೆಲ್ಲ ಮುಪ್ಪರಿಗೊಂಡು ಗ್ರಹಿಕೆಯ ಹೊಸ ಹದವೊಂದು ಸೃಷ್ಟಿಯಾಗಿದೆ. ಇಲ್ಲಿ ನಾನು ಈ ಮುನ್ನ ಅಪಶಬ್ದವೆಂದು ಬಳಸಿದ 'ಸಾಮಾಜಿಕ ಧ್ಯಾನ'ವೆಂದರೆ ಇದೇ. ಇದು ಕವಿಯನ್ನು 'ಸಾಮಾಜಿಕ ಸತ್ಯ'ದ ಪ್ರತಿಕ್ರಿಯಾತ್ಮಕ ಸ್ಥಿತಿಗೆ ಕೊಂಡೊಯ್ದಿದೆ. 'ಕಾಡಿನ ಕತ್ತಲಲ್ಲಿ' ಸಂಕಲನದ ಕೊನೆಯ ಪದ್ಯ 'ನಾನೇಕೆ ಬರೆಯುತ್ತೇನೆ', ಜಿ.ಎಸ್.ಎಸ್. ಕಂಡುಕೊಂಡಿರುವ ಸಾಮಾಜಿಕ ಸತ್ಯ ಹಾಗೂ ಕಾವ್ಯ ಸತ್ಯಗಳೆರಡಕ್ಕೂ ಉದಾಹರಣೆಯಂತಿದೆ.

ನಾನು ಬರೆಯುತ್ತೇನೆ
ಸುಮ್ಮನಿರಲಾರದ್ದಕ್ಕೆ;
ನನ್ನ ವೇದನೆ ಸಂವೇದನೆಗಳನ್ನು
ಕ್ರಿಯೆ ಪ್ರತಿಕ್ರಿಯೆಗಳನ್ನು
ದಾಖಲು ಮಾಡುವುದಕ್ಕೆ,
ನಿಂತ ನೀರಾಗದೆ, ಮುಂದಕ್ಕೆ
ಹರಿಯುವುದಕ್ಕೆ
ಎಲ್ಲದರ ಜತೆ ಬೆರೆಯುವುದಕ್ಕೆ

ನಾನು ಬರೆಯುತ್ತೇನೆ
ನನ್ನನ್ನು ನಾನು ಕಂಡುಕೊಳ್ಳುವುದಕ್ಕೆ
ಮತ್ತೆ ಕಾಣಿಸುವುದಕ್ಕೆ;
ನಿಮ್ಮೊಂದಿಗೆ ಸಂವಾದಿಸುವುದಕ್ಕೆ.

ನಾನು ಬರೆಯುತ್ತೇನೆ
ಖುಷಿಗೆ, ನೋವಿಗೆ
ರೊಚ್ಚಿಗೆ ಮತ್ತು ಹುಚ್ಚಿಗೆ
ಅಥವಾ ನಂದಿಸಲಾರದ ಕಿಚ್ಚಿಗೆ

ಜಿ.ಎಸ್.ಎಸ್. ಅವರ ಕಾವ್ಯದ ಸಾಮಾಜಿಕ ಸತ್ಯದ ಆವಿಷ್ಕಾರ ಹೀಗೆ ಒಡನಾಡಿ ಬದುಕುವುದರ ಮೂಲಕ ತನ್ನನ್ನು ತಾನು ಕಂಡುಕೊಳ್ಳುವುದರ ಸರಳ ಅರಿವಿನೊಂದಿಗೆ ಮುಕ್ತಾಯ ಗೊಳ್ಳುತ್ತದೆ. ವ್ಯಕ್ತಿಯೆಂದರೆ ಸಮಾಜದ ಇನ್ನೊಂದು ಮುಖ; ಹಾಗೇ ಸಮಾಜವೆಂದರೆ ವ್ಯಕ್ತಿಯ ಇನ್ನೊಂದು ಮುಖ. ಈ ಕಂಡರಿಸುವಿಕೆಯಲ್ಲಿ ಕಾಡಿನ ಕತ್ತಲಿನ ಹಾದಿ ಮುಗಿಯುತ್ತದೆ. ಹಾಗೆಯೇ, ಮುಂದಿನ ಸಂಕಲನವಾದ 'ಪ್ರೀತಿ ಇಲ್ಲದ ಮೇಲೆ' (೧೯೮೭) ಎಂಬ ಮತ್ತೊಂದು ಅರ್ಥಪೂರ್ಣವಾದ ಶೀರ್ಷಿಕೆಯುಳ್ಳ ಕವನಸಂಕಲನದ 'ಅವಸ್ಥೆ' ಎಂಬ ಪದ್ಯದಲ್ಲಿ ಈ ಅರಿವು ಹೀಗೆ ವೈಯಕ್ತಿಕ ಸಾಕ್ಷಾತ್ಕಾರದ ರೂಪದಲ್ಲಿ ವ್ಯಕ್ತವಾಗಲು ಸಾಧ್ಯವಾಗಿದೆ :

ಚಳಿಗೆ ಗಡಗಡನೆ ನಡುಗಿ
ಮುದುರಿ ಮೂಲೆಗೆ ಕೂತ
ಹರುಕು ಚಿಂದಿಯ ಪುಟ್ಟ ಹುಡುಗನ್ನ ಕಂಡು
ಬೆಚ್ಚನೆಯ ಬಟ್ಟೆ ತೊಟ್ಟ ನನ್ನೊಳಗೂ
ನಡುಕ ಶುರುವಾಗುತ್ತದೆ

ಅವನು ಹಾಗಿರೋದಕ್ಕೆ
ನಾನೂ ಕಾರಣ ಅನಿಸುತ್ತೆ.

ಎಂದು ಆರಂಭವಾಗುವ ಕವನ, ಇಂತಹ ಹಲವು ಸಾಮಾಜಿಕ ಚಿತ್ರಗಳನ್ನು ನೀಡುತ್ತಾ

ಅವರೆಲ್ಲಾ ಹಾಗಿರೋದಕ್ಕೆ
ನಾನೂ ಕಾರಣ ಅನಿಸುತ್ತೆ

ಎಂದು ಪದೇ ಪದೇ ಮನವರಿಕೆ ಮಾಡಿಕೊಳ್ಳುವುದು, ಪುನರಾವೃತ್ತಿಯ ಲಯದಲ್ಲಿ ಮನಸ್ಸಿನಲ್ಲಿ ನಿಂತು ಬಿಡುತ್ತದೆ. ಹಾಗೆ ನೋಡಿದರೆ ಈ ಸಂಕಲನದ - ಶೀರ್ಷಿಕಾ ಪದ್ಯವೂ ಸೇರಿದಂತೆ ಹಲವು ಕವನಗಳು ಈ ಪುನರಾವೃತ್ತಿಯ ಲಯವನ್ನು ಬಳಸಿಕೊಂಡು ಪ್ರೀತಿ ಇಲ್ಲದ ಸ್ಥಿತಿಯನ್ನು ಅರ್ಥಹೀನತೆಯನ್ನು ಅಸಮಾನತೆಯನ್ನು ಮನವರಿಕೆ ಮಾಡಿಕೊಡುವಂತಹ ಮನಕಲಕುವ ಪ್ರಶ್ನೆಗಳೊಂದಿಗೆ ಮನಸ್ಸನ್ನು ತುಂಬಿಕೊಳ್ಳುತ್ತವೆ :

ಪ್ರೀತಿ ಇಲ್ಲದ ಮೇಲೆ
ದಕ್ಷಿಣಾಫ್ರಿಕದ ಕಗ್ಗತ್ತಲಿಗೆ
ಬೆಳಕು ಮೂಡೀತು ಹೇಗೆ?
ಸೆರೆಮನೆಯ ಕಂಬಿಯ ನಡುವೆ
ಕಮರುವ ಕನಸು ಕೊನರೀತು ಹೇಗೆ?
ಬಿಳಿ ಜನರ ಕರಾಳ ಕಪ್ಪು ಹೃದಯಕ್ಕೆ
ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ?

- ಈ ಸಾಲುಗಳ, ಕವನಗಳ ಪರಿಣಾಮಶೀಲತೆಗೆ ಮುಖ್ಯ ಕಾರಣ ಅವು ಬಿಡಿಸಿಡುವ ಸರಳ, ನೇರ ಆದರೆ ಆತ್ಮೀಯವಾದ ಸಾಮಾಜಿಕ ಚಿತ್ರಗಳ ಮೂಲಕ ಜಿನುಗುವ ದುಃಖ. ಇದು ಮನವರಿಕೆಯ - ತನ್ನ ಕಾವ್ಯದ ಪ್ರಯೋಗದ ನೆಲೆಯಲ್ಲಿಯೇ ಸಾಧಿಸಿಕೊಂಡ ಸಾಕ್ಷಾತ್ಕಾರ (realisation)ದ ಫಲವಾದ ದುಃಖ. ಇದು ಸಹಜವಾಗಿಯೇ ಅರಿವು ತುಂಬಿಕೊಂಡ ದುಃಖ. (ಸಂಸಾರ ದುಃಖಮಯ ಎಂಬ ಬುದ್ಧನ ಅರಿವಿನ ಬೇರಿನಲ್ಲಿರುವ ಪಾರಮಾರ್ಥಿಕ ದುಃಖ). ಈ ಲೇಖನದ ಪೀಠಿಕೆಯಲ್ಲಿ ಜಿ.ಎಸ್.ಎಸ್. ಅವರ ಕಾವ್ಯದ ಅಂತಿಮ ಬಿಕ್ಕಟ್ಟನ್ನು ಸೂಚಿಸುತ್ತ ದೆಂದು ಪ್ರಸ್ತಾಪಿಸಿದ 'ಯಾವ ಹಾಡ ಹಾಡಲಿ?' ಕವನದ ತುಂಬಾ ತುಂಬಿಕೊಂಡಿರುವುದೂ ಪುನಾರಾವೃತ್ತಿಯ ಲಯ ಕೌಶಲ್ಯದ ಮೂಲಕ ಮಂಥನಗೊಂಡು ಹುಟ್ಟುವ ಇಂತಹ ದುಃ ಖವೇ. ಹೀಗಾಗಿ ಈ ದುಃಖ, ಜಿ.ಎಸ್.ಎಸ್. ಅವರ ಕಾವ್ಯದ ಅಂತಿಮ ಬಿಕ್ಕಟ್ಟಿನ ಹೇಗೋ ಹಾಗೆ ಅಂತಿಮ ಬಿಡುಗಡೆಯ ಅವಸ್ಥೆಯೂ ಹೌದು. ಹಾಗೇ ಪುನರಾವೃತ್ತಿಯ ಲಯವನ್ನು ತನ್ನೊಡಲೊಳಗೆ ಇಟ್ಟುಕೊಂಡ ಈ ಅವಸ್ಥೆಯಿಂದಾಗಿ ಜಿ.ಎಸ್.ಎಸ್. ಅವರ ಕಾವ್ಯದೊಳಕ್ಕೆ ಚಕ್ರದ ಪ್ರವೇಶದ ಪ್ರತೀಕವಾಗಿ ಅವರ ಕಾವ್ಯ ಹೊಸದೊಂದು ನೆಲೆ ಮುಟ್ಟುವ ಅಚ್ಚರಿಯನ್ನು ನಾವು ಮುಂದೆ ಕಾಣಬಹುದು. 'ಎಲ್ಲೋ ಮಗು ಅಳುತಾ ಇದೆ' ಕವನವನ್ನೇ ನೋಡಿ. ಇಲ್ಲಿ ಕವಿ, ದುಃಖವು ಮಗುವಿನ ದುಃಖದ ರೂಪಕದ ಮೂಲಕ ವೈಯಕ್ತಿಕ ಸಾಮಾಜಿಕ ಸ್ತರಗಳ ದ್ವಂದ್ವವನ್ನು ಮೀರಿ ಚರಿತ್ರೆಯ ಚಲನೆಗೆ ಶೃತಿಯಾಗುವುದನ್ನು ಕಂಡರಿಸುತ್ತಾರೆ :

ಎಲ್ಲೋ ಮಗು ಅಳುತಾ ಇದೆ
ಒಂದೇ ಸಮನೆ
ದೂರದ ಬಿರುಗಾಳಿಯ ಮೊರೆಯಂತೆ
ಮುಗಿಲಿಂದಿಳಿಯುವ ಧಾರಾಕಾರದ
ಮಳೆಯಂತೆ

ಎಂದು ಪ್ರಕೃತಿಲೋಕದ ರೂಪಕಾಲಂಕಾರಗಳ ಧ್ವನಿಶಕ್ತಿಯೊಂದಿಗೆ ಆರಂಭವಾಗಿ ಮತ್ತೆ ಮತ್ತೆ 'ಎಲ್ಲೋ ಮಗು ಅಳುತಾ ಇದೆ ಒಂದೇ ಸಮನೆ' ಎಂಬ ಪುನರಾವರ್ತನೆಯ ಲಯದ ಮೂಲಕ, ಮನುಷ್ಯ ಲೋಕದ ಸಾಹಸ ಸಾಧನೆಗಳನ್ನೆಲ್ಲ ಮಣ್ಣು ಮಾಡುವ ಆತ್ಯಂತಿಕ ದುರಂತದಲ್ಲಿ ತಾರಕವನ್ನು ಮುಟ್ಟಿ ಹೀಗೆ ಮುಗಿಯುತ್ತದೆ :

ಮಗು ಅಳುತಾ ಇದೆ
ಒಂದೇ ಸಮನೆ
ಶತಶತಮಾನದ ಬೆವರಿನ ತೆನೆಗಳ -
ನೆತ್ತಿದ ಹೊಲ - ಗದ್ದೆಗಳಲ್ಲಿ
ಕವಿ - ವಿಜ್ಞಾನಿಯ - ಕ್ರಾಂತಿಕಾರಿಗಳ
ಸಾಧನೆ - ಅನ್ವೇಷಣೆಗಳ ಹಾದಿಯಲಿ
ಬಿರುಗಣ್ಣುರಿಯಲಿ ಕಮರುವ ಕನಸಿನ

ಚಿತೆಯ ಜ್ವಾಲೆಗಳ ಧೂಮದಲಿ
ಚರಿತ್ರೆಯುದ್ದಕು ಕೆನೆವ ಕುದುರೆಗಳ
ರಥ ಚಕ್ರದ ಕೆಂಧೂಳಿಯಲಿ
ಎಲ್ಲೋ ಮಗು ಅಳುತಾ ಇದೆ
ಒಂದೇ ಸಮನೆ

ಈ ಚಕ್ರವು ಚರಿತ್ರೆಯ ಚಕ್ರ ಅಥವಾ ಕರ್ಮಚಕ್ರ. ದುಃಖದ ಸುಳಿ ಹುಟ್ಟುವುದೂ ಅಡಗುವುದೂ ಇದರ ಅಚ್ಚಿನಲ್ಲಿಯೇ. ಆದುದರಿಂದ ಈ ಸುಳಿಯಿಂದ ಬಿಡುಗಡೆ ಪಡೆಯುವ ಏಕೈಕ ಮಾರ್ಗವೆಂದರೆ ಈ ಚಕ್ರದ ಚಲನೆಯ ತರ್ಕವನ್ನು ಅರ್ಥ ಮಾಡಿಕೊಳ್ಳುವುದು. 'ಚರಿತ್ರೆ - ಪುರಾಣ' ಎಂಬ ಕವಿತೆಯಲ್ಲಿ ಕವಿಗೆ ಅದರ ಹೊಳಹು ಸಿಕ್ಕಿದೆ :

ಮುಂದಕ್ಕೆ ಚಲಿಸುತ್ತಿದ್ದರೆ ಅದು ಚರಿತ್ರೆ
ನಿಂತು ಮಡುಗಟ್ಟಿದರೆ ಪುರಾಣ
ಪರಿಸ್ಥಿತಿ ಹೀಗೆ ಪುರಾಣವಾಗುತ್ತಲೇ
ಶುರುವಾಗುತ್ತದೆ ಅದರ ಪಾರಾಯಣ.

- ಚರಿತ್ರೆ-ಪುರಾಣಗಳ ರೂಪಾಂತರದ ಈ ಚಕ್ರೀಯಸತ್ಯದ ಹೊಳಹು ಜಿ.ಎಸ್.ಎಸ್.ರ ಕಾವ್ಯವನ್ನು ಒಂದು ಹೊಸನೆಲೆಗೇ ಒಯ್ಯುತ್ತದೆ. ಇಲ್ಲಿಂದ ಅವರ ಕಾವ್ಯದ ಜನ್ಮಾಂತರ ಆರಂಭ.

೬

ಜನ್ಮಾಂತರವೆಂದರೆ ಒಂದು ಅವಸ್ಥೆಯ ಅನುಭವ - ಅನುಭೂತಿ - ತಿಳುವಳಿಕೆಯನ್ನೆಲ್ಲ ಬೀಜೀಕರಿಸಿಕೊಂಡು ಮಣ್ಣಲ್ಲಿ (ಕಾಲದಲ್ಲಿ) ಮಲಗಿ ಮತ್ತೆ ಗಿಡವಾಗಿ ಎದ್ದು ಮರವಾಗಿ ಅರಳುವುದು. ಜಿ.ಎಸ್.ಎಸ್. ಅವರ ಈವರೆಗಿನ ಕೊನೆಯ ಸಂಕಲನ 'ಚಕ್ರಗತಿ' (೧೯೯೨)ಯಲ್ಲಿ ನಾವು ಹಳೆಯ ಕಾವ್ಯಪ್ರಯೋಗಗಳೆಲ್ಲದರಿಂದ ಹೊಮ್ಮಿದ ಹೊಸ ಎಚ್ಚರ ಕೌಶಲಗಳ ಸ್ಪಷ್ಟ ಸೂಚನೆಗಳನ್ನು ಕಾಣಬಹುದು. ವ್ಯಕ್ತಿ ಮತ್ತು ಅತೀತದ ಸಂಬಂಧವನ್ನು ನಂಬಿಕೆಯ ನೆಲೆಯಲ್ಲಿ ಒಪ್ಪಿಕೊಂಡು ಆರಂಭವಾದ ಇವರ ಕವಿತೆ ವೈಚಾರಿಕತೆಗೆ ತೆರೆದುಕೊಳ್ಳುತ್ತಾ ವ್ಯಕ್ತಿ ಮತ್ತು ಸಮಾಜಗಳ ನಡುವಣ ಸಂಬಂಧದ ಅನ್ವೇಷಣೆಗೆ ತಿರುಗಿ ಅದು ಮಾಗಿದಂತೆ ಮತ್ತೆ ಇನ್ನೊಂದು ಸ್ತರದಲ್ಲಿ ವ್ಯಕ್ತಿ ಮತ್ತು ಅತೀತದ ನಡುವಣ ಸಂಬಂಧವೇ ಆಗಿರುವುದನ್ನೂ; ಈ ಎಲ್ಲ ಸಂಬಂಧಗಳೂ ಅರಿವು ತುಂಬಿಕೊಂಡ ದುಃಖದ ಮೂಲಕವೇ ಅರ್ಥಪೂರ್ಣವಾಗುವುದನ್ನು ಕಂಡು ಬೆರಗಾಗಿ ನಿಲ್ಲುವುದರೊಂದಿಗೆ ಒಂದು ಪೂರ್ಣ ಸುತ್ತು ಮುಗಿಯುತ್ತದೆ. ಈ ಹೊಸ ಬೆರಗೇ 'ಚಕ್ರಗತಿ'ಯ ಬಹಳಷ್ಟು ಕವನಗಳನ್ನು ಆವರಿಸಿ ಜಿ.ಎಸ್.ಎಸ್. ಅವರನ್ನು ಒಬ್ಬ ಹೊಚ್ಚಹೊಸ ಕವಿಯೇನೋ ಎಂಬಂತೆ ಹೊಸ ಬೆಳಕಿನಲ್ಲಿ ನಿಲ್ಲಿಸಿರುವುದು. ಈ ಸಂಕಲನದ 'ಸಂಭವ' ಎಂಬ ಮೊದಲ ಕವನವೇ ಕವಿಯಲ್ಲಿ ಕಾವ್ಯ

ಕುರಿತ ತಿಳುವಳಿಕೆ ಹೇಗೆ ಕ್ರಾಂತಿಕಾರಕವಾಗಿ ಮಾರ್ಪಾಡಾಗಿದೆ ಎಂಬುದನ್ನು ಸೂಚಿಸುತ್ತದೆ :

ಕಾಯುತ್ತಿರಲು ಹೀಗೆ ನಾನೊಬ್ಬನೇ
ಕವಿತೆಗೆ, ಅದೆಲ್ಲಿಂದಲೋ ಸದ್ದಿರದೆ
ಹಾರಿ ಬಂತೊಂದು ಕಪ್ಪನೆ ಕಾಗೆ, ಅಸ್ಪಷ್ಟತೆಗೆ
ಮೂಡಿದ ಹಾಗೆ ಎರಡು ರೆಕ್ಕೆ
ವಕ್ರಾಭಿವ್ಯಕ್ತಿಗಳ ಕೊಂಬೆನಕ್ಷೆಯ ನಡುವೆ
ರೆಕ್ಕೆಯರಳಿಸಿ, ಸ್ವರವೆತ್ತಿ ಕೂತೊಡನೆ ಕಾಗೆ
ಇಡೀ ಮರಕ್ಕೆ ಮರವೇ, ಪ್ರತೀಕವಾಗಿ
ಪರಿಣಮಿಸಿತ್ತು ನಾನು ಕಾಯುತ್ತಿದ್ದ ಕವಿತೆಗೆ

- ಪೌರಾಣಿಕವಾಗಿ ಪಿತೃಗಳಿಗೆ ಪ್ರತೀಕವಾಗಿರುವ ಕಾಗೆ ಈ ಕವನದಲ್ಲಿ ಅಸ್ತಿತ್ವದ ನಿಗೂಢ ನೆನಪಿನಾಳದಿಂದೆದ್ದ ಒಂದು ತರಂಗ. ಇಡೀ ಅಸ್ತಿತ್ವಕ್ಕೆ ಒಂದು ಹೊಸ ರೂಪ ಹಾಗೂ ಅರ್ಥ ನೀಡುವ ಪವಾಡ ಸದೃಶತೆಗೆ ಇದು ಸಾಕ್ಷಿಯಾಗಿದೆ. ಬದುಕಿಗೂ, ಕಾವ್ಯಕ್ಕೂ, ಚರಿತ್ರೆಗೂ, ಪುರಾಣಕ್ಕೂ ಇರುವ ಸಂಬಂಧವೂ ಹೀಗೆ. ಇಷ್ಟೇ ಪವಾಡ ಸದೃಶವಾದುದು; ತಿರುಗುವ ಗಾಲಿ ಎಲ್ಲವನ್ನೂ ಒಂದು ಮಾಡುತ್ತದೆ. ಈ ಚಕ್ರೀಯ ಸತ್ಯದ ಅರಿವು ಇಲ್ಲಿ ದಾಖಲಾಗಿದೆ :

ಜಗನ್ನಾಥನ ಗಾಲಿ ಕಣ್ಣುಗಳಲ್ಲಿ ಕಂಡೆ: ವಿಸ್ತಾರ
ವಾದ ಸೂರ್ಯಕಾಂತಿಯ ಹೊಲದ ವೈಭವವನ್ನು,
ಹಗಲು - ರಾತ್ರಿಗಳನ್ನು ಒಟ್ಟಿಗೇ ಹಿಡಿದು, ಅಯ
ಸ್ಕಾಂತ ಕೇಂದ್ರಬಿಂದುವಿಗೆ ತಂದ ಕೌಶಲವನ್ನು.

(ಪುರಿ ಜಗನ್ನಾಥ ದೇಗುಲದಲ್ಲಿ)

ಈ ಕೌಶಲವೇ ನಾನು ಈ ಮುನ್ನ ಜಿ.ಎಸ್.ಎಸ್. ಅವರ ಕಾವ್ಯಸಾಧನೆಯ ಉತ್ತುಂಗ ಶಿಖರವೆಂದು ಗುರುತಿಸಿ ಪ್ರಸ್ತಾಪಿಸಿದ, 'ಅಸ್ತಮಾನ' ಕವಿತೆಯನ್ನು ಸೃಷ್ಟಿಸಿರುವುದು. ಈ ಕೌಶಲದ ಒಂದು ರೂಪ ಇಲ್ಲಿ ಹಾಗೂ ಈ ಸಂಕಲನದದ ಇನ್ನೂ ಹಲವು ಕವನಗಳಲ್ಲಿ ಕಾಣಬರುವ run on stanza ತಂತ್ರ, ಅಂದರೆ ಪದ್ಯ ಸ್ಟಾಂಜಾಗಳಲ್ಲಿ ವಿರಮಿಸದೆ ನಿರಂತರತೆಯನ್ನು ಕಾಪಾಡಿಕೊಂಡು ಹೋಗುವ ತಂತ್ರ. ಕಂದ - ವೃತ್ತ - ಚಂಪೂಗಳನ್ನು ಜೋಡಿಸುವ ಪಂಪನ ತಂತ್ರದ ವಿಕಸಿತ ರೂಪದಂತಿರುವ ಇದು, ಬದುಕೂ, ಸತ್ಯವೂ ಹಾಗೇ ಎಂದು ಜಿ.ಎಸ್.ಎಸ್. ಅವರಿಗೆ ಆಗಿರುವ ಮನವರಿಕೆಗೆ ಸಂಬಂಧಿಸಿದ ತತ್ವವೂ ಆಗಿರಬಹುದು. ಹೀಗೆ ಗ್ರಹಿಕೆ ಮತ್ತು ಅಭಿವ್ಯಕ್ತಿಗಳನ್ನು ಐಕ್ಯಗೊಳಿಸುವ ಈ ಚಕ್ರೀಯಸತ್ಯವನ್ನು ತಮ್ಮ ಇತ್ತೀಚೆಗಿನ 'ಚರಿತ್ರೆ ಅಂದರೆ' ಎಂಬೊಂದು, ಈ ತಂತ್ರದಲ್ಲೇ ಬರೆದಿರುವ, ಕವನದಲ್ಲಿ ಅಂತಿಮವಾಗಿ ಕಾಣಿಸಿರುವುದು ಹೀಗೆ :

ಚರಿತ್ರೆ ಅಂದರೆ ನಡೆದುದಷ್ಟೇ ಅಲ್ಲ, ನಡೆಯು
ತ್ತಿರುವುದು ಕೂಡಾ. ಎಲ್ಲ ಪಾಠಗಳೂ ಮರೆತು

ಮತ್ತೆ ಚಿತ್ತವಿಕಾರ. ನಾಗರೀಕತೆಯ ಹೃದ-
ಯದ ಮೇಲೆ ಎಷ್ಟೊಂದು ಗಾಯಗಳ ಗುರುತು !

೭

ಇದಿಷ್ಟು ಇದುವರೆಗಿನ ಜಿ.ಎಸ್. ಶಿವರುದ್ರಪ್ಪನವರ ಕಾವ್ಯದಲ್ಲಿನ ಸಾಮಾಜಿಕ ದರ್ಶನ. ಬಹುಶಃ ಇವರಷ್ಟು ಸಾಮಾಜಿಕ ಕವನಗಳನ್ನು ಬರೆದ ಹಿರಿಯಕವಿ ಇನ್ನೊಬ್ಬರಿಲ್ಲ. ಅಡಿಗರ ಸಾಮಾಜಿಕತೆ ಸಾರತಃ ರಾಜಕೀಯ ಸ್ವರೂಪದ್ದು. ಆದರೆ ಜಿ.ಎಸ್.ಎಸ್. ಸಾರ್ವತ್ರಿಕ ನೆಲೆಗಳಲ್ಲಿಯೇ ಸಮಾಜದ ಏರುಪೇರುಗಳಿಗೆ ಪ್ರತಿಕ್ರಿಯಿಸಿದವರು. ಇಂತಹ ಪ್ರತಿಕ್ರಿಯೆಗಳ ಪ್ರಕ್ರಿಯೆಯ ಮೂಲಕವೇ ತಮ್ಮ ಕಾವ್ಯದ ಕಸಬುದಾರಿಕೆಯನ್ನು ಹದಗೊಳಿಸಿಕೊಂಡು ಹೊಸ ಕಾಣ್ಕೆಗಳಿಗೆ ತಮ್ಮ ಕಾವ್ಯದ ಕಣ್ಣುಗಳನ್ನು ತೆರೆದುಕೊಂಡವರು.

ಈ ಅರ್ಥದಲ್ಲಿ ಜಿ.ಎಸ್.ಎಸ್. ನಮ್ಮ ಓರ್ವ ಬಹುಮುಖ್ಯ ಸಾಮಾಜಿಕ ಕವಿ. ಈ ಮಾತನ್ನು ಇಲ್ಲಿ ಎತ್ತಿ ಹೇಳುತ್ತಿರುವುದೇಕೆಂದರೆ, ಹೀಗೆ ಸಾಮಾಜಿಕ ಕವಿಗಳಾದ ಅನೇಕರು ಕ್ರಮೇಣ ಕವಿತ್ವವನ್ನೇ ಕಳೆದುಕೊಂಡು ಬರೀ ಸಾಮಾಜಿಕರಾದದ್ದೇ ಹೆಚ್ಚು. ಈ ದೃಷ್ಟಿಯಿಂದ ಇದು ಅಪಾಯದ ದಾರಿ. ಆದರೆ ಈ ಕವಿ, ಕವಿತೆ ಮತ್ತು ಸಾಮಾಜಿಕತೆಗಳ ದ್ವಂದ್ವವನ್ನು ಕಾವ್ಯಕಸಬುದಾರಿಕೆಯಲ್ಲಿ (ಎಲ್ಲ ಅತಿಗಳನ್ನೂ ಐಕ್ಯಗೊಳಿಸುವ) ಮಧ್ಯಮ ಮಾರ್ಗವನ್ನು ಅನುಸರಿಸುವ ಮೂಲಕ ಪರಿಹರಿಸಿಕೊಂಡಿದ್ದಾರೆ. ಈ ಕಾರಣದಿಂದಲೇ ಇವರ ಕಾವ್ಯ ಸರಳ, ಪಾರದರ್ಶಕ ಹಾಗೂ ಉತ್ತರಣೀಯವೂ (transcedent) ಆಗಿದೆ. ಈ ಅರ್ಥದಲ್ಲಿ ಜಿ.ಎಸ್.ಎಸ್. ಅವರನ್ನು ಸಮನ್ವಯ ಕವಿ ಎನ್ನುವುದಕ್ಕಿಂತ ಮಧ್ಯಮಮಾರ್ಗದ ಕವಿ ಎಂದು ಗುರುತಿಸುವುದು ಹೆಚ್ಚು ಉಚಿತ ಅನ್ನಿಸುತ್ತದೆ. ಎಷ್ಟಾದರೂ ಈ ಮಧ್ಯಮ ಮಾರ್ಗದ ಗುರು ಬುದ್ಧ ತಾನೇ? ಹಾಗಲ್ಲದೆ 'ಅಸ್ತಮಾನ'ದ ಕೃಷ್ಣ ಹೀಗೆ ಕಂಡಾನೆ?

ನಿಶ್ಶಬ್ದ ಕಾನನದೊಳಗೆ ಹಸಿರ ಹೆಡೆ ಬಿಡಿಸಿದ –
ಶ್ವತ್ಥ ವೃಕ್ಷದ ಕೆಳಗೆ ಮಂದಹಾಸದ
ಮೂರ್ತಿ; ಒಂದು ಕಾಲನ್ನಿನ್ನೊಂದು ಕಾಲಿನ ಮೇಲೆ
ನವಿಲುಗರಿಯಂತಿರಿಸಿ ಮಲಗಿದ ಮೌನ

❑

(೧೯೯೭ರ ಫೆಬ್ರವರಿಯಲ್ಲಿ ಶಿವಮೊಗ್ಗ ಕರ್ನಾಟಕ ಸಂಘವು ಜಿ.ಎಸ್. ಶಿವರುದ್ರಪ್ಪನವರಿಗೆ ಗೌರವ ಫೆಲೋಶಿಪ್ ನೀಡಿ ಗೌರವಿಸಿದ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧ)

‘ಕುಸುಮಬಾಲೆ’ಯ ಹುಟ್ಟನ್ನರಸುತ್ತಾ...

ಸಾಹಿತ್ಯ ಆಂದೋಲನಗಳು ಸಕ್ರಿಯವಾಗಿದ್ದಾಗ ಸಾಹಿತ್ಯ ವಿಮರ್ಶೆ ಸುಲಭವೆನಿಸುತ್ತದೆ. ಆ ಕಾಲದ ಆಂದೋಲನ ಒಪ್ಪಿಕೊಂಡಿರುವ ಸಾಹಿತ್ಯ ಮೌಲ್ಯಗಳ ಒಂದು ಚೌಕಟ್ಟು ನಿಮಗೆ ಲಭ್ಯವಿರುತ್ತದೆ. ಆ ಚೌಕಟ್ಟಿನಲ್ಲಿ ನೀವು ಮಾಡಬಹುದಾದ ಸ್ಥೂಲ ಟೀಕೆ, ಟಿಪ್ಪಣಿಗಳು ಆಂದೋಲನದ ಕಾವಿನಿಂದ ನಿರ್ದಿಷ್ಟ ಅರ್ಥಗಳ ಭ್ರಮೆಯನ್ನಾದರೂ ಹುಟ್ಟಿಸಬಲ್ಲವು. ಯಾಕೆಂದರೆ ಆಗ ನೀವು ಆಡುವ ಮಾತುಗಳಲ್ಲಿ ಅರ್ಧ ನಂಬಿಕೆ ಇದ್ದರೂ ಸಾಕು, ಆಂದೋಲನದ ಅಬ್ಬರ ಅದನ್ನು ಪೂರ್ಣಗೊಳಿಸುತ್ತದೆ. ಆಂದೋಲನಗಳ ಕಾಲದಲ್ಲಿ ನಂಬಿಕೆ ಆಳವಾಗಿ, ಸತ್ಯವಾಗಿ ಮಾರ್ಪಡುವ ವ್ಯವಧಾನವೇ ಇರುವುದಿಲ್ಲ. ಅನ್ನಿಸಿಕೆಗಳೇ ಆಂದೋಲನ ದಯಪಾಲಿಸುವ ಹುಚ್ಚು ಧೈರ್ಯದಿಂದಾಗಿ ಸತ್ಯಗಳಂತೆ ಮೆರೆಯುತ್ತವೆ. ಉದಾಹರಣೆಗೆ, ಮಾಸ್ತಿ ಕತೆಗಳೆಂದರೆ ಯಾವುದೇ ಬುಟ್ಟಿಯಲ್ಲಿ ಹಾಕಿಕೊಂಡು ಹೋಗಬಹುದಾದ ಸೌತೆಕಾಯಿಯ ತರಹ ಎಂಬ ಮಾತು ನವ್ಯ ಆಂದೋಲನದ ಕಾವಿನಲ್ಲೂ, ಅಡಿಗರ ಕವಿತೆ ಜೀವ ವಿರೋಧಿಯಾದದ್ದು ಎಂಬ ಮಾತು ಬಂಡಾಯ ಸಾಹಿತ್ಯ ಆಂದೋಲನದ ಕಾವಿನಲ್ಲೂ ಆಯಾ ಆಂದೋಲನ ಗಳಲ್ಲಿದ್ದ ಬಹಳಷ್ಟು ಜನರಿಗೆ ಬಹು ಗಂಭೀರವಾದ ಸಾಹಿತ್ಯ ವಿಮರ್ಶೆಯ ಮಾತುಗಳೆನಿಸಿದ್ದವು.

ಇವೊತ್ತು ಸಾಹಿತ್ಯ ವಿಮರ್ಶೆಗೆ ಆ ಅನುಕೂಲವಿಲ್ಲ; ಆ ಅಪಾಯವೂ ಇಲ್ಲ. ಆಂದೋಲನಗಳಿಲ್ಲದ ಕಾಲವಿದು. ಆದುದರಿಂದ ವಿಮರ್ಶಕ ತನ್ನ ನಂಬಿಕೆಯನ್ನೇ ನಂಬಿ ವಿಮರ್ಶೆಯ ಮಾತುಗಳನ್ನಾಡಬೇಕಾಗುತ್ತದೆ. ಕಳೆದ ಮೂವತ್ತು ವರ್ಷಗಳ ಕಾಲ ಆಂದೋಲನ ಗಳಿಗೆ ಒಗ್ಗಿಹೋದ ಕನ್ನಡ ವಿಮರ್ಶೆಯ ಮನಸ್ಸಿಗೆ ಇದು ಕಷ್ಟಕಾಲ. ವಿಮರ್ಶಕನ ನಿಜವಾದ ಸತ್ವಪರೀಕ್ಷೆಯ ಕಾಲ. ವಿಮರ್ಶೆಗೆ ಆಂದೋಲನಗಳು ಒದಗಿಸುತ್ತಿದ್ದ ಸಾಪೇಕ್ಷವಾದದ್ದಾದರೂ ಒಂದು ಚೌಕಟ್ಟಿಗೆ ಬದಲಾಗಿ ಇಂದು ಆತ ತನ್ನದೇ ಆದ - ಅಂದರೆ, ಸಾಹಿತ್ಯವೆಂದರೆ ಮೂಲತಃ ಏನು ಎಂಬ ತನ್ನ ಗ್ರಹಿಕೆಯನ್ನೇ ಆಧರಿಸಿದ - ಒಂದು ಚೌಕಟ್ಟಿನಲ್ಲಿ ಸಾಹಿತ್ಯ ವಿಮರ್ಶೆ ಮಾಡಬೇಕಾಗಿದೆ. ಇದಕ್ಕೆ ಆತ ಪರಂಪರೆಯ ಹಾಗೂ ತನ್ನ ಹಿಂದಿನ ಆಂದೋಲನಗಳು ಕಲಿಸಿದ ಪಾಠಗಳ ನೆರವು ಪಡೆಯಲೂಬಹುದು. ಆದರೆ ವಸ್ತುಶಃ ತನ್ನದೇ ಆದ ಸತ್ಯದ ಒಂದಂಶವನ್ನು ಸಾಧಿಸಿಕೊಂಡೇ, ಅದರಿಂದ ವಿಮರ್ಶೆಯ ಮಾತುಗಳನ್ನು ಹೊರಡಿಸಬೇಕಾಗಿದೆ.

ಇಂದಿನ ಸಾಹಿತ್ಯ ವಿಮರ್ಶೆ ಕುರಿತ ಈ ಮಾತುಗಳನ್ನೇ ಇಂದಿನ ಕೃತಿ ನಿರ್ಮಾಣದ ಕೆಲಸಕ್ಕೂ ಅನ್ವಯಿಸಬಹುದು. ಕೆಲವರಿಗೆ, ನಾನು ತಿರುಗು - ಮುರುಗಾಗಿ ಮಾತಾಡುತ್ತಿದ್ದೇನೆ

ಎನ್ನಿಸಬಹುದು. ಕೃತಿ ಮತ್ತು ಕೃತಿವಿಮರ್ಶೆಗಳಲ್ಲಿ ಮೊದಲು - ನಂತರಗಳ ಕ್ರಮ ಇದೆಯೆಂದು ನಾನು ಭಾವಿಸುವುದಿಲ್ಲ. ಜೀವಂತ ಹಾಗೂ ನಿರಂತರವಾದ ಒಂದು ಸಾಹಿತ್ಯ ಪರಂಪರೆಯಲ್ಲಿ ಕೃತಿನಿರ್ಮಾಣ ಹಾಗೂ ವಿಮರ್ಶೆ ಬೇರೆಯಾಗಿರಲಾರದು. ಕೃತಿಕಾರನೇ ಆನುಷಂಗಿಕವಾಗಿ ವಿಮರ್ಶಕನೂ ಆಗಿರುವನಾದ್ದರಿಂದ ಕೃತಿನಿರ್ಮಾಣ ಹಾಗೂ ವಿಮರ್ಶೆ ಸದಾ ಪರಸ್ಪರ ಮುಖಾಮುಖಿಯಾದ ಕ್ರಿಯೆಯೇ ಆಗಿರುತ್ತದೆ. ಹೀಗಾಗಿ ಇಂದಿನ ಕೃತಿಕಾರ ಕೂಡಾ ಚೌಕಟ್ಟಿಗೆ, ಬೆಂಬಲಕ್ಕೆ ಇಲ್ಲದ ಆಂದೋಲನಗಳ ಹೊರತಾಗಿಯೇ, ಇಡಿಯಾಗಿ ಸ್ವತಃ ತನ್ನ ಸೃಜನಶಕ್ತಿಯನ್ನೇ ನಂಬಿಕೊಂಡು ಕೃತಿರಚನೆ ಮಾಡಬೇಕಾಗಿದೆ. ಇದಕ್ಕಾಗಿ ಆತ ಇಡಿಯಾಗಿ ತನ್ನ ಬದುಕಿನ ಅನುಭವ ಹಾಗೂ ಗ್ರಹಿಕೆಗಳನ್ನೇ ನಂಬಬೇಕು ಮತ್ತು ಈ ನಂಬಿಕೆ ತನ್ನ ಅಹಂಕಾರದ ಎಲ್ಲ ಪರಿವೇಷಗಳನ್ನೂ ಮೀರಿ ನಿಂತ ಸತ್ಯವೆನ್ನಿಸುವಷ್ಟರ ಮಟ್ಟಿಗೆ ಆಳವಾಗಬೇಕು. ಇದಕ್ಕಾಗಿ ಆತ ಆದಷ್ಟೂ ಹೆಚ್ಚು ಇತರರ - ತನ್ನ ಸುತ್ತಮುತ್ತಲಿನವರ - ಬದುಕನ್ನೂ, ಅರಿತು ನೋಡುವ ಪ್ರೀತಿಯನ್ನೂ ವ್ಯವಧಾನವನ್ನೂ ಪಡೆದಿರಬೇಕು. ಹೀಗೆ ಪ್ರೀತಿ, ವ್ಯವಧಾನಗಳ ಮೂಲಕ ದಕ್ಕುವ, ಅದಷ್ಟೂ ಹೆಚ್ಚು ಜನರ ಬದುಕಿನ ಕಾವಿನಲ್ಲಿ ಮಾಗಿದ, ಸ್ವಂತ ಬದುಕನ್ನೇ ಇಂದಿನ ಕೃತಿ ನೆಚ್ಚಬೇಕಾಗಿದೆ. ಇದು ತನ್ನನ್ನು ತಾನು ಪರರಲ್ಲಿ ಹುಡುಕಿಕೊಳ್ಳುವ ಕಲೆಗಾರಿಕೆ. ಯಾವುದನ್ನು ನಾವು ಎಲ್ಲ ಧರ್ಮಗಳ ಮೂಲಕೇಂದ್ರವೆನ್ನುತ್ತೇವೋ ಅಲ್ಲಿ ತನ್ನ ಬೇರುಗಳನ್ನು ಪಡೆದುಕೊಂಡಿರುವ ಈ ಕಲೆಗಾರಿಕೆ ತನ್ನನ್ನು ತನ್ನೊಳಗೇ ಹುಡುಕಿಕೊಳ್ಳುವ ನವ್ಯ ಅಥವಾ ತನ್ನನ್ನು ಪರರಲ್ಲಿ ಕಳೆದುಕೊಳ್ಳುವ ಬಂಡಾಯದ ಒಲವುಗಳಿಗಿಂತ ಭಿನ್ನವಾದದ್ದು.

ಇತ್ತೀಚಿನ ಕನ್ನಡ ಸಾಹಿತ್ಯದ ಒಲವುಗಳ ಚಾಲಕ ಶಕ್ತಿಯಾಗಿ ಗುರುತಿಸಬಹುದಾದದ್ದು ಲೋಕವ್ಯವಹಾರವನ್ನು ಮೀರಿ ನಿಂತು ಅದನ್ನು ಗಮನಿಸುವ ನಿರಹಂಕಾರಿಯಾದ ಈ ಲೋಕೋತ್ತರ ತುಡಿತವನ್ನೇ. ನಿಜ, ಎಲ್ಲ ಕಾಲದ ಶ್ರೇಷ್ಠ ಸಾಹಿತ್ಯವೂ ಒಂದಲ್ಲ ಒಂದು ರೂಪದಲ್ಲಿ ಈ ರೀತಿಯ ತುಡಿತವನ್ನು ಹೊಂದಿಯೇ ಇರುತ್ತದೆ. ಏಕೆಂದರೆ ಸಾಹಿತ್ಯದ ಮೂಲಶಕ್ತಿ ಸ್ರವಿಸುವುದೇ ಇಂತಹ ತುಡಿತಗಳಿಂದ. ಆದರೆ, ಕಳೆದ ಮೂವತ್ತು - ನಲವತ್ತು ವರ್ಷಗಳ ಕಾಲ ಕನ್ನಡ ಸಾಹಿತ್ಯದಲ್ಲಿ, ಬಹುಶಃ ಈ ತುಡಿತವನ್ನು ವಾಚ್ಯ ಮಾಡಿ ಸ್ಥೂಲಗೊಳಿಸಿದ ನವೋದಯದ ಕೊನೆಗಾಲದ ಅತಿಗಳಿಗೆ ಪ್ರತಿಕ್ರಿಯೆಯಾಗಿ, ಕಂತಿಹೋಗಿದ್ದ ಈ ತುಡಿತ ಕ್ರಮೇಣ ಈಗ ಹೊಸ ರೂಪ - ರಚನೆ -ಲಯಗಳೊಂದಿಗೆ ವ್ಯಕ್ತವಾಗತೊಡಗಿದೆ.

ತನ್ನ ಮತ್ತು ಇತರರ ಲೋಪದೋಷಗಳನ್ನು ಆ ಲೋಪದೋಷಗಳ ನೆಲೆಗಟ್ಟಿನಲ್ಲಷ್ಟೇ ನೋಡದೆ, ಅವು ಜೀವದ ಹುಟ್ಟು - ಸಾವುಗಳಷ್ಟೇ ಸಹಜವೆಂದು ಗ್ರಹಿಸಿ, ಅವುಗಳೊಂದಿಗೆ ಹೊಡೆದಾಡುವುದರಿಂದ ಹುಟ್ಟುವ 'ರೂಪ'ಗಳಿಗಿಂತ ಅವುಗಳನ್ನು ಮೀರುವ ಪ್ರಯತ್ನದಲ್ಲಿ ಹುಟ್ಟುವ 'ರೂಪ'ಗಳು ಸುಂದರವೂ, ಸತ್ಯವೂ, ಸಾಂತ್ವನಪೂರ್ಣವೂ ಆಗಿರುತ್ತವೆಂಬ ಅರಿವು ಕನ್ನಡದ ಇತ್ತೀಚಿನ ಅನೇಕ ಪ್ರಮುಖ ಕೃತಿಗಳ ರಚನೆಯ ಹಿಂದೆ ಕಾಣುತ್ತದೆ. ಅಂತಿಮವಾಗಿ, ಸಿನಿಕತೆಗೆ ಎಳೆದೊಯ್ಯುವ ನವ್ಯದ ವಿಷಾದದ ಒಳನೋಟ ಹಾಗೂ ವ್ಯಗ್ರತೆಗೆ ಎಳೆದೊಯ್ಯುವ ಬಂಡಾಯದ ಕ್ರೋಧದ ಹೊರನೋಟಗಳ ಆಯಾಸದಿಂದ ಹುಟ್ಟಿರಬಹುದಾದ ಈ ಹೊಸ

ನೋಟವು, ಕ್ಷಣದಲ್ಲಿ ಅನಂತದ ವಿವರಗಳನ್ನು ಕಾಣುವ ಮತ್ತು ಅನಂತದಲ್ಲಿ ಕ್ಷಣದ ತೀವ್ರತೆಯನ್ನು ಗಮನಿಸುವ - ಬದುಕಿನ ಮಧ್ಯೆಯೇ ಕಣ್ಣುಮುಚ್ಚಿ ಕೂತ ಗಾಢ ಧ್ಯಾನದಿಂದ ಮಾತ್ರ ದಕ್ಕುವ - ವ್ಯವಧಾನ ಹಾಗೂ ಪ್ರೀತಿಗಳನ್ನು ತನ್ನ ಎರಡು ಕಣ್ಣುಗಳನ್ನಾಗಿ ಪಡೆದುಕೊಂಡಿರುವಂತೆ ತೋರುತ್ತಿದೆ. ಇದಕ್ಕೆ ತಕ್ಕುದಾಗಿಯೇ ಭಾಷೆ ನವ್ಯದ ಬಿಗಿಗಂಟುಗಳನ್ನೂ ಬಂಡಾಯದ ಏದುಸಿರುಗಳನ್ನೂ ಕಳೆದುಕೊಂಡು ಆರೋಗ್ಯವಂತ ಮನುಷ್ಯನ ಉಸಿರಾಟದ ಲಯಗಳಿಗನುಸಾರವಾಗಿ ಸಹಜ - ಸರಳ ನಡಿಗೆಯನ್ನು ಸಾಧಿಸಿಕೊಳ್ಳುತ್ತಿದೆ.

ಇದೆಲ್ಲದಕ್ಕೆ ನಾವು ಇಂದು ಅನೇಕ ಉದಾಹರಣೆಗಳನ್ನು ಕೊಡಬಹುದು. ಕಾವ್ಯವನ್ನೇ ತೆಗೆದುಕೊಂಡರೆ, ಮುಖ್ಯವಾಗಿ ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ' ಹಾಗೂ 'ಮೌನದ ಸುವರ್ಣ ಪುತ್ಥಳಿ', ಕೆ.ವಿ. ತಿರುಮಲೇಶರ 'ಅವಧ' ಹಾಗೂ 'ಪಾಪಿಯೂ', ಹೆಚ್.ಎಸ್. ಶಿವಪ್ರಕಾಶರ 'ಅಣುಕ್ಷಣ ಚರಿತೆ', ಹೆಚ್. ಎಸ್. ವೆಂಕಟೇಶಮೂರ್ತಿಯವರ 'ಅಗ್ನಿಸ್ತಂಭ' ಹಾಗೂ ಸುಬ್ರಾಯ ಚೊಕ್ಕಾಡಿಯವರ 'ಮೊನ್ನೆ ಸಿಕ್ಕವರು' ಕವನ ಸಂಕಲನಗಳ ಹಲವಾರು ಪದ್ಯಗಳನ್ನು ಪ್ರಾತಿನಿಧಿಕವಾಗಿ ಉದಾಹರಿಸಬಹುದು. ಈ ಎಲ್ಲ ಪದ್ಯಗಳಲ್ಲೂ ಹಕ್ಕಿಯೋ, ಮರವೋ, ಹೂವೋ, ಮನುಷ್ಯನೋ, ಪ್ರಾಣಿಯೋ ತನ್ನ ಇನ್ನೊಂದು ಭಾಗವಾಗಿ ಕಾಣುವ, ಕಾಡುವ ಹಾಗೂ ಕರಗುವ ವಿಸ್ಮಯವನ್ನು - ಪ್ರೀತಿಯ ತೀವ್ರತೆಯನ್ನು, ವ್ಯವಧಾನದ ವಿವರಗಳಿಂದ 'temper' ಮಾಡಿ - ಹೇಳುವ ಹೊಸ ಹದದ ಕಲೆಗಾರಿಕೆಯನ್ನು ನೋಡಬಹುದು:

ಚಿಂತಾಮಣಿಯ ಸಭಾಂಗಣದಲ್ಲಿ ಭಾಷಣ ಮಗ್ನ -
ಮನಸ್ಸು ಮನಸ್ಸಿನ ಶೇಕಡಾ ತೊಂಬತ್ತು ಪಾಲು; ಕಣ್ಣು
ಹಾಯುತ್ತಿತ್ತು ಮುಖದಿಂದ ಮುಖಕ್ಕೆ, ಹುಡುಕುತ್ತಿತ್ತು
ರೇಪುಳ್ಳ ನಡುಗಡ್ಡೆಯೊಂದ ತಂಗಲು ನಿಮಿಷ; ತಂಗಿ
ಅಂತರಂಗದ ಅನಂಗಭಂಗಿಗೆ ತಕ್ಕ ಭಂಗಿ. ದೃಷ್ಟಿಗೆ ದೃಷ್ಟಿ
ಬಡಿತಕ್ಕೆ ತಕ್ಕ ಪ್ರತಿಬಡಿತ ಕೊಡುವಿನ್ನೊಂದು
ಸಮ ಹೃದಯದ ನಿಗೂಢ ಸಹಜ ಕಂಪನದ ರೋಮಾಂಚ,
ಪ್ರತಿಫಲಿಸಬಲ್ಲೊಂದು ಮುಖವ. ಹಠಾತ್ತಾಗಿ
ಮೂಡಿತ್ತಲ್ಲ, ಅಗೋ ಸಭಾಮಧ್ಯದಲ್ಲಿ ಪರಮಾಪ್ತ ಮುಖ
ಮಾತಿನಾಚೆಯ ಸಹಸ್ಪಂದಿ; ಮಾತಿಲ್ಲದೆಯೆ
ಇಂಗಿತವನರಿತ ಸಹಭಾಗಿನಿಯ ಸಹಜಮುದ್ರೆ
ಯಾವ ಮುಖ ಅದು? ಎಲ್ಲಿ ಯಾವಾಗ ಯಾವ ಭವ-
ದಲ್ಲಿ, ಲೋಕದಲ್ಲಿ, ಸಂಭಾವ್ಯತೆಯ ಯಾವ ಆಕಸ್ಮಿಕದ
ಆತ್ಮೀಯತೆಯ ಅಪ್ಯಾಯಮಾನ ಕ್ಷಣದಲ್ಲಿ
ಕಂಡದ್ದು ಅದು?

... ಹೀಗೆ ಸಾಗುವ ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ' ಪದ್ಯ, ಕಿರಿಯ ಕವಿಗಳ ಅನುಭೂತಿಯ ಆವರಣದಲ್ಲಿ ಅನುರಣಿಸುವುದು ಹೀಗೆ :

ಎಲ್ಲಿಂದ ಬಂದಿತೋ ಅಲ್ಲಿಗೇ ಈ ನೋಟ
ಕಳೆದುಕೊಂಡಿದ್ದನ್ನು ಮತ್ತೆ ಪಡೆಯುವ ಹೂಟ
ಬದುಕಿನುದ್ದಕ್ಕೂ ಗಳಿಸಿದ್ದನ್ನು, ಮಣ್ಣಿಂದ
ಹೀರಿದ್ದನ್ನು, ಸಾಧ್ಯವಿಶಾಲ ಚಾಚುಗಳಿಂದ
ತನ್ನ ತೆಕ್ಕೆಗೆ ಒಗ್ಗಿದ್ದನ್ನು, ಪಂಚಭೂತಗಳೆದುರು
ತ್ರಿಕಾಲಗಳ ಬೆಸೆದ ಕಾಲಕ್ಕೆ ಮುಖಾಮುಖಿಯಾಗಿ
ಒಗ್ಗೂಡಿಸುವ ಯತ್ನದಲಿ
ಕಾಣ್ಕೆ - ಕಣ್ಕಟ್ಟುಗಳ ನಡುವೆ ತೆಳುಗೆರೆ ಹರಿದು
ಆಚೆಗೆ ಚಾಚಿಕೊಳ್ಳುವ ಸಿದ್ಧಿಯಾಕಾಂಕ್ಷೆಯಲಿ
ಎದುರು ನಿಂತಿದೆ ಇಲ್ಲಿ ತ್ರಿಭಂಗಿ ನಿಲುವಲ್ಲಿ ಧ್ಯಾನಸ್ಥ
ಆಕಾಶಕ್ಕೆ ಲಗ್ಗೆಯಿಟ್ಟಂಥ ಪಾರಿಜಾತ

- ಇದು ಸುಬ್ರಾಯ ಚೊಕ್ಕಾಡಿಯವರ 'ಧ್ಯಾನಸ್ಥ' ಪದ್ಯದ ಕೊನೆಯ ಸಾಲುಗಳು. ಹೀಗೇ ನಾವು ಜಿ.ಎಸ್. ಶಿವರುದ್ರಪ್ಪನವರ 'ಕಂಪಿನ ಕರೆ', ತಿರುಮಲೇಶರ 'ಚಖ್ಖುಪಾಲ ಮಹಾತೇರ', ಶಿವಪ್ರಕಾಶರ 'ನಾಗಾರ್ಜುನ', 'ಶಂಸ್ ತಬ್ರೀಜ್', ವೆಂಕಟೇಶಮೂರ್ತಿಯವರ 'ಕಾರಂಜಕೆ ಕೊಕ್ಕರೆ' ಮುಂತಾದ ಕನ್ನಡದ ಇತ್ತೀಚಿನ ಬಹುಮುಖ್ಯ ಕವನಗಳಿಂದ ಸಾಲುಗಳನ್ನು ಉಲ್ಲೇಖಿಸುತ್ತಾ ಹೋಗಬಹುದು - ಈ ಲೋಕೋತ್ತರ ತುಡಿತ ಹೇಗೆ ಇತ್ತೀಚಿನ ಕನ್ನಡ ಕಾವ್ಯದ ಮೂಲಸೆಲೆಯಾಗಿ ಕಾಣಿಸಿಕೊಳ್ಳತೊಡಗಿದೆ ಎಂಬುದರ ಉದಾಹರಣೆಗಳಾಗಿ. ಅಷ್ಟೇ ಅಲ್ಲ, ಅನುಭಾವದ ಕಡೆಗೆ ಎನ್ನಬಹುದಾದ ಈ ತುಡಿತ ಸ್ವಲ್ಪ ಕಾಲ ಬಂಡಾಯದ ಬಣ್ಣ ಬಳಿದುಕೊಂಡು ಕುಣಿದ ಸಿದ್ಧಲಿಂಗಯ್ಯ, ಚಂದ್ರಶೇಖರ ತಾಳ್ಯ, ಶಂಕರ ಕಟಗಿ ಹಾಗೂ ಚೆನ್ನಣ್ಣ ವಾಲೀಕಾರರಂತಹ ಕವಿಗಳಲ್ಲೂ ಕಾಣತೊಡಗಿರುವುದು ಮತ್ತು ಅತಿ ಇತ್ತೀಚಿನ ಕವಿಗಳೆಂದು ಗುರುತಿಸಬಹುದಾದ ಕೆ.ಬಿ. ಸಿದ್ಧಯ್ಯ, ಎಸ್. ಮಂಜುನಾಥ್, ನಜೀರ ಚಂದಾವರ, ಸವಿತಾ ನಾಗಭೂಷಣ, ವೈದೇಹಿ ಮುಂತಾದವರಲ್ಲಿ ಪ್ರಧಾನ ಪ್ರೇರಣೆಯಾಗಿ ಹೊರ ಹೊಮ್ಮುತ್ತಿರುವುದನ್ನೂ ನಾವು ಗಮನಿಸಬಹುದು.

ಗದ್ಯಕ್ಕೆ ಬಂದರೆ ಇದೇ ತೀವ್ರತೆ ಹಾಗೂ ವ್ಯವಧಾನಗಳನ್ನು ತೇಜಸ್ವಿ, ಜಯಂತ ಕಾಯ್ಕಿಣಿ, ರಾಘವೇಂದ್ರ ಪಾಟೀಲ ಹಾಗೂ ಆಶ್ಚರ್ಯವೆಂಬಂತೆ ಬೊಳುವಾರರ ಇತ್ತೀಚಿನ ಕಥೆಗಳಲ್ಲಿ ಮತ್ತು ಚಿತ್ತಾಲರ 'ಪುರುಷೋತ್ತಮ' ಹಾಗೂ ಮಹಾದೇವ ಅವರ 'ಕುಸುಮಬಾಲೆ'ಯಲ್ಲಿ ನೋಡಬಹುದು. ತೇಜಸ್ವಿ, ಕಾರಂತರಂತೆ ವಿಚಾರವಾದೀ ನಿಲುವುಗಳ ಮೂಲಕವೇ ಆತ್ಯಂತಿಕವೆಂದು ಕರೆಯಲಾಗುವ ಸತ್ಯಗಳನ್ನು ಹಿಡಿಯಲೆಣಿಸುವ ಕಲೆಗಾರ. ಅವರ 'ಕರ್ವಾಲೋ' ಹಾಗೂ 'ಚಿದಂಬರ ರಹಸ್ಯ'ಗಳಲ್ಲಿ ವಿಜ್ಞಾನ ಮತ್ತು ಧರ್ಮ ತಮ್ಮ ವಿವಿಧ ರೂಪಗಳಲ್ಲಿ ಮುಖಾಮುಖಿಯಾಗಿ ನಿಂತು ಕಾದಂಬರಿಯ 'ಕ್ರಿಯೆ'ಗಳಲ್ಲಿ ಬೆರೆತು ಉಂಟಾಗುವ ತಾರ್ಕಿಕ ರೂಪಗಳನ್ನು ನೋಡುತ್ತೇವೆ. ಬಹುಶಃ ಕಾದಂಬರಿಗಳ ಸ್ವರೂಪವೇ ಆಂತರಿಕವಾಗಿ

ತಾರ್ಕಿಕವಾದದ್ದು. ಆದರೆ ಸಣ್ಣಕತೆಗಳು ಹಾಗಲ್ಲ. ಉದಾಹರಣೆಗೆ ಇವರ 'ಮಾಯಾಮೃಗ', 'ಕೃಷ್ಣೇಗೌಡನ ಆನೆ' ಹಾಗೂ 'ನಾನು ಸೈಕಲ್ ಕಲಿತಿದ್ದು' ಕಥೆಗಳು ವಾಸ್ತವವನ್ನು ಹೇಳುವ ಬೆರಗಿನಲ್ಲೇ ಆತ್ಯಂತಿಕ ಸತ್ಯದ ಬೆಡಗನ್ನು ಸಾಧಿಸಿಬಿಡುತ್ತವೆ. ಈ ಕಥೆಗಳಲ್ಲಿ ಒಂದು ನಾಯಿ, ಒಂದು ಸಾಕು ಆನೆ ಹಾಗೂ ಒಂದು ಸೈಕಲ್, ಲೋಕ - ಲೋಕೋತ್ತರಗಳ ನಡುವಣ ಪಾರದರ್ಶಕ ಸೇತುವೆಗಳಂತೆ ಮೂಡಿ ನಿಲ್ಲುವುದು ತರ್ಕವನ್ನು ಮೀರಿದ ಇಂತಹ ತುಡಿತಗಳ ಮೂಲಕವೇ. ಕಾಯ್ಕಿಣಿಯವರ 'ತನ್ಮಯಿಯ ಸೂಟಿ', 'ದಗಡೂಪರಬ...' ಹಾಗೂ 'ಬಿನ್ನಿಕೃಷ್ಣನ್...' ರಾಘವೇಂದ್ರ ಪಾಟೀಲರ 'ಕರಿ ಟೊಪಗಿ..' ಹಾಗೂ ಬೊಳುವಾರರ 'ಇಬಾದತ್' ಇಂತಹುದೇ ಧ್ವನಿಗಳನ್ನು ಮಂದ್ರಸ್ವರದಲ್ಲಿ ಹೊರಡಿಸುವ ಪ್ರಯತ್ನಗಳು.

ಯಶವಂತ ಚಿತ್ತಾಲರ 'ಪುರುಷೋತ್ತಮ', ಕಾದಂಬರಿ ರೂಪದಲ್ಲೇ ಆನುಷಂಗಿಕವಾಗಿರುವ ತಾರ್ಕಿಕತೆಯನ್ನು ಪ್ರತಿತಾರ್ಕಿಕತೆಯ ಸಹಾಯದಿಂದ ಒಡೆಯುವ ಮೂಲಕ, ಆಧುನಿಕ ಮನುಷ್ಯ 'ತ್ರಿಭಂಗಿ ನಿಲುವಲ್ಲಿ ಧ್ಯಾನಸ್ಥ - ಆಕಾಶಕ್ಕೆ ಲಗ್ಗೆಯಿಟ್ಟಂಥ ಪಾರಿಜಾತ'ವಾಗಲು ನಡೆಸುವ ಹೋರಾಟದ ವಿವರ ಹಾಗೂ ತೀವ್ರತೆಗಳೆರಡನ್ನೂ ಒಟ್ಟಿಗೆ ಬೆಸೆದುಕೊಂಡು, ಮೂಡಿನಿಂತ ಕೃತಿ. ಬದ್ಧನಾದ ಹಾಗೂ ಅದರಿಂದಾಗಿ ಅಶಾಂತನಾದ ಆಧುನಿಕ ಮನುಷ್ಯ ಬುದ್ಧನಾಗಿ ಶಾಂತವಾಗುವ ಮಹಾಹೋರಾಟದ ಹಾಗೂ ಮಹಾ ಪ್ರಯಾಣದ ಈ ಕಥೆ, ಈಚಿನ ಕನ್ನಡ ಸಾಹಿತ್ಯದ ಮಹಾ ಹೋರಾಟದ ಹಾಗೂ ಮಹಾಪ್ರಯಾಣದ ಕಥೆಯಂತೆಯೂ ಕಾಣುತ್ತದೆ! ಒಂದು ಚಲನಶೀಲ ಸಂಸ್ಕೃತಿಯ - ಇಲ್ಲಿ ಕೈಗಾರಿಕಾ ಹಾಗೂ ನಗರೀಕರಣ ಸಂಸ್ಕೃತಿ- ಇಡೀ ಬೀಸನ್ನು ಮನುಷ್ಯಜೀವ ತನ್ನ ಪ್ರಜ್ಞೆಯ ಅತ್ಯಂತ ಎತ್ತರಗಳಲ್ಲಿ ಕಂಡುಕೊಳ್ಳಬಹುದಾದ ಅತ್ಯಂತ ನಿರ್ಗುಣವಾದ ಮೌಲ್ಯಗಳಲ್ಲಿ ಲೀನಗೊಳಿಸಿಬಿಡುವ ಕಲಾವಂತಿಕೆ ಆ ಎತ್ತರಗಳು ಅನುಭಾವಿಕವಾದಾಗ ಮಾತ್ರ ಸಾಧ್ಯ. ಹೀಗಾಗಿ ಇಲ್ಲಿ 'ಪುರುಷೋತ್ತಮ' ಗದ್ಯದಲ್ಲಿ ಸಾಧಿಸಿರುವುದನ್ನು ಅಸಾಮಾನ್ಯವೆಂದೇ ಹೇಳಬೇಕು. ತೇಜಸ್ವಿ ತಮ್ಮ 'ಚಿದಂಬರ ರಹಸ್ಯ'ದಲ್ಲಿ ಕಥೆಗಾರಿಕೆಯ ಧಾವಂತದಿಂದಾಗಿ ಸಾಧಿಸಲಾಗದೇ ಹೋದದ್ದನ್ನು ಚಿತ್ತಾಲರು ಇಲ್ಲಿ ಸಾವಧಾನದಿಂದ ಸಾಧಿಸಿದ್ದಾರೆ. ಬರವಣಿಗೆ ಧ್ಯಾನವನ್ನು ಸಮೀಪಿಸುವದು ಹೀಗೇ.

ಸ್ಪೆಂಗ್ಲರ್ ಎಂಬ ಇತಿಹಾಸಜ್ಞನ ಪ್ರಕಾರ ಪ್ರತಿಯೊಂದು ಸಂಸ್ಕೃತಿಗೂ ಒಂದು ಆಯುಸ್ಸಿರುತ್ತದೆ. ಆ ಆಯುಸ್ಸು ಮುಗಿಯುವ ಸ್ವಲ್ಪ ಮುನ್ನ 'ಸೆಕೆಂಡ್ ರಿಲಿಜಿಯಾಸಿಟಿ' ಎಂಬುದೊಂದನ್ನು ಸಾಧಿಸಿಕೊಂಡು, ಅದರ ಒಡಲಿಂದ-ದೀಪ ಆರುವ ಮುನ್ನ ಚೆನ್ನಾಗಿ ಉರಿದು ಆರುವಂತೆ - ಒಂದು ನಾಗರೀಕತೆಯನ್ನು ಕಟ್ಟಿ, ಕುಸಿದು ಬೀಳುತ್ತದಂತೆ. ಅದರ ಪಾಳಿನಲ್ಲಿ ಹೊಸದೊಂದು ಸಂಸ್ಕೃತಿಯ ಉದಯವಾಗಬೇಕು. ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯನ್ನು ಒಂದು ಸಂಸ್ಕೃತಿಯಾಗಿ ಪರಿಗಣಿಸಿದರೆ ಇದರ 'ಸೆಕೆಂಡ್ ರಿಲಿಜಿಯಾಸಿಟಿ' ಈಗ ವ್ಯಕ್ತವಾಗುತ್ತಿದ್ದಂತೆ ತೋರುತ್ತದೆ. 'ಪುರುಷೋತ್ತಮ' ಇಂತಹ ನಾಗರೀಕತೆಯ ಒಂದು 'ರೂಪ'ವಾಗಿರಬಹುದು. ಹಾಗಾದರೆ ಇದರ ಪಾಳಿನಲ್ಲಿ ಹುಟ್ಟುವ ಹೊಸ ಸಂಸ್ಕೃತಿ ಎಂತಹದಿರಬಹುದು?

ಈ ಪ್ರಶ್ನೆಗೆ ಉತ್ತರವನ್ನು ಊಹಿಸಿಕೊಂಡಾಗಲೆಲ್ಲಾ ನನಗೆ 'ಕುಸುಮಬಾಲೆ' ನೆನಪಿಗೆ ಬರುತ್ತದೆ. ಈಗಾಗಲೇ ಕನ್ನಡ ಓದುಗರನ್ನು 'ಅರ್ಥವಾಗದ ಮಹಾಕೃತಿ'ಯಾಗಿ ಕಾಡಿರುವ

'ಕುಸುಮಬಾಲೆ' ಐದಾರು ಓದುಗಳ ನಂತರ ನನಗೆ ಬರವಣಿಗೆಯ ಹೊಸ ಸಂಸ್ಕೃತಿಯ ತೊದಲ್ನುಡಿಯಂತೆ ಕೇಳಿಸುತ್ತಿದೆ.

ಇದು ಮಾದರಿಗಳು, ಮೌಲ್ಯಗಳು ಹಾಗೂ ಮಾರ್ಗಗಳು ಪಲ್ಲಟಗೊಳ್ಳುತ್ತಿರುವ ಕಾಲ. ನಲ್ವತ್ತು ವರ್ಷಗಳ ಹಿಂದೆಯೂ - ಅಂದರೆ ನಮಗೆ ಸ್ವಾತಂತ್ರ್ಯ ಬಂದಾಗಲೂ ಹೀಗೇ ಆಗಿತ್ತು. ಜಾತಿ ಪದ್ಧತಿ, ಜಮೀನುದಾರಿಕೆ ಹಾಗೂ ಮಿತಿಗಳುಳ್ಳ ಬದುಕಿನ ಕ್ರಮವನ್ನು ಪ್ರಜಾಪ್ರಭುತ್ವ ಹುಟ್ಟುಹಾಕಿದ ಕನಸುಗಳು ಅಲ್ಲಾಡಿಸಿದವು. ಈವರೆಗಿನ ಆಧುನಿಕ ಕನ್ನಡ ಸಾಹಿತ್ಯ ನಿರ್ಮಾಣವಾಗಿರುವುದು ಈ ಕನಸುಗಳ ಮೇಲೇ. ಇನ್ನಷ್ಟು ವಿವರವಾಗಿ ಹೇಳುವುದಾದರೆ, ಆಧುನಿಕ ಕನ್ನಡ ಸಾಹಿತ್ಯ ಭಾರತೀಯ ಪ್ರಜಾಪ್ರಭುತ್ವದ ಆಶೋತ್ತರಗಳನ್ನೇ ತನ್ನ ಕೇಂದ್ರ ಕಳಕಳಿಯನ್ನಾಗಿಟ್ಟುಕೊಂಡು, ಅದರ ಆದರ್ಶ - ವಿರೋಧಾಭಾಸಗಳು ಹಾಗೂ ವೈಫಲ್ಯ - ಹತಾಶೆಗಳನ್ನೇ ತನ್ನ ವಿವಿಧ ಸ್ತರದ ಅನುಭವ ಹಾಗೂ ಗ್ರಹಿಕೆಗಳ ಮೂಲಕ ಪ್ರತಿಫಲಿಸುತ್ತಾ ಒಂದು ಸಾಹಿತ್ಯ ಸಂಸ್ಕೃತಿಯನ್ನು ನಿರ್ಮಿಸಿ, ಅದರ ವಿಮರ್ಶೆಗೆ ತಕ್ಕುದಾದ ಪರಿಕರಗಳನ್ನು ಆ ತನ್ನ ಒಡಲಿನಿಂದಲೇ ಪಡೆದುಕೊಂಡಿತ್ತು. ಅಂತರಂಗದ ಶೋಧನೆ, ಅನುಭವದ ಸಂಕೀರ್ಣತೆ, ಬಂಧದ ಸಾವಯವ ಸಮಗ್ರೀಕರಣ, ಸಾಮಾಜಿಕ ಕಳಕಳಿ, ಖಡ್ಗಕಾವ್ಯ-ಈ ಎಲ್ಲ ಪರಿಕಲ್ಪನೆಗಳೂ ಪ್ರಜಾಪ್ರಭುತ್ವ ದಯಪಾಲಿಸುವ ಅನೇಕ ಸ್ತರಗಳ ಸ್ವಾತಂತ್ರ್ಯದ ಹಾಗೂ ನಿಷೇಧದ ಅನ್ವೇಷಣಾ ಪರಿಕರಗಳಷ್ಟೇ. ಸಾಂಪ್ರದಾಯಿಕ ಅಥವಾ ಮಧ್ಯಕಾಲೀನ ನಂಬುಗೆಗಳನ್ನೇ ತನ್ನ ಅಂತರಂಗ ದಲ್ಲಿಟ್ಟುಕೊಂಡು ಬಹಿರಂಗವಾಗಿ ಮಾತ್ರ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸ್ವೀಕರಿಸುವ ವಿರೋಧಾಭಾಸದ ಹಾಗೂ ಸಂಘರ್ಷದ ಸಂದರ್ಭದಲ್ಲಿ ಹುಟ್ಟಿದ ಈ ಗ್ರಹಿಕೆಗಳು, ಸಂಕೀರ್ಣತೆ, ಒಳಶೋಧನೆ, ಸಮಗ್ರೀಕರಣ, ಸಾಮಾಜಿಕತೆಗಳ ಬಗ್ಗೆ ಎಷ್ಟೇ ಮಾತಾಡಿದರೂ ಅವಕ್ಕೆ ಈ ವಿರೋಧಾಭಾಸ ಹಾಗೂ ಸಂಘರ್ಷದ ಎಲ್ಲ ಪರಿಮಿತಿಗಳೂ ಇದ್ದವು ಎಂಬುದನ್ನು ನವ್ಯ - ಬಂಡಾಯಗಳ ಸೋಲು-ಗೆಲುವುಗಳ ನೆಲೆಗಳನ್ನು ಬಲ್ಲವರಿಗೆ ವಿವರಿಸಿ ಹೇಳಬೇಕಾಗಿಲ್ಲ. ಈವರೆಗಿನ ನಮ್ಮ ಸಾಮಾಜಿಕ - ರಾಜಕೀಯ ಪ್ರಕ್ರಿಯೆಗಳಂತೆಯೇ ಈ ಸಾಹಿತ್ಯಕ ಪರಿಕರಗಳು ಕೂಡಾ ಈ ವಿರೋಧಾಭಾಸ ಹಾಗೂ ಸಂಘರ್ಷಗಳನ್ನು ಮೀರಿ ಅಥವಾ ಅವನ್ನು ಅರಗಿಸಿಕೊಂಡು ಸೃಜನಶೀಲ ಎನ್ನಿಸುವ ಒಂದು ನೆಲೆಯನ್ನು ತಲುಪಲು ವಿಫಲವಾದವು. ಇದು ಒಂದು ಬರವಣಿಗೆ ಸಂಸ್ಕೃತಿ ಮುಟ್ಟಬಹುದಾದ dead-end. ಈ ಸಂಸ್ಕೃತಿಯ ಶಬ್ದ - ವ್ಯಾಕರಣಗಳೂ ಜಡತೆಯನ್ನು ಮುಟ್ಟಿದಂತಹ ಬಿಕ್ಕಟ್ಟು ಇದು. 'ಕುಸುಮಬಾಲೆ' ಈ ಬಿಕ್ಕಟ್ಟಿಗೆ ಒಂದು ಉತ್ತರವೆಂಬಂತೆ ನಮ್ಮ ಮುಂದೆ ನಿಂತಿದೆ. ನಾನು ಈ ಮೊದಲು ಪ್ರಸ್ತಾಪಿಸಿದ ಕನ್ನಡ ಸಾಹಿತ್ಯದ ಇತ್ತೀಚಿನ ಪ್ರಮುಖ ಕೃತಿಗಳ ಒಲವುಗಳು ಈ ಕೃತಿಯಲ್ಲಿ ಜನ್ಮಾಂತರಗೊಂಡಂತೆ ಹೊಚ್ಚ ಹೊಸ ರೂಪ - ಲಯಗಳೊಂದಿಗೆ ಮೈದಾಳಿವೆ. ಈ ಅರ್ಥದಲ್ಲಿ ಈ ಕೃತಿ ಬರವಣಿಗೆಯ ಹೊಸ ಸಂಸ್ಕೃತಿಯ ತೊದಲ್ನುಡಿ. ತೊದಲ್ನುಡಿ ಏಕೆಂದರೆ ಈ ಕೃತಿ ತನ್ನ ಸಂಪೂರ್ಣ ಅರ್ಥವನ್ನು ಇನ್ನೂ ಬಿಟ್ಟುಕೊಡ ಬೇಕಾಗಿದೆ - ಬಹುಶಃ ಇದೇ ಪರಂಪರೆಯಲ್ಲಿ ಬರಬಹುದಾದ ಇನ್ನಿತರ ಕೃತಿಗಳ ಮೂಲಕ.

ಮೂಲಭೂತವಾಗಿ ಯಾರ ಪುರುಷಾರ್ಥಕ್ಕಾಗಿ ಪ್ರಜಾಪ್ರಭುತ್ವ ಒಂದು ಮೌಲ್ಯವಾಗಿ ಪವಿತ್ರವೆನಿಸಿತೋ ಆ ದಲಿತರ ಒಂದು ಶ್ರೇಷ್ಠ ಸೃಜನಶೀಲ ಮನಸ್ಸೇ, ಪ್ರಜಾಪ್ರಭುತ್ವ

ಪ್ರಯೋಗದಲ್ಲಿನ ಸಂಘರ್ಷ ವಿರೋಧಾಭಾಸಗಳನ್ನು ಗೆದ್ದುಕೊಳ್ಳುವ ಬಗೆಯೇ ಈ ಕೃತಿಯ ಒಂದು (ಸಾಹಿತ್ಯ ಇತಿಹಾಸದ) ಹಂತದ ಯಶಸ್ಸಾದರೆ, ಇದು ಕೇವಲ ದಲಿತರ ಕಥೆಯಾಗದೆ ದಲಿತರ ಮೂಲಕ ಕಂಡುಕೊಂಡ ಎಲ್ಲರ ಕತೆಯಾಗುವುದು ಇನ್ನೊಂದು ಹಂತದ ಯಶಸ್ಸು. ಬಸಪ್ಪಸೋಮಿ, ಸಿದ್ಧಾರರ ಮಧ್ಯಯುಗೀನತೆ, ಅಕ್ಕಮಾದೇವಮ್ಮನ ಯುಗಾತೀತ - ತಾಯ್ತನ, ಯಾಡನ ಬೂದಿಮುಚ್ಚಿದ ಕೆಂಡದಂತಹ ಛಲ, ಅಮಾಸನ ನಿಗೂಢತೆ, ಸೋಮಪ್ಪನ ದಿಗ್ಭ್ರಮೆ, ಕುಸುಮಾಳ ವಿಷಾದ, ಮಧ್ವಾಚಾರ್ಯರ ಬಡ ಬಿಗುಮಾನ, ಗಾರೆ ಸಿದ್ಮಾವನ ಜೀವನ ಪ್ರೀತಿ, ಈರಿಯ ನೋವು, ಆಕೆಯ ಮಗನ ರೋಗ, ತೂರಮ್ಮನ ಮಂತ್ರ, ದಲಿತ ಸಂಘರ್ಷ ಸಮಿತಿಯ ಅರೆ ಗಂಭೀರ - ಅರೆ ತಮಾಷೆಯ ಮೆರವಣಿಗೆ - ಈ ಎಲ್ಲವೂ ಇಲ್ಲಿ ಒಂದಕ್ಕೊಂದು ಸಂಬಂಧ ಕಲ್ಪಿಸಿಕೊಳ್ಳುವುದು ದಲಿತ ಹುಡುಗ ಚೆನ್ನನು ತಾನು ಮಾಗದೆ, ಪ್ರಜಾಪ್ರಭುತ್ವದ ಮೂಲಕ ಮಾಗಿದ ಹಣ್ಣನ್ನು ಪಡೆಯಲು ಹೋಗಿ ತಾನೇ ಇಲ್ಲವಾಗುವ ದುರಂತದಲ್ಲಿ. ಆದರೆ ಈ ಕೃತಿ ಇದನ್ನು ಬರೀ ದುರಂತವಾಗಿ ಗ್ರಹಿಸುವುದಿಲ್ಲ. ಅಂದರೆ ಅದನ್ನು ದುರಂತವಾಗಷ್ಟೇ ಕೊನೆಗಾಣಲು ಬಿಡುವುದಿಲ್ಲ. ಹೊಸ ಭರವಸೆಯಲ್ಲಿ ಈ ದುರಂತ ತನ್ನ ಅರ್ಥಪೂರ್ಣತೆಯನ್ನು ಕಂಡುಕೊಳ್ಳುತ್ತದೆ. ಚೆನ್ನನ ಬರುವಿಕೆಗಾಗಿ, ಬದುಕಿನಲ್ಲಿ ಗಾಢ ನಂಬಿಕೆಯಿಟ್ಟು ಕಾಯುತ್ತಲೇ ಇರುವ ಅವನ ತಂದೆ ತಾಯಿಗಳ ಈ ಸಂಭಾಷಣೆಯೊಂದಿಗೆ ಕಾದಂಬರಿಯ ನಾಟಕ ಮುಗಿಯುತ್ತದೆ:

''ನಮ್ಮ ಆ ಕ್ರಿಯಾ ಒಂದು ಸುದ್ದ ಇದ್ರ ಒಂದಲ್ಲ ಒಂಜಿನ ಅವ್ನೇ ಬತ್ತನ ಕನಾ. ಸಾಸ್ತ್ರ ಹೇಳವ್ನ ರೂಪ್ದಲಿ ಬರಬೌದು... ದಾಸಯ್ಯನ ರೂಪ್ದಲಿ ಬರಬೌದೂ... ಮಾಟ ಮಂತ್ರದವನ ರೂಪ್ದಲಿ ಬರಬೌದು...''

''ಯಾವ ರೂಪ್ದಲಿ ಆಗ್ಲಿಕನಾ... ಯಾವತ್ತಾದರೂ ಬಂದಾನಾ...?''

''ಬರ್ದೆ? ಸಂಬಂಜ ಅನ್ನೋದು ದೊಡ್ಡದು ಕನಾ...''

ಕ್ರಿಯೆಯಲ್ಲಿ ಶುದ್ಧಿ ಹಾಗೂ ಸಂಬಂಧಗಳಲ್ಲಿ ನಂಬಿಕೆ - ಇವೆರಡೇ ಬದುಕಿನ ಎಲ್ಲ ಪ್ರಯತ್ನಗಳನ್ನೂ ಅರ್ಥಪೂರ್ಣಗೊಳಿಸುವ ಶಕ್ತಿಗಳು; ಇವುಗಳಾಚೆ ಎಲ್ಲವೂ ಮಂಜು ಎಂಬ ಸತ್ಯದ ಕಡೆ ತುಡಿಯುವ ಈ ಕೃತಿ, ಬದುಕಿನ ಈ ಎಲ್ಲ ಪ್ರಯತ್ನಗಳನ್ನೂ ಆಯಾ ಪ್ರಯತ್ನಗಳ ಭಾವ - ಬಣ್ಣಗಳೊಂದಿಗೇ ನಾಟ್ಯೀಕರಿಸಿದೆ.

ಆಧುನಿಕ ಜೀವನ ಹಾಗೂ ಆಧುನಿಕ ಕನ್ನಡ ಸಾಹಿತ್ಯ ನಂಬಿರುವ ಆಂತರಿಕ ತರ್ಕವನ್ನೇ ಮರೆತಂತೆ ತೋರುವ ಈ ಕೃತಿ ಸಹಜವಾಗಿಯೇ ಈ ತರ್ಕದ ಉತ್ಪನ್ನಗಳಂತಿರುವ ಸರಿ - ತಪ್ಪುಗಳ, ಇತಿಹಾಸ-ವರ್ತಮಾನಗಳ, ವಸ್ತು-ಶಕ್ತಿಗಳ, ಗದ್ಯ-ಪದ್ಯಗಳ, ಆಡುಮಾತು - ಗ್ರಂಥ ಮಾತುಗಳ, ಶಬ್ದ-ಮೌನಗಳ, ಜಾನಪದ-ಶಾಸ್ತ್ರೀಯ ಶೈಲಿಗಳ ಭೇದಗಳನ್ನೇ ಅಳಿಸಿಕೊಂಡು ಹೋಗುತ್ತಾ ಎಲ್ಲವನ್ನೂ ಒಂದಾಗಿ ಕಾಣುವ ತರ್ಕಾತೀತ ನೋಟದಲ್ಲಿ ನೆಲೆಗೊಳ್ಳುತ್ತದೆ. ಈವರೆಗಿನ ಆಧುನಿಕ ಕನ್ನಡ ಬರವಣಿಗೆಯ ಸಂಸ್ಕೃತಿಗೆ ಸಾರಾಸಗಟಾದ ಪ್ರತಿಕ್ರಿಯೆಯೆಂಬಂತೆ ಬರೆಯಲ್ಪಟ್ಟಿರುವ ಈ ಕೃತಿ ಆಧುನಿಕ ಜೀವನದ ತತ್ವಮೀಮಾಂಸೆ ಹಾಗೂ ಹೋರಾಟಗಳ ವ್ಯಾಕರಣದ ಅಸಂಗತತೆಯನ್ನು ತಮಾಷೆಯಾಗಿ ನೋಡುತ್ತಾ, ಮನುಷ್ಯ ಚೇತನ ಈ ತತ್ವ - ವ್ಯಾಕರಣಗಳನ್ನು ಮೀರಿದ ನೆಲೆಯಲ್ಲಿ ತನ್ನ ಸಾಂಗತ್ಯವನ್ನು ಪಡೆದುಕೊಂಡಿರುವ ಕಡೆ ಬೊಟ್ಟು

ಮಾಡುತ್ತದೆ. ಇದಕ್ಕಾಗಿ ಕೃತಿ ಕನ್ನಡ ಜನಪದ ಪ್ರಜ್ಞೆಯ ಸುಪ್ತದಲ್ಲಿ ಮಲಗಿರುವ ಲಯಗಳನ್ನೂ ಮೌನಗಳನ್ನೂ ಎಬ್ಬಿಸುತ್ತದೆ. ಈ ಎಚ್ಚೆತ್ತ ಮೌನ - ಲಯಗಳ ಮೂಲಕ ಕಾಲದ ಕಳ್ಳ ಹೆಜ್ಜೆಗಳನ್ನು ಗುರುತಿಸುವ ಶಕ್ತಿ ಪಡೆದುಕೊಳ್ಳುತ್ತದೆ. ಲೋಕದ ಬಗೆಗಿನ ಅಮಿತವಾದ ಪ್ರೀತಿಯಿಂದ ಮಾತ್ರ ಹುಟ್ಟಬಹುದಾದ ಈ ಶಕ್ತಿ ತನ್ನ ಸಾವಧಾನ ಗತಿಯಲ್ಲಿ ಎಲ್ಲವನ್ನೂ ಮುಟ್ಟುತ್ತ ಸಾಯುತ್ತಿರುವ ಬದುಕಿಗೆ ಜೀವದಾನ ಮಾಡುತ್ತದೆ - ಇತಿಹಾಸ - ವರ್ತಮಾನಗಳ ಕಳ್ಳ ಗಂಟುಗಳು ತಂತಾನೇ ಬಿಚ್ಚಿಕೊಂಡು ಬದುಕು ಬಯಲಾಗುತ್ತದೆ. ಲೋಕ ಬರೀ 'ಲೋಕ'ದಲ್ಲಿಲ್ಲ ಎಂಬ ಅರಿವನ್ನು ಲೋಕವ್ಯವಹಾರಗಳ ಮೂಲಕವೇ ಮಂಡಿಸಲು ಯತ್ನಿಸುವ ಈ ಕೃತಿ, ಬದುಕಿನ ಜೀವಜಲಕ್ಕಾಗಿ ಮನುಷ್ಯ ಗಾಳಿಯಲ್ಲಿ ಸುರಿಯುವ ಸಕ್ಕರೆಗೆ ಸರಿಯಾಗಿ ಬಾಯೊಡ್ಡಿ ನಿಲ್ಲುವ ಹೊಲೆಗೇರಿಯ ಆ ಹೈಕಳಿನಂತೆ ಧ್ಯಾನಸ್ಥನಾಗಬೇಕು, 'ಲೋಕೋತ್ತರ'ನಾಗಬೇಕು ಎಂದು ಧ್ವನಿಸುತ್ತದೆ. ಆದರೆ ಈ ಧ್ವನಿ ಅಪಾರ್ಥದಲ್ಲಿ, ಅಸ್ಪಷ್ಟ ತರಂಗಗಳಲ್ಲಿ ನಮ್ಮನ್ನು ಮುಟ್ಟುತ್ತಿರುವುದಕ್ಕೆ ಈ ಕೃತಿಯ ಕೃತಕ ಹೊರ ರೂಪವೇ ಕಾರಣವಿರಬಹುದು.

'ಕುಸುಮಬಾಲೆ' ಮೂಲತಃ ಒಂದು ಆಧುನಿಕ ತತ್ತ್ವಪದ. ತತ್ತ್ವಪದದಂತೆಯೇ ಅದನ್ನು ಆಲಿಸಬೇಕು. ಆಗ ಮಾತ್ರ ಅದರ ಅರ್ಥ ಮತ್ತು ಮಿತಿಗಳು ಹೊಳೆಯುತ್ತವೆ. ಕಾದಂಬರೀ ರೂಪವಾಗಿ ಈ ಕೃತಿ ಪ್ರಸ್ತುತಗೊಂಡಿರುವುದೇ ಇದು 'ಅರ್ಥವಾಗದ ಮಹಾಕೃತಿ'ಯೆಂದು ಹೆಸರಾಗಲು ಕಾರಣವೆಂದು ತೋರುತ್ತದೆ. ಲಿಖಿತ ರೂಪಕ್ಕೆ ಒಗ್ಗದ, ಓದಿನ ತರ್ಕಕ್ಕೆ ಸಿಗದ ಈ ಕೃತಿ ಅಧ್ಯಾಯಗಳಲ್ಲಿ ಹರಡಿದ ಒಂದು ಕಾದಂಬರಿಯಾಗಲು ಹೆಣಗಿ ಸೋಲುತ್ತದೆ. ಇದರಿಂದಾಗಿ ಅದು ತತ್ತ್ವಪದವಾಗಿಯೂ ತನ್ನ ಪೂರ್ಣ ರೂಪ ಪಡೆಯದೆ, ತನ್ನ ಐಕ್ಯತೆಯನ್ನು ಕಳೆದುಕೊಂಡಿದೆ. ರೂಪದ ಈ ಬಿಕ್ಕಟ್ಟು ನಮ್ಮ ಸಮಕಾಲೀನ ಸಾಹಿತ್ಯ ಸಂದರ್ಭದ, ಹಾಗೇ ಸಮಕಾಲೀನ ಜೀವನದ ಬಿಕ್ಕಟ್ಟು ಕೂಡಾ ಹೌದು. ಪ್ರಜಾಪ್ರಭುತ್ವವನ್ನು ವಿರೋಧಾಭಾಸ ಹಾಗೂ ಸಂಘರ್ಷಗಳಿಂದ ಪಾರುಮಾಡಲು ನಡೆದಿರುವ ಹೋರಾಟದ ಬಿಕ್ಕಟ್ಟು. ಈ ಬಿಕ್ಕಟ್ಟಿನಲ್ಲಿ ಹುಟ್ಟಿರುವ 'ಕುಸುಮಬಾಲೆ' ಏನನ್ನೋ ಹೊಸದಾಗಿ ಹೇಳಲು ಯತ್ನಿಸುವಂತಿದೆ. ಅದರ ಈ ತೊದಲ್ನುಡಿಯನ್ನು ನಾವೆಲ್ಲಾ ಕೊಂಚ ಸಹನೆ -ಪ್ರೀತಿಗಳಿಂದ ಕೇಳೋಣ.

ಟಿಪ್ಪಣಿ : ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳನ್ನು ಗುರುತಿಸುವ ಕೆಲಸವನ್ನಷ್ಟೇ ನಾನು ಇಲ್ಲಿ ಮಾಡಿರುವುದು. ಈ ಒಲವುಗಳನ್ನು ಪ್ರಕಟಪಡಿಸದೇ ಸಾಹಿತ್ಯ ಕೃತಿಯೊಂದು ಶ್ರೇಷ್ಠವೆನ್ನಿಸಿಕೊಳ್ಳಲಾರದೆಂಬ ಮೌಲ್ಯ ನಿರ್ಣಯದ ಕೆಲಸವನ್ನು ನಾನು ಮಾಡಿಲ್ಲ.

❑

(೧೯೯೦ರಲ್ಲಿ ಮಲ್ಲಾಡಿಹಳ್ಳಿ ಸ್ವಾಮೀಜಿಯವರ ಜನ್ಮ ಶತಾಬ್ದಿ ಸಮಾರೋಪ ಸಮಾರಂಭದ ಅಂಗವಾಗಿ ನಡೆದ ಸಾಹಿತ್ಯ ಸಮಾವೇಶದಲ್ಲಿ ಓದಲಾದ ಪ್ರಬಂಧದ ಪರಿಷ್ಕೃತ ರೂಪ)

ಅನುಭವ ಗ್ರಹಿಕೆ ಮತ್ತು ವೈಜ್ಞಾನಿಕ ಮನೋಧರ್ಮ

ಮನುಕುಲದ ಪೂರ್ವಿಕರು ಮರಗಳಿಂದ ಭೂಮಿಗಿಳಿದು ಬೇಟೆಯಾಡಲು ಆಯುಧಗಳನ್ನು ನಿರ್ಮಿಸಿಕೊಳ್ಳತೊಡಗಿದಾಗಲೇ ವಿಜ್ಞಾನವೆಂಬುದು ಆರಂಭವಾಯಿತಾದರೂ, ಸಾಮಾನ್ಯವಾಗಿ ನಾವು ವಿಜ್ಞಾನದ ಚಾರಿತ್ರಿಕ ಆರಂಭವನ್ನು ಪಶ್ಚಿಮ ಯುರೋಪ್‌ನಲ್ಲಿ 14 - 15ನೇ ಶತಮಾನದಲ್ಲಿ ಆರಂಭವಾದ ಪುನರುಜ್ಜೀವನ ಯುಗದ ಹೆಗ್ಗುರುತುಗಳಲ್ಲೊಂದಾದ ಸಿಡಿಮದ್ದಿನ ಸ್ಫೋಟದೊಡನೆ ಗುರುತಿಸುತ್ತೇವೆ. ಇದಕ್ಕೂ ಹಿಂದೆ ನಿರ್ಮಾಣವಾದ ವಿಶ್ವ ಸಾಹಿತ್ಯದಲ್ಲಿ ವಿಜ್ಞಾನದ ಪ್ರಸ್ತಾಪವಿದೆಯಾದರೂ, ಬಹುಪಾಲು ಅದೊಂದು ತತ್ವ ಶಾಸ್ತ್ರೀಯ ಪರಿಕಲ್ಪನೆಯಾಗಿಯೇ ಉಳಿದಿತ್ತು. ವಿಶ್ವತತ್ವದ ಒಂದು ಭಾಗವದು. ಈಗಲೂ ವಿಜ್ಞಾನ ವಿಶ್ವತತ್ವದ ಒಂದು ಭಾಗವಾಗಿಯೇ ಇರುವುದಾದರೂ, ಅದು ಅದರ ಅವಿಭಾಜ್ಯ ಭಾಗವೇ ಎಂಬ ಬಗ್ಗೆ ಅನುಮಾನಗಳೆದ್ದಿವೆ. ಏಕೆಂದರೆ ಅದು ಈಚಿನ ದಿನಗಳಲ್ಲಿ ಒಂದು ಸ್ವಯಂಚಾಲಿತ ತತ್ವವೆಂಬಂತೆ ವರ್ತಿಸುತ್ತದೆ.

ಅದೇನೇ ಇರಲಿ, ಪಶ್ಚಿಮ ಯುರೋಪ್‌ನಲ್ಲಿನ ಪುನರುಜ್ಜೀವನ ಕಾಲದಿಂದೀಚೆಗೆ ಈ ತತ್ವ ಅನೇಕ ದಿಕ್ಕುಗಳಲ್ಲಿ ತನ್ನ ಅನ್ವಯವನ್ನು ಪ್ರಾಯೋಗಿಕವಾಗಿ ಕಂಡುಕೊಂಡು, ಮನುಕುಲದ ಚರಿತ್ರೆಯ ಗತಿಯನ್ನೇ ನಿರ್ಣಾಯಕವಾಗಿ ಬದಲಿಸಿತು. ಮನುಕುಲದ ಚರಿತ್ರೆಯನ್ನೇ ಬದಲಿಸಿದ ಈ ತತ್ವದ ಪ್ರಾಯೋಗಿಕ ಅನ್ವಯದ ಶಿಸ್ತನ್ನೇ ನಾವು ವೈಜ್ಞಾನಿಕ ಮನೋಧರ್ಮ ಎನ್ನುವುದು. ತತ್ವಶಾಸ್ತ್ರದ ಶಿಸ್ತಿಗೂ, ಅಂದರೆ ಅದರ ತರ್ಕಕ್ಕೂ, ವಿಜ್ಞಾನದ ತರ್ಕಕ್ಕೂ ಆಂತರಿಕವಾಗಿ ಏನೂ ವ್ಯತ್ಯಾಸವಿಲ್ಲವಾದರೂ, ವಿಜ್ಞಾನದ ತರ್ಕ ಐಂದ್ರಿಯಿಕ ಸಾಕ್ಷ್ಯಗಳನ್ನಷ್ಟೇ ತನ್ನ ಆಧಾರಗಳನ್ನಾಗಿ ಪರಿಗಣಿಸುತ್ತದೆ. ಹಾಗೆ ನೋಡಿದರೆ ವಿಜ್ಞಾನ ತತ್ವಶಾಸ್ತ್ರದಿಂದ ಬೇರ್ಪಟ್ಟಿದ್ದೇ ಈ ಕಾರಣದಿಂದಾಗಿ. ಇದರಿಂದಾಗಿಯೇ ವಿಜ್ಞಾನ ಇಂದ್ರಿಯಗೋಚರ ಪ್ರಪಂಚದ ತತ್ವಶಾಸ್ತ್ರವೆನ್ನಿಸಿಕೊಂಡಿತು. ಆವರೆಗೆ ತತ್ವಶಾಸ್ತ್ರದ ಯಾವುದೇ ಸ್ತರದ ಅಭಿವ್ಯಕ್ತಿ, ವಿಜ್ಞಾನ ರೂಪದ ಅಭಿವ್ಯಕ್ತಿಯಷ್ಟು ವ್ಯಾಪಕವಾಗಿ, ಸಮರ್ಥವಾಗಿ ಹಾಗೂ ತೀವ್ರವಾಗಿ ಮನುಷ್ಯನ ಬದುಕನ್ನು ಪುನಾರಚಿಸಲು ಸಾಧ್ಯವಾಗದೇ ಹೋಗಿದ್ದ ಹಿನ್ನೆಲೆಯಲ್ಲಿ ವಿಜ್ಞಾನ, ಜಗತ್ತಿನ ಆಳುವ ತತ್ವಶಾಸ್ತ್ರವಾಗಿ ಒಡಮೂಡತೊಡಗಿತು. ವಿಜ್ಞಾನ ತನ್ನ ತಾಯಿ - ತತ್ವಶಾಸ್ತ್ರದಿಂದ ಗಣಿತ ಶಾಸ್ತ್ರವನ್ನೂ ಬೇರ್ಪಡಿಸಿಕೊಂಡು ಬಂದುದರಿಂದ ಅದಕ್ಕೊಂದು ಗಣಿತ ಶಾಸ್ತ್ರೀಯ ಮಾದರಿಯ ಪರಿಪೂರ್ಣತೆಯ ಪ್ರಭೆ ದೊರಕಿತು. ಇದಕ್ಕೆ ಪೂರಕವಾಗಿ, ಆವರೆಗೆ ಭೌತತತ್ವದೊಡನೆ

ಸಂಬಂಧವನ್ನೇ ಇರಿಸಿಕೊಂಡಿರದಿದ್ದ ಅರ್ಥಶಾಸ್ತ್ರ ಹಾಗೂ ರಾಜಕೀಯ ಶಾಸ್ತ್ರಗಳು, ಅಂಕಿ - ಅಂಶ ಶಾಸ್ತ್ರವೆಂಬ ಮಧ್ಯಂತರ ಗಣಿತಶಾಸ್ತ್ರವೊಂದನ್ನು ಆವಿಷ್ಕರಿಸಿಕೊಂಡು, ಆ ಮೂಲಕ ವಸ್ತುತತ್ವದೊಡನೆ ಸಮೀಪೀಕರಣ ಸಾಧಿಸಿ ಭೌತಶಾಸ್ತ್ರೀಯ ಮೂಲ ವಿಜ್ಞಾನಗಳಾಗಿ ಬೆಳೆದುನಿಂತವು. ಆ ಹೊತ್ತಿಗೆ ಪಳೆಯುಳಿಕೆಗಳ ಅಧ್ಯಯನವನ್ನಾಧರಿಸಿದ ಜೀವವಿಕಾಸವಾದವೂ ಪ್ರತಿಪಾದಿಸಲ್ಪಟ್ಟು, ಆ ಮೂಲಕ ಜೀವಶಾಸ್ತ್ರವೂ ಮೂಲತಃ ಭೌತಶಾಸ್ತ್ರೀಯ ನಿಯಮ ಗಳೊಡನೇ ಸಮೀಪೀಕರಣ ಸಾಧಿಸಿಕೊಂಡಿತು. ಹೀಗಾಗಿ ಐಂದ್ರಿಯಿಕವಾದ ವಸ್ತುತತ್ವವನ್ನು ಆಧರಿಸಿದ ಭೌತಶಾಸ್ತ್ರವೇ ಮನುಕುಲದ ನಿಜವಾದ ತತ್ವಶಾಸ್ತ್ರ ಅಥವಾ ಸತ್ಯಾನ್ವೇಷಣೆಯ ಏಕೈಕ ಸಾಧನವೆಂಬಂತೆ ಪರಿಗಣಿತವಾಯಿತು. ವೈಜ್ಞಾನಿಕ ಮನೋಧರ್ಮವೆಂಬುದು ಆಧುನಿಕ ಮನುಕುಲವನ್ನು ಆಳುವ ಧರ್ಮವಾಯಿತು.

ವಿಜ್ಞಾನದ ಹೊಸ ಹೊಸ ಉಪಕ್ರಮಗಳು ಅಭೇದ್ಯವೆನಿಸಿದ್ದ ಸೃಷ್ಟಿಯನ್ನು ಭೇದಿಸಿ ಒಂದು ಕಡೆ, ಅದರ ಅಸ್ತಿತ್ವದ ಆಧಾರಗಳನ್ನು ಒಂದೊಂದಾಗಿ ಗುರುತಿಸಿ, ವಿಶ್ಲೇಷಿಸಿ, ನಿಯಮೀಕರಿಸುತ್ತಾ; ಮತ್ತೊಂದೆಡೆ, ಅವುಗಳ ಅನ್ವಯದಿಂದ ಹೊಸ ಹೊಸ ಸುಖಫಲಗಳನ್ನು ನಿರಂತರವಾಗಿ ರೂಪಿಸತೊಡಗಿದಾಗ ಮನುಷ್ಯ ಪ್ರಜ್ಞೆಯ ಆಯಾಮಗಳೇ ಬದಲಾಗ ತೊಡಗಿದವು. ಸೃಷ್ಟಿಯ ನಿಗೂಢತೆಯ ಎದುರು ಬಾಗಿದ್ದ ಮನುಷ್ಯನ ತಲೆ ನಿಧಾನವಾಗಿ ಮೇಲೇರತೊಡಗಿತು. ಆತನ ಸ್ವಾತಂತ್ರ್ಯ ಪ್ರಜ್ಞೆ ಕ್ರಮೇಣ ಗರಿಗೆದರತೊಡಗಿತು. ಸೃಷ್ಟಿ ಮನುಷ್ಯನಿಗೆ ಒಂದು ಹಿನ್ನೆಲೆ ಮಾತ್ರವಾದಂತಾಯಿತು. ಈ ಅಭೂತಪೂರ್ವ ಕ್ರಾಂತಿಯಿಂದಾಗಿ ವಿಶ್ವತತ್ವದಲ್ಲಿ ಅನಾಥವಾಗಿ ಉಳಿದದ್ದು ದೈವಶಾಸ್ತ್ರ ಹಾಗೂ ಅದರಿಂದ ಒಡಮೂಡಿದ್ದ ನೀತಿಶಾಸ್ತ್ರ ಮಾತ್ರ. ದೇವಾಲಯಗಳೂ ಪುರೋಹಿತರೂ ಅನಾಥರಾದರು. ಸ್ವಲ್ಪ ಧ್ವನಿಪೂರ್ಣ ವಾಗಿ ಹೇಳುವುದಾದರೆ, ಪುನರುಜ್ಜೀವನ ಕಾಲದಲ್ಲಿನ ಮೊದಲ ಸಿಡಿಮದ್ದಿನ ಆಸ್ಫೋಟನೆಯಿಂದ ಅಲ್ಲಾಡಿದ್ದು ಚರ್ಚ್‌ಗಳ ಗೋಡೆಗಳು. ವಿಜ್ಞಾನವೂ ಸೇರಿದಂತೆ ಎಲ್ಲ ತತ್ವಗಳೂ ಆವರೆಗೆ ಒಡಮೂಡುತ್ತಿದ್ದುದು ದೈವ ಹಾಗೂ ನೀತಿಶಾಸ್ತ್ರಗಳಿಂದಲೇ. ಆದರೆ ಆ ದೈವ ಹಾಗೂ ನೀತಿಶಾಸ್ತ್ರಗಳು ಆ ಹೊತ್ತಿಗೆ ಸಾಂಸ್ಥೀಕರಣಗೊಂಡು ಪಟ್ಟಭದ್ರ ಹಿತಾಸಕ್ತಿಗಳ ಹುಚ್ಚಾಟಗಳಿಗೆ ಆಟಿಕೆಗಳಾಗಿ ಹೋಗಿದ್ದವು. ಇದರಿಂದಾಗಿ ಒಂದಾದ ಮೇಲೊಂದು ಧರ್ಮಯುದ್ಧಗಳು ನಡೆದು, ಅನೇಕ ಜನಾಂಗ, ಪಂಥ, ಗುಂಪುಗಳು ಸೃಷ್ಟಿಯಾಗಿ ಮನುಕುಲ ನೆಮ್ಮದಿ ಕಳೆದುಕೊಂಡಿತ್ತು. ದೈವಶಾಸ್ತ್ರ ಬರೀ ಶಾಪಗಳ ಸುರಿಮಳೆಯನ್ನೇ ಕರೆಯತೊಡಗಿತ್ತು. ಆಗ ಸಹಜವಾಗಿ ಮನುಕುಲ ನೆಮ್ಮದಿಗಾಗಿ ವಿಜ್ಞಾನದತ್ತ ತಿರುಗಿತು. ನವನವೋನ್ಮೇಷ ಶಾಲಿನಿಯಂತೆ ಅದು ಜನತೆಗೆ, ಅದು ಕೇಳಲಿ ಬಿಡಲಿ, ಬರೀ ವರಗಳನ್ನೇ ನೀಡುತ್ತಾ ಹೋಯಿತು. ಹೀಗೆ ವಿಜ್ಞಾನ ಜನತೆಯ ಧರ್ಮವಾಗುತ್ತಿದ್ದಂತೆ ದೈವಶಾಸ್ತ್ರ ಹಾಗೂ ನೀತಿಶಾಸ್ತ್ರಗಳು ಏಕಾಂಗಿಯಾಗಿ ಹೋಗಿ ಧ್ಯಾನಕ್ಕೆ ಕೂರುವಂತಹ ಒತ್ತಡ ನಿರ್ಮಾಣವಾಯಿತು. ಇದೆಲ್ಲಾ ಆದದ್ದು ಮೂರು ಶತಮಾನಗಳ ಕಾಲಾವಧಿಯಲ್ಲಿ.

೨

ಈ ಘಟ್ಟಾಂತರಗಳ ಅವಧಿಯಲ್ಲಿ ಸಾಹಿತ್ಯ, ಸಂಸ್ಕೃತಿ ಕಲೆಗಳೂ ರೂಪಾಂತರಗೊಂಡದ್ದು ಸಹಜವೇ. ದೈವ ಹಾಗೂ ಅದರಿಂದ ಒಡಮೂಡಿದ ನೀತಿಗಳ ಜಡತೆಯಿಂದ ಮರಗಟ್ಟಿ ಹೋಗಿದ್ದ ಮನುಷ್ಯ ಈಗ ಎಚ್ಚೆತ್ತುಕೊಂಡು ತನ್ನ ಸೃಜನಶೀಲತೆಯನ್ನು, ವಿಜ್ಞಾನಕ್ಕೆ ಸಮಾನಾಂತರವಾಗಿ ವಸ್ತು ಪ್ರಪಂಚದ ಸೌಂದರ್ಯದ ಸಾಕ್ಷಾತ್ಕಾರಕ್ಕೆ ಮೀಸಲಿಟ್ಟ. ಸೃಷ್ಟಿಯ ನಿಗೂಢತೆ ಕ್ರಮೇಣ ಕರಗುತ್ತಾ, ತರ್ಕಸ್ಪಷ್ಟವಾಗುತ್ತಾ ಹೋದಂತೆ, ಸಾಹಿತ್ಯದಲ್ಲಿ ಕಾವ್ಯದ ಪ್ರಾಥಮಿಕತೆ ಕ್ರಮೇಣ ಕರಗಿ ಹೋಗಿ ಗದ್ಯ, ಸಾಹಿತ್ಯದ ಪ್ರಮುಖ ಮಾಧ್ಯಮವಾಗತೊಡಗಿತು. ದೈವನಿಷ್ಠತೆಯ ಸ್ಥಾನವನ್ನು ವಸ್ತುನಿಷ್ಠತೆ ಪಡೆದುಕೊಂಡಿತು. ಸಾಹಿತ್ಯದಲ್ಲಿ ವಾಸ್ತವತಾವಾದದ ಅನಾವರಣವಾಯಿತು. ದೈವನಿಷ್ಠೆ, ರಾಜನಿಷ್ಠೆ ಹೇರಿದ್ದ ಅನೇಕ ರೀತಿಯ ಶ್ರೇಣೀಕರಣಗಳನ್ನೂ, ನಿರ್ಬಂಧಗಳನ್ನೂ ಬಹಿಷ್ಕಾರಗಳನ್ನೂ ಧಿಕ್ಕರಿಸಿ, ಸಾಹಿತ್ಯ ಹುಲುಮಾನವತೆಗೇ ಒಂದು ಘನತೆಯನ್ನು ತಂದುಕೊಡುವ ಆದರ್ಶಕ್ಕೆ ತನ್ನನ್ನು ಒಪ್ಪಿಸಿಕೊಂಡಿತು. ಮಹಾಕಾವ್ಯಗಳ ಸ್ಥಾನವನ್ನು ಕಾದಂಬರಿಯೆಂಬ ಒಂದು ಹೊಸ ಬಂಧವೊಂದು ಆಕ್ರಮಿಸಿಕೊಂಡಿತು. ದೇವ - ದೇವತೆಗಳಲ್ಲ, ಯಕ್ಷ - ಕಿನ್ನರರಲ್ಲ, ರಾಜ - ಮಹಾರಾಜರಲ್ಲ, ಜನತೆಯೇ ಈ ಸಾಹಿತ್ಯಕೃತಿಗಳ ನಾಯಕರಾದರು.

ವಿಜ್ಞಾನ ಬಿಡುಗಡೆ ಮಾಡಿದ ಹೊಸ ಸ್ವಾತಂತ್ರ್ಯದ ಶಕ್ತಿಯಲ್ಲಿ 'ರಾಜಾ ಪ್ರತ್ಯಕ್ಷ ದೇವತಾ' ಎಂಬ ನಂಬಿಕೆಯನ್ನಾಧರಿಸಿದ್ದ ಮಹಾಸಾಮ್ರಾಜ್ಯಗಳು ಕರಗತೊಡಗಿದ್ದವು. ಸೋದರತೆ, ಸಮಾನತೆ ಹಾಗೂ ಪ್ರಜಾಪ್ರಭುತ್ವದ ಹೊಸ ಕನಸುಗಳು ಸಾಹಿತ್ಯಸೃಷ್ಟಿಗೆ ಪ್ರೇರಣೆಯಾದವು. ವಿಜ್ಞಾನ, ಸೃಷ್ಟಿಯನ್ನು ಮನುಷ್ಯಕೇಂದ್ರಿತ ಮಾಡುತ್ತಿದ್ದಂತೆ, ಸಾಹಿತ್ಯವೂ ಅದಕ್ಕೆ ಸಮಾನಾಂತರವಾಗಿ ಮನುಷ್ಯನನ್ನು, ಅಂದರೆ ಸಾಮಾನ್ಯ ಮನುಷ್ಯನನ್ನು, ತನ್ನ ಕೇಂದ್ರವನ್ನಾಗಿ ಮಾಡಿಕೊಳ್ಳತೊಡಗಿತು. ಅವಸ್ಥಾಂತರದ ಅವಶೇಷಗಳಂತೆ ಉಳಿದುಹೋಗಿದ್ದ ದೈವಶಾಸ್ತ್ರ ಹಾಗೂ ನೀತಿಶಾಸ್ತ್ರಗಳ ಅನೇಕ ನಂಬಿಕೆಗಳನ್ನೂ, ಪರಿಕಲ್ಪನೆಗಳನ್ನೂ, ಸಂಸ್ಥೆಗಳನ್ನೂ ವಸ್ತುನಿಷ್ಠ ತರ್ಕದ ಒರೆಗಲ್ಲಿಗೆ ಹಚ್ಚಿ ಅವುಗಳ ಸತ್ಯ - ಸತ್ವಗಳನ್ನು ಪರೀಕ್ಷಿಸುವ, ಈ ಪರೀಕ್ಷೆಯಲ್ಲಿ ಸೋತವನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುವ ಕ್ರಾಂತಿಕಾರಕತೆಯನ್ನು ಪ್ರದರ್ಶಿಸತೊಡಗಿತು. ಈ ಕ್ರಾಂತಿಕಾರಕತೆಯ ಪರಿಣಾಮವಾಗಿ ಸಾಹಿತ್ಯದಲ್ಲಿ ದೈವಿಕತೆಗೆ ಪರ್ಯಾಪ್ತವಾಗಿ 'ಮಾನವತೆ' ಎಂಬೊಂದು ಹೊಸ ಮೌಲ್ಯ ಮನುಷ್ಯನ ಮನಸ್ಸನ್ನು ಸ್ಪರ್ಶಿಸಿತು. ಮುಂದೆ ವಿಶ್ಲೇಷಣಾತ್ಮಕ, ಸಮಾಜವಾದಿ, ಮನೋವೈಜ್ಞಾನಿಕ, ಮಾಂತ್ರಿಕ, ಅತಿ ಇತ್ಯಾದಿ ಗುಣವಾಚಕಗಳೊಡನೆ ಅವಸ್ಥಾಂತರಗಳನ್ನು ಹೊಂದಿದ ವಾಸ್ತವತಾವಾದ ಒಟ್ಟಾರೆಯಾಗಿ ಬೆಳಗಿದ್ದು ಈ ಹೊಸ ಸ್ವಚ್ಛಂದ 'ಮಾನವತೆ'ಯನ್ನೇ. ಆದರೆ ಈ ಅವಸ್ಥಾಂತರಗಳಲ್ಲಿ ವಾಸ್ತವತಾವಾದದ ಬೇರುಗಳೇ ಅಲುಗಾಡತೊಡಗಿದ್ದವು ಎಂಬುದು ಬೇರೆ ಮಾತು.

ಈ ಮಾತು ಬೇರೆ ಏಕೆಂದರೆ ಇದು ವಿಜ್ಞಾನದಲ್ಲೇ ಆದ ಹೊಸ ಕ್ರಾಂತಿಯೊಂದಕ್ಕೆ ಸಂಬಂಧಿಸಿದ ಮಾತು. ವಸ್ತುತತ್ವದ ಸುತ್ತಲೇ ಗಿರಕಿ ಹೊಡೆಯುತ್ತಿದ್ದ ವಿಜ್ಞಾನ ಈ ಶತಮಾನದ ಆರಂಭದ ವೇಳೆಗೆ ತನ್ನ ಸತ್ವ - ತರ್ಕಗಳೆರಡನ್ನೂ ನುಂಗಿಕೊಳ್ಳಬೇಕಾದ ಪರಿಸ್ಥಿತಿಗೆ ಈಡಾಯಿತು. ಜಡ ಚೇತನಗಳ ಮತ್ತು ಕಾಲ - ದೇಶಗಳ ವಿಭಜನೆಯನ್ನೇ ಆಧಾರ ಕಲ್ಪನೆಯನ್ನಾಗಿರಿಸಿಕೊಂಡಿದ್ದ ಹದಿನಾರನೇ ಶತಮಾನದ ಡೆಕಾರ್ಟನ ತರ್ಕವ್ಯವಸ್ಥೆಯೇ (Cartesian Logic) ಈ ಶತಮಾನದ ಆರಂಭದವರೆಗಿನ ವೈಜ್ಞಾನಿಕ ಸಂಶೋಧನೆಗಳ ಅಭಿವ್ಯಕ್ತಿಗೆ ಬೇಕಾದ ಗಣಿತೀಯ ಶಿಸ್ತನ್ನು ಒದಗಿಸಿದ್ದುದು. ಜಗತ್ತಿನ ನೋಟವನ್ನೇ ಬದಲಿಸಿದ ನ್ಯೂಟನ್ನಿನ ಅಭೂತಪೂರ್ವ ಸಂಶೋಧನೆಗಳು ಬೆಳಗುತ್ತಿದ್ದುದೇ, ಅರ್ಥಪೂರ್ಣವಾಗಿ ಕಾಣುತ್ತಿದ್ದುದೇ, ಈ ಶಿಸ್ತಿನಿಂದಾಗಿ. ಅನುಭವವನ್ನು ತಾನು ಅನುಭವ ವಲಯದ ಹೊರಗಿದ್ದು ಸ್ವೀಕರಿಸುವ ಶಿಸ್ತಿದು. ಈ ಶಿಸ್ತಿನಲ್ಲಿ ಜ್ಞೇಯ (ಅರಿಯಬೇಕಾದ್ದು) ಮತ್ತು ಜ್ಞಾತೃ (ಅರಿಯಬೇಕಾದವನು)ಗಳು ಒಂದರಿಂದ ಒಂದು ಸ್ವತಂತ್ರವಾದವು. ಇದರಿಂದಾಗಿಯೇ ವಿಶ್ವವಿದ್ಯಮಾನವೆಂಬುದು ಮನುಷ್ಯನ ಗ್ರಹಿಕೆಯಲ್ಲಿ ಸ್ವಸಂಪೂರ್ಣವಾದ 'ಯಂತ್ರ ವ್ಯವಸ್ಥೆ'ಯ ಮಾದರಿಯಾಗಿತ್ತು. ಆದರೆ ಆಲ್ಬರ್ಟ್ ಐನ್‌ಸ್ಟೀನ್‌ನ ಸಂಶೋಧನೆಗಳು ಜಡ, ಚೇತನಗಳು ಮತ್ತು ಕಾಲ, ದೇಶಗಳು ಅಳತೆ ಮಾಡುವ ವ್ಯಾವಹಾರಿಕ ಸ್ತರದಲ್ಲಿ ಮಾತ್ರ ಭಿನ್ನ ರೂಪಗಳಲ್ಲಿ ವ್ಯಕ್ತ /ಗ್ರಾಹ್ಯವಾದರೂ ನಿಜವಾಗಿಯೂ ಅವು ನಾಮ ರೂಪ ಭೇದಗಳಷ್ಟೇ ಎಂದು ಸಾರಿದವು. ಡೆಕಾರ್ಟನ ತರ್ಕವ್ಯವಸ್ಥೆ, ಮನುಷ್ಯ ಸತ್ಯ ತನ್ನ ಹೊರಗಿದೆ ಎಂಬ ಪೂರ್ವ ಕಲ್ಪನೆಯೊಂದಿಗೆ ಮಾಡುವ ಅಳತೆಗಳ ಪ್ರಪಂಚದಲ್ಲಿ ಮಾತ್ರ ಬಳಸಬಹುದಾದ ವ್ಯಾವಹಾರಿಕ ಶಿಸ್ತು ಎಂಬುದನ್ನು ಸಾಪೇಕ್ಷತಾ ಸಿದ್ಧಾಂತ ತೋರಿಸಿತು. ಹೀಗಾಗಿ ವಿಶ್ವವಿದ್ಯಮಾನವನ್ನು 'ಯಂತ್ರ ವ್ಯವಸ್ಥೆ'ಯ ಮಾದರಿಯಲ್ಲಿ ಬಿಡಿಭಾಗಗಳ ಭೌತಿಕ ಸಂಯೋಜನೆಯಂತೆ ಗ್ರಹಿಸುವ ವಿಧಾನವೇ ತಪ್ಪು ಎಂಬ ಅರಿವುಂಟಾಯಿತು. ಇದರಿಂದಾಗಿ ಅನುಭವವನ್ನು ಹೊರಗಿನಿಂದ ವಸ್ತು - ಚೇತನ ಮತ್ತು ಕಾಲ - ದೇಶಗಳ ವಿಚ್ಛಿನ್ನ ಆವರಣಗಳ ಚೌಕಟ್ಟಿನಲ್ಲಿ ಗ್ರಹಿಸಿ 'ಜೋಡಿಸುವ' ವಿಧಾನದಲ್ಲೇ ಆಂತರಿಕವಾದ ದೌರ್ಬಲ್ಯವಿದೆ ಎಂಬುದು ಮನವರಿಕೆಯಾಯಿತು. ಆ ಹೊತ್ತಿಗೆ ಫ್ರಾಯ್ಡ್, ನಂತರ ಯೂಂಗರ ಆಧುನಿಕ ಮನೋವಿಜ್ಞಾನವೂ ಮನುಷ್ಯನ ಗ್ರಹಿಕೆಯ ಪಾತಳಿಯಾದ ಪ್ರಜ್ಞೆಯು ಸ್ತರೀಕೃತವಾದರೂ ಅಖಂಡವಾದದ್ದು, ಐಂದ್ರಿಯಿಕವಾದರೂ ನಿರಾಯಾಮವಾದುದು (ಅಳತೆಗೆ ಸಿಗದ್ದು) ಎಂದು ಪ್ರತಿಪಾದಿಸತೊಡಗಿತ್ತು. ಅಂದರೆ, ಮನುಷ್ಯನ ಕನಸುಗಳೂ, ಭ್ರಮೆ - ವಿಭ್ರಮೆಗಳೂ ವಾಸ್ತವದ ಅವಿಭಾಜ್ಯ ಭಾಗಗಳೇ ಆಗಿದ್ದು, ಅನುಭವದ ಸಮಗ್ರ ಗ್ರಹಿಕೆಗೆ ಮನುಷ್ಯ ಕೇಂದ್ರಿತವಾದ 'ವಸ್ತು'ನಿಷ್ಠತೆಯೊಂದೇ ಸಾಲದು ಎಂಬ ಅರಿವು ಮೂಡತೊಡಗಿತ್ತು. ವೈಜ್ಞಾನಿಕ ಮನೋಧರ್ಮದ ತರ್ಕದ ಕುಣಿಕೆಗಳು ಒಂದೊಂದಾಗಿ ಸಡಿಲವಾಗತೊಡಗಿದ್ದವು.

ಇದೆಲ್ಲದರ ಜೊತೆ ಜೊತೆಗೆ ಸಾಹಿತ್ಯದಲ್ಲಿ ವಾಸ್ತವತಾವಾದೀ ಪ್ರಯೋಗಗಳು ತಮ್ಮ

ಅನುಭವದ ಸಮಗ್ರ ಗ್ರಹಿಕೆಯ ಪ್ರಯತ್ನಗಳಲ್ಲಿ ತಮ್ಮ ಕಟ್ಟುಗಳನ್ನು ತಾವೇ ಬಿಚ್ಚಿಕೊಳ್ಳ ತೊಡಗಿದ್ದವು. ರಾಜಕೀಯ ಅಧಿಕಾರದ ಹೊಸ ಸ್ವರೂಪಗಳು ಹೊಸ ಹೊಸ ಸಾಮಾಜಿಕ ರಚನೆಗಳಿಗೆ ಕಾರಣವಾಗಿ; ನಗರೀಕರಣ, ಕುಟುಂಬ ವಿಘಟನೆ, ಸ್ತ್ರೀ ವಿಮೋಚನೆ, ರೈತ - ಕಾರ್ಮಿಕ ಸಂಘಟನೆ ಇತ್ಯಾದಿ ಬೆಳವಣಿಗೆಗಳು, ಒಡೆದಿದ್ದುಕೊಂಡೇ ಒಂದಾಗಿ ಇರಲು ಬಯಸುವ ಸಾಮಾಜಿಕ ಅಭೀಪ್ಸೆಯನ್ನು ಅಭಿವ್ಯಕ್ತಪಡಿಸಬೇಕಾದ ಸಂಕೀರ್ಣ ಸವಾಲನ್ನು ವಾಸ್ತವತಾವಾದ ಎದುರಿಸಬೇಕಾಯಿತು. ಹೀಗಾಗಿ ''... a true knowledge of the world is gained only by conversation and the manners of every rank must be seen in order to be known'' (ಹೆನ್ರಿ ಫೀಲ್ಡಿಂಗ್) ಎಂದು 18ನೇ ಶತಮಾನದಲ್ಲಿ ನಂಬಿ ''.... Society would be the real author; I should only be the secretary'' (ಬಾಲ್ಜಾಕ್) ಎಂದು 19ನೇ ಶತಮಾನದಲ್ಲಿ ಬಾಗಿ, ''... not so much the making of poems as the transformation of men in to living poems'' (ಅಕ್ಟಾವಿಯೋ ಪಾಜ್) ಎಂದು 20ನೇ ಶತಮಾನದಲ್ಲಿ ತನ್ನಲ್ಲಿ ತಾನೇ ಕರಗಿಹೋಗುವ ವಿಸ್ಮಯವಾಯಿತು ವಾಸ್ತವತಾವಾದ. ಗದ್ಯ ಮತ್ತೆ ಪದ್ಯವಾಗಲು, ಕಾದಂಬರಿ ಮತ್ತೆ ಕಾವ್ಯವಾಗಲು ಹವಣಿಸುವ, ಅಸಂಗತವೆನ್ನಬಹುದಾದ, ಯಾವುದೇ ತರ್ಕಕ್ಕೆ ಸಿಗದ, ಅತಿವಾಸ್ತವತಾವಾದ ಎನ್ನುವ ವಿದ್ಯಮಾನ ಸಾಹಿತ್ಯದಲ್ಲಿ ಕ್ರಿಯಾಶೀಲವಾಯಿತು.

೪

ಈ ಮಧ್ಯೆ ಸಡಿಲ ಕುಣಿಕೆಗಳ ವೈಜ್ಞಾನಿಕ ಮನೋಧರ್ಮ ಎದುರಿಸಬೇಕಾಗಿ ಬಂದ (ಬಂದಿರುವ) ಬಿಕ್ಕಟ್ಟನ್ನು ಗಮನಿಸಬೇಕು. ಡೆಕಾರ್ಟನ ತರ್ಕ ಸಿಡಿ ಮದ್ದನ್ನು ಸ್ಫೋಟಿಸಿದಂತೆ ಐನ್‌ಸ್ಟೀನ್‌ನ ಸಿದ್ಧಾಂತ ಅಣುಬಾಂಬನ್ನು ಸ್ಫೋಟಿಸಿತ್ತು. ಸಾಹಿತ್ಯಕ್ಕೆ ಸ್ವಚ್ಛಂದ 'ಮಾನವತೆ' ಯನ್ನು ಪ್ರದಾನ ಮಾಡಿದ ವೈಜ್ಞಾನಿಕ ಮನೋಧರ್ಮವೇ ತನ್ನ ಸ್ವಚ್ಛಂದತೆಯಿಂದಾಗಿ ಈಗ ಆ 'ಮಾನವತೆ'ಯನ್ನೇ ಪ್ರಪಾತದ ಅಂಚಿಗೆ ತಂದು ನಿಲ್ಲಿಸಿದೆಯೆಂಬ ಕೂಗು ಕೇಳತೊಡಗಿತು. ವಿಜ್ಞಾನ ಯುಗದ ಸುಖಗಳೆಲ್ಲಾ ಮುಗಿದು, ದುರಂತಗಳ ಕಾಲ ಆರಂಭವಾಗಿದೆ ಎಂಬ ಮಾತು ಚಲಾವಣೆಗೆ ಬರತೊಡಗಿತು. ಎರಡು ಮಹಾಯುದ್ಧಗಳ ಭೀಕರ ಪರಿಣಾಮಗಳು, ಬಡತನ ಹಾಗೂ ಶ್ರೀಮಂತಿಕೆಗಳ ನಡುವೆ ಹೆಚ್ಚೆಚ್ಚು ಆಳವಾಗುತ್ತಿರುವ ಕಂದಕ, ಅಣ್ವಸ್ತ್ರಗಳ ದಾಸ್ತಾನು, ಶಸ್ತ್ರಾಸ್ತ್ರ ಹಾಗೂ ಮಾದಕ ವಸ್ತುಗಳ ವ್ಯಾಪಾರವೇ ಜಗತ್ತಿನ ಅತಿದೊಡ್ಡ ವ್ಯಾಪಾರ ವಹಿವಾಟಾಗಿ ಪರಿವರ್ತಿತವಾಗಿರುವುದು, ಹಿಂಸಾಚಾರ ಮಾನವ ಸಹಜ ಚಟುವಟಿಕೆ ಎಂಬಂತೆ ಮಾನ್ಯತೆ ಗಳಿಸುತ್ತಿರುವುದು, ಇವಕ್ಕೆಲ್ಲ ಕಿರೀಟವಿಟ್ಟಂತೆ ಪರಿಸರ ನಾಶದ ಮೂಲಕ ಮನುಷ್ಯ ತನ್ನ ಅಸ್ತಿತ್ವದ ಬೇರುಗಳನ್ನೇ ಕಡಿದುಕೊಳ್ಳುತ್ತಿರುವುದು - ಇವೇ ಮುಂತಾದ ಇಂದ್ರಿಯಗೋಚರ ಸಾಕ್ಷ್ಯಾಧಾರಗಳನ್ನು ವಿಜ್ಞಾನದ ಮುಖಕ್ಕೆ ಹಿಡಿಯಲಾಗುತ್ತಿದೆ.

ಹೀಗೆ ವಿಜ್ಞಾನದ ಖಂಡನೆಗೆ ತೊಡಗಿರುವುದು ಆಗ ಧ್ಯಾನಕ್ಕೆ ಕೂತು ಈಗ ಕಣ್ಣು

ಬಿಟ್ಟಿರುವ ದೈವಶಾಸ್ತ್ರ ಹಾಗೂ ನೀತಿಶಾಸ್ತ್ರಗಳು. ವೈಜ್ಞಾನಿಕ ಮನೋಧರ್ಮವೆಂಬುದು ಒಂದು ಅಪೂರ್ಣ ಹಾಗೂ ಸಾಪೇಕ್ಷ ಮನೋಧರ್ಮವೆಂದೂ, ಇಂದಿನ ಅದರ ಎಲ್ಲ ಅನಾಹುತಗಳಿಗೆ ಅದು, ತನ್ನನ್ನು ತಾನು ಪೂರ್ಣ, ನಿರಪೇಕ್ಷ ಹಾಗೂ ಸ್ವಯಂಚಾಲಿತ ತತ್ವವೆಂದು ಅಹಂಕರಿಸಿ ಹೊರನಡೆದದ್ದೇ ಕಾರಣವೆಂದೂ, ಅದು ವಿಶ್ವತತ್ವದ ಒಂದು ಅವಿಭಾಜ್ಯ ಅಂಗವಾಗಿ ತಮ್ಮೊಡನೆ ಬೆರೆತಿದ್ದಲ್ಲಿ - ಅಂದರೆ ಸಮನ್ವಯದಿಂದ್ದಲ್ಲಿ - ಈ ಎಲ್ಲ ಅನಾಹುತಗಳಿಗೆ ಕಾರಣವೇ ಇರುತ್ತಿರಲಿಲ್ಲವೆಂದೂ ಅವು ವಾದಿಸುತ್ತಿವೆ. ಈ ವಾದವನ್ನು ಈಗ ಸ್ಥೂಲವಾಗಿ ಧಾರ್ಮಿಕವಾದ ಎಂದು ಗುರುತಿಸಲಾಗುತ್ತಿದೆ.

ಹೀಗಾಗಿ ಆಧುನಿಕ ಮನುಷ್ಯ ಇಂದು ವಿಜ್ಞಾನ ಮತ್ತು ಧರ್ಮಗಳ ಈ ದ್ವಂದ್ವದಲ್ಲಿ ವಸ್ತು ಸ್ಥಿತಿಯನ್ನು ಗ್ರಹಿಸಬೇಕಾದ ಸವಾಲನ್ನು ಎದುರಿಸುತ್ತಿದ್ದಾನೆ. ವಿಜ್ಞಾನದ ಮನುಷ್ಯ ಕೇಂದ್ರಿತ ವಸ್ತುನಿಷ್ಠ ತರ್ಕದ ಮಾದರಿಯಾಗಲಿ ಧರ್ಮದ ದೈವಕೇಂದ್ರಿತ ನೀತಿನಿಷ್ಠ ತರ್ಕದ ಮಾದರಿಯಾಗಲೀ ಈ ಸವಾಲನ್ನು ಎದುರಿಸುವಲ್ಲಿ ನೆರವಾಗಲಾರವು. ಏಕೆಂದರೆ ಮನುಷ್ಯನಿಗೆ ಈಗ ಸುಖವೂ ಬೇಕಾಗಿದೆ, ನೀತಿಯೂ ಬೇಕಾಗಿದೆ. ಆದರೆ ಇವೆರಡೂ ಅಳೆಯಲಾಗದಂತಹವುಗಳಾದ್ದರಿಂದ, ಯಾವುದು ಎಷ್ಟು 'ಹಿತ - ಮಿತ'ವಾಗಿರಬೇಕೆಂಬ ಲೆಕ್ಕಾಚಾರದ ಸಂಯೋಜನೆಯೂ ಸಾಧ್ಯವಾಗದಾಗಿದೆ. ಒಟ್ಟಿನಲ್ಲಿ ಇದೊಂದು ಹೊಸ ಆಯಾಮದ (ಅಥವಾ ನಿರಾಯಾಮದ) ತತ್ವಶಾಸ್ತ್ರೀಯ ಬಿಕ್ಕಟ್ಟೇ ಆಗಿದೆ. ವಾಸ್ತವತಾವಾದಿ ಸಾಹಿತ್ಯದ ಮುಂದುವರೆದ ಹಂತಗಳಲ್ಲಿ ಸೃಷ್ಟಿಯಾದ ಎಲ್ಲ ಸಾಹಿತ್ಯವೂ ಒಂದಲ್ಲ ಒಂದು ರೀತಿಯಲ್ಲಿ ಈ (ಅಸ್ತಿತ್ವವಾದಿ - ಅಸಂಗತವಾದೀ) ಬಿಕ್ಕಟ್ಟಿನಲ್ಲಿ ತೊಳಲಾಡಿರುವುದನ್ನು ನಾವು ನೋಡಬಹುದು. ಇದು ಮೂಲತಃ ಪ್ರಜ್ಞೆಯ ಐಕ್ಯತೆಯ ಬಿಕ್ಕಟ್ಟು, ಜ್ಞಾತೃ ಮತ್ತು ಜ್ಞೇಯಗಳ ನಡುವಣ ಸಂಬಂಧದ ಬಿಕ್ಕಟ್ಟು.

೫

ಆಶ್ಚರ್ಯವೆಂದರೆ ಐನ್‌ಸ್ಟೀನ್ ಸಿದ್ಧಾಂತದ ಮುಂದುವರಿಕೆಯಾಗಿ ವಸ್ತುವನ್ನು ಅಣುವಾಗಿ ಅಧ್ಯಯನ ಮಾಡಹೊರಟ ವಿಜ್ಞಾನಿಗಳು ಮೇಲೆ ತಿಳಿಸಿದ ತತ್ವಶಾಸ್ತ್ರೀಯ ಬಿಕ್ಕಟನ್ನು, ಅದು ನಿಜವಾದ ಬಿಕ್ಕಟ್ಟೇ ಅಲ್ಲ ಎಂದು ಭೌತಶಾಸ್ತ್ರದ ಅತ್ಯಂತ ಕ್ರಾಂತಿಕಾರಕ ಅನ್ವೇಷಣೆಯೊಂದರ ಮೂಲಕ ಸಾರಿದೆ. ವಸ್ತುವಿನ ಒಳಹೊಕ್ಕು ವಸ್ತುತತ್ವದ ರಹಸ್ಯ ತಿಳಿಯಹೊರಟ ಉನ್ನತಶಕ್ತಿ ಭೌತಶಾಸ್ತ್ರ (High energy physics), ವಸ್ತುವಿಗೆ ಸ್ವತಂತ್ರ ಅಸ್ತಿತ್ವವೇ ಇಲ್ಲವೆಂದೂ, ಅದು ಅಖಂಡ ಅಸ್ತಿತ್ವದ ಒಂದು ಭಾಗವಾಗಿ ಮಾತ್ರ ಮನುಷ್ಯ ಪ್ರಜ್ಞೆಯ ಸ್ಥಿತಿಗನುಗುಣವಾಗಿ ಗುಣಾತ್ಮಕ ಸ್ಪಂದನವಾಗಿ ಸಂಭವಿಸುವ ಕ್ಷಣಿಕ ಘಟನೆ ಮಾತ್ರವೆಂದೂ ಪ್ರಾಯೋಗಿಕವಾಗಿ ಕಂಡುಹಿಡಿದಿದೆ. ಅಂದರೆ ಇಲ್ಲಿ ಜ್ಞಾತೃ ಮತ್ತು ಜ್ಞೇಯಗಳು ಕರಗಿ ಒಂದಾಗಿ ಭೌತಶಾಸ್ತ್ರ ಪ್ರಜ್ಞಾಶಾಸ್ತ್ರವಾಗಿ ಹೋಗಿದೆ. ನಿಜವಾಗಿ ಇರುವುದು ಪ್ರಜ್ಞೆ ಮಾತ್ರ. ಅದರ

ಅಖಂಡತೆಯಲ್ಲಿ ಮಾತ್ರ ಅಖಂಡ ಸತ್ಯದ ಸಾಕ್ಷಾತ್ಕಾರವಾಗುವುದು. ಮಿಕ್ಕೆಲ್ಲವೂ ಅದು ಭೌತಶಾಸ್ತ್ರವೇ ಆಗಿರಲಿ, ನೀತಿಶಾಸ್ತ್ರವೇ ಆಗಿರಲಿ ಅವು ಖಂಡ - ತುಂಡ ಸತ್ಯಗಳು ಮಾತ್ರ. ಭೌತಶಾಸ್ತ್ರವು ಭೌತಶಾಸ್ತ್ರದಲ್ಲೇ ಕರಗಿ ಹೋಗುವ ಈ ವಿಸ್ಮಯಕಾರೀ ಸಂಶೋಧನೆಯಲ್ಲಿ ಪಾಲ್ಗೊಂಡಿದ್ದ ವಿಜ್ಞಾನಿ ಷ್ರೋಡಿಂಜರ್ ಈ ಸಂಶೋಧನೆಯ ಪ್ರಯೋಗದ ಸಂದರ್ಭದಲ್ಲಿ ಕಂಡುಕೊಂಡ ಸತ್ಯವನ್ನು ಹೀಗೆ ವಿವರಿಸುತ್ತಾರೆ :

''ಪ್ರಜ್ಞೆ ಎಂಬುದನ್ನು ಬಹುವಚನದಲ್ಲಿ ಅನುಭವ ಮಾಡಿಕೊಂಡಿದ್ದೇ ಇಲ್ಲ. ಯಾವಾಗಲೂ ಏಕವಚನದಲ್ಲಿ ಮಾತ್ರವೇ... ಪ್ರಜ್ಞೆ ಎಂಬುದು ಅದರ ಬಹುವಚನವು ತಿಳಿಯದ ಏಕವಚನ. ಇರುವುದು ಒಂದೇ ಒಂದು. ಬಹುತ್ವವಾಗಿ ತೋರುವುದು ಭ್ರಮೆಯಿಂದಾಗಿ (ಭಾರತೀಯ ಪರಿಭಾಷೆಯಲ್ಲಿ ಹೇಳುವುದಾದರೆ 'ಅವಿದ್ಯೆ'ಯಿಂದಾಗಿ) ಉದ್ಭವಿಸುವ ಬೇರೆ ಬೇರೆ ಮುಖಗಳ ಶ್ರೇಣಿಗಳು ಮಾತ್ರ''.

ಈ ಮಾತುಗಳು ಯಾರೋ ಒಬ್ಬ ಪೌರ್ವಾತ್ಯ ಋಷಿಯೊಬ್ಬನ ಮಾತುಗಳಂತೆ ಕೇಳಿಸುತ್ತಿದ್ದರೆ ಅದು ಷ್ರೋಡಿಂಜರನ ತಪ್ಪಲ್ಲ. ವಸ್ತುತತ್ವದ ತಪ್ಪು. ಈ ಹಿನ್ನೆಲೆಯಲ್ಲಿ ಹಾಲಿ ಚಾಲ್ತಿಯಲ್ಲಿರುವ ವೈಜ್ಞಾನಿಕ ಮನೋಧರ್ಮವೆಂಬುದು ಈಗ ಹೊಸ ಸಮಗ್ರತೆಯ ಕಡೆ ಚಲಿಸಬೇಕಿದೆ. ತನ್ನ ಉತ್ತರಣ (transcendence)ವನ್ನು ತಾನೇ ಸಾಧಿಸಿಕೊಳ್ಳಬೇಕಿದೆ.

ಇದರರ್ಥ ಇಷ್ಟೇ : ಇಂದು ವಿಜ್ಞಾನ ಮತ್ತು ಧರ್ಮಗಳ ದೃಷ್ಟಿ ಯುದ್ಧದ ನಡುವೆ ಬದುಕುತ್ತಿರುವ ನಾವು ನಮ್ಮ ಪ್ರತಿಯೊಂದು ಅನುಭವವನ್ನು, ಅದನ್ನು ತಾತ್ವೀಕರಿಸುವಾಗ ಪ್ರತಿಯೊಂದು ತತ್ವವೂ ಸಾಂದರ್ಭಿಕ ತತ್ವ ಮಾತ್ರವಾಗಿದ್ದು ಅದು ಏಕಕಾಲಕ್ಕೆ ವಸ್ತುತತ್ವವೂ ಹೌದು, ನೀತಿ ತತ್ವವೂ ಹೌದು ಎಂಬ ತಿಳುವಳಿಕೆಯೊಡನೆ ಗ್ರಹಿಸಬೇಕಾಗಿದೆ. ತನ್ನೊಳಗೇ, ಅಥವಾ ಇಬ್ಬರ ನಡುವೆ ಅಥವಾ ಎರಡು ದೇಶಗಳ ನಡುವೆ ಯುದ್ಧ ಆರಂಭವಾಗುವುದೇ ಈ ತಿಳುವಳಿಕೆ ಇಲ್ಲದಾಗ. ಈ ಯುದ್ಧ ಮುಗಿಯುವುದೇ ಈ ತಿಳುವಳಿಕೆ ಮೂಡಿದಾಗ. ಉದಾಹರಣೆಗೆ ವಿಜ್ಞಾನ ಸೃಷ್ಟಿಸುತ್ತಿರುವ ಹೊಸ ಹೊಸ ಆಸ್ತಿಗಳು ಸುಖಕರವಾದುದೇ ದುಃಖಕರವಾದುದೇ ಎಂಬ ಪ್ರಶ್ನೆಯನ್ನು ಈ ಆಸ್ತಿ ಸೃಷ್ಟಿಯ ಹಿಂದೆ ವಸ್ತುತತ್ವ ಮತ್ತು ನೀತಿತತ್ವಗಳೆರಡೂ ಅಡಗಿವೆ ಎಂಬ ತಿಳುವಳಿಕೆಯೊಡನೆ ಎದುರಿಸಬೇಕಿದೆ. ಆಗ ಈ ಆಸ್ತಿ ಹೇಗೆ, ಏಕೆ, ಯಾರಿಗೆ ಮತ್ತು ಎಷ್ಟು ಎಂಬ ಪ್ರಶ್ನೆಗಳು ಈ ಆಸ್ತಿಯ ಸೃಷ್ಟಿಗೇ ಒಂದು ಪರಿಪ್ರೇಕ್ಷ್ಯೀಯ ಚೌಕಟ್ಟನ್ನು ಒದಗಿಸಿ ಪ್ರಶ್ನೆಯನ್ನು ಸಾಂದರ್ಭಿಕವಾಗಿ ಬಗೆಹರಿಸುತ್ತದೆ. ಹಾಗೇ ಇದಕ್ಕೆ ಸಮಾನಾಂತರ ಉದಾಹರಣೆಯಾಗಿ ಸುಳ್ಳು ಹೇಳುವುದು ಸುಖಕರವೇ ಅಥವಾ ದುಃಖಕರವೇ ಎಂಬ ಪ್ರಶ್ನೆಯನ್ನೂ ಪರಿಶೀಲಿಸಬಹುದಾಗಿದೆ.

೬

ವಿಜ್ಞಾನ ಮತ್ತು ಧರ್ಮಗಳ ನಡುವಣ ದೃಷ್ಟಿಯುದ್ಧ ಉತ್ಕಟ ಘಟ್ಟವನ್ನು

ಮುಟ್ಟುತ್ತಿರುವ ಇಂದಿನ ಸಂದರ್ಭದಲ್ಲಿ ಸೃಷ್ಟಿಯಾಗುತ್ತಿರುವ ಸಾಹಿತ್ಯ, ವಾಸ್ತವತಾವಾದಿ ಮಾರ್ಗ ತನ್ನಲ್ಲಿ ತಾನೇ ಕರಗಿ ಹೋದುದರ ಪರಿಣಾಮವೆಂಬಂತೆ; ವಸ್ತುತತ್ವದ ಅಸ್ಫೋಟನೆಗೆ ತನ್ನ ಸಹಮತಿಯನ್ನು ಸೂಚಿಸುವಂತೆ, ಅನುಭವವನ್ನು ತಾತ್ವೀಕರಿಸಲು ಹಾತೊರೆಯದೆ ಅದರ ಎಲ್ಲ ಮೂಲಗಳನ್ನು, ಆಯಾಮಗಳನ್ನು, ಅರ್ಥಗಳನ್ನು ಹೊರಹೊಮ್ಮಿಸುವ ಹೊಸ ಮಾದರಿಗಳನ್ನು ಕಂಡುಕೊಳ್ಳುತ್ತಿರುವುದನ್ನು ನಾವು ಗಮನಿಸಬಹುದು. ಪ್ರಜ್ಞೆಯ ಐಕ್ಯತೆಯಲ್ಲೇ ಸತ್ಯವನ್ನು ಗ್ರಹಿಸುವ ಇಂತಹ ಪ್ರಯತ್ನಗಳನ್ನು ಈಗ ಜಾಗತಿಕ ಮಟ್ಟದಲ್ಲಿ ಮಾರ್ಕ್ವೆಜ್, ವೊಲೆ ಸೊಯಾಂಕಾರ ಕೃತಿಗಳಲ್ಲಿನ ಕೃತಿರಚನೆಯ ಹೊಸ (ಅ) ತರ್ಕ - ಶೈಲಿಗಳಲ್ಲಿ ಗುರುತಿಸಬಹುದು. ಕನ್ನಡದ ಮಟ್ಟಿಗೆ ಹೇಳುವುದಾದರೆ ತೇಜಸ್ವಿಯವರ 'ಚಿದಂಬರ ರಹಸ್ಯ'ದಲ್ಲಿ ಪ್ರಜ್ಞೆಯ ಐಕ್ಯತೆಯ ಬಾಹ್ಯ ದಿಗಂತಗಳೂ, ದೇವನೂರ ಮಹಾದೇವ ಅವರ 'ಕುಸುಮ ಬಾಲೆ'ಯಲ್ಲಿ ಪ್ರಜ್ಞೆಯ ಐಕ್ಯತೆಯ ಆಂತರಿಕ ದಿಗಂತಗಳೂ ಸಮಕಾಲೀನ ಅನುಭವದ ಹಿಂದಿನ ಸತ್ಯವನ್ನು ತೆರೆದಿಡುವ ಪ್ರಯತ್ನ ಮಾಡಿರುವುದನ್ನು ಗಮನಿಸಬಹುದು. ಚಿತ್ತಾಲರ 'ಪುರುಷೋತ್ತಮ' ಇವೆರಡರ ನಡುವೆ ಸಿಕ್ಕಿಹಾಕಿಕೊಂಡಂತೆ ತೋರುತ್ತದೆ.

ಇಷ್ಟೆಲ್ಲಾ ನಿರೂಪಿಸಿದ ಮೇಲೂ ಪ್ರಶ್ನೆಗಳು ಉಳಿದೇ ಇದೆ : ಸತ್ಯವನ್ನು ವಸ್ತುತತ್ವ ಹಾಗೂ ನೀತಿತತ್ವಗಳಾಚೆಯಿಂದ ಪ್ರಜ್ಞೆಯ ಐಕ್ಯತೆಯ ಮೂಲಕ ಗ್ರಹಿಸುವ ಶಿಸ್ತು ನಮಗೆ ಸಂಪೂರ್ಣ ಹೊಸದೇ? ವೇದಾಂತ ಧರ್ಮವನ್ನು ಪ್ರಜ್ಞಾವಿಜ್ಞಾನವನ್ನಾಗಿ ಪರಿವರ್ತಿಸಿದ ಬೌದ್ಧ ಧರ್ಮದ ಪ್ರಾತಿತ್ಯ ಸಮುತ್ಪಾದ ತತ್ವ (Doctrine of dependent origination) ಇದೇ ಅಲ್ಲವೇ? ಹಾಗೇ ವ್ಯಾಸನ ಆ 'ಮಹಾಭಾರತ'ದಿಂದ ಹಿಡಿದು ಕುವೆಂಪು ಅವರ ಈ 'ಮಲೆಗಳಲ್ಲಿ ಮದುಮಗಳು'ವರೆಗೆ ನಮ್ಮ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಪಡಿಮೂಡಿಸಿರುವ ಸಾಕ್ಷೀಭೂತ ಪ್ರಜ್ಞೆ ಎಂಬುದಾದರೂ ಯಾವುದು? ಪಾಶ್ಚಿಮಾತ್ಯ ವಿಮರ್ಶಾ ಮೀಮಾಂಸೆಯ ನೆಲೆಯಲ್ಲಿ ಕನ್ನಡದ ಕಾದಂಬರಿಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಬಹುದೇ?

ಇವೆಲ್ಲಾ ತುಂಬಾ ವೈಜ್ಞಾನಿಕ ಉತ್ತರಗಳನ್ನು ಬೇಡುತ್ತವೆ.

❑

(ಕರ್ನಾಟಕ ಸಾಹಿತ್ಯ ಅಕಾಡೆಮಿಯು ೧೯೯೨ರ ಸೆಪ್ಟಂಬರ್ ೨೦ರಂದು ಶಿವಮೊಗ್ಗದಲ್ಲಿ ಏರ್ಪಡಿಸಿದ್ದ 'ಸಾಹಿತ್ಯ ಸೃಷ್ಟಿ ಮತ್ತು ವೈಜ್ಞಾನಿಕ ಮನೋಧರ್ಮ' ಕುರಿತು ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧ)

ಕೆ. ಸತ್ಯನಾರಾಯಣರ ಎರಡು ಪುಸ್ತಕಗಳು

೧. **ಆಸಕ್ತಿ** (ಸಾಂಸ್ಕೃತಿಕ ಬರಹಗಳು)

ಪ್ರ : ಹಂಸಧ್ವನಿ ಪ್ರಕಾಶನ, ರಾಜಾಜಿನಗರ, ಬೆಂಗಳೂರು - 10

ಪು : viii + 284 ಬೆಲೆ : ರೂ. 30/- ಮತ್ತು ರೂ. 45/-

ಇಲ್ಲಿರುವ ಒಟ್ಟು ೨೩ ಲೇಖನಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದ್ದು ಮೊದಲ ಭಾಗ ಸಾಹಿತ್ಯ ತತ್ವ ವಿಶ್ಲೇಷಣೆ ಹಾಗೂ ಕೃತಿ ಪರೀಕ್ಷೆ ಸೇರಿದಂತೆ ಗಂಭೀರ ಸ್ವರೂಪದ ಸಾಹಿತ್ಯಿಕ ವಾಗ್ವಾದಗಳನ್ನೊಳಗೊಂಡಿದೆ. ಎರಡನೇ ಭಾಗ ಸ್ವಲ್ಪ ಸಾಹಿತ್ಯಿಕ ಪರಿಧಿಯಾಚೆ ಹರಿಯಲೆಣಿಸುವಂತಹ ಬರವಣಿಗೆಗಳಿಂದ ಕೂಡಿದ್ದು, ಮೂರನೆಯ ಭಾಗ ಸಂಪೂರ್ಣವಾಗಿ ಸಾಮಾಜಿಕ - ಸಾಂಸ್ಕೃತಿಕ ಎನ್ನಬಹುದಾದ ವಿಚಾರ ವಿಮರ್ಶೆಗಳಿಗೆ ಮೀಸಲಾಗಿದೆ. ಈ ಮೂರು ಭಾಗಗಳಲ್ಲಿ ಒಳಗೊಂಡಿರುವ ಲೇಖನಗಳ ಹಿಂದಿರುವ ನೋಟದ ಸಮಗ್ರತೆಯ ಪ್ರಯತ್ನವನ್ನು ಗಮನಿಸಿದಾಗ ಲೇಖನಗಳ ಈ ವಿಭಾಗೀಕರಣ ಅಗತ್ಯವಾಗಿತ್ತು ಎಂದೇನೂ ಅನ್ನಿಸುವುದಿಲ್ಲ. ಏಕೆಂದರೆ ಈ ಸಂಕಲನದ ಎಲ್ಲ ಲೇಖನಗಳ ಹಿಂದಿರುವ ಶ್ರದ್ಧೆ ಹೀಗೆ ಸಾಹಿತ್ಯಿಕ, ಸಾಮಾಜಿಕ ಅಥವಾ ಸಾಂಸ್ಕೃತಿಕವೆಂದು ವಿಭಜಿಸಲಾಗದಷ್ಟು ಏಕತ್ರವಾಗಿದೆ. ಇದೇ ಈ ಸಂಕಲನದ ಹೆಗ್ಗಳಿಕೆಯೂ ಆಗಿದೆ. ಕಳೆದೊಂದು ದಶಕದಲ್ಲಿ ಕನ್ನಡದ ಸಾಹಿತ್ಯಿಕ ವಿದ್ವದ್ವಲಯಗಳಲ್ಲಿ ಬಹು ಔಪಚಾರಿಕವಾಗಿ ಚರ್ಚಿತವಾಗುತ್ತಿದ್ದ ಅಂತರಶಾಸ್ತ್ರೀಯ ಅಧ್ಯಯನ ಈಗ ಬಹಳ ಅನೌಪಚಾರಿಕ ರೀತಿಯಲ್ಲಿ ಫಲಗಳನ್ನು ನೀಡುತ್ತಿದೆ. 'ಆಸಕ್ತಿ' ಇಂತಹ ಒಂದು ಅನೌಪಚಾರಿಕ ಫಲ.

ಇದನ್ನು ಅನೌಪಚಾರಿಕವೆಂದು ಕರೆದಿರುವುದಕ್ಕೆ ಕೆ. ಸತ್ಯನಾರಾಯಣ ಸಾಹಿತ್ಯದ ಶಾಸ್ತ್ರೀಯ ಅಧ್ಯಯನ ಕ್ಷೇತ್ರದ ಹೊರಗಿದ್ದುಕೊಂಡೇ ಬರೆದವರು ಎಂಬುದೊಂದೇ ಕಾರಣವಲ್ಲ. ಹಾಗೆ ನೋಡಿದರೆ ಅದೊಂದು ಕಾರಣವೇ ಅಲ್ಲದಿರಬಹುದು. ಸಾಹಿತ್ಯ ಕೃತಿಯೊಂದನ್ನು ಅಥವಾ ತತ್ಸಂಬಂಧಿಯಾದ ವಿಚಾರವೊಂದನ್ನು ಗಮನಿಸುವ ತೀವ್ರತೆಯಲ್ಲೇ ಅಂತರ ಶಾಸ್ತ್ರೀಯವೆನ್ನಬಹುದಾದ ನೋಟ ಹುಟ್ಟುವ ಸಹಜಪರಿ ಈ ಕೃತಿಯನ್ನು ಇಂತಹುದೇ ಇತರ ಕೃತಿಗಳಿಗಿಂತ ಬೇರೆ ಮಾಡುತ್ತದೆ. ಸಾಹಿತ್ಯ ವಿಮರ್ಶೆಯ ಪರಿಭಾಷೆಗೆ ಹಾಗೂ ರೀತಿ ನೀತಿಗಳಿಗೆ ಅಪರಿಚಿತರಾದವರು ಕೂಡಾ ಇಲ್ಲಿನ ಲೇಖನಗಳನ್ನು ಓದಿ ಆನಂದಿಸಬಹುದು

ಎಂಬರ್ಥದಲ್ಲಿ ಇದು ಅನೌಪಚಾರಿಕ ಫಲ.

ಆರ್ವೆಲ್‌ನ 'Shooting an Elephant' ಎಂಬ ಪ್ರಬಂಧವೊಂದನ್ನು ವಿಶ್ಲೇಷಿಸುತ್ತಾ ಸತ್ಯನಾರಾಯಣ ''ಒಬ್ಬ ಲೇಖಕನ ಮುಖ್ಯ ಜವಾಬ್ದಾರಿ ಎಂದರೆ ಆಯ್ಕೆ ಮಾಡುವುದು. ಆಯ್ಕೆ ಮಾಡುತ್ತಲೇ ಹೋಗುವುದು ಮತ್ತು ಅದಕ್ಕಾಗಿ ಹೆಣಗುವುದು'' ಎನ್ನುವಲ್ಲೇ ಬಹುಶಃ ತಮ್ಮ ಆಯ್ಕೆಯ ಬಗ್ಗೆಯೂ ಹೇಳುತ್ತಿದ್ದಾರೆ. ಈ ಆಯ್ಕೆಯಲ್ಲೇ ಕೃತಿಯೊಂದರ ಔಪಚಾರಿಕ ಪ್ರೇರಣೆ, ರಾಜಕೀಯ ಉದ್ದೇಶಗಳೂ ಅಂತರ್ಗತವಾಗಿ ಕೆಲಸ ಮಾಡುತ್ತಿರುತ್ತವೆ ಎಂಬ ಗ್ರಹಿಕೆಯೊಂದಿಗೇ ''ವರ್ಜೀನಿಯಾ ವುಲ್ಫ್ ಒಂದು ಸಂದರ್ಭದಲ್ಲಿ ಹೇಳಿದ ಹಾಗೆ ಜಗತ್ತಿನಲ್ಲಿ ಉಳಿದಿರುವ ಒಂದೇ ಒಂದು ಮುಖ್ಯವಾದ ಕೆಲಸವೊಂದರೆ ಒಂದೇ ಒಂದು ವಾಕ್ಯದ ಪರಿಪೂರ್ಣ ರಚನೆಗಾಗಿ ಹೆಣಗುವುದು ಮಾತ್ರ ಎನ್ನುವುದನ್ನು ಸೂಚಿಸುವಷ್ಟು ಕಲಾತ್ಮಕತೆ ಇರಬೇಕು'' ಎಂಬ ನಿರೀಕ್ಷೆಯನ್ನಿಟ್ಟುಕೊಂಡೂ ಸತ್ಯನಾರಾಯಣ ಕೃತಿ ಪರಿಶೀಲನೆ ಮಾಡುತ್ತಾರೆ. ಅವರ ಪ್ರಕಾರ ಪ್ರತಿಯೊಂದು ಶ್ರೇಷ್ಠ ಕೃತಿಯೂ ಅಖಂಡವೂ ಸ್ವಾಯತ್ತವೂ ಆಗಿರುತ್ತಿದ್ದು, ಅವನ್ನು ಆ ನೆಲೆಯಲ್ಲಿ ಪರಿಶೀಲಿಸಿದಾಗ ಮಾತ್ರ ಅವುಗಳ ಅರ್ಥ ಮತ್ತು ಮಿತಿಗಳು ಪ್ರಕಟವಾಗುತ್ತವೆ. ಸತ್ಯನಾರಾಯಣ ಅವರ ಬಹುಪಾಲು ವಿಚಾರ - ವಿಮರ್ಶೆ ಈ ಚೌಕಟ್ಟಿನಲ್ಲೇ ನಡೆದಿದೆ. ಹಾಗೆಂದೇ ಚಿತ್ತಾಲರ 'ಶಿಕಾರಿ', ಅನಂತಮೂರ್ತಿಯವರ 'ಎರಡು ದಶಕದ ಕಥೆಗಳು', ಪುಣೇಕರರ 'ಅವಧೇಶ್ವರಿ' ಹಾಗೂ ಅಡಿಗರ ಇತ್ತೀಚಿನ ಕವನಗಳು ಕುರಿತ ಇವರ ಅವೇಕ್ಷಣಗಳು ಹಾಗೂ ಅಭಿಪ್ರಾಯಗಳು ಖಚಿತವೂ ಗಮನಾರ್ಹವೂ ಆಗಿದೆ.

ಕೃತಿಯನ್ನು ಅದರ ಅಖಂಡತೆ ಹಾಗೂ ಸ್ವಾಯತ್ತತೆಯಲ್ಲೇ ಅರ್ಥೈಸಿಕೊಳ್ಳಬೇಕೆಂಬ ನಿಲುವು ವಿಮರ್ಶೆಯನ್ನೂ ಹೆಚ್ಚು ಸ್ವಾಯತ್ತವೂ ಅಖಂಡವೂ ಮಾಡಬಹುದು ನಿಜ. ಆದರೆ ಅದೇ ವೇಳೆಯಲ್ಲಿ ಈ ನಿಲುವು ವಿಮರ್ಶೆಯನ್ನು ಕೃತಿಯ ಒಂದು ಸುಂದರ ಅನುಬಂಧವನ್ನಾಗಿ ಮಾಡಿಬಿಡುವ ಅಪಾಯವನ್ನೂ ಒಳಗೊಂಡಿದೆ. ಉದಾಹರಣೆಗೆ ಲಂಕೇಶರ 'ಸಂಕ್ರಾಂತಿ' ಕುರಿತ ಸತ್ಯನಾರಾಯಣ ಅವರ ನಿರ್ಣಯಗಳು, ಈ ನಿರ್ಣಯಗಳಿಗೆ ಬಂದಿರುವ ಅವರ ವಿಮರ್ಶೆಯ ಸ್ವಾಯತ್ತತೆ ಹಾಗೂ ಅಖಂಡತೆಗಳಲ್ಲಿ ಸಮರ್ಥನೀಯವಾಗಿಯೇ ಕಾಣುತ್ತವೆ ನಿಜ. ಏಕೆಂದರೆ ಅವೆಲ್ಲಾ ಕೃತಿಯನ್ನು ಅದು ಇರುವ ಹಾಗೆ ಅಖಂಡ ಸತ್ಯವೆಂದು ಒಪ್ಪಿಕೊಂಡು ಬೆಳೆದ ವಿಮರ್ಶೆಯ ಫಲಗಳು. ಆದರೆ ಈ ನಾಟಕದ ಉಜ್ಜ ನಿಜವಾಗಿರಬೇಕಾದರೆ ಆ ಉಜ್ಜನ ಸೃಷ್ಟಿಗೆ ಕಾರಣವಾದ ಬಸವ, ಬಿಜ್ಜಳ, ರುದ್ರ, ಉಷಾ ಇವರೆಲ್ಲರೂ ನಿಜವಾಗಿರಬೇಕಾಗುತ್ತದೆ. ಹಾಗೇ ಅವರೆಲ್ಲ ಸೇರಿ ಸೃಷ್ಟಿಸುವ ನಾಟಕ ಕೂಡಾ. ಆದರೆ ಈ ಪ್ರಶ್ನೆ ಇಲ್ಲಿ ಚರ್ಚೆಗೇ ಬರುವುದಿಲ್ಲ. ಸಾಹಿತ್ಯ ಪ್ರಪಂಚವೇ ಪ್ರಪಂಚವಲ್ಲವಲ್ಲ? ಸಾಹಿತ್ಯ ತನ್ಮಯತೆ ಪ್ರಪಂಚವನ್ನು ಮರೆಸುವ ತನ್ಮಯತೆ ಆಗಬಾರದಲ್ಲ? ಹಾಗೇನಾದರೂ ಆದರೆ ಸಾಹಿತ್ಯ ಅಫೀಮಿಗಿಂತ ಹೆಚ್ಚಿನ ವಸ್ತುವಾಗೇನೂ ಉಳಿಯಲಾರದು.

ಸತ್ಯನಾರಾಯಣ ಅವರಿಗೆ ಇದೆಲ್ಲಾ ಗೊತ್ತಿಲ್ಲದ ವಿಚಾರವೇನಲ್ಲ. ''ಸಾಹಿತ್ಯದಲ್ಲಿ ಸಮೀಕರಣಗಳು'' ಎಂಬ, ಪುಸ್ತಕದ ಪೀಠಿಕಾ ಲೇಖನದಲ್ಲೇ ಲಯನೋಲ್ ಟ್ರಿಲ್ಲಿಂಗ್ ಹಾಗೂ

ಲಿಯೋ ಲೊವೆಂಥಾಲ್‌ರ ವಿಚಾರಗಳ ಬೆಳಕಿನಲ್ಲಿ ಇದೇ ಪ್ರಶ್ನೆಯನ್ನು ಸವಿಸ್ತಾರವಾಗಿ ಚರ್ಚಿಸುತ್ತಾ ''ಈಗಾಗಲೇ ತಿಳಿದಿರುವ ವಾಸ್ತವವನ್ನೇ ನಾವು ಮತ್ತೆ ಮತ್ತೆ ಬಯಸುವುದರಿಂದ ನಮ್ಮ social sympathies ಬಲು ಚುರುಕಾಗಿದೆಯೆಂದು ಅನ್ನಿಸುತ್ತಿದ್ದರೂ ನಿರ್ದಿಷ್ಟವಾದ ವ್ಯಕ್ತಿಗಳನ್ನು ಆಳವಾಗಿ ಪ್ರೀತಿಸುವ ಶಕ್ತಿಯನ್ನೇ ನಾವು ಕಳೆದುಕೊಳ್ಳುತ್ತಾ ಹೋಗುತ್ತೇವೆ'' ಎಂಬುದನ್ನೂ ಗಮನಿಸಿದ್ದಾರೆ. ಆದರೆ ರಾಮಕೃಷ್ಣ ಪರಮಹಂಸರ ನೀತಿಕಥೆಯೊಂದರಲ್ಲಿ ಬರುವ ಅರಮನೆಯ ಭಾಗವತರಂತೆ ಎಲ್ಲವನ್ನೂ ಮಾಹಿತಿಯ ಮಟ್ಟದಲ್ಲೇ ಉಳಿಸಿ ಕೊಳ್ಳುತ್ತಾರೆ. ಅದಕ್ಕೇ ಇದೇ ಲೇಖನದಲ್ಲಿ ಬಹುಮುಖ್ಯ ಹಾಗೂ ನಿರ್ಣಾಯಕವಾಗಬಹುದಿದ್ದ 'ವಾಸ್ತವವನ್ನು ಸಾಮೂಹಿಕ ನೆಲೆಯಲ್ಲಿ ಗ್ರಹಿಸುವ ಪ್ರಕ್ರಿಯೆಯಲ್ಲಿ ಚಲನಶೀಲತೆ ಏಕೆ ಬತ್ತಿಹೋಗಿದೆ?' ಎಂಬ ಪ್ರಶ್ನೆ ಚರ್ಚೆಗೇ ಬರುವುದಿಲ್ಲ. ಈ ಸಂಬಂಧವಾಗಿ ಯಂತ್ರ ನಾಗರೀಕತೆಯ ಆಶಯದ ಬಗ್ಗೆ ಲೇಖಕರಿಗೆ ಅನುಮಾನವಿದೆಯಾದರೂ ಅದು, ಅವರು ಬಹುವಾಗಿ ಪ್ರಸ್ತಾಪಿಸುವ ಮನುಷ್ಯನ ಅನನ್ಯತೆಯನ್ನು ಮಸುಕು ಮಾಡಬಲ್ಲ ದೈತ್ಯಶಕ್ತಿಯಾಗಿದೆ ಎಂಬ ಬಗ್ಗೆಯೂ ಅನುಮಾನವಿದೆ. ಈ ಕಾರಣದಿಂದಲೇ ಅವನತಿಯ ಹಾದಿಯಲ್ಲಿದೆಯೆಂದು ತೋರುವ ಹಳ್ಳಿಗಳನ್ನು ಚಿತ್ರಿಸುವ ಕಾದಂಬರಿಗಳ ಒಟ್ಟು ಧೋರಣೆ ಬಗ್ಗೆ ಇವರಿಗೆ ಭಿನ್ನಾಭಿಪ್ರಾಯವಿದೆ. ಅದಕ್ಕೇ ಬಾಡುವ ಕೆಸರೂರನ್ನು ಕಂಡರಿಸುವ 'ಚಿದಂಬರ ರಹಸ್ಯ'ಕ್ಕಿಂತ ಅರಳುವ ಮಾದಳ್ಳಿಯನ್ನು ಕಂಡರಿಸುವ 'ಭುಜಂಗಯ್ಯನ ದಶಾವತಾರಗಳು' ಇವರಿಗೆ ಹೆಚ್ಚು ಪ್ರಿಯವೂ ಅರ್ಥಪೂರ್ಣವಾಗಿಯೂ ಕಂಡಿವೆ. ಆದರೆ ಮಾದಳ್ಳಿ ಹಾಗೂ ಕೆಸರೂರು ಇವುಗಳಲ್ಲಿ ಈಗ ನನ್ನ ಹಳ್ಳಿಗೇ ಹೋಲಿಸಿದಂತೆ ಯಾವುದು ಹೆಚ್ಚು ನಿಜ ಎನ್ನಿಸುತ್ತದೆ? ಗ್ರಹಿಕೆಯ ಎರಡೂ ಬದಿಗಳಲ್ಲಿ ಅನುಮಾನಗಳೇ ಇದ್ದಾಗ ಇಂತಹ ಪ್ರಶ್ನೆಗಳಿಗೆ ಉತ್ತರ ದೊರಕುವುದು ಕಷ್ಟ. ಆದರೆ ಇಂತಹ ವಾಸ್ತವದ ಪ್ರಶ್ನೆಗಳೊಂದಿಗೆ ಹೆಣಗದ ವಿಮರ್ಶೆ ಅಥವಾ ವಿಚಾರ ಅನುಮಾನಾಸ್ಪದವಾಗಿಯೇ ಉಳಿಯುತ್ತವೆ. ಗಾಂಧೀಜಿ ಕುರಿತ ಸತ್ಯನಾರಾಯಣ ಅವರ ಎರಡು ಬರಹಗಳೂ ಇದೇ ಕಾರಣದಿಂದಾಗಿ, ಅವುಗಳ ತನ್ನೆಲ್ಲಾ ಲವಲವಿಕೆಯ ವಿಶ್ಲೇಷಣೆ, ನಿರೂಪಣೆಗಳ ಹೊರತಾಗಿಯೂ, ಅಂತಿಮ ನೋಟದಲ್ಲಿ 'ಗಾಂಧೀಜಿಯ ಇನ್ನೊಂದೆರಡು ಸ್ಮರಣೆ'ಗಳಾಗಿ ಮಾತ್ರ ಕಾಣುತ್ತವೆ.

ಸಮೂಹ ಮಾಧ್ಯಮಗಳು ವಾಸ್ತವವನ್ನು ಮಾದರೀಕರಿಸುವ ಅಪಾಯದ ಅರಿವಿರುವ ಸತ್ಯನಾರಾಯಣ ಅವರೇ ಅದಕ್ಕೆ ಬಲಿಯಾದುದರ ಉದಾಹರಣೆಯಂತಿದೆ ಕುವೆಂಪುರವರ 'ನೆನಪಿನ ದೋಣಿಯಲ್ಲಿ' ಕುರಿತ ಅವರ ಬರಹ. ಕುವೆಂಪು ಅವರ ಈ ಕೃತಿಯನ್ನು 'ಆತ್ಮಕತೆ'ಯೆಂದೇ ಗ್ರಹಿಸಿ ಅದನ್ನು ಪಶ್ಚಿಮದ ಆತ್ಮಕತೆಗಳೊಡನೆ ಮತ್ತು ಅವುಗಳಿಂದ ಹುಟ್ಟಿದ ಮೀಮಾಂಸೆಯೊಡನೆ ತೂಗಿ ನೋಡಿ ನಿರ್ಣಯಗಳಿಗೆ ಬರುತ್ತಾರೆ. ಆದರೆ 'ನೆನಪಿನ ದೋಣಿಯಲ್ಲಿ' ಮೊದಲಾಗಿ ಆತ್ಮಕತೆಯೇ? ಕುವೆಂಪು ಅದನ್ನು ಆತ್ಮಕತೆಯೆಂದು ಬರೆದಿದ್ದಾರೆಯೇ? ಕೃತಿಯನ್ನು ಓದಿದಾಗಲೂ ಅದು ಆತ್ಮಕತೆಯ ರೂಪದಲ್ಲಿದೆ ಅನ್ನಿಸುತ್ತದೆಯೇ? ಪುಸ್ತಕವನ್ನು ಕುರಿತ ಮಾಹಿತಿಯಲ್ಲೇ ಇದನ್ನು 'Reminisences' ಎಂದು

ಕರೆಯಲಾಗಿದೆ. ಕೃತಿಕಾರ ಕೂಡಾ ಮೊದಲ ಪುಟದಲ್ಲೇ ತನ್ನ ಒಂದು ಪದ್ಯದ ಉಲ್ಲೇಖದೊಡನೆ ಕೃತಿಯ ರೂಪದ ಪರಿಚಯ ಮಾಡಿದ್ದಾರೆ. ಸತ್ಯನಾರಾಯಣ ಸಮೂಹ ಮಾಧ್ಯಮಗಳಂತೆ ದೇಜಗೌ ಅವರ ಮುನ್ನುಡಿಯನ್ನೇ ನಂಬಿ, ವಿಮರ್ಶೆಗೆ ಹೊರಟಂತಿದೆ.

ಸಾಹಿತ್ಯ ಬೆಳೆದಂತೆ ವಿಮರ್ಶೆಯ ಜವಾಬ್ದಾರಿಗಳೂ ಹೆಚ್ಚುತ್ತಾ ಹೋಗುತ್ತವೆ. ಹಳೆಯ ನಂಬಿಕೆಗಳು ಹಾಗೂ ಮಾನಸಿಕ ರಚನೆಗಳು ಬಿಟ್ಟೆನೆಂದರೂ ಬಿಡದೆ ಕಾಡುತ್ತವೆ. ನಮ್ಮ ನಿಜ ಬದುಕನ್ನು ಕಾಡುವ ಇಂತಹ ನಂಬಿಕೆ ಹಾಗೂ ಮಾನಸಿಕ ರಚನೆಗಳನ್ನು ನಿವಾರಿಸಿಕೊಳ್ಳುವಲ್ಲಿ ನಾವು ತೋರುವ ಶ್ರದ್ಧೆ ಹಾಗೂ ಪ್ರಾಮಾಣಿಕತೆಗಳೊಡನೆಯೇ ಸಾಹಿತ್ಯ ಕೃತಿಗಳನ್ನೂ ಪರಿಶೀಲಿಸ ಬೇಕೆಂಬ ಜೀವಂತ ಎಚ್ಚರ ಮಾತ್ರ ಸಾಹಿತ್ಯ ವಿಮರ್ಶೆಯನ್ನು ಸಾಹಿತ್ಯ ಕೃತಿಗಳಂತೆಯೇ ಸ್ವಾಯತ್ತ ಹಾಗೂ ಅಖಂಡ ಮಾಡಬಲ್ಲವು. ಕೆ. ಸತ್ಯನಾರಾಯಣ ಅವರ 'ಆಸಕ್ತಿ'ಯ ಗಮನವಂತೂ ಆ ದಿಕ್ಕಿನಲ್ಲೇ ಇದೆ - ''ನಡೆವವರೆಡಹದೇ ಕುಳಿತವರೆಡಹುವರೇ?''

೨. ವಿಕ್ಟೋರಿಯಾ ಮಗ ದೇವಲಿಂಗು (ಕಥೆಗಳು)

ಪ್ರ : ನುಡಿ ಪ್ರಕಾಶನ, ಬೆಂಗಳೂರು - ೨೮

ಪುಟಗಳು : ೧೩೩ ಬೆಲೆ : ರೂ. ೬೦/-

ಮಾಸ್ತಿ ಕಥೆಗಾರಿಕೆಯನ್ನು ಬಹುವಾಗಿ ಮೆಚ್ಚುತ್ತಾ ತಮ್ಮ ಕಥನ ಕಲೆಯನ್ನು ರೂಢಿಸಿಕೊಂಡ ಕೆ. ಸತ್ಯನಾರಾಯಣ ಅವರ ಮೊದಲ ಕಥಾಸಂಕಲನದಲ್ಲಿ ('ನಿಮ್ಮ ಮೊದಲ ಪ್ರೇಮದ ಕಥೆ' (೧೯೯೩) ಮಾಸ್ತಿ ಕಥೆಗಾರಿಕೆಯ ಪ್ರಭಾವ ಢಾಳಾಗಿ ಕಾಣುತ್ತಿತ್ತು. ಮಾಸ್ತಿ ಕಥೆಗಳನ್ನು ಹೇಳುತ್ತಿರಲಿಲ್ಲ, ದಾಟಿಸುತ್ತಿದ್ದರು ಎಂದು ನಂಬುವ ಸತ್ಯನಾರಾಯಣ ಈ ದಾಟಿಸುವ ಕ್ರಿಯೆಯಲ್ಲಿ ಕಥೆ ಅರ್ಥ ಪಡೆದುಕೊಳ್ಳುತ್ತದೆ ಎಂದು ಕಂಡುಕೊಂಡವರು. ತಮ್ಮ ಮೊದಲ ಕಥೆಗಳಲ್ಲಿ ಈ ಥರದ ಪ್ರಯೋಗ ಮಾಡಿ ಕುತೂಹಲ ಹುಟ್ಟಿಸಿದ್ದ ಇವರು ಈ ಸಂಕಲನದಲ್ಲಿ ಪ್ರಯೋಗಶೀಲತೆಯ ಹಂತವನ್ನು ದಾಟಿ ಈ ಶೈಲಿಯನ್ನು ತಮ್ಮದೇ ರೀತಿಯಲ್ಲಿ ಪಳಗಿಸುವ ಪ್ರಯತ್ನಗಳನ್ನು ಮಾಡಿದ್ದಾರೆ.

ಇದಕ್ಕೆ ಉದಾಹರಣೆಯಾಗಿ ಈ ಸಂಕಲನದ 'ನಡೆಯುತ್ತಿತ್ತ; ಕತೆ. ಬೆಳೆಯುತ್ತಿತ್ತ' ಹಾಗೂ 'ಹೀಗಿಲ್ಲಿ ಅಮೇರಿಕಾ' - ಈ ಎರಡು ಕಥೆಗಳನ್ನು ನೋಡಬಹುದು. 'ನಡೆಯುತ್ತಿತ್ತ ; ಕತೆ ಬೆಳೆಯುತ್ತಿತ್ತ' ಕಥೆ ದಾಟಿಸುವ ಮಾಸ್ತಿ ಪರಂಪರೆಯನ್ನು ತಂತ್ರವಾಗಿ ಮಾತ್ರ ಮುಂದುವರೆಸದೆ, ಅದನ್ನು ಈ ಕಾಲದ - ಈವೊತ್ತಿನ ಕಥೆ ದಾಟಿಸಲು ಮತ್ತು ಇಂಥ ಕಥೆಗಾಗಿಯೇ ಇಡಿಯಾಗಿ ಪುನರ್ವಿನ್ಯಾಸಗೊಳಿಸಿದ್ದರ ಸೃಜನಶೀಲ ಉದಾಹರಣೆಯಾಗಿ ನಮ್ಮನ್ನು ಸೆಳೆಯುತ್ತದೆ. ಜೆ.ಕೆ. (ಜಿಡ್ಡು ಕೃಷ್ಣಮೂರ್ತಿ) ಒಂದು ವೈಚಾರಿಕ ಆಕೃತಿಯೋ, ಜೀವಂತ ಸ್ಪಂದನವೋ (ಭೂಪಟವೋ, ಭೂಮಿಯೋ) ಎಂಬ ಪ್ರಶ್ನೆಯನ್ನು ಅರಿವು ಮರೆವುಗಳ ಸಂದಿಯಲ್ಲಿ ಬಿಡಿಸುವ - ಬುದ್ಧಿ ಭಾವಗಳೆರಡನ್ನೂ ಬೇಡುವ - ಸಾಹಸವನ್ನು ಮೂರ್ತಿಕರಿಸುವ

ಈ ಕಥೆ; ಇನ್ನೊಂದು ಹಂತದಲ್ಲಿ ಕಥೆ ಎಂಬುದು ಅರಿವೋ ಮರೆವೋ ಎಂಬ ಪ್ರಶ್ನೆಯನ್ನು ನಿರ್ವಹಿಸುತ್ತಾ, ಮಾಸ್ತಿ ಕಥಾ ಮೀಮಾಂಸೆಗೆ ನಮ್ಮ ಕಾಲಕ್ಕೆ ವಿಶಿಷ್ಟವಾದ ಒಂದು ಹೊಸ ಆಯಾಮವನ್ನು ಕಲ್ಪಿಸುತ್ತದೆ. ಈ ಕಥೆಯಲ್ಲಿ ಬರುವವರೆಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಜೆ.ಕೆ. ಪ್ರಭಾವಲಯದಲ್ಲಿದ್ದವರೇ. ಆದರೆ ಜೆ.ಕೆ. ಅವರ ನಡೆ - ನುಡಿಗಳು ಈ ಒಬ್ಬೊಬ್ಬರ ವ್ಯಕ್ತಿತ್ವದ ಕನ್ನಡಿಯಲ್ಲೂ ಒಂದೊಂದು ರೀತಿಯಲ್ಲಿ ಪ್ರತಿಫಲನಗೊಳ್ಳುತ್ತವೆ. ಹೀಗೆ ಜೆ.ಕೆ. ನಿಜವಾಗಿ ಏನು ಎಂಬುದು ಅವರವರ ನಿಜದಲ್ಲೇ ಸಾಕ್ಷಾತ್ಕಾರವಾಗಬೇಕಾದದ್ದು ಎಂಬ (ಜೆ.ಕೆ.ಯದ್ದೇ) ಸತ್ಯವನ್ನು ಈ ಕಥೆ ಪರೋಕ್ಷವಾಗಿ ಹೊಳೆಸುತ್ತಲೇ; ಇದು ಕಥೆ - ಅಂದರೆ ಪ್ರತಿಬಿಂಬ ಮಾತ್ರ; ಇದರಾಚೆಗೂ ಚಾಚಿದ್ದಿದೆ ನಮ್ಮದೇ ಜೀವನವೆಂಬ ಬಿಂಬ ಎಂದು ಧ್ವನಿಸುವ 'ಕತೆ ಇಷ್ಟೆ; ಮುಂದೆ ಜೀವನ' ಎಂಬ ಅಧ್ಯಾಯದೊಂದಿಗೆ ಮುಗಿಯುತ್ತದೆ. ಈ ಕಥೆಯ ಆರಂಭದಲ್ಲಿ ಜೆ.ಕೆ. ವಿಚಾರಗಳ ಕಲಿಕೆಯ ಭಾರದಿಂದಾಗಿ ಕೀರಿಮೆಯಿಂದ ನರಳುವ ಕಥೆಗಾರ, ಕಥೆ ಮುಗಿದು ಅದರಾಚೆ ಜೀವನ ಆರಂಭವಾಗುವ ಹೊತ್ತಿಗೆ ಎಲ್ಲ ಕೀಳರಿಮೆ ಕಳೆದುಕೊಂಡಿರುತ್ತಾನೆ. ಹೀಗೆ, ಕಥೆಯನ್ನು ದಾಟಿಸುವುದೆಂದರೆ ತಾನು ಕೂಡಾ ಅದನ್ನು ದಾಟುವುದೂ ಆಗುತ್ತದೆ ಎಂಬುದನ್ನು ಸೂಚಿಸುವ ಮೂಲಕ, ಈ ಕಥೆ ಮಾಸ್ತಿ ಪರಂಪರೆಯನ್ನು ತನ್ನದೇ ರೀತಿಯಲ್ಲಿ ಮುಂದುವರಿಸುತ್ತದೆ.

'ಹೀಗಿಲ್ಲಿ ಅಮೇರಿಕಾ' ಇಷ್ಟು ಸಂಕೀರ್ಣ ಕಥೆಯಲ್ಲ. ಇದೂ ಕೂಡಾ ಮಾಸ್ತಿ ಪರಂಪರೆಯ ದಾಟಿಸುವ ಕ್ರಿಯೆಯಲ್ಲಿಯೇ ಕಟ್ಟಿಕೊಳ್ಳುವ ಕಥೆಯಾದರೂ, 'ನಡೆಯುತ್ತಿತ್ತ ; ಕತೆ ಬೆಳೆಯುತ್ತಿತ್ತ' ಕಥೆಯಂತೆ ವೈಯಕ್ತಿಕ ನೆಲೆಗಳಲ್ಲಿ ಮಾತ್ರ ಕ್ರಿಯಾಶೀಲವಾಗುವ ಕಥೆಯಲ್ಲ. ಅಲ್ಲಿ ಜೆ.ಕೆ. ಇದ್ದರೆ, ಇಲ್ಲಿ ಅಮೇರಿಕಾ. ಆಧುನಿಕ ನಾಗರಿಕತೆಯ ಯಶಸ್ಸಿನ ಸಂಕೇತವೆಂದು ತೋರುವ ಇದನ್ನು ನಾವು ಒಂದು ಸಮಾಜವಾಗಿ, ರಾಷ್ಟ್ರವಾಗಿ ಗ್ರಹಿಸಿರುವುದರಲ್ಲಿ ಅರಿವೆಷ್ಟಿದೆ, ಮರೆವೆಷ್ಟಿದೆ ಎಂಬುದನ್ನು ಈ ಕಥೆ, ಅಮೇರಿಕಾಕ್ಕೆ ಹೆಮ್ಮೆ ಸಂಭ್ರಮಗಳಿಂದ ಕಳಿಸಲ್ಪಟ್ಟ ಹಳ್ಳಿಯ ಶ್ರೀಮಂತ ಮನೆತನದ ಸಾವಿತ್ರಿ ಎಂಬ ಹೆಣ್ಣು ಮಗಳೊಬ್ಬಳು ಅಲ್ಲಿ ಪಟ್ಟ ಪಾಡನ್ನೂ, ಹಾಗೂ ಅಲ್ಲಿಂದ ಇಲ್ಲಿಗೆ ಬಂದು ಪಡುವ ಪಡಿಪಾಟಲನ್ನೂ ಮತ್ತು ಆ ಮೂಲಕ ಆಕೆಯ ವ್ಯಕ್ತಿತ್ವ ಪಡೆವ ನವ ಗಾಂಭೀರ್ಯವನ್ನೂ, ವಿಷಾದ ಬೆರೆತ ನಿರ್ಲಿಪ್ತಿಯಿಂದ ಪರಿಶೀಲಿಸುತ್ತದೆ. ಇಲ್ಲಿ ಈ ಕಥೆಯನ್ನು, ಕೆಂಟುಕಿ ಚಿಕನ್ ಅಂಗಡಿಯ ಮೇಲೆ ನಡೆಯುವ ದಾಳಿಯ ಸಂದರ್ಭದಲ್ಲಿ ಇನ್ನೊಬ್ಬರ ಮೂಲಕ ಕೇಳಿಸಿಕೊಳ್ಳುವ ಹಾಗೂ ಆ ಇನ್ನೊಬ್ಬರು ಕಥೆ ಹೇಳುವ ಕ್ರಿಯೆಯ ಭಾಗವಾಗಿಯೇ ಮಾಡುವ ವ್ಯಾಖ್ಯಾನದೊಂದಿಗೆ ನಿರೂಪಿಸುವ ಮೂಲಕ, ರಾಜಕೀಯ ನೆಲೆಗೂ ಒಯ್ಯುತ್ತಾರೆ. ಆದರೆ ಮತ್ತೆ ಕೊನೆಗೆ ಕಥೆ ಮುಗಿಯುವುದು ಈ ಎಲ್ಲ ರಾಜಕೀಯ, ಸಾಮಾಜಿಕ ವ್ಯಾಖ್ಯಾನಗಳನ್ನು ಮೀರಿದ, ಕಥೆಯಾಚೆಗೆ ಚಾಚಿದ ವೈಯಕ್ತಿಕ ಸ್ಪಂದನದಲ್ಲಿ ಸ್ಥಿತಗೊಂಡ ಪ್ರಶ್ನೆಯೊಂದಿಗೇ : 'ಈಗ ನನ್ನ ಕುತೂಹಲ ಸಾವಿತ್ರಿಯ ಈ ಕತೆ ಓದಿದವರು ಅವಳ ಕಷ್ಟಕ್ಕೆ ಮರುಗುತ್ತಾರೋ ಇಲ್ಲವೋ ಎಂಬುದರಲ್ಲಲ್ಲ. ಸಾವಿತ್ರಿ ನಮಗೆ ಸಿಕ್ಕೇ ಬಿಟ್ಟು ಮುಂದೊಂದು ದಿನ ರೈತಸಂಘದವರು, ಪರಿಸರವಾದಿಗಳು ಅಮೇರಿಕಾದ ಚಿಕನ್ ಕಂಪನಿಯ ಮೇಲೋ,

ಚಿಪ್ಸ್ ಕಂಪನಿಯ ಮೇಲೋ, ಕೋಲಾ ಕಂಪನಿಯ ಮೇಲೋ ಪ್ರತಿಭಟನೆ ಮಾಡುವಾಗ ನಡೆಸುವ ಸಭೆಯಲ್ಲಿ ಅವಳನ್ನು ಮಾತಾಡಬೇಕು, ಮಾತಾಡಲೇಬೇಕು ಅಂತ ಕೇಳಿದರೆ ಆಕೆ ಏನು ಭಾಷಣ ಮಾಡಬಹುದು ಅಂತ...'

ಹೀಗೆ ಈ ಎರಡು ಕಥೆಗಳು ನಮ್ಮ ಕಾಲದ, ನಮ್ಮದೇ ತಲೆಮಾರಿನ ಕಥೆಗಳನ್ನು, ಮಾಸ್ತಿಯಂತೆ ಕಥೆಯೊಳಗೆ ಇದ್ದೂ ಇಲ್ಲದಂತೆ ಹೇಳುವ ಕಲೆಗಾರಿಕೆಯನ್ನು ಪ್ರದರ್ಶಿಸುವ ಮೂಲಕ, ಮಾಸ್ತಿ ಪರಂಪರೆಯನ್ನು ಹೊಸ ನೆಲೆಗಳಿಗೆ ವಿಸ್ತರಿಸುವುದನ್ನು ನಾವು ಕಾಣುತ್ತೇವೆ.

ಈ ಎರಡೂ ಕಥೆಗಳಲ್ಲಿ ಕಥೆಯ ಹೃದಯದಲ್ಲಿರುವವರು ಹೆಂಗಸರು - ಗಾಯತ್ರಿ ಹಾಗೂ ಸಾವಿತ್ರಿ - ಎಂಬುದರ ಎಳೆ ಹಿಡಿದುಕೊಂಡು ನಾವು ಸತ್ಯನಾರಾಯಣರ ಇನ್ನೂ ನಾಲ್ಕು ಕಥೆಗಳ ಸ್ಪಂದನಶೀಲತೆಯ ರಹಸ್ಯಗಳನ್ನು ಗುರುತಿಸಬಹುದೆಂದೆನಿಸುತ್ತದೆ. ನಗರ ಬದುಕಿನ ಉದ್ಯೋಗಸ್ಥ ಹೆಣ್ಣುಮಗಳೊಬ್ಬಳ ಅಂತರಾಳದ ಸಣ್ಣ ಹಂಬಲದ, ಮುಗಿಯದ ಕಥೆಯನ್ನು ಲಲಿತ ಪ್ರಬಂಧ ಲಹರಿಯಲ್ಲಿ ಹೇಳುವ ಮೂಲಕ, ಅಂಥ ಬದುಕಿನ ಸೂಕ್ಷ್ಮ ಸಮತೋಲನವನ್ನು ಹಿಡಿದಿಡುವ 'ಸೈಕಲ್ ಇನ್ನೊಂದು ಸಾಕು' : ಆಧುನೀಕರಣದ ಅಬ್ಬರದಲ್ಲಿ ಕಳೆದುಹೋಗುತ್ತಿರುವ ಸೂಕ್ಷ್ಮ ಸಂವೇದನೆಗಳನ್ನು, ಅವು ಕಳೆದು ಹೋಗುತ್ತಿವೆ ಎಂಬುದನ್ನೂ ಗುರುತಿಸಲಾಗದಷ್ಟು ರೂಕ್ಷವಾಗುತ್ತಿರುವ ಪರಿಸರದ ಥಣ್ಣನೆಯ ದುರಂತವನ್ನು, ಅಷ್ಟೇ ಥಣ್ಣಗೆ ಚಿತ್ರಿಸುವ, 'ಮಿಸೆಸ್ ಡೆತ್ ಅಮ್ಮನ ಸಾವು' ; ಸಂಪ್ರದಾಯಸ್ಥ ನೆಂಟರಿಸ್ಟರ ಕಟು ಟೀಕೆ ದೂಷಣೆಗಳ ನಡುವೆಯೂ, ತಮ್ಮಷ್ಟಕ್ಕೆ ತಾವು ಪರಸ್ಪರ ಸಂಗಾತಿಗಳಾಗಿ, ಬದುಕಿನ ಕಳೆದುಹೋಗಿದ್ದ ಚೆಲುವನ್ನು ಪುನರಾವಿಷ್ಕರಿಸಿಕೊಳ್ಳುವ, ಹಿರಿಯರಿಬ್ಬರ ಮೌನ ಕ್ರಾಂತಿಯ ಕಥೆಯನ್ನು ಲೋಕಾಭಿರಾಮವಾಗಿ ಹೇಳುವ 'ಹೀಗೂ ಉಂಟೆ ಪ್ರೇಮದ ಶೈಲಿ' ಹಾಗೂ ರಾಷ್ಟ್ರದ ಒಂದು ತಲೆಮಾರಿನ ರಾಜಕಾರಣದ ಸಾರ್ಥಕತೆಯನ್ನು ಒಬ್ಬ ಸಾಮಾನ್ಯ ಹೆಣ್ಣುಮಗಳೊಬ್ಬಳ ಸಾಮಾನ್ಯದ ವಿವೇಕದ ಮಾತುಗಳ ಮೂಲಕ ಮರುಪರಿಶೀಲನೆಗೆ ಒಡ್ಡುವ ಸಾಹಸವನ್ನು, ಸಂಜೆಗಣ್ಣಿನ ವ್ಯವಧಾನದ ಶೈಲಿಯಲ್ಲಿ ಸಮರ್ಥವಾಗಿ ನಿರ್ವಹಿಸುವ 'ಲೋಕನಾಯಕರ ಮೇಲುಕೋಟೆ ಪುರಾಣ' ಕಥೆಗಳ ಭಾವಕೇಂದ್ರದಲ್ಲಿರುವವರು ಹೆಣ್ಣುಗಳೇ. ಬದುಕಿನಂತೆ ಕಥೆಗೆ ಕೂಡಾ ಧಾರಣ ಶಕ್ತಿ ನೀಡುವುದು ಹೆಣ್ತನವೇ ಎಂಬುದು, ಸತ್ಯನಾರಾಯಣ ಅವರು ತಮ್ಮ ಕಥಾ ಕಲೆಗಾರಿಕೆಯ ಮೂಲಕ ಕಂಡುಕೊಂಡಿರುವ ಸತ್ಯವಿರಬಹುದು. ಇದು ಮೂಲತಃ ಲೋಕವನ್ನು ಪ್ರೀತಿಯಿಂದ, ಸಹಾನುಭೂತಿಯಿಂದ ಕಾಣಬೇಕೆಂಬ; ಆ ಕಾಣುವ ಕ್ರಿಯೆಯ ಭಾಗವಾಗಿಯೇ ಕಥೆ ಮೂಡಿ ಬರಬೇಕೆಂಬ, ಮಾಸ್ತಿ ಕಥಾಧರ್ಮದ ತತ್ವವೇ ಆಗಿದೆ. ಇದಕ್ಕೆ ಪೂರಕವಾಗಿ ಬರುವುದು, ಕಥಾ ಸಂದರ್ಭದ ಪ್ರತಿಯೊಂದು ಸನ್ನಿವೇಶವನ್ನೂ - ಅಕ್ಕಪಕ್ಕದಲ್ಲಿರುವ ಅದರ ಎಲ್ಲ ಸಣ್ಣ ಅಥೆಂಟಿಕ್ ವಿವರಗಳೊಂದಿಗೆ - ಅವು ಕೂಡಾ ಬಹು ಮುಖ್ಯ ಎಂಬ ತುರ್ತಿನೊಂದಿಗೆ ಮಂಡಿಸುವ ಸತ್ಯನಾರಾಯಣ ಅವರ ತುಂಬು ಸಡಗರದ ಶೈಲಿ - ಕೆಲವು ಕಡೆ, ನವಮಧ್ಯಮ ವರ್ಗಕ್ಕೇ ವಿಶಿಷ್ಟವಾದ ಈ ಸಡಗರವು, ಕಥೆಗಾರನ ಅತಿಯಾದ ಪ್ರವೇಶ, ಮಾತು ಹಾಗೂ ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಡುತ್ತದೆ ಎನ್ನಿಸುವುದಾದರೂ.

ಈ ಶೈಲಿ, ವರ್ಗಸ್ಥಿತನಾದ ಸತ್ಯನಾರಾಯಣರಂಥ ಲೇಖಕನಿಗೆ (ಇದನ್ನು ಅವರು ತಮ್ಮ ಕಥೆಗಳ ಮಧ್ಯಂತರ ಪ್ರವೇಶಗಳಲ್ಲಿಯೇ ಸೂಚಿಸಿಕೊಂಡಿದ್ದಾರೆ) ಸ್ವಲ್ಪ ಅಪಾಯದ ಶೈಲಿಯೇ. ಸ್ವಲ್ಪ ಹದ ತಪ್ಪಿದರೆ ಈ ಶೈಲಿ ಬರೀ ಉಡಾಫೆಯ ಮಟ್ಟಕ್ಕಿಳಿಯುವ, ಕೇವಲ ಬೌದ್ಧಿಕ ಕಸರತ್ತಿನಂತೆ ಕಾಣಿಸುವ, ಜಾಣ ಮಾತುಗಾರನ ಸಾಂಸ್ಕೃತಿಕ ಹರಿಕಥೆಯಂತೆ ಕೇಳಿಸುವ, ಕಥೆಗಳನ್ನು ಸೃಷ್ಟಿಸಬಲ್ಲದು. ಈ ಸಂಕಲನದ ಮಿಕ್ಕ ಕಥೆಗಳು ಇದಕ್ಕೆ ವಿವಿಧ ರೀತಿಯ ಉದಾಹರಣೆಗಳಂತಿವೆ. ಈ ಸಂಕಲನದ ಶೀರ್ಷಿಕಾ ಕಥೆಯಾದ 'ವಿಕ್ಟೋರಿಯಾ ಮಗ ದೇವಲಿಂಗು'ವನ್ನೇ ತೆಗೆದುಕೊಳ್ಳಿ. ಇಲ್ಲಿ ನಮ್ಮ ಪಾರಂಪರಿಕ ಕಥೆಗಾರಿಕೆಗೆ ಒದಗಿರುವ ಸಾಂಸ್ಕೃತಿಕ ಬಿಕ್ಕಟ್ಟನ್ನು ಸತ್ಯನಾರಾಯಣ, ತಮ್ಮದೇ ವಿಶಿಷ್ಟ ವಾಸ್ತವವಾದೀ ಸಡಗರದ ಶೈಲಿಯಲ್ಲಿ ಸಾಂಕೇತಿಕವಾಗಿ ಹೇಳಲು ಹೋಗಿ, ಒಂದು ಬೌದ್ಧಿಕ ಗೊಂದಲ ಸೃಷ್ಟಿಸುವುದರಲ್ಲಷ್ಟೇ ಯಶಸ್ವಿಯಾಗುತ್ತಾರೆ. ಇಲ್ಲಿ ಶೈಲಿಯ ಬಿಕ್ಕಟ್ಟಿನ ಜೊತೆಗೆ ಕಥಾ ಆವರಣಧ ಸಾಮಾಜಿಕ ಅಪರಿಚಿತತೆಯೂ ಸೇರಿ, ಕಥೆಗಾರಿಕೆಯಲ್ಲಿ ಒಂದು ರೀತಿಯ ವಕ್ರತೆ ಕಾಣತೊಡಗುತ್ತದೆ. ಹೀಗೇ, 'ಇನ್ನೊಬ್ಬ ಗಾಂಧಿಯ ಹೆಂಡತಿ', 'ಇಂಗ್ಲೀಷ್ ಗೌಡರು ಎಂಬ ಭಯವು' ಹಾಗೂ 'ಚಿನ್ನಸ್ವಾಮಿಯೆಂಬ ಮಂಡಲ್ ವರದಿ' ಎಂಬ ಕಥೆಗಳೂ ಈ ಮೊದಲು ಚರ್ಚಿಸಿದ ಕಥೆಗಳಂತೆಯೇ, ಬದಲಾಗುತ್ತಿರುವ ಕಾಲದ ಹೊಸ ಸವಾಲುಗಳು ಜನಸಾಮಾನ್ಯರನ್ನು ಕಂಗೆಡಿಸಿ ಉಂಟು ಮಾಡುತ್ತಿರುವ ವಿಸಂಗತಿಗಳನ್ನು ಚಿತ್ರಿಸುವ ಗಂಭೀರ ಉದ್ದೇಶದಿಂದ ಹೊರಡುತ್ತವಾದರೂ, ಅಂತಿಮವಾಗಿ ಇವು ವಿಷಾದಕ್ಕೆ ಬದಲಾಗಿ ವ್ಯಂಗ್ಯವನ್ನು ಸೃಷ್ಟಿಸುವುದರಿಂದಾಗಿ ಕಥೆಗಾರನ ನೋಟದಲ್ಲೇ ಏನೋ ಐಬಿದೆ ಎಂಬ ಅನುಮಾನವನ್ನು ಉಂಟುಮಾಡುತ್ತದೆ. ಇದಕ್ಕೆ ಮುಖ್ಯ ಕಾರಣ ಸತ್ಯನಾರಾಯಣ ತಮ್ಮ ವರ್ಗಧರ್ಮದಲ್ಲೇ ಸ್ಥಿತರಾಗಿ ತಮ್ಮ ಸವಿವರ ಸಡಗರದ ಶೈಲಿಯನ್ನು ತಮ್ಮ ವರ್ಗದಾಚೆಗಿನ ಬದುಕಿನ ವ್ಯಾಖ್ಯಾನಕ್ಕಾಗಿ ಹರಿಯಬಿಡುವುದು. ಇದರಿಂದಾಗಿ ಈ ಕಥೆಗಳ ದೇವಲಿಂಗು, ಕೆ.ಎಮ್. ಗೌಡ ಅಂಡ್ ಕೋ., ಸಿ.ಎಸ್. ಆಚಾರ್ಯ ಹಾಗೂ ಚಿನ್ನಸ್ವಾಮಿ ಆಂಡ್ ಕೋ, ಹೊಸಕಾಲದ ಒತ್ತಡಗಳಿಗೆ ನಲುಗಿ ಸಹಾನುಭೂತಿಗೆ ಪಾತ್ರರಾಗಬೇಕಾದ ದುರಂತನಾಯಕರಾಗಬೇಕಾಗುವ ಬದಲು, ಅಣಕಕ್ಕೆ ಒದಗಿ ಬರುವ ವಿದೂಷಕರಾಗಿ ಮೂಡಿಬರುತ್ತಾರೆ. ವರ್ಗದೋಷದಿಂದ ಉಂಟಾಗುವ ಈ ಆಭಾಸ ಕಥೆಗಾರನಾಗಿ ಸತ್ಯನಾರಾಯಣ ಇನ್ನೂ ಆಂತರ್ಯದ ಸಮಗ್ರತೆಯನ್ನು ಸಾಧಿಸಲಾಗಿಲ್ಲ ಎನ್ನುವುದನ್ನು ತೋರುತ್ತದೆ.

ಈ ದೃಷ್ಟಿಯಿಂದ ಸತ್ಯನಾರಾಯಣ ತಮ್ಮ ಗುರು ಮಾಸ್ತಿಯಿಂದ 'ತಂತ್ರ' ದೀಕ್ಷೆ ಪಡೆದಂತೆ 'ಮಂತ್ರ' ದೀಕ್ಷೆಯನ್ನೂ ಪಡೆಯಬೇಕಾಗಿದೆ. ಕಥೆಗಳನ್ನು ದಾಟಿಸುವ ಕಲೆಗಾರಿಕೆಯಲ್ಲಿ ಮನಸ್ಸಿಟ್ಟಷ್ಟು, ಸತ್ಯನಾರಾಯಣ, ತಮ್ಮನ್ನು ತಾವು ದಾಟಿಕೊಳ್ಳುವ ಕಡೆಗೆ ಮನಸ್ಸಿಟ್ಟಂತೆ ತೋರುತ್ತಿಲ್ಲ. ಇದು - ಮೇಲ್ನೋಟಕ್ಕೆ ಕಥೆಗಾರನ ಕಸುಬುದಾರಿಕೆಯ ಸಾಮರ್ಥ್ಯದ ಪ್ರಶ್ನೆಯಾಗಿ ಕಂಡರೂ - ಮೂಲಭೂತವಾಗಿ ಕಥೆಗಾರನ ವ್ಯಕ್ತಿತ್ವದ ಅಖಂಡತೆ -ಪೂರ್ಣತೆಗೆ ಸಂಬಂಧಪಟ್ಟ ಆಧ್ಯಾತ್ಮಿಕ ಪ್ರಶ್ನೆ. ಈ ದೊಡ್ಡ ಪ್ರಶ್ನೆಯನ್ನು ಎಷ್ಟರಮಟ್ಟಿಗೆ ಕಥೆಗಾರ ಎದುರಿಸಿದ್ದಾನೆ ಎಂಬುದರ

ಮೇಲೆ ಆತನ ಕಥೆಗಾರಿಕೆಯ ಒಟ್ಟಾರೆಯ ಸಾರ್ಥಕತೆ ನಿರ್ಧಾರಿತವಾಗುತ್ತದೆ. ಇಲ್ಲಿನ ಕಥಾಮೀಮಾಂಸೆಯಲ್ಲಿನ, ಅರಿವು ಯಾವುದು ಮರೆವು ಯಾವುದು ಎಂಬ ಪ್ರಶ್ನೆಯು ಕಥೆ ಮತ್ತು ಅದು ಚಿತ್ರಿಸುವ ಬದುಕಿನ ನಡುವಣ ಪ್ರಶ್ನೆ ಮಾತ್ರ ಅಲ್ಲ; ಅದು ಕಥೆ ಮತ್ತು ಕಥೆಗಾರನ ನಡುವಣ ಪ್ರಶ್ನೆ ಕೂಡಾ ಎಂಬುದನ್ನು ಸತ್ಯನಾರಾಯಣ ಅರಿಯದೇ ಹೋದಲ್ಲಿ ಇವರ ಯಶಸ್ವೀ ಎನಿಸುವ ಕಥೆಗಳು ಕೂಡಾ ಆತ್ಯಂತಿಕ ನೋಟದಲ್ಲಿ ಮರೆವುಗಳಾಗಿಯೇ ಕಂಡಾವು. ಸತ್ಯನಾರಾಯಣ ಕನ್ನಡದ ಮಹತ್ವದ - ವಿಭಿನ್ನ ರೀತಿಯ - ಕಥೆಗಾರರಾಗಿ ಹೊರ ಹೊಮ್ಮುತ್ತಿರುವುದರಿಂದಾಗಿ ಈ ಮಾತುಗಳನ್ನು ಹೇಳಬೇಕಾಗಿದೆ.

❑

('ಸಾಹಿತ್ಯ ಸಂವಾದ'ದ 'ಹೊಸ ಓದು' ಶೀರ್ಷಿಕೆಯಡಿ ಪ್ರಕಟ)

ಎತ್ತಣಿಂದೆತ್ತ ಸಂಬಂಧವಯ್ಯಾ...!

ಜಿ.ಎಸ್.ಎಸ್. ಅವರನ್ನು ನಾನು ಮೊದಲು ನೋಡಿದ್ದು ೧೯೬೭ರಲ್ಲಿ ಎಂದು ತೋರುತ್ತದೆ. ಆಗ ನಾನು ಬೆಂಗಳೂರಿನ ಎಸ್. ನಿಜಲಿಂಗಪ್ಪ ಕಾಲೇಜಿನ ಪ್ರಥಮ ವರ್ಷದ ಬಿ.ಎಸ್‌ಸಿ., ವಿದ್ಯಾರ್ಥಿ. ಅವರ 'ದೀಪದ ಹೆಜ್ಜೆ' ಕವನ ಸಂಕಲನ ನಮಗೆ ಪಠ್ಯವಾಗಿತ್ತು. ನಮ್ಮ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀಮತಿ ಶಾಂತಾ ಕಡಗದ್ ಅವರು ಜಿಎಸ್‌ಎಸ್ ಅವರನ್ನು ನಾವು ರಚಿಸಿಕೊಂಡಿದ್ದ ಕರ್ನಾಟಕ ಸಂಘದ ಆಶ್ರಯದಲ್ಲಿ ವಿಶೇಷ ಉಪನ್ಯಾಸಕ್ಕಾಗಿ ಕರೆತಂದಿದ್ದರು. ''ಉಡುಗಣ ವೇಷ್ಟಿತ...'', ''ಹೌದೇನೇ ಉಮಾ...'' ಮುಂತಾದ ರೇಡಿಯೋ ಭಾವಗೀತೆಗಳ ಮೂಲಕವೂ, 'ದೀಪದ ಹೆಜ್ಜೆ'ಯ 'ಹುಟ್ಟಿದ ಹಬ್ಬ', 'ಮಬ್ಬಿನಿಂದ ಮಬ್ಬಿಗೆ', 'ಗಡಿಯಾರದಡಿಯಲ್ಲಿ', 'ಸಂಜೆದಾರಿ' ಮುಂತಾದ ಹೊಸ ತೆರನ ಕವನಗಳ ಮೂಲಕವೂ ನನ್ನ ಸಾಹಿತ್ಯಿಕ ಕುತೂಹಲ ಕೆರಳಿಸಿದ್ದ ಜಿಎಸ್‌ಎಸ್ ಅಂದು ಚಿನ್ನದ ಬಣ್ಣದ ಕನ್ನಡಕದೊಂದಿಗೆ ಶುಭ್ರ ಶ್ವೇತಧಾರಿಯಾಗಿ ವೇದಿಕೆಯನ್ನೇರಿದಾಗ ನನ್ನ ಬದುಕಿನಲ್ಲಿ ಆ ಕ್ಷಣ, ಮುಂದಿನ ವರ್ಷಗಳಲ್ಲಿ ಸ್ಥಾಪಿತವಾಗಲಿದ್ದ ಒಂದು ಹೊಸ, ಅರ್ಥಪೂರ್ಣವಾದ ಹಾಗೂ ಘನವಾದ ಸಂಬಂಧದ ನಾಂದಿಯಾಗಿರುತ್ತದೆ ಎಂಬ ಅರಿವಾದರೂ ಹೇಗಿದ್ದೀತು? ಜಿಎಸ್‌ಎಸ್ ಅಂದು ತಮ್ಮ ಭಾಷಣದ ಮೊದಲು 'ನಾನು ಕನ್ನಡದಲ್ಲಿ ಮಾತಾಡಲೋ ಇಂಗ್ಲೀಷ್‌ನಲ್ಲಿ ಮಾತಾಡಬೇಕೋ?' ಎಂಬ ಪ್ರಶ್ನೆ ಕೇಳಿ ನಮ್ಮನ್ನೆಲ್ಲಾ ಚಕಿತಗೊಳಿಸಿದ್ದೂ ಉಂಟು!

ಅದೇನೇ ಇರಲಿ, ಅಂದು ಜಿಎಸ್‌ಎಸ್ ಅಂದಿನ ಸಮಕಾಲೀನ ಕನ್ನಡ ಕಾವ್ಯ ಕುರಿತಂತೆ, ಔಚಿತ್ಯಪೂರ್ಣವಾದ ಹಿನ್ನೋಟ, ಮುನ್ನೋಟಗಳೊಂದಿಗೆ ಅತ್ಯಂತ ಸರಳವಾಗಿ, ಸ್ಫುಟವಾಗಿ, ಪಾರದರ್ಶಕವಾಗಿ ಮಾತನಾಡಿದರು. ಅದಾಗ ತಾನೇ ಅವರು ಹೈದರಾಬಾದ್‌ನಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಂದಿದ್ದರೆಂದು ಕಾಣುತ್ತದೆ. ಹೈದರಾಬಾದ್‌ನ ಪರಕೀಯತೆಯ ಹಿನ್ನೆಲೆಯಲ್ಲಿ ಕನ್ನಡ ಒಂದು ಭಾಷೆಯಾಗಿ ಉಂಟುಮಾಡುತ್ತಿದ್ದ ರೋಮಾಂಚನದ ಬಗ್ಗೆಯೂ ಅವರು ಮಾತನಾಡಿದಂತೆ ನೆನಪು. ಜಿಎಸ್‌ಎಸ್ ಅವರ 'ದೀಪದ ಹೆಜ್ಜೆ'ಯ ಕವನಗಳು ಹುಟ್ಟಿಸಿದ್ದ ಕುತೂಹಲದೊಂದಿಗೆ ಅವರ ಈ ವಿಚಾರಪೂರ್ಣವಾದ ಭಾಷಣವೂ ಸೇರಿ ನನ್ನಲ್ಲಿ ಸಾಹಿತ್ಯ ಕುರಿತಂತೆ ಒಂದು ಹೊಸ ರುಚಿ ಸೃಷ್ಟಿಯಾಯಿತು. ನಾನು ಕೆಲವು ದಿನಗಳ ಕಾಲ ಅವರ ಭಾಷಣದ

ಗುಂಗಿನಲ್ಲಿಯೇ ಇದ್ದೆ. ಆವರೆಗೆ ಮೂಲತಃ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ನಾನು ಆ ದಿನಗಳಲ್ಲಿ ಸಾಹಿತ್ಯದ ವಿದ್ಯಾರ್ಥಿಯಾಗಿ ಮತಾಂತರಗೊಂಡೆ... ಇದಕ್ಕೆ ಪ್ರೋತ್ಸಾಹವೋ ಎಂಬಂತೆ ನನಗೆ ತೀನಂಶ್ರೀ ಅವರ ಕಾವ್ಯಮೀಮಾಂಸೆಯ ಆಯ್ದ ಭಾಗಗಳು, ಕಾರಂತರ 'ಆಳ - ನಿರಾಳ' ಎಂಬ ಕಾದಂಬರಿ ಮತ್ತು ಪ್ರಹ್ಲಾದರಾಯರ ಲಲಿತ ಪ್ರಬಂಧಗಳೂ ಮುಂದಿನ ವರ್ಷ ಪಠ್ಯಗಳಾಗಿ, ನನ್ನನ್ನು ಸಂಪೂರ್ಣ ಸಾಹಿತ್ಯದೆಡೆಗೇ ಸೆಳೆದುಬಿಟ್ಟವು.

ಇದರ ಪರಿಣಾಮವೋ ಎಂಬಂತೆ ನಾನು ಬಿ.ಎಸ್‌ಸಿ.ಯಲ್ಲಿ ಎಂ.ಎಸ್‌ಸಿ.ಗೆ ಪ್ರವೇಶ ದೊರಕುವಷ್ಟು ಹೆಚ್ಚಿನ ಅಂಕಗಳನ್ನು ಪಡೆಯಲಾಗಲಿಲ್ಲ. ಆದ್ದರಿಂದ ಎಂ.ಎಸ್ಸಿ.ಗೆ ಸೇರಲೇಬೇಕಾದರೆ ಒಂದು ವರ್ಷದ ಆನರ್ಸ್ ಮಾಡಬೇಕಿತ್ತು. ನನ್ನನ್ನು ಸೆಂಟ್ರಲ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ಒಂದು ವರ್ಷದ ಆನರ್ಸ್‌ಗೆ ಸೇರಿಸಲು ಮನೆಯಲ್ಲಿ ಪ್ರಯತ್ನಗಳು ಆರಂಭವಾದವು. ಆದರೆ ನನಗೆ ಕನ್ನಡ ಎಂ.ಎ. ಸೇರುವ ಆಸೆ. ನನ್ನ ಸೋದರ ಸಂಬಂಧಿ ಡಿ.ವಿ. ರಾಜಶೇಖರ್ ಪಿಯುಸಿಯಲ್ಲಿಯೇ ವಿಜ್ಞಾನಕ್ಕೆ ನಮಸ್ಕಾರ ಹೊಡೆದು ನನ್ನ ಸಲಹೆಯ ಮೇರೆಗೆ ಕನ್ನಡ ಆನರ್ಸ್ ಸೇರಿ, ಎಪ್ಪತ್ತರ ದಶಕದ ಆ ಅಪೂರ್ವ ಸಾಹಿತ್ಯ ಗಂಧಗಾಳಿಯಲ್ಲಿ ಅಮಲೇರಿಸಿಕೊಂಡು ಓಡಾಡುತ್ತ ನನ್ನ ಕಣ್ಣು ಕುಕ್ಕುತ್ತಿದ್ದ! ನನಗೆ ಬಿ.ಎಸ್‌ಸಿ.ಯಲ್ಲಿ ಎರಡನೇ ಅಧ್ಯಯನ ಭಾಷೆಯಾದ ಕನ್ನಡದಲ್ಲಿ ಪ್ರಥಮ ದರ್ಜೆ ಅಂಕಗಳು ಬಂದಿದ್ದುದರಿಂದ ಕನ್ನಡ ಎಂ.ಎ. ಪ್ರವೇಶಕ್ಕೆ ಪ್ರಯತ್ನಿಸಬಹುದೆಂಬ ಸೂಚನೆಯನ್ನೂ ಆತ ನೀಡಿದ್ದ. ನಾನು ನನ್ನ ತಂದೆ ಮುಂದೆ ನನ್ನ ಅಪೇಕ್ಷೆಯನ್ನು ನಿವೇದಿಸಿದೆ. ನನ್ನ ಬಿ.ಎಸ್‌ಸಿ., ಅಂಕಗಳ ಬಗ್ಗೆ ಕ್ಷುಬ್ಧರಾಗಿದ್ದ ಅವರು ಒಂದು ವರ್ಷ ಹೆಚ್ಚುವರಿಯಾಗಿ ಆನರ್ಸ್ ಪದವಿಗಾಗಿ ಓದಬೇಕಲ್ಲ ಎಂಬ ಪರಿಗಣನೆ ಕಾರಣವಾಗಿಯೋ ಏನೋ ಅವರು ನನ್ನನ್ನು ಕರೆದುಕೊಂಡು ನೇರವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಬಂದುಬಿಟ್ಟರು. ನಾನೇ ಹೋಗಿ, ಆ ವಿಭಾಗದ ಮುಖ್ಯಸ್ಥರಾಗಿದ್ದ ಜಿಎಸ್‌ಎಸ್ ಅವರನ್ನು ಮಾತನಾಡಿಸಿ ಸೀಟು ಪಡೆಯುತ್ತೇನೆಂದರೂ, ನಿವೃತ್ತ ಶಾಲಾ ಮಾಸ್ತರರಾಗಿದ್ದ ನಮ್ಮ ತಂದೆ ಹಾಗೆಲ್ಲ ಹುಡುಗರು ವಿಭಾಗದ ಮುಖ್ಯಸ್ಥರನ್ನು ನೇರವಾಗಿ ಸಂಪರ್ಕಿಸುವುದು ಮರ್ಯಾದೆಯಲ್ಲ ಎಂದು ವಾದಿಸಿ, ಆಗ ಸೆಂಟ್ರಲ್ ಕಾಲೇಜಿನ ಪ್ರಸನ್ನಕುಮಾರ್ ಬ್ಲಾಕ್‌ನಲ್ಲಿದ್ದ ಕನ್ನಡ ವಿಭಾಗದ ಮುಖ್ಯಸ್ಥರ ಕೊಠಡಿಯನ್ನು ಪ್ರವೇಶಿಸಿಯೇ ಬಿಟ್ಟರು. ನಾನು ಹೊರಗಡೆಯೇ ನಿಂತೆ. ಐದು ನಿಮಿಷಗಳ ಕಾಲ ಅದೇನು ಮಾತುಕತೆ ನಡೆಯಿತೋ, ನಮ್ಮ ತಂದೆ ನನ್ನನ್ನೂ ಒಳಗೆ ಬರಲು ಹೇಳಿದರು. ನಾನು ಜಿಎಸ್‌ಎಸ್ ಮುಂದೆ ಹೋಗಿ ನಿಂತೆ.

ಜಿಎಸ್‌ಎಸ್ : ಕನ್ನಡ ಎಂ.ಎ.ಗೆ ಯಾಕೆ ಸೇರಬೇಕ್ರಿ?

ನಾನು : ಬಿ.ಎಸ್‌ಸಿ.ಯಲ್ಲಿ ಕನ್ನಡದಲ್ಲಿ ಒಳ್ಳೇ ಮಾರ್ಕ್ ಬಂದಿದೆ. ಸಾಹಿತ್ಯದಲ್ಲಿ ಆಸಕ್ತಿ ಇದೆ ಸಾರ್.

ಜಿಎಸ್‌ಎಸ್ : ಸಾಹಿತ್ಯ ಆಸಕ್ತಿ ಇದ್ರೆ ಅದನ್ನು ಹಾಗೇ ಮುಂದುವರಿಸಿಕೊಂಡು ಹೋಗಿ. ಕನ್ನಡ ಎಂ.ಎ. ಸೇರಿ ಭವಿಷ್ಯ ಹಾಳು ಮಾಡಿಕೊಳ್ಳಬೇಡಿ.

ನಾನು ಒಂದು ಕ್ಷಣ ಸ್ತಂಭೀಭೂತನಾಗಿ ನಿಂತೆ. ಜಿಎಸ್ಎಸ್ ಅವರಿಗೆ ನನ್ನ ಮೌನ ಅರ್ಥವಾಯಿತೆಂದು ಕಾಣುತ್ತದೆ. ಅವರು ವಿವರಿಸಿದರು : ''ಕನ್ನಡ ಎಂ.ಎ. ಮಾಡಿದವರಿಗೆ ಈಗಾಗಲೇ ಕೆಲಸ ಸಿಗುವುದು ಕಷ್ಟವಾಗುತ್ತಿದೆ. ಗಣಿತ ಶಾಸ್ತ್ರದಲ್ಲೇ ಎಂ.ಎಸ್‌ಸಿ. ಮಾಡಿ ಮೊದಲು ಕೆಲಸ ಗಿಟ್ಟಿಸಿಕೊಳ್ಳಿ. ಸಾಹಿತ್ಯಾಸಕ್ತಿಗೆ, ಬರವಣಿಗೆಗೆ ಕನ್ನಡ ಎಂ.ಎ. ಅಗತ್ಯವಿಲ್ಲ. ನಿಜವಾಗಿ ಸಾಹಿತ್ಯಾಸಕ್ತಿ ಇದ್ದರೆ ಕನ್ನಡ ಎಂ.ಎ. ಮಾಡದಿದ್ದರೂ ಅದು ನಿಮ್ಮನ್ನು ಬಿಡುವುದಿಲ್ಲ''

ಅವರ ಸಂಕ್ಷಿಪ್ತ ಆದರೆ ಖಚಿತವಾದ ಮಾತುಗಳನ್ನು ಕೇಳಿ, ನನಗೂ ಒಳಗೆ ಎಲ್ಲೋ ಅವರು ನನ್ನ ಹಿತ ಬಯಸಿಯೇ ಈ ಮಾತುಗಳನ್ನು ಆಡುತ್ತಿದ್ದಾರೆ ಎಂದೆನ್ನಿಸಿಯೋ ಏನೋ, ನಾನು ನಮ್ಮ ತಂದೆ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಮನೆಗೆ ಹಿಂದಿರುಗಿದೆವು. ಗಣಿತಶಾಸ್ತ್ರ ನನ್ನ ಬೆನ್ನು ಬಿದ್ದಿತ್ತು.

ಒಂದು ವರ್ಷದ ಗಣಿತಶಾಸ್ತ್ರದ ಆನರ್ಸ್ ಹಾಗೂ ಎರಡು ವರ್ಷಗಳ ಎಂ.ಎಸ್‌ಸಿ., ವ್ಯಾಸಂಗದ ಸಮಯದಲ್ಲಿ ಸೆಂಟ್ರಲ್ ಕಾಲೇಜ್ ಆವರಣದಲ್ಲಿ ಹಲವಾರು ಬಾರಿ ನಾನು ಜಿಎಸ್ಎಸ್ ಅವರನ್ನು ನೋಡುತ್ತಿದ್ದೆ. ಅವರ ನೇತೃತ್ವದಲ್ಲಿ ಬೆಳೆಯುತ್ತಿದ್ದ ಕನ್ನಡ ವಿಭಾಗದಲ್ಲಿನ ಮುಕ್ತ ಸಾಹಿತ್ಯಿಕ ವಾತಾವರಣದ ಸೊಗಡು - ಬೆಡಗುಗಳ ಬಗ್ಗೆ ರಾಜಶೇಖರ ಹಾಗೂ ಅವರ ಗೆಳೆಯರ ಮೂಲಕ ಕೇಳುತ್ತಿದ್ದೆ. ಹಾಗೇ ರಾಜಾಜಿನಗರದಿಂದ ನನ್ನೊಂದಿಗೇ ಬಿ.ಟಿ.ಎಸ್. ಬಸ್ ಹತ್ತಿ ಬರುತ್ತಿದ್ದ ಶ್ರೀ ರಂ.ಶ್ರೀ. ಮುಗಳಿ ಹಾಗೂ ಶ್ರೀ ಎಸ್.ಆರ್. ಮಳಗಿ ಅವರ ಮಾತುಕತೆಗಳ ಮೂಲಕ ಕನ್ನಡ ವಿಭಾಗದ ಆಡಳಿತದ ಒಳಸುಳಿಗಳ ಸುಳಿವೂ ಸಿಕ್ಕುತ್ತಿತ್ತು. ಕನ್ನಡ ವಿಭಾಗ ಆಗ ನಿಜವಾದ ಅರ್ಥದಲ್ಲಿ ಸಂಕ್ರಮಣಾವಸ್ಥೆಯಲ್ಲಿ ಇತ್ತು.

ಎಪ್ಪತ್ತರ ದಶಕದ ಆರಂಭದ ವರ್ಷಗಳು ಎಂದರೆ ನವ್ಯಸಾಹಿತ್ಯ ಚಳುವಳಿಯ ಉತ್ಕರ್ಷದ ಕಾಲ. ಸೆಂಟ್ರಲ್ ಕಾಲೇಜ್ ಅದರ ಕೇಂದ್ರ. ಏಕೆಂದರೆ ಆ ಚಳುವಳಿಯ ಆಗಿನ ಸೇನಾಧಿಕಾರಿ ಪಿ. ಲಂಕೇಶ್, ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ವಿಭಾಗದ ಉಪನ್ಯಾಸಕರು. ಅವರು ನಶ್ಯ ಬಣ್ಣದ ಸೂಟ್‌ನಲ್ಲಿ ತುಂಟನಗೆ ಬೀರುತ್ತಾ, ಲೈಬ್ರರಿ ಕಟ್ಟಡ ಹಾಗೂ ಇಂಗ್ಲಿಷ್ ವಿಭಾಗವಿದ್ದ ಗಡಿಯಾರದ ಕಟ್ಟಡದವರೆಗೆ ನಾಲ್ಕಾರು ಜನ 'ಶಿಷ್ಯ'ರೊಂದಿಗೆ ಸದಾ ತಾರಾಡುತ್ತಿದ್ದುದು ಈಗ ಒಂದು ತಮಾಷೆಯ ಸಂಗತಿಯೆಂಬಂತೆ ನೆನಪಾಗುತ್ತಿದೆ. ಹಾಗೇ ನುಣ್ಣನೆಯ ಮುಖದ ಯು.ಆರ್. ಅನಂತಮೂರ್ತಿ ಅವರು ಆರತಕ್ಷತೆಯ ಮದುಮಗನಂತೆ ಸೆಂಟ್ರಲ್ ಕಾಲೇಜ್ ಆವರಣದಲ್ಲಿ ಆಗಾಗ್ಗೆ ಕಾಣಿಸಿಕೊಂಡದ್ದೂ ಉಂಟು! 'ಸಂಸ್ಕಾರ', 'ಅಕ್ಷರ ಹೊಸ ಕಾವ್ಯ' ಹಾಗೂ 'ಹಳದಿ ಮೀನು' ಆಗ ಸಾಹಿತ್ಯ ವಲಯದಲ್ಲಿ - ಅದರ ಮುಖ್ಯ ಕಚೇರಿ ಸೆಂಟ್ರಲ್ ಕಾಲೇಜಿನ ಲೈಬ್ರರಿ ಕಟ್ಟಡದ ಮುಂದಿದ್ದ ಮರದ ಕೆಳಗಿನ ಬೆಂಚುಕಲ್ಲು - ಸಾವು ಬದುಕಿನ ಪ್ರಶ್ನೆಗಳಂತೆ ಚರ್ಚೆಯಾಗುತ್ತಿದ್ದವು! 'ಸಾಕ್ಷಿ', 'ಸಂಕ್ರಮಣ' ಈ ಸಾಹಿತ್ಯ ವಲಯದ ವೇದೋಪನಿಷತ್ತುಗಳು! ಇವೆಲ್ಲದರ ಮಧ್ಯೆ ನವ್ಯರಿಂದ ಆಗ್ಗೆ ಸಾರಾಸಗಟು condemnಗೊಂಡಿದ್ದ ಕುವೆಂಪು ಅವರ ಅಂತರಂಗದ ಶಿಷ್ಯ ಜಿಎಸ್ಎಸ್!

ಇಂತಹ ಜಿಎಸ್‌ಎಸ್. ಕಾರೋ. ಆಟೋದಿಂದಲೋ ಇಳಿದು ಲೈಬ್ರರಿ ಕಡೆ ಬಂದರೆಂದರೆ. ಆ ಮರದ ಕೆಳಗಿನ ಬೆಂಚುಕಲ್ಲಿನ ಮೇಲೆ ಹಾಗೂ ಸುತ್ತಮುತ್ತ ನೆರೆದಿರುತ್ತಿದ್ದ ಪಿ.ಪಿ. (ಪ್ರೋಲಿ ಪಟಾಲಂ) ಬಳಗ ತಮ್ಮ ವಾಗ್ವಾದಗಳನ್ನೆಲ್ಲ ಗಪ್ಪನೆ ನಿಲ್ಲಿಸಿ ಇಡಿಯಾಗಿ ಎದ್ದು ನಿಲ್ಲುತ್ತಿತ್ತು. ಈ ಗೌರವ ಸಮರ್ಪಣೆಯ ನಂತರ ಪುನರಾರಂಭವಾಗುತ್ತಿದ್ದ ಚರ್ಚೆಯಲ್ಲಿ ಜಿಎಸ್‌ಎಸ್ ಸಾಹಿತ್ಯ ಹಣ್ಣುಗಾಯಿ ನೀರುಗಾಯಿ ಆಗುತ್ತಿದ್ದುದು ಬೇರೆ ವಿಷಯ. ಅದು ಜಿಎಸ್‌ಎಸ್ ಅವರಿಗೂ ಗೊತ್ತಿಲ್ಲದೇ ಇರುತ್ತಿರಲಿಲ್ಲ. ಅವರ ಶಿಷ್ಯರ ಮರ್ಮ ಅವರಿಗಿಂತ ಹೆಚ್ಚಿಗೆ ಇನ್ಯಾರಿಗೆ ಗೊತ್ತಿರಲು ಸಾಧ್ಯ? ಆದರೆ ಜಿಎಸ್‌ಎಸ್ ಎಂದೂ ಈ ಬಗ್ಗೆ ಬಹಿರಂಗ ಅಸಮಾಧಾನ ವ್ಯಕ್ತಪಡಿಸಿದ ದಾಖಲೆಗಳಿಲ್ಲ. ಇದಕ್ಕೆ ಮುಖ್ಯ ಕಾರಣ ಜಿಎಸ್‌ಎಸ್ ಮೂಲತಃ ಪ್ರಜಾತಂತ್ರವಾದಿಯಾದ ಆಡಳಿತಗಾರರಾಗಿದ್ದರು. ಈ ಹಿನ್ನೆಲೆಯಲ್ಲೇ ಅಂದಿನ ಒಂದು ರೀತಿಯ ಚಿತ್ರ - ವಿಚಿತ್ರ ಪ್ರತಿಭೆಗಳ, ಅರಾಜಕ, ಬಂಡುಕೋರ ಸಾಹಿತ್ಯ ವಾತಾವರಣಕ್ಕೆ ಒಂದು ಶಿಸ್ತಿನ ಕೇಂದ್ರವಾಗಿ ಜಿಎಸ್‌ಎಸ್ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವನ್ನು ಕಟ್ಟಿದವರು. ಕರ್ನಾಟಕ ವಿಶ್ವವಿದ್ಯಾಲಯದ್ದು ಕನ್ನಡ ಅಧ್ಯಯನ ಪೀಠ; ಮೈಸೂರು ವಿಶ್ವವಿದ್ಯಾಲಯದ್ದು ಕನ್ನಡ ಅಧ್ಯಯನ ಸಂಸ್ಥೆ. ಇದು ಕೇಂದ್ರ. ಈ ಕೇಂದ್ರದ ಮೂಲಕ ಜಿಎಸ್‌ಎಸ್ ಪ್ರತಿವರ್ಷ ಆಯೋಜಿಸಿದ ವಿಚಾರ ಸಂಕಿರಣಗಳಿಗೆ ಕರ್ನಾಟಕದ ಎಲ್ಲ ಭಾಗಗಳಿಂದ ಎಲ್ಲ ಸಾಹಿತ್ಯಕ ಹಿನ್ನೆಲೆಗಳ ಪ್ರತಿಭೆಗಳು ಆಗಮಿಸಿದವು. ನಮ್ಮ ಗಣಿತಶಾಸ್ತ್ರದ ವಿಭಾಗದ ಕಟ್ಟಡದಲ್ಲೇ ಇದ್ದ ಸೆನೆಟ್ ಹಾಲ್‌ನಲ್ಲಿ ತುಂಬಿ ತುಳುಕುತ್ತಿದ್ದ ಸಾಹಿತ್ಯ ಪ್ರೇಮಿಗಳ ಸಮ್ಮುಖದಲ್ಲಿ ಇಡೀ ದಿನ ಪ್ರಬಂಧ ಮಂಡನೆ. ಚರ್ಚೆ, ಜಗಳ, ಊಟ-ಕೂಟಗಳು. ಬೇಂದ್ರೆ, ಮಾಸ್ತಿ, ಅಡಿಗರಂತಹ ಹಿರಿಯರಿಂದ ಹಿಡಿದು ಚಂಪಾ, ಪಟ್ಟಣಶೆಟ್ಟಿ, ಗಿರಡ್ಡಿ, ವೀಣಾ, ತೇಜಸ್ವಿ ಮುಂತಾದ ಆ ಕಾಲದ ಕಿರಿಯ ಸಾಹಿತಿಗಳನ್ನು ನಾವೆಲ್ಲ ಕಣ್ತುಂಬಾ ನೋಡಿದ್ದು ಆಗಲೇ. ಕನ್ನಡ ಸಾಹಿತ್ಯ ವಿಮರ್ಶೆಯ ಸಮೃದ್ಧಿಯ ಬೀಜಗಳು ಬಿತ್ತಲ್ಪಟ್ಟಿದ್ದೂ ಆಗಲೇ. ಈ ವಾರ್ಷಿಕ ಸಾಹಿತ್ಯ ಹಬ್ಬಗಳಲ್ಲಿ ವೇದಿಕೆಯೇರಿ ಭಾಗವಹಿಸಿದವರು ಹತ್ತಾರು ಜನವಾದರೆ, ವೇದಿಕೆಯ ಕೆಳಗೆ ಕೂತೋ, ನಿಂತೋ ಭಾಗವಹಿಸಿ, ಆ ಕಾಲದ ಸಾಹಿತ್ಯಿಕ ವಾಗ್ವಾದಗಳಿಗೆ ಅನೈಚ್ಛಿಕವಾಗಿ ಸೆಳೆಯಲ್ಪಟ್ಟು ಈಗಲೂ ಅವರ ಸಿಹಿ ನೆನಪುಗಳಲ್ಲಿ ಸಿಕ್ಕಿ ಹಾಕಿಕೊಂಡು ಪರದಾಡುತ್ತಿರುವವರು ನೂರಾರು, ಸಾವಿರಾರು ಜನ. ಅವರಲ್ಲಿ ನಾನೂ ಒಬ್ಬನೆಂದು ಹೇಳಿಕೊಳ್ಳದಿರಲು ನನಗೆ ಸಂಕೋಚವಾಗುತ್ತದೆ!

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಅಪೂರ್ವ ವಿದ್ಯಮಾನವಾಗಿ ದಾಖಲಾಗಲು ಅರ್ಹವಾಗಿರುವ ಈ ವಿಚಾರ ಸಂಕಿರಣಗಳ ಆಯೋಜನೆಯ ಹಿಂದೆ, ಅವು ಉಂಟುಮಾಡಿದ ಪರಿಣಾಮಗಳನ್ನು ಈಗ ಹತ್ತಾರು ವರ್ಷಗಳ ಅಂತರದಲ್ಲಿ ನಿಂತು ಮೌಲ್ಯಮಾಪನ ಮಾಡಿ ನೋಡಿದಾಗ, ಜಿಎಸ್‌ಎಸ್, ಅವರ ಒಂದು ಅಪೂರ್ವ ಚಾರಿತ್ರಿಕ ಒಳನೋಟದ ಅರಿವಾಗುತ್ತದೆ. ಅವರು ವಿಚಾರ ಸಂಕಿರಣಗಳ ರೂಪದಲ್ಲಿ ಹಳಬರನ್ನೂ ಹೊಸಬರನ್ನೂ ಮುಖಾಮುಖಿಯಾಗಿಸಿದರು. ಈ ಇಬ್ಬರ ಬಗೆಗೂ ಬೇರೆ ಬೇರೆ ಕಾರಣಗಳಿಗಾಗಿ

ಸಹಾನುಭೂತಿಯುಳ್ಳ ಜಿಎಸ್ಎಸ್ ಈಗ ತಾವು ದೂರ ನಿಂತು ನಿರ್ವಹಿಸಬೇಕಾದ ಅತಿ ಅಗತ್ಯವಾದ ಚಾರಿತ್ರಿಕ ಪಾತ್ರವಿದೆ ಎಂಬುದನ್ನು ಅರಿತು ಈ ಮುಖಾಮುಖಿಯಲ್ಲಿ ಕ್ರಮೇಣ, ನಿಧಾನವಾಗಿ ಮೂಡಿದ ಸಾಹಿತ್ಯದ ಹೊಸ ಸಮತೋಲನ, ಸಾಮರಸ್ಯ ಹಾಗೂ ಶಕ್ತಿಯನ್ನು ಸಮಕಾಲೀನ ಕನ್ನಡ ಸಾಹಿತ್ಯ ಸಂದರ್ಭಕ್ಕೆ ಒದಗಿಸಿಕೊಟ್ಟರು. ಹಳಬರ ಹಠ ಹಾಗೂ ಹೊಸಬರ ಆವೇಶ ಒಂದು ಹದಕ್ಕೆ ಬಂತು. ಈ ಹದ ಸಾಧನೆಯ ಹಿಂದೆ ಒಂದು ಕುಟುಂಬದ ಹಿರಿಮಗನ ಸಂಯಮ, ದಕ್ಷತೆ ಹಾಗೂ ಎಲ್ಲಕ್ಕಿಂತ ಹೆಚ್ಚಿನದಾಗಿ ದೂರದೃಷ್ಟಿಯಿತ್ತು. ಆ ಕಾಲದ ಓರ್ವ ಪ್ರಮುಖ ಸಾಹಿತಿಯಾಗಿದ್ದುಕೊಂಡೂ, ಇಂತಹ ಪ್ರಖರ ಸೃಜನಶೀಲ ಮುಖಾಮುಖಿಗಳಲ್ಲಿ ನೇರವಾಗಿ ಪಾಲ್ಗೊಳ್ಳದೆ ದೂರ ನಿಂತು ಎಲ್ಲವನ್ನೂ, ಎಲ್ಲರನ್ನೂ ನಿರ್ವಹಿಸಿದ ಜಿಎಸ್ಎಸ್ ಅವರ ಈ ಪ್ರಬುದ್ಧತೆಯು ತನ್ನ ಕಾಲದ ಹಿಂದಿನ ಹಾಗೂ ಮುಂದಿನ ಸಾಹಿತ್ಯಿಕ ಪರಿಪ್ರೇಕ್ಷ್ಯಗಳನ್ನು ಯಾವುದೇ ಪೂರ್ವಾಗ್ರಹಗಳಿಲ್ಲದೆ ತನ್ನ ಗ್ರಹಿಕೆಗೆ ತಂದುಕೊಂಡು ಅದನ್ನು ಪರಂಪರೆಯ ದೃಷ್ಟಿಯಿಂದ ಇಡಿಯಾಗಿ ಜೋಡಿಸುವ ಒಂದು ವಿಶಿಷ್ಟ, ದ್ರಷ್ಟಾರ ಪ್ರಜ್ಞೆಯ ಫಲ ಎಂದೇ ನನ್ನ ಭಾವನೆ.

- ಇದೆಲ್ಲವೂ ನಾನು ಜಿಎಸ್ಎಸ್ ಅವರೊಂದಿಗೆ ನೇರ ಸಂಪರ್ಕವಿಲ್ಲದ ದಿನಗಳಲ್ಲಿ ದೂರದಿಂದ ನೋಡಿದ್ದು; ಕೇಳಿಸಿಕೊಂಡದ್ದು; ಅದರ ಫಲವಾಗಿ ನನಗೆ ಅನ್ನಿಸಿದ್ದು ಅಷ್ಟೆ. ಇಲ್ಲಿ ನನ್ನ ಕೆಲವು ನೆನಪುಗಳು ಕಲೆಸಿಕೊಂಡಿರಲೂಬಹುದು; ನನ್ನ ಕೆಲ ತೀರ್ಮಾನಗಳು far fetched ಇದ್ದರೂ ಇರಬಹುದು. ಅವನ್ನು ಬಲ್ಲವರು ಹೇಳಬೇಕು. ಆದರೆ ಮುಂದಿನದೆಲ್ಲವೂ ಸಮೀಪ ದರ್ಶನದಿಂದ ಹೊಮ್ಮಿದ್ದೆಂದು ಮಾತ್ರ ಹೇಳಬಲ್ಲೆ.

೨

೧೯೭೩ರಲ್ಲಿ ಅಂತೂ ನಾನು ಹೊಸ ಸಿನಿಮಾ, ಹೊಸನಾಟಕ ಹಾಗೂ ಹೊಸ ಸಾಹಿತ್ಯಗಳ ಗುಂಗಿನಲ್ಲಿದ್ದುಕೊಂಡೇ ಗಣಿತಶಾಸ್ತ್ರದಲ್ಲಿ ಎಂ.ಎಸ್ಸಿ. ಮುಗಿಸಿದೆ. ೧೯೭೩ - ೭೪ರಲ್ಲಿ ಸೆಂಟ್ರಲ್ ಕಾಲೇಜಿನ ಯು.ಜಿ.ಸಿ. ಯೋಜನೆಯೊಂದರಲ್ಲಿ ಸಹಾಯಕನಾಗಿ ಕೆಲವು ತಿಂಗಳು, ನಂತರ ಸಂಶೋಧನಾ ಸಹಾಯಕನಾಗಿ ಕೆಲವು ತಿಂಗಳು ಕಾಲ ತಳ್ಳಿದ ನಂತರ ೧೯೭೫ರಲ್ಲಿ ದೆಹಲಿ ಆಕಾಶವಾಣಿ ಕೇಂದ್ರದ ಕನ್ನಡ ವಾರ್ತಾವಿಭಾಗದಲ್ಲಿ ವಾರ್ತೆಗಳನ್ನು ಸಿದ್ಧಪಡಿಸುವ ಹಾಗೂ ಓದುವ ಆ ಕಾಲದ ಅತ್ಯಂತ ಆಕರ್ಷಕ ಹುದ್ದೆಗೆ ನೇಮಕಗೊಂಡ ಪತ್ರ ಬಂತು. ಅಂತೂ ನಾನು ಗಣಿತಶಾಸ್ತ್ರದಿಂದ ಬಿಡುಗಡೆಗೊಂಡಿದ್ದೆ! ಆದರೆ ವಿಚಿತ್ರವೆಂದರೆ ಸಾವಿರಾರು ಮೈಲುಗಳ ಆ ದೂರದ ದೆಹಲಿಗೆ ಹೋದರೂ ಜಿಎಸ್ಎಸ್ ಪ್ರಭಾವಲಯದಿಂದ ಮಾತ್ರ ಬಿಡುಗಡೆ ಆಗಲಿಲ್ಲ... ನನ್ನ ಅದೃಷ್ಟವೋ ಎಂಬಂತೆ, ಈ ಆಕಾಶವಾಣಿ ಹುದ್ದೆಯ ಸಂದರ್ಶನಕ್ಕೆ ಸಂಸ್ಕೃತಿ ಪರಿಣತರಾಗಿ ಬಂದಿದ್ದವರಲ್ಲಿ ಒಬ್ಬರಾಗಿದ್ದ ಡಾ. ಎಂ. ಚಿದಾನಂದಮೂರ್ತಿ ಅವರು ನನ್ನನ್ನು ಅನಾಮತ್ತಾಗಿ ಎತ್ತಿ ಜಿಎಸ್ಎಸ್ ಅವರ ಸಮೀಪವಲಯದಲ್ಲಿಟ್ಟುಬಿಟ್ಟರು.

ಸೆಂಟ್ರಲ್ ಕಾಲೇಜ್ ಆವರಣದಲ್ಲಿ ಜಿಎಸ್ಎಸ್ ಅವರನ್ನು ಗಮನಿಸುತ್ತಿದ್ದ ಹಾಗೆಯೇ ನಾನು ಚಿದಾನಂದಮೂರ್ತಿಯವರನ್ನೂ ಗಮನಿಸುತ್ತಾ ಅವರ ಬಗ್ಗೆಯೂ ಓರ್ವ ವಿದ್ಯಾರ್ಥಿಯಾಗಿ ಕುತೂಹಲ - ಗೌರವಗಳನ್ನು ಬೆಳೆಸಿಕೊಂಡಿದ್ದೆ. ಜಿಎಸ್ಎಸ್ ಅವರದ್ದು ದೂರದಿಂದ ನೋಡಿದವರಿಗೆ ಒಂದು ರೀತಿಯ ಗತ್ತಿನ ವ್ಯಕ್ತಿತ್ವವಾಗಿದ್ದರೆ, ಚಿದಾನಂದಮೂರ್ತಿ ಯವರದ್ದು - ನಾನು ಲೈಬ್ರರಿಯಲ್ಲಿ ನೋಡುತ್ತಿದ್ದಂತೆ - ವಿದ್ಯಾರ್ಥಿ - ಅಧ್ಯಾಪಕರೆನ್ನದೆ ಎಲ್ಲರೊಡನೆ ಆತ್ಮೀಯವಾಗಿ ಬೆರೆಯುತ್ತಿದ್ದ ಸಲಿಗೆಯ ವ್ಯಕ್ತಿತ್ವ. ಅವರು ಆಗ 'ಕಸ್ತೂರಿ'ಯಲ್ಲಿ ಪ್ರಕಟಿಸಿದ್ದ (ವಿದೇಶಿ ನಗ್ನಸುಂದರಿಯ ಚಿತ್ರವಿದ್ದ) 'ನಾನೊಂದು ಕ್ಯಾಲೆಂಡರ್ ಕದ್ದೆ' ಎಂಬ ಲೇಖನ ಅವರ ಆಗಿನ ವ್ಯಕ್ತಿತ್ವಕ್ಕೆ ಕೈಗನ್ನಡಿಯಂತಿದ್ದು ರಸಿಕರ ಚರ್ಚೆಗೆ ವಸ್ತುವಾಗಿತ್ತು. ಹಾಗೇ ಅವರು ಚನ್ನಗಿರಿ ಸಮೀಪದ ಒಂದು ಹಳ್ಳಿಯಲ್ಲಿ ಬನಶಂಕರಿ ಪೆಟ್ಟಿಗೆಯನ್ನು ಮೊದಲ ಬಾರಿಗೆ ತೆರೆದ ಸಾಹಸ ಮಾಡಿದ ಕುತೂಹಲದ ಲೇಖನವೊಂದು ಅದೇ ಕಾಲದಲ್ಲಿ ಅಚ್ಚಾಗಿತ್ತು. ಇವೆಲ್ಲವನ್ನೂ ನಾನು ಸಂದರ್ಶನದಲ್ಲಿ ನಡೆದ ಮುಕ್ತ ಮಾತುಕತೆಯ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದಾಗ, ಗಣಿತಶಾಸ್ತ್ರದ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದ ನಾನು ಇದೆಲ್ಲವನ್ನೂ ಗಮನಿಸುತ್ತಿದ್ದುದರ ಬಗ್ಗೆ ಚಿದಾನಂದಮೂರ್ತಿ ಹಾಗೂ ಇತರ ಪರಿಣತರಲ್ಲಿ ಮೆಚ್ಚುಗೆ ಮೂಡಿತೇನೋ, ಎಂಬಂತೆ ನಾನು ಆ ಹುದ್ದೆಗೆ ಆಯ್ಕೆಯಾಗಿದ್ದೆ. ಅಂತೂ ಗಣಿತಶಾಸ್ತ್ರ ಹಾಗೂ ಕನ್ನಡ ಸಾಹಿತ್ಯ ಎರಡೂ ಸೇರಿ ನನಗೆ ಕೆಲಸ ಕೊಡಿಸಿದ್ದವು!

ನಾನು ದೆಹಲಿಗೆ ಹೋಗಿ ಕೆಲಸಕ್ಕೆ ಸೇರಿಕೊಂಡು ವಸತಿ ವ್ಯವಸ್ಥೆ ಮಾಡಿಕೊಂಡ ನಾಲ್ಕಾರು ತಿಂಗಳುಗಳ ನಂತರ ಚಿದಾನಂದಮೂರ್ತಿಯವರಿಂದ ಪತ್ರ ಬಂತು. ಯು.ಜಿ.ಸಿ. ಕೆಲಸದ ನಿಮಿತ್ತ ತಾವು ದೆಹಲಿಗೆ ಬರುತ್ತಿರುವುದಾಗಿಯೂ ಆ ಒಂದೆರಡು ದಿನ ನನ್ನೊಂದಿಗೆ ದೆಹಲಿಯಲ್ಲಿ ಕಾಲ ಕಳೆಯಲು ಇಚ್ಛಿಸಿರುವುದಾಗಿಯೂ ಆ ಪತ್ರದಲ್ಲಿ ತಿಳಿಸಿದ್ದರು. ಕರ್ನಾಟಕದ ಖ್ಯಾತ ವಿದ್ವಾಂಸರೆನಿಸಿಕೊಂಡ ಚಿದಾನಂದಮೂರ್ತಿಯವರು ನನ್ನೊಡನೆ ಎರಡು ದಿನ ಇರುವವರೆಂದರೆ, ನನ್ನ ಅದೃಷ್ಟ, ಉತ್ಸಾಹಕ್ಕೆ ಎಣೆ ಎಲ್ಲಿ? ಅವರು ಬರುವ ದಿನ ನಾನೇ ಪಾಲಂ ವಿಮಾನ ನಿಲ್ದಾಣಕ್ಕೆ ಹೋಗಿ ಬರಮಾಡಿಕೊಂಡೆ. ಅವರೊಡನೆ ಬಂದಿದ್ದ ಹಾಮಾನಾ, ಯುಜಿಸಿ ಏರ್ಪಾಟು ಮಾಡಿದ್ದ ಆತಿಥ್ಯದ ಸ್ಥಳಕ್ಕೆ ತೆರಳಿದರೆಂದು ಕಾಣುತ್ತದೆ. ಚಿದಾನಂದ ಮೂರ್ತಿಯವರು ಯುಜಿಸಿ ಕೆಲಸದ ಸಮಯದ ಹೊರತಾಗಿ ಎರಡು ದಿನ ನನ್ನೊಡನಿದ್ದರು. ನನ್ನೊಡನೆ ದೆಹಲಿ ಸುತ್ತಾಡಿದರು. ನನ್ನೊಡನೆ, ನಾನು ಸಾಮಾನ್ಯವಾಗಿ ಹೋಗುತ್ತಿದ್ದ ಹೊಟೇಲುಗಳಲ್ಲೇ ಊಟ - ತಿಂಡಿ ಮಾಡಿದರು. ಏಷ್ಯಾದ ಅತಿ ಉದ್ದನೆಯ ಬೀದಿ ಬದಿಯ ಮಾರುಕಟ್ಟೆ, ಎಂದು ಅಂದು ಹೆಸರಾಗಿದ್ದ ಕರೋಲ್‌ಬಾಗ್‌ನ ಅಜಮಲ್‌ಖಾನ್ ರಸ್ತೆಯ ಅಂಗಡಿಗಳಲ್ಲಿ ತಮಗೆ, ತಮ್ಮ ಕುಟುಂಬಕ್ಕೆ ಸೀರೆ, ಸ್ವೆಟರ್, ಶಾಲು ಮುಂತಾದ ವಸ್ತ್ರಗಳನ್ನು ಕೊಂಡರು. ಈ ಮಧ್ಯೆ ನನಗೂ ಉತ್ಸಾಹ ಬಂದು ನಾನೂ ಒಂದು ಉಣ್ಣೆಯ ಕೋಟನ್ನು ಅವರ ಆಯ್ಕೆಯ ಮೇರೆಗೆ ಖರೀದಿಸಿದೆ! ಚಿದಾನಂದಮೂರ್ತಿಯವರು, ಬೆಂಗಳೂರಿಗೆ ಬಂದಾಗ ಖಂಡಿತ ತಮ್ಮ ಮನೆಗೆ ಬಂದು ಆತಿಥ್ಯ ಸ್ವೀಕರಿಸಬೇಕೆಂದು ಆಹ್ವಾನ ನೀಡಿ ಸಂತೋಷದಿಂದ

ಬೆಂಗಳೂರು ವಿಮಾನ ಹತ್ತಿದರು.

ಇದಾದ ಆರು ತಿಂಗಳುಗಳ ನಂತರವೋ ಏನೋ, ಚಿದಾನಂದಮೂರ್ತಿಯವರಿಂದ ಮತ್ತೊಂದು ಪತ್ರ ಬಂತು. ಈ ಬಾರಿ ಯುಜಿಸಿ ಕೆಲಸದ ಮೇಲೆ ಡಾ. ಜಿ.ಎಸ್. ಶಿವರುದ್ರಪ್ಪ ನವರು ಬರುವವರಿದ್ದರು! ಹಿರಿಯರಾದ ಅವರನ್ನು ಎಚ್ಚರಿಕೆಯಿಂದ ನೋಡಿಕೊಂಡು ವಾಪಸ್ ಕಳಿಸಿಕೊಡಬೇಕೆಂದು ಮೂರ್ತಿಯವರು ತಿಳಿಸಿದ್ದರು. ನನ್ನ ಆನಂದಕ್ಕೆ ಪಾರವೇ ಇಲ್ಲ! ನಾನು ದೆಹಲಿ ಹುದ್ದೆಗಾಗಿ ಬೆಂಗಳೂರು ಬಿಡುವಾಗ, ಕನ್ನಡ ಸಾಹಿತ್ಯ ಸಂಸ್ಕೃತಿಗಳ ಸಂಪರ್ಕ ಇನ್ನು ಕಡಿದು ಹೋದಂತೆಯೇ ಎಂದು ಬೇಸರಗೊಂಡಿದ್ದೆ. ಆದರೆ ಈಗ ಬೆಂಗಳೂರಿನಲ್ಲಿ ಇದ್ದರೂ ದೊರೆಯದಂತಹ ಹಿರಿಯ, ಪ್ರಖ್ಯಾತ ಸಾಹಿತಿ - ವಿದ್ವಾಂಸರ ಆತ್ಮೀಯ ಒಡನಾಟ ನನ್ನನ್ನು ಹುಡುಕಿಕೊಂಡು ಬರುತ್ತಿದೆ.. ನಿಗದಿಯಾದ ದಿನ ನಾನು ಪಾಲಂಗೆ ಹೋಗಿ ಜಿಎಸ್ಎಸ್ ಅವರನ್ನು ಟ್ಯಾಕ್ಸಿಯಲ್ಲಿ ನಮ್ಮ ಮನೆಗೆ ಕರೆತಂದೆ. ಆ ಹೊತ್ತಿಗೆ ನಾನು ಕರೋಲ್‌ಬಾಗ್ ಕೊಠಡಿ ಬಿಟ್ಟು ದೂರದ ಬಡಾವಣೆಯೆನಿಸಿದ, 'ಟ್ಯಾಗೋರ್ ಗಾರ್ಡನ್ಸ್'ನಲ್ಲಿ, ನನ್ನೊಡನೆ ಆಕಾಶವಾಣಿಯಲ್ಲೇ ಗುಜರಾತಿ ವಾರ್ತಾವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ದೀಪಕ್ ಧೋಲಕಿಯಾ ಎಂಬ ಗೆಳೆಯನೊಡನೆ ಎರಡು ಕೊಠಡಿಗಳ ಮನೆ ಮಾಡಿದ್ದೆ. ತಿಂಡಿ - ಊಟಗಳನ್ನು ನಾವೇ ಮಾಡಿಕೊಳ್ಳುವ ವ್ಯವಸ್ಥೆ ಕೂಡಾ ಮಾಡಿಕೊಂಡಿದ್ದೆವು. ಜಿಎಸ್ಎಸ್ ಬಗ್ಗೆ ನನ್ನ ಗೆಳೆಯನಿಗೆ ಆಗಲೇ ಹೇಳಿದ್ದೆ. ಜಿಎಸ್ಎಸ್ ಅವರನ್ನು ನೋಡಿದ ಮೇಲಂತೂ ಆತನ ಗೌರವ ಇಮ್ಮಡಿಯಾಗಿ ಆತ ಅವರ ಉಪಚಾರಕ್ಕೆ ಹಾಲು - ಹಣ್ಣು, ಕಾಫಿ - ಟೀಗಳಿಗಾಗಿ ಲಗುಬಗೆಯಿಂದ ಓಡಾಡಿದ. ಜಿಎಸ್ಎಸ್ ಆ ಮನೆಯಲ್ಲಿ ಪರಕೀಯರೆನಿಸಲಿಲ್ಲ - ಅನಂತರ ನೀಡಿದ ನಾಲ್ಕಾರು ಭೇಟಿಗಳಲ್ಲಿ ಈ ಪ್ರೀತಿ ಹೆಚ್ಚುತ್ತಾ ಹೋಯಿತಷ್ಟೆ.

ಜಿಎಸ್ಎಸ್ ಅವರನ್ನು ಮೊದಲ ಬಾರಿಗೆ ನಾನು ಪಾಲಂ ವಿಮಾನ ನಿಲ್ದಾಣದಲ್ಲಿ ಎದುರುಗೊಂಡಾಗ, ಅವರ ಬಗೆಗೆ ನನ್ನಲ್ಲಿ ತುಂಬಿಕೊಂಡಿದ್ದ ಗಾಬರಿ, ಭಯಮಿಶ್ರಿತ ಗೌರವಗಳೆಲ್ಲ ಒಂದು ಕ್ಷಣದಲ್ಲಿ ಮಾಯವಾದವು. ವಿಮಾನ ಇಳಿದು ಬರುತ್ತಿದ್ದ ಗುಂಪಿನೆಡೆಗೆ ನಾನು ಧಾವಿಸುತ್ತಿದ್ದಂತೆಯೇ ಬಹುದಿನಗಳ ಪರಿಚಿತರಂತೆ ಅವರೇ ನನ್ನೆಡೆಗೆ ಬಂದು ಹಸ್ತಲಾಘವ ನೀಡಿ ಬೆನ್ನ ಮೇಲೆ ಕೈ ಇಟ್ಟು ಆತ್ಮೀಯ ಮಾತುಗಳನ್ನಾಡಿದರು. ಒಂದು ತಾಸಿನ ಟ್ಯಾಕ್ಸಿ ಪ್ರಯಾಣದಲ್ಲಿ ನನ್ನ ಕೌಟುಂಬಿಕ ಹಿನ್ನೆಲೆ, ವಿದ್ಯಾಭ್ಯಾಸದ ವಿವರಗಳು ಇತ್ಯಾದಿಗಳನ್ನು ಕೇಳಿ ತಿಳಿದರು. ಆಶ್ಚರ್ಯವೆಂಬಂತೆ ಆಗ 'ತುಷಾರ'ದಲ್ಲಿ ಪ್ರಕಟವಾಗಿದ್ದ ನನ್ನದೊಂದು ಕಥೆಯೋ ಕವನವನ್ನೋ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು. ಮನೆ ತಲುಪುವ ಹೊತ್ತಿಗೆ ಕನ್ನಡದ ಹಿರಿಯ, ಪ್ರಖ್ಯಾತ, ಗೌರವಾನ್ವಿತ ಕವಿ, ಚಿಂತಕ, ಪ್ರಾಧ್ಯಾಪಕ ಡಾ. ಜಿ.ಎಸ್. ಶಿವರುದ್ರಪ್ಪನವರು ನನ್ನ ಹಿರಿಯ ಗೆಳೆಯರಂತಾಗಿದ್ದರು. ಅವರು ಮುಂದೆ, ದೆಹಲಿಯಲ್ಲಿ ಯಾರು ಸಿಕ್ಕರೂ ನನ್ನನ್ನು 'ನನ್ನ ಗೆಳೆಯ' ಎಂದೇ ಪರಿಚಯಿಸುತ್ತಾ ನನ್ನಲ್ಲಿ ಅನೇಕ ಸಲ ಮುಜುಗರ ಉಂಟುಮಾಡುತ್ತಿದ್ದರು! ದೂರದಿಂದ ನೋಡಿದಾಗ ವಿಶಿಷ್ಟ, ಗತ್ತಿನ, ಅಂತರ ಕಾಯ್ದುಕೊಳ್ಳುವ ಗೌರವ ವ್ಯಕ್ತಿತ್ವವಾಗಿ ಕಾಣುತ್ತಿದ್ದ ಜಿಎಸ್ಎಸ್ ಮೊದಲ ಭೇಟಿಯಲ್ಲೇ

ನನಗೆ ಇಷ್ಟು ಆತ್ಮೀಯರಾಗುವಂತೆ ಮಾಡಿದ್ದು ಏನು ಎಂಬುದು ನನಗಿನ್ನೂ ಒಗಟಾಗಿಯೇ ಉಳಿದಿದೆ. ಜಾತಿಯಲ್ಲಿ ನಂಬಿಕೆ ಇಲ್ಲದ ಜಿಎಸ್ಎಸ್‌ಗೆ ನಾನು ಜಾತಿ ಸಂಬಂಧಿಯೂ ಅಲ್ಲ, ಅವರ ಪರಿಚಯದ ಹಿನ್ನೆಲೆಯಿಂದ ಬಂದವನೂ ಅಲ್ಲ; ವಿದ್ಯಾರ್ಥಿಯೂ ಅಲ್ಲ, ಶಿಷ್ಯನೂ ಅಲ್ಲ. ಅವರ ಗಣನೆಗೆ ಬರುವ ಲೇಖಕನೂ ಆಗಿರಲಿಲ್ಲ. ಈ ಬಗ್ಗೆ ನನ್ನ ಆಶ್ಚರ್ಯ ಹಾಗೇ ಉಳಿದಿದೆ! ಸಾಧ್ಯವಿದ್ದರೆ ಜಿಎಸ್ಎಸ್ ಅವರೇ ಪರಿಹರಿಸಬೇಕು...

ಅದಿರಲಿ, ಅನಂತರ ಜಿಎಸ್ಎಸ್ ಅನೇಕ ಬಾರಿ ದೆಹಲಿಗೆ ಬಂದರು. ನನಗೆ ಸಂಜೆ duty ಇದ್ದರೆ ನೇರವಾಗಿ ತಾವೇ ಟ್ಯಾಕ್ಸಿ ಮಾಡಿಕೊಂಡು ಮನೆಗೆ ಬಂದುಬಿಡುತ್ತಿದ್ದರು. ರಾತ್ರಿ ಊಟವಾದ ಮೇಲೆ ಒಂದು ಬಾಳೆಹಣ್ಣು ಹಾಗೂ ಬೆಳಿಗ್ಗೆ ಎದ್ದೊಡನೆ ಒಂದು ಲೋಟ ಕಾಫಿ ಕಡ್ಡಾಯ - ಇವುಗಳನ್ನು ಬಿಟ್ಟರೆ ಅವರ ಊಟ - ತಿಂಡಿ - ವಸತಿ ಬೇಡಿಕೆಗಳು ತೀರಾ ಸಾಮಾನ್ಯ. ಅವರ ಈ ಕಾಫಿ - ಬಾಳೆಹಣ್ಣು ರೂಢಿಯ ಪರಿಚಯವಾಗುವ ಮುನ್ನ ನಾನು ಒಂದಿಷ್ಟು ಪಾಡುಪಟ್ಟದ್ದು ನಿಜ. ಒಮ್ಮೆ ದೆಹಲಿಯ ದಟ್ಟ ಮಂಜು ಕವಿದ ನಡುರಾತ್ರಿಯಲ್ಲಿ ನಾನು ಹಾಗೂ ನನ್ನ ಗೆಳೆಯ ಒಂದು ಕಿಲೋಮೀಟರ್ ದೂರದ ರಜೌರಿ ಗಾರ್ಡನ್ಸ್ ಮಾರುಕಟ್ಟೆಯ ಹಣ್ಣಿನಂಗಡಿಯವನ ಬಾಗಿಲು ಬಡಿದು ಬಾಳೆಹಣ್ಣು ಕೇಳಿ ವಾಚಾಮಗೋಚರ ಬೈಸಿಕೊಂಡದ್ದು; ಬೆಳ್ಳಂಬೆಳಗ್ಗೆ ಕಾಫಿ ಪುಡಿಗಾಗಿ ಬಡಾವಣೆ ತುಂಬ ಪರದಾಡಿ (ಉತ್ತರ ಭಾರತೀಯರ ಮನೆಗಳಲ್ಲಿ ಸಾಮಾನ್ಯವಾಗಿ ಕಾಫಿಪುಡಿ ಇರುವುದಿಲ್ಲ) ಯಾವುದೋ ಒಂದು ಮನೆಯ ಮುಂದಿನ ದಕ್ಷಿಣ ಭಾರತೀಯ ಹೆಸರು ನೋಡಿ ಆ ಮನೆಯ ಒಡತಿಯಿಂದ ಕಾಫಿ ಪುಡಿ ಬೇಡಿದ ಫಜೀತಿ ಇನ್ನೂ 'ರಸ ಘಳಿಗೆ'ಗಳಂತೆ ನನ್ನ ನೆನಪಿನಲ್ಲಿವೆ! ಈ ಎರಡು 'ಕಡ್ಡಾಯ'ಗಳನ್ನು ಬಿಟ್ಟರೆ ಅವರದ್ದು ಸರಳ ಊಟ - ತಿಂಡಿ.

ನಮ್ಮ ಮನೆಯಲ್ಲಿ ನನ್ನ ಗೆಳೆಯ ದೀರ್ಘ ರಜೆ ಹೋದಾಗ ತಿಂಡಿ - ಊಟಗಳ ವ್ಯವಸ್ಥೆ ಅಮಾನತ್ತುಗೊಳ್ಳುತ್ತಿತ್ತು. ಆಗ ನಾನು ದೆಹಲಿಯ ತುಂಬಿದ ಬಸ್ಸುಗಳಲ್ಲಿ ಜಿಎಸ್ಎಸ್ ಅವರನ್ನು ಹತ್ತಿಸಿಕೊಂಡು ಕರೋಲ್‌ಬಾಗ್‌ನ ದಕ್ಷಿಣ ಭಾರತೀಯ ಹೋಟೆಲು ಹಾಗೂ ಮೆಸ್‌ಗಳಿಗೆ - ಮೂರನೇ ಮಹಡಿಯಲ್ಲಿದ್ದ ವೈದ್ಯನಾಥನ್ ಮೆಸ್ಸೂ ಸೇರಿದಂತೆ - ಒಯ್ದು ಆ ಸಾಮಾನ್ಯ ಜನಜಂಗುಳಿಯ ನಡುವೆ ಕೂರಿಸಿದ್ದೇನೆ. ಮಧ್ಯಾಹ್ನದ ಹೊತ್ತು ಎಲ್ಲ ತರಹದ ಜನರಿಂದ ಗಿಜಗುಡುವ ಯು.ಎನ್.ಐ. ಕ್ಯಾಂಟೀನ್ ಎಂಬ ಅರಾಜಕ ತಿಂಡಿಕೇಂದ್ರದಲ್ಲಿ ಅವರನ್ನು ನಿಲ್ಲಿಸಿ ಲೆಮನ್‌ಬಾತ್ - ದೋಸೆ - ಕೇಸರಿಬಾತ್‌ಗಳ ತಟ್ಟೆಗಳನ್ನು ಕೈಗಿರಿಸಿದ್ದೇನೆ. ಎಂದೂ ಜಿಎಸ್ಎಸ್ ಗೊಣಗಲಿಲ್ಲ. In fact he was thoroughly enjoying every-thing - including the fully bloomed tree before him, there. ಇಂತಹ ಕ್ಷಣಗಳಲ್ಲಿ ಎಷ್ಟೋ ಬಾರಿ ಜಿಎಸ್ಎಸ್ ನನಗೆ ಮಗುವಿನಂತೆ ಕಂಡಿದ್ದಾರೆ. ಹಾಗೇ ಇವರ ವ್ಯಕ್ತಿತ್ವದ ಹೊರ ಆವರಣದಲ್ಲಿ ಕಾಣಬರುತ್ತಿದ್ದ ಗತ್ತು, ತಮ್ಮ ಒಳಗಿನ ಮಗುತನವನ್ನು ರಕ್ಷಿಸಿಕೊಳ್ಳಲೆಂದೇ ಧರಿಸಿಕೊಂಡ ಕವಚ ಎಂದೂ ಎಷ್ಟೋಬಾರಿ ನನಗನ್ನಿಸಿದೆ. ದೆಹಲಿಯಲ್ಲಿ ಇವರನ್ನು ರಸ್ತೆ ದಾಟಿಸುವುದೆಂದರೆ ಮಗುವನ್ನು ರಸ್ತೆ ದಾಟಿಸಿದಂತೆಯೇ - ಕೈಹಿಡಿದು ದಢದಢನೆ

ದಾಟಿಸಿದರೇ ಸರಿ, ಇಲ್ಲದಿದ್ದರೆ ರಸ್ತೆ ಖಾಲಿಯಾಗಲೆಂದು ಕಾಯುತ್ತಲೇ ನಿಂತಿರುತ್ತಾರೆ!

ಜಿಎಸ್‌ಎಸ್ ಎಂದೂ ನನ್ನೊಂದಿಗೆ ತಾವು ಬಂದ ಅಧಿಕೃತ ಕೆಲಸಗಳ ವಿವರಗಳ ಬಗ್ಗೆ ಮಾತನಾಡುತ್ತಿರಲಿಲ್ಲ. ನಾನು ಕೇಳಲೂ ಹೋಗುತ್ತಿರಲಿಲ್ಲ. ಒಮ್ಮೆ ಹೀಗಾಯಿತು. ಅವರು ಅಧಿಕೃತ ಕೆಲಸವೆಂದು ಬಂದ ದಿನವೇ ಯು.ಪಿ.ಎಸ್.ಸಿ. ಸಂದರ್ಶನವೆಂದು ದೇವನೂರ ಮಹಾದೇವ, ಶ್ರೀಕೃಷ್ಣ ಆಲನಹಳ್ಳಿ ಹಾಗೂ ಇನ್ನೊಂದಿಬ್ಬರು ಗೆಳೆಯರು ಬಂದಿಳಿದರು. ಹೆಚ್ಚಿಗೆ ಮಾತನಾಡದ ಮಹಾದೇವ ಹಾಗೂ ಮಾತೇ ಸರ್ವಸ್ವವಾದ ಕೃಷ್ಣ ಒಂದು ಕೊಠಡಿಯಲ್ಲಿ; ನಾನು ಜಿಎಸ್‌ಎಸ್ ಇನ್ನೊಂದು ಕೊಠಡಿಯಲ್ಲಿ. ಜಿಎಸ್‌ಎಸ್ ಯಾರೊಂದಿಗೂ ಹೆಚ್ಚು ಮಾತನಾಡದೆ ಯಾವುದೋ ಪುಸ್ತಕ ಹಿಡಿದುಬಿಟ್ಟರು. ಕೃಷ್ಣ ಕೆದಕಿ, ತಿಣುಕಿ ಏನೇನೋ ಪ್ರಶ್ನಿಸಿದ, ಜಿಎಸ್‌ಎಸ್ ಬಂದಿರುವ ಉದ್ದೇಶವನ್ನು ತಿಳಿಯಲು. ಜಿಎಸ್‌ಎಸ್ ಯುಜಿಸಿ ಕೆಲಸವೆಂದೇ ಹೇಳುತ್ತಾ ಬಂದರು, ಮಾರನೆಯ ದಿವಸ ಬೆಳಗ್ಗೆ ಆಟೋ ಹತ್ತಿ 'ಯು.ಪಿ.ಎಸ್.ಸಿ. ಕಡೆ ಹೋಗೋಣ' ಎಂದು ನನಗೆ ಸೂಚಿಸುವವರೆಗೆ. ಎಲ್ಲ ಮತ್ತೆ ಸಂಜೆ ಸೇರಿದಾಗ ಜಿಎಸ್‌ಎಸ್ ಎಂದಿನಂತೆ ನಿರಾಳ, ಸಹಜ, ಸರಳ - ಯಾವುದೋ ತಾಂತ್ರಿಕ ಕಾರಣದಿಂದ ಸಂದರ್ಶನದಿಂದಲೇ ವಂಚಿತನಾಗಿದ್ದ ಕೃಷ್ಣನ ಗದ್ದಲದ ನಡುವೆಯೂ! ಮಾರನೆಯ ದಿನ ಕೃಷ್ಣ ಕನಾಟ್ ಸರ್ಕಸ್‌ನ ಯಾವುದಾವುದೋ ಮೂಲೆ ಅಂಗಡಿಗಳಿಗೆ ನನ್ನನ್ನು ನುಗ್ಗಿಸಿಕೊಂಡು ಹೋಗಿ, ತನ್ನ ಕಥೆ - ಕವನ - ಕಾದಂಬರಿಗಳ ಯಾವುದಾವುದೋ ಭಾಷೆಗಳ ಅನುವಾದಗಳನ್ನು ಸಂಗ್ರಹಿಸಿ, ಅವನ್ನು ಯು.ಪಿ.ಎಸ್.ಸಿ. ಆಫೀಸಿಗೆ ಹೇರಿಕೊಂಡು ಹೋಗಿ, ಒಳಗೆ ಪ್ರವೇಶವಿಲ್ಲವೆಂದರೂ ನುಗ್ಗಿ, ಯಾವನೋ ಸೆಕ್ರೆಟರಿ ಮುಂದೆ ಆ ಪುಸ್ತಕಗಳನ್ನು ಕುಕ್ಕಿ 'ಇಂತಹ ಪುಸ್ತಕಗಳ ಲೇಖಕನಿಗೆ ಸಂದರ್ಶನ ನೀಡದ ಯು.ಪಿ.ಎಸ್.ಸಿ. ಇದ್ದರೆಷ್ಟು ಬಿಟ್ಟರೆಷ್ಟು...' ಎಂದು ಕೆಟ್ಟ ಇಂಗ್ಲೀಷ್ - ಕನ್ನಡ - ಹಿಂದಿಗಳಲ್ಲಿ ಕೂಗಾಡಿ ಅಲ್ಲಿದ್ದ ಎಲ್ಲರಲ್ಲೂ ಗಾಬರಿ ಹುಟ್ಟಿಸಿ, ತಾನೂ ಗಾಬರಿಯಾದ ಸಂಗತಿಯನ್ನೂ ಇಲ್ಲಿ ಉಲ್ಲೇಖಿಸಬಹುದು.

ಜಿಎಸ್‌ಎಸ್ ನನ್ನ ಸಾಹಿತ್ಯಾಭಿರುಚಿ ಬಗ್ಗೆ ಆಸಕ್ತಿ ತೋರಿಸಿದ್ದು ತಮ್ಮ ಎರಡನೆಯದೋ ಮೂರನೆಯದೋ ಭೇಟಿಯಲ್ಲಿ. 'ಸಂಕ್ರಮಣ'ದಲ್ಲಿ ಪ್ರಕಟವಾಗಿದ್ದ 'ದಾಟು' ಕಾದಂಬರಿ ಕುರಿತ ನನ್ನ ಭಯಂಕರ ವಿಮರ್ಶೆಯನ್ನೂ ಅಷ್ಟೇ ಭಯಂಕರವಾಗಿ ಹೊಗಳಿದರು ಜಿಎಸ್‌ಎಸ್. (ಜಿಎಸ್‌ಎಸ್ ವಾಸ್ತವವಾಗಿ ಎಸ್.ಎಲ್. ಭೈರಪ್ಪನವರ ಅಭಿಮಾನಿ ಎಂದು ನಂತರ ಗೊತ್ತಾಯಿತು!) ಆ ಹೊತ್ತಿನಲ್ಲೇ 'ಕಸ್ತೂರಿ'ಯಲ್ಲಿ ಲೋಹಿಯಾ ಕುರಿತು ಪ್ರಕಟವಾಗಿದ್ದ ನನ್ನ ಲೇಖನದ ಬಗ್ಗೆಯೂ ಮೆಚ್ಚುಗೆ ಸೂಚಿಸಿದರು. ಮತ್ತೊಮ್ಮೆ ಬಂದಾಗ ಮೈಸೂರಿನ ವಿ.ಎಚ್. ಗೌಡರು ಪ್ರಕಾಶಿಸುತ್ತಿದ್ದ 'ಸಮನ್ವಯ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ 'ಜಾತಿಪದ್ಧತಿ' ಕುರಿತ ನನ್ನ ವಿಶ್ಲೇಷಣೆ (ಅದರ ಪ್ರತಿಯೊಂದನ್ನು ನಾನು ಅವರಿಗೆ ಕಳಿಸಿದ್ದೆನೆಂದು ಕಾಣುತ್ತದೆ) ಬಗ್ಗೆ ಬಹುಮೆಚ್ಚಿಗೆಯ ಮಾತುಗಳನ್ನಾಡಿದರು. ಬೆಂಗಳೂರಿಗೆ ಬಂದಾಗ ಮನೆಗೆ ಬರಬೇಕೆಂದರು. ನಾನೂ ಬೆಂಗಳೂರಿಗೆ ಬಂದಾಗಲೆಲ್ಲಾ ಜಿಎಸ್‌ಎಸ್ ಅವರನ್ನು ಮನೆಯಲ್ಲೋ, ಕನ್ನಡ ವಿಭಾಗದಲ್ಲೋ ಭೇಟಿ ಮಾಡಲಾರಂಭಿಸಿದೆ. ಜಿಎಸ್‌ಎಸ್ ಪ್ರತಿ

ಭೇಟಿಯಲ್ಲೂ ಮೊದಲು ಕೇಳುತ್ತಿದ್ದುದು 'ಇತ್ತೀಚೆಗೆ ಏನು ಓದಿದಿರಿ?' ಅಲ್ಲಿಂದ ಆರಂಭವಾದ ಮಾತು ಸಮಕಾಲೀನ ಸಾಹಿತ್ಯದ ಚರ್ಚೆ ಹಾಗೂ ರಾಜಕಾರಣಗಳನ್ನು ಸುತ್ತು ಹಾಕಿಕೊಂಡು ರುಚಿಕರವಾದ ಊಟದಲ್ಲಿ ಮುಗಿಯುತ್ತಿತ್ತು. ನನಗೆ ನಿಜವಾಗಿ ಗಾಬರಿಯಾಗುತ್ತಿತ್ತು - ನನ್ನನ್ನೇಕೆ ಇವರು ಇಷ್ಟು ಹಚ್ಚಿಕೊಂಡಿದ್ದಾರೆಂದು!

ಒಮ್ಮೆ ನಾನು ಯಾವುದೋ ಸಮಾಜವಾದಿ ಅಧ್ಯಯನ ಶಿಬಿರಕ್ಕೆಂದು ಹರ್ಯಾಣದ ಯಾವುದೋ ಹಳ್ಳಿಗೆ ಹೋಗಿ ದೆಹಲಿಗೆ ಹಿಂತಿರುಗಿದರೆ ನಮ್ಮ ಮನೆಯ ಬಾಗಿಲು ಒಳಗಿಂದ ಬೋಲ್ಟ್ ಆಗಿದೆ! ಗಾಬರಿಯಿಂದ ಬಾಗಿಲು ತಟ್ಟಿದರೆ ಬಾಗಿಲು ತೆಗೆದವರು ಜಿಎಸ್ಎಸ್... ದಿವಾನ್ ಮೇಲೆ ಪದ್ಮಾ ಮೇಡಂ! ಬೇಸಿಗೆಯ ಆ ದಿನಗಳಲ್ಲಿ ಸೊಳ್ಳೆಗಳ ಕಾಟದಿಂದ ತತ್ತರಿಸಿ ಹೋಗಿದ್ದ ಆ ದಂಪತಿಗಳು ನಾನು ಮನೆಯನ್ನು ಇಟ್ಟುಕೊಂಡಿದ್ದ ರೀತಿನೀತಿಗಳ ಬಗ್ಗೆ ಕಟು ವ್ಯಾಖ್ಯಾನ ಮಾಡಿದರು. ಬೇಗ ವಿವಾಹವಾಗಲು ಸೂಚಿಸಿದರು. ವಿವಾಹವಾಗದೆಯೂ ಚೊಕ್ಕಟವಾಗಿರಬಹುದೆಂದು ಸಾಬೀತು ಮಾಡುವ ಜವಾಬ್ದಾರಿ ಈಗ ನನ್ನದಾಯಿತು. ನಾನು ಕೂಡಲೇ, ಆಗ್ಗೆ ದೆಹಲಿ ವಿಶ್ವವಿದ್ಯಾಲಯ ಸೇರಿದ್ದ ಜಿಎಸ್ಎಸ್ ಅವರ ಶಿಷ್ಯ ಟಿ.ಎಸ್. ಸತ್ಯನಾಥ್ ಅವರನ್ನು ಸಂಪರ್ಕಿಸಿ ದಂಪತಿಗಳ ದೆಹಲಿ ವಾಸ್ತವ್ಯ ಹಾಗೂ ಸುತ್ತಮುತ್ತಲಿನ ಸ್ಥಳಗಳಿಗೆ ತಿರುಗಾಟದ ಚೊಕ್ಕ ವ್ಯವಸ್ಥೆ ಮಾಡಿ ಆಫೀಸಿಗೆ ಹೋದರೆ, ತಾವು ಬರುವುದಾಗಿ ಜಿಎಸ್ಎಸ್ ಬರೆದಿದ್ದ ಪತ್ರ ಹತ್ತು ದಿನಗಳ ಹಿಂದೆಯೇ ನನ್ನ ಡ್ರಾನಲ್ಲಿ ಬಿದ್ದಿದೆ!

ದೆಹಲಿಯಲ್ಲಿ ಇದ್ದಷ್ಟೂ ದಿನವೂ ನನಗೆ ಸಾಹಿತ್ಯಕ್ಕಿಂತ ರಾಜಕಾರಣದ ಆಕರ್ಷಣೆಯೇ ಜಾಸ್ತಿಯಾಗಿತ್ತು. ಅದಕ್ಕೆ ಮುಖ್ಯ ಕಾರಣ ನಾನು ದೆಹಲಿಗೆ ಹೋದ ಕೆಲವೇ ತಿಂಗಳುಗಳಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾಗಿ ಇಡೀ ದೆಹಲಿ ಉದ್ವಿಗ್ನಗೊಂಡದ್ದು. ಲೋಹಿಯಾ ತತ್ವಚಿಂತನೆಯ ವಿದ್ಯಾರ್ಥಿಯಾಗಿದ್ದ ನಾನು ಸಹಜವಾಗಿಯೇ ತುರ್ತುಪರಿಸ್ಥಿತಿ ವಿರೋಧಿ ಆಂದೋಲನಕ್ಕೆ ಸೆಳೆಯಲ್ಪಟ್ಟೆ. ೧೯೭೫ರ ಜೂನ್ - ಜುಲೈ ತಿಂಗಳುಗಳಲ್ಲಿ ಇದ್ದಕ್ಕಿದ್ದಂತೆ ಬೀದಿಗೆ ನುಗ್ಗುತ್ತಿದ್ದ ಪೊಲೀಸ್ ಪಡೆ ಮೊದಲೇ ಗುರುತಿಟ್ಟುಕೊಂಡಂತೆ ಬಸ್ಸುಗಳಿಂದ ಇಳಿಯುತ್ತಿದ್ದ ಜನರನ್ನು ಅತ್ತಿತ್ತ ತಳ್ಳಿ ತಮಗೆ ಬೇಕಾದವರನ್ನು ವ್ಯಾನುಗಳಿಗೆ ತುಂಬಿಕೊಂಡು ಹೋಗುತ್ತಿದ್ದುದನ್ನು ನಾನು ಕಣ್ಣಾರೆ ನೋಡುತ್ತಿದ್ದೆ. ಹೀಗೆ ವ್ಯಾನ್‌ಗೆ ತುಂಬಲ್ಪಟ್ಟು ತಿಂಗಳುಗಟ್ಟಲೆ ಕಾಣೆಯಾಗಿ ಕೊನೆಗೆ ತುರ್ತುಪರಿಸ್ಥಿತಿ ಮುಕ್ತಾಯವಾದಾಗ ಮುರಿದ ಮೂಳೆಗಳೊಂದಿಗೆ ಬಿಡುಗಡೆಯಾದವರಲ್ಲಿ ನನ್ನ ಸರ್ದಾರ್ಜೀ ಸ್ನೇಹಿತ ಜಸವೀರ್‌ಸಿಂಗ್‌ನೂ ಒಬ್ಬ. ಮುಂದೆ ಆತ ಜವಾಹರಲಾಲ್ ವಿಶ್ವವಿದ್ಯಾಲಯ ಸೇರಿ, ಕಿಷನ್ ಪಟ್ನಾಯಕ್ ಮಾರ್ಗದರ್ಶನದಲ್ಲಿ ಅಲ್ಲಿ ಸಮಾಜವಾದಿ ವಿದ್ಯಾರ್ಥಿ ಆಂದೋಲನವನ್ನು ಕಟ್ಟಿದ. ಈತನಿಗೆ ಜೊತೆಯಾಗಿ ನಿಂತವರಲ್ಲಿ ಈಗ ಕೇಂದ್ರದಲ್ಲಿ ರೈಲ್ವೇ ಸಹಾಯಕ ಮಂತ್ರಿಯಾಗಿರುವ ಸಮತಾಪಕ್ಷದ ನಾಯಕ ದಿಗ್ವಿಜಯ್‌ಸಿಂಗ್ ಕೂಡಾ ಒಬ್ಬ. ಈ ಗುಂಪಿನ ಸಂಪರ್ಕದಲ್ಲಿದ್ದ ನನಗೆ ಸಾಹಿತ್ಯ ಎರಡನೆಯ ಆದ್ಯತೆಯಾಗಿತ್ತು. ಮೂರನೇ ಆದ್ಯತೆ ನನ್ನ ಆಕಾಶವಾಣಿ ಕೆಲಸ! ಇಂತಹ ಹಿನ್ನೆಲೆಯಲ್ಲಿ ದೆಹಲಿಯಲ್ಲಿ 'ಕ್ರಿಯಾಶೀಲ'ನಾಗಿದ್ದ ನನಗೆ ಆಗಾಗ್ಗೆ ದೆಹಲಿ ಭೇಟಿ

ಮೂಲಕ ಸಾಹಿತ್ಯಸ್ಪರ್ಶ ನೀಡುತ್ತಿದ್ದವರು ಜಿಎಸ್‌ಎಸ್. ಅವರ ಒಡನಾಟವೇ ಸಾಹಿತ್ಯ - ಸಂಸ್ಕೃತಿಗಳ ಸೂಕ್ಷ್ಮತೆ - ಘನತೆಗಳ ಸ್ಪರ್ಶ ಮಾಡಿಸಿಬಿಡುತ್ತಿತ್ತು. ಅವರು ರಾಜಕಾರಣದ ಬಗ್ಗೆ ಅಸಡ್ಡೆಯನ್ನೇನೂ ಹೊಂದಿರಲಿಲ್ಲ. ಅವರೂ ಲೋಹಿಯಾ ಕುರಿತು ಅಪಾರ ಗೌರವ ಹೊಂದಿದವರಾಗಿದ್ದರು. ನಾನು ಸಂಪಾದಿಸಿದ 'ಸಂಕ್ರಮಣ'ದ ಲೋಹಿಯಾ ವಿಶೇಷ ಸಂಚಿಕೆಯನ್ನು ಅವರು ಗಮನಿಸಿ ಮೆಚ್ಚುಗೆಯ ಮಾತುಗಳನ್ನಾಡಿದ್ದರು. ನಾನು ಸಾಹಿತ್ಯ ವಿಮರ್ಶೆ ಬರೆದರೆ ಚೆನ್ನ ಎಂದು ಪರೋಕ್ಷವಾಗಿ ಸೂಚಿಸಿದವರೂ ಅವರೇ. ಜಿಎಸ್‌ಎಸ್ ಅವರ ರೀತಿಯೇ ಹಾಗೆ - ನಿಮಗೆ ಗೊತ್ತಿಲ್ಲದಂತೆಯೇ ನಿಮ್ಮನ್ನು ಒಂದು ಶಿಸ್ತಿನೆಡೆಗೆ ಒಯ್ಯುತ್ತಿರುತ್ತಾರೆ.

೭೭ರ ನಂತರದ ಜನತಾ ರಾಜಕಾರಣದಲ್ಲಿ - ನಾನು ಜೆ.ಪಿ.ಯವರ 'ಸೆರೆಮನೆ ದಿನಚರಿ'ಯನ್ನು ಅನುವಾದಿಸಿ; ಕಿಷನ್ ಪಟ್ನಾಯಕ್ ಜೊತೆಗೂಡಿ ಹೊಸ ಸಮಾಜವಾದಿ ಆಂದೋಲನ ರೂಪಿಸುವ ಪೂರ್ವಭಾವಿ ಸಮ್ಮೇಳನವೊಂದನ್ನು ಬೆಂಗಳೂರಿನಲ್ಲಿ ಆಯೋಜಿಸಿ; ದೆಹಲಿಯಲ್ಲಿದ್ದುಕೊಂಡೇ ಮೈಸೂರಿನಿಂದ ನೆಲಮನೆ ದೇವೇಗೌಡ ಹಾಗೂ ದೇವನೂರ ಮಹಾದೇವ ಅವರ ಸಹಕಾರದಿಂದ 'ಮಾನವ' ಎಂಬ ಸಮಾಜವಾದಿ ಮಾಸಪತ್ರಿಕೆ ನಡೆಸಿ ಆಗ 'ಸುದ್ದಿ'ಯಾಗಿದ್ದೆ - ನಾನು ಕರಗಿ ಹೋಗಿ ಯಾವುದೋ ಒಂದು ಪುಡಿ ರಾಜಕೀಯ ಪಕ್ಷದ ನಾಯಕಮಣಿಯಾಗಿ ಅವನತಿಗೊಳ್ಳದಂತೆ ನನ್ನನ್ನು ರಕ್ಷಿಸಿದವರಲ್ಲಿ ಜಿಎಸ್‌ಎಸ್ ಅವರೂ ಒಬ್ಬರು. ಇನ್ನಿಬ್ಬರು, ರಾಜಕಾರಣವನ್ನು ಕನಸಿಗೇ ಸೀಮಿತಗೊಳಿಸಿಕೊಂಡಂತಿರುವ ದೇವನೂರ ಮಹಾದೇವ ಹಾಗೂ ರಾಜಕಾರಣದ ತಾಯಿ ಗುಣವನ್ನಷ್ಟೇ ರೂಢಿಸಿಕೊಂಡು ತಂದೆ ಗುಣವನ್ನೇ ಮರೆತಂತಿರುವ ಕಿಷನ್ ಪಟ್ನಾಯಕ್. ಜೊತೆಗೆ ನಾನು ಕಲಿತ ಗಣಿತಶಾಸ್ತ್ರದ ಒಟ್ಟಂದದ ಶಿಸ್ತೂ ಇಲ್ಲಿ ಕೆಲಸ ಮಾಡಿರಬಹುದು. ಅದೇನೇ ಇರಲಿ, ಜಿಎಸ್‌ಎಸ್, ಅವರ ಶಿಷ್ಯರಿಗೆ ಸಾಹಿತ್ಯ ಗುರುವಾದರೆ ನನಗೆ ಸಾಂಸ್ಕೃತಿಕ ಗುರುವಾದರು. ಸಾಹಿತ್ಯದ ಕಡೆಯಿಂದ ಸಂಪೂರ್ಣ ರಾಜಕಾರಣದ ಕಡೆ ಹೊರಳುತ್ತಿದ್ದ ನನ್ನನ್ನು ನನಗೆ ಗೊತ್ತಿಲ್ಲದಂತೆಯೇ - ಅವರಿಗೂ ಗೊತ್ತಿಲ್ಲದಂತೆಯೂ ಇರಬಹುದು - ಮತ್ತೆ ಸಾಹಿತ್ಯದ ಕಡೆ ಸೆಳೆದರು. ತಮ್ಮ ನಡೆ - ನುಡಿಗಳ ಮೂಲಕವೇ, ಆತ್ಯಂತಿಕವಾಗಿ ಸಾಹಿತ್ಯ - ಸಂಸ್ಕೃತಿಗಳೇ ಮನುಷ್ಯನನ್ನು ಅಧೋಗತಿಯಿಂದ ರಕ್ಷಿಸಬಲ್ಲವು ಎನ್ನುವುದನ್ನು ಮನದಟ್ಟು ಮಾಡಿದರು. ಅಥವಾ ಅವರ ಸುಸಂಸ್ಕೃತ ವ್ಯಕ್ತಿತ್ವದ ಸಹವಾಸದಿಂದಾಗಿ ನನಗೇ ಮನದಟ್ಟಾಯಿತು. ಈ ನಂಬಿಕೆಯಿಂದಾಗಿಯೇ ನಾನು, ಮುಂದೆ ಸ್ಥಾಪಿತವಾದ ಬಂಡಾಯ ಸಾಹಿತ್ಯ ಸಂಘಟನೆಯ ಜೊತೆ ಗುರುತಿಸಿಕೊಳ್ಳಲು ಇಷ್ಟಪಡದಿದ್ದುದು. ಮೂಲತಃ ಅರಾಜಕವಾಗಿರುವ ಸಾಹಿತ್ಯಕ್ಕೆ ರಾಜತ್ವದ ಕಿರೀಟ ತೊಡಿಸ ಹೊರಟ ಈ ಸಂಘಟನೆಯ ನಾಯಕರು ಎಲ್ಲಿಂದ ಹೊರಟು ಈಗ ಎಲ್ಲಿಗೆ ತಲುಪಿದ್ದಾರೆ ಎಂಬುದನ್ನು ಗಮನಿಸಿದರೇ ಸಾಹಿತ್ಯ - ಸಂಸ್ಕೃತಿಗಳ ಸ್ವಾಯತ್ತತೆಗಳಲ್ಲಿ ಹಸ್ತಕ್ಷೇಪ ಮಾಡುವುದು ಎಷ್ಟು ಅಸಾಹುತಕಾರಿ ಎಂಬುದರ ಅರಿವಾಗುತ್ತದೆ. ಆದರೆ ವಿಚಿತ್ರವೆಂದರೆ ಸ್ವತಃ ಜಿಎಸ್‌ಎಸ್ ಬಂಡಾಯ ಸಾಹಿತ್ಯ ಸಂಘಟನೆಗೆ ವಿರೋಧವನ್ನೇನೂ ವ್ಯಕ್ತಪಡಿಸಲಿಲ್ಲ; ಬದಲಾಗಿ ಈಗಲೂ ಸಹಾನುಭೂತಿಯನ್ನೇ ಹೊಂದಿರುವವರು. ಅದು ಜಿಎಸ್‌ಎಸ್ ಆರಿಸಿಕೊಂಡ ತಾಳುವಿಕೆ -

ಬಾಳುವಿಕೆಯ ಮಾರ್ಗ, ದೊಡ್ಡವರ ಮಾರ್ಗ.

ಜಿಎಸ್ಎಸ್ ಬಗ್ಗೆ ಇಷ್ಟೆಲ್ಲವನ್ನೂ ನಾನು ಹೇಳುತ್ತಿರುವುದರ ಹಿಂದೆ ನಾವು ಈಗ ನಮೂದಿಸಿರುವ ಸಂಗತಿಗಳಷ್ಟೇ ಇರಲಾರವು ಎಂಬ ಅನುಮಾನವೂ ನನಗಿದೆ. ಈಗ ೨೦೧೧ರಲ್ಲಿ ನಾನು ಒಮ್ಮೆ ನಿಂತು ತಿರುಗಿ ನೋಡಿದಾಗ ಅನ್ನಿಸಿದ್ದನ್ನು ಒಂದು ನಿರ್ದಿಷ್ಟ ಕಾಲಘಟ್ಟಕ್ಕೆ ಆರೋಪಿಸಿ ಹೇಳುವ ತಪ್ಪು ಮಾಡುತ್ತಿದ್ದೇನೇನೋ ಎಂದೂ ನನಗೆ ಅನ್ನಿಸುತ್ತಿದೆ. ಇರಬಹುದು, ಏಕೆಂದರೆ ವಾಸ್ತವ ಘಟನೆಗಳಲ್ಲಿ ಸ್ಥಿತಗೊಂಡ ಕಾಲವೂ ಅವುಗಳ ನೆನಪುಗಳಲ್ಲಿ ಪ್ರಕಟಗೊಳ್ಳುವ ಕಾಲವೂ ಬೇರೆ ಬೇರೆಯೇ! ನಾನು ದೆಹಲಿಯಿಂದ ಕರ್ನಾಟಕಕ್ಕೆ ವಾಪಸ್ ಬಂದ ಮೇಲೂ ಜಿಎಸ್ಎಸ್ ನನ್ನ ಬಗ್ಗೆ ಅದೇ ಪ್ರೀತಿ ತೋರಿದ್ದಾರೆ. ೨೦ - ೨೫ ವರ್ಷಗಳ ಹಿಂದೆ ಅವರು ಏರ್ಪಡಿಸುತ್ತಿದ್ದ ವಿಚಾರ ಸಂಕಿರಣಗಳ ಯಾವ ವೇದಿಕೆಯ ಮೇಲಿನ ಗಣ್ಯರನ್ನು ನಾನು ಬೆರಗುಗಣ್ಣುಗಳಿಂದ ನೋಡಿ ಆಲಿಸುತ್ತಿದ್ದೆನೋ ಅಂತಹ ವೇದಿಕೆಗೆ ನನ್ನನ್ನು ಹತ್ತಿಸಿದ್ದಾರೆ. ಕನ್ನಡ ಅಧ್ಯಯನ ಕೇಂದ್ರದ ದಶಮಾನೋತ್ಸವ ಸಂದರ್ಭದ ವಿಚಾರ ಸಂಕಿರಣದಲ್ಲಿ ಒಂದು ಗೋಷ್ಠಿಯ ಪ್ರಾಸ್ತಾವಿಕ ಭಾಷಣಕಾರರನ್ನಾಗಿಯೂ; ನಂತರ 'ಕಾದಂಬರಿಕಾರರಾಗಿ ಕಾರಂತ' ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡನೆಗಾಗಿಯೂ ಆಹ್ವಾನಿಸಿ ನನ್ನನ್ನು - ಹಾಗೂ ಬಹುಶಃ ಹಲವರನ್ನು - ಬೆರಗುಗೊಳಿಸಿದ್ದಾರೆ. ರಾಜಕೀಯ ಒಳನೋಟಗಳುಳ್ಳ ವಿಮರ್ಶೆ ಬೆಳೆಸುವ ಕಡೆ ಜಿಎಸ್ಎಸ್ ಆಗ ವಿಶೇಷ ಗಮನ ನೀಡುತ್ತಿದ್ದು, ಅದರ ಅಂಗವಾಗಿ ಅವರು ನನಗೆ ಈ ಅವಕಾಶಗಳನ್ನು ನೀಡಿದರು ಎಂದು ನಾನು ಭಾವಿಸಿದ್ದೇನೆ. ನಂತರ ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಮೇಲೂ ಹಲವು ವಿಚಾರ ಸಂಕಿರಣಗಳಿಗೆ ನನ್ನನ್ನು ಆಹ್ವಾನಿಸಿದ್ದಾರೆ. ಕನ್ನಡದ ಅತ್ಯಂತ ಹಿರಿಯ ಹಾಗೂ ಪ್ರತಿಭಾನ್ವಿತ ಸಾಹಿತಿಗಳ ಮಧ್ಯೆ ನನ್ನನ್ನು ಕೂಡಿಸಿ ತಮಾಷೆ ನೋಡಿದ್ದಾರೆ. ಈ ಎಲ್ಲವೂ ನನ್ನ ಈ ಮೇಲಿನ ಮಾತುಗಳ ಹಿಂದೆ ಕೆಲಸ ಮಾಡಿರಬಹುದು.

ಅದೇನೇ ಇರಲಿ, ನಾನು ಅವರ ನಿರೀಕ್ಷೆಯ ಮಟ್ಟಕ್ಕೆ ಬೆಳೆಯಲಾಗಲಿಲ್ಲವೆಂದು ನನಗೆ ಗೊತ್ತಿದೆ. ಅದಕ್ಕೆ ನನ್ನಲ್ಲಿನ ಆ ರೀತಿಯ ಪ್ರತಿಭೆಯ ಕೊರತೆ ಒಂದು ಕಾರಣವಾದರೆ, ಇಂತಹ ಔಪಚಾರಿಕ ಚರ್ಚೆ-ಸಂವಾದ-ವಾಗ್ವಾದಗಳ ಕುರಿತು ನಮ್ಮ 'ಗುರು' ಕೆ.ಎಂ. ಶಂಕರಪ್ಪ ಆಗಾಗ್ಗೆ ನೀಡುತ್ತಿದ್ದ ಎಚ್ಚರಿಕೆಯೂ ಇನ್ನೊಂದು ಕಾರಣವಾಗಿರಬಹುದು. ಅನೇಕ ಸಲ ನನಗೇ ಅನ್ನಿಸಿದೆ - ಜಿಎಸ್ಎಸ್ ಬೆಳೆಸಿದರೆಂದು ಹೇಳಲಾಗುವ ಪ್ರತಿಭಾನ್ವಿತ ವಿಮರ್ಶಕಗಣ ಏನಿದೆ, ಅದು ಸಾಹಿತ್ಯ ನಿರ್ಮಿತಿಯ ಆತ್ಯಂತಿಕ ಸಾರ್ಥಕತೆಯಾದ ಅಹಂಕಾರ ನಿವಾರಣೆಯ ವಿರುದ್ಧ ದಿಕ್ಕಿನಲ್ಲೇ ರಭಸದ ಹೆಜ್ಜೆಗಳನ್ನಿಟ್ಟಿದೆ ಎಂದು. ಇಂತಹ ವಿಮರ್ಶೆಯಲ್ಲಿ ಬೆಳೆಯುವುದು ವಿಮರ್ಶಕನ ಅಹಂಕಾರವೇ ಹೊರತು ವಿಮರ್ಶೆಗೊಳಗಾದ ಕೃತಿಯಲ್ಲ. ಇದು ಪ್ರತಿಭಾ ವಿಕ್ಷಿಪ್ತತೆ. ಹಾಗೆಂದೇ, ಜಿಎಸ್ಎಸ್ ಮುಂದುವರಿಸಿದರೆಂದು ಹೇಳಲಾಗುತ್ತಿರುವ ಕುವೆಂಪು ಪರಂಪರೆ ಈ ಪ್ರತಿಭಾನ್ವಿತ ವಿಮರ್ಶಕ ಗಣದಿಂದ ಪೂರ್ಣಪ್ರಮಾಣದಲ್ಲಿ ಪುನರನ್ವೇಷಣೆಗಾಗಲೀ ಮರುಮೌಲ್ಯಮಾಪನಕ್ಕಾಗಲಿ ಒಳಗಾಗಲೇ ಇಲ್ಲ. ಹಾಗಾಗಿಯೇ ಕನ್ನಡ ಸಂಸ್ಕೃತಿಯ 'ಆಧುನಿಕ ಮಹಾಕಾವ್ಯ'ವಾದ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಈ ಹೊಸ, ಸಂಸ್ಕೃತಿ - ಕೇಂದ್ರಿತವೆಂದು ಹೇಳಲಾದ

ವಿಮರ್ಶೆಯ ಪರಿಧಿಯಂಚಿನಲ್ಲೇ ಉಳಿದುಹೋದ ವಿಪರ್ಯಾಸವನ್ನು ನಾವಿಂದು ನೋಡಬೇಕಾಗಿದೆ. ಜಿಎಸ್‌ಎಸ್ ಎಂತಹ ಉದಾರವಾದಿಯೆಂದರೆ, **he allowed himself to be overwhelmed by his disciples**. ಇದಕ್ಕೆ ಮುಖ್ಯ ಕಾರಣವೆಂದು ನನಗನ್ನಿಸಿದ್ದು, ಕುವೆಂಪು ಅವರಲ್ಲಿ ಅವರ ಆಳವಾದ ಆಧ್ಯಾತ್ಮಿಕ ನಂಬಿಕೆಯಿಂದಾಗಿ ಕಾಣೆಯಾಗಿದ್ದ **self doubt**, ಜಿಎಸ್‌ಎಸ್ ಅವರಲ್ಲಿ ಪದೇ ಪದೇ ಕಾಣತೊಡಗಿದ್ದುದು. ಇದು ಜಿಎಸ್‌ಎಸ್ ಅವರ ಹೊಸಕಾಲದ ಅರಿವೋ, ದೌರ್ಬಲ್ಯವೋ ಎಂಬುದನ್ನು ಬರುವ ಕಾಲವೇ ನಿರ್ಣಯಿಸಬೇಕು.

ಭವಿಷ್ಯಕಾಲದ ಈ ನಿರ್ಣಯ ಏನೇ ಆಗಿರಲಿ, ಅದು ವರ್ತಮಾನದ ಜಿಎಸ್‌ಎಸ್ ಅವರ ವ್ಯಕ್ತಿತ್ವಕ್ಕೆ ಕುಂದುಂಟು ಮಾಡಲಾರದಲ್ಲ ಎಂಬುದೇ ಸದ್ಯದ ಸಂತೋಷ. ನಾನು ವರ್ಗವಾಗಿ ಹೋದ ಎಲ್ಲ ಸ್ಥಳಗಳಿಗೂ - ಇತ್ತೀಚಿನ ಮಡಿಕೇರಿ ಹೊರತಾಗಿ - ಅವರು ಒಂದಲ್ಲ ಒಂದು ಕೆಲಸದ ಮೇಲೆ ಬಂದಿದ್ದಾರೆ. ಬಂದಾಗ ಕೆಲವೆಡೆ ನಮ್ಮ ಮನೆಯಲ್ಲೇ ಉಳಿದುಕೊಂಡು ಮನೆಯ ಸದಸ್ಯರಂತೆಯೇ ನಮ್ಮೊಡನೆ ಬೆರೆತು ಲಘುಸಾಹಿತ್ಯಿಕ ಹರಟೆ-ವಿನೋದ-ಕಾವ್ಯವಾಚನಗಳಲ್ಲಿ ಕಾಲ ಕಳೆದಿದ್ದಾರೆ. ಭದ್ರಾವತಿಯ ನನ್ನ ಪುಟ್ಟ ಮನೆಯಲ್ಲಿ ದಿ. ಪಂಚಾಕ್ಷರಿ ಗವಾಯಿವರ ಕಂಠದಿಂದ ಹರಿದು ಬಂದ ಬೇಂದ್ರೆಯವರ 'ಯಾಕೋ ಕಾಣೆ ರುದ್ರವೀಣೆ' ಮತ್ತು ತಮ್ಮ 'ಯಾವ ಹಾಡ ಹಾಡಲಿ' ಎಂಬ ಗೀತೆಗಳನ್ನು ಆ ವರಾತದ ಎಲ್ಲ ಹೆಂಗಸರು ಮಕ್ಕಳ ಮಧ್ಯೆ ನಿಸ್ಸಂಕೋಚವಾಗಿ ಕೂತು ಕೇಳಿ ಆನಂದಿಸಿದ ಆ ದಿನಗಳು ಇನ್ನೂ ನನ್ನ ನೆನಪಿನಲ್ಲಿ ಹಸಿರಾಗಿವೆ. ಅವರು ನನ್ನೊಡನೆ, ನಾನು ಅವರೊಡನೆ ಮುನಿಸಿಕೊಂಡಿದ್ದ ದಿನಗಳೂ ಇವೆ. ಅವರು ನನಗೆ ಪರಿಚಯವಾದ ನಂತರ ಪ್ರಕಟವಾದ, ಪುರ್ನಮುದ್ರಿತವಾದ ಅವರ ಎಲ್ಲ ಪುಸ್ತಕಗಳನ್ನೂ ನನಗೆ ಪ್ರೀತಿಯಿಂದ ಕೊಟ್ಟಿದ್ದಾರೆ. ಆದರೆ ನನ್ನದೇ ಸಂಕೋಚ - ಸೋಮಾರಿತನಗಳಿಂದಾಗಿ ಅವಕ್ಕೆ ಒಮ್ಮೆಯೂ ಪ್ರತಿಕ್ರಿಯಿಸದ ಘೋರ 'ಔಪಚಾರಿಕ ಅಪರಾಧ'ವನ್ನು ಮಾಡಿ ಅವರ ಮುನಿಸಿಗೆ ಕಾರಣನಾಗಿದ್ದೇನೇನೋ ಎಂಬ ಆತಂಕವೂ ನನ್ನನ್ನು ಹಲವು ಬಾರಿ ಕಾಡಿದೆ. ಆದರೆ ನನಗೆ ಜಿಎಸ್‌ಎಸ್, ಸಾಹಿತ್ಯವನ್ನು ಮೀರಿದ ವ್ಯಕ್ತಿತ್ವವಾಗಿದ್ದರು ಎಂಬುದು ಅವರಿಗೆ ತಾನೇ ಹೇಗೆ ಗೊತ್ತಾಗಬೇಕು! ಅಂದ ಹಾಗೆ, ತಾವು ಮುನಿಸಿಕೊಂಡಿದ್ದನ್ನು ಅವರು ಎಂದೂ ಒಪ್ಪುವುದಿಲ್ಲ - 'ನಾಗಭೂಷಣ ಯಾಕೋ ಇತ್ತೀಚೆಗೆ ನನ್ನನ್ನು ಕಂಡರೆ ಒದ್ದುಕೊಂಡಿದ್ದಾನೆ' ಎಂದು ಇತರರ ಬಳಿ ಹೇಳಿಯಾರಷ್ಟೆ! ನಾನು ಕರೆದ ಕಡೆ, ನಾನು ಆಹ್ವಾನಿಸಿದ ಸಂದರ್ಭಗಳಿಗೆ ಅವರು ಬರುವುದಿಲ್ಲ ಎಂದರೆ ನನಗೆ ಮುನಿಸು ಬರಬಾರದೇಕೆ? ಆದರೆ ದೊಡ್ಡವರಾದ ಅವರು ನನ್ನ ಮುನಿಸನ್ನು ಮನ್ನಿಸಿ ನನ್ನೊಡನೆ ಎಂದಿನ ಸ್ನೇಹ - ವಿಶ್ವಾಸಗಳನ್ನು ಮುಂದುವರಿಸಿರುವುದು ನನ್ನ ಸೌಭಾಗ್ಯವೆಂದೇ ನಾನು ಭಾವಿಸಿದ್ದೇನೆ. ಅವರು ಯಾರ ಬಳಿಯೋ ನನ್ನನ್ನು ಪ್ರೀತಿಯಿಂದ 'ವಕ್ರ' ಎಂದು ಕರೆದದ್ದುಂಟು. ಅದಕ್ಕೆ ನನ್ನ ಉತ್ತರ, ನಿಮಗೆ ಜಗತ್ತು ನೇರವಾಗಿ ಕಾಣುತ್ತಿರುವುದೇ ನಮ್ಮಂತಹವರ 'ವಕ್ರತೆ'ಯಿಂದ!

ನನ್ನ ಪತ್ನಿ ಸವಿತಾಳ ಕಾವ್ಯವನ್ನು ಅವಳ ಕಾವ್ಯದ ಆರಂಭ ಘಟ್ಟದಿಂದಲೂ ಗಮನಿಸುತ್ತಾ ಬಂದಿರುವ ಅವರು ಪ್ರತಿಸಾರಿ ಬಂದಾಗಲೂ ಅವಳ ಹೊಸ ಕವನಗಳನ್ನು ಕೇಳಿ

ಪ್ರೋತ್ಸಾಹದ ಮಾತುಗಳನ್ನಾಡಿದ್ದಾರೆ. ನಮ್ಮ ಮದುವೆಯಾದಾಗ ಮನೆಗೆ ಕರೆದು ಔತಣ ಮಾಡಿಸಿ, ಉಡುಗೊರೆ ನೀಡಿ ಹರಿಸಿದ್ದಾರೆ. ಅವರು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ನಂತರ ಆರಂಭಿಸಿದ ಯುವಕವಿಗೋಷ್ಠಿಯ ಅಧ್ಯಕ್ಷತೆಗೆ ಸವಿತಾಳನ್ನು ಆಹ್ವಾನಿಸಿ ಅವಳಲ್ಲಿ ಆಶ್ಚರ್ಯವನ್ನೂ, ಧನ್ಯತೆಯನ್ನೂ ಉಂಟುಮಾಡಿದ್ದಾರೆ. ಜಿಎಸ್‌ಎಸ್ ಅಕಾಡೆಮಿ ಅಧ್ಯಕ್ಷರಾಗಿದ್ದಾಗಲೇ ಅವಳ ಮೊದಲ ಕವನ ಸಂಕಲನ 'ನಾ ಬರುತ್ತೇನೆ ಕೇಳು'ಗೆ ಅಕಾಡೆಮಿ ಬಹುಮಾನ ಬಂದದ್ದು ನನಗೆ - ಅವಳಿಗೆ ಇಬ್ಬರಿಗೂ ಹೆಮ್ಮೆಯ ಸಂಗತಿಯಾಗಿ ಉಳಿದಿದೆ. ಹಾಸನಕ್ಕೆ ಒಮ್ಮೆ ಬಂದಿದ್ದಾಗ ನನ್ನ 'ಗಮನ' ವಿಮರ್ಶಾ ಸಂಕಲನದ ಮುದ್ರಿತ ಹಾಳೆಗಳನ್ನು ಗಮನಿಸಿ ನನ್ನ ಕೋರಿಕೆಯ ಮೇರೆಗೆ ಅಂದೇ ಇಡೀ ಲೇಖನಗಳನ್ನು ಓದಿ, ಸ್ವತಃ ನಾನೇ ನಂಬಲಾಗದಂತಹ ಸಾಲುಗಳುಳ್ಳ ಬೆನ್ನುಡಿ ಬರೆದುಕೊಟ್ಟಿದ್ದಾರೆ. ಸವಿತಾಳ ಆಯ್ದ ನೂರೊಂದು ಕವನಗಳ 'ಆಕಾಶಮಲ್ಲಿಗೆ' ಸಂಕಲನಕ್ಕೆ - ಕೇಂದ್ರ ಸಾಹಿತ್ಯ ಅಕಾಡೆಮಿಯ ಕೆಲಸದ ಒತ್ತಡಗಳ ಮಧ್ಯೆಯೂ - ಅವಳ ಮೂರು ಕವನ ಸಂಕಲನಗಳ ಕವನಗಳನ್ನು ಗಮನಿಸಿ, ಬೆನ್ನುಡಿ ಬರೆದು ಹರಿಸಿದ್ದಾರೆ. ಮೂರು ವರ್ಷಗಳ ಹಿಂದೆ ನಾನು ಅಸ್ವಸ್ಥನಾಗಿ ಬೆಂಗಳೂರಿನ ಬಂಧುವೊಬ್ಬರ ಮನೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾಗ, ಅದು ಹೇಗೋ ವಿಷಯ ಗೊತ್ತಾಗಿ ಜಿಎಸ್‌ಎಸ್, ಪದ್ಮಾ ಅವರೊಂದಿಗೆ ಎರಡು ಬಸ್ಸುಗಳನ್ನು ಹತ್ತಿ ಇಳಿದು ನನ್ನ ಬಂಧುವಿನ ಮನೆ ಹುಡುಕಿಕೊಂಡು ಬಂದೇ ಬಂದರು, ಹಣ್ಣು-ಹಂಪಲುಗಳೊಂದಿಗೆ! ಇದನ್ನೆಲ್ಲಾ ಏನೆಂದು ಕರೆಯುವುದು? ಏನೆಂದು ಗುರುತಿಸುವುದು? ಬರೀ ಪ್ರೀತಿ-ವಿಶ್ವಾಸಗಳೆಂದೇ? ಜಿಎಸ್‌ಎಸ್‌ಗೂ ನಮಗೂ ಎತ್ತಣಿಂದೆತ್ತ ಸಂಬಂಧ? ಈ ಪ್ರಶ್ನೆಗಳಲ್ಲಿನ ಬೆರಗನ್ನು ನಾವು ಕೊನೆಯವರೆಗೂ ಹಾಗೇ ಉಳಿಸಿಕೊಳ್ಳಬಯಸುತ್ತೇವೆ...

ಜಿಎಸ್‌ಎಸ್ ನಮ್ಮ ಕಾಲದ ಸಾಂಸ್ಕೃತಿಕ ವಕ್ತಾರ. ಅವರ ಎದುರು ಹಾರಾಡಿದ ಹಿರಿ-ಕಿರಿಯರೆಲ್ಲ ಗುಡುಗು - ಮಿಂಚುಗಳಂತೆ ಆರ್ಭಟಿಸಿ ಹೊಳೆದು ಮಾಯವಾಗಿದ್ದಾರೆ. ಜಿಎಸ್‌ಎಸ್ ಮಾತ್ರ ಎಲ್ಲವನ್ನೂ ಸಹಿಸಿಕೊಂಡು ತಾಳಿಕೊಂಡು ನಸುನಗುತ್ತಾ ನಮ್ಮ ನಡುವೆ ನಿಂತೇ ಇದ್ದಾರೆ. ಅವರ ದೌರ್ಬಲ್ಯಗಳನ್ನು ನಮ್ಮಲ್ಲಿ ಪ್ರತಿಯೊಬ್ಬರೂ ತಂತಮ್ಮ ಅನುಭವಗಳಿಗನುಸಾರವಾಗಿ ಪಟ್ಟಿ ಮಾಡುತ್ತಾ ಹೋಗಬಹುದು. ಆದರೆ ಈ ಪಟ್ಟಿಯಲ್ಲಿ ನಮ್ಮ ಕಾಲದ ಅನೇಕ ಬುದ್ಧಿಜೀವಿಗಳನ್ನು ಹಾಳು ಮಾಡಿದ ಪ್ರದರ್ಶನಪ್ರಿಯತೆ, ಲಂಪಟತನ, ಅಧಿಕಾರದಾಹ, ಮತ್ಸರ ಹಾಗೂ ಹುಸಿ ಸೌಜನ್ಯಗಳು ಸೇರಲಾರವು. ಹಾಗೆಂದೇ ಜಿಎಸ್‌ಎಸ್ ನಮಗೆಲ್ಲ ದೊಡ್ಡವರು, ಪ್ರಿಯರು, ಗೌರವಾರ್ಹರು. ಅವರ ಜೀವನ ಪ್ರೀತಿ, ಶ್ರದ್ಧೆ, ಶಿಸ್ತು, ಅಚ್ಚುಕಟ್ಟುತನ, ಹಿತಮಿತವಾದ ವಿನೋದ ಹಾಗೂ ಸಹಜ ಸಂಕೋಚ ನಮ್ಮ ತಲೆಮಾರಿನವರ ಬಾಳಿನ ಅಂದ - ಚೆಂದ - ಸವಿಯನ್ನು ಹೆಚ್ಚಿಸಬಲ್ಲವು. ಆ ಕಾರಣಕ್ಕಾದರೂ ಜಿಎಸ್‌ಎಸ್ ನಮ್ಮೊಡನೆ ಇನ್ನೂ ಹೆಚ್ಚು ದಿನ ಇರುವಂತಾಗಲಿ.

❑

('ಹಣತೆ'- ಜಿ.ಎಸ್. ಶಿವರುದ್ರಪ್ಪ ಅಭಿನಂದನ ಗ್ರಂಥಕ್ಕಾಗಿ ಬರೆದ ಲೇಖನ)

ಗುರುಕಾರುಣ್ಯ ಹಾಗೂ ಚಾಟಿಯೇಟು!

ವೀಚಿಯರು ನನಗಿಂತ ತುಂಬ ಹಿರಿಯರು. ನಾನು ಕವಿತೆ ಓದಲಾರಂಭಿಸುವ ಹೊತ್ತಿಗೇ 'ಸಾಕ್ಷಿ'ಯಂತಹ ಆ ಕಾಲದ ಪ್ರತಿಷ್ಠಿತ ಸಾಹಿತ್ಯ ನಿಯತಕಾಲಿಕೆಯಲ್ಲಿ ಕವಿತೆಗಳನ್ನು ಪ್ರಕಟಿಸುತ್ತಿದ್ದ ಕವಿ ಅವರು. ನಾನು ಅವರ ಹೆಸರನ್ನು ಮೊದಲ ಬಾರಿಗೆ ನೋಡಿದ್ದೂ ಆ ನಿಯತಕಾಲಿಕೆಯಲ್ಲೇ. ಅಪ್ಪಟ ನವ್ಯ ಸಾಹಿತ್ಯ ಪ್ರತಿಪಾದನಾ ಪತ್ರಿಕೆಯಾಗಿದ್ದ 'ಸಾಕ್ಷಿ'ಯಲ್ಲಿ ವೀ. ಚಿಕ್ಕವೀರಯ್ಯ ಎಂಬ ಅಪ್ಪಟ ಹಳ್ಳಿಗಾಡಿನ ಹೆಸರಿನ ಕವಿಯ ಕವಿತೆಯೂ ಪ್ರಕಟವಾಗುತ್ತಿದ್ದುದು ನನಗೆ ಆಗ ಆಶ್ಚರ್ಯವನ್ನೇ ಉಂಟುಮಾಡಿತ್ತು. ನವ್ಯ ಕಾವ್ಯವನ್ನು ಅರ್ಥಮಾಡಿಕೊಳ್ಳುವುದೇ ಜೀವನದ ಪರಮಸಾರ್ಥಕ್ಯವೆಂದು ಬಗೆದು ಹೆಣಗಾಡುತ್ತಿದ್ದ ಆ ದಿನಗಳಲ್ಲಿ ಅಷ್ಟೇನೂ ನವ್ಯವಾಗಿ ಕಾಣದಿದ್ದ ವೀಚಿಯವರ ಕಾವ್ಯ ನನ್ನ ಗಂಭೀರ ಗಮನವನ್ನು ಸೆಳೆಯಲಿಲ್ಲ. ನಂತರದ ದಿನಗಳಲ್ಲಿ, ವೀಚಿ ರೈತಾಪಿ ವರ್ಗಕ್ಕೆ ಸೇರಿದವರೆಂದೂ, ಮಾರ್ಕ್ಸ್‌ವಾದಿಯೆಂದೂ ತುಮಕೂರಿನ ಪುರಸಭಾಧ್ಯಕ್ಷರಾಗಿದ್ದವರೆಂದೂ ಯಾರೋ ನನಗೆ ಮಾಹಿತಿ ನೀಡಿ, ವೀಚಿ ಕುರಿತು ನನ್ನ ಕುತೂಹಲವನ್ನು ಹೆಚ್ಚಿಸಿದರಷ್ಟೆ.

ವೀಚಿ ತುಮಕೂರಿನವರು. ನನ್ನ ತವರೂರು ತುಮಕೂರಿನ ಹತ್ತಿರವೇ ಇರುವ ಡಾಬಸ್‌ಪೇಟೆ. ನನ್ನ ಬಾಲ್ಯವೆಲ್ಲ - ಶಾಲಾದಿನಗಳೆಲ್ಲ - ಕಳೆದದ್ದು ಅದರ ಹತ್ತಿರದ ತ್ಯಾಮಗೊಂಡ್ಲುವಿನಲ್ಲಿ. ಆ ದಿನಗಳಲ್ಲಿ ವರ್ಷಕ್ಕೊಮ್ಮೆಯಾದರೂ ಹೋಗಿ ಬರುತ್ತಿದ್ದ ನಮ್ಮ ಮನೆ ದೇವರಿರುವ ದೇವರ ಹೊಸಳ್ಳಿ ತುಮಕೂರಿನ ಒಂದು ಪಕ್ಕದಲ್ಲಿ ಹಾದು ಹೋಗುವ ಸಿದ್ಧರಬೆಟ್ಟಗಳ ಸಾಲಿನಲ್ಲಿ ಬರುವ ಒಂದು ಸಣ್ಣ ಗುಡ್ಡದ ತಪ್ಪಲಿನಲ್ಲಿರುವ ಊರು. ಪಾಠಗಳ ಜೊತೆ ಪ್ರಾಥಮಿಕ ವಿಚಾರಶೀಲತೆಯನ್ನು ಬೆಳೆಸಿಕೊಂಡಿದ್ದೂ ವರ್ಷಕ್ಕೆ ನಾಲ್ಕಾರು ಬಾರಿಯಾದರೂ ನಮ್ಮ ಊರಿಗೆ ಬರುತ್ತಿದ್ದ ತುಮಕೂರು ಸಮೀಪದ ಸಿದ್ಧಗಂಗೆಯ ಸ್ವಾಮೀಜಿಯವರ ಇಂಗ್ಲಿಷ್ ವಾಕ್ಯಗಳಿಂದ ಸಂಪನ್ನವಾಗಿರುತ್ತಿದ್ದ ಉಪನ್ಯಾಸಗಳನ್ನು ಕೇಳಿಕೊಂಡೇ. ಕಾವಿ ಬಟ್ಟೆ ಉಟ್ಟವರ ಬಾಯಿಂದ ಇಂಗ್ಲಿಷ್ ಭಾಷೆ ಕೇಳುವುದು ಆ ಹಳ್ಳಿಗಾಡಿನಲ್ಲಿ ಆ ಕಾಲಕ್ಕೆ ನಮಗೊಂದು ಸೋಜಿಗವೇ. ಇನ್ನು ನಾವು ಹೈಸ್ಕೂಲ್ ತಲುಪುವ ಹೊತ್ತಿಗೆ 'ಪೋಲಿ'ಗಳೆಂದು ಹೆಸರಾದ ನಮ್ಮ ಶಾಲೆಯ ಹುಡುಗರು ಹೊಸ ಕನ್ನಡ ಸಿನಿಮಾ ನೋಡಲು ಲಾರಿ ಹತ್ತಿ ಕದ್ದು ಹೋಗುತ್ತಿದ್ದುದೂ ತುಮಕೂರೆಂಬ ಕನಸಿನೂರಿಗೇ! ಅಲ್ಲದೆ ಸ್ಥಳೀಯ ಆಸ್ಪತ್ರೆಯಲ್ಲಿ

ವಾಸಿಯಾಗದ ಕಾಯಿಲೆಗಳಿಗಾಗಿ ರೋಗಿಗಳನ್ನು ಆಗ ತೆಗೆದುಕೊಂಡು ಹೋಗುತ್ತಿದ್ದುದು ದೊಡ್ಡಾಸ್ಪತ್ರೆಯಿದ್ದ ತುಮಕೂರಿಗೇ - ಅಲ್ಲಿನ ಡಾಕ್ಟರುಗಳು ಒಮ್ಮೊಮ್ಮೆ ಹತ್ತು ರೂಪಾಯಿಗಳ ವರೆಗೂ ಲಂಚ ಕೇಳುತ್ತಾರೆಂಬ ಆತಂಕದ ನಡುವೆಯೂ! ಹೀಗೆ ನನ್ನ ಬಡಬಾಲ್ಯದ ತುಂಬಾ ಬೆಂಗಳೂರಿಗೆ ಸಮಾನಾಂತರವಾಗಿ ಇನ್ನೊಂದು ಇಂದ್ರನಗರಿಯಾಗಿ ಕಲ್ಪಿತವಾಗಿದ್ದ ತುಮಕೂರನ್ನು ನಾನು ಕಂಡಿದ್ದು ಮಾತ್ರ - ಆ ಊರಿನಲ್ಲಿ ನಾನು ಓಡಾಡಿದ್ದು - ಇತ್ತೀಚಿನ ವರ್ಷಗಳಲ್ಲಷ್ಟೇ. ಬೆಂಗಳೂರು - ಮೈಸೂರು - ತುಮಕೂರು ಸೀಮೆಗಳ ಎಲ್ಲ ಸೋಮಾರಿಗಳ ಸೋಮಾರಿತನವನ್ನೇ ಅನುಭಾವದ ಮಟ್ಟಕ್ಕೇರಿಸಿದ ಪವಾಡ ಮೆರೆದಿರುವ ನಮ್ಮೆಲ್ಲರ 'ಗುರು' ಕೆ.ಎಂ. ಶಂಕರಪ್ಪನವರು ನನ್ನನ್ನು ನನ್ನ ಕುಟುಂಬದೊಂದಿಗೆ ತಮ್ಮ ಆಗಿನ ಪ್ರಿಯ ಶಿಷ್ಯ ಕೆ.ಬಿ. ಸಿದ್ಧಯ್ಯನವರ ಮನೆಗೆ ಶಿಫಾರಸ್ಸಿನ ಮೇಲೆ ಕಳಿಸಿದಾಗಲೇ ನಾನು ತುಮಕೂರನ್ನು ಅದರೆಲ್ಲ ಬಣ್ಣಗಳೊಂದಿಗೆ ನೋಡಿದ್ದು. ಆ ಕೆ.ಬಿ. ಸಿದ್ಧಯ್ಯನವರ ಮನೆಯಲ್ಲೇ ನಾನು - ೧೯೮೮ರಲ್ಲಿ ಎಂದು ಕಾಣುತ್ತದೆ - ವೀಚಿಯವರನ್ನು ಮೊದಲ ಬಾರಿ ನೋಡಿದ್ದು. ಅಂದು ಆ ಮನೆಯ ಜಗುಲಿಗಳ ಮೇಲೆ ಕೆ.ಎಂ. ಶಂಕರಪ್ಪನವರ ತುಮಕೂರು ಶಾಖಾಮಠದ ಸರ್ವ ಸದಸ್ಯರೂ ಸೇರಿದ್ದರು. ಅವರೆಲ್ಲರ ಮಧ್ಯೆ ಅಂದು ಹಿರಿಯರಾದ ವೀಚಿ ಕಿರಿಯರಂತೆಯೇ ಕೂತು ಮಾತಾಡಿ, ಸ್ಫೋಟಿಸಿ ನಕ್ಕು ನಲಿದದ್ದು ನನಗಿನ್ನೂ ಚಿತ್ರ ಕಟ್ಟಿದಂತೆ ನೆನಪಿದೆ. ಮೊದಲ ನೋಟ ಅಥವಾ ಭೇಟಿಯಲ್ಲೇ ವೀಚಿಯವರ ಬಗ್ಗೆ ನನಗನ್ನಿಸಿದ್ದು - ಇವರು ಸ್ವಲ್ಪ ಭೋಳೆ ಸ್ವಭಾವದ ಓರ್ವ ಸಜ್ಜನ ಎಂದು. ವೀಚಿಯವರನ್ನು ಅನಂತರ ನಾಲ್ಕಾರು ಬಾರಿ ಕಂಡಿದ್ದೇನೆ; ಮಾತನಾಡಿದ್ದೇನೆ. ಅವರ ಕುರಿತ ನನ್ನ ಈ ಮೇಲಿನ ಅಭಿಪ್ರಾಯ ಹೆಚ್ಚೇನೂ ಬದಲಾಗಿಲ್ಲ. ಅವರು ಹಿಂದೊಮ್ಮೆ ಮಾರ್ಕ್ಸ್‌ವಾದಿಯಾಗಿದ್ದರು ಎಂದು ನೆನಪಿಸಿಕೊಂಡರೇ ತಮಾಷೆ ಎನಿಸುತ್ತದೆ. ಇವರ ಈ ತಥಾಕಥಿತ ಮಾರ್ಕ್ಸ್‌ವಾದೀ ಒಲವನ್ನು ಗಂಭೀರವಾಗಿ ಪರಿಗಣಿಸಿ ಕೆಲವರು ಇವರ ಕಾವ್ಯವನ್ನು ವಿಶ್ಲೇಷಣೆ ಮಾಡಿರುವುದಂತೂ ನನಗೆ ಇನ್ನೂ ತಮಾಷೆಯೆನಿಸುತ್ತದೆ.

ಶಂಕರಪ್ಪನವರ ತುಮಕೂರು ಶಾಖಾಮಠ ಈಗ ಮೊದಲಿದ್ದಂತೆ ಸಮರಸದಲ್ಲಿಲ್ಲ. ಅದಕ್ಕೆ ಗುರು-ಶಿಷ್ಯರೆಲ್ಲರೂ ಕಾರಣರೆಂದು ಕೇಳಿದ್ದೇನೆ. ಆದರೆ ವೀಚಿ ಮಾತ್ರ ಈ ಕೆಲವು ವರ್ಷಗಳಲ್ಲಿ ಶಂಕರಪ್ಪನವರ ಪಟ್ಟಶಿಷ್ಯರಾಗಿ ಪರಿವರ್ತಿತರಾಗಿದ್ದಾರೆಂದು ಶಂಕರಪ್ಪನವರ ಬಾಯಿಯಿಂದಲೇ ಕೇಳಿದ್ದೇನೆ. ಈ ನೆಲೆಯಲ್ಲಿ ವೀಚಿ ನನ್ನ ಬಂಧು ಬಳಗವೇ, ಅವರು ತಮ್ಮನ್ನು 'ಕಾಳಿದಾಸ ಮೂಲ'ದ ಬಳಗದೊಂದಿಗೇ ಬಹಳ ಕಾಲ ಗುರುತಿಸಿಕೊಂಡಿರುವವರಾದರೂ! ಆದರೆ ವೀಚಿ ಶಂಕರಪ್ಪನವರ ವಿಭಿನ್ನ ಶಿಷ್ಯ-ಒಂದು ರೀತಿಯ ಕಳ್ಳೊಕ್ಕಲೇನೋ! ಏಕೆಂದರೆ ಅವರು ಗುರುಗಳನ್ನು ಹುಡುಕಿಕೊಂಡು ಇತರೆಡೆಗಳಿಗೂ ಎಡತಾಕಿದ ಸುದ್ದಿಗಳಿವೆ. ಅಲ್ಲದೆ ಈ ಅರ್ಥದಲ್ಲಿ ಮಾತ್ರ ಅವರ ಶಿಷ್ಯತ್ವ ವಿಭಿನ್ನವಲ್ಲ. ಶಂಕರಪ್ಪನವರ ಶಿಷ್ಯಕೋಟಿಯ ಮುಖ್ಯವಾಹಿನಿಯ ಮೇರುಗುಣಗಳಾದ ಸೋಮಾರಿತನ ಹಾಗೂ ಕುಡುಕತನಗಳಿಗೆ ಕೂಡಾ ವೀಚಿ ಹೊರಗು! ಹಾಗೆ ವೀಚಿ ನನಗೆ ಹೆಚ್ಚು ಪ್ರಿಯರಾಗಬೇಕಾದವರೇ. ಆದರೆ ಒಂದು ತೊಡಕು. ಅವರು ಗುರುಪರಂಪರೆಗೆ ವಿರುದ್ಧವಾಗಿ ಸಾಹಿತ್ಯವನ್ನು ಒಂದು 'Career' ಆಗಿ

ಸ್ವೀಕರಿಸಿರುವುದು. ವೀಚಿ ಪ್ರಧಾನವಾಗಿ ಕೃಷಿಕರೆಂದು ಪರಿಚಿತರಾದರೂ ಅದು ಅವರ ಉಪ ಕಸುಬಷ್ಟೆ. ಮುಖ್ಯ ಕಸುಬು 'ಸಾಹಿತ್ಯ'ವೇ. ಇದು ಮಹಾಪರಾಧವು.

ಇದು ಮಹಾಪರಾಧ ಏಕೆಂದರೆ ಮತ್ತು ಹೇಗೆಂದರೆ -

ಮೊದಲು, ಇವರ ಕವನ ಸಂಕಲನಗಳನ್ನೇ ನೋಡಿ : ಅಡಿಗ, ಕುರ್ತಕೋಟಿ, ಶಿವಪ್ರಕಾಶ, ಜಿ. ರಾಜಶೇಖರ, ಎಚ್.ಎಸ್. ರಾಘುವೇಂದ್ರರಾವ್, ಕೆ.ವಿ. ನಾರಾಯಣ ಮುಂತಾದ ಹಿರಿಯ ಸಾಹಿತ್ಯ - ಸಾಮ್ರಾಟರ ಮುನ್ನುಡಿಗಳಿಂದಲೂ ಜಿ.ವಿ. ಆನಂದಮೂರ್ತಿ ಹಾಗೂ ನಟರಾಜ ಬೂದಾಳು ಅವರಂತಹ ಕಿರಿಯ ಸಾಹಿತ್ಯ 'ಮಂಡಲಾ'ಧಿಪತಿಗಳ ಹಿನ್ನುಡಿಗಳಿಂದಲೂ ಸುತ್ತುವರಿಯಲ್ಪಟ್ಟು, ಗಾಳಿ, ಮಳೆ, ಬೆಳಕುಗಳ ಹಾವಳಿಯಿಂದ ರಕ್ಷಿಸಲ್ಪಟ್ಟಿವೆ. ಕೃಷಿಕರಾದ ವೀಚಿ ತಮ್ಮ ತೋಟ - ಗದ್ದೆಗಳ ಬೆಳೆ ರಕ್ಷಿಸಲು ಬೆದರುಬೊಂಬೆ ನಿಲ್ಲಿಸುವ 'ತಂತ್ರಜ್ಞಾನ'ವನ್ನು ಇಲ್ಲಿ ಸಾಹಿತ್ಯ ಕ್ಷೇತ್ರಕ್ಕೂ ಅನ್ವಯಿಸಿ ಪ್ರಯೋಗ ಮಾಡಿ ನೋಡಿದ್ದಾರೆ ನಿಸುತ್ತದೆ! ಇದರಲ್ಲಿ ಅವರು ಸಾಕಷ್ಟು ಯಶಸ್ವಿಯಾಗಿದ್ದಾರೆ ಎಂದೂ ತೋರುತ್ತದೆ. ಏಕೆಂದರೆ ಇವರ ಕಾವ್ಯವನ್ನು ಸಾಹಿತ್ಯ ಚರ್ಚೆ ವಿಪುಲವಾಗಿದ್ದ ಕಾಲದಲ್ಲೂ ಅವರ ಆಪ್ತರು ಇತ್ತೀಚೆಗೆ ತಂದ ಒಂದು ವಿಶೇಷ ಸಂಚಿಕೆಯ ಹೊರತಾಗಿ - ಅಷ್ಟಾಗಿ ಚರ್ಚಿಸಿದಂತೆ ಕಾಣುವುದಿಲ್ಲ. ಇದು ಹಿರಿಯ ಕವಿ ವೀಚಿ ಅವರಿಗೆ ಚಾರಿತ್ರಿಕವಾಗಿ ಆಗಿರುವ ಅನ್ಯಾಯ ಎಂದು ಇಲ್ಲಿ ಸುಲಭವಾಗಿ ಹೇಳಿ ಬಿಡಬಹುದು. ಆದರೆ ನಿಜವಾಗಿ ಇದು ಕವಿಯೊಬ್ಬ Careeist ಆಗುವುದರಲ್ಲಿನ ದುರಂತ ಎಂದು ಹೇಳಿದರೇ ಹೆಚ್ಚು ಸರಿಯಾದೀತು; ಕವಿ ಬೆಳೆಯುವುದಿಲ್ಲ, ಕವಿಯಾಗಿ establish ಆಗಬೇಕೆಂಬ ದೃಢ ನಿರ್ಧಾರದಿಂದ ಸಕಲ ಸಿದ್ಧತೆಗಳನ್ನು ಮಾಡಿಕೊಂಡ ಯಾರೂ ಕವಿಯಾಗಿ establish ಆಗಲಾರರು. ಅಥವಾ 'ಅಯ್ಯೋ ನಾನು ತುಮಕೂರಿನಂತಹ ಸಣ್ಣ ಊರಿನಲ್ಲಿದ್ದುಕೊಂಡು ಸರಿಯಾದ connectionಗಳಿಲ್ಲದೆ ಹಿಂದುಳಿದು ಹೋದೆ' ಎಂದು ಹಲುಬುವುದರಿಂದಾಗಲೀ; ಇದ್ದಕ್ಕಿದ್ದಂತೆ ನನ್ನ ಕಾವ್ಯ ಸಂಸ್ಕೃತಿಯೋ ಸಮಾಜವೋ ಬೇರೆ ಎಂದು ಕಂಡುಕೊಂಡೋ, ಕಾಣಿಸಿಕೊಂಡೋ ಕೊರಗಿ ಮರುಗಿ ದುರಂತನಾಯಕನಂತೆ ಪ್ರಸ್ತುತಗೊಳ್ಳುವುದರಿಂದಾಗಲೀ ಕವಿಗಾಗಲೀ ಕಾವ್ಯಕ್ಕಾಗಲೀ ಯಾವುದೇ ಪ್ರಯೋಜನವಾಗಲಾರದು - ಹೆಚ್ಚೆಂದರೆ, ಸಹಾನುಭೂತಿಯಿಂದ ಯಾರಾದರೂ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಪ್ರಶಸ್ತಿಯೊಂದನ್ನು ದಯಪಾಲಿಸಿಯಾರು. ಸಾಹಿತಿಯೆನಿಸಿಕೊಂಡವನಿಗೆ ಇದಕ್ಕಿಂತ ಹೆಚ್ಚಿನ ಅಪಮಾನ ಇನ್ನೊಂದಿರಲಾರದು. ವೀಚಿಯವರು ಈ ವಿಷಯದಲ್ಲಿ ಸ್ವಲ್ಪ ಎಚ್ಚರ ತಪ್ಪಿದರೆ ಹಿರಿತನದ ಎಲ್ಲ ಘನತೆಯನ್ನು ಕಳೆದುಕೊಳ್ಳುವ ಅಪಾಯವಿದೆ. ಏಕೆಂದರೆ ಪಂಪ - ಅಲ್ಲಮ - ಕುವೆಂಪು ಅವರನ್ನು ಸೃಷ್ಟಿಸಿದ ಕನ್ನಡ ಸಾಹಿತ್ಯ ಪರಂಪರೆ ಎಲ್ಲ ರೀತಿಯ ಪುರೋಹಿತಶಾಹಿಯನ್ನು ಮೆಟ್ಟಿನಿಂತೇ ಬೆಳೆದಿದೆ. ಇಂದಿನ ಸಾಹಿತ್ಯ ಕ್ಷೇತ್ರದ ಸಾಮಾಜಿಕ ನ್ಯಾಯವಾದಿಗಳ ಹೇಷಾರವದಿಂದ ಅದು ವಿಚಲಿತವಾಗದಷ್ಟು. ಇತ್ತೀಚಿನ ವರ್ಷಗಳವರೆಗೂ ಕುವೆಂಪು ಎಂದರೆ ಮುಖ ಸಿಂಡರಿಸಿಕೊಳ್ಳುತ್ತಾ ಅಡಿಗರ ನವ್ಯಕಾವ್ಯ ದೇವಾಲಯದ ಬಾಗಿಲಲ್ಲಿ 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ' ಎಂದು ಪದ ಹೇಳುತ್ತಾ ನಿಂತಿದ್ದ ವೀಚಿಯವರು ಇತ್ತೀಚೆಗೆ

'ಕುವೆಂಪು ಕುವೆಂಪು' ಎಂದು ಬೆಚ್ಚು ಬಿದ್ದ ರೀತಿಯಲ್ಲಿ ಕನವರಿಸಿಕೊಳ್ಳಲಾರಂಭಿಸಿರುವುದರಿಂದ ಈ ಮಾತುಗಳನ್ನು ಹೇಳಬೇಕಾಗಿದೆ.

ಈ ಲೇಖನ ಬರೆಯುವ ಸಂದರ್ಭದಲ್ಲಿ ವೀಚಿಯವರೊಂದಿಗೆ ದೂರವಾಣಿಯಲ್ಲಿ ಮಾತನಾಡುತ್ತಾ, ಅವರ ಕವನ ಸಂಕಲನಗಳಿಗೆ ಹಾಕಿರುವ ಮುನ್ನುಡಿಗಳ ಸರ್ಪಗಾವಲು ನನ್ನನ್ನು ಅವರ ಕಾವ್ಯದ ಹತ್ತಿರಕ್ಕೂ ಸುಳಿಯದಂತೆ ಮಾಡಿದೆಯಲ್ಲ ಎಂದು ತಮಾಷೆ ಮಾಡಿದಾಗ ಅವರು ಅದಕ್ಕೆ ಸಮಜಾಯಿಷಿ ನೀಡುವಂತೆ, ಅಡಿಗ, ಕುರ್ತುಕೋಟಿಯವರ ಮುನ್ನುಡಿಯ ಮಾತುಗಳು ತಮಗೆ ಮುಂದಿನ ಕಾವ್ಯಕೃಷಿಯಲ್ಲಿ ಸಹಾಯ ಮಾಡಿವೆ ಎಂದರು. ನನ್ನ ಆಶ್ಚರ್ಯ; ಅಡಿಗರು, ಕುರ್ತಕೋಟಿಯವರು ತೋರಿಸಿದ ಹಾದಿ ಹಿಡಿದು ವೀಚಿಯಂತಹವರು 'ಕಲಿತ ಕಾವ್ಯ'ದ ಬ್ಯಾನರ್ ಹಿಡಿದು ಎಷ್ಟು ದೂರ ಸಾಗಿಯಾರು? 'ಅಭಿನಯ ಬಯಲು'ವರೆಗಿನ ಅವರ ಕವನ ಸಂಕಲನಗಳು, ಈ ಹಾದಿಯಲ್ಲಿ ಬಹುದೂರ ಸಾಗಿದ ಪುರಾವೆಗಳನ್ನೇನೂ ಒದಗಿಸುವುದಿಲ್ಲ. ಇದನ್ನು ಪರೋಕ್ಷವಾಗಿ ವೀಚಿಯವರೇ ತಮ್ಮ 'ಇಷ್ಟಮಿತ್ರರು' ಎಂಬ ವ್ಯಕ್ತಿಚಿತ್ರಗಳ ಸಂಕಲನದಲ್ಲಿ ಸು.ರಂ. ಎಕ್ಕುಂಡಿ ಕುರಿತ ಬರಹದಲ್ಲಿ ''...ಆಗಿನ್ನೂ ನನ್ನ ಕಾವ್ಯ ಪ್ರಯೋಗಾವಸ್ಥೆಯಲ್ಲೇ ಇತ್ತು. ನನ್ನ ಸ್ವಂತಿಕೆ ಕಂಡುಕೊಳ್ಳಲು ನನ್ನೊಳಗೆ ನಾನೇ ಮುಳುಗು ಹಾಕುತ್ತಿದ್ದೆ. ಎಲ್ಲ ಪ್ರಭಾವಗಳಿಂದ ಹೊರ ನಡೆದು ನನ್ನ ದಾರಿ ಕಂಡುಕೊಳ್ಳುವುದೇ ಆಗಿನ ನನ್ನ ನಿರ್ದಿಷ್ಟ ಗುರಿ. ಇದೆಲ್ಲವೂ ಸಾಧ್ಯವಾದದ್ದು ನನ್ನ 'ಅಭಿನಯದ ಬಯಲು' ಮತ್ತು ಇದೀಗ ಅಚ್ಚಿಗೆ ಸಿದ್ಧವಾಗಿರುವ 'ನಿತ್ಯ ಮದುವಣಗಿತ್ತಿ' ಸಂಕಲನಗಳಲ್ಲಿ...'' ಎಂಬ ಮಾತುಗಳಲ್ಲಿ ಒಪ್ಪಿಕೊಂಡಿದ್ದಾರೆ.

ಇಂದು ವೀಚಿಯವರೇನಾದರೂ ಕವಿ ಎನಿಸಿದ್ದರೆ ಅದು ಗುರುಕರುಣೆಯಿಂದ. 'ಅಭಿನಯದ ಬಯಲು'ವಿನಿಂದಾಚೆಗಿನ ಅವರ ಸಂಕಲನಗಳ ಕೆಲವು ಪದ್ಯಗಳಾದರೂ ಇದ್ದುದಿದ್ದಂತಿರುವ ತಮ್ಮ ಸರಳ ಸೌಂದರ್ಯಗಳಿಂದ ಬೆಳಗುವುದು, ಸಾಹಿತ್ಯವೆಂಬ ನಾಟಕರಂಗದಿಂದ ಅವರು ಸ್ವಲ್ಪವಾದರೂ ದೂರ ಸರಿಯುವ ಪ್ರಯತ್ನ ಮಾಡಿರುವುದರಿಂದ. ನಾಟಕರಂಗದಿಂದ ದೂರ ಸರಿದಷ್ಟೂ ಗುರುವಿಗೆ ಹತ್ತಿರವಾಗುತ್ತಾ ಹೋಗುತ್ತೇವೆ; ಗುರುಕರುಣೆಗೆ ಪಾತ್ರವಾಗುತ್ತಾ ಹೋಗುತ್ತೇವೆ. ಆಕಸ್ಮಿಕವೋ ಎಂಬಂತೆ, ಅವರದೇ ಎನ್ನಬಹುದಾದ ಅವರ ಮೊಟ್ಟಮೊದಲ ಕವಿತೆ ಎಂದು ನಾನು ಭಾವಿಸಿರುವ ಕವಿತೆಯ ಶೀರ್ಷಿಕೆ 'ಗುರುಕಾರುಣ್ಯ' ಎಂದೇ ಆಗಿರುವುದು ನನಗೆ ಆಶ್ಚರ್ಯವನ್ನೂ ಹರ್ಷವನ್ನೂ ತಂದಿದೆ. ಆದರೆ ಈ ಗುರುಕಾರುಣ್ಯವನ್ನು ''ಸರಳ ಮನೋಹರ ಅಪ್ಪಾಜಿ, ವಿರಳ ವಿನೂತನ ಅಪ್ಪಾಜಿ'' ಎಂಬ ಚಪ್ಪಾಳೆ ಲಯದ ಭಜನೆಗಳನ್ನು ಬರೆಯಲೋಸುಗ ದುರುಪಯೋಗಪಡಿಸಿಕೊಳ್ಳಬಾರದು. ಕಾವ್ಯದ್ರೋಹ, ಗುರುದ್ರೋಹ ಎರಡೂ ಒಂದೇ. ಏಕೆಂದರೆ ಕಾವ್ಯವೂ ಗುರುವೂ ಹೊಮ್ಮುವುದು ಒಂದೇ ಮೂಲದಿಂದ. ವೀಚಿಯವರು ಅಲ್ಲಮನನ್ನು ಕಿ.ರಂ., ಶಿವಪ್ರಕಾಶ್, ಓ.ಎಲ್.ಎನ್. ಮುಂತಾದ ಭಾರಗಳನ್ನು ಇಳಿಸಿಕೊಂಡು ಓದಿ ನೋಡಿದರೆ ಅವರಿಗೇ ಅರಿವಾಗುತ್ತದೆ : ಸಹಜ ಧರ್ಮವೇ ನಿಜವಾದ ಧರ್ಮ. ಅದರಿಂದ ಹುಟ್ಟುವುದೇ ನಿಜವಾದ ಕಾವ್ಯ. ವೀಚಿಯವರೇ,

ಅತ್ತ ಇತ್ತ ನೋಡಿದ್ದು ಸಾಕು. ನಿಮ್ಮ ಹಾದಿ ನೀವು ಹಿಡಿಯಿರಿ - ಗುರು ದಾರಿ ತೋರಿಸುತ್ತಾನೆ. ಕಾವ್ಯ ಜೋಳಿಗೆಗೆ ನಿಮ್ಮ ನಿಜವಾದ ಹಸಿವನ್ನು ಹಿಂಗಿಸಬಲ್ಲ ಭಿಕ್ಷದ ವ್ಯವಸ್ಥೆಯನ್ನು ಮಾಡುತ್ತಾನೆ. ನಿಮ್ಮ ಕಾವ್ಯ ಕುರಿತು ಇದಕ್ಕಿಂತ ಹೆಚ್ಚು ಹೇಳಹೋದರೆ ನಿಮ್ಮ ಮುನ್ನುಡಿಕಾರರ ಮಹಾವಾಕ್ಯಗಳ ಮೇಲೆ ಗೂಡು ಕಟ್ಟಿರುವ ಹೆಜ್ಜೇನುಗಳು ನನ್ನನ್ನು ಕಡಿದಾವು...

ವೀಚಿಯವರ ಗದ್ಯಕೃತಿಗಳನ್ನು ನಾನು ನೋಡಿದ್ದು ಬಹು ಇತ್ತೀಚೆಗೆ. ಗೆಳೆಯ ನಟರಾಜ ಬೂದಾಳು ಅವರು ''ವೀಚಿಯವರು ಕಳಿಸಿದ್ದಾರೆ'' ಎಂದು ಅವನ್ನು ತಂದಿತ್ತಾಗ. ಒಮ್ಮೆ ತುಮಕೂರಿನಲ್ಲಿ ತಮ್ಮ ಮೊದಲ ಗದ್ಯ ಕೃತಿ 'ಸಿದ್ಧರಬೆಟ್ಟ: ಒಂದು ದರ್ಶನ'ವನ್ನು ಅವರು ನನಗೆ ನೀಡಿದ ನೆನಪು. ವೀಚಿಯವರ ಪಾಲಿಗೆ ಗುರುಕಾರುಣ್ಯದ ಬಾಗಿಲು ಆ ಕೃತಿಯಿಂದ ತೆರೆಯಿತೇನೋ. ನಂತರದ ಅವರ ಗದ್ಯಕೃತಿ 'ಇವರು ನನ್ನವರು' ಎಂಬ ವ್ಯಕ್ತಿಚಿತ್ರಗಳ ಸಂಕಲನವೆಂದು ಕೇಳಿದ್ದೇನೆ. ಆದರೆ ಈ ವ್ಯಕ್ತಿಚಿತ್ರಗಳಲ್ಲಿ ನನ್ನ ಕಣ್ಣಿಗೆ ಅಷ್ಟೇನೂ 'ದೊಡ್ಡ'ವರಾಗಿ ಕಾಣಿಸದ ಕೆಲವರು ದೊಡ್ಡ ಸಾಧಕರಂತೆ ಮೂಡಿದ್ದಾರೆ ಎಂದೂ ಕೇಳಿಬಲ್ಲೆ. ನನ್ನ ಕಣ್ಣಿಗೆ ಅಲ್ಪರಂತೆ ಕಂಡವರೆಲ್ಲ ಎಲ್ಲರ ಕಣ್ಣಿಗೂ ಹಾಗೇ ಕಾಣಬೇಕಿಲ್ಲ ಎಂಬ ಅರಿವಿನೊಂದಿಗೆ ಇವರ ಇತ್ತೀಚಿನ 'ನೆಚ್ಚಿನವರು' ಮತ್ತು 'ಇಷ್ಟಮಿತ್ರರು' ಎಂಬ ಎರಡು ವ್ಯಕ್ತಿಚಿತ್ರ ಸಂಕಲನಗಳನ್ನು ಓದಿದೆ. ಮೊದಲ ಓದಿಗೇ ವೀಚಿಯವರ ಸರಳ ಸುಂದರ ತಿಳಿಗದ್ಯ ನನ್ನನ್ನು ಸೆಳೆಯಿತು. ಈ ಸಂಕಲನಗಳ ಕನ್ನಡವನ್ನು ಓದುತ್ತಿದ್ದರೆ ಕನ್ನಡ ಗದ್ಯ ಆಧುನಿಕಗೊಂಡು ಏನೆಲ್ಲ ಪಡೆದುಕೊಳ್ಳುತ್ತಾ ಏನೆಲ್ಲ ಕಳೆದುಕೊಂಡಿದೆ ಎಂಬುದರ ಅರಿವಾಗತೊಡಗುತ್ತದೆ. ಸಿದ್ಧವನಹಳ್ಳಿ ಕೃಷ್ಣಶರ್ಮ, ಎ.ಆರ್. ಕೃಷ್ಣಶಾಸ್ತ್ರಿ ಅವರ ಗದ್ಯಪರಂಪರೆ ಇನ್ನೂ ಕನ್ನಡದಲ್ಲಿ ಉಸಿರಾಡುತ್ತಿದೆ ಎಂಬುದು ಗೊತ್ತಾಗುತ್ತದೆ.

ಇಂತಹ ಸುಂದರ ಗದ್ಯವನ್ನು ವೀಚಿಯವರು ತಾವು ಮೆಚ್ಚಿದ ತಮ್ಮ ಸುತ್ತಮುತ್ತಲಿನ ಜನರನ್ನು ಆತ್ಮೀಯವಾಗಿ ಪರಿಚಯಿಸಲು ಬಳಸಿದ್ದಾರೆ. ಇವರ ಈ ಎರಡೂ ಸಂಕಲನಗಳನ್ನು ಓದುತ್ತಿದ್ದಂತೆ ತಮ್ಮ ಆತ್ಮೀಯರ ಪರಿಚಯ ಮಾಡುತ್ತಾ ವೀಚಿ ಹೇಗೆ ತುಮಕೂರಿನ ಹಾಗೂ ಆ ಸುತ್ತಮುತ್ತಲ ಸೀಮೆಯ ಸಾಂಸ್ಕೃತಿಕ ಇತಿಹಾಸವನ್ನೇ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟು ಬಿಡುತ್ತಾರೆ ಎಂದು ಆಶ್ಚರ್ಯವಾಗುತ್ತದೆ. ವೀಚಿಯವರು ಸ್ವಲ್ಪ ಭೋಳೆ ಮನುಷ್ಯರಾದ್ದರಿಂದ ಇವರ ಉದಾರ ಬರವಣಿಗೆಯನ್ನು ಎಷ್ಟರಮಟ್ಟಿಗೆ ಅಸಲಿಯಾಗಿ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆ ಇದ್ದೇ ಇದೆ : ಇಲ್ಲಿ ತಾವು ಮೆಚ್ಚಿದ ಒಬ್ಬರ ಬಗ್ಗೆ ಬರೆಯುತ್ತಾ ''... ಎಲ್ಲ ರೀತಿಯಿಂದಲೂ ಆದರ್ಶದ ನಡೆನುಡಿ ಎದ್ದು ಕಾಣುತ್ತಿತ್ತು. ಆಟ ಮುಗಿದ ಮೇಲೆ ತಿನ್ನುವುದು, ಕುಡಿಯುವುದು ನಡೆದೇ ಇತ್ತು. ಹೆಣ್ಣಿನ ಹುಚ್ಚೊಂದನ್ನು ಬಿಟ್ಟರೆ ಆತನೊಂದು ಚೊಕ್ಕ ಚಿನ್ನ, ಅಪ್ಪಟ ಅಪರಂಜಿ'' ಎಂದರೆ ಏನೆಂದು ಅರ್ಥಮಾಡಿಕೊಳ್ಳುವುದು? ಹಾಗೇ ಇನ್ನೊಂದೆಡೆ ''ಮನೆಯಿಂದ ಒಳಕ್ಕೂ ಹೊರಕ್ಕೂ ಈ ಮೊಮ್ಮಗಳು ಓಡಾಡುತ್ತಿದ್ದರೆ ತಂಗಾಳಿ ತೀಡಿದಂತೆಯೂ, ಬೆಳದಿಂಗಳು ಮನೆಯೊಳಗೆ ಹರಿದಾಡಿದಂತೆಯೂ ಅನುಭವ ವಾಗುತ್ತದೆ'' ಎಂದು ಬರೆದಾಗ ಇದು ಮುಗ್ಧ ಬರವಣಿಗೆಯೋ ಅಥವಾ ಬರೀ ಬುರುಗೋ

ಎಂದು ಅನುಮಾನ ಪಡುವಂತಾಗುತ್ತದೆ. ವೀಚಿಯವರ ವ್ಯಕ್ತಿತ್ವದಲ್ಲೇ ಇರುವ ಒಂದು ರೀತಿಯ **cultivated** ನಮ್ರತೆ, ಉದ್ದೇಶಪೂರ್ವಕ ಉತ್ಪ್ರೇಕ್ಷಾಗುಣ ಇಲ್ಲಿನ ಬರಹಗಳ ಸಹಜ ನಡಿಗೆಗೆ ಭಂಗ ತಂದಿರುವುದಂತೂ ನಿಜ. ಪ್ರಬಲ ಕೋಮುಗಳ ಮೇಲಾಟದ ಮಧ್ಯೆ ಘನತೆ - ಗೌರವಗಳಿಗಾಗಿ ಹೋರಾಡಿ ಬದುಕು ಕಟ್ಟಿಕೊಳ್ಳುವ ಕ್ರಿಯೆಯಲ್ಲಿ ವೀಚಿ ಸ್ವಲ್ಪ ಮುಂಚೆಯೇ ಹಣ್ಣಾದಂತೆ ಕಾಣುತ್ತಾರೆ.

ಇಂತಹ ಹೋರಾಟದ ಕಥೆಗಳು ಇಲ್ಲಿನ ಹಲವು ವ್ಯಕ್ತಿಚಿತ್ರಗಳ ವಿನ್ಯಾಸಗಳಲ್ಲೇ ಆತ್ಮೀಯವಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಇಲ್ಲಿ ಬರುವ ತುಮಕೂರು ಸೀಮೆಯ ಹಿಂದುಳಿದ ಜಾತಿಗಳ ಅನೇಕ ಹಿರಿಯರ ನೆನಪನ್ನು ಕಾಪಾಡಿದ ಕೀರ್ತಿ ಈ ಮೂಲಕ ವೀಚಿಯವರಿಗೆ ಸಲ್ಲಬೇಕು. ಏಕೆಂದರೆ ಈ ಹಿರಿಯರ್ಯಾರೂ ನಮ್ಮ ಅಧಿಕೃತ ದಾಖಲೆಗಳಲ್ಲಿ ಉಲ್ಲೇಖಗೊಳ್ಳುವ 'ಅರ್ಹತೆ' ಪಡೆದವರಲ್ಲ. ಇಂತಹವರನ್ನು ಕುರಿತ ಬರವಣಿಗೆ ಸಹಜವಾಗಿಯೇ ಆರ್ದ್ರ ಹಾಗೂ ಉದಾರವಾಗಿ ಮೂಡಿಬಂದಿದೆ. ಇನ್ನು ವೀಚಿಯವರ ಕೆಲವು ತುಮಕೂರು ಮಿತ್ರರ ವ್ಯಕ್ತಿಚಿತ್ರಗಳ ಕಥೆಯೇ ಬೇರೆ. ವೀಚಿ ಇವರ ಒಡನಾಟದಲ್ಲಿ ಸುಖವನ್ನೇ ಪಡೆದಿರಬಹುದು. ಆದರೆ ಇಂತಹವರ ವ್ಯಕ್ತಿಚಿತ್ರಗಳನ್ನು ಸಾರ್ವಜನಿಕವಾಗಿ ಬಿಡಿಸಿಡುವಾಗ ಸಲ್ಲದ ಅತಿವಿವರಗಳಿಗೆ ಹೋಗಬಾರದು - ಅವರ ಕುಟುಂಬದ ಪ್ರತಿಸದಸ್ಯರ ನಡೆ-ನುಡಿ, ಭಾವ-ಭಂಗಿ, ವೃತ್ತಿ-ಪ್ರವೃತ್ತಿಗಳ ವರ್ಣನೆ, ಒಟ್ಟು ವ್ಯಕ್ತಿತ್ವದ ರುಚಿಯನ್ನೇ ಕೆಡಿಸುತ್ತದೆ. ಅಂದ ಹಾಗೆ ಅಧಿಕಾರಸ್ಥರ ಸಾಮೀಪ್ಯ ವೀಚಿಯವರಿಗೆ ಬಹುಪ್ರಿಯ ಎಂಬುದನ್ನು ಪೆರುಮಾಳ್ ಎಂಬ ಐ.ಎ.ಎಸ್. ಅಧಿಕಾರಿ ತುಮಕೂರಿನ ಡಿ.ಸಿ. ಆಗಿದ್ದ ಕಾಲದಿಂದಲೂ ನಾನು ನೋಡಿ ತಿಳಿದಿದ್ದೇನೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಕಲನಗಳಲ್ಲಿನ ಉನ್ನತ ಅಧಿಕಾರಿಗಳ, ಶ್ರೀಮಂತರ, ಪ್ರತಿಷ್ಠಿತರ ವ್ಯಕ್ತಿಚಿತ್ರಗಳಲ್ಲಿನ ಕೆಲವನ್ನು, ಕಷ್ಟಪಟ್ಟು ಮಾಹಿತಿ ಸಂಗ್ರಹಿಸಿ ಬರೆಯಲಾಗಿರುವ ರೀತಿ ನೀತಿ, ಒಟ್ಟು ಬರವಣಿಗೆಯ ಬಗ್ಗೆಯೇ ಅನಗತ್ಯವಾಗಿ ಗುಮಾನಿ ಹುಟ್ಟಿಸುವಂತಿದೆ.

ಈ ಸಂಕಲನಗಳನ್ನು ಓದಬಲ್ಲ ಬಹಳಷ್ಟು ಜನಕ್ಕೆ ಗೊತ್ತಿರುವ ಬಿ. ಕೃಷ್ಣಪ್ಪ, ಕೆ.ಎಂ. ಶಂಕರಪ್ಪ, ಕಿ.ರಂ. ನಾಗರಾಜ, ಕಾಳೇಗೌಡ ನಾಗವಾರ, ಬರಗೂರು ರಾಮಚಂದ್ರಪ್ಪ, ಎಚ್.ಎಸ್. ಶಿವಪ್ರಕಾಶ ಮುಂತಾದವರ ಬಗೆಗೂ ಇಲ್ಲಿ ವ್ಯಕ್ತಿಚಿತ್ರಗಳಿವೆ. ಇವರೆಲ್ಲರೂ ನಮ್ಮ ನಿಮ್ಮಂತೆ ಹಲವು ಮಿತಿಗಳ, ದೌರ್ಬಲ್ಯಗಳ ಮನುಷ್ಯ ಮಾತ್ರರು. ಅವರನ್ನು ನೀವು ಬಹು ಹತ್ತಿರದಿಂದ ಬಹುಕಾಲದಿಂದ ಆತ್ಮೀಯವಾಗಿ ಬಲ್ಲವರಾಗಿದ್ದರೆ ನೀವು ಹೊಗಳುಭಟ್ಟರಾಗದೆ ಸಾಹಿತಿಯೇ ಆಗಿದ್ದರೆ ಅವರ ವ್ಯಕ್ತಿತ್ವಗಳನ್ನು ಇಡಿಯಾಗಿ ಒಟ್ಟಂದದಲ್ಲಿ ಚಿತ್ರಿಸುವ ಜವಾಬ್ದಾರಿಯನ್ನೂ ವಹಿಸಿಕೊಳ್ಳಬೇಕಾಗುತ್ತದೆ. ನಿಮಗೆ ಅವರು ಮನುಷ್ಯಮಾತ್ರದವರಾಗಿ ಕಾಣದೆ ದಿವ್ಯ ಭವ್ಯ ಚಿತ್ರಗಳಾಗಿಯೇ ಕಂಡಿದ್ದರೆ ನಿಮ್ಮ ಗ್ರಹಿಕೆಯಲ್ಲೇ ಏನೋ ಐಬಿದೆ ಎನ್ನಬೇಕಾಗುತ್ತದೆ. ವೀಚಿಯವರೇ ಈ ವಯಸ್ಸಿನಲ್ಲಿ ಇದೆಂತಹ ಪಡಿ ಪಾಟಲು ನಿಮ್ಮದು! ಯಾವ ಪುರುಷಾರ್ಥಕ್ಕೋಸ್ಕರ ಬರವಣಿಗೆಯ ಈ ಸುಲಭದ ಆಟ! ಗುರುವಿನ

ಚಾಟಿ ಬೀಸಿ ಬರುತ್ತಿದೆ ನೋಡಿ :

> **ಒತ್ತಿ ಹಣ್ಣ ಮಾಡಿದೊಡೆ ಅದೆತ್ತಣ ರುಚಿಯಪ್ಪುದೋ**
> **ಕಾಮಿಸಿ, ಕಲ್ಪಿಸಿ, ಭಾವಿಸಿದಡೆ ಅದೇ ಭಂಗ!**
> **ಭಾವಿಸುವ ಭಾವನೆಗಿಂತ ಸಾವುದೇ ಲೇಸು ಕಾಣಾ ಗುಹೇಶ್ವರ !**

ವೀಚಿಯವರೇ, ಗುರುವಿನ ಈ ಚಾಟಿಯೇಟುಗಳನ್ನು ತಿನ್ನುತ್ತಲೇ ನಾವು ನೀವು ಪರಸ್ಪರ ಕಣ್ಣಲ್ಲಿ ಕಣ್ಣಿಟ್ಟು ನೋಡಬಲ್ಲ ಧೈರ್ಯದೊಡನೆ ಬದುಕಬೇಕು; ಕನಿಷ್ಟ ಬರವಣಿಗೆಯ ಆ ಕ್ಷಣಗಳಲ್ಲಾದರೂ. ಇಲ್ಲದೇ ಹೋದರೆ ಬದುಕೇ ಒಂದು career ಆಗುವ ನರಕವನ್ನು ಎದುರಿಸಬೇಕಾದೀತು.

❑

('ಹಣ್ಣು ಮೆಟ್ಟಿದ ಅವರೆ' - ವೀಚಿ ಅಭಿನಂದನ ಗ್ರಂಥಕ್ಕಾಗಿ ಬರೆದದ್ದು)

ಜಾಗತೀಕರಣದ ಸ್ವರೂಪ ಮತ್ತು ಆತಂಕಗಳು

ಯಾವ ಲೋಹಿಯಾ ಅವರ ತತ್ವ ಚಿಂತನೆಯ ಒಂದು ಅನುಬಂಧವಾಗಿ ಜಾಗತಿಕ ಸರ್ಕಾರದ ಪರಿಕಲ್ಪನೆ ಇದೆಯೋ ಆ ಲೋಹಿಯಾ ನೆನಪಿನಲ್ಲಿ ಸ್ಥಾಪಿತವಾಗಿರುವ ಡಾ. ರಾಮಮನೋಹರ ಟ್ರಸ್ಟ್‌ನ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಜಾಗತೀಕರಣ ಕುರಿತು ವ್ಯಾಪಕ ಚರ್ಚೆ ನಡೆಸುತ್ತಿರುವುದು ತುಂಬಾ ಔಚಿತ್ಯಪೂರ್ಣ ಎಂದು ನಾನು ಭಾವಿಸಿದ್ದೇನೆ. ಏಕಂದ್ರೆ ಬೆಳಿಗ್ಗೆ ಕಿಷನ್ ಪಟ್ನಾಯಕ್ ಟ್ರಸ್ಟನ್ನು ಉದ್ಘಾಟನೆ ಮಾಡ್ತಾ ಮಾಡಿದ ಭಾಷಣದಲ್ಲಿ ಹೇಳಿದ ಹಾಗೆ ಜಾಗತೀಕರಣದ ಪರಿಕಲ್ಪನೆ ಬಗ್ಗೆ ಸಾಕಷ್ಟು ಗೊಂದಲಗಳಿವೆ, ಅಪವ್ಯಾಖ್ಯಾನ ಗಳಿವೆ. ಜಾಗತೀಕರಣ ಅಂದ್ರೆ ಜಗತ್ತನ್ನೇ ಒಟ್ಟುಗೂಡಿಸುವಂತಹ ಒಂದು ಸತ್ಯ, ಎಲ್ಲ ರಾಷ್ಟ್ರಗಳನ್ನು ಅಂತಾರಾಷ್ಟ್ರೀಯ ಒಪ್ಪಂದಗಳ ಮೂಲಕ ಒಂದು ಸಮಾನ ನೆಲೆಗೆ ತಂದು ಅಭಿವೃದ್ಧಿಯನ್ನು ಸುಗಮಗೊಳಿಸುವಂತಹ ಕಾರ್ಯಕ್ರಮ ಎಂಬೆಲ್ಲ ಅಭಿಪ್ರಾಯಗಳೂ ಪ್ರಚಲಿತದಲ್ಲಿವೆ; ಅಥವಾ ಅಂತಹ ಅಭಿಪ್ರಾಯಗಳನ್ನು ಬಿತ್ತಿ ಬೆಳೆಯಲಾಗುತ್ತಿದೆ. ಈ ಸಂಬಂಧ ನಾನು ಮೊದಲಿಗೆ ಒಂದು ಮುಖ್ಯ ಉಲ್ಲೇಖ ಮಾಡಿ ವಿಷಯವನ್ನು ಮುಂದುವರಿಸೋದಕ್ಕೆ ಇಷ್ಟಪಡ್ತೇನೆ. ಜಾಗತೀಕರಣಕ್ಕೂ ಜಾಗತಿಕ ಸರ್ಕಾರಕ್ಕೂ ಏನಾದರೂ ಸಂಬಂಧ ಇದ್ರೆ, ಅಂತಹ ಜಾಗತೀಕ ಸರ್ಕಾರ ಸ್ಥಾಪನೆಯಾಗಬೇಕಾದದ್ದು ಜಗತ್ತಿನ ಎಲ್ಲ ರಾಷ್ಟ್ರಗಳ ಸಾಮಾನ್ಯ ವೇದಿಕೆಯಾಗಿರುವ ವಿಶ್ವಸಂಸ್ಥೆ ಮೂಲಕ. ಆದರೆ ವಿಶ್ವಸಂಸ್ಥೆ ಇವೊತ್ತು ಯಾವ ಸ್ಥಿತಿಗೆ ಮುಟ್ಟಿದೆ ಅಂದ್ರೆ, ಕಳೆದ ಸಹಸ್ರಮಾನದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯಲ್ಲಿ ವಿಶ್ವಸಂಸ್ಥೆ ಕುರಿತ ಅಮೆರಿಕನ್ ಸಮಿತಿಯ ರಿಪಬ್ಲಿಕನ್ ಪಾರ್ಟಿಯ ನಾಯಕರು ಹೇಳಿದರು - ''ವಿಶ್ವಸಂಸ್ಥೆ ಉಸಿರಾಡ್ತಿರೋದೇನೇ ಅಮೆರಿಕಾದ ತೆರಿಗೆದಾರರ - ಪ್ರಜೆಗಳ ಹಣದಿಂದ. ಅವರ ಹಿತಾಸಕ್ತಿ ಗಳಿಗೇನಾದ್ರೂ ಧಕ್ಕೆಯಾಗೋದಿದ್ರೆ ನಾವೂ ಈ ಹಣ ಪೂರೈಕೆಯನ್ನು ನಿಲ್ಲಿಸಿಬಿಡ್ತೀವಿ'' ಅಂತ! ಆಶ್ಚರ್ಯ ಅಂದ್ರೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಯಾರಿಂದಲೂ ಈ ಬೆದರಿಕೆಗೆ ಕಿಂಚಿತ್ತೂ ವಿರೋಧ ವ್ಯಕ್ತವಾಗಲಿಲ್ಲ. ಈ ರೀತಿ ಜಾಗತಿಕ ವೇದಿಕೆಗಳು blackmailಗೆ ಒಳಗಾಗಿ ಅಪ್ರಸ್ತುತಗೊಳ್ಳುತ್ತಿರುವ ಸಂದರ್ಭದಲ್ಲಿ ಜಾಗತೀಕರಣಕ್ಕೂ ಜಾಗತಿಕ ಸರ್ಕಾರಕ್ಕೂ ದೂರದ ಸಂಬಂಧ ಕಲ್ಪಿಸುವುದೂ ನಮಗೆ ನಾವೇ ಮಾಡಿಕೊಳ್ಳುವ ಮೋಸಾಂತ ನನಗನ್ನಿಸುತ್ತದೆ.

ಬೆಳಗಿನ ಉದ್ಘಾಟನಾ ಸಮಾರಂಭದಲ್ಲಿ ಬೇರೆ ಬೇರೆ ಭಾಷಣಕಾರರು ಜಾಗತೀಕರಣದ

ಆರ್ಥಿಕ ಮತ್ತು ರಾಜಕೀಯ ಆಯಾಮಗಳ ಬಗ್ಗೆ ಮಾತನಾಡಿದ್ದಾರೆ; ಅದರ ಹಿಂದಿರುವ ಶೋಷಣಾ ರಾಜಕೀಯದ ಬಗ್ಗೆ ಮಾತಾಡಿದ್ದಾರೆ. ಆದ್ದರಿಂದ ಈ ಬಗೆಗೆ ನಾನು ಹೆಚ್ಚಿಗೆ ತಾತ್ವಿಕ ಜಿಜ್ಞಾಸೆಗೆ ಹೋಗದೆ ಇವೊತ್ತು ನನ್ನ ಸುತ್ತಮುತ್ತ ನಡೆಯುತ್ತಿರುವ ವಿದ್ಯಮಾನಗಳು ನನ್ನ ಅಂತರಂಗವನ್ನು ಕಲಕುತ್ತಿರುವ, ನನ್ನ ಅಸ್ತಿತ್ವದ ಮೇಲೆ ಉಂಟುಮಾಡುತ್ತಿರುವ ಪರಿಣಾಮಗಳ ನೆಲೆಯಲ್ಲಿ ಈ ದೇಶದ ಒಬ್ಬ ಮಧ್ಯಮ ವರ್ಗದ ಪ್ರಜೆಯಾಗಿ ಸ್ಪಂದಿಸುವ ಮೂಲಕ ಜಾಗತೀಕರಣವನ್ನು ನಾನು ಹೇಗೆ ಗ್ರಹಿಸ್ತಾ ಇದ್ದೇನೆ, ಅದರ ಅಪಾಯ - ಆತಂಕಗಳನ್ನು ಹೇಗೆ ಎದುರುಗೊಳ್ತಾ ಇದ್ದೇನೆ ಅನ್ನೋದರ ಬಗ್ಗೆ ಮಾತಾಡೋದಕ್ಕೆ ಇಷ್ಟಪಡ್ತೇನೆ. ಬೆಳಿಗ್ಗೆ ಕೆ. ರಾಮದಾಸ್ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಜಾಗತೀಕರಣ ತುಂಬಾ amorphous ಆದಂತಹ ಅಮೂರ್ತವಾದಂತಹ ಪರಿಕಲ್ಪನೇಂತ ಹೇಳಿದರು. ಹಾಗೇನೇ ಕಿಷನ್ ಪಟ್ನಾಯಕ್ ಅವರು ಅದನ್ನು ಸ್ಪಷ್ಟವಾಗಿ ವ್ಯಾಖ್ಯಾನ ಮಾಡೋದು ಕಷ್ಟ; ಅದಕ್ಕೇನೇ ಅದರ ಬಗ್ಗೆ ಎರಡು ವಿರುದ್ಧ ರೀತಿಯ ಅಭಿಪ್ರಾಯಗಳು ಕೇಳಿ ಬರ್ತಾ ಇರೋ ಅಪಾಯದ ಬಗ್ಗೆ ಮಾತಾಡಿದರು. ಆದರೆ ಕಳೆದ ೨೫ - ೩೦ ವರ್ಷಗಳಿಂದ ಸಮಾಜವಾದಿ ತತ್ವದಲ್ಲಿ ನಂಬಿಕೆಯುಳ್ಳವನಾಗಿ ಜಾಗತೀಕರಣ ನನಗೆ ನಮ್ಮೆಲ್ಲ ಎಡಪಂಥೀಯ ರಾಜಕಾರಣದ ವೈಫಲ್ಯ ಅಥವಾ ದರಿದ್ರೀಕರಣದ ಆತ್ಯಂತಿಕ ಪರಿಣಾಮ ರೂಪವಾಗಿ ಕಾಣ್ತಾ ಇದೆ. ನೇರವಾಗಿ ಹೇಳೋದಾದ್ರೆ ಇದು ಪರ್ಯಾಯಗಳೆಲ್ಲ ಕುಸಿದುಬಿದ್ದಿರುವ ಸಂದರ್ಭದಲ್ಲಿ ವಿರಾಜಮಾನವಾಗಿರುವ ಒಂದು ನಿರ್ದಿಷ್ಟ ಆರ್ಥಿಕ ನೀತಿಯ ಗುತ್ತೇದಾರಿಕೆ. ಇನ್ನೂ ಸ್ಪಷ್ಟವಾಗಿ ಹೇಳೋದಾದ್ರೆ, ಜಾಗತೀಕರಣ ಅಂದ್ರೆ ಮತ್ತೇನೂ ಅಲ್ಲ, ಸವಾಲಿಲ್ಲದ ಮುಕ್ತ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಅನಾವರಣ. ಜಾಗತೀಕರಣ ಈ ದೃಷ್ಟಿಯಿಂದ ಈಗ ನಮ್ಮ ಮುಂದೆ ಧುತ್ತೆಂದು ಹಾಜರಾಗಿರುವ ವಿದ್ಯಮಾನ ಅಲ್ಲ. ಕಳೆದ ೧೦ ವರ್ಷಗಳಲ್ಲಿ ನಮ್ಮ ದೇಶದ ಸರ್ಕಾರಿ ಚಿನ್ನವನ್ನೆಲ್ಲ ಅಡವಿಟ್ಟು ನಮ್ಮ ಆರ್ಥಿಕ ವ್ಯವಸ್ಥೆಯನ್ನೂ ರಕ್ಷಿಸಿಕೊಳ್ಳಬೇಕಾದ ಸಂದರ್ಭದಿಂದೀಚೆಗೆ - ಅದು ನಿಧಾನವಾಗಿ ವಿಕಾಸವಾಗ್ತಾ ಬಂದು, ಈಗ ಅದರ ಪರಿಣಾಮಗಳು ನಮ್ಮನ್ನು ಕಂಗೆಡಿಸುವ ಮಟ್ಟ ಮುಟ್ಟಿದೆ ಅಷ್ಟೆ. ಕಳೆದ ೫೫ ವರ್ಷಗಳಲ್ಲಿ ನಾವು ಅನುಸರಿಸಿಕೊಂಡು ಬಂದಂತಹ ಆರ್ಥಿಕ ನೀತಿ, ನಮ್ಮ ಆದ್ಯತೆಗಳು, ನಾವು ಆಯ್ದುಕೊಂಡ ಅಭಿವೃದ್ಧಿ ಮಾದರಿ, ಅದನ್ನು ಅನುಷ್ಠಾನಗೊಳಿಸಿದ ರೀತಿ ಇವುಗಳೆಲ್ಲದರ ಪರಿಣಾಮ ಇವೊತ್ತು ಏನಾಗಿದೇಂದ್ರೆ ಮುಕ್ತ ಮಾರುಕಟ್ಟೆ ನೀತಿ ಮಾತ್ರ ಬೇಗ ಫಲಗಳನ್ನೂ ಕೊಡಬಲ್ಲದು - ಯಾರಿಗೆ ಎಷ್ಟು ಎಂಬ ಪ್ರಶ್ನೆಗೆ ವ್ಯವಧಾನವಿಲ್ಲ - ಅದು ಮಾತ್ರ ವಾಸ್ತವಿಕವಾದದ್ದು, ಕಾರ್ಯಸಾಧ್ಯವಾದದ್ದು ಎಂಬಂತಹ ಅಭಿಪ್ರಾಯ ಜನಸಾಮಾನ್ಯರಲ್ಲೂ ಬರುವಂತಾಗಿದೆ. ಇದನ್ನು ನಾನು ಬಂಡವಾಳ ಶಾಹಿ ಆರ್ಥಿಕ ನೀತಿಯ ವಿಜಯ ಅನ್ನೋದಕ್ಕಿಂತ ಜಗತ್ತಿನ ಎಡಪಂಥೀಯ ರಾಜಕಾರಣದ - ಅದರಲ್ಲೂ ಎಡಪಂಥೀಯ ರಾಜಕಾರಣದ ಜಾಗತಿಕ ನಾಯಕತ್ವ ವಹಿಸಿದ್ದ ಸೋವಿಯತ್ ಒಕ್ಕೂಟ ಕುಸಿದುಬಿದ್ದ ನಂತರದ - ವೈಫಲ್ಯ ಅಂತ ನಾನು ಕರೀತಿನಿ ಮತ್ತು ನಮ್ಮ ಎಡಪಂಥೀಯ ತತ್ವ ಮೀಮಾಂಸಕರು ಬಂಡವಾಳಶಾಹಿ ಆರ್ಥಿಕತೆಯ ವೈರುಧ್ಯಗಳನ್ನು

ವಿಶ್ಲೇಷಿಸುವುದನ್ನು ಸ್ವಲ್ಪ ಸಮಯ ನಿಲ್ಲಿಸಿ ಎಡಪಂಥೀಯ ತತ್ವ ಮತ್ತು ರಾಜಕಾರಣದ ವಿಫಲತೆಯ ಹಿಂದಿರುವ ಐಬುಗಳೇನು ಎಂಬುದನ್ನು ಗುರುತಿಸಲು ಮುಂದಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಹೀಗೆ ಎಡಪಂಥೀಯ ರಾಜಕಾರಣದ ವಿಶ್ವಾಸಾರ್ಹತೆಯೇ ಕುಂದು ಹೋಗಿರುವ ಸಂದರ್ಭದಲ್ಲಿ ಏಕೈಕ ಆರ್ಥಿಕ ನೀತಿಯಾಗಿ ವಿಜೃಂಭಿಸುತ್ತಿರುವ ಮುಕ್ತ ಮಾರುಕಟ್ಟೆ ನೀತಿಯನ್ನೇ ಇಂದು ಅಮೇರಿಕಾಪ್ರೇರಿತ ಆರ್ಥಿಕ ತಜ್ಞರು, ಆಡಳಿತಗಾರರು ಹಾಗೂ ಕೆಲವು ಬುದ್ಧಿಜೀವಿಗಳು ಜಾಗತೀಕರಣ ಎಂಬ ಉದಾರ ಹೆಸರಿನಿಂದ ಕರೆದು ನಮ್ಮ ದೇಶದ ಮಧ್ಯಮ ವರ್ಗದಲ್ಲಿ ಸಮೃದ್ಧ ಭಾರತದ ಕನಸನ್ನು ಬಿತ್ತಿದ್ದಾರೆ. ಇದಕ್ಕೆ ಪೂರಕವಾಗಿ ಬೆಳಿಗ್ಗೆ ಕಿಷನ್ ಪಟ್ನಾಯಕ್ ಹೇಳಿದ ಹಾಗೆ ವಿಶ್ವಬ್ಯಾಂಕ್ ಹಾಗೂ ಅಂತಾರಾಷ್ಟ್ರೀಯ ಹಣಕಾಸು ನಿಧಿ ಇತ್ಯಾದಿ 'ಅಭಿವೃದ್ಧಿ ಪೋಷಕ' ಸಂಸ್ಥೆಗಳು ತಂತಮ್ಮ ನೀತಿ - ಆದ್ಯತೆಗಳನ್ನು ನಿರ್ಧರಿಸಿಕೊಂಡು ಹಣದ ಭಾರಿ ಥೈಲಿಗಳೊಂದಿಗೆ ಬರ್ತಾ ಇವೆ. ಅವು ಈ ಮೂರನೇ ಜಗತ್ತಿನ ಬಡದೇಶಗಳು ಏನು ಅಭಿವೃದ್ಧಿ ಹಂಬಲ ಇಟ್ಟುಕೊಂಡಿದ್ದವು, ಆದರೆ ಅದಾಗದೆ ಹತಾಶೆಗೊಂಡಿವೆ, ಆ ಹತಾಶೆಯ ಆಧಾರದ ಮೇಲೆ ಅವುಗಳಲ್ಲಿ ದಿಢೀರ್ ಲೌಕಿಕ ಅಭಿವೃದ್ಧಿಯ - ಇನ್ನು ಐವತ್ತು ವರ್ಷಗಳಲ್ಲಿ ಭಾರತ ಜಗತ್ತಿನ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆದಿರುತ್ತದೆ - ಕನಸನ್ನು ಬಿತ್ತಿ ಈ ಮೂರನೇ ಜಗತ್ತಿನ ಮನುಷ್ಯನ ಮನಸ್ಸನ್ನು ಆಳತಕ್ಕಂತಹ ಹುನ್ನಾರ ಮಾಡುತ್ತಿರುವಂತೆ ತೋರುತ್ತಿದೆ.

ಈ ಮುಕ್ತ ಬಂಡವಾಳಶಾಹಿ ಆರ್ಥಿಕ ನೀತಿಯ ಮುಖ್ಯ ಚೈತನ್ಯ ಅಂದರೆ ಅದರ ಸದಾ ಹೊಸದಾಗುತ್ತಿರುವ - ಆದರೆ ತಾನು ಅದರ ಸಂಪೂರ್ಣ ಬಳಕೆ ಮಾಡಿ ಸವಕಲಾಗುವ ತನಕ ಬಡ ದೇಶಗಳಿಗೆ ವರ್ಗಾಯಿಸದ - ಆಧುನಿಕ ತಂತ್ರಜ್ಞಾನ ಮತ್ತು ಅದರ ಫಲಗಳು, ವಿಶೇಷವಾಗಿ ಐಷಾರಾಮಿ ವಸ್ತುಗಳು. ಅದರ ಗಮನ ಮನುಷ್ಯನ ತಣಿಯದ ಸುಖದ ದಾಹ. ಭಾರತದಂತಹ, ಸಾಧಿಸಲಾಗದ ವೈರಾಗ್ಯ ಮತ್ತು ತಣಿಯದ ಸುಖದ ದಾಹಗಳ ನಡುವೆ ಹೊಯ್ದಾಡುತ್ತಿರುವ ದೇಶದ ಮಾರುಕಟ್ಟೆಗೆ ವೈವಿಧ್ಯಮಯ ಗ್ರಾಹಕ ವಸ್ತುಗಳು - ಬೀದಿ ಬೀದಿಗಳಿಗೆ ಅದೂ ಎಲ್ಲ ಪರ್ಯಾಯಗಳೂ ಮನಸ್ಸಿನಿಂದ ಖಾಲಿಯಾಗ್ತಿದ್ದಾಗ - ಬಂದು ಬಿದ್ದರೆ ಮನುಷ್ಯ ವಿಚಲಿತನಾಗುವುದು, ಅಲ್ಲಾಡುವುದು ಸಹಜವೇ ಎಂದು ನಾನು ಭಾವಿಸಿದ್ದೇನೆ. ಅಲ್ಲದೆ ಮನಸ್ಸಿಗೆ ಒಂದು ರೀತಿಯ ಮಂಕು ಕವಿಯುವುದೂ ಸಹಜ. ನಮಗೆಲ್ಲರಿಗೂ ಆಗಿರುವುದು ಅದೇನೇ. ಬೆಳಗ್ಗೆ ದೇವನೂರ ಮಹಾದೇವ ಹೇಳಿದ ಹಾಗೆ 'ತರಣಿಯ ಹುಳು ತನ್ನ ಸ್ನೇಹಕ್ಕೆ ಮನೆಯ ಮಾಡಿ ತನ್ನ ನೂಲು ತನ್ನನ್ನೇ ಸುತ್ತಿ ಸಾವಂತೆ...' ಕಳೆದ ೧೦ ವರ್ಷಗಳಲ್ಲಿ ಜಾಗತೀಕರಣದ ಫಲಗಳನ್ನು ಅನುಭವಿಸುತ್ತಲೇ ಬಂದು ನಮ್ಮ ಮನಸ್ಸಿಗೆ ಮಂಕು ಕವಿಸಿಕೊಂಡು, ಈಗ ಜಾಗತೀಕರಣದ ಆತ್ಯಂತಿಕ ರೂಪ ನಮ್ಮ ಅಸ್ತಿತ್ವದ ನಿಜತ್ವವನ್ನೇ ಅಲ್ಲಾಡಿಸುವ ನಿರ್ಣಾಯಕ ಸಂದರ್ಭ ಬಂದಾಗ, ಅದನ್ನು ಮುಖಾಮುಖಿಗೊಳಿಸಿಕೊಳ್ಳುವ ಆತ್ಮಸ್ಥೈರ್ಯವನ್ನು - ಮನಃಸ್ಪಷ್ಟತೆಯನ್ನೇ ಕಳೆದುಕೊಂಡು ಕೂತಿದ್ದೇವೆ.

ಯಾಕೆ ಹೀಗಾಯ್ತು? ಜಾಗತೀಕರಣ ನಮ್ಮ ಅಸ್ತಿತ್ವ-ನಿಜತ್ವಗಳನ್ನು ಅಲ್ಲಾಡಿಸುತ್ತಿರುವುದು

ಎಷ್ಟು ನಿಜ? ಆ ತುದಿಯ ಪೂರ್ಣಚಂದ್ರ ತೇಜಸ್ವಿ, ಈ ತುದಿಯ ಮೊಗಳ್ಳಿ ಗಣೇಶ್‌ರಂತಹ ಚಿಂತಕರು ಜಾಗತೀಕರಣದ ಪರವಾಗಿ ವಾದಿಸಿದ್ದಾರಲ್ಲಾ? ಈ ಎಲ್ಲ ಪ್ರಶ್ನೆಗಳ ಮಧ್ಯೆ ನನಗನ್ನಿಸೋದು ಯಾವುದೇ ಒಂದು ತತ್ವ ಅಥವಾ ವಿದ್ಯಮಾನ ಒಳ್ಳೆಯದೋ ಕೆಟ್ಟದ್ದೋ ಅನ್ನೋದನ್ನ ಅದು ವ್ಯಕ್ತಿಯ ಅಂತಃಕರಣ ಸಮಾಜದ ಅಂತಃಕರಣ ಮತ್ತು ಪ್ರಕೃತಿಯ ವೈವಿಧ್ಯದ ಮೇಲೆ ಏನು ಪರಿಣಾಮ ಮಾಡ್ತಾ ಇದೇಂತ ಗಮನಿಸಿ ತೀರ್ಮಾನಿಸಬೇಕಾಗುತ್ತದೆ.

ಪ್ರತಿಯೊಂದು ಸಮಾಜಕ್ಕೂ ಒಂದು ಧಾರಣಾಶಕ್ತಿ ಮತ್ತು ಶೀಲ ಅನ್ನೋದಿರುತ್ತೆ. ಧಾರಣಾಶಕ್ತಿ ಅಂದರೆ ತನ್ನನ್ನು ತಾನು ನಡೆಸಿಕೊಂಡು ಹೋಗುವಂತಹ ಅಂದರೆ ಸಮಾಜವೊಂದರ ತಾಳಿಕೆ ಮತ್ತು ಬಾಳಿಕೆಯ ಚೈತನ್ಯ ಶಕ್ತಿ. ಶೀಲ ಅಂದರೆ ಆ ಸಮಾಜದ ವ್ಯಕ್ತಿಯ ನಡೆ - ನುಡಿಗಳ ಸಂಬಂಧ ಮತ್ತು ವ್ಯಕ್ತಿ - ಸಮಾಜಗಳ ಸಂಬಂಧದ ಒಂದು ನೀತಿ ಸಂಹಿತೆ. ಈ ಧಾರಣ ಶಕ್ತಿ ಮತ್ತು ಶೀಲ ಆ ಸಮಾಜದ ಪರಂಪರೆ ಮತ್ತು ರಚನೆಗೆ ತಕ್ಕಂತೆ ವಿಕಾಸವಾಗ್ತಾ ಇರುತ್ತೆ. ಜಾಗತೀಕರಣ ನಮ್ಮ ಸಮಾಜದ ಧಾರಣಾಶಕ್ತಿ ಮತ್ತು ಶೀಲಗಳ ಮೇಲೆ ಏನು ಪರಿಣಾಮ ಉಂಟುಮಾಡಿದೆ ಎಂಬುದನ್ನು ಸ್ಥೂಲವಾಗಿಯಾದರೂ ಪರಿಶೀಲಿಸಿದರೆ ಅದನ್ನು ನಾವು ಒಪ್ಪಬಹುದೋ ಇಲ್ಲವೋ ಎನ್ನುವುದನ್ನು ತೀರ್ಮಾನಿಸಬಹುದು. ಸಮಾನತೆಯನ್ನು ಬೋಧಿಸುವ ಸಂವಿಧಾನವನ್ನು ನಾವು ಅರ್ಧ ಶತಮಾನ ಇಟ್ಟುಕೊಂಡಿದ್ದರೂ ಮೂಲಭೂತವಾಗಿ ನಮ್ಮ ಸಮಾಜ ಇನ್ನೂ feudal ಮನಃಸ್ಥಿತಿಯಿಂದ ಹೊರಬರಲು ನಿರಾಕರಿಸುತ್ತಿರುವ ಸಮಾಜವೇ ಆಗಿದೆ. ಇಂತಹ ಸಮಾಜವನ್ನು ಸಂರಕ್ಷಿಸಿಕೊಂಡು ಬರುತ್ತಿರುವ ನಮ್ಮ ನಾಯಕಗಣ ಮತ್ತು ನೌಕರಶಾಹಿ ಜಾಗತೀಕರಣವನ್ನು ಹೇಗೆ deal ಮಾಡ್ತಾ ಇದೇಂತ ಗಮನಿಸಿದರೆ ಯಾರಿಗಾದರೂ ಗಾಬರಿಯಾಗುತ್ತೆ. ಕೆಲವೇ ದಿನಗಳ ಹಿಂದೆ ಹಿರಿಯರ - ಬುದ್ಧಿಜೀವಿಗಳ ಸದನ ಎನ್ನಿಸಿಕೊಂಡಿರುವ ನಮ್ಮ ರಾಜ್ಯಸಭೆ ಎರಡನೇ ಪೇಟೆಂಟ್ ಮಸೂದೆಯನ್ನು ಒಂದು ಶಬ್ದದಷ್ಟೂ ಚರ್ಚೆ ಮಾಡದೆ ಒಪ್ಪಿಗೆ ನೀಡಿ ಕಳಿಸಿದೆ ಎಂಬುದು ಎಷ್ಟು ಜನಕ್ಕೆ ಗೊತ್ತು? ಅದಕ್ಕೆ ಮುಖ್ಯ ಕಾರಣ ಆ ಮಸೂದೆಯ ಪರಿಭಾಷೆಯೇ ನಮ್ಮ ಜನ ಪ್ರತಿನಿಧಿಗಳಿಗೆ ಹೊಸದು; ಅದನ್ನು ಹೇಗೂ ಕಾನೂನು ಇಲಾಖೆ ಪರಿಶೀಲಿಸಿದೆಯಲ್ಲ! ಆದರೆ ಕಾನೂನು ಇಲಾಖೆಯನ್ನು ನಿಯಂತ್ರಿಸುವವರು ಯಾರು ಎಂದು ಕೇಳುವವರು ಯಾರು?

ಈಗ ಅಭಿವೃದ್ಧಿ ಹೆಸರಿನಲ್ಲಿ ಹಣದ ಹೊಳೆಯೋ ಹರಿದು ಬರ್ತಾ ಇದೆ, ವಿಶ್ವಬ್ಯಾಂಕ್‌ನಿಂದ ಹಾಗೂ ಇತರ ಅಂತಾರಾಷ್ಟ್ರೀಯ ಅಭಿವೃದ್ಧಿ ನಿಧಿಗಳಿಂದ. ಈ ಅಭಿವೃದ್ಧಿ ಎಂತಹುದು, ಯಾವ ಜನವರ್ಗಕ್ಕಾಗಿ ಎಂಬುದನ್ನು ಬೆಳಿಗ್ಗೆ ಕಿಷನ್ ಪಟ್ನಾಯಕ್ ಸೂಚ್ಯವಾಗಿ ಹೇಳಿದ್ದಾರೆ - ಉತ್ಪಾದನಾ ಕ್ಷೇತ್ರಕ್ಕಲ್ಲ, ದಲ್ಲಾಳಿ - ಕಮೀಷನ್ ವ್ಯವಹಾರಗಳಿಗೆ ಅಮೆರಿಕಾ ಕೊಟ್ಟಿರುವ ಪ್ರತಿಷ್ಠಿತ ಹೆಸರಾದ 'ಸೇವೆಗಳು' (Services) ಕ್ಷೇತ್ರದ ಅಭಿವೃದ್ಧಿಗಾಗಿ. ಅವರ ಗ್ರಾಹಕ ಸರಕುಗಳು ನಮ್ಮ ಮಾರುಕಟ್ಟೆಯಲ್ಲಿ ಆಕರ್ಷಕವಾಗಿ ಚುರುಕಾಗಿ ಬಿಕರಿಯಾಗುವಂತಹ ಮಾರುಕಟ್ಟೆ ವಾತಾವರಣ ನಿರ್ಮಿಸಲು ಬೇಕಾದ ಸೌಲಭ್ಯಗಳ ನಿರ್ಮಾಣಕ್ಕಾಗಿ. ಇದಕ್ಕಾಗಿ ಬರುವ ಹಣದ ಪ್ರಮಾಣ ಎಷ್ಟು? ಅದನ್ನು ನಿರ್ವಹಿಸುವವರು ಯಾರು? ಪ್ರತಿಯೊಂದು

ಸಮಾಜಕ್ಕೂ ಅದು ನಿರ್ವಹಿಸಬಹುದಾದ ಹಣದ ವ್ಯವಹಾರದ ಒಂದು ಮಟ್ಟ ಇರುತ್ತೆ. ಅದಕ್ಕಿಂತ ಹೆಚ್ಚು ಹಣ ಬಂದು ಬಿದ್ರೆ ಅದು ತನ್ನ ಶೀಲವನ್ನ ಕಳೆದುಕೊಳ್ಳಲಾರಂಭಿಸುತ್ತದೆ. ಇದು ನೈತಿಕ ಪ್ರಶ್ನೆ ಅಲ್ಲ, ಆಂತರಿಕ ಸಾಮರ್ಥ್ಯದ ಪ್ರಶ್ನೆ, ಒಂದು ಸಮಾಜದ ಧಾರಣಾಶಕ್ತಿಯ ಪ್ರಶ್ನೆ. ನಾವು ಕಳೆದ ೧೦ ವರ್ಷಗಳಲ್ಲಿ ನಡೆದಿರುವ ಆರ್ಥಿಕ ಹಗರಣಗಳಲ್ಲಿ ಕಳೆದುಹೋಗಿರುವ ಹಣದ ಪ್ರಮಾಣವನ್ನು ಗಮನಿಸಿದರೆ, ಅದು ಬ್ಯಾಂಕ್ ಹಗರಣ ಆಗಿರಬಹುದು, ಷೇರು ಹಗರಣ ಇರಬಹುದು, ಐ.ಟಿ.ಐ. ಹಗರಣ ಇರಬಹುದು - ಸ್ವಾತಂತ್ರ್ಯೋತ್ತರ ಭಾರತದ ಇತರ ಭ್ರಷ್ಟಾಚಾರದ ಹಗರಣಗಳೆಲ್ಲ ಕ್ಷುದ್ರವಾಗಿ ಕಾಣ್ತವೆ. ಇದರಲ್ಲಿ ಎಲ್ಲ ಇಲಾಖೆಗಳಲ್ಲಿ ನಡೆಯುತ್ತಿರುವ ಕಂಪ್ಯೂಟರೀಕರಣದ ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರ ಸೇರಿಲ್ಲ. ಹಾಗಾಗಿ ಇವೊತ್ತು ದೇಶದಲ್ಲಿ ನಡೆಯುತ್ತಿರುವುದು ಅಭಿವೃದ್ಧಿಯೋ, ಲೆಕ್ಕಕ್ಕೆ ಸಿಗದಂತಹ ಭ್ರಷ್ಟಾಚಾರವೋ ಅಥವಾ ಭಾರತೀಯ ಪ್ರಜೆಯ ಶೀಲಹರಣವೋ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ. ಇದು ದೇಶದ characterನ ಪ್ರಶ್ನೆ, ಮನುಷ್ಯನ ಔಚಿತ್ಯಪ್ರಜ್ಞೆಯ ನಾಶದ ಪ್ರಶ್ನೆ. ನಮಗೆ ನಿಜವಾಗಿ ಎಷ್ಟು ಹಣ ಬೇಕು, ಯಾಕೆ ಬೇಕು? ನಮಗೆ ೨೪ ತಾಸುಗಳೂ ೬೫ - ೭೦ ವಾಹಿನಿಗಳ ಟಿವಿ ಬೇಕಾ? ಅದು ನಮ್ಮ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದ ಮೇಲೆ ಉಂಟುಮಾಡಿರುವ ಪರಿಣಾಮಗಳು ಎಂತಹವು? ಎಲ್ಲ ಕಛೇರಿಗಳಿಗೂ ಅಷ್ಟು ಸಂಕೀರ್ಣವಾದ, ಅಷ್ಟು ದುಬಾರಿಯಾದ ಕಂಪ್ಯೂಟರ್‌ಗಳು ಬೇಕೆ? ಸಮೃದ್ಧಿ ಎಂದರೆ ಇದೇನೇ? ಸಮೃದ್ಧಿ ಎಂದರೆ ಅಮೆರಿಕಾದಲ್ಲೇ ಬೇರೆ ಅರ್ಥ, ಈ ದೇಶದಲ್ಲೇ ಬೇರೆ ಅರ್ಥ ಹೊರಡುತ್ತದಲ್ಲವೇ?

ಯಾವುದೇ ಒಂದು ನಾಗರೀಕತೆ ಒಂದು ಸಮಾಜವನ್ನು ಮುನ್ನಡೆಸಬಲ್ಲದೋ ಇಲ್ಲವೋ ಎಂಬುದಕ್ಕೆ ಒಂದು ಸಣ್ಣ ಪರೀಕ್ಷೆ ಇದೆ - ಅದು ಸಮಾಜದಲ್ಲಿ ಎಂತಹ ದಾಹ ಸೃಷ್ಟಿಸುತ್ತದೆ ಮತ್ತು ಆ ದಾಹವನ್ನು ಆ ಸಮಾಜದ ಶಾಂತಿ ಕದಡದಂತೆ ತಣಿಸಲು ಅದಕ್ಕೆ ಸಾಧ್ಯವೇ ಎಂಬ ಪ್ರಶ್ನೆಯನ್ನು ಅದು ಉತ್ತರಿಸಬೇಕಾಗುತ್ತದೆ. ಈ ಜಾಗತೀಕರಣದ ನಾಗರೀಕತೆ - ಯಾವುದನ್ನು ಮಹಾತ್ಮಗಾಂಧಿ ಆಧುನಿಕ ಅಥವಾ ಪಶ್ಚಿಮದ ನಾಗರೀಕತೆ ಅಂತ ಕರೆದ್ರೋ ಅದರ ಅನಿರ್ಬಂಧಿತ ರೂಪ - ಇವೊತ್ತು ಏನು ಮಾಡ್ತಾ ಇದೇಂದ್ರೆ ಅದು ಈ ದೇಶದ ಸಾಮಾನ್ಯ ಪ್ರಜೆಯಲ್ಲಿ ತಾನು ನಿರ್ವಹಿಸಲಾಗದಂತಹ ದಾಹ ಮತ್ತು ಒಂದು ದೊಡ್ಡ ಜನವರ್ಗ ಅದರ ಹತ್ತಿರಕ್ಕೂ ಬರಲಾಗದಂತಹ ಝುಗಝುಗಿಸುವ ಗ್ರಾಹಕ ಮಾರುಕಟ್ಟೆಯನ್ನು ಸೃಷ್ಟಿ ಮಾಡ್ತಾ ಇದೆ. ಭಾರತದ ಸರಾಸರಿ ಪ್ರಜೆಯ ಸುಖದ ನಿರೀಕ್ಷೆಯ ಮತ್ತು ತಣಿವಿನ ಮಟ್ಟ ನಿರಂತರವಾಗಿ ಏರ್‍ತಾನೇ ಇದೆ. ಇದರಿಂದಾಗಿ ಅಪರಾಧಗಳ ಸಂಖ್ಯೆ ಮತ್ತು ವೈವಿಧ್ಯ ದಿಢೀರನೆ ಏರ್‍ತಾ ಇದೆ. ಎಲ್ಲೆಲ್ಲೂ ಈಗ ರಕ್ಷಣಾ ಕೋಟೆಗಳೇ, ವೈಯಕ್ತಿಕ ಮತ್ತು ಸರ್ಕಾರಿ ಎರಡೂ. ಇದಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಬಡವರು, ಸರಳ ಜೀವಿಗಳು ಮತ್ತು ನಿಜವಾದ ಗಾಂಧಿವಾದಿಗಳ ಹೊರತಾಗಿ ಇನ್ನಾರಿಗೂ ನೆಮ್ಮದಿ ಇದ್ದಂತಿಲ್ಲ. ಅದಕ್ಕೇ ಮಾನಸಿಕ ಸಲಹಾ ಕೇಂದ್ರಗಳು, ಜಪ-ತಪ-ಧ್ಯಾನ ಕೇಂದ್ರಗಳು ಜನರನ್ನು ಆಕರ್ಷಿಸುತ್ತಿವೆ. ಇದೊಂದು ತಳವಿಲ್ಲದ

ಬಾವಿಗೆ ಬೀಳುವ, ಸದಾ ಒಳಕ್ಕೇ ಎಳೆದುಕೊಳ್ಳುವಂತಹ ವಿಷವ್ಯೂಹ ಪ್ರವೇಶಿಸುವ ಅಪಾಯವೇ ಆಗಿದೆ.

ಈ ಅಪಾಯದ ಹಿಂದೆ ಸಮಾಜವಾದಿ ಆಂದೋಳನದ ದೊಡ್ಡ ವೈಫಲ್ಯವೂ ಇದೆ. ಕಮ್ಯೂನಿಸಂ ಮತ್ತು ಬಂಡವಾಳಶಾಹಿ ಎರಡನ್ನೂ ಒಂದೇ ನಾಗರೀಕತೆಯ ಎರಡು ಮುಖಗಳು ಎಂದು ವಿಶ್ಲೇಷಿಸಿ, ಈ ನಾಗರೀಕತೆಯ ಹಿಂದಿರುವ ಭಾರತ ಭರಿಸಲಾಗದಂತಹ ever raising standard of living ಪ್ರೇರಣೆಗೆ ಬದಲಾಗಿ decent standard of living ಪ್ರೇರಣೆಯ ಸಮಾಜವಾದಿ ನಾಗರೀಕತೆಯನ್ನು ಪ್ರತಿಪಾದಿಸಿದ ಸಮಾಜವಾದಿಗಳು ಅಂತಹ ನಾಗರೀಕತೆಗೆ ಅಸ್ತಿಭಾರ ಹಾಕಲೂ ಅಸಮರ್ಥರಾಗಿ ಹೋದರು. Decent standard ಎಂಬುದನ್ನೂ ಸ್ಪಷ್ಟವಾಗಿ ವ್ಯಾಖ್ಯಾನ ಮಾಡದಾದರು. ಪ್ರಕೃತಿಯನ್ನೂ - ನೆಲ, ಜಲ, ವಾಯುಗಳನ್ನು - ಮನುಷ್ಯನ ಕೌಶಲ್ಯವನ್ನೂ ನಾಶ ಮಾಡುವಂತಹ ಸಾಮೂಹಿಕ ಉತ್ಪಾದನೆಯ ಆಧುನಿಕ ತಂತ್ರಜ್ಞಾನಕ್ಕೆ ಬದಲಾಗಿ ಸ್ಥಳೀಯ ಸಂಪನ್ಮೂಲ ಮತ್ತು ಕೌಶಲ್ಯಗಳನ್ನು ಬಳಸಿಕೊಳ್ಳಲು ಸಾಧ್ಯವಾಗುವಂತಹ - ಆದರೆ ಮನುಷ್ಯನನ್ನು ಪ್ರಾಣಿಯಂತೆ ದುಡಿಸದಂತಹ - ಸಣ್ಣ ಪ್ರಮಾಣದ ತಂತ್ರಜ್ಞಾನ ಮತ್ತು ಅಧಿಕಾರ ವಿಕೇಂದ್ರೀಕರಣ ಕಲ್ಪನೆಗಳ ಆಧಾರದ ಮೇಲೆ ಪ್ರತಿಪಾದಿತವಾದ ಈ ನಾಗರೀಕತೆಯ ಬೀಜ ಚಿಗುರೊಡೆಯಲೇ ಇಲ್ಲ. ಬಹಳಷ್ಟು ಸಮಾಜವಾದಿಗಳು - ವಿಶೇಷ ವಾಗಿ ರಾಜಕಾರಣಿಗಳು - ಐಷಾರಾಮಿ ಜೀವನಕ್ಕೆ ಬಿದ್ದು ಇಂದು ಜಾಗತೀಕರಣವನ್ನು ಹುಳ್ಳುಳ್ಳ ಮನಸ್ಸಿನಿಂದ ಸ್ವಾಗತಿಸ್ತಿದ್ದಾರೆ. ಇದು ದುರಂತ. ಒಟ್ಟಾರೆ ಎಡಪಂಥೀಯ ರಾಜಕಾರಣದ ದುರಂತ - ನುಡಿದಂತೆ ನಡೆಯಲಾಗದ ದ್ವಂದ್ವದ ದುರಂತ ಮತ್ತು ಶ್ರಮಜೀವಿಗಳ ಹೆಸರಲ್ಲಿ ನಡೆದ ವಿಚ್ಛಿದ್ರಕಾರಿ ರಾಜಕಾರಣದ ದುರಂತ.

ಒಂದು ಸಮಾಜಕ್ಕೆ ಅಂದರೆ ಅದರ ಜೀವನಶೈಲಿಗೆ ಒಂದು ಲಯ ಇರುತ್ತದೆ, ಒಂದು ನಿರ್ದಿಷ್ಟ ಮಟ್ಟದ ಅಭಿವೃದ್ಧಿ ಗತಿಯನ್ನು ತಾಳಿಕೊಳ್ಳುವ absorb ಮಾಡಿಕೊಳ್ಳುವ ಶಕ್ತಿ ಇರುತ್ತದೆ. ಅದನ್ನು ಮೀರಿದರೆ ಆ ಲಯವನ್ನು disturb ಮಾಡಿದರೆ ಆ ಸಮಾಜ ಅನೇಕ ರೀತಿಯ ವಿಕ್ಷಿಪ್ತತೆಗಳಿಗೆ ಈಡಾಗುತ್ತದೆ - ಅದು ವ್ಯಾಪಕ ಭ್ರಷ್ಟಾಚಾರ ಆಗಬಹುದು, ಹವಾಲಾ ದುರ್ವ್ಯವಹಾರ ಸೇರಿದಂತೆ ಅಪರಾಧ ಪ್ರಪಂಚದ ವಿಸ್ತರಣೆ ಆಗಬಹುದು. ತನ್ನ ನೆರೆಹೊರೆ, ಪ್ರಕೃತಿ ಮತ್ತು ದೇಶ ಕುರಿತ ಜವಾಬ್ದಾರಿಯ ನಾಶ ಆಗಬಹುದು. ಒಟ್ಟಾರೆ ಮನುಷ್ಯನ ಔಚಿತ್ಯಪ್ರಜ್ಞೆಯೇ ನಾಶವಾಗತೊಡಗುತ್ತದೆ - ಒಬ್ಬನಿಗೆ ಎಷ್ಟು ಹಣ ಬೇಕು, ಯಾಕೆ ಬೇಕು, ಆ ಹಣವನ್ನು ಸಂಪಾದನೆ ಮಾಡುವ ಬಗೆ ಸರಿ ಇದೆಯಾ - ಇಂತಹ ಎಲ್ಲ ಪ್ರಶ್ನೆಗಳೂ ಈಗ ಮಧ್ಯಮ ವರ್ಗದ ಜನರ ಮನಸ್ಸಿನಿಂದಲೂ ಮಾಯವಾಗ್ತಿವೆ. ಹೀಗಾಗಿ ಕ್ರಮೇಣ ನಾವು ನಮ್ಮ ಸಂವೇದನಾಶೀಲತೆಯನ್ನೇ ಕಳೆದುಕೊಳ್ತಿದ್ದೇವೆ. Selfishness ಒಂದು ಮೌಲ್ಯವಾಗ್ತಿದೆ. ಯಶಸ್ಸು, ಯಶಸ್ಸು ಮಾತ್ರ ಮುಖ್ಯ; ಆದ್ದರಿಂದ ಅಕ್ಕಪಕ್ಕ ಹಿಂದೆ ನೋಡದೆ ನಿನ್ನ ಕಣ್ಮುಂದಿನ ದಾರಿ ಮಾತ್ರ ನೋಡಿಕೊಂಡು ಸಾಗು. ಆ ದಾರಿಯಲ್ಲಿ ರಕ್ತ ಬಿದ್ದಿದ್ರೆ ಅದು ನಿಮಗೆ ಸಂಬಂಧಪಟ್ಟ ವಿಷಯವಲ್ಲ. ಅದರ ಗೊಡವೆಗೆ ಹೋದರೆ ನಿನ್ನನ್ನು ದಾಟಿಕೊಂಡು ಇತರರು

ನಿನಗಿಂತ ಬೇಗ ಯಶಸ್ಸನ್ನು ಸಾಧಿಸಿಬಿಟ್ಟಿರುತ್ತಾರೆ! ಆದ್ದರಿಂದ be selfish. ಅದರ ಬಗ್ಗೆ ನಾಚಿಕೆ ಬೇಡ - ಅವೆಲ್ಲ ಈಗ ಚಲಾವಣೆ ಕಳೆದುಕೊಂಡಿರುವ ವಸ್ತುಗಳು. You are condemned to be selfish now. ಇದು ಮನುಷ್ಯನೇ ಇಲ್ಲದ ಸಂಪತ್ತೆಂಬ (ಜಡ) 'ವಸ್ತು'ಗಳೇ terms dictate ಮಾಡುತ್ತಿರುವ ಅನಾತ್ಮವಾದಿ ಪ್ರಪಂಚ. ಈ ಪ್ರಪಂಚದೊಳಕ್ಕೆ ಸಾವಿರಾರು ರೈತರನ್ನು ಬಲಿ ತೆಗೆದುಕೊಂಡ ಮೂರ್ನಾಲ್ಕು ರಾಜ್ಯಗಳ ಕ್ಷಾಮದ ಭೀಕರತೆಗೆ ಪ್ರವೇಶವೇ ಇಲ್ಲ. ಇಂತಹ ಪ್ರಪಂಚಕ್ಕೆ ನಾವು ಅಧಿಕೃತವಾಗಿ ಪ್ರವೇಶಿಸಬೇಕೇ? ಪ್ರವೇಶಿಸದಿದ್ದರೆ ಉಳಿಗಾಲವಿಲ್ಲ - ಏಕೆಂದ್ರೆ ಚರಿತ್ರೆ dead endಗೆ ಬಂದಿದೆ. ಇನ್ನಾವುದೇ ಹೊಸ ಆಲೋಚನೆ ಪ್ರಯೋಗ ಬರೀ ಪುನರಾವರ್ತನಗಳಷ್ಟೇ ಆಗಬಲ್ಲವು ಎಂದು ಜಾಗತೀಕರಣ ಶಾಸ್ತ್ರಜ್ಞರು ಸಾರಿ ಸಾರಿ ಹೇಳುತ್ತಿದ್ದಾರೆ! ಇದನ್ನು ಪ್ರಶ್ನಿಸಬಹುದಾದವರಿಗೆ ಬಹುರಾಷ್ಟ್ರೀಯ (ಭಾರತೀಯವೂ ಸೇರಿದಂತೆ) ಸಂಸ್ಥೆಗಳಲ್ಲಿ ಮರು ಮಾತಾಡಲಾಗದಷ್ಟು ಸಂಬಳ ನೀಡಿ ಕೆಲಸ ಕೊಡಲಾಗಿದೆ, ಇತರರಿಗೋಸ್ಕರ ವಿದೇಶೀ ನೆರವಿನ ಸ್ವಯಂಸೇವಾ ಸಂಸ್ಥೆಗಳ ಜಾಲವನ್ನೇ ನಿರ್ಮಿಸಿ ಅವರನ್ನು ಅದರಲ್ಲಿ ತೊಡಗಿಸಲಾಗಿದೆ. ಹೀಗಾಗಿ ಅಲ್ಲೊಬ್ಬ ಅಣ್ಣಾ ಹಜಾರೆ, ಇಲ್ಲೊಬ್ಬ ರಾಜೇಂದ್ರ ಸಿಂಗ್ ಇನ್ನೆಲ್ಲೋ ಮೇಧಾಪಾಟ್ಕರ್, ಮತ್ತೆಲ್ಲೋ ಕಿಷನ್ ಪಟ್ನಾಯಕ್ ಇಂತಹವರ ನೇತೃತ್ವದ ಸಣ್ಣ ಗುಂಪುಗಳಷ್ಟೇ ಜಾಗತೀಕರಣದ ರೀತಿನೀತಿಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಶ್ನಿಸಲು ಸಾಧ್ಯವಾಗುತ್ತಿರುವುದು. ಆದರೆ ಜಾಗತೀಕರಣದ - ಅಂದರೆ ಉದಾರೀಕರಣ, ಖಾಸಗೀಕರಣ ಹಾಗೂ ವಿದೇಶೀ ಬಂಡವಾಳಕ್ಕೆ ಅನುಮತಿ - ಮೊದಲ ಎರಡು ವರ್ಷಗಳ ಹೊರತಾಗಿ ರಾಷ್ಟ್ರದ ಬೆಳವಣಿಗೆ ದರ ಹಿಂದೂ ಬೆಳವಣಿಗೆ ದರವೆಂದೇ ಪ್ರಸಿದ್ಧವಾಗಿರುವ ಶೇಕಡಾ ಆರಷ್ಟಕ್ಕೇ ನಿಂತುಬಿಟ್ಟಿದೆ. ವಿದೇಶೀ ಬಂಡವಾಳದ ಹರಿವೂ ಕುಂದಿದೆ ಏಕೆ ಎಂಬ ಪ್ರಶ್ನೆಗಳು ರಾಷ್ಟ್ರೀಯ ಚರ್ಚೆಗೇ ಬರುತ್ತಿಲ್ಲ.

ಇದು ಕನಸುಗಳನ್ನು ಕಳೆದುಕೊಂಡ ದೇಶವಾಗಿಬಿಟ್ಟಿದೆ. ಸ್ವಾತಂತ್ರ್ಯ ಹೋರಾಟದ ಫಲಗಳಾಗಿ ಮೂಡಿದ ಅನೇಕ ಕನಸುಗಳು ಇಂದು ಕಮರಿ ಹೋಗಿವೆ. ಆ ಕನಸುಗಳನ್ನು ನನಸು ಮಾಡುವ ಭರವಸೆ ನೀಡಿದ್ದ ಎಲ್ಲ ರಾಜಕೀಯ ಸಿದ್ಧಾಂತಗಳೂ, ಪಕ್ಷಗಳೂ ತಮ್ಮ ಆತ್ಮದ್ರೋಹಿ ರಾಜಕಾರಣದ ಮೂಲಕ ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡಿವೆ. ಇಂತಹ ಸನ್ನಿವೇಶಗಳಿಗೆ ಕಾಯುತ್ತಿದ್ದ ಕೋಮುವಾದಿ ರಾಜಕಾರಣ ಮುನ್ನೆಲೆಗೆ ಬಂದಿದೆ. ಇನ್‌ಫೋಸಿಸ್‌ನ ನಾರಾಯಣಮೂರ್ತಿಯವರಿಗೆ ಇಡೀ ದೇಶದಲ್ಲಿ ಶಾಲಾ ಶಿಕ್ಷಣದಿಂದ ಆರಂಭವಾದಂತೆ ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷನ್ನು ಕಡ್ಡಾಯ ಮಾಡಿದಾಗ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಸಾರ್ವಜನಿಕವಾಗಿ ಹೇಳುವಷ್ಟು ಧೈರ್ಯ ಬಂದಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳು ದಿವಾಳಿ ಎದ್ದಿವೆ ಎಂದು ಬಂಡವಾಳವನ್ನು ಹಿಂತೆಗೆದುಕೊಂಡು ಅವನ್ನು ಖಾಸಗಿ ಸ್ವತ್ತಾಗಿ ಪರಿವರ್ತಿಸುತ್ತಿದ್ದಾಗ್ಯೂ ನಮಗೆ ತೀವ್ರವಾಗಿ ಪ್ರತಿಕ್ರಿಯಿಸಲಾಗುವುದಿಲ್ಲ. ಏಕೆಂದರೆ ದಿವಾಳಿ ಎಬ್ಬಿಸಿದವರೂ ನಾವೇ - ಅಧಿಕಾರಶಾಹಿ ಮತ್ತು ಕಾರ್ಮಿಕಶಾಹಿ.

ಆಶ್ಚರ್ಯವಾಗುತ್ತೆ, ಹಿಂದಿರುಗಿ ನೋಡಿದರೆ - ಕಳೆದ ಹತ್ತು ವರ್ಷಗಳಲ್ಲಿ ಎಷ್ಟೊಂದು

ಹಗರಣಗಳನ್ನು ಕ್ಷಮಿಸಿಬಿಟ್ಟಿದೆ ಈ ಸಮಾಜ. ಇದು ಕ್ಷಮಾಗುಣ ಅಲ್ಲ, ನಿಷ್ಕ್ರಿಯತೆ; ಸ್ಪರ್ಧಾಪ್ರಪಂಚದಲ್ಲಿ ಸದಾ ದುಡಿಯಬೇಕಾದ ಪ್ರಾಣಿಯಾಗಿಬಿಟ್ಟಿರುವ ಮನುಷ್ಯನ ಸಂವೇದನಾಹೀನತೆ, ಜಾಗತೀಕರಣದ ನಾಗರೀಕತೆ ಸೃಷ್ಟಿಸುತ್ತಿರುವ ನಿರಂತರ ದಾಹದ ಪರಿಣಾಮ. ಎಂಥ ದಾಹ ಇದು? ಗುಜರಾತ್ ಕೋಮು ಹತ್ಯಾಕಾಂಡದಲ್ಲಿ ಮಿಟ್ಸುಬಿಷಿ ಲ್ಯಾನ್ಸರ್ ಕಾರ್‌ಗಳಲ್ಲಿ ಬಂದ ಗಂಡಸರು ಹೆಂಗಸರು ಇಬ್ಬರೂ ಮುಸ್ಲಿಂ ಮನೆಗಳು - ಅಂಗಡಿಗಳಿಂದ ಬಣ್ಣದ ಟಿವಿ, ರೆಫ್ರಿಜರೇಟರ್, ಏರ್ ಕಂಡೀಷನರ್‌ಗಳನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ. ಇದು ಶ್ರೀಮಂತಿಕೆಯ ತೀರದ ದಾಹ. ಮನೆಗೆ ಎಷ್ಟು ಟಿವಿ, ರೆಫ್ರಿಜರೇಟರ್, ಏರ್‌ಕಂಡೀಷನರ್ ಇದ್ದರೂ ಸಾಲದು, ಇನ್ನೂ ಒಂದೆರಡು ಇದ್ದರೆ ಇನ್ನಷ್ಟು ಸುಖ, comfort ದೊರೆತೀತೆನ್ನುವ ತರ್ಕ! ಈ ತರ್ಕದ ಬೆನ್ನುಬಿದ್ದಿರುವ ಜಾಗತೀಕರಣದ ಫಲಾನುಭವಿಗಳು ಸಮಾಜಕ್ಕೆ 'ಮಾದರಿ'ಗಳೆನಿಸುತ್ತಿದ್ದಾರೆ. ಏಕೆಂದರೆ ಯಾವುದೇ ಹಿಂದುಳಿದ ಸಮಾಜ ಇಂತಹ 'ಕ್ಷಿಪ್ರ ಲೌಕಿಕ ಅಭಿವೃದ್ಧಿ'ಯ ಮಾದರಿಗಳಿಗೆ ಸೆಳೆಯಲ್ಪಡುವುದು ಸಹಜವೇ ಆಗಿದೆ. ರಸ್ತೆಗಳು ಸುಧಾರಿಸುತ್ತಿರುವುದನ್ನು ಅವರು ನೋಡುತ್ತಿದ್ದಾರೆ, ತಾಲ್ಲೂಕು ಹೋಬಳಿ ಕೇಂದ್ರಗಳಲ್ಲೂ ಷಾಪಿಂಗ್ ಮಾಲ್‌ಗಳು ಏಳುತ್ತಿರುವುದನ್ನು ಅವರು ನೋಡುತ್ತಿದ್ದಾರೆ, ತಮ್ಮ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಉಚಿತ ಸಮವಸ್ತ್ರ, ಉಚಿತ ಪುಸ್ತಕಗಳ ಪೂರೈಕೆ ಮತ್ತು ಕಂಪ್ಯೂಟರ್‌ಗಳ ಬಳಕೆ ಸಾಧ್ಯವಾಗಿದೆ. ಅರವತ್ತು - ಎಪ್ಪತ್ತು ಟಿವಿ ವಾಹಿನಿಗಳಲ್ಲಿ ಜಗತ್ತೇ ನಿಮ್ಮ ಮುಂದೆ ತೋರಿಸಬಹುದಾದ ಮತ್ತು ತೋರಿಸಬಾರದ್ದೆಲ್ಲವನ್ನೂ ತೆರೆದು ತೋರಿಸುತ್ತಿದೆ. ಎಷ್ಟೊಂದು ತರದ ವಾಹನಗಳು - ಎಂತೆಂತಹ ವೇಗವ್ಯಾಪ್ತಿಗೆ ಸೇರಿದವು! ಅಂಗಡಿ - ಮುಂಗಟ್ಟುಗಳಲ್ಲಿ ಎಂತೆಂತಹ ತಿನಸುಗಳು, ಎಷ್ಟು ಆಕರ್ಷಕವಾದ ಸಾಧನ, ಸಲಕರಣೆಗಳು - ಕೂತಲ್ಲೇ ಕೂತು ಬೊಜ್ಜು ಕರಗಿಸಿಕೊಳ್ಳಬಹುದು! ಇದು ಸಾಮಾನ್ಯ ಮನುಷ್ಯ ಎಲ್ಲ facultyಗಳನ್ನು ಮಂಕು ಗೊಳಿಸುವಂತಹ ವಾತಾವರಣ. ಎಲ್ಲವನ್ನೂ ಸರಕಾಗಿ ಕಾಣುವ ದೃಷ್ಟಿಕೋನ - ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪ ಎಲ್ಲವೂ. ಇಂದು ಮೂಲಭೂತ ವಿಜ್ಞಾನವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳೇ ಕಡಿಮೆಯಾಗಿ ಹೋಗಿದ್ದಾರೆ. ಇದೆಲ್ಲದರಿಂದಾಗಿ ನಮ್ಮ ವ್ಯಕ್ತಿತ್ವದ ಸಮಗ್ರತೆಯೇ ನಾಶವಾಗ್ತಾ ಇದೆ. ಲೋಹಿಯಾ ಹೇಳ್ತಾ ಇದ್ರು, ಸಮಾಜವಾದಿ ನಾಗರೀಕತೆಯ ಒಂದು ಲಕ್ಷಣವಾಗಿ ಸಮಾಜ ಯಾವತ್ತೂ ಸಮಗ್ರ ದಕ್ಷತೆಯನ್ನು ಬೆಳಿಸಕೊಳ್ಳಬೇಕೇ ಹೊರತು ಗರಿಷ್ಠ ದಕ್ಷತೆಯನ್ನಲ್ಲ ಅಂತ. ಅಂದ್ರೆ ಮನುಷ್ಯನ ದಕ್ಷತೆ ಒಂದೇ ದಿಕ್ಕಿನಲ್ಲಿ ಬೆಳೀಬಾರದು, ಅವನ ಎಲ್ಲ facultyಗಳೂ ಬೆಳೀಬೇಕು; ಆಗ ಮಾತ್ರ ನಾವು ಆರೋಗ್ಯಕಾರಿ ಸಮಾಜವೊಂದನ್ನು ಸೃಷ್ಟಿಸೋದಕ್ಕೆ ಸಾಧ್ಯ ಅಂತ. ಆದರೆ ಇವೊತ್ತು ನಾವು ಲೌಕಿಕ ಯಶಸ್ಸಿನ ಒಂದೇ ಗುರಿಯನ್ನಿಟ್ಟು ಕೊಂಡು ನಮ್ಮ ವ್ಯಕ್ತಿತ್ವದ ತುಂಬಾ essential ಆದ ಒಂದು ಭಾಗವನ್ನ, ಶೀಲವನ್ನ, characterನ್ನ ಕಳಕೊಳ್ತಾ ಇದೀವಿ ಜಾಗತೀಕರಣದ ಒತ್ತಡಕ್ಕೆ ಸಿಕ್ಕಿ. ಇದು ನಾಶವಾದರೆ ಏನಾಗಬಹುದು? ಇದಕ್ಕಿಂತ ನಾಶ ಇನ್ನಾವುದು ನಮಗೆ? ಗುಜರಾತ್ ಕೋಮು ಹತ್ಯಾಕಾಂಡ ದಲ್ಲಿ ಕಂಡುಬಂದ ಕ್ರೌರ್ಯದ ಸ್ವರೂಪ ಮತ್ತು ವೈವಿಧ್ಯ ಇದ್ದಕ್ಕಿದ್ದಂತೆ ಆವಿಷ್ಕಾರಗೊಂಡಿದ್ದೇ?

ಎಲ್ಲ ರಾಷ್ಟ್ರೀಯ ಮತ್ತು ಪ್ರಮುಖ ಪ್ರಾದೇಶಿಕ ನಿಯತಕಾಲಿಕಗಳಲ್ಲಿ ಗುಜರಾತ್ ಹತ್ಯಾಕಾಂಡದ ಒಂದು ಪ್ರಾತಿನಿಧಿಕ ಚಿತ್ರ ಪ್ರಕಟವಾಗಿದೆ - ಚಿತ್ರ ಅಂದರೆ photo, ನಿಜವಾಗಿ ಕಂಡ ದೃಶ್ಯ. ಕಪ್ಪು ಬಣ್ಣದ ಮಧ್ಯವಯಸ್ಕ - ಹಿಂದುಳಿದ ವರ್ಗಕ್ಕೆ ಸೇರಿದವನೆಂತ ಮೇಲ್ನೋಟಕ್ಕೆ ಗೊತ್ತಾಗುವಂತಿದೆ - ಹಳೆಯ ಒಂದು ಅಮೆರಿಕನ್ ಟೀಶರ್ಟ್ ಮತ್ತು ಜೀನ್ಸ್ ಧರಿಸಿ ಹಣೆಗೊಂದು ಕೇಸರಿ ತುಂಡು ಬಟ್ಟೆ ಕಟ್ಟಿಕೊಂಡು ಕೈಯಲ್ಲಿ ಒಂದು ತ್ರಿಶೂಲ ಹಿಡಿದು ಉದ್ರಿಕ್ತನಾಗಿ ನಿಂತಿದ್ದಾನೆ. ಇದು ಜಾಗತೀಕರಣದ ಬರಲಿರುವ ದೊಡ್ಡ ಅಪಾಯದ ರೂಪಕ ವಾಗಿದೇಂತ ನಾನು ತಿಳಕೊಂಡಿದ್ದೇನೆ. ಈ ರೀತಿ ಯಾಕೆ ಆಗಿದೇಂದ್ರೆ, ಯಾವುದೇ ಒಂದು ಸಮಾಜಕ್ಕೆ ಪ್ರತಿ ಕಾಲದಲ್ಲಿ ಕೂಡಾ ಆ ಸಮಾಜದ ಮನಸ್ಸನ್ನು ತುಂಬುವಂತಹ ಒಂದು ಆದರ್ಶವೋ ಸಿದ್ಧಾಂತವೋ ಬೇಕಾಗಿರುತ್ತೆ. ಆದರೆ ಇವೊತ್ತು ಎಲ್ಲ ಆದರ್ಶ ಸಿದ್ಧಾಂತಗಳೂ ಅಪ್ರಸ್ತುತ ಅನ್ನಿಸಿಬಿಟ್ಟಿವೆ - ನಿಜವಾಗಿಯೂ ಅಪ್ರಸ್ತುತವಾಗಿಯೋ ಇಲ್ಲವೋ ಅದು ಪ್ರತ್ಯೇಕ ವಿಷಯ. ಆದ್ದರಿಂದ ಆ ಖಾಲಿ ಜಾಗದಲ್ಲಿ ಏನಾದರೂ ತುಂಬಿಕೊಳ್ಳಬಹುದು. ಸುಲಭವಾಗಿ ತುಂಬಬಹುದಾದ್ದು ಹುಸಿ ಧಾರ್ಮಿಕತೆ. ತನ್ನ character ಕಡೆ ಗಮನ ಕಳೆದುಕೊಂಡ, ಅಂದರೆ ತನ್ನ ನಿಜವಾದ ಧಾರ್ಮಿಕತೆಯನ್ನು ಕಳೆದುಕೊಂಡ ಸಮಾಜದೊಳಕ್ಕೆ ಹುಸಿ ಧಾರ್ಮಿಕತೆ ಪ್ರವೇಶಿಸುವುದು ಸಹಜವೇನೇ. ಜಾಗತೀಕರಣದ ಅತ್ಯಂತ ಅಪಾಯಕಾರಿ manifestation ಇದು. ಗುಜರಾತ್ ಹತ್ಯಾಕಾಂಡದ mindset ದೇಶಾದ್ಯಂತ ವಿಸ್ತರಿಸಿದರೆ ಏನಾಗಬಹುದು? ಆ ಹತ್ಯಾಕಾಂಡ ಒಂದು ಪ್ರಯೋಗ ಮಾತ್ರ ಅನ್ನೋ ವರದಿಯ ಹಿನ್ನೆಲೆಯಲ್ಲಿ ನನ್ನ ಈ ಆತಂಕ. ನಾವು ಒಂದು ಸಮಾಜವಾಗಿ - ರಾಷ್ಟ್ರವಾಗಿ ನಾಶವಾಗುವ ಆತಂಕ. ಮತ್ತೆ ಪಶ್ಚಿಮದ ಪ್ರಭುತ್ವವೊಂದರ ಕೈವಶವಾಗುವ ಆತಂಕ.

ಹೀಗೆ ಜಾಗತೀಕರಣ ವ್ಯಕ್ತಿ ಮತ್ತು ಸಮಾಜ - ಈ ಎರಡರ integrityಯನ್ನೂ ನಾಶ ಮಾಡಹೊರಟಿದೆ. ಇಂತಹ ಸಂದರ್ಭದಲ್ಲಿ ಜಾಗತೀಕರಣಕ್ಕೆ ಪರ್ಯಾಯವೊಂದನ್ನು ನಾವು ಹುಡುಕಲೇಬೇಕಾಗಿದೆ. ನನಗೆ ತಕ್ಷಣಕ್ಕೆ ಕಾಣೋದು ಗಾಂಧೀಜಿನೇ. ಅವರೊಬ್ಬರೇ ಆಧುನಿಕವೆಂದು ಕರೆಯಲಾಗುವ ಪಶ್ಚಿಮದ ತಂತ್ರಜ್ಞಾನಾಧಾರಿತ ವ್ಯಕ್ತಿನಿಷ್ಠ ನಾಗರೀಕತೆಯ ವಿರುದ್ಧ ದಿಟ್ಟವಾಗಿ - ಯಾರೂ ಅದರ ವಿರುದ್ಧ ಮಾತನಾಡಿ ಸಂಪ್ರದಾಯವಾದಿ ಎಂದೆನಿಸಿಕೊಳ್ಳಲು ಸಿದ್ಧವಿಲ್ಲದಿದ್ದಾಗ - ಮಾತನಾಡಿದವರು. ಇವೊತ್ತು manifest ಆಗುತ್ತಿರುವ ಅದರ ಅಪಾಯಗಳನ್ನು ಅವರು ಆಗಲೇ ಮುನ್ನೋಡಿದ್ದರು - ಯಾಕೆಂದರೆ ಅವರು ಈ ಯುಗದ ಅಪರೂಪದ ಮೂಲಭೂತ ಚಿಂತಕರಾಗಿದ್ದರು. ಅವೊತ್ತು ಈ ಅಪಾಯಗಳ ವಿರುದ್ಧ ಅವರು ಸೂಚಿಸಿದ್ದ ಪರಿಹಾರಗಳು ಇಂದು ಎಷ್ಟು ಸಾಧು, ಅನ್ವಯ ಸಾಧ್ಯ ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ; ತಂತ್ರಜ್ಞಾನ ಕುರಿತ ಅವರ ಚಿಂತನೆಯಿಂದ ಸ್ಫೂರ್ತಿ ಪಡೆದು ಹೊಸ ಆವಿಷ್ಕಾರಗಳನ್ನೇನಾದರೂ ಮಾಡಲು ಸಾಧ್ಯವೇ ನೋಡಬೇಕಾಗಿದೆ. ಇಂತಹ ಪ್ರಯೋಗ ಗಳು ನಮ್ಮ ಮಲೆನಾಡಿನಲ್ಲಿ ಸಾಕಷ್ಟು ನಡೆದಿವೆ. ರಾಜೇಂದ್ರ ಸಿಂಗ್ ಮತ್ತು ಅಣ್ಣಾಹಜಾರೆ ಮಟ್ಟಿನ ಯಶಸ್ಸು ಸಾಧಿಸದಿದ್ದರೂ, ಆ ದಿಕ್ಕಿನಲ್ಲಿ ಕೆಲಸ ಮಾಡುತ್ತಿರುವ ಅನೇಕ ಪುರುಷ

ಮಹಿಳೆಯರು ನಮ್ಮ ಹಳ್ಳಿಗಾಡುಗಳಲ್ಲಿ ಇದ್ದಾರೆ. ಅವರನ್ನು ಗುರುತಿಸಿ ಪ್ರೋತ್ಸಾಹಿಸಿ ಹೊಸ ಪರ್ಯಾಯ ಸೃಷ್ಟಿಸಲು ಸಾಧ್ಯವೇನೋ ನೋಡಬೇಕು. ತೇಜಸ್ವಿ ಎಲ್ಲೋ ಹೇಳಿದ್ದಾರೆ, ನಾವು ಹಿಂದಕ್ಕೆ ಬರಲಾಗದಷ್ಟು ಗಾಂಧಿಯಿಂದ ಮುಂದೆ ಹೋಗಿಬಿಟ್ಟಿದ್ದೇವೆ ಅಂತ. ನಿಜ. ಆದರೆ ಹಿಂದೆ - ಮುಂದೆ ಅನ್ನುವುದು ಸಾಪೇಕ್ಷ ಪರಿಕಲ್ಪನೆಗಳು ಅನ್ನೋದು ಅಷ್ಟೇ ನಿಜ. ಆದ್ರಿಂದ ನಮಗೆ ಮುಂದೆ ಹೋದ್ರೆ ತೊಂದರೆ ಇದೆ ಅನ್ನೋದಾದ್ರೆ ಹಿಂದಕ್ಕೆ ಬರಲೇಬೇಕು. ಹಾಗೇ ಪ್ರಗತಿಯ - ಅಭಿವೃದ್ಧಿಯ ಜಿಜ್ಞಾಸೆ ಕೂಡಾ. ವೈಯಕ್ತಿಕ ನೆಮ್ಮದಿ ಮತ್ತು ಸಾಮಾಜಿಕ ಶಾಂತಿಯನ್ನು ಯಾವುದು ಸಾಧಿಸಬಲ್ಲುದೋ ಅದೇ ಅಭಿವೃದ್ಧಿ. ೨೪ ತಾಸೂ ಕ್ರಿಯಾಶೀಲವಾಗಿರುವ ಟಿವಿ ವಾಹಿನಿಗಳು, ಗಂಟೆಗೆ ೨೦೦ ಕಿ.ಮೀ. ವೇಗದಲ್ಲಿ ಓಡುವ ಕಾರುಗಳ ಲಭ್ಯತೆ ಅಲ್ಲ.

ಇದೆಲ್ಲವೂ ಮೊದಲು ನಮಗೆ ಮನದಟ್ಟಾಗಬೇಕು. ಈ ಮನದಟ್ಟಾಗುವ ಪ್ರಕ್ರಿಯೆಯಲ್ಲಿ ಈಗ ಸವಕಲಾಗಿ ಹೋಗಿರುವ ರಾಜಕೀಯ ಪರಿಭಾಷೆಗೆ ಬದಲಾಗಿ ಹೊಸದೊಂದು ರಾಜಕೀಯೇತರ ಪರಿಭಾಷೆ ಹುಟ್ಟಬೇಕು. ಗಾಂಧೀಜಿ ಬಳಿ ಮರಳಿ ಹೋಗುವ - ಗಾಂಧೀಜಿಯನ್ನು ಇಂದಿನ ಸಂದರ್ಭಕ್ಕೆ ಪುನರನ್ವೇಷಿಸಿಕೊಳ್ಳುವ - ನಮ್ಮ ನಡಿಗೆಯಲ್ಲಿ ಇಂದು ಉದ್ಘಾಟನೆಯಾಗುವ ರಾಮಮನೋಹರ ಲೋಹಿಯಾ ಟ್ರಸ್ಟ್, ಸಮಾಜವಾದಿ ಚಿಂತನೆಗೆ ಇನ್ನಷ್ಟು ಗಾಂಧಿವಾದಿ ಆಯಾಮವನ್ನು ಒದಗಿಸುವ ಒಂದು ಕಮ್ಮಟವಾಗಿ ಕೆಲಸ ಮಾಡುವ ಮೂಲಕ ಬೆಂಬಲವಾಗಿ ಬರಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಮಸ್ಕಾರ

❑

(೨೩-೩-೨೦೦೨ರಂದು ಮೈಸೂರಿನಲ್ಲಿ ಡಾ. ರಾಮಮನೋಹರ ಲೋಹಿಯಾ ಟ್ರಸ್ಟ್ ಉದ್ಘಾಟನೆಯಾದ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ 'ಜಾಗತೀಕರಣ ಮತ್ತು ಕೋಮುವಾದದ ಸ್ವರೂಪ ಮತ್ತು ಆತಂಕಗಳು' ಕುರಿತ ವಿಚಾರ ಸಂಕಿರಣದಲ್ಲಿ ಆಡಿದ ಮಾತುಗಳು)

‘ಬೆಳಗಿನ ಬೆರಗು’ : ಮುನ್ನುಡಿ

ಗೆಳೆಯ ಜಿ.ಎನ್. ಮಲ್ಲಿಕಾರ್ಜುನ ಅವರು ಈ ಪುಸ್ತಕದ ಮುದ್ರಿತ ಕರಡು ಪ್ರತಿಯನ್ನು ಮುನ್ನುಡಿಗಾಗಿ ವಿಶ್ವಾಸದಿಂದ ನನಗೆ ಕಳಿಸಿದಾಗ, ಲೋಕಸಭಾ ಚುನಾವಣೆ (೨೦೦೪)ಗಳಿನ್ನೂ ಮುಗಿದಿರಲಿಲ್ಲ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗದ ಸರ್ಕಾರವೇ ಮರು ಆಯ್ಕೆಯಾಗುವುದು ಈಗಾಗಲೇ ತೀರ್ಮಾನವಾಗಿ ಹೋಗಿರುವ ವಿಚಾರ ಎಂಬುದು ಸಾರ್ವತ್ರಿಕ ಅಭಿಪ್ರಾಯವಾಗಿತ್ತು. ಇಂತಹ ಸಂದರ್ಭದಲ್ಲಿ, ಸಮಾಜವಾದಿ ಆಶಯಗಳ ಹಿನ್ನೆಲೆಯಲ್ಲಿ ಬರೆದ ಈ ಸಂಗ್ರಹದ ಲೇಖನಗಳನ್ನು ನಾನು ಕೊಂಚ ಮರುಕ ತುಂಬಿದ ಸಹಾನುಭೂತಿಯಿಂದಲೇ ಓದಿದ್ದೆ. ಸಮಾಜವಾದವನ್ನು ಲೈಸೆನ್ಸ್ ಪರ್ಮಿಟ್ ರಾಜ್ಯ ವ್ಯವಸ್ಥೆಯೆಂದು ಹೀಗಳೆದು, ಈವರೆಗೆ ರಾಷ್ಟ್ರ ಈ ವ್ಯವಸ್ಥೆಯನ್ನು ಅನುಸರಿಸಿದ ಕಾರಣ ನಿಜವಾದ ಪ್ರಗತಿಯನ್ನೇ ಕಾಣದೆ ಹೋಗಿದೆ ಎಂಬ ವಾದ ಮಂಡಿಸುತ್ತಾ; ಮುಕ್ತ ಮಾರುಕಟ್ಟೆ ನೀತಿಯ ಜಾಗತೀಕರಣವೇ ಪ್ರಗತಿಯ ಹೆಬ್ಬಾಗಿಲನ್ನು ತೆರೆಯಬಲ್ಲುದು ಎಂಬ ನಂಬಿಕೆಯೊಡನೆ, ನಮ್ಮ ಆಡಳಿತಗಾರರು ಕಳೆದೊಂದು ದಶಕದಲ್ಲಿ ಹೊಸ ರಾಜಕೀಯ ವಾತಾವರಣವನ್ನೇ ಉಂಟುಮಾಡಿದ್ದರು. ವಿಶ್ವಬ್ಯಾಂಕ್ ಮತ್ತು ಇತರೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಹರಿದುಬಂದ ಸಾಲದ ಹಣ, ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಮಾರುಕಟ್ಟೆಗೆ ತಂದು ಸುರಿದ ವೈವಿಧ್ಯಮಯ ಗ್ರಾಹಕ ವಸ್ತುಗಳ ಮೂಲಕ ರಾಷ್ಟ್ರಾದ್ಯಂತ ಸಮೃದ್ಧಿಯ ದ್ವೀಪಗಳನ್ನು ಸೃಷ್ಟಿಸಿ, ಈ ಝಗಝಗಿಸುವ ದ್ವೀಪಗಳನ್ನು ಎಲ್ಲರ ಕಣ್ಮುಂದಿನ ಕನಸುಗಳನ್ನಾಗಿ ಪ್ರಸ್ತುತಪಡಿಸಲಾಗಿತ್ತು.

ಆದರೆ ಈ ಚುನಾವಣೆ, ರಾಷ್ಟ್ರ ಇಂತಹ ಕನಸು ಕಾಣಲು ಸುತರಾಂ ನಿರಾಕರಿಸಿದೆ ಎಂಬುದನ್ನು ಸಾಬೀತುಪಡಿಸಿದೆ. ಹೊಸ ಆಡಳಿತಗಾರರು ಈಗ ಮಾನವೀಯ ಮುಖದ ಆರ್ಥಿಕ ಸುಧಾರಣೆಗಳ ಮಾತುಗಳನ್ನಾಡುತ್ತಿದ್ದಾರೆ. ಅಂದರೆ ಈವರೆಗೆ ನಾವು ಕಂಡ ಜಾಗತೀಕರಣದ ಪ್ರಕ್ರಿಯೆ ಅಮಾನವೀಯವಾಗಿತ್ತು ಎಂಬುದನ್ನು ಒಪ್ಪಿಕೊಂಡಂತಾಯಿತು... ಅಂದ ಹಾಗೆ ಈ ಹೊಸ ಆಡಳಿತಗಾರರು ಮತ್ತಾರೂ ಅಲ್ಲ, ನಮ್ಮ ದೇಶದಲ್ಲಿ ಜಾಗತೀಕರಣ ಪ್ರಕ್ರಿಯೆಗೆ ದಾರಿಮಾಡಿಕೊಟ್ಟ, ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದ ಮೂಲಪುರುಷರು ಇವರು! ಅದೇನೇ ಇರಲಿ, ಈ ಹತ್ತು ವರ್ಷಗಳಲ್ಲಿ ಈಗ ಮೊದಲ ಬಾರಿಗೆ ಯಾವುದೇ ಮುಜುಗರವಿಲ್ಲದೆ ಮತ್ತೆ ನಾವು ಸಮಾಜವಾದದ ಬಗ್ಗೆ ಮಾತಾಡಬಹುದಾಗಿದೆ. ಏಕೆಂದರೆ ಮಾನವೀಯ ಮುಖದ ಆರ್ಥಿಕ ಸುಧಾರಣೆ ಎಂದರೇನು ಎಂಬ ಪ್ರಶ್ನೆಗೆ ಉತ್ತರಕ್ಕಾಗಿ ನಾವು ಮತ್ತೆ ಸಮಾಜವಾದಿ

ಸಂಕಥನಕ್ಕೇ ಹಿಂದಿರುಗಬೇಕಾಗುವುದು ಅನಿವಾರ್ಯವಾಗುತ್ತದೆ. ಅಲ್ಲದೆ ಈ ಬಾರಿಯ ಚುನಾವಣೆಗಳಲ್ಲಿ ರಾಷ್ಟ್ರವೇಕೆ ಜಾಗತೀಕರಣ ಸೂಚಿಸುತ್ತಿದ್ದ ಸಮೃದ್ಧಿಯ ಕನಸನ್ನು ಮೌನವಾಗಿ ತಳ್ಳಿಹಾಕಿಬಿಟ್ಟಿತು? ಈ ಕನಸು ನನಸಾಗಲು ಸಾಧ್ಯವಿಲ್ಲ ಎಂಬುದು ರಾಷ್ಟ್ರದ ಅಂತರಾಳಕ್ಕೆ ತಲುಪಿದ್ದಾದರೂ ಹೇಗೆ? ಎಂಬ ಪ್ರಶ್ನೆಗಳನ್ನು ಹಿಂಬಾಲಿಸಿದರೆ ನಮಗೆ ಕಾಣುವ ಸತ್ಯವೆಂದರೆ ನಮ್ಮ ದೇಶದಲ್ಲಿ ಸಮಾಜವಾದಿ ಸಂಕಥನ ತನ್ನ ತಾರ್ಕಿಕ ಅಂತ್ಯವನ್ನು ಇನ್ನೂ ಕಂಡಿಲ್ಲ ವೆಂಬುದೇ ಆಗಿದೆ. ಹೀಗಾಗಿ ನಾವೀಗ ಜಿ.ಎನ್. ಮಲ್ಲಿಕಾರ್ಜುನ ಅವರ ಈ ಲೇಖನಗಳನ್ನು ಹೊಸ ಪ್ರಸ್ತುತತೆಯ ನೆಲೆಯಲ್ಲಿಯೇ ಓದಬಹುದಾಗಿದೆ.

ಈ ಸಂಗ್ರಹದಲ್ಲಿರುವ ಎಲ್ಲ ಲೇಖನಗಳೂ ಜಾಗತೀಕರಣದ ಬಗ್ಗೆ ಕಳೆದ ಹತ್ತು ವರ್ಷಗಳಲ್ಲಿ ನಡೆದಿರುವ ಚರ್ಚೆಯ ಭಾಗವೇ ಆಗಿ ಒಡಮೂಡಿದೆ. ಇಲ್ಲಿನ ಲೇಖನಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಿ ನೋಡಬಹುದು. ಒಂದು, ಜಾಗತೀಕರಣವು ಪ್ರಗತಿ ಮತ್ತು ಸಮೃದ್ಧಿಯ ಹೆಸರಿನಲ್ಲಿ ರಾಷ್ಟ್ರ ಜೀವನದಲ್ಲಿ ಉಂಟುಮಾಡುತ್ತಿರುವ ಅನಾಹುತಗಳನ್ನು ಅಂಕಿ-ಅಂಶಗಳೊಂದಿಗೆ ವಿಷದೀಕರಿಸುವ ವಿಶ್ಲೇಷಣಾತ್ಮಕ ಲೇಖನಗಳು. ಇವು ಸಂಗ್ರಹದ ಕೊನೆಯ ಆರೇಳು ಲೇಖನಗಳು. ಇನ್ನೊಂದು, ಜಾಗತೀಕರಣಕ್ಕೆ ಪರ್ಯಾಯವಿಲ್ಲ ಎಂಬ ವಾದಕ್ಕೆ ವಿರುದ್ಧವಾಗಿ ಪ್ರಸ್ತುತಗೊಂಡಂತೆ ತೋರುವ ಪರ್ಯಾಪ್ತ ಪರಿಕಲ್ಪನೆಗಳನ್ನು ಕುರಿತ ಪರಿಚಯಾತ್ಮಕ ಲೇಖನಗಳು. ಇವು ಸಂಗ್ರಹದ ಮೊದಲ ಆರು ಲೇಖನಗಳು. ವೈಯಕ್ತಿಕವಾಗಿ ನನ್ನ ಆಸಕ್ತಿ ಈ ಎರಡನೇ ಗುಂಪಿನ ಲೇಖನಗಳ ಕಡೆಗೇ. ಏಕೆಂದರೆ ಜಾಗತೀಕರಣದ ಅನಾಹುತಗಳು ವಿಷದೀಕರಣ ಹಾಗೂ ವಿಶ್ಲೇಷಣೆಗಳನ್ನೂ ಮೀರಿ ಕಣ್ಣಿಗೆ ಒಡೆದು ಕಾಣುವಂತಿವೆ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಆಂಧ್ರ - ಕರ್ನಾಟಕ ರಾಜ್ಯಗಳಲ್ಲಿ ನಡೆದ - ಹಿಂದೆಂದೂ ಕಂಡು ಕೇಳರಿಯದ ದಾರುಣ ಪರಿಸ್ಥಿತಿಯಲ್ಲಿ - ಸಾವಿರಾರು ರೈತರ ಆತ್ಮಹತ್ಯೆಗಳ ನಂತರವೂ ಜಾಗತೀಕರಣದ ಪರವಾಗಿ ಯಾರಾದರೂ ತತ್ವವಿಶ್ಲೇಷಣೆಗೆ ಹೊರಟರೆ ಅವರನ್ನು ಹುಚ್ಚರೆಂದೋ ಅವಿವೇಕಿಗಳೆಂದೋ ಕರೆಯಬೇಕಾಗುತ್ತದೆ. ಕಳೆದ ಮೂರ್ನಾಲ್ಕು ವರ್ಷಗಳ ಕಾಲ ಈ ರಾಜ್ಯಗಳ ಬಹು ಭಾಗಗಳನ್ನಾವರಿಸಿದ ಬರದಿಂದಾಗಿ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬಂದ ಹಸಿವು - ಅವಮಾನ - ಅಸಹಾಯಕತೆಗಳ ದುರಂತ ಕಥೆಯು ರಾಷ್ಟ್ರದ ಎದೆಗೆ ಮುಟ್ಟದೇ ಹೋಗುವಷ್ಟು ಅಸೂಕ್ಷ್ಮತೆಯನ್ನು ಈ ಜಾಗತೀಕರಣದ ರಾಜಕಾರಣ ಉಂಟು ಮಾಡಿತ್ತೆಂಬುದನ್ನು ಯಾರಾದರೂ ನಿರಾಕರಿಸಲಾದೀತೇ? ಹಾಗೆ ನಿರಾಕರಿಸುವಷ್ಟು ಧೈರ್ಯ ಮತ್ತು ಹಠವುಳ್ಳವರು ಈ ಸಂಗ್ರಹದ ಕೊನೆಯ ಆರೇಳು ಲೇಖನಗಳನ್ನು ಓದುವ ಮನಸ್ಸು ಮಾಡಬೇಕು. ಜಾಗತೀಕರಣ ಕೇವಲ ರೈತರ ಕತ್ತನ್ನಲ್ಲ - ಸಮಾನತೆಯ ತತ್ವವನ್ನು ಅವ್ಯಾವಹಾರಿಕವೆಂದು ಬಗೆಯುವ ಅಸೂಕ್ಷ್ಮವಾದ ನವಶ್ರೀಮಂತಶಾಹಿಯನ್ನು ಸೃಷ್ಟಿಸುವ ಮೂಲಕ -ದೇಶದ ಕತ್ತನ್ನೇ ಹೇಗೆ ಕೊಯ್ಯಹೊರಟಿದೆ ಎಂಬುದರ ಸತ್ಯ - ಮಿಥ್ಯೆಗಳ ಕತೆಯನ್ನು ಈ ಲೇಖನಗಳು ನಿರೂಪಿಸುತ್ತವೆ.

ಆದರೆ ಮೊದಲೇ ಹೇಳಿದಂತೆ ನನ್ನ ಕುತೂಹಲವಿರುವುದು, ಈ ದುರಂತಕ್ಕೆ ಪರಿಹಾರ ವೆಂಬಂತೆ, ಈ ಸಂಗ್ರಹದ ಮೊದಲ ಆರು ಲೇಖನಗಳಲ್ಲಿ ಪರಿಚಯಿಸಲಾಗಿರುವ ತತ್ವಗಳ ಮತ್ತು ಪರಿಕಲ್ಪನೆಗಳ ಸಾಧ್ಯಾಸಾಧ್ಯತೆಗಳ ಬಗ್ಗೆ. ಬುದ್ಧ - ಬಸವರ ಅರ್ಥ ವ್ಯವಸ್ಥೆಯಿಂದ

ಹಿಡಿದು ಲೋಹಿಯಾ ಅವರ ತಂತ್ರಜ್ಞಾನ ನೀತಿ, ಅಮರ್ತ್ಯ ಸೇನರ ನೈತಿಕ ಅರ್ಥಶಾಸ್ತ್ರದ ಪರಿಕಲ್ಪನೆ ಹಾಗೂ ನಮ್ಮ ನಡುವಿನ ಹಿರಿಯ ಸಮಾಜವಾದಿ ಚಿಂತಕ ಕಿಷನ್ ಪಟ್ನಾಯಕ್ ಅವರ ಸಮಾಜವಾದದ ಹೊಸ ನಿರೂಪಣೆವರೆಗೆ ಇಲ್ಲಿ ವೈಚಾರಿಕ ಪರ್ಯಾಯ ಮಾದರಿಗಳನ್ನು ಪ್ರಸ್ತುತಪಡಿಸಲಾಗಿದೆ. ಇದೆಲ್ಲದಕ್ಕೆ ಕಳಸವಿಟ್ಟಂತೆ, ಈ ಮಾದರಿಗಳ ಮಧ್ಯದಿಂದಲೇ ಮೂಡಿಬಂದಂತಿರುವ ಅಣ್ಣಾ ಹಜಾರೆ ಅವರು ಅಭಿವೃದ್ಧಿಪಡಿಸಿರುವ ರಾಳೆಗಾಣ ಸಿದ್ಧಿ ಗ್ರಾಮದ ಪ್ರಯೋಗ ಚಿತ್ರವನ್ನು ಜಿ.ಎನ್. ಮಲ್ಲಿಕಾರ್ಜುನ ಅವರು ನೀಡಿದ್ದಾರೆ. ಈ ಪೈಕಿ ಕಿಷನ್ ಪಟ್ನಾಯಕ್ ಚಿಂತನೆ ಕುರಿತ ಲೇಖನ ಒಂದೂವರೆ ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ನಡೆದ ಒಂದು ಸಮಾಜವಾದಿ ಚಿಂತನಾ ಕಮ್ಮಟದಲ್ಲಿ ನಾನು ''ಸಮಾಜವಾದವೆಂಬುದು ಒಂದು ರೊಮ್ಯಾಂಟಿಕ್ ಕಲ್ಪನೆ; ಆದರೆ ಅದು ಅವ್ಯಾವಹಾರಿಕ ಕೂಡಾ ಎಂಬುದೀಗ ಸಾಬೀತಾಗಿದೆ'' ಎಂದು, ಚರ್ಚೆಗಾಗಿ ಮಂಡಿಸಿದ ಒಂದು ಪ್ರಮೇಯಕ್ಕೆ ಕಿಷನ್ ಪಟ್ನಾಯಕ್ ಅವರು ಕಮ್ಮಟದ ಸಮಾರೋಪ ಭಾಷಣದ ರೂಪದಲ್ಲಿ ನೀಡಿದ ವಿಸ್ತೃತ ಪ್ರತಿಕ್ರಿಯೆಯ ಸಾರಾಂಶ.

ಅಂದು ನಾನು ಮಂಡಿಸಿದ ಪ್ರಮೇಯದ ಹಿಂದಿದ್ದ ವಾದ ಸರಣಿಯೆಂದರೆ, ಇಂದಿನ ತಂತ್ರಜ್ಞಾನ ಸ್ಫೋಟವು ಸೃಷ್ಟಿಸಿರುವ ಸುಖ - ಸಮೃದ್ಧಿಗಳ ಹೊಸ ಅಳತೆಗೋಲುಗಳ ಹಾಗೂ ವರ್ಗ ಸಂಘಟನೆಯ ಹೊಸ ವಿನ್ಯಾಸಗಳ ಹಿನ್ನೆಲೆಯಲ್ಲಿ ಮನುಷ್ಯನ ಚಿತ್ತವೃತ್ತಿಯನ್ನು ಅಂದಾಜು ಮಾಡುವಲ್ಲಿ ಸಮಾಜವಾದವು ವಿಫಲವಾಗಿದ್ದು, ಸಮಾನತೆಯ ಸಂಸ್ಕೃತಿಯನ್ನು ನಿರ್ಮಿಸಲು ಅದರ ಬಳಿಯಿರುವ ಪರಿಕರಗಳು ಹಾಗೂ ಪರಿಕಲ್ಪನೆಗಳು ಈಗ ಅಪ್ರಸ್ತುತವೆನಿಸಿಕೊಂಡಿವೆ ಎಂಬುದೇ ಆಗಿತ್ತು. ನನ್ನ ಈ ವಾದ ಸರಣಿಗೆ ಕಿಷನ್ ಅವರು ನೀಡಿದ ವಿಸ್ತೃತ ಉತ್ತರದಲ್ಲಿ ಸಮಾಜವಾದ ಮತ್ತೆ ಮರುಜೀವ ಪಡೆಯಬಹುದಾದ ಶಕ್ತಿ ಮೂಲಗಳನ್ನು ಬುದ್ಧ, ಪರಮಹಂಸ, ಗಾಂಧಿ, ಮದರ್ ಥೆರೇಸಾ ಅವರಲ್ಲಿ ಗುರುತಿಸಿ ಕುತೂಹಲ ಹುಟ್ಟಿಸಿದ್ದಾರೆ. ಈ ಮೂಲಕ ಅವರು, ಸಮಾಜವಾದ ಈವರೆಗೆ ಒಂದು ಭೌತಿಕ ಅಥವಾ ಲೌಕಿಕ ಪರಿಕರವೆಂಬಂತೆ ಮಾತ್ರ ಕೆಲಸ ಮಾಡಿ exhaust ಆಗಿದೆ; ಅದೀಗ ಒಂದು ಆಧ್ಯಾತ್ಮಿಕ ಆಯಾಮವನ್ನು ಪಡೆದು ಧರ್ಮದಂತೆ ಕೆಲಸ ಮಾಡಬೇಕಾದ ಸಂದರ್ಭ ಬಂದಿದೆ ಎಂದು ಸೂಚಿಸುತ್ತಿರುವಂತೆ ನನಗೆ ತೋರುತ್ತಿದೆ. ಅಧ್ಯಾತ್ಮ ಎಂದೊಡನೆ ದೇವರು - ದಿಂಡಿರು, ಜಪ-ತಪ-ಭಜನೆ ಎಂದು ಹೀಯಾಳಿಸುತ್ತಾ ಹೌಹಾರುವ ಸಮಾಜವಾದಿ ಗೆಳೆಯರ ಸಂಖ್ಯೆ ನಮ್ಮಲ್ಲೇನೂ ಕಡಿಮೆ ಇಲ್ಲ. ಇದು ಪೆರಿಯಾರ್ ಚಳುವಳಿಯ ಸ್ಥೂಲತೆಯಿಂದುಂಟಾದ ವಕ್ರತೆಯಷ್ಟೆ. ಆದರೆ ಅಧ್ಯಾತ್ಮವೆಂದರೆ ಕೆಲಸದ ನಂತರದ ವಿಶ್ರಾಂತಿ; ಮಾತಿನ ನಂತರದ ಮೌನ ಎಂಬ ಸಹಜಾರ್ಥದಲ್ಲಿ ಗ್ರಹಿಸುವುದಾದರೆ ಕಿಷನ್ ನೀಡುತ್ತಿರುವ ಸೂಚನೆ ನಮಗೆ ಅರ್ಥವಾದೀತು. ನಾನು ಎತ್ತಿದ ಮನುಷ್ಯನ ಚಿತ್ತವೃತ್ತಿಯನ್ನು ಅಂದಾಜು ಮಾಡುವಲ್ಲಿನ ಸಮಾಜವಾದದ ವೈಫಲ್ಯದ ಪ್ರಶ್ನೆಗೂ ಕಿಷನ್ ಇಲ್ಲಿ ಉತ್ತರ ಬೊಟ್ಟು ಮಾಡುತ್ತಿದ್ದಾರೆಂದು ನನಗನ್ನಿಸುತ್ತದೆ. ಹಾಗೆ ನೋಡಿದರೆ ಸಮಾನತೆ ಎಂಬುದೇ ಒಂದು ಅಧ್ಯಾತ್ಮಿಕ ಪ್ರೇರಣೆ ಎಂಬುದನ್ನು ನಾವು ಗಮನಿಸಬೇಕು. ಈ ದೃಷ್ಟಿಯಿಂದ ಸಮಾಜವಾದಿ ಚಳುವಳಿ ಒಂದು ಸ್ತರದಲ್ಲಿ ಧಾರ್ಮಿಕ ಚಳುವಳಿಯಂತೆಯೇ ಕ್ರಿಯಾಶೀಲವಾಗಬೇಕಿತ್ತು. ಆದರೆ ಕಳೆದ ಐವತ್ತು - ಅರವತ್ತು ವರ್ಷಗಳ ಸಮಾಜವಾದಿ ಚಳುವಳಿ ಈ ಅಧ್ಯಾತ್ಮಿಕ ಆಯಾಮವನ್ನೇ ಮಸುಕು

ಮಾಡುವಷ್ಟು ಆಕ್ರಮಣಕಾರಿಯಾಗಿ ವರ್ತಿಸಿ ತನ್ನೆಲ್ಲ ಆಯುಧಗಳನ್ನೇ ಕಳೆದುಕೊಂಡು ಕೂತಿದೆ. ಲೋಹಿಯಾ ಹೇಳಿದ ಅನ್ಯಾಯ ಕುರಿತಂತೆ 'ಒಂದು ಕಣ್ಣಲ್ಲಿ ಕರುಣೆಯ ಕಣ್ಣೀರ ಹನಿ; ಮತ್ತೊಂದು ಕಣ್ಣಲ್ಲಿ ಕ್ರೋಧದ ಬೆಂಕಿ' ಧೋರಣೆಯು ಚಳುವಳಿಯುದ್ದಕ್ಕೂ ಕ್ರೋಧವಾಗಿ ಮಾತ್ರ ಅಭಿವ್ಯಕ್ತಗೊಂಡಿರುವುದರ ಹಿಂದಿರುವ ಕಾರಣಗಳಾದರೂ ಏನು ಮತ್ತು ಇದರಿಂದ ಉಂಟಾಗಿರುವ ಪರಿಣಾಮಗಳಾದರೂ ಎಂತಹವು ಎಂಬುದನ್ನು ಸಮಾಜವಾದಿಗಳು ಆಳವಾಗಿ ಆಲೋಚಿಸಬೇಕಿದೆ. ಕ್ರೋಧದ ರಾಜಕಾರಣ ಸಮಾಜವಾದಿಗಳನ್ನು ಎಷ್ಟರಮಟ್ಟಿಗೆ ಸ್ವಯಂಪರವಶರನ್ನಾಗಿ ಮಾಡಿತೆಂದರೆ, ಆಚಾರ್ಯ ನರೇಂದ್ರದೇವ, ಲೋಹಿಯಾ, ಜೆ.ಪಿ. ಮುಂತಾದ ಸಮಾಜವಾದಿ ಚಿಂತಕರು ಪ್ರತಿಪಾದಿಸಿದ ಅನೇಕ ತಾತ್ವಿಕ ಹಾಗೂ 'ಪ್ರಾಯೋಗಿಕ ಮಾದರಿ'ಗಳ ಬಗೆಗೆ ಅವರಲ್ಲಿ ಅಸೂಕ್ಷ್ಮತೆ - ಅವಜ್ಞತೆಗಳು ಉಂಟಾಗಿ ಆ ಮಾದರಿಗಳು ಚಳುವಳಿಯ ಭಾಗವಾಗಿ ಬೆಳೆಯಲೇ ಇಲ್ಲ. ಉದಾಹರಣೆಗೆ ನರೇಂದ್ರದೇವ ಅವರು ಪ್ರತಿಪಾದಿಸಿದ್ದ ಗಾಂಧಿಮುಖೇನ ಬುದ್ಧ - ಮಾರ್ಕ್ಸ್‌ರ ಅನುಸಂಧಾನ, ಲೋಹಿಯಾ ಪ್ರತಿಪಾದಿಸಿದ್ದ 'ಸಮಾಜವಾದಿ ಆಶ್ರಮ'ಗಳ ಪ್ರಯೋಗ ಸಮಾಜವಾದಿ ಚಳುವಳಿಯ ಭಾಗವೇ ಆಗಲಿಲ್ಲ. ಆದರೆ ವಿಷಾದದ ಸಂಗತಿ ಎಂದರೆ ಈ ಎಲ್ಲವೂ ಸಮಾಜವಾದದ ಅಧ್ಯಾತ್ಮಿಕ ಹೃದಯ ಭಾಗವೇ ಆಗಿತ್ತು ಎಂಬುದನ್ನು ಸಮಾಜವಾದಿ ಚಳುವಳಿ ಅರಿಯದೇ ಹೋಯಿತು ಎಂಬುದು. ಬಹುಶಃ ಕಿಷನ್ ಸೂಚಿಸುತ್ತಿರುವುದೂ ಇದನ್ನೇ. ಜಿ.ಎನ್. ಮಲ್ಲಿಕಾರ್ಜುನ ಅವರ ಈ ಕುರಿತ ಲೇಖನ ಅಂದು ಕಿಷನ್ ಪಟ್ನಾಯಕ್ ಮಾಡಿದ ಭಾಷಣದ ಸಾರಾಂಶ ಮಾತ್ರ ಎಂಬುದನ್ನು ಈ ಸಂದರ್ಭದಲ್ಲಿ ಓದುಗರಿಗೆ ನೆನಪಿಸಬೇಕಿದೆ.

ಅದೇನೇ ಇರಲಿ, ಈ ಸಂಗ್ರಹದ ಅಮರ್ತ್ಯಸೇನರ ಅರ್ಥಶಾಸ್ತ್ರ, ಸಮಾಜವಾದದ ತಂತ್ರಜ್ಞಾನ ನೀತಿ ಹಾಗೂ ಅಣ್ಣಾ ಹಜಾರೆ ಕುರಿತ ಲೇಖನಗಳು ಕ್ರಮವಾಗಿ ಈ ಮೇಲೆ ಪ್ರಸ್ತಾಪಿಸಿದ ನರೇಂದ್ರದೇವ, ಲೋಹಿಯಾ ಹಾಗೂ ಜೆ.ಪಿ.ಯವರ ವಿಚಾರಗಳ ಕ್ರಿಯಾಶೀಲ ವಿಸ್ತರಣೆಗಳಂತಿರುವುದನ್ನು ನಾವು ಗಮನಿಸಬೇಕು. ಮಾರ್ಕ್ಸ್‌ವಾದದ ಸುಖ ಹಾಗೂ ಬುದ್ಧನ ದುಃಖ ಮೀಮಾಂಸೆಗಳ ಅನುಸಂಧಾನದಂತೆ ತೋರುವ well being (ನೆಮ್ಮದಿ?) ಎನ್ನುವ ಪರಿಕಲ್ಪನೆಯನ್ನು ಅರ್ಥಶಾಸ್ತ್ರೀಯ ಪರಿಭಾಷೆಯಲ್ಲಿ ಪುನರ್ವ್ಯಾಖ್ಯಾನಿಸುವ ಅಮರ್ತ್ಯ ಸೇನರ ಪ್ರಯತ್ನವು, ಬಡತನ ಮತ್ತು ಅಸಮಾನತೆಗಳನ್ನು ಅನುಭೋಗ ಮತ್ತು ತುಷ್ಟಿಗುಣಗಳ ಮಟ್ಟಗಳೆಂಬ ಭೌತಿಕ ಅಳತೆಗೋಲುಗಳಿಂದ ಬಿಡುಗಡೆಗೊಳಿಸುವ ಮೂಲಕ ಒಂದು ನೈತಿಕ ಪ್ರಭೆಯನ್ನು ಪಡೆದುಕೊಳ್ಳುತ್ತದೆ. ಜಿ.ಎನ್. ಮಲ್ಲಿಕಾರ್ಜುನ ಅವರು ತಮ್ಮ ಲೇಖನದಲ್ಲಿ ಇದನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಹಾಗೇ ಲೋಹಿಯಾ ಪ್ರತಿಪಾದಿಸಿದ ಸಣ್ಣ ಘಟಕ ಯಂತ್ರದ ಪರಿಕಲ್ಪನೆಯನ್ನು ಸಮಾಜವಾದಿ ಚಳುವಳಿ ಮರೆತರೂ ದೇಶೀ ತಂತ್ರಜ್ಞರ ಸಮೂಹವೊಂದು ಅದನ್ನು ವಿಸ್ತರಿಸಿ ಬೆಳೆಸಿರುವುದನ್ನು ಮತ್ತು ಜಾಗತೀಕರಣದೊಂದಿಗೆ ಬೆಸೆದುಕೊಂಡು ಬಂದಿರುವ ತಂತ್ರಜ್ಞಾನ ಹುಟ್ಟುಹಾಕುತ್ತಿರುವ ಅಸಮಾನತೆ ಮತ್ತು ಸಾಂಸ್ಕೃತಿಕ ಅರಾಜಕತೆಗಳ ಇಂದಿನ ಸಂದರ್ಭದಲ್ಲಿ ಅದರ ಕಾರ್ಯಶೀಲ ಪ್ರಸ್ತುತತೆಯನ್ನು ಲೇಖಕರು ವಿಷದವಾಗಿ ಪ್ರಸ್ತಾಪಿಸಿದ್ದಾರೆ. ಸಮಾಜವಾದಿಗಳು ಇದನ್ನು ವಿಷಾದದಿಂದ ಓದಿಕೊಳ್ಳಬಹುದು.

ಇನ್ನು ಅಣ್ಣಾ ಹಜಾರೆ ಅವರು ತಮ್ಮ ಹುಟ್ಟೂರು ರಾಳೇಗಣ ಸಿದ್ಧಿಯನ್ನು 'ಗಾಂಧೀಜಿ

ಕನಸಿನ ಹಳ್ಳಿ'ಯನ್ನಾಗಿ ಪರಿವರ್ತಿಸಿರುವ ಪವಾಡ ಯಾರನ್ನಾದರೂ ಬೆರಗುಗೊಳಿಸುವಂತಿದೆ. ಇದು ವ್ಯಕ್ತಿಯ ಅಂತರಾಳದ ದುಃಖ, ಆದರ್ಶ ಹಾಗೂ ಹಠಗಳಿಂದ ಸಾಕಾರಗೊಂಡ ಪವಾಡ. ಈ ಕುರಿತ ಇಲ್ಲಿನ ಲೇಖನ ಅಣ್ಣಾ ಹಜಾರೆ ಎಂಬ ಸಾಮಾನ್ಯ ನಿವೃತ್ತ ಸೈನಿಕನೊಬ್ಬನ ಮೌನದಾಳಗಳನ್ನು ವಿವರವಾಗಿ ಪರಿಚಯ ಮಾಡಿಕೊಡುತ್ತದೆ. ಇಲ್ಲಿ ಬುದ್ಧ, ಪರಮಹಂಸ, ಗಾಂಧಿ, ಥೆರೇಸಾ ಎಲ್ಲ ಕ್ರಿಯಾಶೀಲರಾಗಿದ್ದಾರೆ. ಜಿ.ಎನ್. ಮಲ್ಲಿಕಾರ್ಜುನ ಅವರು ತಮ್ಮ ಈ ಲೇಖನಕ್ಕೆ 'ಬೆಳಗಿನೊಳಗಿನ ಬೆರಗು...'' ಎಂಬ ಶೀರ್ಷಿಕೆ ನೀಡಿರುವುದು ಉಚಿತವಾಗಿಯೇ ಇದೆ. ತತ್ವಗಳ ಹಿಂದಿನ ಬೆಳಕನ್ನು ಇಲ್ಲಿ ಕಣ್ಣಿಗೆ ಕಾಣುವ ಬೆಳಕನ್ನಾಗಿ ಮಾರ್ಪಡಿಸಿದ್ದಾರೆ ಅಣ್ಣಾ ಹಜಾರೆ. ಜೆ.ಪಿ.ಯವರು ಗ್ರಾಮಾಂತರ ಪ್ರದೇಶಗಳಲ್ಲಿ 'ಸಮಾಜವಾದಿ ಆಶ್ರಮ'ಗಳ ಸ್ಥಾಪನೆಯ ಪರಿಕಲ್ಪನೆಯನ್ನು ಮುಂದಿಟ್ಟಾಗ ಅವರ ಮನಸ್ಸು ಇದೇ ತರಂಗಾಂತರ ದಲ್ಲಿತ್ತೇನೋ! ಆದರೆ ಸ್ವತಃ ಜೆ.ಪಿ.ಯಂತಹ ಜೆ.ಪಿ.ಯವರೇ ಸೊಖೋದೇವೋರಾದಲ್ಲಿ ಸ್ಥಾಪಿಸಿದ 'ಸಮಾಜವಾದಿ ಆಶ್ರಮ' ಅವರ ಕಣ್ಮುಂದೆಯೇ ಅನೇಕ ತರಲೆ - ತಾಪತ್ರಯಗಳ ಬೀಡಾಗಿ ಹೋಯಿತು ಎಂಬುದನ್ನು ನೆನೆಸಿಕೊಂಡಾಗ ಸಮಾಜವಾದಿ ಚಳುವಳಿಯಲ್ಲಿ ಮೂಡದ, ಆದರೆ ಅಣ್ಣಾ ಹಜಾರೆ ಎಂಬ ವ್ಯಕ್ತಿಯಲ್ಲಿ ಪ್ರಕಟಗೊಂಡ ಕ್ರತುಶಕ್ತಿಯ ಮೂಲ ಯಾವುದು ಎಂಬುದನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಈ ಲೇಖನ ನಮಗೆ ವಹಿಸುತ್ತದೆ. ಆಳದ ನೋವಿನಿಂದ ಚಿಮ್ಮದ ಯಾವುದೇ ಕ್ರಿಯಾಶೀಲತೆಗೆ ಹೆಚ್ಚಿನ ಧಾರಣಶಕ್ತಿ ಇರಲಾರದು... ಗಾಂಧಿ ಒಡನಾಟದಿಂದ ಬೇರ್ಪಟ್ಟ ಸಮಾಜವಾದಿ ಚಳುವಳಿ ಆಳದ ನೋವನ್ನು ಕಳೆದುಕೊಂಡು ಸೈದ್ಧಾಂತಿಕ ವಿಶಿಷ್ಟತೆಯ ಅಹಂಕಾರವನ್ನಷ್ಟೇ ಬೆಳೆಸಿಕೊಂಡು ಆಕ್ರಮಣಕಾರಿಯಾಗುತ್ತ ಹೋಗಿ ಸುಮ್ಮನೆ ಕುಸ್ತಿ ಮಾಡಿ ಮಾಡಿ ಸುಸ್ತಾಗಿ ಹೋಯಿತೇ?

ಹೀಗೆಲ್ಲ - ಇಷ್ಟು ವಿಸ್ತಾರದಲ್ಲಿ - ಯೋಚಿಸಲು ಈ ಸಂಗ್ರಹದ ಲೇಖನಗಳು ನಮ್ಮನ್ನು ಪ್ರೇರೇಪಿಸುತ್ತವೆ. ಇಂತಹ ಪ್ರೇರೇಪಣೆ ಇಂದಿನ ಸಂದರ್ಭದಲ್ಲಿ ಸಾಮಾನ್ಯ ಮಹತ್ವದ್ದಲ್ಲ. ಗೆಳೆಯ ಮಲ್ಲಿಕಾರ್ಜುನ ತಮ್ಮ ಮೊದಲ 'ಬೋಧಿವೃಕ್ಷದ ಕೆಳಗೆ' ಕೃತಿಯ ಮೂಲಕ ಕನ್ನಡದಲ್ಲಿ ಅಭಿವೃದ್ಧಿ ವಿನ್ಯಾಸಗಳನ್ನು ಕುರಿತ ಸಾಹಿತ್ಯ ಕೃಷಿಯನ್ನು ಆರಂಭಿಸಿದವರು. ಈ ಪುಸ್ತಕದ ಮೂಲಕ ಅವರು ಕೆಲವೆಡೆ ಪ್ರತ್ಯಕ್ಷವಾಗಿ, ಮತ್ತೆ ಕೆಲವೆಡೆ ಪರೋಕ್ಷವಾಗಿ ಸಮಾಜವಾದಿ ಚಿಂತನೆಯ ವಿಸ್ತರಣೆಯ ಅನಿವಾರ್ಯತೆ ಮತ್ತು ಸಾಧ್ಯತೆಗಳ ಕಡೆ ಬೊಟ್ಟು ಮಾಡಿ ಪರ್ಯಾಯ ಚಿಂತನೆಯ ತುರ್ತು ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ಇದಕ್ಕಾಗಿ ನಾನು ಜಿ.ಎನ್. ಮಲ್ಲಿಕಾರ್ಜುನ ಅವರನ್ನು ಅಭಿನಂದಿಸುತ್ತೇನೆ.

❑

(ಜಿ.ಎನ್. ಮಲ್ಲಿಕಾರ್ಜುನ ಅವರ ಅಭಿವೃದ್ಧಿ ಸಾಹಿತ್ಯ ಲೇಖನಗಳ ಸಂಗ್ರಹ : 'ಬೆಳಗಿನ ಬೆರಗು'ಗಾಗಿ (೨೦೦೪) ಬರೆದ ಮುನ್ನುಡಿಯ ಮಾತುಗಳು.)

ದಲಿತ ಚಳುವಳಿ : ಮುಂದೇನು?

ಸುಮಾರು ೨೫ - ೩೦ ವರ್ಷಗಳಿಂದ ದಲಿತ ಚಳುವಳಿಯೊಂದಿಗೆ ನನ್ನ ಸಂಪರ್ಕವಿದೆ. ಆದರೆ ಈಗ ಆ ಸಂಪರ್ಕವಿದೆಯೆಂದು ನಾನು ನಿಜವಾಗಿ ಹೇಳಲಾರೆ. ಯಾಕೆಂದರೆ, ಮುಖ್ಯವಾಗಿ ಈಗ ದಲಿತ ಚಳುವಳಿ ಎಂಬುದೇ ನನಗೆ ಕಾಣುತ್ತಿಲ್ಲ. ಹಾಗೇನಾದರೂ ಅದು ಕಣ್ಣಿಗೆ ಕಾಣುವಂತಿದ್ದರೆ, ಈಗ ಬಹುಜನ ಸಮಾಜ ಪಕ್ಷದ ಸಂಘಟನೆಯ ರೂಪದಲ್ಲಷ್ಟೇ ಕಾಣುತ್ತಿದೆ. ಆದರೆ ಎರಡು - ಮೂರು ದಶಕಗಳಿಂದಲೂ ದಲಿತ ಚಳುವಳಿಯನ್ನು ಸಹಾನುಭೂತಿಯಿಂದ ಗಮನಿಸುತ್ತಾ ಬಂದಿರುವ ನನಗೆ, ಬಹುಜನ ಸಮಾಜ ಪಕ್ಷದ ಯುವ ಸಂಘಟಕರ ಶಿಸ್ತು, ಬದ್ಧತೆ, ಅಂಬೇಡ್ಕರ್‌ವಾದವೆಂದು ಹೇಳಲಾಗುವ ವಿಚಾರಧಾರೆಯ ಉಗ್ರ ಪ್ರತಿಪಾದನೆ ಮತ್ತು ಪೆರಿಯಾರ್, ಜ್ಯೋತಿಬಾ ಫುಲೆ, ಶಾಹು ಮಹಾರಾಜ್ ಹಾಗೂ ಇತ್ತೀಚೆಗೆ ನಾಲ್ವಡಿ ಕೃಷ್ಣರಾಜ ಒಡೆಯರರ ಉಲ್ಲೇಖಗಳ ಹೊರತಾಗಿಯೂ, ಅದನ್ನು ದಲಿತ ಚಳುವಳಿಯೆಂದು ಪರಿಗಣಿಸಲು ಸಾಧ್ಯವಾಗುತ್ತಿಲ್ಲ. ಏಕೆ? ಈ ಪ್ರಶ್ನೆಯ ಹಿಂದೆಯೇ ಅಡಗಿದೆ 'ದಲಿತ ಚಳುವಳಿ : ಮುಂದೇನು?' ಎಂಬ ಪ್ರಶ್ನೆಗೆ ಉತ್ತರ ಎಂದು ನಾನು ಭಾವಿಸಿದ್ದೇನೆ.

೧

ಆಗ -

ದಲಿತ ಸಂಘರ್ಷ ಸಮಿತಿಯ ತಾತ್ವಿಕ ಉದಾರತೆಯ ಉತ್ತುಂಗ ಕಾಲದಲ್ಲಿ ನಿರೂಪಿಸಿರಬಹುದಾದ 'ದಲಿತ' ಪದದ ಅರ್ಥ ವ್ಯಾಪ್ತಿಯ ಯಾವ ಅಳತೆಗೂ ಸಿಗದಂತಹ ಸಾಮಾಜಿಕ ಹಿನ್ನೆಲೆಯುಳ್ಳ ನನಗೆ ದಲಿತ ಚಳುವಳಿ, ನನ್ನ ಚಳುವಳಿ ಅನ್ನಿಸಿತ್ತು. ತಾತ್ವಿಕವಾಗಿ ಸಮಾಜವಾದಿ ಹಿನ್ನೆಲೆಗೆ ಸೇರಿದ ನನಗೆ ಅಂದಿನ ಆ ದಲಿತ ಚಳುವಳಿ ಲೋಹಿಯಾ ನಿಧನಾನಂತರ ಅವನತಿಗೊಂಡಿದ್ದ ಸಮಾಜವಾದಿ ಚಳುವಳಿಯ ಪುನರುಜ್ಜೀವಿತ ರೂಪವಾಗಿ ಕಂಡಿತ್ತು. ಅಸಮಾನತೆಗಳಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೊಂದಿರುವ ಎಲ್ಲ ಚಹರೆಯ 'ದಲಿತ'ರ ಲೌಕಿಕ ಹಾಗೂ ಅಧ್ಯಾತ್ಮಿಕ ನೆಮ್ಮದಿಯ ಗುರಿ ಇಟ್ಟುಕೊಂಡಿದ್ದ ಸಮಾಜವಾದಿ ಚಳುವಳಿಯು ತನ್ನ ಮಧ್ಯಮ ಜಾತಿ - ವರ್ಗಗಳ ಚಹರೆಗಳನ್ನು ಮೀರಿ ಬೆಳೆಯಲಾಗದೆ ಸ್ಥಗಿತ

ಗೊಂಡಿದ್ದ ಸಮಯದಲ್ಲಿ ಹುಟ್ಟಿದ್ದ ಕರ್ನಾಟಕ ದಲಿತ ಚಳುವಳಿ, ನಿಜವಾದ ಸಮಾಜವಾದಿ ಚಳುವಳಿಯಾಗಿ ಬೆಳೆಯುವ ಎಲ್ಲ ಲಕ್ಷಣಗಳನ್ನೂ ಪ್ರದರ್ಶಿಸತೊಡಗಿತ್ತು. ಈ ದಲಿತ ಚಳುವಳಿಯ ನಾಯಕರು ಎಂದೂ ಜಾತಿವಾದಿಗಳಾಗಿರಲಿಲ್ಲ. ಅವರು ಅಂಬೇಡ್ಕರ್ ಎಂದು ಮಾತನಾಡುತ್ತಿದ್ದರೂ, ಅವರ ಅಂಬೇಡ್ಕರರ ಹಿಂದೆ ಗಾಂಧೀಜಿ, ಲೋಹಿಯಾ, ಮಾರ್ಕ್ಸ್ ಎಲ್ಲರೂ ಇರುತ್ತಿದ್ದರು. ಹಾಗಾಗಿ ಅವರು ನಿಜವಾದ ಸಮಾಜವಾದಿ ಚಳುವಳಿಯ ನಾಯಕರಾಗಲು ಎಲ್ಲ ಅರ್ಹತೆ ಪಡೆದಿದ್ದರು. ಆ ಅರ್ಹತೆಯಲ್ಲಿ ಅಂಬೇಡ್ಕರರ ನೋವು, ಗಾಂಧೀಜಿಯ ವಿಷಾದ, ಲೋಹಿಯಾರ ಪ್ರತಿಭಾ ಶಕ್ತಿ ಹಾಗೂ ಮಾರ್ಕ್ಸ್‌ನ ಕನಸು ಎಲ್ಲ ಸೇರಿದ್ದವು. ಅವರು ಈ ಎಲ್ಲ ಆಯಾಮಗಳೊಂದಿಗೆ ರಾಜ್ಯಾದ್ಯಂತ ಸಂಘಟನೆ ಕಟ್ಟಿದರು. ನಮ್ಮಂತಹವರು ಅವರನ್ನು ಟೀಕಿಸುತ್ತಾ, ವಿಮರ್ಶಿಸುತ್ತಾ, ಬೆಂಬಲಿಸುತ್ತಾ ನಮ್ಮ ಕೈಲಾದ ರೀತಿಯಲ್ಲಿ ಅವರೊಂದಿಗೆ ಕೈಜೋಡಿಸಿದೆವು. ಯಾಕೆಂದರೆ ಜಾತಿ ವ್ಯವಸ್ಥೆ ಮೂಲವಾದ ಎಲ್ಲ ಸಾಮಾಜಿಕ - ಆರ್ಥಿಕ ಪಾಪಗಳಿಂದ ನಮ್ಮೆಲ್ಲರ ಮುಕ್ತಿಯನ್ನೂ ದಲಿತ ಚಳುವಳಿಯ ಯಶಸ್ಸಿನಲ್ಲಿ ನಮ್ಮಂತಹವರು ಕಾಣತೊಡಗಿದ್ದರು. ಸಂಘಟನೆ ಕಟ್ಟುವಾಗ ಅವರು ಕಟ್ಟಿಕೊಂಡು ಹಾಡುತ್ತಿದ್ದ ಹಾಡುಗಳ ಮಾರ್ದವತೆಗೆ ಸೋಲದವನೇ ಪರಮಪಾಪಿ ಎಂದು ನನಗೆ ಆಗ ಎಷ್ಟೋ ಸಲ ಅನ್ನಿಸುತ್ತಿತ್ತು.

ಈಗ -

ಎಲ್ಲಿವೆ ಆ ಹಾಡುಗಳು? ಎಲ್ಲಿ ಹೋಯಿತು ಆ ಮಾರ್ದವತೆ?

೩

೧೯೮೫ರ ಆಸುಪಾಸಿನಲ್ಲಿ ಇರಬೇಕು. ಕೆಮ್ಮಣ್ಣುಗುಂಡಿಯ ಮಂಜಿನ ಮಧ್ಯೆ ಐದಾರು ದಿನಗಳ ದಲಿತ ಶಿಬಿರವೊಂದು ಏರ್ಪಾಡಾಗಿತ್ತು. ಎಂತಹ ಶಿಬಿರವದು! ಲೋಹಿಯಾರಾಗಲಿ, ಅಂಬೇಡ್ಕರರಾಗಲೀ ಅಂತಹ ಶಿಬಿರ ನಡೆಸಿರಲಾರರು... ಅಲ್ಲಿ ಊಟಕ್ಕೆ ಕೊರತೆಯಿತ್ತು, ವಸತಿಗೆ ಕೊರತೆಯಿತ್ತು; ವಿಚಾರಕ್ಕೆ, ವಿಶ್ವಾಸಕ್ಕೆ ಕೊರತೆಯಿರಲಿಲ್ಲ. ಅಲ್ಲಿ ನಾವೆಲ್ಲ ಹೊಚ್ಚ ಹೊಸ ಕರ್ನಾಟಕದ ಕನಸು ಕಂಡೆವು.

ಆದರೆ ಅದೇ ಕೊನೆ... ಮತ್ತೆ ಆ ಕನಸು ಕಾಣದಾಯಿತು... ಆ ಹೊತ್ತಿಗೆ ಸರಿಯಾಗಿ ರೈತ ಸಂಘ ತಲೆ ಎತ್ತಿತ್ತು. ಅದು ತಲೆ ಎತ್ತಿತ್ತಾದರೂ ಹೇಗೆಂದರೆ ಇಡೀ ಕರ್ನಾಟಕ ಅದರ ಕೂಗಿಗೆ ದಂಗು ಬಡಿದಿತ್ತು. ಹಾಗೆ ಬಡಿದ ದಂಗು ದಲಿತ ಚಳುವಳಿಯನ್ನು ವಿಚಲಿತಗೊಳಿಸಿತ್ತು - ಎಷ್ಟರ ಮಟ್ಟಿಗೆ ಅಂದರೆ, ಆ ದಲಿತ ಚಳುವಳಿಯಲ್ಲಿದ್ದ ಪ್ರಮುಖ ನಾಯಕರೊಬ್ಬರು ದಲಿತ ಚಳುವಳಿಯನ್ನು ಮಟ್ಟ ಹಾಕಲೆಂದೇ ರೈತ ಚಳುವಳಿಯನ್ನು ಹುಟ್ಟು ಹಾಕಲಾಯಿತು ಎಂದು, ಇಂದು ಕಾಲದೂರದಲ್ಲಿ ನಿಂತು, ಅರ್ಧ ವಿಷಾದ, ಅರ್ಧ ಸಿಟ್ಟಿನಿಂದ ಆರೋಪಿಸುವಷ್ಟು. ಈ ಆರೋಪಕ್ಕೆ ಇಂದು ಪುರಾವೆಗಳು ಸುಲಭಕ್ಕೆ ಸಿಗಲಾರವು. ಸಿಕ್ಕರೂ

ಅವು ಇನ್ನಷ್ಟು ವಾದ - ವಿವಾದಗಳಿಗೆ ಕಾರಣವಾದಾವು. ಆದರೆ ಇಂದು ರೈತ ಚಳುವಳಿಯೊಂದಿಗೆ ಕೈ ಹಿಡಿದು ನಡೆಯಬಯಸಿರುವ ದಲಿತ ಚಳುವಳಿ ಹಾಗೂ ದಲಿತ ಚಳುವಳಿಯೊಂದಿಗೆ ಕೈ ಹಿಡಿದು ನಡೆಯಬಯಸಿರುವ ರೈತ ಚಳುವಳಿ ಈ ಆರೋಪಕ್ಕೆ ಪುರಾವೆಗಳನ್ನು ಹುಡುಕತೊಡಗುವುದರ ಬದಲಾಗಿ, ಈ ಆರೋಪದ ಹಿಂದಿರುವ ಕಹಿಯ ಮೂಲ ಯಾವುದು ಎಂಬುದನ್ನು ಮುಖ್ಯವಾಗಿ ಪರಿಶೀಲಿಸಬೇಕಾಗಿದೆ. ಇಪ್ಪತ್ತು ವರ್ಷಗಳ ಹಿಂದೆ ಈ ಚಳುವಳಿಗಳ ಪರ್ವ ಕಾಲದಲ್ಲಿ ನಡೆದ ಪರಸ್ಪರ ತಾತ್ವಿಕ ಮುಖಾಮುಖಿ ಅಮೃತವನ್ನು ಕಡೆಯದೆ ವಿಷವನ್ನೇಕೆ ಕಡೆಯುವಂತಾಯಿತು? ಎರಡೂ ಚಳುವಳಿಗಳನ್ನು ಒಗ್ಗೂಡಿಸಿ ಒಂದು ಗ್ರಾಮ ಚಳುವಳಿ ಯನ್ನಾಗಿ ರೂಪಿಸುವ ಅಂದಿನ ಆ ಪ್ರಯತ್ನದ ಸಂದರ್ಭದಲ್ಲಿ ಎರಡೂ ಚಳುವಳಿಗಳ ಕೆಲವೇ ಕೆಲವು ನಾಯಕರುಗಳ ಹೊರತಾಗಿ ಮಿಕ್ಕವರೆಲ್ಲರೂ ಈ ಎರಡೂ ಚಳುವಳಿಗಳ ಆಸಕ್ತಿಗಳೇ, ಕಾಳಜಿಗಳೇ, ಗುರಿಗಳೇ, ಕಾರ್ಯಕ್ರಮಗಳೇ ಬೇರೆ ಎಂಬಂತೆ ವರ್ತಿಸಿದುದರ ಹಿಂದಿನ ಕಾರಣವೇನು? ಈ ವಿಫಲ ಪ್ರಯತ್ನದ ನಂತರ ಕ್ರಮೇಣ ಈ ಎರಡೂ ಚಳುವಳಿಗಳು ಛಿದ್ರ - ವಿಚ್ಛಿದ್ರವಾಗುತ್ತ ಹೋದವು ಏಕೆ?

ಈ ಬಹು ಮುಖ್ಯ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಈ ಎರಡೂ ಚಳುವಳಿಗಳ ಹಿಂದೆ ಕೆಲಸ ಮಾಡುತ್ತಿದ್ದ ಕರ್ನಾಟಕದ ಸಮಾಜವಾದಿ ಮನಸ್ಸನ್ನು ಅರ್ಥ ಮಾಡಿಕೊಳ್ಳ ಬೇಕಾಗುತ್ತದೆ. ಕರ್ನಾಟಕದ ಮಟ್ಟಿಗಾದರೂ ಸಮಾಜವಾದಿ ಚಳುವಳಿಯು ನಮ್ಮ ಸಮಾಜದ ಎಲ್ಲ ವಿಷಮತೆಗಳ ಮೂಲವನ್ನು ಜಾತಿಪದ್ಧತಿಯೊಳಗೇ ಇರುವ ವಿಷಮತೆಯಲ್ಲಿ ಗುರುತಿಸಿತ್ತು. ಆದರೆ ಅಂತಹ ಜಾತಿ ಪದ್ಧತಿಗೆ ಚಾರಿತ್ರಿಕವಾಗಿ ಎಲ್ಲರೂ ಸಮಾನ ಉತ್ತರಾಧಿಕಾರಿಗಳಾಗಿದ್ದು; ಹಾಗಾಗಿ ಅದನ್ನು ಎಲ್ಲರೂ ಸಮಾನ ಸಂಕಲ್ಪದೊಡನೆ ಕಿತ್ತು ಹಾಕಲು ಪ್ರಯತ್ನಿಸಿದಾಗ ಮಾತ್ರ ಅದು ಬುಡ ಸಮೇತ ನಾಶವಾಗಬಲ್ಲುದು ಎಂಬ ರಾಜಕೀಯ ವಿವೇಕವನ್ನು ಸಮಾಜವಾದಿ ಚಳುವಳಿ ತೋರಲೇ ಇಲ್ಲ. ಬದಲಾಗಿ ಈ ಜಾತಿ ಪದ್ಧತಿಯಿಂದಾಗಿ ಅನುಭವಿಸಿದ ಚಾರಿತ್ರಿಕ ಲಾಭ ನಷ್ಟಗಳ ಲೆಕ್ಕಾಚಾರವೇ ಸಮಾಜವಾದಿಗಳ ಜಾತಿ ವಿರೋಧಿ ಹೋರಾಟದ ನೀತಿ ಸಂಹಿತೆಯಾಗಿ ರೂಪುಗೊಂಡಿತು. ಜಾತಿ ಪದ್ಧತಿ ಕುರಿತಂತೆ ಲೋಹಿಯಾ ಅವರು ವಿಶ್ವಾತ್ಮಕ ಪರಿಭಾಷೆಯಲ್ಲೇ ಮಂಡಿಸಿದ್ದ ತತ್ವ ಮೀಮಾಂಸೆಯನ್ನು ವಿಚಾರ ಸಂಕಿರಣಗಳಿಗಷ್ಟೇ ಮೀಸಲಿಟ್ಟ ಸಮಾಜವಾದಿಗಳು ತಮ್ಮ ಜಾತಿ ವಿರೋಧಿ ಕಾರ್ಯಕ್ರಮಗಳಿಗೆ, ಬ್ರಾಹ್ಮಣ ವಿರೋಧವನ್ನೇ ಮುಖ್ಯ ನೆಲೆಯನ್ನಾಗಿ ಮಾಡಿಕೊಂಡರು. ಜಾತಿ ಪದ್ಧತಿಯ ಮೂಲದಲ್ಲಿ ಬ್ರಾಹ್ಮಣನಿರುವ ನೆಂದೂ, ಆ ಬ್ರಾಹ್ಮಣನನ್ನು ನಿರ್ಮೂಲ ಮಾಡಿದರೆ ಜಾತಿ ಪದ್ಧತಿ ನಾಶವಾಗುವುದೆಂಬ ಪೆರಿಯಾರ್ ಚಳುವಳಿಯ ಸುಲಭ - ಸರಳವಾದ ಮತ್ತು ಕೇವಲ ಭಾವನಾತ್ಮಕವಾದ ನಿಲುವಿಗೆ ಸಮಾಜವಾದಿ ಚಳುವಳಿ ಬಲಿಯಾಯಿತು. ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿನ ಪೆರಿಯಾರ್ ಮೂಲದ 'ವಿಚಾರವಾದಿ ಚಳುವಳಿ'ಯ ಬಹುತೇಕ ನಾಯಕರು ಸಮಾಜವಾದಿ ಚಳುವಳಿಯ ನಾಯಕರೇ ಆಗಿದ್ದುದು ಆಕಸ್ಮಿಕವೇನಲ್ಲ. ಇದು ಸಮಾಜವಾದವನ್ನು ಬ್ರಾಹ್ಮಣೇತರವಾದ ವನ್ನಾಗಿ ಕುಬ್ಜಗೊಳಿಸುವಲ್ಲಿ ಮಾತ್ರ ಯಶಸ್ವಿಯಾಯಿತು. ಇದರಿಂದಾದ ದೊಡ್ಡ ದುರಂತ

ವೆಂದರೆ ಸಮಾಜವಾದಿ ಚಳುವಳಿಯೊಳಗೆ ಜಾತಿ ಪದ್ಧತಿಯು ಗಾಯಗೊಂಡ ಕ್ರೂರ ಮೃಗದಂತೆ ಅಡ್ಡಾಡುತ್ತಾ ಸಮಾಜವಾದಿಗಳನ್ನು ಘಾಸಿಗೊಳಿಸತೊಡಗಿತು. ಬ್ರಾಹ್ಮಣ ವಿರೋಧವು ಬ್ರಾಹ್ಮಣ ವಿರೋಧವಾಗಿ ಮಾತ್ರ ಉಳಿಯದೆ ಪ್ರತಿಯೊಂದು ಕೆಳ ಜಾತಿಯೂ ತನ್ನ ಮೇಲಿನ ಪ್ರತಿಯೊಂದು ಜಾತಿಯನ್ನೂ ಶತ್ರು ಪಾಳೆಯದಂತೆ ನೋಡುವ ಪ್ರವೃತ್ತಿಗೆ ದಾರಿ ಮಾಡಿಕೊಟ್ಟಿತು. ಸಮಾಜವಾದಿ ಚಳುವಳಿ ಸಮಗ್ರ ನೋಟವನ್ನೇ ಕಳೆದುಕೊಂಡು ತನ್ನ ಮನಸ್ಸನ್ನು ಒಡೆದುಕೊಂಡಿತು. ಈ ಒಡಕುಗಳಲ್ಲೇ ದಲಿತ ಚಳುವಳಿ, ಹಿಂದುಳಿದ ವರ್ಗಗಳ ಚಳುವಳಿ, ಕನ್ನಡ ಚಳುವಳಿ ಹಾಗೂ ರೈತ ಚಳುವಳಿಗಳು ಹುಟ್ಟಿಕೊಂಡಿದ್ದು, ಗತಿಗೆಟ್ಟ ಕೆಲವು ಸಮಾಜವಾದಿಗಳು ಇವೆಲ್ಲವನ್ನೂ ಸಮಾಜವಾದಿ ಚಳುವಳಿಗಳು ಎಂದು ಗುರುತಿಸಿಕೊಂಡು ಹೆಮ್ಮೆಪಡುವುದುಂಟು...

೪

ಈ ಎಲ್ಲ ವಿಪರ್ಯಾಸಗಳ ನಡುವೆ ನನ್ನಂತಹವರನ್ನು ಕಾಡುವ ಬಹು ಮುಖ್ಯ ಪ್ರಶ್ನೆ ಎಂದರೆ, ಮೂಲತಃ ಲೌಕಿಕವಾಗಷ್ಟೇ - ಬೆಳೆ ಬೆಲೆ ಬೇಡಿಕೆ ಸುತ್ತ - ಬೆಳೆದ ರೈತ ಚಳುವಳಿಯು ದಲಿತ ಚಳುವಳಿಯನ್ನು ಪರಸ್ಪರ ಆ ಮುಖಾಮುಖಿಯಲ್ಲಿ ತನ್ನ ದಾರಿಗೆ ಅಡ್ಡಬಿದ್ದಿದ್ದ ಆಂಜನೇಯನ ಬಾಲವನ್ನು ನೋಡಿ ಅಸಹನೆಗೊಂಡ ಭೀಮನಂತೆ ವರ್ತಿಸಿದ್ದು ಆಶ್ಚರ್ಯಕರ ವಲ್ಲವಾದರೂ; ನೋವು-ವಿಷಾದಗಳನ್ನು ತುಂಬಿಕೊಂಡೇ ಬೆಳೆದ ದಲಿತ ಚಳುವಳಿಯು ರೈತ ಚಳುವಳಿಯೊಂದಿಗೆ ಆಂಜನೇಯನಂತೆ ಹಿರಿಯನ ಮಾರ್ದವತೆಯೊಂದಿಗೆ ಏಕೆ ವರ್ತಿಸಲಾಗಲಿಲ್ಲ ಎಂಬುದು. ದಲಿತ ಸಂಘರ್ಷ ಸಮಿತಿಯು ರೈತ ಸಂಘದೊಂದಿಗೆ ಜಗಳಕ್ಕಿಳಿಯದೆ ಅದನ್ನು ಪಳಗಿಸುವ ಕೌಶಲ್ಯ ಮತ್ತು ಆತ್ಮವಿಶ್ವಾಸವನ್ನೇಕೆ ಪ್ರದರ್ಶಿಸ ಲಾಗಲಿಲ್ಲ? ನನ್ನ ಅನುಮಾನ, ತನ್ನೆಲ್ಲ ಹಾಡು - ಹೋರಾಟಗಳ ಹೊರತಾಗಿಯೂ ದಲಿತ ಚಳುವಳಿಗೆ ಆತ್ಯಂತಿಕವಾಗಿ ಜಾತಿ ಪದ್ಧತಿಯ ಭಯದಿಂದ ಬಿಡುಗಡೆ ಸಿಕ್ಕಿರಲಿಲ್ಲ. ಈಗಲೂ ಹಾಗಾಗಿಯೇ ಅದು ನಿರ್ಣಾಯಕ ಸಂದರ್ಭದಲ್ಲಿ ರೈತ ಸಂಘದ ಆರ್ಭಟಕ್ಕೆ ತಲ್ಲಣಗೊಂಡು ಅದನ್ನು ಗುಮಾನಿಯಿಂದ ನೋಡುವಂತಾಯಿತು. ಇದು ಜಾತಿ ಪದ್ಧತಿಯ ಸಮಸ್ಯೆಯನ್ನು ಇಡಿಯಾಗಿ ಮುಖಾಮುಖಿಯಾಗಿಸಿಕೊಂಡು ಅದನ್ನು ಸಂಪೂರ್ಣವಾಗಿ ಪರಿಹರಿಸಿಕೊಳ್ಳುವಲ್ಲಿ ಗಂಭೀರ ಪ್ರಯತ್ನ ಮಾಡದ ಸಮಾಜವಾದಿ ಚಳುವಳಿಯ ಸೋಲೆಂದೇ ನಾನು ಗುರುತಿಸ ಬಯಸುವೆ. ಅರ್ಧಂಬರ್ಧ ಹೊಡೆದು ಹಾಕಲ್ಪಟ್ಟಿರುವ ಜಾತಿ ಪದ್ಧತಿಯೆಂಬ ಹಾವು, ಇಂದು ಟಿಸಿಲು ಟಿಸಿಲಾಗಿ ಒಡೆದು ಹೋಗಿರುವ ಸಮಾಜವಾದಿ ಚಳುವಳಿಯನ್ನು ಆಗಾಗ - ನಿರ್ಣಾಯಕ ಸಂದರ್ಭಗಳಲ್ಲಿ - ಕಚ್ಚುತ್ತಾ ಎಚ್ಚರ ತಪ್ಪಿಸುತ್ತಲೇ ಇದೆ. ಆದರೆ ಒರಟಾದ ಸಮಕಾಲೀನ ರಾಜಕಾರಣದಲ್ಲಿ ತಮ್ಮ ಸೂಕ್ಷ್ಮತೆಯನ್ನೇ ಕಳೆದುಕೊಂಡಂತಿರುವ ಸಮಾಜವಾದಿಗಳು ಪ್ರತಿ ಬಾರಿ ಎಚ್ಚರ ತಪ್ಪಿದಾಗಲೂ ಬೇರೇನನ್ನೋ ಕಾರಣಗಳನ್ನು ಹುಡುಕುತ್ತಾ ಕ್ರಮೇಣ ಸ್ವತಃ ತಾವೇ ಕಳೆದು ಹೋಗುತ್ತಿದ್ದಾರೆ. ದಲಿತ - ರೈತ ಚಳುವಳಿಗಳು ಕಳೆದು ಹೋಗಿರುವುದೂ

ಹೀಗೇ - ಎಚ್ಚರ ತಪ್ಪಿ ತಪ್ಪಿ, ದಿಕ್ಕೆಟ್ಟು ಅಲೆಯುತ್ತಿವೆ. ದಲಿತ ಚಳುವಳಿಗೆ ರೈತ ಚಳುವಳಿಯೇ ದಿಕ್ಕು, ರೈತ ಚಳುವಳಿಗಳಿಗೆ ದಲಿತ ಚಳುವಳಿಯೇ ದಿಕ್ಕು ಎಂಬ ಅರಿವು ಮೂಡಿದಾಗ ಮಾತ್ರ ಇವೆರಡೂ ಒಂದಾಗಿ ಜನರ ಕಣ್ಣಿಗೆ ಕಾಣಿಸಬಲ್ಲವು. ಈ ಎರಡೂ ಚಳುವಳಿಗಳ ಮನಸ್ಸುಗಳು ಜಾತಿ ಪದ್ಧತಿಯ ಒಳಸುಳಿಗಳಿಂದ ಬಿಡುಗಡೆಗೊಂಡಾಗ ಮಾತ್ರ ಈ ಅರಿವು ಮೂಡಬಲ್ಲುದು. ಜಾಗತೀಕರಣದ ಸವಾಲುಗಳನ್ನು ಎದುರಿಸಲು ಒಗ್ಗಟ್ಟಾಗಿ ಹೊರಟಿರುವ ಈ ಚಳುವಳಿಗಳು ಈ ಒಗ್ಗಟ್ಟಾಗುವ ಕ್ರಮದಲ್ಲೇ ಈ ಬಿಡುಗಡೆಗೂ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕು. ಇದಕ್ಕಾಗಿ ಎರಡೂ ಚಳುವಳಿಗಳಿಗೂ ಗಾಂಧಿ-ಲೋಹಿಯಾ-ಅಂಬೇಡ್ಕರ್ ಸಮಾನ ಹಾಗೂ ಸಾಮಾನ್ಯ ನಾಯಕರಾಗಬೇಕು.

೫

ಈ ಹಿನ್ನೆಲೆಯಲ್ಲಿ ನೋಡಿದಾಗ ಬಹುಜನ ಸಮಾಜ ಪಕ್ಷದ ನಿಲುವು - ಸಂಘಟನೆಗಳ ಮಿತಿಗಳು ಗೊತ್ತಾಗುತ್ತವೆ. ದುರಂತವೆಂದರೆ ಸಮಾಜವಾದಿ ಚಳುವಳಿಗೆ ಯಾವ ಜಾತಿ ಪದ್ಧತಿ ಉರುಳಾಗಿ ಪರಿಣಮಿಸಿದೆಯೋ ಅದನ್ನೇ ಬಹುಜನ ಸಮಾಜ ಪಕ್ಷ ಆಭರಣವೆಂಬಂತೆ ಧರಿಸಿಕೊಳ್ಳುತ್ತಿರುವುದು. ಹಾಗೆ ನೋಡಿದರೆ ದಲಿತ ಚಳುವಳಿ ಎಚ್ಚರ ತಪ್ಪಿದುದರ ಒಂದು ಪರಿಣಾಮವಾಗಿಯೇ ಕರ್ನಾಟಕದಲ್ಲಿ ಬಹುಜನ ಪಕ್ಷದ ಸಂಘಟನೆ ಆರಂಭವಾಯಿತೆಂದು ಹೇಳಬೇಕು. ಜಾತಿ ಪದ್ಧತಿಯ ಚರಿತ್ರೆಯನ್ನೇ ತನ್ನ ಸಿದ್ಧಾಂತವನ್ನಾಗಿ ಸ್ವೀಕರಿಸಿ ಆ ಕಹಿ ಚರಿತ್ರೆಯ ಮೇಲೇ ಬಹುಜನರ ಭವಿಷ್ಯವನ್ನು ನಿರ್ಮಿಸಹೊರಟಿರುವ ಈ ಸಂಘಟನೆಗೆ ಮನುಷ್ಯ ಚರಿತ್ರೆಗೆ ಮಾತ್ರ ಸೇರಿದವನಲ್ಲ, ಅವನು ವರ್ತಮಾನದಲ್ಲೂ ಇರುತ್ತಾ ಅವೆರಡನ್ನೂ ಮೀರುವುದರಲ್ಲೇ ಭವಿಷ್ಯವನ್ನು ನಿರ್ಮಿಸುತ್ತಿರುತ್ತಾನೆ ಎಂಬ ಪ್ರಾಥಮಿಕ ಅರಿವೂ ಇದ್ದಂತಿಲ್ಲ. ನೆನಪುಗಳು - ಅವು ಕಹಿಯಾಗೇ ಇರಲಿ, ಸಿಹಿಯಾಗೇ ಇರಲಿ - ಅವುಗಳನ್ನಷ್ಟೇ ಆಧರಿಸಿ ಒಂದು ರಾಜಕೀಯ ತತ್ವಜ್ಞಾನವನ್ನು ರೂಪಿಸಲಾಗುವುದಿಲ್ಲ. ಹಾಗೆ ರೂಪಿಸಹೊರಟವರು ವರ್ತಮಾನದ ನಿಷ್ಠುರ ಹೆಜ್ಜೆಗಳ ತೊತ್ತಳದುಳಿತಕ್ಕೆ ಸಿಕ್ಕಿ ಭವಿಷ್ಯವನ್ನೇ ಕಾಣದ ದುರಂತಕ್ಕೀಡಾಗುವರು. ಹಾಲು ಕುಡಿದ ಮಕ್ಕಳೇ ಬದುಕುತ್ತಿಲ್ಲ; ಇನ್ನು ವಿಷ ಕುಡಿಯಲೆಳಸುವ ಮಕ್ಕಳು? ಹೀಗಿರುವಾಗ ಪ್ರಜ್ಞಾಪೂರ್ವಕವಾಗಿಯೇ ಒಂದು ಜನಸಮೂಹವನ್ನು ದುರಂತದೆಡೆಗೆ ಒಯ್ಯಲಾಗುತ್ತಿರುವ ಪ್ರಯತ್ನವನ್ನು ದಲಿತ ಚಳುವಳಿಯೆಂದೋ ಮತ್ತೊಂದು ಚಳುವಳಿಯೆಂದೋ ಹೇಗೆ ಕರೆಯಲಾದೀತು?

❑

(ಮೈಸೂರಿನ ಪೀಪಲ್ಸ್ ಲೀಗಲ್ ಫೋರಂನ ವಾರ್ಷಿಕ ಸ್ಮರಣಸಂಚಿಕೆ 'ಪಯಣ'ಕ್ಕಾಗಿ ಬರೆದ ಲೇಖನ - ೨೦೦೫)

ಬದಲಾಗುತ್ತಿರುವ ಬಾನುಲಿ

ರೇಡಿಯೋ ಅಥವಾ ಬಾನುಲಿ ಜಗತ್ತಿನಾದ್ಯಂತ ಆಧುನಿಕ ಜನಜೀವನದ ಅವಿಭಾಜ್ಯ ಅಂಗವಾಗಿದೆ. ಭಾರತದಲ್ಲಿ ಈ ಮಾಧ್ಯಮ ಕಳೆದ ೬೫ ವರ್ಷಗಳಿಗೂ ಹೆಚ್ಚಿನ ಕಾಲಾವಧಿಯಿಂದ ಪ್ರಚಲಿತವಾಗಿದ್ದರೂ, ಒಂದು ಪರಿಣಾಮಕಾರಿ ಸಮೂಹ ಮಾಧ್ಯಮವಾಗಿ ಚಿರಪರಿಚಿತವಾದದ್ದು ಐವತ್ತರ ದಶಕದಿಂದೀಚೆಗೆ. 'ಬಹುಜನ ಹಿತಾಯ ಬಹುಜನ ಸುಖಾಯ' ಎಂಬ ಸನಾತನ ಸಂದೇಶದೊಂದಿಗೆ ಆಕಾಶವಾಣಿಯು ಭಾರತೀಯ ಸಮಾಜದ ಸಕಲವರ್ಗಗಳ ಮಾಹಿತಿ, ಶಿಕ್ಷಣ ಹಾಗೂ ಮನರಂಜನಾ ಅಗತ್ಯಗಳನ್ನು ರಾಷ್ಟ್ರಾದ್ಯಂತ ಹರಡಿಕೊಂಡಿರುವ ತನ್ನ ವಿಸ್ತೃತ ಜಾಲದ ಮೂಲಕ ಜನತೆಯ ಭಾಷೆಗಳಲ್ಲೆ ಪೂರೈಸುತ್ತಿದೆ. ೧೯೯೭ರವರೆಗೆ ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಖಾತೆಯ ಅಂಗವಾಗಿದ್ದು, ಸರ್ಕಾರದ ವಾಣಿ ಎಂಬ ಟೀಕೆಗೂ ಕೆಲವೊಮ್ಮೆ ಒಳಗಾಗಿದ್ದ ಆಕಾಶವಾಣಿ, ಇಂದು ಪ್ರಸಾರಭಾರತಿ ಎಂಬ ಸ್ವಾಯತ್ತ ಪ್ರಸಾರನಿಗಮದ ವ್ಯಾಪ್ತಿಗೆ ಒಳಪಟ್ಟಿದ್ದು, ಜಾಗತೀಕರಣ, ಉದಾರೀಕರಣ, ಮುಕ್ತ ಸ್ಪರ್ಧೆ ಮುಂತಾದ ಹೊಸ ಕಾಲದ ಸವಾಲುಗಳನ್ನು ಎದುರಿಸಲು ಸಜ್ಜುಗೊಳ್ಳುತ್ತಿದೆ.

ಅರುವತ್ತರ ದಶಕದಲ್ಲಿ ಟ್ರಾನ್ಸಿಸ್ಟರ್ ತಂತ್ರಜ್ಞಾನದ ಆವಿಷ್ಕಾರದಿಂದಾಗಿ, ಆವರೆಗೆ ಮನೆಗಳಿಗೇ ಸೀಮಿತವಾಗಿದ್ದ ಬಾನುಲಿ ಬೀದಿ, ಹೊಲಗದ್ದೆ - ಕಛೇರಿಗಳನ್ನು ಪ್ರವೇಶಿಸಿ ಸಮೂಹ ಮಾಧ್ಯಮ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೇ ಕಾರಣವಾಗಿತ್ತು. ತನ್ನ ಅಸೀಮ ವ್ಯಾಪ್ತಿಯ ಬಲವನ್ನು ಸೂರೆಗೊಳ್ಳುವ ಸಲುವಾಗಿ ಆಕಾಶವಾಣಿ ತನ್ನ ಉದ್ದೇಶಗಳ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ವಿವಿಧ ಸರ್ಕಾರಿ ಇಲಾಖೆಗಳ ವಿಸ್ತರಣಾ ಸೇವೆಗೆ ಪೂರಕವಾಗಿ ಕಾರ್ಯಕ್ರಮಗಳನ್ನು ಪುನರ್ ನಿಯೋಜಿಸಿಕೊಂಡಿತು. ಕೃಷಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಿಜ್ಞಾನ ಮತ್ತು ಪರಿಸರ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಕಾರ್ಮಿಕ ಕಲ್ಯಾಣ - ಇವು ಬಾನುಲಿಯಲ್ಲಿ ವಿಶೇಷ ಗಮನಕ್ಕೊಳಗಾಗಿ ಮಾಹಿತಿ, ಶಿಕ್ಷಣ, ಹಾಗೂ ಮನರಂಜನೆಗಳ ಜೊತೆಗೆ ಅಭಿವೃದ್ಧಿಯ ಪರಿಕಲ್ಪನೆಯೂ ಕಾರ್ಯಕ್ರಮಗಳ ಹಿಂದಿನ ಕಾಳಜಿಗಳ ಪಟ್ಟಿಗೆ ಸೇರಿಕೊಂಡಿತು. ವಾರ್ತೆ, ಸಂಗೀತ, ಸಾಹಿತ್ಯ, ನಾಟಕ, ರೂಪಕ, ಭಾಷಣ, ವೀಕ್ಷಕವಿವರಣೆ, ವರದಿಗಳ ಜೊತೆಗೆ ಈ ಅಭಿವೃದ್ಧಿ ಕಾರ್ಯಕ್ರಮಗಳೂ ಸೇರಿಕೊಂಡು, ಒಂದು ಆಕಾಶವಾಣಿ ಕೇಂದ್ರವೆಂದರೆ ತನ್ನ ಗ್ರಂಥಭಂಡಾರ, ಧ್ವನಿಭಂಡಾರ, ಕಲಾವಿದ ಹಾಗೂ ತಂತ್ರಜ್ಞ ಸಿಬ್ಬಂದಿ, ವಿವಿಧ ಕ್ಷೇತ್ರಗಳ

ಶ್ರೇಷ್ಠರ, ಪರಿಣಿತರಿಂದೊಡಗೂಡಿದ ಗಣ್ಯಸಮೂಹದ ಒಡನಾಟದೊಂದಿಗೆ, ಆ ಪ್ರದೇಶದ ಒಂದು ಸಾರ್ವತ್ರಿಕ ಸಂಪನ್ಮೂಲ ಕೇಂದ್ರವೇ ಆಗಿಬಿಟ್ಟಿರುತ್ತಿತ್ತು. ಇಂತಹ ಸೌಭಾಗ್ಯ, ಅಂದಿನ ಯಾವ ಸಮೂಹ ಮಾಧ್ಯಮಕ್ಕೂ ಇರಲಿಲ್ಲ. ಖಾಸಗಿ ಒಡೆತನದ ಪತ್ರಿಕೆಗಳು ಹೆಚ್ಚೆಚ್ಚು ಕ್ರಿಯಾಶೀಲಗೊಳ್ಳುತ್ತಿದ್ದರೂ, ಅವುಗಳ ಪ್ರಸಾರ ಅಕ್ಷರಸ್ಥರಿಗಷ್ಟೇ ಸೀಮಿತಗೊಂಡಿದ್ದುದರಿಂದ ಮತ್ತು ಆ ಕಾಲಕ್ಕೆ ರಂಗಭೂಮಿ ಮತ್ತು ಚಲನಚಿತ್ರ ರಂಗಗಳೂ ಪ್ರಯೋಗಶೀಲತೆಯಲ್ಲಿ ತೊಡಗಿದ್ದರೂ, ಅವುಗಳಿಗೆ ಇದ್ದ ಒಂದು ವಿಶಾಲ ಸಾಂಸ್ಥಿಕ ಸ್ವರೂಪದ ಕೊರತೆಯಿಂದಾಗಿ ಹಾಗೂ ಆ ಮಾಧ್ಯಮಗಳಲ್ಲೇ ಅಂತರ್ಗತವಾಗಿದ್ದ ವಿಶಿಷ್ಟ ಮಿತಿಗಳಿಂದಾಗಿ ಈ ಯಾವ ಸಮೂಹ ಮಾಧ್ಯಮಗಳೂ ಬಾನುಲಿಗೆ ನಿಜವಾದ ಸ್ಪರ್ಧೆಯನ್ನು ಒಡ್ಡಲೇ ಇಲ್ಲ. ಬಾನುಲಿ ಮಾಧ್ಯಮದ ಶಕ್ತಿ ಅದಾಗಿತ್ತು, ದೂರದರ್ಶನದ ಆಗಮನದವರೆಗೆ.

೨

ಎಂಭತ್ತರ ದಶಕ ಆಕಾಶವಾಣಿಗೆ ನಿಜವಾದ ಸವಾಲು ಆರಂಭವಾದ ಕಾಲ. ಆವರೆಗೆ ಆಕಾಶವಾಣಿ ಸಿಬ್ಬಂದಿಗೆ ಒಳಗಿನ ಸವಾಲುಗಳನ್ನು ಎದುರಿಸಿ ಗೊತ್ತಿತ್ತು. ಸರ್ಕಾರಿ ಸ್ವಾಮ್ಯದ ಮಾಧ್ಯಮವೆಂಬುದರಿಂದಾಗಿಯೇ ಉಂಟಾಗುತ್ತಿದ್ದ ಒಳ ಒತ್ತಡಗಳನ್ನು ತಮ್ಮ ಅನುಭವ ಹಾಗೂ ಸೃಜನಶೀಲತೆಗಳ ನೆರವಿನಿಂದ ಪರಿಹರಿಸಿಕೊಳ್ಳುತ್ತಿದ್ದ ಸಿಬ್ಬಂದಿಗೆ, ಆವರೆಗೆ ಜೊತೆಗಿದ್ದೂ ಇಲ್ಲದಂತಿದ್ದ ದೂರದರ್ಶನ ೧೯೮೦ರಲ್ಲಿ ಇದ್ದಕ್ಕಿದ್ದಂತೆ ತಮ್ಮ ಕಣ್ಮುಂದೆಯೇ ಬಣ್ಣ ಬೆಡಗುಗಳೊಂದಿಗೆ ರಾಷ್ಟ್ರಾದ್ಯಂತ ತನ್ನ ಜಾಲವನ್ನು ವಿಸ್ತರಿಸಿ ಕೊಳ್ಳುತ್ತ ಹೋದಾಗ ಥಟ್ಟನೆ ಮಂಕು ಹಿಡಿದಂತೆಯೇ ಆಯಿತು. ಈ ಮಂಕು ಇನ್ನೂ ಸಂಪೂರ್ಣವಾಗಿ ಹೋಗಿಲ್ಲ ಎಂದೇ ನನ್ನ ಭಾವನೆ. ಇಂದು ಭಾರತದ ಬಾನುಲಿ ಬಿಕ್ಕಟ್ಟಿನಲ್ಲಿದೆ ಎಂದು ಯಾರಿಗಾದರೂ ಅನ್ನಿಸಿದ್ದರೆ ಅದರ ಮೂಲ ಕಾರಣವನ್ನು ಈ ಮಂಕಿನಲ್ಲಿ ಗುರುತಿಸಬೇಕಾಗುತ್ತದೆ.

ಈ ಮಂಕಾದರೂ ಯಾಕುಂಟಾಯಿತು? ಅರ್ಧ ಶತಮಾನದ ಪರಂಪರೆ, ಅನುಭವ, ದಕ್ಷತೆ, ಕುಶಲತೆ, ವಿಶ್ವಾಸಗಳು ಸಿಬ್ಬಂದಿಯ ನೆರವಿಗೆ ಬರಲಿಲ್ಲವೇ? ಬರುತ್ತಿದ್ದವೋ ಏನೋ, ಆಕಾಶವಾಣಿಯ ನಿರ್ವಹಣೆ ಆಕಾಶವಾಣಿಯ ಸಿಬ್ಬಂದಿಯಿಂದಲೇ ಆಗುತ್ತಿರುವಂತಿದ್ದರೆ! ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಎರಡು ಪ್ರತ್ಯೇಕ ಹಂತಗಳಿವೆ. ಒಂದು ನೀತಿ ನಿರೂಪಿಸುವ ಆಡಳಿತ ವರ್ಗ ಹಾಗೂ ಎರಡು, ಆ ನೀತಿಯನ್ನು ಅನುಷ್ಠಾನಗೊಳಿಸುವ ಸಿಬ್ಬಂದಿವರ್ಗ. ದೂರದರ್ಶನವನ್ನು ಬೆಳೆಸುವ ಬಗೆಯನ್ನು ನಿರ್ಧರಿಸುವ ಉತ್ಸಾಹದಲ್ಲಿ, ಈ ಬಗೆ ಆಕಾಶವಾಣಿಯ ಮೇಲೆ ಏನು ಪರಿಣಾಮ ಉಂಟುಮಾಡಬಹುದು ಎಂಬುದು ನೀತಿನಿರೂಪಕ ಆಡಳಿತವರ್ಗದ ಗಮನಕ್ಕೆ ಬರದೇ ಹೋಯಿತೇನೋ! ಹಾಗಾಗಿ ಎರಡೂ ಮಾಧ್ಯಮಗಳಿಗೆ ಒಂದೇ ಜವಾಬ್ದಾರಿಯಾಯಿತು. (ಕಾಲಕ್ರಮೇಣ ದೂರದರ್ಶನ 'ಬೇರೆ' ದಾರಿ ಹಿಡಿದದ್ದು

ಬೇರೆ ಮಾತು) ಆದರೆ, ದೃಶ್ಯ, ಬಣ್ಣಗಳೊಡನೆ ಬಂದ ದೂರದರ್ಶನ, ಧ್ವನಿಯನ್ನೇ ನಂಬಿದ್ದ ಆಕಾಶವಾಣಿಯನ್ನು ನಿಧಾನವಾಗಿ ಹಿನ್ನೆಲೆಗೆ ತಳ್ಳಿತು. ಹೊಸ ಮಾಧ್ಯಮದ ಬಗೆಗಿನ ಜನರ ಆಕರ್ಷಣೆಯೂ ಆಕಾಶವಾಣಿಗೆ ಮುಳುವಾಯಿತು.

ಈ ಬೆಳವಣಿಗೆಯನ್ನು ಇನ್ನೊಂದು ರೀತಿಯಲ್ಲೂ ಅವಲೋಕಿಸಬಹುದು ಎಂದು ಕಾಣುತ್ತದೆ. ಭಾರತದಲ್ಲಿ ಎಂಭತ್ತರ ದಶಕ ಎಲ್ಲ ಕ್ಷೇತ್ರಗಳಲ್ಲೂ ಬದಲಾವಣೆಯ ಬೀಜಗಳು ಮೊಳಕೆಯೊಡೆಯುತ್ತಿದ್ದ ಕಾಲ. ಸ್ವತಂತ್ರ ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಎಲ್ಲ ಪ್ರಯೋಗಗಳೂ ಒಂದು ಮುಕ್ತಾಯ ಹಂತವನ್ನು ತಲುಪಿ, ಹೊಸ ತಲೆಮಾರೊಂದು ಹಳೆಯ ತಲೆಮಾರಿಗೆ ಮುಖಾಮುಖಿಯಾಗಿ, ರಾಷ್ಟ್ರನಿರ್ಮಾಣದ ಹೊಸದೊಂದು ದಿಕ್ಕನ್ನು ಅನ್ವೇಷಿಸಲು ಆರಂಭಿಸಿದ್ದ ಕಾಲವದು. ಮಿಶ್ರ ಆರ್ಥಿಕ ವ್ಯವಸ್ಥೆ, ಕಲ್ಯಾಣ ರಾಜ್ಯ, ಸಮಾಜವಾದ, ರಾಷ್ಟ್ರೀಕರಣ ಮುಂತಾದ ಪರಿಕಲ್ಪನೆಗಳು ಮತ್ತು ಇವುಗಳಿಗೆ ಹೊಂದಿಕೊಂಡ ಎಲ್ಲ ವ್ಯವಸ್ಥೆ, ಸಂರಚನೆ ಹಾಗೂ ಉಪಕರಣಗಳ ಸಾಮರ್ಥ್ಯ ಮತ್ತು ವಿಶ್ವಾಸಾರ್ಹತೆಗಳ ಬಗೆಗೆ ಅನುಮಾನಗಳು ಸೃಷ್ಟಿಯಾಗುತ್ತಾ ಮುಕ್ತ ಮಾರುಕಟ್ಟೆ ಅರ್ಥ ವ್ಯವಸ್ಥೆ, ಉದಾರೀಕರಣ, ಜಾಗತೀಕರಣಗಳ ಗಾಳಿ ಹೊಸ ಆಸೆ ಭರವಸೆಗಳೊಂದಿಗೆ ಬೀಸಲಾರಂಭಿಸಿದ್ದ ಕಾಲವದು. ಬಣ್ಣದ ದೂರದರ್ಶನವನ್ನು ದೇಶಕ್ಕೆ ಪರಿಚಯಿಸಿದ ೧೯೮೨ರ ಏಷ್ಯನ್ ಕ್ರೀಡಾಕೂಟ, ಈ ಹೊಸ ಗಾಳಿಗೆ ತೆರೆದಿಟ್ಟ ಮೊದಲ ಬಾಗಿಲು. ಅಂತಹ ಹೊಸಗಾಳಿಯ ಮೇಲೆ ಸವಾರಿ ಮಾಡಿಕೊಂಡು ಬಂದ ದೂರದರ್ಶನ ತನ್ನ ಹಳೆಯ (ಬಾನುಲಿಗೆ ಇದ್ದಂತಹುದೇ) ಶೈಕ್ಷಣಿಕ ಉದ್ದೇಶಗಳನ್ನು ಬದಿಗೊತ್ತಿ, ಕ್ರೀಡೆ, ಮನರಂಜನೆಗಳನ್ನೇ ತನ್ನ ಪ್ರಧಾನ ಉದ್ದೇಶಗಳನ್ನಾಗಿ ಮಾಡಿಕೊಂಡಿದ್ದರಿಂದಾಗಿ ಅದು ಆ ಕಾಲಘಟ್ಟದ ಲಹರಿಗೆ ತಕ್ಕಂತೆ ಮುಕ್ತತೆ, ನಾವೀನ್ಯತೆ ಹಾಗೂ ಅತ್ಯಾಧುನಿಕತೆಗಳ ಪ್ರತೀಕವೆನಿಸಿಕೊಳ್ಳಲಾರಂಭಿಸಿತು. ವಾಣಿಜ್ಯಕವಾಗಿ ಅದು ಇಡಲಾರಂಭಿಸಿದ ಚಿನ್ನದ ಮೊಟ್ಟೆಗಳನ್ನು ಕಂಡ ಆಳರಸರು, ಇದನ್ನು ಆ ದಿಕ್ಕಿನಲ್ಲೇ ಪ್ರೋತ್ಸಾಹಿಸಿದರು ಕೂಡಾ. ಈ ಹಿನ್ನೆಲೆಯಲ್ಲಿ ಬಾನುಲಿ ಹಳೇ ವ್ಯವಸ್ಥೆಯ ಪಳೆಯುಳಿಕೆಯಾಗಿ ಮಾರ್ಪಾಡಾದುದರಲ್ಲಿ ಆಶ್ಚರ್ಯವೇನಿಲ್ಲ.

ಇದಕ್ಕಾಗಿ ಬರೀ ಅಧಿಕಾರಿಶಾಹಿಯನ್ನಷ್ಟೇ ದೂರಿ ಪ್ರಯೋಜನವಿಲ್ಲ. ಅರವತ್ತರ ದಶಕದಲ್ಲಿ ಆರಂಭವಾದ ಅಪಾರ ಬೆಳವಣಿಗೆ, ಯಶಸ್ಸು ಹಾಗೂ ಜನಪ್ರಿಯತೆಗಳಿಂದಾಗಿ ಎಪ್ಪತ್ತರ ದಶಕದ ಕೊನೆಯ ಹೊತ್ತಿಗೆ ಮಾಧ್ಯಮ ಏಕಸ್ವಾಮ್ಯತೆಯ ಗುಂಗಿಗೆ ಸಿಕ್ಕಿಕೊಂಡಿದ್ದ ಬಾನುಲಿ ತನ್ನೆಲ್ಲ ಕ್ರಿಯಾಶೀಲತೆ, ಸೃಜನಶೀಲತೆಗಳನ್ನು ಸ್ಥಗಿತಗೊಳಿಸಿಕೊಂಡಿತ್ತು. ೧೯೭೫ರ ತುರ್ತುಪರಿಸ್ಥಿತಿ ಬೇರೆ ಈ ಮಾಧ್ಯಮವನ್ನು ಸಾಕಷ್ಟು ಘಾಸಿಗೊಳಿಸಿ, ಇದರ ವಿಶ್ವಾಸಾರ್ಹತೆಯನ್ನೇ ಪ್ರಶ್ನಾರ್ಹಗೊಳಿಸಿತ್ತು. ಇದರಿಂದುಂಟಾದ ಜಿಗುಪ್ಸೆ, ಮುಜುಗರ ಹಾಗೂ ಸಿನಿಕತೆಗಳಿಂದ ಹೊರಬರುವ ಪ್ರಯತ್ನಗಳ ನಡುವೆಯೇ ದೂರದರ್ಶನ ಧುತ್ತೆಂದು ರಾಷ್ಟ್ರಾದ್ಯಂತ ಅನಾವರಣಗೊಂಡು ಬಾನುಲಿ ಕ್ರಮೇಣ ನಲುಗತೊಡಗಿದಾಗ, ಅತ್ತ ಆಡಳಿತಗಾರರ ನೀತಿಯನ್ನು ಪ್ರಶ್ನಿಸುವ ಸಂಘಟನಾ ಸ್ಥೈರ್ಯವೂ ಇಲ್ಲದೆ, ಇತ್ತ ಕಾಲದ ಹೊಸ ಸವಾಲುಗಳಿಗೆ ತಂತಮ್ಮ

ಕಾರ್ಯಕ್ರಮ ನಿಯೋಜನೆಗಳಲ್ಲಾದರೂ ವೈಯಕ್ತಿಕವಾಗಿ ಸ್ಪಂದಿಸುವ ತುರ್ತು ಉತ್ಸಾಹಗಳಿಲ್ಲದೆ, ಬಹಳಷ್ಟು ಬಾನುಲಿ ಜನರು ನಿರ್ಲಿಪ್ತಿಗೆ ಶರಣಾದರು. ಆ ಹೊತ್ತಿನಲ್ಲಿ ಮಾಧ್ಯಮದೊಳಗಿನ ವಾತಾವರಣವೇ ದಿಗ್ಭ್ರಮೆ ಹಾಗೂ ನಿರಾಶೆಗಳಿಂದ ಕೂಡಿತ್ತೆಂಬುದೂ ನಿಜ. ಕಾಲದ ಮಹಿಮೆಗೆ ಬಾನುಲಿಯೂ ಬಲಿಯಾಗಿತ್ತಷ್ಟೆ.

ಮಾಧ್ಯಮ ಏಕಸ್ವಾಮ್ಯದ ನಿರಾಳ ಮನೋಭೂಮಿಕೆಯಲ್ಲೇ ವಿಹರಿಸುತ್ತಿದ್ದ ಬಾನುಲಿ ತನ್ನ ಆಯಕಟ್ಟಿನ ಸ್ಥಳಗಳಲ್ಲಿ ಕೊಬ್ಬನ್ನು ಬೆಳೆಸಿಕೊಂಡಿತ್ತು - ತನ್ನ ಕೇಳುಗ ವರ್ಗವನ್ನು ಗುರುತಿಸಿಕೊಳ್ಳುವ ಬಗೆಯಿಂದ ಹಿಡಿದು, ಅದನ್ನು ತನ್ನ ಕಾರ್ಯಕ್ರಮ ನಿಯೋಜನೆಯ ಮೂಲಕ ನಿರ್ವಹಿಸುವ ರೀತಿಯವರೆಗೆ. ನಮ್ಮ ಬಾನುಲಿ ಕೇಂದ್ರಗಳ 'ಪತ್ರೋತ್ತರ' ಕಾರ್ಯಕ್ರಮ ಈ ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿತ್ತು - 'ನಾವು ಮಾಡುವುದನ್ನೇ ಮಾಡುವುದು, ಕೇಳುವುದಷ್ಟೇ ನಿಮ್ಮ ಹೊಣೆ' ಎಂಬ ಸಂದೇಶವನ್ನೇ ಅತಿಔಪಚಾರಿಕ ಪ್ರೀತಿಯಿಂದ ಸಾರುತ್ತಿದ್ದ ಈ ಕಾರ್ಯಕ್ರಮ ಕೇಳುಗರ ದೂರು, ಆಕ್ಷೇಪಗಳನ್ನು, ಸಲಹೆ - ಸೂಚನೆ - ಕೋರಿಕೆಗಳನ್ನು ಗಂಭೀರವಾಗಿ ಪರಿಗಣಿಸಿದ್ದು ಕಡಿಮೆಯೆಂದೇ ಹೇಳಬೇಕು. ಎಲ್ಲ ಕಾರ್ಯಕ್ರಮಗಳೂ ಅವುಗಳ ಸ್ವರೂಪ, ಅವಧಿ ಹಾಗೂ ಸಮಯ - ಒಂದು ಸಿದ್ಧ ಎರಕಕ್ಕೆ (Standardisation) ಸಿಕ್ಕಿ ಹಾಕಿಕೊಂಡಂತೆ, ಅದರಿಂದ ಬಿಡಿಸಿಕೊಳ್ಳುವುದೆಂದರೆ ಒಂದು ಸಂಪ್ರದಾಯಕ್ಕೆ, ಅಭಿರುಚಿಗೆ, ಪ್ರತಿಷ್ಠೆಗೆ ಉಂಟಾಗುವ ಧಕ್ಕೆ ಎಂಬ ಒಂದು ರೀತಿಯ ಪಟ್ಟಭದ್ರ ಮನೋಭಾವದಿಂದಾಗಿ ಭಾರತದ ಬಾನುಲಿ ನಿಧಾನವಾಗಿ ಬದಲಾಗುತ್ತಿದ್ದ ಅಭಿರುಚಿ, ಮೌಲ್ಯ, ನಿರೀಕ್ಷೆಗಳನ್ನು, ಆರ್ಥಿಕ ಹಾಗೂ ಸಾಮಾಜಿಕ ಚಲನೆಗಳನ್ನು ಗ್ರಹಿಸದೇ ಹೋಗಿತ್ತು. 'ಜನಮಾಧ್ಯಮ'ವಾಗಿ ಬೆಳೆದಿದ್ದ ಆಕಾಶವಾಣಿ ಒಂದು 'ವರ್ಗಮಾಧ್ಯಮ' (Class medium)ದ ಎಲ್ಲ ಲಕ್ಷಣಗಳನ್ನೂ ರೂಢಿಸಿಕೊಂಡು ತನ್ನದೇ 'ಜಡಸುಖ'ದಲ್ಲಿ ಮೈಮರೆತಿತ್ತು. ಸಿದ್ಧ ಮಾದರಿಯ ಸಂಗೀತ, ನಾಟಕ, ರೂಪಕ, ಭಾಷಣ, ಸಂದರ್ಶನ ಹಾಗೂ ವಿಶೇಷ ಶ್ರೋತೃ ಕಾರ್ಯಕ್ರಮಗಳಿಗೆ ಸಿದ್ಧ ಮಾದರಿಯ ಕಲಾವಿದರು, ಪರಿಣತರು, ನಿರ್ವಾಹಕರು; ಅಷ್ಟೇ ಅಲ್ಲ, ಸಿದ್ಧ ಮಾದರಿಯ ಕೇಳುಗರು ಕೂಡಾ! ದೂರದರ್ಶನ ಬಂದು ಈ ಕೇಳುಗ ಸಮೂಹದ ಬಹುಭಾಗವನ್ನು ಅಪಹರಿಸಿದಾಗಲೇ ಬಾನುಲಿಯ ಜನಕ್ಕೆ ಗೊತ್ತಾದದ್ದು, ತನ್ನದೆಂದು ಬಗೆಯಲಾಗಿದ್ದ ಈ ಕೇಳುಗ ಸಮೂಹವೂ ನಿಜವಾಗಿಯೂ ತನ್ನದಾಗಿ ಉಳಿದಿರಲಿಲ್ಲವೆಂದು!

೩

ಆದರೆ ಇದೆಲ್ಲ ಮುಗಿದು ಹತ್ತು ವರ್ಷಗಳಾಗಿವೆ. ಇಂದು ಭಾರತದ ಬಾನುಲಿ ಹಳೇ ವ್ಯವಸ್ಥೆಯೊಂದರ ಪಳೆಯುಳಿಕೆಯಾಗಿಯೇ ಇದೆ ಎಂದರೆ ಬಹಳಷ್ಟು ಜನರು ಒಪ್ಪಲಾರರು. ಈ ಹತ್ತು ವರ್ಷಗಳಲ್ಲಿ ಮಾಧ್ಯಮದ ಒಳ - ಹೊರಗುಗಳೆರಡರಲ್ಲೂ ಬಹು ಮಾಧ್ಯಮಗಳ ಹೊಸ ಸಂದರ್ಭದಲ್ಲಿ ಬಾನುಲಿಯ ಪಾತ್ರದ ಬಗ್ಗೆ ಶಾಸ್ತ್ರೀಯವಾಗಿ ಅಲ್ಲದಿದ್ದರೂ,

ಅನೌಪಚಾರಿಕವಾಗಿ ಸಾಕಷ್ಟು ಚರ್ಚೆ ನಡೆದಿದೆ. ಬಾನುಲಿ ಆಡಳಿತಗಾರರು ಹಾಗೂ ಕೆಲಸಗಾರರಿಬ್ಬರಿಗೂ ಈ ಮಾಧ್ಯಮವನ್ನು ಹೊಸ ಕಾಲದ ಅಗತ್ಯಗಳಿಗೆ ಒಗ್ಗಿಸಬೇಕಾದ ಅಗತ್ಯದ ಅರಿವಾಗಿದೆ. ಯಾವುದೇ ಮಾಧ್ಯಮಕ್ಕೆ ಜನರ ನಿಷ್ಠೆ ರೂಪುಗೊಳ್ಳುವುದು, ಆ ಮಾಧ್ಯಮ ಅವರ ಅಭಿರುಚಿ, ಅಗತ್ಯ, ಅಭಿಪ್ರಾಯ, ನಿರೀಕ್ಷೆಗಳನ್ನು ಎಷ್ಟರ ಮಟ್ಟಿಗೆ ಗಂಭೀರವಾಗಿ ಪರಿಗಣಿಸಿ ವಿಶ್ಲೇಷಿಸಿ ಪೂರೈಸುತ್ತದೆ ಎಂಬುದರ ಆಧಾರದ ಮೇಲೆ. ಆಕಾಶವಾಣಿಗೆ ಮತ್ತೆ ಕೇಳುಗ ವರ್ಗ ಸೃಷ್ಟಿಯಾಗಬೇಕಾಗಿರುವುದೂ ಇದೇ ಆಧಾರದ ಮೇಲೆ. ಒಂದು ದೀರ್ಘ ಪರಂಪರೆ ಹಾಗೂ ಇನ್ನೂ ಪೂರ್ಣ ಶಿಥಿಲಗೊಳ್ಳದ ವೃತ್ತಿಪರತೆಗಳುಳ್ಳ ಆಕಾಶವಾಣಿ ಇದನ್ನು, ಸ್ವಲ್ಪ ತಡವಾದರೂ ಮನಗಂಡೇ ತನ್ನ ಕಾರ್ಯಕ್ರಮಗಳಲ್ಲಿ ಹೊಸ ಪ್ರಯೋಗಗಳಿಗೆ ಕೈಹಾಕಿತು. ತನ್ನ ಕೇಳುಗ ವರ್ಗವನ್ನು ಹೊಸತಾಗಿ ಗುರುತಿಸಿಕೊಳ್ಳುವ ಕೆಲಸವದು. ಎಂಭತ್ತರ ದಶಕದಲ್ಲಿ ಕಾಣಲಾರಂಭಿಸಿದ ಆರ್ಥಿಕ, ಸಾಮಾಜಿಕ ಹಾಗೂ ತಾಂತ್ರಿಕ ಪರಿವರ್ತನೆಗಳು ಸೃಷ್ಟಿಸಿದ ನವ ಮಧ್ಯಮವರ್ಗ ಹಾಗೂ ಈ ವರ್ಗ ವ್ಯವಸ್ಥಿತವಾಗಿಯೋ ಎಂಬಂತೆ ಪ್ರತಿಪಾದಿಸಿದ ಸ್ಪರ್ಧೆ, ಮುಕ್ತತೆಗಳು ಇದೇ ಸಮಾಜದ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಅನೌಪಚಾರಿಕವಾಗಿಯಾದರೂ ಅಧ್ಯಯನ ಮಾಡಿ ತನ್ನ ಸ್ಥಾನವನ್ನು ಪುನರ್‌ವ್ಯಾಖ್ಯಾನಿಸಿ ಕೊಳ್ಳುವ ಜವಾಬ್ದಾರಿಯದು. ಕಲ್ಯಾಣ ಸಂಸ್ಕೃತಿಯ ಸಮಾಜ ಗ್ರಾಹಕಸಂಸ್ಕೃತಿಯ ಸಮಾಜವಾಗಿ ಪರಿವರ್ತಿತವಾಗುತ್ತಿರುವ ಸಂದರ್ಭದಲ್ಲಿ, ಬಾನುಲಿಯಂತಹ ಸಾರ್ವಜನಿಕ ಸೇವಾಪ್ರಸಾರ ಪರಂಪರೆಯುಳ್ಳ ಮಾಧ್ಯಮವೊಂದು ಇದ್ದಕ್ಕಿದ್ದಂತೆ ತನ್ನ ಆದ್ಯತೆಗಳನ್ನು ಬದಲಿಸಿಕೊಂಡು ತನ್ನ ಕಾರ್ಯಕ್ರಮಗಳನ್ನು ಸರಕಿನಂತೆ ಉತ್ಪಾದಿಸಿ ಕೇಳುಗರನ್ನು ಗ್ರಾಹಕರೆಂಬಂತೆ ಗ್ರಹಿಸಿ ಪ್ರಸಾರ ಮಾಡುವುದು ಕಷ್ಟದ ಕೆಲಸ. ಟಿಲಿವಿಷನ್ನಂತಹ ಹೊಸಕಾಲದ ಮಾಧ್ಯಮಗಳಿಗೆ ಈ ಕಷ್ಟವಿರುವುದಿಲ್ಲ. ಹಾಗಾಗಿಯೇ ಬಾನುಲಿ ಪಾರಂಪರಿಕ ಸಂಗೀತ, ಸಾಹಿತ್ಯ, ಸಂಸ್ಕೃತಿ ಆಧಾರಿತ ಕಾರ್ಯಕ್ರಮಗಳ ಮೂಲಕ ನಿರಂತರತೆಯನ್ನು ಕಾಯ್ದುಕೊಂಡೇ, ಹೊಸ ಕಾಲದ ಕೇಳುಗನ ಬೇಡಿಕೆಗಳನ್ನು ಪೂರೈಸುವ, ಅವನನ್ನು ಒಳಗೊಳ್ಳುವಂತಹ ಹೊಸ ಕಾರ್ಯಕ್ರಮ ಸ್ವರೂಪದ ಬಗೆಗೆ ಯೋಚಿಸಬೇಕಾಯಿತು. ಇದಕ್ಕೆ ಅಗತ್ಯವಾದ ಹೊಸ ತಾಂತ್ರಿಕತೆಯೂ ಸಿದ್ಧವಾಗಿತ್ತು.

ಈ ಹೊಸ ಕಾರ್ಯಕ್ರಮ ಸ್ವರೂಪದ ಆಧಾರ ನಂಬಿಕೆ: ಕೇಳುಗ ಬರೀ (ಆ ದಂಡೆಯ) 'ಕೇಳುಗ'ನಾಗಿ ಉಳಿಯದೆ ಬಾನುಲಿ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರಬೇಕು - ಗ್ರಾಹಕ ಸಮಾಜದ ಗ್ರಾಹಕ, ಪೇಟೆಯ ಅವಿಭಾಜ್ಯ ಅಂಗವಾಗಿರುವಂತೆ. ಇದಕ್ಕಾಗಿ ನವಮಧ್ಯಮ ವರ್ಗದ ನಡುವೆ ತನ್ನ ಪೇಟೆಯನ್ನು ಕಂಡುಕೊಂಡಿದ್ದ ನವ ಮಾಧ್ಯಮಗಳಿಗೆ ಸಂವಾದಿಯಾಗಿ ಬಾನುಲಿ, ಈ ನವಮಾಧ್ಯಮಗಳ ಮೂಲಕ ತಮ್ಮ ಮಾಧ್ಯಮ ಅಗತ್ಯಗಳನ್ನು ಪೂರೈಸಿಕೊಳ್ಳಲಾಗದ ಮಿಶ್ರವರ್ಗ ಸಮುದಾಯವೊಂದನ್ನು ಗುರುತಿಸಿ ಒಲಿಸಿಕೊಳ್ಳುವ ಪ್ರಯೋಗಗಳನ್ನು ಆರಂಭಿಸಬೇಕಾಯಿತು. ತುಂಬಾ ಅಸ್ಥಿರವಾದ ಈ ಮಿಶ್ರವರ್ಗ, ಪರಂಪರೆ ಮತ್ತು ಬದಲಾವಣೆಗಳನ್ನು ಒಟ್ಟಿಗೇ ಬಯಸುವ ಸಮುದಾಯ. ಒಂದು ರೀತಿಯಲ್ಲಿ ಇದು ಹೊಸ 'ಜನಸಾಮಾನ್ಯ'ರ ಸಮುದಾಯ. ಇವರನ್ನು ಮುಟ್ಟಲು, ಒಳಗೊಳ್ಳಲು ಆಕಾಶವಾಣಿಯ ಧ್ವನಿಗ್ರಾಹಕ

ತನ್ನ ಹವಾನಿಯಂತ್ರಿತ ಆವರಣ ಬಿಟ್ಟು, ಹೆಚ್ಚು ಹೆಚ್ಚಾಗಿ ಬೀದಿಗೆ ಬರಬೇಕಾಯಿತು. ಜನಸಾಮಾನ್ಯರ ನೋವು - ನಲಿವು, ಕಷ್ಟ - ನಷ್ಟಗಳಿಗೆ ಧ್ವನಿ ಕೊಡುವ ಹೊಸ 'ಸ್ಪಂದನ' ಆಕಾಶವಾಣಿಯಲ್ಲಿ ಆರಂಭವಾಯಿತು. ಜೊತೆ ಜೊತೆಯಲ್ಲೇ ಮುಖರಹಿತ ಕೇಳುಗರಿಗೆ ಉದ್ದೇಶಗೊಂಡ ಸಾರ್ವತ್ರಿಕ ಕಾರ್ಯಕ್ರಮಗಳಿಗೆ ಬದಲಾಗಿ, ನಿರ್ದಿಷ್ಟ ಕೇಳುಗ ಸಮೂಹಕ್ಕೆಂದೇ ಆಯೋಜಿತವಾದ 'ಬಾನುಲಿ ಪಾಠ'ಗಳ ಸರಣಿ ಶುರುವಾದವು. ದೂರವಾಣಿ ಮುಖೇನ ಕೇಳುಗರೊಂದಿಗೆ ನೇರ ಮುಖಾಮುಖಿಯನ್ನು ಆಧರಿಸಿದ ವಿಶೇಷ ಕಾರ್ಯಕ್ರಮಗಳು ಕಾಲಿಟ್ಟವು. ವಾರ್ತೆಗಳ ಸ್ಥಾನದಲ್ಲಿ ವಾರ್ತಾ ಸಂಚಿಕೆಗಳು ರೂಪುಗೊಂಡವು. ಯಾರೂ ಕೇಳಲಾಗದಿದ್ದ ಶಾಲಾ ಪ್ರಸಾರಕ್ಕೆ ಬದಲಾಗಿ ಎಲ್ಲರೂ ಕೇಳಬಹುದಾದ ಸಂಪನ್ನೀಕರಣ (Enrichment) ಕಾರ್ಯಕ್ರಮಗಳು ರೂಪಿತಗೊಂಡವು. ಆಹ್ವಾನಿತ ಶ್ರೋತೃಗಳ ಸಮ್ಮುಖದ ಕಾರ್ಯಕ್ರಮಗಳೂ ಹೆಚ್ಚಿದವು. ಎಲ್ಲಕ್ಕಿಂತ ಮುಖ್ಯವಾಗಿ ಔಪಚಾರಿಕವಾಗಷ್ಟೇ ಉಳಿದುಬಿಟ್ಟಿದ್ದ ಆಕಾಶವಾಣಿಯ ಶ್ರೋತೃ ಸಂಶೋಧನಾ ವಿಭಾಗಗಳು ಹೆಚ್ಚು ಕ್ರಿಯಾಶೀಲಗೊಂಡವು. ಹತ್ತು ವರ್ಷಗಳಲ್ಲಿ ಇಂತಹ ಪ್ರಯೋಗಗಳ ಮೂಲಕ ಆಕಾಶವಾಣಿ ತನ್ನನ್ನು ಪುನರುಜ್ಜೀವಗೊಳಿಸಿಕೊಳ್ಳುವ ಪ್ರಯತ್ನ ಮಾಡಿ, ಚೆಲ್ಲಾಪಿಲ್ಲಿಯಾಗಿದ್ದ ತನ್ನ ಕೇಳುಗ ವರ್ಗವನ್ನು ಪುನರ್ ಸಂಘಟಿಸಿಕೊಳ್ಳುವ ಹಾದಿಯಲ್ಲಿದೆ. ಆದರೆ ಈ ಹಾದಿ ಸಾಕಷ್ಟು ಉದ್ದವಿದೆ ಎಂಬುದಂತೂ ನಿಜ. ಏಕೆಂದರೆ ಬಹು ಮಾಧ್ಯಮ ಸ್ಪರ್ಧೆ ಇಂದು ಅಷ್ಟು ಬಿರುಸಾಗಿದೆ.

ಇದೆಲ್ಲವೂ ಬಾನುಲಿ ತನ್ನನ್ನು ಪುನರುಜ್ಜೀವಗೊಳಿಸಿಕೊಳ್ಳುವ ಹೊಸ ಹೊಂದಾಣಿಕೆಯ ಪ್ರಯತ್ನಗಳಾದರೆ, ತನ್ನನ್ನು ಪುನರನ್ವೇಷಿಸಿಕೊಳ್ಳುವ ಸೃಜನಶೀಲ ಪ್ರಯತ್ನವೊಂದು ಕಳೆದ ಹತ್ತು ವರ್ಷಗಳಲ್ಲಿ ಸದ್ದಿಲ್ಲದೆ ನಡೆದಿದೆ. ಅದೇ ಸ್ಥಳೀಯ ಪ್ರಸಾರ (Local Broadcasting). ಪುನರುಜ್ಜೀವನ ಪ್ರಯತ್ನಗಳು ಹಳೆಯ ತತ್ತ್ವವನ್ನೇ ಹೊಸಕಾಲದ ಬೇಡಗುಗಳೊಂದಿಗೆ ಮಂಡಿಸುವುದಕ್ಕಷ್ಟೇ ಸೀಮಿತವಾದರೆ, ಸ್ಥಳೀಯ ಬಾನುಲಿ ಕೇಂದ್ರಗಳ ಪರಿಕಲ್ಪನೆ ಒಂದು ಹೊಸ ಸಂಪರ್ಕ ತತ್ತ್ವವನ್ನೇ ಆಧರಿಸಿದ್ದು. ಬಾನುಲಿ ಪ್ರಸಾರವನ್ನು ಒಂದು ಸಾಮುದಾಯಿಕ ಚಟುವಟಿಕೆಯನ್ನಾಗಿ ಮಾಡುವ ಉದ್ದೇಶವುಳ್ಳ ಈ ತತ್ತ್ವ ಹತ್ತು - ಹನ್ನೆರಡು ವರ್ಷಗಳ ಹಿಂದೆ ಭಾರತದ ಬಾನುಲಿ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಪರಿಚಯಗೊಂಡಿತು. ಈ ಹಿಂದೆ ತಮಿಳುನಾಡಿನ ನಾಗರ್ ಕೋಯಿಲ್‌ನಂತಹ ಊರುಗಳಲ್ಲಿ ಕಡಿಮೆ ಸಾಮರ್ಥ್ಯದ ಪ್ರೇಷಕಗಳ ಮೂಲಕ ಇಂತಹ ಪ್ರಯೋಗ ಆರಂಭವಾಗಿದ್ದರೂ, ಒಂದು ಆಂದೋಲನದ ರೂಪದಲ್ಲಿ ಆರಂಭವಾದದ್ದು ಕಳೆದ ಶತಮಾನದ ಕೊನೆಯ ದಶಕದಲ್ಲೇ. ಹೊಸದಾಗಿ ಪರಿಚಯವಾದ, ಸೀಮಿತ ಪ್ರದೇಶದಲ್ಲಿ ಸ್ಪಷ್ಟ ಪ್ರಸಾರವನ್ನು ಖಚಿತಗೊಳಿಸುವ ಎಫ್.ಎಂ. ತಂತ್ರಜ್ಞಾನವೂ ಇದಕ್ಕೆ ಪೂರಕವಾಯಿತು. ಎಫ್.ಎಂ. ತಂತ್ರಜ್ಞಾನದ ಪರಿಚಯದಿಂದ ಸ್ಥಳೀಯ ಬಾನುಲಿ ಕೇಂದ್ರಗಳ ಪರಿಕಲ್ಪನೆ ಹುಟ್ಟಿಕೊಂಡಿತೋ ಅಥವಾ ಸ್ಥಳೀಯ ಬಾನುಲಿ ಕೇಂದ್ರಗಳ ಪರಿಕಲ್ಪನೆಗೆ ಸೂಕ್ತವಾದುದೆಂದು ಎಫ್.ಎಂ. ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಯಿತೋ ತಿಳಿಯದು. ಅದೇನೇ ಇರಲಿ, ಸ್ಥಳೀಯ ಕೇಂದ್ರಗಳ ಪರಿಕಲ್ಪನೆ ಪಾಶ್ಚಿಮಾತ್ಯ ದೇಶಗಳಿಂದ

ಎರವಲು ಪಡೆದದ್ದೇ ಆಗಿರಲಿ, ಈ ಆಂದೋಲನ ಭಾರತದ ಬಾನುಲಿ ಕ್ಷೇತ್ರದಲ್ಲಿ ಒಂದು ಮಹಾನ್ ಪ್ರಯೋಗವೇ ಸರಿ. ಬಾನುಲಿ ಎಂಭತ್ತರ ದಶಕದಲ್ಲಿ ಎದುರಿಸಿದ ಮಹಾನ್ ಬಿಕ್ಕಟ್ಟಿನ ಸಮಯದಲ್ಲಿ, ಸವೆದ ಹಾದಿಯಲ್ಲೇ ಹೊಸ ಹೆಜ್ಜೆಗಳನ್ನು ಮೂಡಿಸುವ ತತ್ಕಾಲೀನ ಕ್ರಮಗಳ ಯಶಸ್ಸಿನ ಬಗ್ಗೆ ಮೂಡುತ್ತಿದ್ದ ಆತಂಕದ ಮಧ್ಯೆ ಈ ಪರಿಕಲ್ಪನೆ, ವೃತ್ತಿಪರ ಪ್ರಸಾರಕರಲ್ಲಿ ಹೊಸ ಭರವಸೆ ಮೂಡಿಸಿದ್ದಂತೂ ನಿಜ.

೪

ಹತ್ತು ವರ್ಷಗಳ ಹಿಂದೆ ರಾಷ್ಟ್ರಾದ್ಯಂತ ಸ್ಥಾಪಿತವಾದ ಸ್ಥಳೀಯ ಬಾನುಲಿ ಕೇಂದ್ರಗಳಲ್ಲಿ ಚಿತ್ರದುರ್ಗವೂ ಒಂದು. ಕರ್ನಾಟಕದ ಮೊದಲ ಸ್ಥಳೀಯ ಬಾನುಲಿ ಕೇಂದ್ರವಿದು. ಇದರ ಜೊತೆಗೀಗ ಹೊಸಪೇಟೆ, ರಾಯಚೂರು, ಕಾರವಾರ ಹಾಗೂ ಬಿಜಾಪುರಗಳಲ್ಲಿಯೂ ಸ್ಥಳೀಯ ಬಾನುಲಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಸ್ಥಳೀಯ ಬಾನುಲಿ ಕೇಂದ್ರವೆಂದರೇನು ಎಂದು ಈವರೆಗೆ ಯಾರೂ ಅಧಿಕೃತವಾಗಿ ವ್ಯಾಖ್ಯಾನ ಮಾಡಿಲ್ಲವಾದರೂ, ಈ ಸ್ಥಳೀಯ ಕೇಂದ್ರಗಳು, ಸ್ಥಳೀಯ ವಿದ್ಯಮಾನಗಳಿಗೆ, ಸ್ಥಳೀಯ ಸಮುದಾಯದ ಸಾಮಾಜಿಕ ಆರ್ಥಿಕ - ಸಾಂಸ್ಕೃತಿಕ ಆಶೋತ್ತರಗಳು ಹಾಗೂ ಮಾಧ್ಯಮ ಅಗತ್ಯಗಳಿಗೆ ಸ್ಪಂದಿಸಬೇಕು ಎಂಬ ಸ್ಥೂಲ ಮಾರ್ಗದರ್ಶನ ಸೂತ್ರಗಳಿಗೆ ಅನುಗುಣವಾಗಿ ಈ ಬಾನುಲಿ ಕೇಂದ್ರಗಳು ಈವರೆಗೆ ಕೆಲಸ ಮಾಡುತ್ತಾ ಬಂದಿವೆ. ಚಿತ್ರದುರ್ಗ ಕೇಂದ್ರದ ಸಹಾಯಕ ನಿಲಯನಿರ್ದೇಶಕನಾಗಿ ಕಳೆದ ಎರಡು ವರ್ಷಗಳ ಅನುಭವದ ಆಧಾರದ ಮೇಲೆ ಹೇಳುವುದಾದರೆ, ಸ್ಥಳೀಯ ಕೇಂದ್ರವೆಂದರೆ ಬಾನುಲಿ ಮಾಧ್ಯಮ ತನ್ನನ್ನು ತಾನು ಪುನರನ್ವೇಷಿಸಿಕೊಳ್ಳುವ ಅಪಾರ ಸಾಧ್ಯತೆಗಳಿರುವ ಒಂದು ಪ್ರಯೋಗ ಕ್ಷೇತ್ರ. ಧ್ವನಿಮಾಧ್ಯಮ ಇಲ್ಲಿ ನಿಜವಾಗಿ, ನಿಜಾರ್ಥದಲ್ಲಿ ಮಣ್ಣಿನ ಬಣ್ಣ, ಬೆಡಗು, ವಾಸನೆ ಗಳೊಂದಿಗೆ ತನ್ನನ್ನು ತಾನು ಕಂಡುಕೊಳ್ಳುವ ತವಕದಲ್ಲಿದೆ. ಯಾರಿಗೆ ಬಾನುಲಿ ಮಾಧ್ಯಮ ಈವರೆಗೆ ತನ್ನ ಮಾದರೀಕೃತ ಭಾಷೆ, ಕಾರ್ಯಕ್ರಮ, ಉದ್ದೇಶಗಳಿಂದಾಗಿ ಹಾಗೂ ತನ್ನ ಪಾರಂಪರಿಕ ಪ್ರತಿಷ್ಠೆ ಹಾಗೂ ಔಪಚಾರಿಕತೆಗಳಿಂದಾಗಿ ದೂರದ ಕುಸುಮವಾಗಿತ್ತೋ, ಅವರಿಗೇ ಇಂದು ಅದು ಸ್ಥಳೀಯ ಕೇಂದ್ರಗಳ ರೂಪದಲ್ಲಿ ಮೀಸಲಾಗಿದೆ. ಇಲ್ಲಿ ಹಳ್ಳಿಗರಂತೆ ಮಾತಾಡುವವರಿಲ್ಲ; ಹಳ್ಳಿಗರೇ ಇಲ್ಲಿ ಮಾತನಾಡುತ್ತಾರೆ - ಮಹಿಳೆ, ಮಕ್ಕಳು, ವೃದ್ಧರು, ಯುವಜನರು, ರೈತರು, ಕಸುಬುದಾರರು, ಕಲಾವಿದರು ಎಲ್ಲರೂ.. ಭಾರವಾದ, ರಾಷ್ಟ್ರೀಯ, ರಾಜ್ಯಮಟ್ಟದ ಅಥವಾ ಜಿಲ್ಲಾಮಟ್ಟದ ವಿಷಯಗಳ ಬಗ್ಗೆ ಅಲ್ಲ; ತಮ್ಮ ಊರು, ಕೇರಿ, ಕುಟುಂಬ, ಗಂಡ-ಹೆಂಡತಿ-ಮಕ್ಕಳು-ಮದುವೆ, ಹೊಲ-ಗದ್ದೆ, ಕೆರೆ-ಹಳ್ಳ, ಊಟ-ತಿಂಡಿ, ಶಾಲೆ -ಮೇಸ್ಟ್ರು, ಕಸುಬು ಹವ್ಯಾಸ, ಸಾಲ-ಸೋಲ, ಸಾಹಸ, ಚಟ-ಹಠ ಇತ್ಯಾದಿಗಳ ಬಗ್ಗೆ. ಬಾನುಲಿ ಯಿಂದ ಈಗ ಕಾಣೆಯಾಗಿಯೇ ಬಿಟ್ಟಿರುವ ಆಡುಮಾತಿನ ಸೊಗಸು ಇಲ್ಲಿ ನಮ್ಮ ಹೊರಾಂಗಣ ಧ್ವನಿಮುದ್ರಣ ಕಾರ್ಯಕ್ರಮಗಳ ಮೂಲಕ - 'ಮಂದಾರ', 'ಜನಪದರೊಡನೆ', 'ನಮ್ಮ ಹಳ್ಳಿ',

‘ಕಷ್ಟ - ಸುಖ’, ‘ಪರಿಚಯ’, ‘ಬಾ ಬಾ ಬಾನುಲಿ’, ‘ಚಿಗುರು’, ‘ಯುವತರಂಗ’ ಇತ್ಯಾದಿ - ಮತ್ತೆ ಜೀವ ಪಡೆಯುತ್ತಿದೆ. ಚಲಿಸುವ ಧ್ವನಿ ಗ್ರಾಹಕದ ರೂಪದಲ್ಲಿ ತನ್ನ ಹಳ್ಳಿಗೇ, ತನ್ನ ಕೇರಿಗೇ, ತನ್ನ ಮನೆ ಬಾಗಿಲು ಅಥವಾ ಹೊಲದ ಬಳಿಯೇ ಬರುವ ಈ ಬಾನುಲಿ, ಸ್ಥಳೀಯ ಕೇಂದ್ರವನ್ನು ಒಂದು ಹೃದಯ ಸಂವಾದ ಕೇಂದ್ರವನ್ನಾಗಿ ಪರಿವರ್ತಿಸಿಬಿಟ್ಟಿದೆ.

ಹೃದಯ ಸಂವಾದ ಯಾರಿಗೆ ಬೇಡ? ಎಲ್ಲರ, ಎಲ್ಲದರ ಮಧ್ಯೆಯೂ ಒಂಟಿಯಾಗಿ ಬಿಟ್ಟಿರುವಂತೆ ತೋರುವ ಜನಸಾಮಾನ್ಯರಿಗೆ ತನ್ನ ಕಷ್ಟ - ಸುಖ, ಆಸೆ - ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಇಂದು ಆತ್ಮೀಯ ಗೆಳೆಯನೊಬ್ಬ ಬೇಕಾಗಿದ್ದಾನೆ. ಅಂತಹ ಗೆಳೆಯನ ಪಾತ್ರ ವನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ನಮ್ಮ ಬಾನುಲಿ ಜಿಲ್ಲೆಯ ಗ್ರಾಮೀಣ ಹೃದಯ ವನ್ನು ಅದರೆಲ್ಲ ಹಚ್ಚತೆ, ಆರ್ದ್ರತೆ, ಮುಗ್ಧತೆ, ವಿಷಾದ, ಅಸಹಾಯಕತೆ, ಆತ್ಮವಿಶ್ವಾಸ, ಉಡಾಫೆ ಹಾಗೂ ಆನಂದಗಳೊಂದಿಗೆ ತನ್ನ ಕೇಳುಗರ ಮುಂದೆ ಬಚ್ಚಿಟ್ಟಿದೆ. ಇದು ಸಾಧ್ಯವಾಗಿರುವುದು ಇಲ್ಲಿನ ಜನಸಾಮಾನ್ಯರ ಮುಚ್ಚುಮರೆಯಿಲ್ಲದ ಮಾತಿನ ಪರಿ ಹಾಗೂ ನಮ್ಮ ಸಿಬ್ಬಂದಿಯ ಅನೌಪಚಾರಿಕ ಕಾರ್ಯನಿರ್ವಹಣಾ ಶೈಲಿಯಿಂದ. ಇದೆಲ್ಲದರ ಜೊತೆಗೆ ಅಗತ್ಯ ಮಾಹಿತಿ ಆಧಾರಿತ ಕಾರ್ಯಕ್ರಮಗಳು ಒಂದಿಷ್ಟು, ಸಾಹಿತ್ಯ - ಸಂಸ್ಕೃತಿ, ಸ್ಥಳೀಯ ಜನಪದ ಸಂಗೀತ ಹಾಗೂ ಹಿತಮಿತವಾದ ಇತರೆ ಮನರಂಜನಾ ಕಾರ್ಯಕ್ರಮಗಳು, ಜನತೆಗೆ ತಕ್ಕಂತೆ ಇಲ್ಲಿ ಬಾನುಲಿ. ಹೀಗಾಗಿ ಚಿತ್ರದುರ್ಗ ಬಾನುಲಿ ಕೇಂದ್ರ ಸದ್ಯಕ್ಕೆ ಜಿಲ್ಲೆಯ ಕೆಲವು ಭಾಗದ ಜನತೆಯ ಮಟ್ಟಿಗಾದರೂ ಆತ್ಮೀಯ ಮಿತ್ರನಂತಾಗಿದೆ. ಸಾಗಬೇಕಾದ ಹಾದಿ ಇನ್ನೂ ಸಾಕಷ್ಟು ದೂರವಿದೆ ಯಾದರೂ, ಹಾದಿಯ ದಿಕ್ಕುದೆಸೆ ಗೊತ್ತಾಗಿರುವ ಸಂತೋಷ ಸಂಭ್ರಮ ನಮ್ಮದಾಗಿದೆ.

ಹಾಗೆ ನೋಡಿದರೆ ಇದೆಲ್ಲ ಸಾಧ್ಯವಾಗುವುದು ಅತಿ ಔಪಚಾರಿಕತೆಗಳಿಲ್ಲದ ಭಾರವಾದ ಉದ್ದೇಶಗಳಿಲ್ಲದ, ವೈವಿಧ್ಯಮಯ ಕರ್ತವ್ಯಗಳ ಜಂಜಡ ಇಲ್ಲದ ಮತ್ತು ಪರಿಮಿತ ಪ್ರದೇಶ ಹಾಗೂ ಜನವ್ಯಾಪ್ತಿಯಲ್ಲಷ್ಟೇ ಪ್ರಸಾರ ಸೇವೆ ಒದಗಿಸಬೇಕಾಗಿರುವ ಸ್ಥಳೀಯ ಬಾನುಲಿ ಕೇಂದ್ರಗಳಲ್ಲಿ ಮಾತ್ರವೇನೋ. ಹಾಗೆಂದೇ ಸ್ಥಳೀಯ ಬಾನುಲಿ ಕೇಂದ್ರಗಳು ಬಾನುಲಿ ಮಾಧ್ಯಮದ ಹೊಸ ಶಕ್ತಿ ಕೇಂದ್ರಗಳಂತೆ ಕಾರ್ಯ ನಿರ್ವಹಿಸಿ ಮಾಧ್ಯಮಕ್ಕೆ ಹೊಸ ಆತ್ಮವಿಶ್ವಾಸ, ವಿಶ್ವಾಸಾರ್ಹತೆ ಹಾಗೂ ಸಾರ್ಥಕ್ಯಗಳನ್ನು ಒದಗಿಸಬಲ್ಲುವಾಗಿವೆ. ಇದನ್ನರಿತು ಬಾನುಲಿ ಆಡಳಿತಗಾರರು ಹಾಗೂ ನಿರ್ವಾಹಕರು ಸ್ಥಳೀಯ ಕೇಂದ್ರಗಳ ಪರಿಕಲ್ಪನೆಯನ್ನು ಬಲಪಡಿಸು ವಂತಹ ವಿಚಾರಾತ್ಮಕ ಹಾಗೂ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಂಡು ಸ್ಥಳೀಯ ಕೇಂದ್ರ ಗಳಲ್ಲಿನ ಮೂಲ ಸೌಲಭ್ಯ, ತಾಂತ್ರಿಕ ಸಮರ್ಪಕತೆ ಹಾಗೂ ಸಿಬ್ಬಂದಿ ತರಬೇತಿ - ಸುಧಾರಣೆ ಕಡೆ ಗಮನ ಹರಿಸಬೇಕಿದೆ. ಕಾರ್ಯಕ್ರಮ ಸಂಯೋಜಕರೂ ಪಾರಂಪರಿಕ ಪ್ರತಿಷ್ಠೆ ಹಾಗೂ ಔಪಚಾರಿಕತೆಗಳನ್ನು ತಮ್ಮ ಕಾರ್ಯಶೈಲಿಯಲ್ಲಿ ಕೈಬಿಟ್ಟು, ಕಾರ್ಯಕ್ರಮ ಸಂಯೋಜನೆಯ ಕೆಲಸ ಒಂದು ಸಾಮುದಾಯಿಕ ಚಟುವಟಿಕೆ ಎಂಬಂತೆ ನಿರ್ವಹಿಸುವ ಕಲೆ - ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕಾಗಿದೆ. ಹಾಗೂ ಅದರಿಂದ ದೊರಕುವ ವಿಶಿಷ್ಟ ಮಾಧ್ಯಮ ಆನಂದವನ್ನು ಸವಿಯಬೇಕಾಗಿದೆ. ಹಾಗೇ ಕೇಳುಗರೂ ಕೂಡಾ ಸ್ಥಳೀಯ ಕೇಂದ್ರಗಳ ಉದ್ದೇಶ - ವೈಶಿಷ್ಟ್ಯಗಳಿಗೆ

ಹೊರತಾದ 'ಭಾರಿ' ಕಾರ್ಯಕ್ರಮಗಳ ಅಪೇಕ್ಷೆಗಳನ್ನು ಕೇಂದ್ರದ ಮೇಲೆ ಹೇರದಂತೆ ಎಚ್ಚರಿಕೆ ವಹಿಸಬೇಕಿದೆ.

ಭಾರತದ ಬಾನುಲಿ ವ್ಯವಸ್ಥೆಯಲ್ಲಿ ಸ್ಥಳೀಯ ಬಾನುಲಿ ಕೇಂದ್ರಗಳ ಸಂಸ್ಕೃತಿ ಇನ್ನೂ ನಿರ್ಮಾಣ ಹಂತದಲ್ಲಿದೆ. ಆಡಳಿತಗಾರರ ಹಾಗೂ ಕೆಲಸಗಾರರ ನಡುವಣ ಪರಸ್ಪರ ಸಂಪರ್ಕ, ಸಮನ್ವಯ ಹಾಗೂ ಬದ್ಧತೆಗಳು, ಈಗ ಚಿಗುರೊಡೆಯುತ್ತಿರುವ ಈ ಹೊಸ ಬಾನುಲಿ ಸಂಸ್ಕೃತಿಯನ್ನು ಪೋಷಿಸಿ ಅರಳಿಸಬಲ್ಲವು. ಇದು ಸಾಧ್ಯವಾದಾಗ, ಬಹುಮಾಧ್ಯಮ ಆಯಾಸ ದಿಂದ ಈಗಾಗಲೇ ಬಳಲಲಾರಂಭಿಸಿರುವ ಸಾಮಾನ್ಯ ಭಾರತೀಯ ಪ್ರಜೆ, ಬಾನುಲಿಯಲ್ಲಿ ತನ್ನ ಸರಳ, ನೆಮ್ಮದಿಯ ಸಮೂಹ ಮಾಧ್ಯಮವನ್ನು ಕಂಡುಕೊಂಡಾನು.

❑

(ಚಿತ್ರದುರ್ಗ ಆಕಾಶವಾಣಿ ಕೇಂದ್ರದ ಕೇಳುಗರ ಒಕ್ಕೂಟವು ಕೇಂದ್ರದ ದಶಮಾನೋತ್ಸವ ಸಂದರ್ಭದಲ್ಲಿ ಹೊರತಂದ 'ದುರ್ಗದ ಬಾನುಲಿ : ೧೦' ಸ್ಮರಣಸಂಚಿಕೆಗಾಗಿ ಬರೆದ ಲೇಖನ - ೨೦೦೧)

ಐದು ಪ್ರತಿಕ್ರಿಯೆಗಳು

ಪತ್ರಿಕೆಗಳಲ್ಲಿ ಪ್ರಕಟವಾಗುವ ವಿವಿಧ ಸಾಹಿತ್ಯಿಕ - ಸಾಂಸ್ಕೃತಿಕ ವಿದ್ಯಮಾನಗಳಿಗೆ, ಚರ್ಚೆಗಳಿಗೆ ನಾನು ಆ ಪತ್ರಿಕೆಗಳ ಮೂಲಕವೇ ನೀಡಿದ ಪ್ರತಿಕ್ರಿಯೆಗಳು ಇಲ್ಲಿವೆ. ಈ ಪ್ರತಿಕ್ರಿಯೆಗಳಲ್ಲೇ ಮೂಲ ವಿದ್ಯಾಮಾನದ / ಸಂಗತಿಗಳ ವಿವರಗಳು ಅಡಕಗೊಂಡಿವೆ.

– ಲೇಖಕ

‘ಅವಸ್ಥೆ’ ಮತ್ತು ‘ಕುಸುಮಬಾಲೆ’: ಎರಡು ಪ್ರತಿಕ್ರಿಯೆಗಳು

ಗೆಳೆಯ ಮಾಸಡಿಯ ಚಿತ್ರ ‘ಅವಸ್ಥೆ’ ನ್ಯಾಯಾಲಯಗಳ ಬಾಗಿಲು ದಾಟಿ ಈಗ ಮತ್ತೆ ಬಿಡುಗಡೆಗೊಂಡಿದೆ. ಮೊದಲು ಬಿಡುಗಡೆಗೊಂಡು ಎರಡೇ ದಿನಗಳು ಪ್ರದರ್ಶಿತವಾದ ಕಾರಣ ಬಹಳ ಜನ ನೋಡಿರಲಿಕ್ಕಾಗಿರಲಿಲ್ಲ. ಆದುದರಿಂದಲೇ, ಶ್ರೀಮತಿ ಗೋಪಾಲ ಗೌಡರ ವಾದ ಸರಿಯೇ, ಅನಂತಮೂರ್ತಿ ಮಾಸಡಿಯವರ ವಾದ ಸರಿಯೇ ಎಂದು ತಿಳಿಯಲು ಆ ಬಗ್ಗೆ ಕುತೂಹಲವಿದ್ದ ಬಹಳ ಜನಕ್ಕೆ ಸಾಧ್ಯವಾಗಿರಲಿಲ್ಲ. ಶ್ರೀಮತಿ ಗೋಪಾಲಗೌಡರ ವಾದ ನೇರ, ಸರಳ ಹಾಗೂ ಸ್ಪಷ್ಟವಾಗಿತ್ತು. ಗೋಪಾಲಗೌಡರ ಅಭಿಮಾನಿಗಳು ಮಂಡಿಸಿದ ವಾದ ವ್ಯಕ್ತಿನಿಷ್ಠವಾದುದೂ, ಅಭಿಮಾನ ಪ್ರೇರಿತವಾದುದೂ ಕೆಲವೊಮ್ಮೆ ಅತಿಶಯದಿಂದ ಕೂಡಿದುದು ಆಗಿದೆ ಎನ್ನಿಸಿದರೂ, ಚಿತ್ರ ನೋಡದ ಹೊರತು ಅವರ ನೋವು ವೈಚಾರಿಕ ನೆಲೆಗಳಿಂದ ಹುಟ್ಟಿದುದೋ ಅಲ್ಲವೋ ಎಂದು ಹೇಳಲಾಗುತ್ತಿರಲಿಲ್ಲ. ಹಾಗೆಯೇ ಅನಂತಮೂರ್ತಿ - ಮಾಸಡಿಯರ ನಿವೇದನೆಗಳನ್ನು ಕೂಡಾ.

ಆದರೆ ಈಗ ಚಿತ್ರ ಸಾರ್ವಜನಿಕ ಪ್ರದರ್ಶನಕ್ಕಿದೆ. ಚಿತ್ರದ ಗುಣಮಟ್ಟದ ಬಗ್ಗೆ ಇಲ್ಲಿ ಹೇಳಬೇಕಾದ ಅಗತ್ಯವಿಲ್ಲ. ಹಳ್ಳಿ ಕೊಂಪೆಯೊಂದರಿಂದ ಬೆಂಗಳೂರಿಗೆ ಬಂದು ಹಲವು ಕನಸು - ಹುಚ್ಚುಗಳನ್ನು ಹತ್ತಿಸಿಕೊಂಡು ಬೆಂಗಳೂರು ನಗರಜೀವನದಲ್ಲಿ ಮುಳುಗಿ ತೇಲಿದ ಗೆಳೆಯ ಮಾಸಡಿ ಅದ್ಭುತ ಚಿತ್ರವನ್ನೇನೂ ಮಾಡಿರದಿದ್ದರೂ, ಎಪ್ಪತ್ತರ ದಶಕದಲ್ಲಿ ಕನ್ನಡದಲ್ಲಿ ಕಂಡುಬಂದ ಹೊಸ ಅಲೆಯ ಚಿತ್ರಗಳಂತೆ ಈ ಚಿತ್ರವೂ ತೇಪೆ ತೇಪೆಯಾಗಿ ಕಂಡರೂ, ಸ್ವಲ್ಪ ವಿಭಿನ್ನವಾಗಿದ್ದು ಕುತೂಹಲ ಹುಟ್ಟಿಸುವಂತಿದೆ. ಆದರೆ ಈ ಚಿತ್ರ ಗೋಪಾಲಗೌಡರನ್ನು ಕುರಿತ ಚಿತ್ರವಲ್ಲವೆಂದೂ, ಆದುದರಿಂದ ಶ್ರೀಮತಿ ಗೋಪಾಲ ಗೌಡರಿಗೆ ಹಾಗೂ ಗೋಪಾಲ ಗೌಡರ ಅಭಿಮಾನಿಗಳಿಗೆ ನೋವಾಗುವ ಪ್ರಮೇಯವೇ ಇಲ್ಲವೆಂದೂ ನಂಬುವುದು ಚಿತ್ರ ನೋಡಿದವರಿಗೆ ಕಷ್ಟವೆನಿಸುತ್ತದೆ.

ಅನಂತಮೂರ್ತಿಯವರು ತಮ್ಮ ಪರವಾಗಿ ಪತ್ರಿಕಾ ಹೇಳಿಕೆಗಳ ಮೂಲಕ, ಸಂಪಾದಕರ *(ರುಜುವಾತು)* ಟಿಪ್ಪಣಿಗಳ ಮೂಲಕ ಹಾಗೂ ನ್ಯಾಯಾಲಯದಲ್ಲಿನ ವಾದಗಳ ಮೂಲಕ ಅನೇಕ ನೆಲೆಗಳಲ್ಲಿ ವಾದವನ್ನು ಮಂಡಿಸಿದ್ದಾರೆ. ಚಿತ್ರ ನೋಡಿದ ಬಳಿಕ ನಮಗೆ ಅನಂತಮೂರ್ತಿ ಈ ವಾದಗಳ ಮೂಲಕ ಕೇವಲ ಲಾಯರ್‌ರಂತೆ, ಬಹಳ ಬುದ್ಧಿವಂತರಾದ ಲಾಯರ್‌ರಂತೆ ಕಾಣುತ್ತಾರೆ. ಏಕೆಂದರೆ ಚಿತ್ರದಲ್ಲಿ ಬರುವ ಕೃಷ್ಣಪ್ಪನ ಕಾಲ, ಕೌಟುಂಬಿಕ ಹಿನ್ನೆಲೆ, ಆಸಕ್ತಿ, ವಿದ್ಯಾಭ್ಯಾಸ, ಸಹವಾಸ, ಚಳುವಳಿ, ರಾಜಕೀಯ ನಾಯಕತ್ವದ ಎಲ್ಲ ವಿವರಗಳೂ, ಘಟನೆಗಳೂ ಗೋಪಾಲ ಗೌಡರ ಬಗ್ಗೆ ನಾವು ತಿಳಿದ, ಕೇಳಿದ ವಿವರ, ಘಟನೆಗಳೇ ಆಗಿವೆ. ಅಷ್ಟೇ ಅಲ್ಲ, ಚಿತ್ರದಲ್ಲಿ ಬರುವ ಕೃಷ್ಣಪ್ಪನ ಹೆಂಡತಿ ನೋಡುವುದಕ್ಕೆ ಶ್ರೀಮತಿ ಗೋಪಾಲ ಗೌಡರಂತೆಯೇ

ಕಾಣುತ್ತಾರೆ. ಆದರೂ ನಾವು ಇದನ್ನು ಗೋಪಾಲ ಗೌಡರನ್ನು ಕುರಿತು ವ್ಯಾಖ್ಯಾನ ಮಾಡುವ ಚಿತ್ರವಲ್ಲವೆಂದು ನಂಬಬೇಕು! ಯಾಕೆಂದರೆ ಓರ್ವ ಬರೆಹಗಾರನ ಸೃಜನಶೀಲ ಸ್ವಾತಂತ್ರ್ಯವನ್ನು ಪ್ರಶ್ನಿಸುವುದು ಅವಿವೇಕವಾದೀತಲ್ಲವೇ?

ಆದರೆ ಇಲ್ಲಿ ಬರೆಹಗಾರನೊಬ್ಬನ ಸೃಜನಶೀಲತೆಯ ಸ್ವಾತಂತ್ರ್ಯಕ್ಕಿಂತ ಮಹತ್ವದ್ದಾದ, ಪವಿತ್ರವೆನಿಸುವ, ಒಂದು ಕುಟುಂಬದ ಖಾಸಗಿ ಬದುಕಿನ ಪ್ರಶ್ನೆಯಿದೆ. ಚಿತ್ರದ ನಿರ್ಣಯಾತ್ಮಕ ವಿವರಗಳೆಲ್ಲವೂ ಗೋಪಾಲ ಗೌಡರ ಬದುಕಿನ ಕಡೆಗೇ ಬೊಟ್ಟು ಮಾಡುವಂತಿರುವಾಗ, ಶ್ರೀಮತಿ ಗೋಪಾಲ ಗೌಡರಿಗಾಗಲೀ ಅಥವಾ ಗೋಪಾಲ ಗೌಡರ ಅಭಿಮಾನಿಗಳಿಗಾಗಲೀ 'ಇದು ಕಲೆ; ಇದರಲ್ಲಿ ನಿಮಗೆ ನೋವಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಹೇಳುವುದು ಆತ್ಮ ವಂಚನೆ ಮಾತ್ರ ಆಗುತ್ತದೆ. ಕಲೆಯ ಹೆಗ್ಗುರುತು ಹೃದಯವಂತಿಕೆಯೇ ಹೊರತು ಬುದ್ಧಿವಂತಿಕೆಯಲ್ಲ.

ಚಿತ್ರ ಮಾಡಿದವರು ಚಿತ್ರದ ಆರಂಭದಲ್ಲಿ, ಚಿತ್ರದ ವಸ್ತು ಕಾಲ್ಪನಿಕವಾದುದೆಂದೂ ಇದರಲ್ಲಿ ಬರಬಹುದಾದ ಹೋಲಿಕೆಗಳು ಕಾಕತಾಳೀಯವೆಂದೂ ಹೇಳುವ ಮೂಲಕ ಕೈತೊಳೆದುಕೊಂಡಿರುವರಾದರೂ, ಅವರು ತೊಳೆದುಕೊಂಡಿರುವುದು ಕೈಗಳನ್ನು ಮಾತ್ರ ಎಂಬುದು ಚಿತ್ರದುದ್ದಕ್ಕೂ ಸಾಬೀತಾಗಿದೆ. ಇನ್ನೂ ಚರಿತ್ರೆಯಾಗಿ ಮಾಗದ ಪರಿಘಟನೆಯನ್ನು ಸೃಜನಶೀಲ ಸ್ವಾತಂತ್ರ್ಯದ ಧ್ವಜದಡಿಯಲ್ಲಿ ದಾರ್ಶನೀಕರಿಸ ಹೊರಡುವ ಬೌದ್ಧಿಕ ಹಾತೊರಿಕೆಯ ಫಲ ಇದಿರಬಹುದು.

ಹೀಗೆಯೇ ಇನ್ನೊಂದು ತೆರನಾಗಿ, ಸೃಜನಶೀಲ ಸ್ವಾತಂತ್ರ್ಯದ ಧ್ವಜದ ನೆರಳಿನಲ್ಲಿ ತಪಸ್ಸಿಗೆ ಕೂತಂತೆ ಕೂತು ಇತ್ತಿತ್ತಲಾಗಿ ಎಲ್ಲರನ್ನೂ ಕಂಗೆಡಿಸಿರುವ ಕೃತಿ ದೇವನೂರ ಮಹಾದೇವರ 'ಕುಸುಮಬಾಲೆ'. ಮಹಾದೇವ ಇದನ್ನು ವರ್ಷಾನುಗಟ್ಟಲೆ ಹೊಟ್ಟೆಯಲ್ಲಿಟ್ಟು ಕೊಂಡು ಎಲ್ಲರ ಕುತೂಹಲ ಕೆರಳಿಸಿದ್ದರು. ಈಗ ಕುತೂಹಲ ಮತ್ತೂ ಹೆಚ್ಚಾಗಿದೆ; ಯಾವ ಧೀರ ಮೊದಲು ಈ ಕಥಾಕಾವ್ಯವನ್ನು ಅರಗಿಸಿಕೊಂಡು ವಿಜಯದ ನಗೆ ಬೀರುತ್ತಾನೋ ಎಂದು ನೋಡಲು!

'ಕುಸುಮಬಾಲೆ' ನಿಜವಾಗಿಯೂ ಓದುಗನಿಗೆ ಅನೇಕ ಸವಾಲುಗಳನ್ನು ಒಡ್ಡುತ್ತದೆ; ಹಾಗೆಯೇ ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ - ಸಾಹಿತ್ಯ ಮೀಮಾಂಸೆಗೆ ಸಂಬಂಧಿಸಿದಂತೆ. ಸೃಜನಶೀಲ ಅಭಿವ್ಯಕ್ತಿಯ ಹಿಂದಿನ ಹಾತೊರಿಕೆ ಯಾವ ತೆರನದ್ದು? ಅದು ಐಕ್ಯತೆಯದೋ ಅಥವಾ ವಿಸ್ಫೋಟನೆಯದೋ? ಇತ್ಯಾದಿ ಇತ್ಯಾದಿಯಾದ ರಾದ್ಧಾಂತವನ್ನೇ ಸೃಷ್ಟಿ ಮಾಡಲೆಳೆಸುತ್ತದೆ. ಆದರೆ ಈ ಎಲ್ಲ ರಾದ್ಧಾಂತ ಮಾಡಿಕೊಳ್ಳದೆ ಸಾವಧಾನವಾಗಿ, ಧ್ಯಾನದಂತೆ ಇದನ್ನು ಓದತೊಡಗಿದಲ್ಲಿ ಅದರೊಳಗಿನ ಬೆಳಕು ಕಾಣತೊಡಗುತ್ತದೆ. ಮೊದಲು, ಮಹಾದೇವ ಒಂದು ಭಾಷೆಯನ್ನು, ಆ ಭಾಷೆಯಿಂದಲೇ ಹುಟ್ಟಿದ ಬಂಧವನ್ನು ಹಾಗೂ ಆ ಬಂಧದ ಪ್ರಾಣದಂತಿರುವ ಲಯವನ್ನು ನಾಶಮಾಡಲೆಣಿಸುತ್ತಿದ್ದಾರೆ ಎನಿಸುತ್ತದಷ್ಟೇ ಅಲ್ಲ, ಆ ನಾಶಕಾರ್ಯದ ಶಬ್ದವನ್ನೂ ಕೇಳಬಹುದು. ಅಷ್ಟರೊಳಗೇ ಕೃತಿಯೂ ಮುಗಿದಿರುತ್ತದೆ ನಿಜ;

ಆದರೆ ಆ ಮುಗಿಯುವುದರೊಂದಿಗೇ ಆ ನಾಶಕಾರ್ಯವೇ ತಿರುಗು ಮುರುಗಾದಂತೆ ನಾವು ಈವರೆಗೆ ಕೇಳದಿದ್ದ ಹೊಸದೊಂದು ಲಯ, ಆ ಲಯದಿಂದಲೇ ಒಂದು ಬಂಧ ಹಾಗೂ ಆ ಬಂಧದಿಂದ ಒಂದು ಭಾಷೆ ಹಾಗೂ ಅಂತಿಮವಾಗಿ ಆ ಭಾಷೆಯಿಂದ ಒಂದು ಕಥೆಯೂ ಮೂಡಿಬರುತ್ತದೆ. ಅವಳೇ 'ಕುಸುಮಬಾಲೆ' - ನಮ್ಮ ನಿಮ್ಮೆಲ್ಲರ ಒಳ ಹೊರಗುಗಳನ್ನು ಚರಿತ್ರೆಯ ರೂಪದಲ್ಲಿ, ವರ್ತಮಾನದ ವಿರೂಪದಲ್ಲಿ ಮತ್ತು ಭವಿಷ್ಯದ ಕುರೂಪದಲ್ಲಿ ಕಾಡುವ ಕುಸುಮಬಾಲೆ. ವಸ್ತುವಿನಿಂದ ರೂಪದ ಕಡೆ ಹೋಗುವುದು ಕಲೆ; ರೂಪದಿಂದ ವಸ್ತುವಿನ ಕಡೆ ಹೋಗುವುದು ದರ್ಶನ. ಆದರೆ ಈ ಎರಡೂ ಗಮನಗಳನ್ನು ಒಂದಾಗಿಸುವ ಕ್ರಿಯೆ ಎಂತಹುದು? ಇದು ಕೇವಲ ಸಾಹಿತ್ಯ ಅಥವಾ ಕಲೆಯ ಪ್ರಶ್ನೆಯಾಗಿ ಉಳಿಯುವುದಿಲ್ಲ. ಇಂತಹ ಬಹುದೊಡ್ಡ ಪ್ರಶ್ನೆಯನ್ನು ಎತ್ತುತ್ತದೆ ಈ ಪುಸ್ತಕ. ಅಷ್ಟನ್ನು ಮಾತ್ರ ಈ ಪುಸ್ತಕದ ಬಗ್ಗೆ ಸದ್ಯಕ್ಕೆ ಹೇಳಬಹುದು.

(ಸಂವಾದ - ೮, ಮಾರ್ಚ್ - ಏಪ್ರಿಲ್ ೧೯೮೮)

ಪ್ರತಿಕ್ರಿಯೆ - ೨

ಅಂಬೇಡ್ಕರ್ ಜಯಂತಿ : ಕೆಲವು ಪ್ರಶ್ನೆಗಳು

ಇಂದು ಅಂಬೇಡ್ಕರರ ಜನ್ಮ ದಿನ. ರಾಷ್ಟ್ರಾದ್ಯಂತ ಅಂಬೇಡ್ಕರ್ ಗೌರವಾರ್ಥ ಸರ್ಕಾರೀ ಅರೆಸರ್ಕಾರೀ ಹಾಗೂ ಸಾರ್ವಜನಿಕ ಸಮಾರಂಭಗಳು ಏರ್ಪಟ್ಟಿವೆ. ಹೊಸ 'ಭಾರತರತ್ನ'ರ ಗುಣಗಾನ ಮಹಾಪೂರವಾಗಿ ಹರಿಯಲಿದೆ. ಇದು ಬಾಬಾಸಾಹೇಬರ ಜನ್ಮಶತಾಬ್ಧಿಯೂ ಆದ ಕಾರಣ, ಈ ಸಂಭ್ರಮ ಇನ್ನೂ ಒಂದು ವರ್ಷ ಕಾಲ ಮುಂದುವರಿಯಲಿದೆ. ನೆಹರೂ ಶತಾಬ್ಧಿಯ ಭರಾಟೆ ಇಳಿಮುಖವಾಗುತ್ತಿದ್ದಂತೆ ಅಂಬೇಡ್ಕರ್ ಶತಾಬ್ಧಿಯ ಭರಾಟೆ ಆರಂಭವಾಗಲಿದೆ. ಅಂತೂ ಈ ಜಾತಿಗ್ರಸ್ತ ದೇಶದಲ್ಲಿ 'ಜಾತಿಭ್ರಷ್ಟ'ರಾದ ಬಾಬಾಸಾಹೇಬರ 'ಅದೃಷ್ಟ' ಕುಲಾಯಿಸತೊಡಗಿದೆ. ಇದು ಕೆಲವರಲ್ಲಿ ಅಸಹನೆಯನ್ನೂ, ಇನ್ನು ಕೆಲವರಿಗೆ ಕುತೂಹಲವನ್ನೂ, ಸಂತೋಷವನ್ನೂ, ಮತ್ತೆ ಕೆಲವರಲ್ಲಿ ಸಂಭ್ರಮ ಆವೇಶವನ್ನೂ ಉಂಟು ಮಾಡಿದೆ. ಈ ಪೈಕಿ, ಸಂತೋಷ ಉಂಟಾದವರಲ್ಲಿ ಒಬ್ಬನಾಗಿ ನಾನು ಈ ಸಂದರ್ಭದಲ್ಲಿ ಕೆಲವು ಆಲೋಚನೆಗಳನ್ನು ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳಬಯಸುತ್ತೇನೆ.

ಅಂಬೇಡ್ಕರ್ ಕುರಿತು ಕಳೆದ ಎರಡು - ಎರಡೂವರೆ ದಶಕಗಳಲ್ಲಿ ವಿಶೇಷ ಆಸಕ್ತಿ ಮೂಡಿದೆ. ನಮ್ಮ ಜಾತಿವಾದಿ ಇತಿಹಾಸದಲ್ಲಿ ಮುಚ್ಚಿ ಹೋಗತೊಡಗಿದ್ದ ಅವರ ಅನೇಕ

ವಿಚಾರಲಹರಿಗಳು ಮತ್ತೆ ಜೀವ ಪಡೆಯತೊಡಗಿವೆ. ಅಂಬೇಡ್ಕರ್‌ವಾದವೆಂಬ ವಿಶಿಷ್ಟ ವಿಚಾರ ಧಾರೆಯ ಮಾತೂ ಕೇಳಿಬರುತ್ತಿದೆ. ಈ ಬಗ್ಗೆ ಅನೇಕ ಚರ್ಚೆ-ಅಧ್ಯಯನಗಳೂ ನಡೆದಿವೆ. ಈ ಚರ್ಚೆ ಅಧ್ಯಯನಗಳ ಬೆಳಕಿನಲ್ಲಿ ಅನೇಕ ಸಂಘಟನೆಗಳೂ ಹೋರಾಟಗಳೂ ಬೆಳೆದು ಅಂಬೇಡ್ಕರ್ ಈಗ ನಮ್ಮೆಲ್ಲರ ಮಾನಸ ಪ್ರಪಂಚದಲ್ಲಿ ಸಾಮಾಜಿಕ ಅಯಾಮವನ್ನು ಮೀರಿದ ಒಂದು ಸಾಂಸ್ಕೃತಿಕ ಸಂಕೇತವಾಗಿ ಕಾಣಿಸತೊಡಗಿದ್ದಾರೆ. ಅಷ್ಟೇ ಅಲ್ಲ ಸಂಕೇತಾರ್ಥ ವಿಸ್ತರಿಸಿಕೊಂಡು ಒಂದು ರಾಜಕೀಯ ಶಕ್ತಿಯಾಗಿ ಒಡ ಮೂಡುವ ಸಂಭಾವ್ಯತೆಯನ್ನು ಪ್ರದರ್ಶಿಸಿದ್ದಾರೆ. ರಾಷ್ಟ್ರ ಅವರಿಗೆ ತನ್ನ ಅತ್ಯುನ್ನತ ಗೌರವವಾದ 'ಭಾರತರತ್ನ' ಬಿರುದನ್ನು ಇಷ್ಟು ದೀರ್ಘಕಾಲದ ನಂತರ ದಯಪಾಲಿಸಲು ಮುಂದಾಗಿರುವುದನ್ನು ಈ ನೆಲೆಯಲ್ಲಿಯೂ ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಅದೇನೇ ಇರಲಿ, ಅಂಬೇಡ್ಕರ್ ಇಂದು ಒಂದು ರಾಜಕೀಯ ಶಕ್ತಿಯಾಗಿ ಹೊರಹೊಮ್ಮುವ ಸೂಚನೆ ನೀಡತೊಡಗಿದ್ದಾರೆ ಎಂಬುದು ಮುಖ್ಯ.

ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಕುರಿತಂತೆ ನಾವು ಒಂದೆರಡು ಮೂಲ ಭೂತ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರ ಕಂಡುಕೊಳ್ಳಬೇಕಿದೆ. ಅವೆಂದರೆ (i) ಅಂಬೇಡ್ಕರ್ ಯಾರು? (ii) ಅವರೇನು ಮಾಡಿದರು ಹಾಗೂ ಅವರನ್ನು ಇಂದು ರಾಷ್ಟ್ರವೇಕೆ ಗೌರವಾದರಗಳಿಂದ ಸ್ಮರಿಸುತ್ತದೆ? ಈ ಪ್ರಶ್ನೆಗಳು ತೀರಾ ಪ್ರಾಥಮಿಕವೆನಿಸಿದರೂ ಅಂಬೇಡ್ಕರ್ ಈಗ ಅನೇಕ ತಾತ್ವಿಕ ರೂಪಗಳಲ್ಲಿ ಹಾಗೂ ಹಲವಾರು ಭಾವಸ್ತರಗಳಲ್ಲಿ ಅಭಿವ್ಯಕ್ತಗೊಂಡು ಒಂದು ರಾಜಕೀಯ ಸಂಕೇತವಾಗುವ ಸಾಧ್ಯತೆಗಳಿರುವ ಹಿನ್ನೆಲೆಯಲ್ಲಿ ನಾವು ಈ ಪ್ರಶ್ನೆಗಳನ್ನು ಹೊಸದಾಗಿ ಕೇಳಿಕೊಳ್ಳಬೇಕಾಗಿದೆ. ಅಂಬೇಡ್ಕರ್ ಯಾರು? ಅಸ್ಪೃಶ್ಯರ ನಾಯಕನೇ? ಅವರೇನು ಮಾಡಿದರು? ಸಮಾನತೆಯನ್ನು ಆಧರಿಸಿದ ಸಂವಿಧಾನ ರಚನೆಗೆ ಕಾರಣರಾಗಿ ಅಸ್ಪೃಶ್ಯರನ್ನು ಅಸ್ಪೃಶ್ಯತೆಯ ನರಕದಿಂದ ಪಾರು ಮಾಡಲು ಹೆಣಗಿದರೆ? ರಾಷ್ಟ್ರವೇಕೆ ಅವರನ್ನು ಗೌರವಾದಾರ ಗಳಿಂದ ಸ್ಮರಿಸುತ್ತಿದೆ? ಅವರು ಈ ರಾಷ್ಟ್ರದ ವೈಮನಸ್ಸುಗಳಲ್ಲಿ ಕೊಳೆಯುವಂತೆ ಹರಿಯುತ್ತಿರುವ ಜಾತೀಯತೆ ಉಂಟುಮಾಡುವ ಅನಾಹುತದ ಬಗ್ಗೆ ವೈಚಾರಿಕ ಎಚ್ಚರ ಉಂಟುಮಾಡಿದರೆಂದು ಸ್ಮರಿಸುತ್ತಿದೆಯೇ? ಈವರೆಗೆ ಅಂಬೇಡ್ಕರ್ ಹೆಸರಲ್ಲಿ ನಡೆದಿರುವ ಚರ್ಚೆ, ಅಧ್ಯಯನ ಹಾಗೂ ಹೋರಾಟಗಳೆಲ್ಲವೂ ಇವೆಲ್ಲಕ್ಕೆ 'ಹೌದು' ಎಂದಷ್ಟೇ ಹೇಳಿವೆ. ಆದರೆ ಇವೆಲ್ಲಕ್ಕೆ 'ಹೌದು' ಎಂಬುದಷ್ಟೇ ಉತ್ತರವೇ? ಇಲ್ಲ. ಈ ಉತ್ತರವನ್ನು ಇನ್ನಷ್ಟು ವಿಸ್ತರಿಸುವ ಅಗತ್ಯವಿದೆ ಎಂದು ಎಚ್ಚರಿಸುತ್ತದೆ, ಅಂಬೇಡ್ಕರ್‌ರ ಜೀವನದ ಒಂದು ಪ್ರಮುಖ ಘಟನೆ. ಈ ಪ್ರಮುಖ ಘಟನೆ ಎಂದರೆ, ನಾವೆಲ್ಲರೂ ಇತರರನ್ನು ದೂಷಿಸಲು ಮಾತ್ರ ಬಳಸಿಕೊಳ್ಳುವ ಅಂಬೇಡ್ಕರ್‌ರ ಮತಾಂತರ.

ಅಂಬೇಡ್ಕರ್ ತಮ್ಮ ಜೀವನದ ಸಂಧ್ಯಾಕಾಲದಲ್ಲಿ ಬೌದ್ಧರಾದದ್ದೇಕೆ? ಸ್ವತಃ ಅಂಬೇಡ್ಕರರೇ ''ನಾನೇಕೆ ಬೌದ್ಧನಾದೆ?'' ಎಂಬುದನ್ನು ವಿವರಿಸಿದ್ದಾರೆ. ಆದರೆ ನಾವು ಈ ವಿವರಣೆಯ ಒಂದು ಪಕ್ಕವನ್ನು ಮಾತ್ರ ಗ್ರಹಿಸುವ ಪ್ರಜ್ಞೆಯ ಪಾರ್ಶ್ವವಾಯುಗೆ ಬಲಿಯಾಗಿದ್ದೇವೆ. ಅಂಬೇಡ್ಕರ್ ಬೌದ್ಧರಾದದ್ದು ಹಿಂದೂ ಧರ್ಮದ ಜಾತಿಪದ್ಧತಿಯ ಭೀಕರತೆಯನ್ನು ಸಹಿಸಲಾರದೆ ಎಂದು ಹೇಳುತ್ತಾ ನಾವು ಒಟ್ಟಿಗೇ ಅಂಬೇಡ್ಕರ್, ಹಿಂದೂ

ಧರ್ಮ ಮತ್ತು ಬೌದ್ಧಧರ್ಮಗಳಿಗೆ ಅನ್ಯಾಯವೆಸಗುತ್ತಿದ್ದೇವೆ. ಯಾಕೆಂದರೆ ಇದೊಂದೇ ಕಾರಣದಿಂದ ಅಂಬೇಡ್ಕರ್ ಮತಾಂತರಗೊಂಡಿದ್ದರೆ ಅಸ್ಪೃಶ್ಯರೆಲ್ಲರೂ ಅವರ ದಾರಿಯಲ್ಲೇ ಸಾಗಿ ಅಸ್ಪೃಶ್ಯತೆಯ ನರಕದಿಂದ ಸುಲಭವಾಗಿ ಪಾರಾಗಬಹುದಿತ್ತು. ಆದರೆ ಹಾಗೇನೂ ಆಗಲಿಲ್ಲ; ಆಗಿಲ್ಲ. ಅಂಬೇಡ್ಕರರೊಡನೆ ಮತಾಂತರವಾಗಿ ನವಬೌದ್ಧರೆನಿಸಿಕೊಂಡಿರುವ ಜನಾಂಗವೀಗ ಅಸ್ಪೃಶ್ಯರಾಗೇ ಉಳಿದಿದೆ. ಇದು ಅಂಬೇಡ್ಕರ್‌ಗೆ ಗೊತ್ತಿರಲಿಲ್ಲ ಎಂದು ಹೇಳುವುದು ಅವರ ಬುದ್ಧಿಮತ್ತೆಗೆ ಮಾಡುವ ಅವಮಾನ ಮಾತ್ರ.

ಹಾಗಾದರೆ ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕರಿಸಿದ್ದಾದರೂ ಏಕೆ? ಈ ಪ್ರಶ್ನೆಯನ್ನು ಸಮರ್ಪಕವಾಗಿ ಉತ್ತರಿಸಲು ನಾವು ಅಂಬೇಡ್ಕರ್ - ಗಾಂಧೀಜಿ ಮುಖಾಮುಖಿಯನ್ನು ಚಾರಿತ್ರಿಕವಾಗಿ ಅರ್ಥಮಾಡಿಕೊಳ್ಳುವ ವ್ಯವಧಾನವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಗಾಂಧೀಜಿಯ ''ಸತ್ಯಾಗ್ರಹ'ದ ಎದುರಾಗಿ ಅಂಬೇಡ್ಕರ್ ಹಿಂದೂಧರ್ಮದ ಚೌಕಟ್ಟಿನಲ್ಲಿ ತಮ್ಮ 'ಸಂಘರ್ಷ'ವನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಸೋತಿದ್ದರು. ಗಾಂಧೀಜಿ ಧಾರ್ಮಿಕ ಚೌಕಟ್ಟಿನಲ್ಲೇ ತಮ್ಮ ಗೆಲುವುಗಳನ್ನು ಸಾಧಿಸುತ್ತಿದ್ದುದನ್ನು ಅವರು ಗಮನಿಸಿದ್ದರು. ಈ ಹಿನ್ನೆಲೆಯಲ್ಲಿ ಅವರು ತಮ್ಮ 'ಸಂಘರ್ಷ'ದಲ್ಲಿ ಕಾಣೆಯಾಗಿದ್ದ ಒಂದು ಆಯಾಮವನ್ನು ಗುರುತಿಸಿದರು. ಅದು ಅವರಿಗೆ ಜಾತೀಯತೆಯ ಕಳಂಕವಿಲ್ಲದ ಬೌದ್ಧ ಧರ್ಮದಲ್ಲಿ ದೊರಕಿತು. ಬೌದ್ಧಧರ್ಮ ತನ್ನ ಎದುರಾಳಿಯನ್ನೂ ಮೈತ್ರಿ ಹಾಗೂ ಕರುಣೆಯ ಕಣ್ಣುಗಳ ಮೂಲಕ ನೋಡುವ ಮಾರ್ಗ. ಆಸ್ತಿ ಹಾಗೂ ಅಧಿಕಾರಗಳೆರಡನ್ನೂ ಸಂಶಯದಿಂದ ನೋಡುವ ಮಾರ್ಗ ಅದು. ವಾಸ್ತವವಾಗಿ ಇದು ಗಾಂಧೀಜಿ ಕೂಡಾ ಅನುಸರಿಸುತ್ತಿದ್ದ ಮಾರ್ಗ. ಅಸ್ತೇಯ, ಅಪರಿಗ್ರಹ, ಅಹಿಂಸೆ ಮತ್ತು ಸತ್ಯಾಗ್ರಹಗಳ ಶಿಸ್ತು ಸಂಯಮಗಳ ಮೂಲಕ ಗಾಂಧೀಜಿ ಕುಲಗೆಟ್ಟಿದ್ದ ಹಿಂದೂ ಧರ್ಮವನ್ನು ತೊಳೆದು, ಅದರ ಮೂಲರೂಪವಾದ ಬೌದ್ಧಧರ್ಮದ ನೆಲೆಗಳಿಗೆ ಒಯ್ಯುವ ಪ್ರಯೋಗದಲ್ಲಿ ತೊಡಗಿದ್ದರು. ಹೀಗೆ ಇಂಗ್ಲಿಷ್ ಮಾತಾಡುವ ಸೂಟು ಬೂಟುಗಳ ತಾ[illegible]. ಮನುಷ್ಯರಾಗಿದ್ದ ಅಂಬೇಡ್ಕರ್ ಗಾಂಧೀ ಮಾರ್ಗಕ್ಕೆ ಪ್ರತಿಕ್ರಿಯಿಸುತ್ತಲೇ ಕ್ರಮೇಣ ಬೌದ್ಧ ಧರ್ಮ ಸ್ವೀಕರಿಸಿ ಗಾಂಧೀಜಿಯಂತೆಯೇ ಒಂದು ಊರುಗೋಲು ಹಾಗೂ ಒಂದು ತುಂಡುಬಟ್ಟೆಯಲ್ಲೇ ತಮ್ಮ ಮಾರ್ಗದ ಆತ್ಯಂತಿಕ ಸತ್ಯ ಕಂಡುಕೊಂಡರು.

ಅಂಬೇಡ್ಕರರನ್ನು ರಾಜಕೀಯ ಶಕ್ತಿಯಾಗಿ ರೂಢಿಸ ಹೊರಟಿರುವ ಗೆಳೆಯರು ಅಂಬೇಡ್ಕರ್ ಕಂಡುಕೊಂಡ ಈ ಸತ್ಯದ ಬಗ್ಗೆ ಸ್ವಲ್ಪ ಪರ್ಯಾಲೋಚಿಸಬೇಕಿದೆ. ಅಂಬೇಡ್ಕರ್ ಬೌದ್ಧರಾದುದು ಹತಾಶೆ ಅಥವಾ ಆವೇಶದಲ್ಲಲ್ಲ; ಅನುಭವಗಳ ಬೆಳಕಿನಲ್ಲಿ ಮೂಡಿದ ಅರಿವಿನಲ್ಲಿ ಎಂಬುದನ್ನು ತಿಳಿಯಬೇಕಿದೆ. ಆದುದರಿಂದ ಅಂಬೇಡ್ಕರ್ ಮಾರ್ಗದಲ್ಲಿ ಹೆಜ್ಜೆ ಹಾಕಬೇಕಾದವರು ಮೊದಲು ತಮ್ಮ ಎದೆಗಳಲ್ಲಿ ಬುದ್ಧನನ್ನು ನೆಲೆಸಿಕೊಳ್ಳಬೇಕಾಗಿದೆ. ಆಗ ಮಾತ್ರ ಅಂಬೇಡ್ಕರರ ಕುರಿತಂತೆ ಅಸಹನೆ, ಕುತೂಹಲ, ಸಂತೋಷ, ಆವೇಶ - ಇವೆಲ್ಲವನ್ನೂ ಹೊಂದಿರುವ ಎಲ್ಲ ಜನರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ಸಾಧ್ಯವಾದೀತು.

('ಜನತಾ ಮಾಧ್ಯಮ' ಹಾಸನ ೧೪.೪.೧೯೯೦)

‘ಸಾರ್ಥ’ದ ವಿಮರ್ಶೆ : ಒಂದು ಪ್ರತಿಕ್ರಿಯೆ

*ಸಾಹಿತ್ಯ ಸಂವಾದ - ೪*ರಲ್ಲಿ ಪ್ರಕಟವಾಗಿರುವ ರಾಘವೇಂದ್ರ ಪಾಟೀಲರು ‘ಸಾರ್ಥ’ ಕುರಿತು ಬರೆದಿರುವ ಲೇಖನವನ್ನು ಓದಿ ಈ ಪ್ರತಿಕ್ರಿಯೆ ಬರೆಯುತ್ತಿದ್ದೇನೆ. ಎಸ್.ಎಲ್. ಭೈರಪ್ಪನವರ ‘ಸಾರ್ಥ’ ಕಾದಂಬರಿ ಕುರಿತಂತೆ ಲಂಕೇಶರು ತಮ್ಮ ಪತ್ರಿಕೆಯಲ್ಲಿ ಬರೆದ ವಿಮರ್ಶೆಯ ಮಾತುಗಳಿಗೆ ಉತ್ತರ ಕೊಡುವ ನೆಪದಲ್ಲಿ ಒಟ್ಟಾರೆ ಲಂಕೇಶರ (ಮತ್ತು ಅವರ ಪತ್ರಿಕೆಯ) ಸಾಹಿತ್ಯ ವಿಮರ್ಶಾ ವೈಖರಿಯನ್ನೇ ತರಾಟೆಗೆ ತೆಗೆದುಕೊಳ್ಳುವ - ಲೇಖನದ ಸಂದರ್ಭದಲ್ಲಿ ಅಪ್ರಸ್ತುತ ಎನ್ನಬಹುದಾದ - ಉತ್ಸಾಹದ ಭರದಲ್ಲಿ ‘ಸಾರ್ಥ’ವನ್ನು ಸಲ್ಲದ ಕಾರಣಗಳಿಗಾಗಿ ಸಮರ್ಥಿಸುವಂತಹ ಅಪಾಯಕ್ಕೆ ಪಾಟೀಲರು ಸಿಲುಕಿಬಿಟ್ಟಿರುವುದು ದುರದೃಷ್ಟಕರ. ಲಂಕೇಶರ ವಿಮರ್ಶಾ ರಾಜಕಾರಣವನ್ನು ಖಂಡಿಸಲು ಪಾಟೀಲರು ತಪ್ಪಾದ ಉದಾಹರಣೆಯನ್ನು ಆರಿಸಿಕೊಂಡು ಸಮಸ್ಯೆಯನ್ನು ಸೃಷ್ಟಿಸಿಕೊಂಡಿದ್ದಾರೆ ಎನ್ನಿಸುತ್ತದೆ.

‘‘ಕಾದಂಬರಿಯಂತಹ ಸಾಹಿತ್ಯ ಕೃತಿಯನ್ನು ಅದರ ವಾಸ್ತವಿಕತೆಯ ನೆಲೆಯನ್ನು ಕುರಿತಂತೆ ಚರ್ಚಿಸುವುದು ಅಂತಹ ಖುಷಿಯ ವಿಚಾರವೇನೂ ಅಲ್ಲ. ಯಾವುದೇ ಸಾಹಿತ್ಯ ಕೃತಿಯಲ್ಲಿನ ವಾಸ್ತವಿಕತೆ ಕುರಿತ ಚರ್ಚೆಯು ಅದರ ಕಲಾತ್ಮಕತೆಯ ಹೊರ ಆವರಣದ ಚರ್ಚೆಯಾಗಿರುತ್ತದೆ ಮತ್ತು ಇದು ಆ ಕೃತಿಯ ಹೃದಯವನ್ನು ಪರಿಗಣನೆಗೆ ತೆಗೆದುಕೊಳ್ಳದ ಉರುಟು ಅನುಸಂಧಾನವಾಗಿರುತ್ತದೆ. ಇಂತಹ ಅನುಸಂಧಾನವನ್ನು ಕೃತಿಕಾರ ಮತ್ತು ವಿಮರ್ಶಕ ಇಬ್ಬರೂ ಇಷ್ಟಪಡಲಾರರು’’ ಎಂಬ ಪೀಠಿಕೆಯೊಂದಿಗೆ ತಮ್ಮ ಲೇಖನವನ್ನು ಆರಂಭಿಸುವ ಪಾಟೀಲರು ‘‘ಕೃತಿಯಲ್ಲಿ ಬಿಂಬಿತವಾದ ಜೀವನ ಕೃತಿಯ ಹೊರಗಡೆ ಇದ್ದ ಜೀವನದ ಪ್ರತಿಬಿಂಬ ಎಂದು ವಿವರಿಸುವುದು ಕೃತಿಕಾರನ ಕಲ್ಪಕತೆ ಮತ್ತು ಕಲಾತ್ಮಕ ಸೃಷ್ಟಿಗಳೆರಡನ್ನೂ ಅಲ್ಪಗೊಳಿಸಿ ನೋಡುವ ವಿಧಾನವಾಗಿರುತ್ತದೆ’’ ಎಂದು ತರ್ಕಿಸುತ್ತಾ ಲಂಕೇಶರ ವಿಮರ್ಶೆಯನ್ನು ಪ್ರಶ್ನಿಸಲೆಂದೇ ಒಂದು ಪ್ರಸ್ತಾವನೆಯನ್ನು ಹಾಕಿಕೊಂಡು ಅದರ ಸಹಜ ಮುಂದುವರಿಕೆಯಾಗಿ ‘ಸಾರ್ಥ’ವನ್ನು ಚರ್ಚಿಸ ಹೊರಟು ತಪ್ಪು ತೀರ್ಮಾನಗಳಿಗೆ ಬರುತ್ತಾರೆ.

ಕೃತಿ ಮೀಮಾಂಸೆಯಿಂದ ಹುಟ್ಟುವುದು ವಿಮರ್ಶಾ ಮೀಮಾಂಸೆ. ಕೃತಿಯ ವಿಮರ್ಶಾ ಮಾನದಂಡಗಳು ಕೃತಿಯ ಹೊರಗಿನಿಂದ ಬರತಕ್ಕವಲ್ಲ. ಪ್ರತಿಯೊಂದು ಕೃತಿಯೂ ತನ್ನ ವಿಮರ್ಶಾ ಸ್ವರೂಪವನ್ನೇ ತಾನೇ ನಿರ್ಧರಿಸಿಕೊಳ್ಳುತ್ತದೆ. ‘ಸಾರ್ಥ’ವೂ ಇದಕ್ಕೆ ಹೊರತಾಗಿರಲಾರದು. ಕೃತಿಯೊಂದರ ಕಲಾತ್ಮಕತೆಯೇ ಏಕೈಕ ಹಾಗೂ ಪರಮ ಮೌಲ್ಯ ಎಂದು ನಂಬಿದಂತೆ ತೋರುವ ಪಾಟೀಲರು ಕೃತಿಯ ವಾಸ್ತವಿಕತೆಯ ನೆಲೆಯನ್ನು ಕುರಿತಂತೆ ಚರ್ಚಿಸುವುದು ಉರುಟು ಅನುಸಂಧಾನ ಎಂದು ಬಗೆಯುತ್ತಾರೆ. ಆದರೆ ಕೃತಿಯ ಕಲಾತ್ಮಕತೆಯೆನ್ನುವುದು ಸೃಷ್ಟಿಯಾಗುವುದು ಕೃತಿಯ ಎಲ್ಲ ಆಯಾಮಗಳ ಅನುಸಂಧಾನದಿಂದ; ‘ಸಾರ್ಥ’ದ

ಬರವಣಿಗೆಯ ಮಸಿ ತನ್ನ ಬಣ್ಣವನ್ನು ಪಡೆದಿರುವುದೇ ಅದರ ಚಾರಿತ್ರಿಕ ವಾಸ್ತವ ಶೈಲಿಯಿಂದಾಗಿರುವುದರಿಂದ, ಅದರ ಕಲಾತ್ಮಕತೆಯ ತೀರ್ಮಾನವಾಗಬೇಕಾಗಿರುವುದು ಈ ಶೈಲಿಗೆ ಅದು ಎಷ್ಟು ನಿಷ್ಠವಾಗಿದೆ ಎಂಬುದರ ಚರ್ಚೆಯಿಂದಲೇ ಎನ್ನುವುದು ಪಾಟೀಲರ ಗಮನಕ್ಕೆ ಬಾರದಿರುವುದು ಆಶ್ಚರ್ಯಕರ.

ಈ ಸಂಬಂಧವಾಗಿ ಕೃತಿಯ ಭಾವಕೋಶದ ರಚನೆ ಮತ್ತು ವ್ಯುತ್ಪತ್ತಿಯ ಪ್ರಸ್ತಾಪ ಮಾಡುತ್ತ 'ಸಂಸ್ಕಾರ'ದ ಉದಾಹರಣೆ ಕೊಡುವ ಪಾಟೀಲರಿಗೆ 'ಸಂಸ್ಕಾರ'ದಂತೆ ಕೃತಿಯ ಆಂತರಿಕ ಭಾವಕೋಶವನ್ನು ನಿರ್ಮಿಸಬಲ್ಲ ತೀವ್ರತೆ ಹಾಗೂ ತುರ್ತು 'ಸಾರ್ಥ'ದ ರಚನಾ ಕ್ರಮದಲ್ಲೇ ಇಲ್ಲವೆಂಬುದು ಏಕೆ ಗೊತ್ತಾಗಲಿಲ್ಲವೋ ತಿಳಿಯದು. ಕೊನೆಯ ಎರಡು ಅಧ್ಯಾಯಗಳ ಹೊರತಾಗಿ, ಒಳತೋಟಿಯೇ ಇಲ್ಲದೆ ಸಿದ್ಧ ಉದ್ದೇಶಗಳಿಗನುಗುಣವಾಗಿ ವರ್ತಿಸುವ ಪಾತ್ರಗಳಿಂದ ಚಲನೆ ಪಡೆಯುವ 'ಸಾರ್ಥ' ಪೂರಾ ಬಹಿರಂಗವನ್ನೇ ನಂಬಿಕೊಂಡು ಅಂತರಂಗವನ್ನೇ ಕಳೆದುಕೊಂಡಿರುವ ಕೃತಿ. ಇದು ಅಪ್ರಜ್ಞಾಪೂರ್ವಕವಾಗಿ ಪಾಟೀಲರಿಗೆ ಗೊತ್ತಾಗಿಯೋ ಏನೋ, ಈ ಕೃತಿಯು ಎಂಟನೇ ಶತಮಾನದ ಧಾರ್ಮಿಕ ಆವರಣವನ್ನು ವಿಶ್ಲೇಷಿಸುತ್ತದೆ ಎಂದು ಹೇಳಲು ಕೃತಿಯ ಒಳಗಿನ ವಿವರಗಳಿಗಿಂತ (ಇತಿಹಾಸ ಪುಸ್ತಕಗಳಿಂದ ಆಯ್ದ) ಕೃತಿಯ ಹೊರಗಿನ ಮಾಹಿತಿಯನ್ನೇ ಅವಲಂಬಿಸುತ್ತಾರೆ. ಇದು ಸಹಜ ಕೂಡಾ. ಏಕೆಂದರೆ ಧಾರ್ಮಿಕ ಆವರಣದ ವಿಶ್ಲೇಷಣೆಯ ಉದ್ದೇಶವನ್ನೇ ಈ ಕೃತಿ ಹೊಂದಿಲ್ಲ ಅಥವಾ ಅದನ್ನು ಯಾವ ಘಟ್ಟದಲ್ಲೂ ಪ್ರಕಟಿಸಿಲ್ಲ. ಕಾದಂಬರಿಯ ತುಂಬಾ ತುಂಬಿರುವುದು ರಾಜಕಾರಣ - ಧಾರ್ಮಿಕ ರಾಜಕಾರಣ. ಈ ಕೃತಿಯ ನಿರೂಪಕ ಪಾತ್ರದ ನಿರ್ವಹಣೆಯಲ್ಲಿನ ಅಪ್ರಾಮಾಣಿಕತೆಯಲ್ಲೇ ಇದು ಅಂತರ್ಗತವಾಗಿದೆ.

ಈ ನಿರೂಪಕ ಪಾತ್ರವಾದ ನಾಗಭಟ್ಟ ತಾನು ಕಲಿತ ವೈದಿಕ ವಿದ್ಯೆಯನ್ನು ಕೈಬಿಟ್ಟು ತನ್ನ ಗೆಳೆಯ ಅಮರುಕನೆಂಬ ದೊರೆಯ ಸಲಹೆಯ ಮೇರೆಗೆ ಸಾರ್ಥವೆಂಬ ದೇಶಾಂತರ ವ್ಯಾಪಾರ ವಿದ್ಯೆಯ ಮರ್ಮವನ್ನು ಅರಿಯಲು ರಾಜಕೀಯ ಪಾತ್ರ ವಹಿಸಿಕೊಳ್ಳುತ್ತಾನೆ. ಮುಂದೆ ಇವನದು ಬರೀ ರಾಜಕೀಯ ಪಾತ್ರವೇ - ಧರ್ಮದ ಛದ್ಮವೇಷದಲ್ಲಿ. ಇಂಥ ವೇಷಧಾರಿಯ ಕಣ್ಣಿನ ಮೂಲಕ ಚಿತ್ರಿತವಾಗುವ ಆವರಣವನ್ನು ಧಾರ್ಮಿಕ ಆವರಣವೆಂದು ಕರೆಯುವುದು ಮತ್ತು ''ಧಾರ್ಮಿಕ ಆವರಣವೆಂಬುದು ವ್ಯಕ್ತಿಯೊಬ್ಬನ ಮಾನಸಿಕ ಆರೋಗ್ಯವನ್ನು, ಸಮಾಜ ವ್ಯವಸ್ಥೆಯ ಆರೋಗ್ಯವನ್ನು ಕಾಪಾಡಬೇಕು. ಧಾರ್ಮಿಕ ಆವರಣದ ಕರ್ತವ್ಯವೇ ಇದು. ಭಾರತವೆಂಬ ದೇಶದಲ್ಲಿ - ಎಂಟನೆಯ ಶತಮಾನವೆಂಬ ಕಾಲದಲ್ಲಿ, ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸುವ ಧಾರ್ಮಿಕ ಆವರಣ ಇದ್ದಿತೆ ಎನ್ನುವ ಪ್ರಶ್ನೆಯೊಂದನ್ನು 'ಸಾರ್ಥ' ಎತ್ತುತ್ತದೆ ಮತ್ತು ಅಂದು ಇಂಥ ಧಾರ್ಮಿಕ ಆವರಣವು ಇರಲಿಲ್ಲವೆಂದು ಹೇಳುತ್ತದೆ. ಅಂದಿನ ಧಾರ್ಮಿಕ ಆವರಣವು ನಾಗಭಟ್ಟನನ್ನು ಅವನ ಮಾನಸಿಕ ವಿಪ್ಲವದಿಂದ ರಕ್ಷಿಸಲು ಸಮರ್ಥವಾಗಿರಲಿಲ್ಲ; ಅಂದಿನ ಸಮಾಜವನ್ನು ವಿಪ್ಲವದಿಂದ ರಕ್ಷಿಸಲು ಸಮರ್ಥವಾಗಿರಲಿಲ್ಲ; ಮತ್ತು ಅಂತಿಮವಾಗಿ ಹಿಂದೂಸ್ತಾನವೆಂಬ ದೇಶವನ್ನು ಬಾಹ್ಯ ಆಕ್ರಮಣದಿಂದ ರಕ್ಷಿಸಲು

ಸಮರ್ಥವಾಗಲಿಲ್ಲ. 'ಸಾರ್ಥ' ಎತ್ತುವ ಈ ಪ್ರಶ್ನೆಯನ್ನು ಯಾವ ನೆಲೆಯಲ್ಲಿಯೂ ಪರಿಗಣಿಸದೆ, ಭೈರಪ್ಪನೆನ್ನುವವನು ಒಬ್ಬ ಪ್ರತಿಗಾಮಿ ಲೇಖಕ, ಅವನ ಕಾದಂಬರಿಯೆನ್ನುವುದು ಸನಾತನ ಧರ್ಮ ಪ್ರಚಾರದ ಕಗ್ಗ ಎನ್ನುವಂತೆ ಲಂಕೇಶರಂತಹ ಸಂವೇದನಾಶೀಲರು ವಿಮರ್ಶೆ ಬರೆಯಲು ಆರಂಭಿಸಿದರೆ ಹೇಗೆ?'' ಎಂದು ಪ್ರಶ್ನಿಸುವ ಪಾಟೀಲರಿಗೆ ಸ್ವತಃ ತಾವು ಹಿಡಿದಿರುವ ಭಯಂಕರ ಸಂವೇದನಾಹೀನ ದಾರಿಯ ಕಲ್ಪನೆ ಇದ್ದಂತಿಲ್ಲ.

ಒಂದು ರಾಷ್ಟ್ರದ ಆರೋಗ್ಯ, ಅದರ ಧಾರ್ಮಿಕ ಆವರಣ, ಅದರ ಕರ್ತವ್ಯ ಎಂದೆಲ್ಲಾ ಬೋಳು ಬೋಳಾಗಿ ಮಾತನಾಡುವುದು ಮತ್ತು ರಾಷ್ಟ್ರ ಕಲ್ಪನೆಯೇ ಇಲ್ಲದಿದ್ದ ಎಂಟನೆಯ ಶತಮಾನಕ್ಕೆ ಅವನ್ನೆಲ್ಲಾ ಅನ್ವಯಿಸಿ, ಆ ಮೂಲಕ ಬಾಹ್ಯ ಆಕ್ರಮಣದಿಂದ ರಾಷ್ಟ್ರ ರಕ್ಷಣೆಯ ಸಾಮರ್ಥ್ಯದ ಪ್ರಶ್ನೆಯನ್ನೆತ್ತಿ, ಆ ಪ್ರಶ್ನೆಯನ್ನಿಟ್ಟುಕೊಂಡೇ ಆ ಮೂಲಕ ಕೃತಿಯನ್ನು ಚರ್ಚಿಸಹೊರಡಬೇಕೆಂಬ ತೀರ್ಮಾನಕ್ಕೆ ಬರುವುದು ಧರ್ಮ ಮತ್ತು ಇತಿಹಾಸಗಳ ಕಲ್ಪನೆ ಕುರಿತ ಮೂಲ ಸೂಕ್ಷ್ಮಗಳನ್ನೇ ಕಳೆದುಕೊಂಡಿರುವ ಸ್ಥಿತಿ ಎನಿಸುತ್ತದೆ. ಅಷ್ಟೇ ಅಲ್ಲ, ಕೃತಿಯ ಸಾಹಿತ್ಯೇತರ ಉದ್ದೇಶಗಳನ್ನು ಮುಗಮ್ಮಾಗಿ ಒಪ್ಪಿಕೊಂಡಂತೆಯೂ ಆಗುತ್ತದೆ.

ಒಂದು ಕಾಲದ ಧಾರ್ಮಿಕ ಸಂಘರ್ಷವನ್ನು ಕಥಿಸುವ ಪ್ರತಿಭೆಗೆ, ಇರುವುದೊಂದೇ ಧರ್ಮ, ಚರಿತ್ರೆಯ ವಾರೆನೋಟಗಳನ್ನು ಗೆಲ್ಲಲಾಗದವನ ದೃಷ್ಟಿಯಲ್ಲಿ ಅದು ವಿಧವಿಧವಾಗಿ ಕಾಣಬಲ್ಲ ಅಪಾಯವಿದೆ ಎಂಬ ಆಧ್ಯಾತ್ಮಿಕ ಎಚ್ಚರವಿರಬೇಕು. ಆಧ್ಯಾತ್ಮಿಕತೆ ಕಳೆದುಕೊಂಡ ಧರ್ಮ ಬರೀ ರಾಜಕಾರಣವಾಗುತ್ತದೆ. ಆದರೆ ತಮ್ಮ ಬಹುತೇಕ ಕಾದಂಬರಿಗಳಲ್ಲಿ ಧರ್ಮವನ್ನು ಅದರ ಆಧ್ಯಾತ್ಮಿಕತೆಯನ್ನು ಕಳಚಿಟ್ಟ ಸ್ಥೂಲತೆಯೊಂದಿಗೇ ಚರ್ಚಿಸುವ ಮೂಲಕ ಸಹಜವಾಗಿಯೇ, ಸಹೃದಯರ ಹೊರತಾಗಿ ಪಂಡಿತ - ಪಾಮರರಿಬ್ಬರನ್ನೂ ರಂಜಿಸುತ್ತ ಬಂದಿರುವ ಭೈರಪ್ಪನವರು ಈ ಕಾದಂಬರಿಯಲ್ಲಿ ತಮ್ಮ ಚಾರಿತ್ರಿಕ ವಾರೆನೋಟದ ಮೂಲಕ ವೈದಿಕ ಹಾಗೂ ಬೌದ್ಧ ಧರ್ಮಗಳೆರಡನ್ನೂ ಸ್ಥೂಲಗೊಳಿಸಿ ಅನ್ಯಾಯವೆಸಗಿದ್ದಾರೆ. ಈ ವಾರೆನೋಟಕ್ಕೆ ಉಪಕರಣವಾಗಿ ಒದಗಿ ಬಂದಿರುವವನು ನಾಗಭಟ್ಟ.

ಬೆನ್ನೆಲುಬೇ ಇಲ್ಲದ ನಾಗಭಟ್ಟನಿಗೆ ಅನ್ನಿಸಿದ್ದೆಲ್ಲಾ ಇಲ್ಲಿ ಅನುಭವವೆಂಬಂತೆ ನಿರೂಪಿತವಾಗಿ ಕಾದಂಬರಿ ಬೆಳೆಯುತ್ತಾ ಹೋಗುತ್ತದೆ. ಇವನಿಗೆ ಎಲ್ಲ ತತ್ವಗಳೂ ಇರುವುದು 'ಆಗು'ವುದಕ್ಕಲ್ಲ; ಕೇವಲ ರುಚಿಗೆ, ನೆಕ್ಕಲು. ಈ ರುಚಿಗೆ ಬಿದ್ದ ನಾಗಭಟ್ಟ ಸಹಜವಾಗಿಯೇ ವೇದ ವಿದ್ಯೆ, ವಿವಾಹ, ಗೆಳೆತನ, ಸಾರ್ಥ - ವಿದ್ಯೆಗಳನ್ನು ನೆಕ್ಕಿದಂತೆಯೇ ಅಭಿನಯ ವಿದ್ಯೆ, ಪ್ರೇಮ ವಿದ್ಯೆ, ಕಾಮ ವಿದ್ಯೆ, ಧ್ಯಾನ ವಿದ್ಯೆ, ಬೌದ್ಧ ವಿದ್ಯೆ, ತಂತ್ರ ವಿದ್ಯೆ ಇತ್ಯಾದಿಗಳನ್ನು ಬರೇ ನೆಕ್ಕುತ್ತ ಹೋಗುತ್ತಾನೆ. ನಾಗಭಟ್ಟ ಹೀಗೆ ಎಲ್ಲವನ್ನು ನೆಕ್ಕುತ್ತ ಹೋಗುವ ಕ್ರಿಯೆ, ಭೈರಪ್ಪನವರು ತಮ್ಮ ಅಧ್ಯಯನ ಶ್ರಮದ ಮೂಲಕ ಕಲೆ ಹಾಕಿರುವ ಈ ವಿವಿಧ ವಿದ್ಯೆಗಳ ಪಾರಿಭಾಷಿಕ ವಿವರಗಳ ಮೂಲಕ ಒಂದು ವಿದ್ವತ್‌ಪ್ರಭೆಯನ್ನು ಪಡೆದು ವೈಚಾರಿಕ ಆಭಾಸವನ್ನುಂಟು ಮಾಡುತ್ತದೆ. ಈ ಆಭಾಸದಲ್ಲಿ ಬೌದ್ಧ ಧರ್ಮ ಬರೀ ತರ್ಕದ ಕಗ್ಗಂಟಾಗಿ, ಬುದ್ಧಿ ಕುಶಲತೆಯ ಶಾಸ್ತ್ರವಾಗಿ ಪ್ರತಿಪಾದಿತಗೊಳ್ಳುತ್ತದೆ. ಅದರಲ್ಲಿಯ ಮಹತ್ವದ ಪರಿಕಲ್ಪನೆಗಳಿರಲಿ, ತೀರ್ಥಕ್ಷೇತ್ರ

ಕೂಡಾ ಮೂಲದಲ್ಲಿ ವೈದಿಕ ಧರ್ಮ ಸೇರಿಬಿಡುತ್ತವೆ. ಬೌದ್ಧ ಗುರುಗಳು ವಾಣಿಜ್ಯ ಲಾಭಕ್ಕಾಗಿ ವಣಿಕರನ್ನು, ಮತಾಂತರಕ್ಕಾಗಿ ಜನಸಾಮಾನ್ಯರನ್ನು ಒಲಿಸಿಕೊಳ್ಳಲು ಹೊಂಚುಹಾಕುತ್ತಾರೆ. ಇತಿಹಾಸ ಪ್ರಸಿದ್ಧ ನಾಲಂದ ವಿಶ್ವವಿದ್ಯಾನಿಲಯ ಬೌದ್ಧೇತರ ಧರ್ಮಗಳನ್ನು ಹೀಗಳೆಯುವ ಪಾಖಂಡಿ ಬೌದ್ಧರ ಕೇಂದ್ರವಾಗುತ್ತದೆ. ಮಾರುವೇಷದಲ್ಲಿ ಬೌದ್ಧ ಧರ್ಮವನ್ನು ಕಲಿಯಲು ಬಂದ ಕುಮಾರಿಲ ಭಟ್ಟ ಮಹಾ ಗೌರವಸ್ಥ ಘನಪಂಡಿತನಾದರೆ, ಅವನಿಗೆ ಪಾಠ ಹೇಳುವ ಬೌದ್ಧ ಗುರುಗಳು ಕುಹಕ ಕಟೂಕ್ತಿಗಳ ಹೀನ ಪಂಡಿತರಾಗುತ್ತಾರೆ. ಇನ್ನು, ಇಂದಿನ ಅಗ್ರಹಾರದ ಇಬ್ಬರು ಬ್ರಾಹ್ಮಣ ಪಂಡಿತರುಗಳ ನಡುವಣ ವಾದದ ಮಟ್ಟಕ್ಕಿಳಿಸಲ್ಪಟ್ಟಿರುವ, ಮಂಡನಮಿಶ್ರ ಹಾಗೂ ಶಂಕರ ಯತಿಗಳ ನಡುವಣ ವಾದದ ಭಾಗವಾಗಿ ಬರುವ ಈ ಮಾತುಗಳು : ''ಬುದ್ಧನು ಹಿಂಡುಗಟ್ಟಳೆ ಶಿಷ್ಯರಿಗೆ ತಲೆ ಬೋಳಿಸಿ, ಕಾಷಾಯ ಉಡಿಸಿ ಸಂನ್ಯಾಸ ದೀಕ್ಷೆ ಕೊಟ್ಟ. ದುಡಿದು ತಿನ್ನುವುದನ್ನು ತಪ್ಪಿಸಿ ಭಿಕ್ಷೆಯಿಂದ ಜೀವಿಸುವಂತೆ ಹೇಳಿ ಅವರಿಗೆಲ್ಲ ಭಿಕ್ಷುಗಳೆಂದು ನಾಮಕರಣ ಮಾಡಿದ. ಅವರು ಹೀಗೆಯೇ ಎಂಟೂ ದಿಕ್ಕುಗಳಿಗೆ ಹರಡಿ ಇನ್ನೂ ಸಾವಿರಾರು ಸಂಸಾರಿಗಳನ್ನು ಭಿಕ್ಷುಕರನ್ನಾಗಿ ಮಾಡಿದರು. ಭಿಕ್ಷುಕರ ಸಂಖ್ಯೆ ಹೆಚ್ಚಿರುವ ನಾಡಿನಲ್ಲಿ ಸುಭಿಕ್ಷೆ ಎಲ್ಲಿ ಬರಬೇಕು... ಆಗಾಗ್ಗೆ ಅನಾವೃಷ್ಟಿ, ಸರಿಯಾದ ಕೃಷಿ ಇಲ್ಲ, ಬರ, ಉಪವಾಸದ ಸಾವುಗಳು.''

ಹೀಗೆ ಚರಿತ್ರೆಯನ್ನು ನಿರ್ಲಜ್ಜವಾಗಿ ಏಕಪಕ್ಷೀಯಗೊಳಿಸಿ 'ಪುರಾಣ' ಬರೆಯುವುದನ್ನು ಸಾಹಿತ್ಯ ಎಂದು ಕರೆಯಬೇಕೆ? ಇದರ ಕಲಾತ್ಮಕತೆಯನ್ನು ಪರಿಶೀಲಿಸಲು ಸಾಹಿತ್ಯಿಕ ಪರಿಕರಗಳು ಬೇಕೆ? ಅನ್ಯ ಮನಃಪ್ರವೇಶ, ಪರಕಾಯ ಪ್ರವೇಶದಂತಹ ಅಸಾಮಾನ್ಯ ಸಂಗತಿಗಳಿಂದ ಚಲನೆ ಪಡೆಯುವ ಕೃತಿ ಚಾರಿತ್ರಿಕ ವಾಸ್ತವ ಶೈಲಿಯನ್ನು ಅಳವಡಿಸಿಕೊಳ್ಳುವುದರ ಹಿಂದಿರುವ ಉದ್ದೇಶವಾದರೂ ಏನು? ಹಾಗೂ ಈ ಶೈಲಿಗೆ ಅದು ಎಷ್ಟರಮಟ್ಟಿಗೆ ನಿಷ್ಠವಾಗಿರಲು ಸಾಧ್ಯ? ಈ ಪ್ರಶ್ನೆಗಳನ್ನು ಬಿಟ್ಟು, ಈ ಕೃತಿಯಲ್ಲಿ ಧಾರ್ಮಿಕ ಆವರಣವು ಇಡಿಯಾಗಿ ಚರ್ಚೆಗೆ ಒಳಪಡುತ್ತದೆ ಎನ್ನುತ್ತ, ಕೃತಿಯ ತರ್ಕ ಹಾಗೂ ಉದ್ದೇಶಗಳಿಗೆ ಸಂಬಂಧಪಡದ ಚಿಲ್ಲರೆ ವಿವರಗಳನ್ನು ಪಾಟೀಲರು ಉದಾಹರಿಸುವುದನ್ನು ಎಂತಹ ವಿವೇಚನೆ ಎಂದು ಕರೆಯುವುದು?

ಲಂಕೇಶರ ವಿಮರ್ಶಾ ರಾಜಕಾರಣದ ಗುಂಗನ್ನು ಬದಿಗಿಟ್ಟು 'ಸಾರ್ಥ'ವನ್ನು ನಿರ್ವಿಕಾರವಾಗಿ ಓದಿದ್ದರೆ ಪಾಟೀಲರಿಗೆ ಖಂಡಿತಾ ಗೊತ್ತಾಗುತ್ತಿತ್ತು, ಈ ಕಾದಂಬರಿಯ ತುಂಬಾ ಅನುರಣಿಸುವುದು ಭಾರತದಲ್ಲಿ ಧಾರ್ಮಿಕ ಏಕಾಧಿಪತ್ಯವನ್ನು ಮುರಿದ ಬೌದ್ಧ ಧರ್ಮದ ಮೇಲಿನ ಸಿಟ್ಟು ಎಂದು. ವಿಷಾದವೇ ಇಲ್ಲದ ಈ ಸಿಟ್ಟು ಅವನತಿಗೊಂಡಿದ್ದ ಬೌದ್ಧ ಧರ್ಮದ ರೂಪವನ್ನಷ್ಟೇ ಚಿತ್ರಿಸುವ ಪಾಖಂಡಿತನವನ್ನು ಸೃಷ್ಟಿಮಾಡಿದೆ. ವೈದಿಕ ಧರ್ಮ ಅವನತಿಗೊಂಡು ಬೌದ್ಧ ಧರ್ಮ ವ್ಯಾಪಿಸಲು ನಿಜವಾದ ಕಾರಣಗಳಾದರೂ ಏನು ಎಂದು ನಿಷ್ಠುರವಾಗಿ ಪ್ರಶ್ನಿಸಿಕೊಳ್ಳುವ ವಿವೇಚನೆಯನ್ನೇ ಹೊಂದಿರದ ಈ ಕೃತಿ, ಇದಕ್ಕೆ ಕಂಡುಕೊಂಡಿರುವ ಸುಲಭದ ಉತ್ತರಗಳು : ''ಬುದ್ಧ ಕ್ಷತ್ರಿಯನಾದುದರಿಂದ ಕ್ಷತ್ರಿಯ ರಾಜರುಗಳು ಬೌದ್ಧ ಧರ್ಮದಲ್ಲಿ ಅಭಿಮಾನ ತಾಳಿ ಅದನ್ನು ಸ್ವೀಕರಿಸಿ ಪ್ರೋತ್ಸಾಹಿಸಿದರು... ಸುಸಂಘಟಿತವಾದ ಪ್ರಚಾರಕ ಸಂಘವು ಪರಿಸ್ಥಿತಿಯನ್ನು ಬಳಸಿಕೊಂಡು ಜನರನ್ನು ಪರಿವರ್ತಿಸುತ್ತಿತ್ತು'', ''ರಾಜಾಶ್ರಯ

ಹಾಗೂ ವೈಶ್ಯಾಶ್ರಯಗಳಿಂದ ಬೌದ್ಧ ಧರ್ಮ ಬೆಳೆಯಿತು'', ''ವೇಶ್ಯೆಯರು ಪಾಪ ಮಾರ್ಗದಿಂದ ಸಂಪತ್ತು ಮಾಡಿದರೆಂದು ಬುದ್ಧ ಅದನ್ನು ಸಂಘಕ್ಕೆ ದಾನ ಮಾಡಿಸಿದ'' ಇತ್ಯಾದಿ... ಇತ್ಯಾದಿ...

ಈ ಮಟ್ಟದ ವೈಚಾರಿಕತೆಯನ್ನೂ ಕಲಾತ್ಮಕತೆಯನ್ನೂ ಪ್ರಕಟಿಸುವ ಈ ಕಾದಂಬರಿಯ ಮುಖ್ಯ ಹಳಹಳಿಕೆ : ''ಅಶೋಕ ಚಕ್ರವರ್ತಿಯಿಂದ ಹಿಡಿದು ಇದುವರೆಗೆ ಬಹಳ ಜನ ಬೌದ್ಧ ರಾಜರು ಆಳಿ ಭರತಖಂಡ ನಿರ್ವೀಯವಾಗಿದೆ''. ಈ ಹಳಹಳಿಕೆ, ಅಶ್ವಮೇಧ ಯಾಗದ ಮೂಲಕ ನಡೆದ ವೀರ್ಯ ಪ್ರಚೋದನೆಯ ಪ್ರಯತ್ನಗಳು ವೈದಿಕ ದೊರೆಗಳ ಆಲಸ್ಯ, ಬೌದ್ಧರ ಸಂಚು ಹಾಗೂ ಶಂಕರಾಚಾರ್ಯರ ಸಂನ್ಯಾಸ ಧರ್ಮ ಮತ್ತು ಜ್ಞಾನಮಾರ್ಗ ಪ್ರಚಾರಗಳಿಂದಾಗಿ ವಿಫಲಗೊಂಡು ಭರತಖಂಡವು 'ಒಬ್ಬ ಹೆಣ್ಣು ಸಿಕ್ಕರೆ ಹೊತ್ತುಕೊಂಡು ಹೋಗಿ ಅತ್ಯಾಚಾರ ಮಾಡುವ' ಮ್ಲೇಚ್ಛಜನರ ಕೈಗೆ ಸಿಕ್ಕು ವರ್ಣಸಂಕರಕ್ಕೆ ಈಡಾಗುತ್ತದೆಂಬುದನ್ನು ವಿಷಾದದಿಂದ ಚಿತ್ರಿಸುವ ಮೂಲಕ ತನ್ನ 'ಸಾರ್ಥಕ್ಯ'ವನ್ನು ಕಂಡುಕೊಳ್ಳುತ್ತದೆ. ಅಲ್ಲದೆ, ಅವಿವೇಕದ ಪರಮಾವಧಿಯಂತೆ ಕಾಣುವ ಕುಮಾರಿಲ ಭಟ್ಟನ ತುಷಾನಲ ಪ್ರವೇಶದ ಘಟನೆ ವೈದಿಕ ಧರ್ಮದ ವೀರ್ಯ ಭಾವದ ಅತ್ಯುಚ್ಛ ಉದಾಹರಣೆಯೆಂಬಂತೆ ವೈಭವೀಕರಣಗೊಂಡು, ಅದು ಈ ಕಾದಂಬರಿಯ ಮುಖ್ಯ ಕಾಳಜಿಯಾದ ವೀರ್ಯಪ್ರಚೋದನೆಯ ಕಲ್ಪನೆ ಎಂಥಾ ವಿಕ್ಷಿಪ್ತತೆ ಯಿಂದ ಕೂಡಿದೆ ಎಂಬುದರ ಸೂಚನೆಯನ್ನೂ ನೀಡುತ್ತದೆ.

ಹೀಗೆ ಇತಿಹಾಸ, ಧರ್ಮ, ಕಾದಂಬರಿ ಪ್ರಕಾರ - ಈ ಮೂರನ್ನೂ ಒಟ್ಟಿಗೆ ವಿಕ್ಷಿಪ್ತ ಗೊಳಿಸಿರುವ ಈ ಕೃತಿಯನ್ನು ಮೆಚ್ಚಿಕೊಳ್ಳಲು ರಾಘವೇಂದ್ರ ಪಾಟೀಲರು ವಿಮರ್ಶಾ ಮೀಮಾಂಸೆಯ ಕಸರತ್ತು ಮಾಡಬೇಕಾಗಿ ಬಂದಿರುವುದು ಸಹಜವೇ ಆಗಿದೆ.

(ಸಾಹಿತ್ಯ ಸಂವಾದ : ೫೦, ಏಪ್ರಿಲ್ - ಜೂನ್, ೧೯೯೯)

ಪ್ರತಿಕ್ರಿಯೆ - ೪

ಪತ್ರಿಕೋದ್ಯಮಿ ಲಂಕೇಶ್ : ಒಂದು ಪ್ರತಿಕ್ರಿಯೆ

'ಸಾಹಿತ್ಯ ಸಂವಾದ' ಅಂಕಣದಲ್ಲಿ ಈ ಹಿಂದೆ ಪ್ರಕಟವಾದ ಲೇಖನವೊಂದಕ್ಕೆ ಉಮೇಶ್‌ಕುಮಾರ್ ಎಸ್. ಎಂಬುವವರು ಇದೇ ಅಂಕಣದಲ್ಲಿ ಪ್ರತಿಕ್ರಿಯಿಸುತ್ತಾ (ಪ್ರ.ವಾ. ಸಾ.ಪು. - ೨೭.೮.೨೦) ಲಂಕೇಶರು ತಮ್ಮ ಪತ್ರಿಕೆಯ ಮೂಲಕ ಸಮಕಾಲೀನ ಸಾಹಿತ್ಯ ಚರ್ಚೆಗೆ ನೀಡಿದ 'ಕೊಡುಗೆ'ಗಳ ಬಗ್ಗೆ ಬರೆದಿರುವುದನ್ನು ಓದಿ ನಗಬೇಕೋ ಅಳಬೇಕೋ ತಿಳಿಯದಾಗಿದೆ. ಶ್ರೀಯುತರು ತಮಗೆ ಸರಿ ಕಾಣದ ಲೇಖನದ ಬಗ್ಗೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುವುದರ

ಜೊತೆಗೆ, ಲಂಕೇಶರ ನಿಧನಾ ನಂತರ ಅವರ ಬಗ್ಗೆ ಬರೆಯುವುದು ಅಶ್ಲೀಲತೆ ಹಾಗೂ ಪುಕ್ಕಲುತನ ಎಂದು ಬೇರೆ ಹೇಳಿ, ಅವರ ಮಾನ ರಕ್ಷಣೆಗೂ ಮುಂದಾಗಿ ಕುತೂಹಲ ಹುಟ್ಟಿಸುತ್ತಾರೆ. ಓರ್ವ ಸಾಹಿತಿಯನ್ನು ಕುರಿತ, ಅದೂ ತಮ್ಮ ಪತ್ರಿಕೆಯನ್ನು ಒಂದು 'ಅಸ್ತ್ರ'ವಾಗಿ ಬಳಸುವುದರಲ್ಲಿ ಯಾವ ಸಂಕೋಚವನ್ನೂ ಇಟ್ಟುಕೊಳ್ಳದಿದ್ದ ಲಂಕೇಶರಂತಹವರನ್ನು ಕುರಿತು ಚರ್ಚೆ, ಅವರ ಜೀವಿತ ಕಾಲದಲ್ಲೇ ನಡೆಯಬೇಕು ಎಂದು ಬಯಸುವುದು ಲಂಕೇಶರು ತಮ್ಮ ಪ್ರಿಯ ಶಿಷ್ಯರಿಗೆ ಬಳುವಳಿಯಾಗಿ ಬಿಟ್ಟುಹೋಗಿರುವಂತೆ ಕಾಣುವ ಸಾಹಿತ್ಯದ ಪಾಳೇಗಾರ ಸಂಸ್ಕೃತಿಗೆ ಸಹಜವಾದುದೇ ಆಗಿದೆ.

ತಾವು ಮತ್ತೆ ಪ್ರತಿಕ್ರಿಯಿಸಿ ಮೆರೆಯಬಹುದಾದ ಹಾಗೂ ಗಂಭೀರ ಮಾನನಷ್ಟ ಮೊಕದ್ದಮೆಗಳ ಸಾಧ್ಯತೆಗಳಿರುವ ಪ್ರಕರಣಗಳ ಹೊರತಾಗಿ, ತಮ್ಮ ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯ - ನಿಲುವುಗಳಿಗೆ ವಿರೋಧ ಅಥವಾ ಅಸಮ್ಮತಿ ವ್ಯಕ್ತಪಡಿಸಿದ ಪತ್ರ ಅಥವಾ ಲೇಖನಗಳಿಗೆ ಎಂದೂ ಪ್ರಕಟಣೆಯ ಅವಕಾಶ ನೀಡದ ಮತ್ತು ಅವರ ಕೆಲವು ನಿಲುವುಗಳ ಬಗ್ಗೆ ಮೆಚ್ಚುಗೆಯನ್ನೂ ಇನ್ನೂ ಕೆಲವು ನಿಲುವುಗಳ ಬಗ್ಗೆ ಟೀಕೆಯನ್ನೂ ವ್ಯಕ್ತಪಡಿಸಿ ಬರೆದ ಪತ್ರಗಳಲ್ಲಿ ಟೀಕಾಭಾಗವನ್ನು ಕತ್ತರಿಸಿ ಮೆಚ್ಚುಗೆಯ ಭಾಗವನ್ನಷ್ಟೇ ಪ್ರಕಟಿಸಲು ಹಿಂಜರಿಯದಂತಹ 'ಧೈರ್ಯಶಾಲಿ' ಪತ್ರಕರ್ತರಾಗಿದ್ದರು ಲಂಕೇಶ್! ಪತ್ರಿಕೆ ಅವರ ಖಾಸಗಿ ಆಸ್ತಿಯಾದುದರಿಂದ, ಯಾವುದನ್ನೇ ಆಗಲಿ ಪ್ರಕಟಿಸುವ, ಪ್ರಕಟಿಸದಿರುವ ಹಕ್ಕು ಅವರಿಗಿರ ಬಹುದೇನೋ ಎಂದುಕೊಂಡು ತಮ್ಮ ಭಿನ್ನಾಭಿಪ್ರಾಯ ಅಥವಾ ವಿರೋಧವನ್ನು ಬೇರೊಂದು ಸಾಹಿತ್ಯ ಪತ್ರಿಕೆಯಲ್ಲೋ, ವೇದಿಕೆಯಲ್ಲೋ ಪ್ರಕಟಿಸಿದರೂ, ಪತ್ರಿಕೆಯ ಬರುವ ಸಂಚಿಕೆಯಲ್ಲೇ ಕಾದಿರುತ್ತಿತ್ತು ಆತನ ಹೆಸರು, ಮೈಬಣ್ಣ ಮತ್ತು ಅಸ್ಪಷ್ಟತೆಗಳನ್ನೂ ಸೇರಿಸಿಕೊಂಡ ಕೀಳು ಅಭಿರುಚಿಯ ಟೀಕೆ! ಸಂಬಂಧಪಟ್ಟ ವ್ಯಕ್ತಿ ತಮ್ಮ ಈ ಲೇವಡಿಯನ್ನು ಮೀರಿ ನಿಲ್ಲಬಲ್ಲ ಎಂದು ಗೊತ್ತಾದರೆ, ಆ ವ್ಯಕ್ತಿಯು ಎಂದೋ ಪ್ರಕಟಿಸಿಕೊಂಡ ಪುಸ್ತಕವೊಂದನ್ನು ಆಯ್ದು - ಅದನ್ನು ಇವರ ವಿಮರ್ಶಾ ಕೃಪೆಗೆ ಕಳಿಸಿರಲಿ, ಕಳಿಸದಿರಲಿ - 'ಪುಸ್ತಕ ವಿಮರ್ಶೆ'ಯ ಹೆಸರಿನಲ್ಲಿ ಆ ಲೇಖಕನನ್ನು ಅಪಹಾಸ್ಯ ಮಾಡುವ ಪ್ರಯತ್ನವನ್ನೂ ಅವರು ಮಾಡುತ್ತಿದ್ದರು ಅಥವಾ ತಮ್ಮ ಶಿಷ್ಯರಿಂದ ಮಾಡಿಸುತ್ತಿದ್ದರು. ಅದೂ, ಈ 'ಪುಸ್ತಕ ವಿಮರ್ಶೆ' ನಡೆಯುತ್ತಿದ್ದುದು ಕಾವ್ಯನಾಮಗಳ ಮರೆಯಲ್ಲಿ! ಸಾರ್ವಜನಿಕ ಅವಹೇಳನ, ಅದು ದುರುದ್ದೇಶದಿಂದ ಕೂಡಿದ್ದರೂ, ಸಮೂಹವು ತಕ್ಷಣಕ್ಕಾದರೂ ಅದನ್ನು ಖುಷಿಯಿಂದ ಓದುತ್ತದೆ ಹಾಗೂ ಅದರಿಂದ ಸಂಬಂಧ ಪಟ್ಟ ವ್ಯಕ್ತಿ ಸ್ವಲ್ಪ ಮಟ್ಟಿಗಾದರೂ ತನಗೆ ಮಣಿಯುತ್ತಾನೆ ಎಂಬ ಪೀತ ಪತ್ರಿಕೋದ್ಯಮದ ತತ್ವವನ್ನು ಅವರು ಬಲ್ಲವರಾಗಿದ್ದರು. ನಿಜವಾದ ಅಶ್ಲೀಲತೆ, ಪುಕ್ಕಲುತನಗಳಿರುವುದು ಇಲ್ಲಿ; ಲಂಕೇಶರ ಬಗ್ಗೆ ಅವರ ನಿಧನಾ ನಂತರ ಬರೆಯುವುದರಲ್ಲಲ್ಲ. ಅವರ ವೈಯಕ್ತಿಕ ಬದುಕಿನ ಬಗ್ಗೆಯೇನೂ ಇಲ್ಲಿ ಯಾರೂ ಬರೆಯುತ್ತಿಲ್ಲವಲ್ಲ.

ಸದರಿ ಲೇಖಕರು ತೇಜಸ್ವಿಯವರ 'ಅಣ್ಣನ ನೆನಪುಗಳು' ಬಗ್ಗೆ ಲಂಕೇಶ್ ಬರೆದ ವಿಮರ್ಶೆಯ ಪ್ರಸ್ತಾಪ ಮಾಡುತ್ತಾ, ತಮ್ಮ ಪತ್ರಿಕೆಯಲ್ಲಿ ಪ್ರಕಟವಾಯಿತೆಂಬ ಕಾರಣವೊಂದೇ

ಅದರ ಬಗ್ಗೆ ಲಂಕೇಶ್ ಟೀಕೆ ಮಾಡಬಾರದೆಂದೇನಿಲ್ಲವಲ್ಲ ಎನ್ನುತ್ತಾರೆ. ನಿಮ್ಮ ಮಾತು ನಿಜ ಸ್ವಾಮಿ; ಆದರೆ ಅಷ್ಟೇ ನಿಜ, ಈ ಕೃತಿ ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಕಾಲದುದ್ದಕ್ಕೂ ಲಂಕೇಶ್ ಅದನ್ನು ಅಮೋಘ, ಅನನ್ಯ, ವಿಶಿಷ್ಟ ಎಂದು ಹಾಡಿ ಹೊಗಳುತ್ತಿದ್ದರು ಎಂಬುದು ಕೂಡಾ. ಈ ಕೃತಿ ಮತ್ತು ಅದರ ಲೇಖಕನ ಬಗ್ಗೆ ಲಂಕೇಶರ ನಿಜವಾದ ಅಭಿಪ್ರಾಯವೇನೇ ಇರಲಿ, ಆ ಕೃತಿ ಹಾಗೂ ಆ ಲೇಖಕ ಅವರಿಗೆ ಅಪಥ್ಯವೆನಿಸತೊಡಗಿದ್ದು, ಆ ಕೃತಿಯ ಪ್ರಕಟಣಾ ಹಕ್ಕು ತಮಗೆ ದೊರೆಯುವುದಿಲ್ಲ ಎಂಬುದು ಖಚಿತವಾದಾಗ! ಒಮ್ಮೆ, ತೇಜಸ್ವಿಯವರನ್ನು ತಮ್ಮ ಕನಸಿನ ಕರ್ನಾಟಕದ ಮುಖ್ಯಮಂತ್ರಿಯೆಂದೂ; 'ಅಣ್ಣನ ನೆನಪುಗಳು' ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದ ಸಂದರ್ಭದಲ್ಲೇ ಶಿವಮೊಗ್ಗೆಯ ಒಂದು ಸಭೆಯಲ್ಲಿ ತೇಜಸ್ವಿಯವರನ್ನು ಜಗತ್ತಿನ ಶ್ರೇಷ್ಠ ಲೇಖಕರಲ್ಲಿ ಒಬ್ಬರು ಒಂದು ಗುಟ್ಟಾಗಿ ಹೇಳುವ ಧ್ವನಿಯಲ್ಲಿ ಬಹಿರಂಗವಾಗಿ ಸಾರಿ ಗೌರವಾನ್ವಿತವಾದ ಭಟ್ಟಂಗಿತನ ಪ್ರದರ್ಶಿಸಿದ್ದ ಲಂಕೇಶರಿಗೆ, ತೇಜಸ್ವಿ ಅವರೊಂದಿಗೆ ವ್ಯಾವಹಾರಿಕ ಘರ್ಷಣೆ ಆರಂಭವಾದೊಡನೆ ಅವರು ಓರ್ವ ಸಾಮಾನ್ಯ ಲೇಖಕನಂತೆ, ಧನದಾಹಿ ಯಂತೆ ಕಾಣಿಸತೊಡಗಿದರು... ಬಹುಶಃ 'ಅಣ್ಣನ ನೆನಪುಗಳು' ಕೃತಿಯನ್ನು ವಿಮರ್ಶಿಸುವ ನೆಪದಲ್ಲಿ ತೇಜಸ್ವಿಯವರ ಇತರ ಕೃತಿಗಳ ಸಾಮಾನ್ಯತೆ ಬಗೆಗೆ ಲಂಕೇಶ್ ತಮ್ಮದೇ ನವೀನ ಸಿದ್ಧಾಂತಗಳನ್ನೂ ಮಂಡಿಸಿದರು! ಇಲ್ಲಿ ತೇಜಸ್ವಿ ಹಾಗೂ ಅವರ ಕೃತಿಗಳು ಈ ಟೀಕೆಗಳಿಗೆ ಅರ್ಹವೋ ಅಲ್ಲವೋ ಎಂಬುದು ಮುಖ್ಯ ಪ್ರಶ್ನೆಯಲ್ಲ. ಮುಖ್ಯವಾದುದು ಲಂಕೇಶರ ಸಾಹಿತ್ಯ ವಿಮರ್ಶೆಯ ಅಪ್ರಾಮಾಣಿಕತೆ. ಸ್ವತಃ ಲಂಕೇಶರಿಗೇ ಇದು ಅರಿವಾಗಿದ್ದುದರಿಂದಲೋ ಏನೋ, ಅವರು ತಮ್ಮ ಕೊನೆಯ ದಿನಗಳಲ್ಲಿ ಬಹಳ ಬಾರಿ ಸಾಹಿತ್ಯ ವಿಮರ್ಶೆಯ ಮಹತ್ವ ಹಾಗೂ ಪ್ರಾಮಾಣಿಕತೆಗಳ ಬಗ್ಗೆ ಬಡಬಡಿಸಿ ಬರೆಯುತ್ತಿದ್ದರು...

ಲಂಕೇಶ್ ಆಧುನಿಕ ಕನ್ನಡದ ಅಸಾಮಾನ್ಯ ಪ್ರತಿಭೆಗಳಲ್ಲೊಂದು ಎಂಬುದನ್ನು ಕನ್ನಡ ಸಾಹಿತ್ಯ ಬಲ್ಲ ಯಾರೂ ನಿರಾಕರಿಸಲಾರರು. ಆದರೆ ಆ ಪ್ರತಿಭೆಯೊಂದಿಗೆ ಮಿತಿ ಇಲ್ಲದ ಅಸಹನೆ, ಅಸೂಯೆ, ಭೀತಿ ಮುಂತಾದ ವಕ್ರತೆಗಳೂ ಬೆರೆತಿದ್ದವು. ಲಂಕೇಶ್ ಓರ್ವ ಸಾಹಿತಿ ಮಾತ್ರ ಆಗಿದ್ದ ಕಾಲದವರೆಗೆ ಅವರ ಈ ವಕ್ರತೆಗಳನ್ನು ಸಾಹಿತ್ಯಿಕ ಪರಿಭಾಷೆಯಲ್ಲಿ ವಿವರಿಸಬಹುದಿತ್ತೋ ಏನೋ! ಆದರೆ ಪತ್ರಕರ್ತ, ಅದಕ್ಕಿಂತ ಹೆಚ್ಚಾಗಿ ಪತ್ರಿಕೋದ್ಯಮಿಯಾದ ನಂತರ ಅವರು ಪತ್ರಿಕೆಯನ್ನು ಓರ್ವ ಸಾಹಿತಿಯಾಗಿ ನಡೆಸಿದ ರೀತಿ-ನೀತಿ, ಅವರೆಲ್ಲ ವಕ್ರತೆಗಳು ಸಾಹಿತಿಯ ವಕ್ರತೆಗಳು ಮಾತ್ರವಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಇದು, ಅವರು ಸಾಹಿತಿ ಮಾತ್ರವಾಗಿದ್ದಾಗ ಸಂಪಾದಿಸಿದ 'ಅಕ್ಷರ ಹೊಸ ಕಾವ್ಯ' ಸಂಕಲನವನ್ನು, ಅವರ ಪತ್ರಿಕೋದ್ಯಮಿಯಾದ ನಂತರ ಪರಿಷ್ಕರಿಸಿ ಪ್ರಕಟಿಸಿದ ಆವೃತ್ತಿಯೊಂದಿಗೆ ಹೋಲಿಸಿ ನೋಡಿದರೆ ಸ್ಪಷ್ಟವಾಗುತ್ತದೆ. ಈ ಹಿಂದೆ ಸ್ವತಃ ಅವರಿಂದಲೇ ಕುಕವಿಗಳೆಂದೋ ಕವಿ ವೇಷಧಾರಿಗಳೆಂದೋ ಲೇವಡಿ ಮಾಡಲ್ಪಟ್ಟಿದ್ದ ಅನೇಕರು ಅಲ್ಲಿ 'ಮುಖ್ಯ ಕವಿ'ಗಳಾಗಿ ಮಾರ್ಪಾಟಾಗಿದ್ದಾರೆ - ಅವರೆಲ್ಲ ಅವರ 'ದಾಸಕೂಟ'ದ ಸದಸ್ಯರಾಗಿ ಪರಿವರ್ತಿತರಾದವರು ಎಂಬ ಒಂದೇ ಕಾರಣದಿಂದಾಗಿ! 'ಸಮಕಾಲೀನರಲ್ಲಿ ಲಂಕೇಶರಷ್ಟು ತಪ್ಪಾಗಿ ತಿಳಿಯಲ್ಪಟ್ಟ ಸಾಹಿತಿ ಬೇರೊಬ್ಬರಿಲ್ಲ' ಎಂಬ

ಕೆ.ವಿ. ತಿರುಮಲೇಶರ ಮಾತನ್ನು ಲಂಕೇಶರಿಗೆ ಬೆಂಬಲವಾಗಿ ಹೇಳಲಾಗದು. ಏಕೆಂದರೆ ಲಂಕೇಶರು ತಪ್ಪಾಗಿ ತಿಳಿಯಲ್ಪಡಲು ಪ್ರಮುಖ ಕಾರಣ ಸ್ವತಃ ಅವರೇ ಆಗಿದ್ದರು.

ಅಪಾರ ಪ್ರತಿಭಾಸಂಪನ್ನರೂ, ಅಷ್ಟೇ ಪ್ರಮಾಣದ ದೌರ್ಬಲ್ಯಗಳನ್ನೂ ಹೊಂದಿದ್ದ ಲಂಕೇಶ್ ಬಗ್ಗೆ ಹೀಗೇ ಬರೆಯುತ್ತಾ ಹೋಗಬಹುದು. ಅವರ ವ್ಯಕ್ತಿತ್ವದಂತೆಯೇ ಅವರ ಪತ್ರಿಕಾ ಬರಹಗಳೂ ಕೂಡಾ. ಅವರ ಈ ಬರಹಗಳಲ್ಲಿ ಸತ್ಯದೊಂದಿಗೆ ಮಿಥ್ಯವೂ, ಸದುದ್ದೇಶಗಳೊಂದಿಗೆ ದುರುದ್ದೇಶಗಳೂ ಎಷ್ಟು ಜಾಣತನದೊಂದಿಗೆ ಬೆರೆತಿರುತ್ತಿದ್ದುವೆಂದರೆ, ಅವರ ಸತ್ಯ ಪ್ರತಿಪಾದನೆಯನ್ನೂ, ಸದುದ್ದೇಶವನ್ನೂ ಮೆಚ್ಚಲು ಹೋದರೆ ಅವರು ಸೃಷ್ಟಿಸುತ್ತಿದ್ದ ಮಿಥ್ಯವನ್ನೂ, ಅವರ ಹಿಂದಿರುತ್ತಿದ್ದ ದುರುದ್ದೇಶವನ್ನೂ ಮೆಚ್ಚಬೇಕಾದ ಪ್ರಮೇಯ ಉಂಟಾಗುತ್ತಿತ್ತು! ಹಾಗೇ ಅವರ ಮಿಥ್ಯೆಯನ್ನೂ, ದುರುದ್ದೇಶವನ್ನೂ ಟೀಕಿಸಲು ಹೊರಟಾಗ ಕೂಡಾ... ಲಂಕೇಶ್ ಒಂದು ಜಟಿಲ ಪ್ರತಿಭೆ. ಈ ಜಟಿಲತೆಯನ್ನು ಸಾವಧಾನವಾಗಿ, ನಿರುದ್ವಿಗ್ನವಾಗಿ ಬಿಡಿಸಿ ನೋಡಿದಾಗ ಮಾತ್ರ ಲಂಕೇಶ್ ಸಮಕಾಲೀನ ಕನ್ನಡ ಸಾಹಿತ್ಯಕ್ಕೆ ಏನು ಕೊಟ್ಟಿದ್ದಾರೆ ಹಾಗೂ ಎಷ್ಟು ಆಘಾತ ಮಾಡಿದ್ದಾರೆ ಎಂಬುದನ್ನು ಅರಿಯಲು ಸಾಧ್ಯ. ಅಂತಹ ವಾತಾವರಣ ಅವರು ಬದುಕಿದ್ದಾಗ ಸಾಧ್ಯವಿರಲಿಲ್ಲ - ಅವರು ತಮ್ಮ ಪತ್ರಿಕೆ ಹಾಗೂ ಅನುಯಾಯಿಗಳ ಮೂಲಕ ಸಾಹಿತ್ಯ ಲೋಕದಲ್ಲಿ ಸೃಷ್ಟಿಸಿದ 'ಮಾಫಿಯಾ' ಪ್ರಭಾವದಿಂದಾಗಿ, ಅವರ ನಿಧನಾನಂತರವಾದರೂ ಈ ವಿಶ್ಲೇಷಣೆ ಆಗಿ, ಸಮಕಾಲೀನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಲಂಕೇಶರ ಮಹತ್ವವನ್ನು ಗುರುತಿಸುವ ಕೆಲಸ ತುರ್ತಾಗಿ ಆಗಬೇಕು. ಇದಕ್ಕೆ ಅಡ್ಡಿ ಮಾಡುವಂತಹ ಯಾವುದೇ ವ್ಯಕ್ತಿನಿಷ್ಠ ಪ್ರಯತ್ನಗಳು ನಿರ್ದಿಷ್ಟವಾಗಿ ಲಂಕೇಶರಿಗೇ, ಸಾರ್ವತ್ರಿಕವಾಗಿ ಕನ್ನಡ ಸಾಹಿತ್ಯ ಚರಿತ್ರೆಗೇ ಅನ್ಯಾಯ ಮಾಡುವಂತಹವಾಗಿರುತ್ತವೆ.

(ಪ್ರಜಾವಾಣಿ : ಸಾಪ್ತಾಹಿಕ ಪುರವಣಿ : ೧೭ನೇ ಸೆಪ್ಟೆಂಬರ್ ೨೦೦೦)

ಪ್ರತಿಕ್ರಿಯೆ - ೫

'ಅಗ್ನಿ' ಬರಹಗಳು : ಒಂದು ವಿಸ್ತೃತ ಪ್ರತಿಕ್ರಿಯೆ

ಈಚೆಗೆ 'ಅಗ್ನಿ' ಬೆಂಕಿಯನ್ನಷ್ಟೇ ಉಗುಳದೆ ಬೆಳಕನ್ನೂ ಚೆಲ್ಲತೊಡಗಿರುವುದು ಸಂತೋಷ ತಂದಿದೆ. ಕಳೆದ ವಾರದ ನಿಮ್ಮ ಸಂಪಾದಕೀಯ ಹಾಗೂ ಈ ವಾರ (೧೪ ಆಗಸ್ಟ್ ೨೦೦೩) ನೀವು ಪ್ರಕಟಿಸಿರುವ ದೇವನೂರ ಮಹಾದೇವ ೧೯೮೩ರಲ್ಲಿ ಬರೆದ 'ಗಾಂಧಿಯೂ ನಮಗೆ ದಿಕ್ಕಾಗಬಹುದು....' ಎಂಬ ಲೇಖನ ಗಾಂಧೀಜಿಯ ಕುರಿತು ಅಷ್ಟೇನೂ ಸದಭಿಪ್ರಾಯ

ಹೊಂದದಂತೆ ಕಾಣುವ ಇಂದಿನ ಪೀಳಿಗೆಯವರಲ್ಲಿ ಸ್ವಲ್ಪ ಕುತೂಹಲ ಹುಟ್ಟಿಸಬಹುದೆಂಬ ಸದಾಶಯ ನನ್ನದು. 'ಅಗ್ನಿ'ಯಲ್ಲಿ ಆಗಾಗ್ಗೆ ಪ್ರಕಟವಾಗುತ್ತಿರುವ ವಿಜಯಾ ಮಹೇಶ್ ಎಂಬುವವರ ಬ್ರಾಹ್ಮಣರನ್ನು ಕುರಿತು ಒರಟು ಒರಟಾದ ಲೇಖನಗಳು ಗಾಂಧೀಜಿಯನ್ನು ಓರ್ವ ಜಾತ್ಯಾಂಧನಂತೆ ಚಿತ್ರಿಸುವ ಅತಿಯನ್ನು ಮುಟ್ಟಿದ್ದು ಆತಂಕವನ್ನುಂಟುಮಾಡಿತ್ತಾದರೂ ಅದುವೇ ಪ್ರತಿಯಾಗಿ ಉಂಟುಮಾಡಿದ ಚರ್ಚೆ ನಮ್ಮ ಜನಮಾನಸದಲ್ಲಿ ಗಾಂಧಿ ದೀಪ ಇನ್ನೂ ಆರಿಲ್ಲ ಎಂಬುದನ್ನು ಶ್ರುತಪಡಿಸಿದ್ದು ಸಂತೋಷದ ಸಂಗತಿ. ತೇಜಸ್ವಿ, ನಂಜುಡಸ್ವಾಮಿ, ಮಹಾದೇವ ಮುಂತಾದವರು 'ಅಗ್ನಿ'ಯ ಮೂಲಕ ಮತ್ತೆ ವಾಗ್ವಾದಕ್ಕೆ ತೊಡಗಿರುವುದು ಶುಭ ಸೂಚನೆಯೆಂದೇ ನಾನು ಭಾವಿಸಿದ್ದೇನೆ. ಹಾಗೇ 'ಅಗ್ನಿ'ಯಲ್ಲಿನ ಇತ್ತೀಚಿನ ಕೆಲವು ಬರಹಗಳ ಬಗ್ಗೆ ಪ್ರತಿಕ್ರಿಯಿಸಲೇ ಬೇಕೆನಿಸಿದ್ದರಿಂದ ಈ ಮುಂದಿನ ಸಾಲುಗಳನ್ನು ಬರೆಯುತ್ತಿದ್ದೇನೆ.

ಮಹಾದೇವ ೯೦ರ ದಶಕರಲ್ಲಿ ದಲಿತ ಸಂಘರ್ಷ ಸಮಿತಿಯಲ್ಲಿ ತಮ್ಮ ಶಕ್ತ್ಯಾನುಸಾರ ಸಕ್ರಿಯವಾಗಿದ್ದವರು. ಆ ಕಾರಣದಿಂದಲೇ ಏನೋ ಆಗ ದ.ಸಂ.ಸ.ದಲ್ಲಿದ್ದ ಗಾಂಧೀ ವಿರೋಧಿಗಳನ್ನು ತಣಿಸಲೆಂದೇ ತಮ್ಮ ಲೇಖನದ ಮೊದಲ ಭಾಗದಲ್ಲಿ 'ತನ್ನ ಒಂದು ದೇಹದಲ್ಲಿ ಇಷ್ಟೆಲ್ಲಾ ರೂಪಾಂತರವಾದ ಗಾಂಧಿ - ಯಾಕೆ ಅಸ್ಪೃಶ್ಯನ ದೇಹ, ಮನಸ್ಸು, ಪಡೆಯಲಿಲ್ಲ ಎಂಬುದು ನನ್ನನ್ನು ಖಿನ್ನನನ್ನಾಗಿಸಿದೆ... ಮುಂತಾಗಿ ಬರೆದಿದ್ದಾರೆ ಎನ್ನಿಸುತ್ತದೆ. ಏಕೆಂದರೆ, ಇಲ್ಲಿರುವುದು ಮಹಾದೇವ ಅವರಲ್ಲಿ ಸಾಮಾನ್ಯವಾಗಿ ಕಾಣದ ಚರಿತ್ರೆಯ ವಾಸ್ತವತೆಯನ್ನು ಮರೆತ ಹುಸಿ ರೊಮ್ಯಾಂಟಿಕ್ ದೃಷ್ಟಿ ಮಾತ್ರ. ವೇದಾಧ್ಯಯನ ಮಾಡುತ್ತಿರುವ ಬ್ರಾಹ್ಮಣ ಜಾತಿಯ ನನ್ನ ಗೆಳೆಯನೊಬ್ಬ ಮಹಾದೇವ ಅವರ ಚಾರಿತ್ರ್ಯವನ್ನು ಮೆಚ್ಚಿ ಮಾತನಾಡುತ್ತಾ 'ಅವರು ನೋಡಿ ನಿಜವಾದ ಬ್ರಾಹ್ಮಣ...' ಎಂದು ಹೇಳಿದ್ದುಂಟು. ಹಾಗೇ ಮುಂದುವರಿದು ಆ ಗೆಳೆಯ 'ಅದೇ ಮಹಾದೇವ ಯಾಕೆ ಬ್ರಾಹ್ಮಣ ದೇಹ ಮತ್ತು ಮನಸ್ಸು ಪಡೆಯಲಿಲ್ಲ...' ಎಂದು ಅವಲತ್ತುಕೊಂಡು ಖಿನ್ನನಾಗುವುದು ಎಷ್ಟು ಅಸಂಗತವಾಗಿ ಕಾಣಬಹುದೋ ಅಷ್ಟೇ ಅಸಂಗತವಾಗಿ ಕಾಣುತ್ತದೆ ಮಹಾದೇವರ ಈ ಖಿನ್ನತೆ. ಈ ದೃಷ್ಟಿಯಿಂದ '... ಅದಕ್ಕಾಗಿ ಗಾಂಧಿ ಬಗ್ಗೆ ಅಂಬೇಡ್ಕರರಿಗೆ ಇರುವ ಕಠೋರತೆಯನ್ನು ಅರ್ಥ ಮಾಡಿಕೊಳ್ಳಬೇಕೆನಿಸುತ್ತದೆ' ಎಂಬ ಅವರ ತೀರ್ಮಾನವೂ ಅಸಮಂಜಸ ಎನಿಸುತ್ತದೆ.

ಗಾಂಧಿ-ಅಂಬೇಡ್ಕರ್ ಮುಖಾಮುಖಿಯ ಬಗ್ಗೆ ಚರ್ಚಿಸುತ್ತಿದ್ದ ಸಂದರ್ಭದಲ್ಲಿ ಮಹಾದೇವ ಅವರೇ ನನಗೊಮ್ಮೆ ಹೇಳಿದಂತೆ, ಗಾಂಧಿ ಆರಂಭಿಸಿದ ಆಂದೋಲನಕ್ಕೆ ಇಡೀ ಸಮಾಜವನ್ನು ತನ್ನ ಜೊತೆಗೆ ಕರೆದುಕೊಂಡು ಹೋಗುವ ಚಾರಿತ್ರಿಕ ಅಗತ್ಯತೆ ಇತ್ತು. ಆದರೆ ಅಂಬೇಡ್ಕರ್‌ರ ಹೋರಾಟವನ್ನು ಗಮನಿಸಿದಾಗ ಅವರ ಹೋರಾಟಕ್ಕೆ ಅದು ಅಗತ್ಯವಾಗಿರಲಿಲ್ಲ ಎಂಬುದು ಗೊತ್ತಾಗುತ್ತದೆ. ಮಹಾದೇವ ಅವರ ಆ ಲೇಖನದ ಭಾಷೆಯಲ್ಲೇ ಹೇಳುವುದಾದರೆ ಇಡೀ ಸಮಾಜದ 'ಬಗ್ಗೆ'ಯಿಂದ ಅಂಬೇಡ್ಕರ್ 'ಅದೇ' ಆಗುವುದಿಲ್ಲ. ಇದನ್ನರಿಯದವರು ಹಾಗೂ ಅರಿಯಲು ಉದ್ದೇಶಕಪೂರ್ವಕವಾಗಿ ನಿರಾಕರಿಸುವವರು ಗಾಂಧೀ - ಅಂಬೇಡ್ಕರ್ ಮುಖಾಮುಖಿಯನ್ನು ಅಶ್ಲೀಲವಾಗಿ ಮಾತ್ರ ಚಿತ್ರಿಸಬಲ್ಲರು. ವಿಜಯಾ ಮಹೇಶ್ ಅವರು

ತಮ್ಮ ಈ ಹಿಂದಿನ ಲೇಖನಗಳಲ್ಲಿ ಮಾಸ್ತಿ, ಡಿವಿಜಿ, ವಿಶ್ವೇಶ್ವರಯ್ಯ ಮುಂತಾದ ಪ್ರಮುಖ ಹಾಗೂ ಅಪ್ರಮುಖ ಬ್ರಾಹ್ಮಣರ 'ಸಣ್ಣತನ'ವನ್ನು ಬಹಿರಂಗಗೊಳಿಸುವ ಉತ್ಸಾಹದಲ್ಲಿ ಬ್ರಾಹ್ಮಣ ದ್ವೇಷವನ್ನಷ್ಟೇ ಉದ್ದೀಪಿಸುವ ಪ್ರಯತ್ನ ಮಾಡುತ್ತಿದ್ದಾರೆನ್ನಿಸುತ್ತದೆ. ಅವರ ಲೇಖನಗಳಲ್ಲಿ ಬರುವ ಬಹಳಷ್ಟು ಸಂಗತಿಗಳು ಡಿವಿಜಿ ಅವರ ಸ್ಮೃತಿ ಸಂಪುಟಗಳಲ್ಲಿ ಈಗಾಗಲೇ ದಾಖಲಾಗಿವೆ. ಡಿವಿಜಿ ಬರೆದಿರುವ ರೀತಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗಳ ಅಸಮರ್ಪಕ ಹಾಗೂ ತಪ್ಪು ತಿಳುವಳಿಕೆಗಳು ಲೇವಡಿ, ಮರುಕ ಅಥವಾ ಸಹಾನುಭೂತಿಗೆ ಅರ್ಹವಾಗಿ ಕಂಡರೆ ಅದೇ ಸಂಗತಿಗಳನ್ನು ವಿಜಯಾ ಮಹೇಶ್ ಅವರು ಮಂಡಿಸಿರುವ ರೀತಿ ಅದೇ ವ್ಯಕ್ತಿಗಳನ್ನು ಖಳನಾಯಕರನ್ನಾಗಿಯೊ, ನೀಚರನ್ನಾಗಿಯೊ ಪ್ರಸ್ತುತಪಡಿಸುತ್ತವೆ. ಇದು ಯಾತಕ್ಕಾಗಿ? ಗಾಂಧೀಜಿಯ ಅಭಿಪ್ರಾಯಗಳನ್ನು ಅಸಮಗ್ರ, ಅಸಾಂದರ್ಭಿಕ ಹಾಗೂ ಅಪ್ರಾತಿನಿಧಿಕವಾಗಿ ಯಾಕೆ ಉಲ್ಲೇಖಿಸಲಾಗುತ್ತಿದೆಯೊ ಅದಕ್ಕಾಗಿಯೇ ಇದೂ ಇರಬಹುದೆನಿಸುತ್ತದೆ. ಆದರೆ ಇದರಿಂದ ಎಂತಹ ಪ್ರಯೋಜನವಾದೀತು?

ಜಾಗತೀಕರಣವನ್ನು ಕುರಿತ ತೇಜಸ್ವಿ ಅವರ ತಪ್ಪು ತಿಳುವಳಿಕೆಗಳನ್ನು ನಂಜುಂಡಸ್ವಾಮಿ ಅವರು ಸಕಾರಣವಾಗಿ ಎತ್ತಿ ತೋರಿಸಿದ್ದಾರೆ. ಮೊದಲಿಂದಲೂ ಸೈಕಲ್, ಸ್ಕೂಟರ್, ಕಾರ್ ಮುಂತಾಗಿ ಯಂತ್ರ ಪ್ರಿಯರಾದ ತೇಜಸ್ವಿ, ಈಗ ಯಂತ್ರಗಳ ಯಂತ್ರವೆನಿಸಿರುವ ಕಂಪ್ಯೂಟರ್ ಎಂಬ ಯಂತ್ರಕ್ಕೆ ಮರುಳಾಗಿ, ಅದರ ಮೂಲಕ ದೊರಕುವ ವೈವಿಧ್ಯಮಯ ಮಾಹಿತಿಯನ್ನು ಕನ್ನಡೀಕರಿಸಿ ಪುಸ್ತಕ ಮಾಡಿ ಮಾರುವುದರಲ್ಲೇ ಇತ್ತೀಚೆಗೆ ತಮ್ಮ ಬರವಣಿಗೆಯ ಸಾರ್ಥಕ್ಯವನ್ನು ಕಂಡುಕೊಂಡಂತೆ ಕಾಣುತ್ತಾ 'Internet ಸಾಹಿತಿ' ಎಂದೇ ಗುರುತಾಗುತ್ತಿರುವುದು ವಿಷಾದನೀಯ. ತಮ್ಮ ಕಲಾಕೃತಿಗಳಲ್ಲಾಗಲಿ, ಲೇಖನಗಳಲ್ಲಾಗಲಿ ತಾವು ಎತ್ತಿಕೊಂಡ ತಾತ್ವಿಕ 'ಚರ್ಚೆ'ಯನ್ನು ಆತ್ಯಂತಿಕವಾಗಿ ಸ್ನಿಗ್ಧತೆ, ನಿಗೂಢತೆ, ರೋಚಕತೆ, ತಮಾಷೆ ಮುಂತಾದ ಸಾಹಿತ್ಯಿಕ ಉಪಾಯಗಳಲ್ಲೇ ಮುಳುಗಿಸಿಬಿಟ್ಟು, ಮರುಳು ಮಾಡುವ ತೇಜಸ್ವಿ (ಇದಕ್ಕೆ ವಿವರಣೆಯ ಅಗತ್ಯವಿದೆ ಎಂದು ನಾನು ಬಲ್ಲೆ) ಈಗ ಸ್ವತಃ ತಾವೇ, ಜಾಗತೀಕರಣದ ಸಾಂಕೇತಿಕ ಸಾಧನ ದಂತಿರುವ ಕಂಪ್ಯೂಟರ್ ತಮಗೆ ಒದಗಿಸುತ್ತಿರುವ ವಾಣಿಜ್ಯ ಅನುಕೂಲತೆಗಳಿಗೆ ಮರುಳಾಗಿ ಬಿಟ್ಟಿರುವಂತೆ ಕೆಲವು ವರ್ಷಗಳಿಂದಲೂ ಜಾಗತೀಕರಣವನ್ನು 'ಜಾಗತಿಕತೆ' ಎಂಬರ್ಥ ದಲ್ಲಿಯೇ ಅರ್ಥೈಸಿ ವಾದ ಮಂಡಿಸುವ ಹಟ ತೋರುತ್ತಿದ್ದಾರೆ. ಈ ಹಟವನ್ನುಂಟು ಮಾಡಿರುವ ಮರುಳುತನದಿಂದಾಗಿಯೇ ತೇಜಸ್ವಿ ಅವರಿಗೆ ಗಾಂಧಿ ಅಪ್ರಸ್ತುತವಾಗಿ ಹೋಗಿರುವಂತೆ ಮತ್ತು ಕಳೆದೊಂದು ದಶಕದ ಅಭೂತಪೂರ್ವ ಭ್ರಷ್ಟಾಚಾರ, ಭಂಡ ಧಾರ್ಮಿಕ ವ್ಯವಹಾರ, ಸಾಹಿತ್ಯ-ಸಂಸ್ಕೃತಿಗಳನ್ನೂ ಬಿಡದ ನಿರ್ಲಜ್ಜ ವಾಣಿಜ್ಯೀಕರಣ ಹಾಗೂ ರೈತಾಪಿ ವರ್ಗದ ಆತ್ಮಹತ್ಯೆಗಳ ಹಿನ್ನೆಲೆಯಲ್ಲಿರುವ ಕೆಳಸಮುದಾಯಗಳ ದರಿದ್ರೀಕರಣಕ್ಕೂ, ಜಾಗತೀಕರಣಕ್ಕೂ ಸಂಬಂಧವೇ ಇಲ್ಲದಂತೆ ಕಾಣುತ್ತದೆ. ಭಾರತದ ಜಾತಿ ವ್ಯವಸ್ಥೆಯ ವಿರುದ್ಧ ವಿವಿಧ ಸ್ತರಗಳಲ್ಲಿ ಸಹಜ ಕಠೋರತೆಯಿಂದ ಬಹು ದಿನಗಳಿಂದಲೂ ವಾದ ಮಾಡುತ್ತಾ ಬಂದಿರುವ ತೇಜಸ್ವಿ ಇಡೀ ಜಗತ್ತನ್ನೇ ಇಂತಹ ಒಂದು ಕಠೋರ ಜಾತಿ ವ್ಯವಸ್ಥೆಗೆ ಅಧಿಕೃತವಾಗಿ ಒಳಪಡಿಸುತ್ತಿರುವ

ಜಾಗತೀಕರಣವನ್ನು ಅನಿವಾರ್ಯವೆಂಬಂತೆ ಒಪ್ಪಿಕೊಳ್ಳಬೇಕೆಂದು ವಾದಿಸುವುದು ನನಗೆ ಸೋಜಿಗವಾಗಿ ಕಾಣುತ್ತದೆ. ಜಾಗತೀಕರಣದ ಅಡಿಯಲ್ಲಿ ಸಿದ್ಧವಾಗುತ್ತಿರುವ ಮತ್ತು ಜಾರಿಯಾಗುತ್ತಿರುವ ವ್ಯಾಪಾರ ಒಪ್ಪಂದಗಳ ರೂಪದಲ್ಲಿ ಜಗತ್ತಿನ ಮನು ಧರ್ಮಶಾಸ್ತ್ರ ಕ್ರೋಢೀಕರಣವಾಗುತ್ತಿದೆ ಎಂಬುದನ್ನು ತೇಜಸ್ವಿ ದಯವಿಟ್ಟು ಗಮನಿಸಬೇಕು. ಆದರೂ ತೇಜಸ್ವಿ ಅವರ ವಾದದಲ್ಲಿ ಒಂದು ಸತ್ಯಾಂಶವಿದೆ. ಬಂಡವಾಳಶಾಹಿ ಆರ್ಥಿಕತೆಗೆ ಪರ್ಯಾಯಗಳಾಗಿ ಮೂಡಿಬಂದ ಎಡಪಂಥೀಯ ಸಿದ್ಧಾಂತಗಳೆಲ್ಲವೂ ಮನುಷ್ಯನ ಚಿತ್ತವೃತ್ತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಎಡವಿವೆ ಎಂಬ ಅವರ ಮಾತು ಸಿದ್ಧಾಂತಗಳ ಸ್ಮಶಾನದಂತೆ ಕಾಣಬರುತ್ತಿರುವ ಇಂದಿನ ಸಂದರ್ಭದಲ್ಲಿ ವಿಸ್ತೃತ ಚರ್ಚೆಗೆ ಎಡೆ ಮಾಡಿಕೊಡುವಂತಹದು. ಧರ್ಮವನ್ನು ಕುರಿತ ಎಡಪಂಥೀಯರ ಸಂಕುಚಿತ ದೃಷ್ಟಿಯೇ ಈ ಎಡವುವಿಕೆಗೆ ಕಾರಣವಾಗಿರ ಬಹುದೇ ಎಂಬುದು ನನ್ನ ಒಂದು ಸಂದೇಹವಾಗಿದೆ. ಈ ಹಿನ್ನೆಲೆಯಲ್ಲಿ ಒಂದು ಚರ್ಚೆಗೆಂದೇ ಹೋದ ಅಕ್ಟೋಬರ್‌ನಲ್ಲಿ 'ಸಮಾಜವಾದ: ಮುಂದಿನ ದಾರಿ' ಎಂಬ ಎರಡು ದಿನಗಳ ಅಧ್ಯಯನ ಶಿಬಿರವೊಂದನ್ನು ಕುವೆಂಪು ವಿಶ್ವವಿದ್ಯಾಲಯದ ಶಾಂತವೇರಿ ಗೋಪಾಲಗೌಡ ಪೀಠ ಹಾಗೂ ಮೈಸೂರಿನ ಲೋಹಿಯಾ ಪ್ರತಿಷ್ಠಾನದ ಸಹ ಯೋಗದೊಂದಿಗೆ ಶಿವಮೊಗ್ಗದಲ್ಲಿ ಆಯೋಜಿಸುವ ಪ್ರಯತ್ನವೊಂದನ್ನು ನಾನು ಮಾಡಿದ್ದೆನು. ಆಹ್ವಾನಿತರಾಗಿದ್ದ ತೇಜಸ್ವಿ ಅದಕ್ಕೆ ಬರಲಿಲ್ಲ. ಬಂದ ಸಮಾಜವಾದಿ 'ಹೋರಾಟಗಾರ'ರು ಕೆಲ ಹಿರಿಯ ಹಾಗೂ ಕಿರಿಯರ ಹೊರತಾಗಿ - ಆ ಶಿಬಿರದ ಗಂಭೀರತೆನ್ನು ಹಾಳು ಮಾಡುವಲ್ಲಿ ಶಕ್ತ್ಯಾನುಸಾರ ತಮ್ಮ ಅಶಿಸ್ತಿನ ಪಾಲನ್ನು ಸಲ್ಲಿಸಿ ಹೋದರು! ಈ ದೃಷ್ಟಿಯಿಂದ, ಇಂತಹ ಅನೇಕ ಶಿಬಿರಗಳನ್ನು ಆಯೋಜಿಸಿ ನಿರ್ದೇಶಿಸಿರುವ ಎಂ.ಡಿ. ನಂಜುಂಡಸ್ವಾಮಿ ಅವರು ತಮ್ಮ ಲೇಖನದಲ್ಲಿ ಮತ್ತೆ 'ಸಮಾಜವಾದಿ ತತ್ವಗಳ ಬಗ್ಗೆ ಚಿಂತನೆ ಪ್ರಾರಂಭಿಸುವ ಕೆಲಸ'ದ ಬಗ್ಗೆ ಮಾತನಾಡಿರುವುದು ನನ್ನಲ್ಲಂತೂ ಮಿಶ್ರ ಭಾವನೆಗಳಿಗೆ ಎಡೆ ಮಾಡಿದೆ....

'ಲಂಕೇಶ್ ಪತ್ರಿಕೆ'ಯ ಗರಡಿಯಲ್ಲಿ ಪಳಗಿದ ಮೊಗಳ್ಳಿ ಗಣೇಶ್ ಅವರು ಸಹಜವಾಗಿಯೇ ತಮ್ಮ 'ತಕರಾರು' ಕಾಲಮ್ಮಿನ ಮೂಲಕ ತಾವು ಬೀಸು ಹೇಳಿಕೆಗಳ ಸರದಾರ ಎಂಬುದನ್ನು ಖಚಿತಪಡಿಸಿಕೊಳ್ಳಲು ಹೆಣಗುತ್ತಿರುವಂತಿದೆ. ತನ್ನ ಯಾವ ಉಕ್ತಿಗೂ ಸಮರ್ಥನೆ ಅಗತ್ಯವಿಲ್ಲ ಎಂಬ ಮೂಲ ನಂಬಿಕೆಯುಳ್ಳ ಪ್ರವಾದಿಯ ತರಹ ಕನ್ನಡ ಸಾಹಿತ್ಯದ ಭೂತ ವರ್ತಮಾನಗಳ ಬಗ್ಗೆ ಬಿಡುಬೀಸಾದ ವ್ಯಾಖ್ಯಾನ ಮಾಡುತ್ತಾ ಹೋಗುತ್ತಿರುವ ಗಣೇಶ್ ತಾವು ಬರೆದುದನ್ನು ಮತ್ತೊಮ್ಮೆ ಓದುವ ಗೋಜಿಗೆ ಹೋಗುತ್ತಾರೊ ಇಲ್ಲವೂ ಎಂದು ಅನುಮಾನ ಪಡುವಷ್ಟು ವಿರೋಧಾಭಾಸದ ಹಾಗೂ ಅಸಂಗತ ಹೇಳಿಕೆಗಳನ್ನು ನೀಡುತ್ತಾ ಹೋಗುತ್ತಿದ್ದಾರೆ. ಹೀಗೇ ಭಾವಿಸಿ ಹಿಂದೊಮ್ಮೆ ಕೇಶವಶರ್ಮ ಎಂಬುವರೊಬ್ಬರು ಎತ್ತಿದ ಪ್ರತಿ ತಕರಾರರನ್ನು ಮೊಗಳ್ಳಿ ಅವರು ನಿಭಾಯಿಸಿದ ರೀತಿ ನೋಡಿದ ಮೇಲೂ ದೇವನೂರ ಮಹಾದೇವ ಅವರು ಯಾವ ಧೈರ್ಯದ ಮೇಲೆ ಒಂದೆರಡು ವಾರಗಳ ಹಿಂದಿನ ಸಂಚಿಕೆಯಲ್ಲಿ ಗಣೇಶರ ವಾದದಲ್ಲಿನ 'ಪ್ರಜ್ಞಾ ದೋಷವನ್ನು' ಸೂಚಿಸುತ್ತಾ ಅವರು ಇಡೀ ವಾದದ 'ವಸ್ತು ನಿಷ್ಠತೆ'ಯನ್ನೇ

ಅಪರೋಕ್ಷವಾಗಿ ಪ್ರಶ್ನಿಸಿದ್ದಾರೊ ಅದೇ ಧೈರ್ಯದ ಮೇಲೆ ನಾನೀಗ, ಮೊಗಳ್ಳಿಯವರು ಈ ವಾರದ ತಮ್ಮ ಕಾಲಂನಲ್ಲಿ ಪುತಿನ ಬಗ್ಗೆ ಬರೆದಿರುವ ಲೇಖನದಲ್ಲಿ ಬರುವ 'ಮಾಸ್ತಿ, ಬೇಂದ್ರೆ, ಕಾರಂತರು ಪರಂಪರೆಯ ಜೊತೆಗೆ ಆಧುನಿಕ ಯುಗದ ವಿವೇಕವನ್ನು ತುಂಬಿಕೊಂಡು ಸೃಜನಶೀಲತೆಯ ಕ್ರಮದಲ್ಲಿ ವ್ಯಕ್ತಿವಿಶಿಷ್ಟ ಪ್ರತಿಭೆಯನ್ನು ಮೆರೆದರೆ, ಪುತಿನ ಅವರು ಆಧುನಿಕತೆಯ ಶಾಪಕ್ಕೆ ತನ್ನ ಪರಂಪರೆಯೇ ಪರಿಹಾರ ಎಂದು ನಂಬುತ್ತಾರೆ' ಎಂಬ ಮೊದಲ ಭಾಗವು ಸ್ವತಃ ಅವರೇ ಇದೇ ಕಾಲಂನಲ್ಲಿ ಈ ಹಿಂದೆ ಬೇಂದ್ರೆ, ಮಾಸ್ತಿ, ಮತ್ತು ಕಾರಂತರ ಬಗ್ಗೆ ಬರೆದ ಮಾತುಗಳಿಗೆ ವಿರೋಧದಂತಿದೆ ಎಂಬುದನ್ನು ಅವರ ಗಮನಕ್ಕೆ ತರಬಯಸುತ್ತೇನೆ. ವಿಶೇಷವಾಗಿ ಮಾಸ್ತಿ ಮತ್ತು ಕಾರಂತರ ಬಗ್ಗೆ ಹಿಂದಿನ ಲೇಖನಗಳಲ್ಲಿ ಅವರು ಮಂಡಿಸಿರುವ ವಾದವನ್ನು ಅವರು ಮತ್ತೊಮ್ಮೆ ಓದಿ ನೋಡಿದರೆ ಇಲ್ಲಿ ಹೊಸದಾಗಿ ಪ್ರಸ್ತಾಪಿತವಾಗಿರುವ 'ಆಧುನಿಕ ಯುಗದ ವಿವೇಕ' ಎಂಬ ಪದಪುಂಜಕ್ಕೆ ಸಾಮಾನ್ಯಾರ್ಥಕ್ಕಿಂತ ಭಿನ್ನವಾದ ಅರ್ಥವನ್ನು ಅವರು ವಿವರಿಸಿ ಹೇಳಬೇಕಾದ ಮಟ್ಟಿಗೆ ಅವರ ವಾದದ ನೆಲೆಗಳು ಭಿನ್ನವಾಗುವುದು ಗೋಚರವಾಗುತ್ತದೆ. ಪುತಿನ ಅವರು ಆಧುನಿಕತೆಯನ್ನು ಶಾಪವೆಂಬಂತೆ ಗ್ರಹಿಸಿದ್ದರು ಮತ್ತು ಅದಕ್ಕೆ ಪರಂಪರೆಯೇ ಪರಿಹಾರವೆಂದು ನಂಬಿದ್ದರು ಎಂದು ಹೇಳುವುದೂ, ಅವರ ಲೇಖನದ ಕೊನೆಯಲ್ಲಿ ನೀಡುವ ಪುತಿನ ಅವರ ಮಾತುಗಳ ಉಲ್ಲೇಖದ ಹೊರತಾಗಿಯೂ, ಬಿಡುಬೀಸಾದ ಹೇಳಿಕೆ ಮಾತ್ರ ಆಗುತ್ತದೆ. ಪರಂಪರೆ ಎಂದರೆ ಅಪ್ಪಟ ವೈದಿಕ ಪರಂಪರೆಯೇ ಹೌದು ಹಾಗೂ ಅದು ಆಧುನಿಕತೆಗೆ ವಿರುದ್ಧವಾದದ್ದು ಎಂಬ ಪೂರ್ವಗ್ರಹವು ಇಲ್ಲಿ ಕೆಲಸ ಮಾಡಿದಂತಿದೆ. ಪಾಶ್ಚಿಮಾತ್ಯತೆಯೇ ಆಧುನಿಕತೆ ಎಂಬ ಹುಸಿಭ್ರಮೆಯ ವಿರುದ್ಧ ಪರಂಪರೆ ಕುರಿತ ತಮ್ಮ ಸೃಜನಶೀಲ ನೋಟಗಳಿಂದಾಗಿ ನಿಜವಾದ ಅರ್ಥದಲ್ಲಿ ಆಧುನಿಕತೆಯ ಚೈತನ್ಯರೂಪರಾಗಿದ್ದ ಗಾಂಧಿ ಚಿಂತನೆಯನ್ನು ವಿಭಿನ್ನ ಕಾರಣಗಳಿಂದಾಗಿ ಒಪ್ಪದಿದ್ದ ಮಾಸ್ತಿ ಹಾಗೂ ಕಾರಂತರಿಗೆ ವಿಸದೃಶವಾಗಿ ಪುತಿನ ಅವರು ಗಾಂಧೀಜಿಯ ಆಧುನಿಕ ನೋಟದಿಂದ ಪ್ರಭಾವಿತರಾಗಿದ್ದ ರೆಂಬುದು ಅವರ ಇಡೀ ಸಾಹಿತ್ಯದ ಹಿಂದೆ ಕೆಲಸ ಮಾಡುವ ತಾತ್ವಿಕ ಉದಾರತೆಯ ಮೂಲಕ ವ್ಯಕ್ತವಾಗುವುದನ್ನು ನಾವು ಗಮನಿಸದೇ ಹೋಗುವುದು ತಪ್ಪಾಗುತ್ತದೆ.

ಹಾಗೆಯೇ ಮೊಗಳ್ಳಿ ಗಣೇಶ್ ಅವರ ಬರಹಗಳಲ್ಲಿ (ಮತ್ತು ಇತ್ತೀಚಿನ ಅನೇಕ ವಿಮರ್ಶಕರ ಬರಹಗಳಲ್ಲಿ) ಬಹುಬಾರಿ ವಿಮರ್ಶೆಯ ಪರಿಭಾಷೆಯ ಚೌಕಟ್ಟನ್ನೂ ಮೀರಿ ಗುಣಾವಗುಣ ವಿಭಜನೆಯ ಸಾಧನವಾಗಿ ಉಲ್ಲೇಖವಾಗುವ ವೈದಿಕ ಮತ್ತು ಅವೈದಿಕವೆಂಬ ಪರಿಕಲ್ಪನೆಗಳ ಬಗ್ಗೆಯೂ ವಿಷದವಾದ ಚರ್ಚೆಯಾಗಬೇಕಾದ ಅಗತ್ಯವಿದೆ ಎನಿಸುತ್ತದೆ. ಇಂದಿನ ವಿಮರ್ಶಾ ಲೋಕವನ್ನು ಆವರಿಸಿರುವ mediocrity ಮತ್ತು ಸುಲಭ ತೀರ್ಮಾನಗಳ ವಾತಾವರಣದಲ್ಲಿ ಇಂತಹ ಚರ್ಚೆ ಸಾಹಸಮಯ ಎನಿಸಿದರೂ ಕನ್ನಡ ಸಾಹಿತ್ಯ ವಿಮರ್ಶೆ ತನ್ನ ಇತ್ತೀಚಿನ ರೂಢಿಗತ ಪೂರ್ವಾಗ್ರಹಗಳಿಂದ ಮುಕ್ತವಾಗಲು ಇದು ಅಗತ್ಯವೆನಿಸಿದೆ. ಲೇಖಕ ನೊಬ್ಬನ ಜೀವನ ದೃಷ್ಟಿಕೋನವನ್ನು ಧಾರ್ಮಿಕ ಶಾಸ್ತ್ರಾದಿಗಳನ್ನು ವಿಭಜಿಸಿದಂತೆ ವೈದಿಕ - ಅವೈದಿಕವೆಂದು ಕಡ್ಡಿ ಮುರಿದಂತೆ ವಿಭಜಿಸಿ ಸಾಹಿತ್ಯಾದಿ ವಿದ್ಯಾಮಾನಗಳನ್ನು ವಿಶ್ಲೇಷಿಸುವುದು

ತಪ್ಪು ತೀರ್ಮಾನಗಳಿಗೆ ಹಾಗೂ ಅನೇಕಾನೇಕ ಸಾಮಾಜಿಕ-ಸಾಂಸ್ಕೃತಿಕ ಗೊಂದಲಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ನನಗನ್ನಿಸುತ್ತದೆ. ವೈದಿಕತೆ ಎಂದರೆ ವೇದ ಪ್ರಾಮಾಣ್ಯವನ್ನು ಒಪ್ಪುವುದು ಎಂದೇ ಆದಲ್ಲಿ, ಅಂತಹ ವೈದಿಕರಲ್ಲೇ ಇರುವ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ, ಪಾಶುಪತ, ಕಾಳಾಮುಖ, ಗಾಣಪತ್ಯ ಮುಂತಾದ ವಿಭಿನ್ನ ಜೀವನ ದೃಷ್ಟಿಕೋನಗಳು ಅನೇಕ ಕಡೆ ಅವೈದಿಕವೆಂದು ಕರೆಯಲಾಗುವ ಜೀವನದೃಷ್ಟಿಕೋನಗಳೊಂದಿಗೆ ಸಾಮೀಪ್ಯ ಸಾಧಿಸುವುದನ್ನು, ನಾವು ನಮ್ಮ ಇತ್ತೀಚಿನ ವಿಮರ್ಶೆಯಲ್ಲಿ ಕಾಣಬರುತ್ತಿರುವಂತಹ ಕಡ್ಡಿ ತುಂಡು ಮಾಡಿದಂತಿರುವ ವೈದಿಕ-ಅವೈದಿಕ ವಿಭಜನಾ ನೆಲೆಯಲ್ಲಿ ವಿವರಿಸುವುದಾದರೂ ಹೇಗೆ? ಹೀಗಾಗಿ ಇದು ವೈದಿಕ ಅದು ಅವೈದಿಕ ಎಂದು ಸಾರಾಸಗಟಾಗಿ ಗುರುತಿಸಿ ಅವನ್ನು ಸರಿ - ತಪ್ಪು, ಜೀವಪರ - ಜೀವ ವಿರೋಧಿ ಎಂಬ ಗುಣಾತ್ಮಕ ಟೀಕೆ ಟಿಪ್ಪಣಿಗಳಿಗೆ ಬಳಸಿಕೊಳ್ಳುವುದು ಉಚಿತವಲ್ಲವೆಂದೇ ನನ್ನ ಭಾವನೆ. ವೇದಗಳನ್ನು ಹಾಡುವವರೆಲ್ಲ ವೈದಿಕರಲ್ಲ. ಅವನ್ನು ಆತ್ಯಂತಿಕ ಸತ್ಯ ಸಂಚಯಗಳೆಂದೂ ಮತ್ತು ಅವುಗಳಾಚೆ ಇರುವುದೆಲ್ಲವೂ ಅಸತ್ಯವೆಂದು ತಿಳಿಯುವ ಪಾಖಂಡಿಗಳನ್ನು ಮಾತ್ರ ವೈದಿಕರೆಂದೂ, ಅಂತಹ ಹಿನ್ನೆಲೆಯಲ್ಲಿ ಹುಟ್ಟುವ 'ಪ್ರತಿಭೆ'ಯನ್ನು ಮಾತ್ರ ವೈದಿಕ ಪ್ರತಿಭೆಯೆಂದು ಕರೆಯಬಹುದೇನೋ. ಇದೇ ಮಾತನ್ನು 'ಅವೈದಿಕ' ಹಾಗೂ 'ಅವೈದಿಕ ಪ್ರತಿಭೆ'ಗೂ ಅನ್ವಯಿಸಿ ಹೇಳಬಹುದಾಗಿದೆ. ಈ ಎರಡೂ ಪಾಖಂಡಿ ಅತಿಗಳು ಮನುಷ್ಯನ ವಿವೇಕದ ಬಳಕೆಯನ್ನು ನಿರಾಕರಿಸುವ ರೂಕ್ಷ ಪ್ರವೃತ್ತಿಗಳೇ ಆಗಿವೆ. ಈ ಹಿನ್ನೆಲೆಯಲ್ಲೇ ಮೊದಲ ಅಧಿಕೃತ ಅವೈದಿಕನೆಂದು ಚಾರಿತ್ರಿಕವಾಗಿ ಗುರುತಿಸಲ್ಪಡುವ ಬುದ್ಧ ತನ್ನ ಶಿಷ್ಯರಿಗೆ ಆ ಕಾಲಕ್ಕೆ ವೈದಿಕತೆಯ ಪ್ರತಿನಿಧಿಗಳಂತಿದ್ದ ಬ್ರಾಹ್ಮಣರನ್ನು ಕೂಡಾ ಗೌರವಿಸುವಂತೆ ಸೂಚಿಸುತ್ತಿದ್ದನೆಂಬುದನ್ನು ನೆನೆಪಿಸಿಕೊಳ್ಳಬಹುದು. ಇದು ಪೂರ್ವಗ್ರಹಗಳಿಲ್ಲದೆ ಎಲ್ಲ ರೀತಿಯ ತರ್ಕ, ಚಿಂತನೆಗಳಿಗೆ ತೆರೆದುಕೊಂಡು ಸದಾ ಸೃಜನಶೀಲವಾಗಿ ಉಳಿಯುವ, ಬೆಳೆಯುವ ಮಾರ್ಗ; ಬುದ್ಧ, ಕಬೀರ, ಬಸವ, ತುಕಾರಾಮ, ರಾಮಕೃಷ್ಣ, ಗಾಂಧಿ, ರಮಣ ಮುಂತಾದವರು ಆಯ್ದುಕೊಂಡ ಮಾರ್ಗವಿದು. ಸ್ವಲ್ಪ ಮಟ್ಟಿಗೆ ಮಾಸ್ತಿ, ಬಹುಮಟ್ಟಿಗೆ ಪು.ತಿ.ನ ಈ ಮಾರ್ಗಾನುಯಾಯಿಗಳು. ಅವರನ್ನು ಸಾರಾಸಗಟಾಗಿ ವೇದ ಪ್ರತಿಭೆ ಎಂಬ ನೆಲೆಯಲ್ಲಷ್ಟೇ ವಿಶ್ಲೇಷಿಸುವುದು ನಮ್ಮನ್ನು ತಪ್ಪು ತೀರ್ಮಾನಗಳಿಗೆ ಒಯ್ಯಬಹುದು ಎಂದು ನನ್ನ ನಮ್ರ ಭಾವನೆ.

ಪು.ತಿ.ನ. ಸಾಹಿತ್ಯ ಕುರಿತಂತೆ ಗಣೇಶ್ ಅವರ ಮುಖ್ಯ ಆಕ್ಷೇಪ ಅವರ ಮಾತುಗಳಲ್ಲೇ ಹೇಳುವುದಾದರೆ, 'ಪರಂಪರೆಯನ್ನು ಪ್ರಶ್ನಿಸದೆ ವೈದಿಕ ಮೌಲ್ಯಗಳನ್ನು ಸೌಂದರ್ಯದ ಅಮಲು ಕುಡಿಸಿ ಹೇರಿ ಬಿಡುತ್ತಾರೆ' ಎಂಬುದು. ಆದರೆ ಮೂಲ ಪ್ರಶ್ನೆ, ಪರಂಪರೆಯನ್ನು ಮೊಗಳ್ಳಿ ಗಣೇಶ್ ಅಪೇಕ್ಷಿಸುವ ರೀತಿಯಲ್ಲೇ ಎಲ್ಲರೂ ಏಕೆ ಪ್ರಶ್ನಿಸಬೇಕು ಮತ್ತು ಅಮಲಿನಲ್ಲಿ ಹೇರಲಾಗುವ ಆ ಅನಪೇಕ್ಷಣೀಯ ವೈದಿಕ ಮೌಲ್ಯಗಳಾದರೂ ಯಾವುವು? (ಪು.ತಿ.ನ. ಅವರು ರಾಮ ಮಂದಿರ ಆಂದೋಲನದ ವಿರೋಧಿಗಳೂ, ವಿಧವಾ ಹಾಗೂ ಅಂತರಜಾತಿಯ ವಿವಾಹಗಳ ಬೆಂಬಲಿಗರೂ ಆಗಿದ್ದರು ಎಂಬುದನ್ನೂ ಇಲ್ಲಿ ಗಮನಿಸಬೇಕು) ಎಂಬುದೇ

ಆಗಿದೆ. ಮೊಗಳ್ಳಿಯವರ ನೆಲೆಯನ್ನೇ ಒಪ್ಪಿಕೊಂಡರೆ ಆಧುನಿಕ ಕನ್ನಡದ ಶ್ರೇಷ್ಠ ಬರಹಗಾರರೆಂದು ಅವರವರ 'ನೆಲೆ'ಗಳಿಗನುಗುಣವಾಗಿ ಟಿ.ಪಿ. ಕೈಲಾಸಂರನ್ನೋ ಬರಗೂರು ರಾಮಚಂದ್ರಪ್ಪನವರನ್ನೋ ಒಪ್ಪಿಕೊಳ್ಳಬೇಕಾಗುತ್ತದೆ. ಮೊಗಳ್ಳಿ ಇದನ್ನು ಒಪ್ಪುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಅಲ್ಲದೆ ಅಮಲನ್ನಷ್ಟೇ ಉಂಟು ಮಾಡುವುದನ್ನು ಸೌಂದರ್ಯವೆಂದು ಕರೆಯಬಹುದೇ ಮತ್ತು ಅಂತಹ ಅಮಲಿನಲ್ಲಿ ಹೇರಲ್ಪಡುವ ಮೌಲ್ಯಗಳು ಎಷ್ಟು ಕಾಲ ಉಳಿದಾವು ಎಂಬ ಆನುಷಂಗಿಕ ಪ್ರಶ್ನೆಯೂ ಇದೆ!

ನಯವಿನಯಗಳಿಂದಲೇ ಪರಂಪರೆಯನ್ನು ಪಳಗಿಸುವ ಮತ್ತು ಆ ಮೂಲಕ ಮೌಲ್ಯಗಳನ್ನು ಪರಿಷ್ಕರಿಸುವ ಒಂದು **wisdom** ಬುದ್ಧನ ಕಾಲದಿಂದಲೂ ನಮ್ಮಲ್ಲಿ ಬೆಳೆದು ಬಂದಿದೆ. ಇದನ್ನೇ ಕುವೆಂಪು ತಮ್ಮ ಒಕ್ಕೂಟದ ಭಾಷಣದಲ್ಲಿ ಪರಂಪರೆಯ ಆಭರಣಗಳನ್ನು ಸಾರಸಗಟು ತಿರಸ್ಕರಿಸದೆ ಅವನ್ನು ಕರಗಿಸಿ ಹೊಸ ಕಾಲದ ಆಭರಣಗಳನ್ನಾಗಿ ಮಾಡಿಕೊಳ್ಳುವ ವಿವೇಕದ ಮಾರ್ಗ ಎಂದು ಸೂಚಿಸಿದ್ದು. ಇದು ಪರಂಪರೆಯೊಡನೆ ಸಾಹಿತಿಯೊಬ್ಬ ನಡೆಸಬಹುದಾದ ಹೆಚ್ಚು ಪರಿಣಾಮಕಾರಿ ಹಾಗೂ ಧಾರಣ ಶಕ್ತಿಯುಳ್ಳ ಮುಖಾಮುಖಿ ಮಾರ್ಗ ಎಂದು ನನಗನ್ನಿಸುತ್ತದೆ. ಇಲ್ಲದೇ ಹೋದಲ್ಲಿ, ಮೊಗಳ್ಳಿ ಅವರು ಪು.ತಿ.ನ ಸಾಹಿತ್ಯದ ಬಗ್ಗೆ ಬರೆದಿರುವ 'ಹೊಟ್ಟೆ ತುಂಬ ಉಂಡು ಸವಿ ತಿನಿಸು ಮೆಲ್ಲುತ್ತಾ ಆರಾಮವಾಗಿ.....' ಮುಂತಾದ ಮಾತುಗಳನ್ನು 'ಹೊಟ್ಟೆ ತುಂಬಾ ಕಡಿದು ಖಂಡವನ್ನು ಕಡಿಯುತ್ತಾ ಆರಾಮವಾಗಿ..., ಎಂದು ತಿರುಗಿಸಿ ಬರೆದು, ಮೊಗಳ್ಳಿ ಅವರ ಸಾಹಿತ್ಯದ ಮುಖಕ್ಕೆ ಹಿಡಿಯುವ ವಿಮರ್ಶೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಇದರಿಂದ ಯಾರಿಗೆ ಏನು ಪ್ರಯೋಜನ?

ನನ್ನ ಈ ಮೇಲಿನ ಎಲ್ಲಾ ಮಾತುಗಳು ಪು.ತಿ.ನ ಸಾಹಿತ್ಯ ಕುರಿತ ನನ್ನ ವಿಮರ್ಶೆಯ ಮಾತುಗಳಲ್ಲ; ಬದಲಾಗಿ ಪು.ತಿ.ನ. ಕುರಿತು ಮೊಗಳ್ಳಿ ಬರೆದಿರುವ ವಿಮರ್ಶೆಯ ಮಾತುಗಳ ನೆಲೆಗಳನ್ನು ಪ್ರಶ್ನಿಸುವ ಮಾತುಗಳು ಮಾತ್ರ ಆಗಿವೆ ಎಂಬುನ್ನು ಓದುಗರು ಗಮನಿಸುತ್ತಾರೆಂದು ನಂಬಿದ್ದೇನೆ.

❑

ಐದು ಪ್ರಶ್ನೋತ್ತರಗಳು

ವಿವಿಧ ಪತ್ರಿಕೆಗಳ / ಸಂಚಿಕೆಗಳ ಸಂಪಾದಕರು ವಿಶೇಷ ಸಂದರ್ಭಗಳಲ್ಲಿ ವಿವಿಧ ವಿಷಯಗಳ ಬಗೆಗೆ ಕೇಳಿದ ಪ್ರಶ್ನೆಗಳಿಗೆ ನಾನು ನೀಡಿದ ಉತ್ತರಗಳು ಇಲ್ಲಿವೆ.

- ಲೇಖಕ

ಮತ್ತೊಂದು ಈಸ್ಟ್ ಇಂಡಿಯಾ ಕಂಪೆನಿಯ ಚಿತ್ರ...

ಸ್ವಾತಂತ್ರ್ಯ ದೊರೆತು, ಈ ೫೦ ವರ್ಷಗಳಲ್ಲಿ ಆದದ್ದಾದರೂ ಏನು? 'ಇಲ್ಲ'ಗಳ ಪಟ್ಟಿಯೇ ಜಾಸ್ತಿ ಬೆಳೆಯಿತೇನೋ! ಗಾಂಧಿಯಂಥ ಹಿರಿಯರ ಆಶಯದಲ್ಲಿ ಭಾರತ ಮುಂದಡಿ ಇಡಲಿಲ್ಲವೆಂಬ ವಿಷಾದ ತುಂಬಿಕೊಂಡಿರುವ ಈ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯದ ಚಿನ್ನದ ಹಬ್ಬ ಬಂದಿದೆ. ಈ ಸಂದರ್ಭದಲ್ಲಿ ಕೆಲವು ಗಣ್ಯರಿಗೆ ಈ ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ಎಲ್ಲಕ್ಕೂ 'ಇಲ್ಲ' ಎಂಬ ಒದು ಪದದಲ್ಲಿ ಉತ್ತರಿಸುವ ಸಾಧ್ಯತೆಯಿದ್ದಿತಾದರೂ ಅದನ್ನು ಮೀರಿ ಅವರು ನೀಡಿದ ಚಿಂತನೆ ರೂಪದ ಉತ್ತರಗಳು ಇಲ್ಲಿವೆ:

೧) ಸ್ವತಂತ್ರ ಭಾರತದ ಆಡಳಿತವು ಪ್ರಜಾಪ್ರಭುತ್ವ ಸಂಸ್ಕೃತಿಯನ್ನು ಎಲ್ಲ ಕ್ಷೇತ್ರಗಳಲ್ಲಿ ನೆಲೆಗೊಳಿಸುವಲ್ಲಿ ಯಶಸ್ವಿಯಾಗಿದೆಯೇ?

೨) ಸ್ವಾತಂತ್ರ್ಯೋತ್ತರ ಭಾರತದ ನಮ್ಮ 'ಶಿಕ್ಷಣ'ವು ಅಸಮಾನತೆಯ ವ್ಯವಸ್ಥೆಯಾಗಿರುವ ನಮ್ಮ ಸಮಾಜವನ್ನು ತಿದ್ದಲು ಸಹಕಾರಿಯಾಗಿದೆಯೇ?

೩) ಸಾಮಾಜಿಕ ಪಿಡುಗುಗಳಾದ ಅಸ್ಪೃಶ್ಯತೆ ಮತ್ತು ಜಾತೀಯತೆಯ ವಿನಾಶಕ್ಕೆ ಮೂಡಿಬಂದ ಸ್ವತಂತ್ರ ಭಾರತದ ಚಿಂತನೆ ಮತ್ತು ಯೋಜನೆಗಳು ಸಮರ್ಪಕವೆನ್ನಿಸುತ್ತವೆಯೇ?

೪) ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆ ನಮ್ಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ನನಸಾಗುವುದೇ?

೫) ಆರ್ಥಿಕ ಉದಾರೀಕರಣ ಮತ್ತು ಖಾಸಗೀಕರಣದಿಂದ ಗಾಂಧೀಜಿ ಕನಸಿನ ಸ್ವರಾಜ್ಯ ಕಟ್ಟಲು ಸಾಧ್ಯವೇ?

ಮಾನ್ಯರೆ,

ನಿಮ್ಮ ಎಲ್ಲ ಐದು ಪ್ರಶ್ನೆಗಳಿಗೂ ಬಹುಮಟ್ಟಿಗೆ ಇಲ್ಲ ಎಂಬುದೇ ನನ್ನ ಸಾಮಾನ್ಯ ಉತ್ತರ. ಇದಕ್ಕೆ ಕಾರಣ ಮುಖ್ಯವಾಗಿ, ನಿಮ್ಮ ಪ್ರಶ್ನೆಗಳು. ರಾಷ್ಟ್ರ ಒಂದು ಗೊತ್ತಾದ ದಿಕ್ಕಿನಲ್ಲಿ ನಡೆಯುತ್ತಿದೆ; ಈ ನಡಿಗೆಯ ಹಿಂದೆ ತಾನು ಕಟ್ಟಿಕೊಂಡ ಕನಸೊಂದರ ಶಕ್ತಿಯಿದೆ ಎಂಬ ನಂಬಿಕೆಯಿಂದ ಹುಟ್ಟಿದವುಗಳಾಗಿವೆ. ಆದರೆ ಈ ನಂಬಿಕೆಗೆ ಸದ್ಯದ ಸ್ಥಿತಿಯಲ್ಲಿ ಆಧಾರಗಳೇನೂ ಕಾಣುತ್ತಿಲ್ಲ ನನಗೆ. ಇದೊಂದು ಕನಸನ್ನೇ ಕಳೆದುಕೊಂಡಿರುವ ರಾಷ್ಟ್ರ ಅನ್ನಿಸತೊಡಗಿದೆ ಇತ್ತೀಚೆಗೆ. ಇದಕ್ಕೆ ಹಿನ್ನಲೆಯಾಗಿ ಈ ಒಂದಿಷ್ಟು ಮಾತುಗಳನ್ನು ಹೇಳಬಹುದು.

ಸ್ವಾತಂತ್ರ್ಯ ಬಂದ ಎಂಟು ವರ್ಷಗಳ ನಂತರ ಹುಟ್ಟಿದವನು ನಾನು. ನನ್ನ ಹದಿನೈದು ಇಪ್ಪತ್ತು ವರ್ಷಗಳ ವಯಸ್ಸಿನಲ್ಲಿ ಇದ್ದ ಪರಿಸ್ಥಿತಿ, ಕಳೆದ ಹದಿನೈದು-ಇಪ್ಪತ್ತು ವರ್ಷಗಳಲ್ಲಿ, ವಿಶೇಷವಾಗಿ ಕಳೆದ ಹತ್ತು ವರ್ಷಗಳಲ್ಲಿ ಸಂಪೂರ್ಣವಾಗಿ ಬದಲಾಗಿ ಹೋಗಿದೆ. ನಿಮ್ಮ ಪ್ರಶ್ನೆಗಳಲ್ಲಿ ಅಡಕವಾಗಿರುವ ಪ್ರಜಾಪ್ರಭುತ್ವ, ಸಮಾನತೆ, ಶೈಕ್ಷಣಿಕತೆ, ಅಭಿವೃದ್ಧಿ ಮಾದರಿ, ವಿಶ್ವದೃಷ್ಟಿ ಮುಂತಾದ ಮೂಲಭೂತ ಸಂಗತಿಗಳನ್ನು ಕುರಿತ ಚಿಂತನೆಗಳೇ ಇಂದು ತಮ್ಮ ಪ್ರಾಥಮಿಕತೆಯನ್ನು ಕಳೆದುಕೊಂಡು, ರಾಷ್ಟ್ರೀಯ ಚಿಂತನೆ ಎಂಬುದು ತನ್ನನ್ನು ಅಂತರಾಷ್ಟ್ರೀಯ ಚಿಂತನೆ ಎಂಬುದರೊಳಕ್ಕೆ ಲೀನಗೊಳಿಸಿಕೊಂಡುಬಿಟ್ಟಿದೆ. ಇಂದು ಭಾರತಕ್ಕೆ ಏನು ಬೇಕಾಗಿದೆ ಎಂಬುದೇ ಖಚಿತವಾಗಿ ಗೊತ್ತಾಗದಷ್ಟು (ಖಚಿತವಾಗಿ ಗೊತ್ತಾಗಿರುವಷ್ಟರಮಟ್ಟಿಗೆ ಬೇಕಾಗುವುದು ವಿದೇಶಿಬಂಡವಾಳ ಮಾತ್ರ!) ಸ್ಥೂಲವಾಗಿ ಹೋಗಿದೆ ನಮ್ಮ ರಾಷ್ಟ್ರಜೀವನ. ಇಂದು ಯಾರಿಗೂ-ಅಭಿವೃದ್ಧಿ ಚಿಂತಕರಿಂದ ಹಿಡಿದು ಆಡಳಿತಗಾರರವರೆಗೆ -ಅನ್ನ, ನೀರು ಸೂರುಗಳ ಭಾಷೆಯಲ್ಲಿ ಮಾತನಾಡುವ ಅಗತ್ಯವೇ ಕಂಡು ಬರುತ್ತಿಲ್ಲ. ಬಹುಪಾಲು ಎಲ್ಲರಿಗೆ ಇವನ್ನು ಒದಗಿಸಿಬಿಟ್ಟಿರುವ ಹಾಗೆ...! ಅನ್ನ, ನೀರು, ಸೂರುಗಳಿಗೆ ಸಂಬಂಧಿಸಿದ ವಾಸ್ತವವನ್ನು ಎದುರಿಸಲಾಗದೆ ಆಯಾಸಗೊಂಡು ರಾಷ್ಟ್ರೀಯ ಮನಸ್ಸು ಕೊನೆಗೆ ಅದನ್ನು ಮರೆಯಲು, ಅವೆಲ್ಲ ಬಹುಮುಖ್ಯವಲ್ಲ, ಎಂದು ತನಗೆ ತಾನೇ ಮನವರಿಕೆ ಮಾಡಿಕೊಳ್ಳಲು ಈಗ ಜಾಗತೀಕರಣವೆಂಬ ಮಾಯೆಗೆ ಒಳಗಾಗಿದೆ ಎಂದೇ ನನ್ನ ಅನಿಸಿಕೆ*. ರಾಷ್ಟ್ರ ತಾನೇ ಸೃಷ್ಟಿಸಿಕೊಂಡ ಬಿಕ್ಕಟ್ಟನ್ನು ಎದುರಿಸಲಾಗದ ಅಸಹಾಯಕತೆ ಹಾಗೂ ಹಿಂಸೆಯಿಂದ ಪಾರಾಗಲು; ರಾಷ್ಟ್ರ ತನ್ನನ್ನು ತಾನೇ ಮರೆಯಲು ಮಾಡಿಕೊಳ್ಳುತ್ತಿರುವ ಜಾಣ ಯತ್ನ ಇದು. ಇದು ದುರಂತ; ನಿಜವಾದ ದುರಂತ. ಇದು ಸಂಭವಿಸುವುದಾದರೆ ಉಳಿಯುವುದಾದರೂ ಏನು? ಉಳಿದರೂ ಏತಕ್ಕಾಗಿ?

ಈ ದುರಂತದ ಮೂಲ ಇರುವುದು ಐವತ್ತು ವರ್ಷಗಳ ಹಿಂದೆ ನಾವು ಒಪ್ಪಿಕೊಂಡ ಅಭಿವೃದ್ಧಿ ಮಾದರಿಯ ಜಟಿಲತೆಯಲ್ಲಿ. ಅದನ್ನು ಆಧುನೀಕರಣ ಎಂಬ ಆಕರ್ಷಕ ಹೆಸರಿನಿಂದ ಕರೆಯಲಾಯಿತಷ್ಟೆ. ಯಾವುದೇ ನಿಜವಾದ ಆಧುನೀಕರಣ ಮನುಷ್ಯನನ್ನು ಆತನ ಆಂತರಿಕ ಜಟಿಲತೆಗಳಿಂದ ಮುಕ್ತಗೊಳಿಸಿ ಆತನನ್ನು ನೆಮ್ಮದಿಗೊಯ್ಯುವ ಶಕ್ತಿಯನ್ನು ಹೊಂದಿರಬೇಕು. ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಇಡೀ ಕಲ್ಪನೆ ಇಂತಹ ಆಧುನೀಕರಣದ ಚಿಂತನೆಯನ್ನು ಆಧರಿಸಿತ್ತು - ಆಡಳಿತ, ಅಭಿವೃದ್ಧಿ ಎರಡು ದೃಷ್ಟಿಗಳಿಂದಲೂ. ಜೊತೆಗೆ ಅದು ಭಾರತೀಯನ ಪಾರಂಪರಿಕ ಜೀವನ ದೃಷ್ಟಿಯೊಡನೆ ಸಮನ್ವಯವನ್ನು ಸಾಧಿಸುವಂತಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ರಾಷ್ಟ್ರ ಐವತ್ತು ವರ್ಷಗಳ ಹಿಂದೆ ಆರಂಭಿಸಿದ ಆಧುನೀಕರಣದ ತಂತ್ರ ಮಾತ್ರ ಸಾಮಾನ್ಯ ಭಾರತೀಯನ ಆಂತರಿಕ ಬಾಹ್ಯಗಳ ಸಮತೋಲನವನ್ನೇ ಅಲ್ಲಾಡಿಸುತ್ತಾ ಹೋಯಿತು. ಅದು ರಾಷ್ಟ್ರದ ಹೃದಯ ಭಾಗವಾಗಿದ್ದ ಹಳ್ಳಿಗಾಡಿನ ಆಂತರಿಕ ಹಾಗೂ ಬಾಹ್ಯ ನೆಲೆಗಳೆರಡರ ಮೇಲೂ ದಾಳಿ ಮಾಡುತ್ತಾ, ನಿಜವಾದ ಭಾರತೀಯನು ಪದೇ ಪದೇ ಅನ್ಯತೆಯನ್ನು ಅನುಭವಿಸು

---

* *ನಂತರದ ಎರಡು ಸಂಸದೀಯ ಚುನಾವಣೆಗಳಲ್ಲಿ ಜನತೆ ನೀಡಿದ ತೀರ್ಪು ಪರಿಸ್ಥಿತಿಯನ್ನು ಸ್ವಲ್ಪ ಸುಧಾರಿಸಿದೆ.*

ವಂತೆ ಮಾಡಿತು. ಉತ್ಪಾದನಾ ಹಾಗೂ ಆಡಳಿತ ತಂತ್ರಗಳೆರಡೂ ಅವನ ಕಣ್ಣಳತೆಯ ಹಾಗೂ ಗ್ರಹಿಕೆಯ ಹೊರಗೇ ಉಳಿದುಹೋಗುವಂತಾಯಿತು. ಹೀಗೆ ಗ್ರಾಮ ಪ್ರಜೆಯೊಬ್ಬ ರಾಷ್ಟ್ರ ಪ್ರಜೆಯಾಗಿ ವಿಶ್ವ ಪ್ರಜೆಯಾಗುವ ಹಿಂಸೆ ಒತ್ತಡ ಹಾಗೂ ಅನಿವಾರ್ಯತೆಗಳು ಅನೇಕ ಹೊಸ ನೈತಿಕ ಹಾಗೂ ಲೌಕಿಕ ಬಿಕ್ಕಟ್ಟುಗಳನ್ನು ಸೃಷ್ಟಿಸಿತು. ಈ ಆಧುನೀಕರಣವು ಜ್ಞಾನದಿಗಂತಗಳನ್ನು ವಿಸ್ತರಿಸಿದಷ್ಟೇ ವೇಗವಾಗಿ ಹಾಗೂ ವೈವಿಧ್ಯಮಯವಾಗಿ ಸಾಮಾನ್ಯ ಮನುಷ್ಯನ ಆಸೆ - ಅಗತ್ಯ ಗಳನ್ನು ವಿಸ್ತರಿಸಿ, ವೈವಿಧ್ಯಮಯಗೊಳಿಸಿ; ಆದರೆ ಅವನ್ನು ಪೂರೈಸುವಲ್ಲಿ ಮಾತ್ರ ವಿಫಲ ವಾಗುತ್ತಾ ಹೋಯಿತು. ಆಧುನೀಕರಣ ಪ್ರಕ್ರಿಯೆಯ ಮುಂಚೂಣಿಯಲ್ಲಿದ್ದವರಿಗೆ ಹಾಗೂ ಆಡಳಿತದ ಮುಖ್ಯ ಸ್ಥಾನದಲ್ಲಿರುವವರಿಗೆ ಅಥವಾ ಅವರ ಸನಿಹ ವೃತ್ತದಲ್ಲಿದ್ದವರಿಗೆ ಮಾತ್ರ ಅವರ ಹೊಸ ಆಸೆ-ಅಗತ್ಯಗಳ ಈಡೇರಿಕೆಯಾಗುತ್ತಾ ಹೋಗಿ ಇದು ಅಶಾಂತಿ, ಭ್ರಷ್ಟಾಚಾರ ಗಳನ್ನು ಹುಟ್ಟು ಹಾಕಿ ಆಧುನೀಕರಣದ ಬಿಕ್ಕಟ್ಟು ರಾಷ್ಟ್ರ ನಿರ್ಮಾಣದ ಬಿಕ್ಕಟ್ಟಾಗಿ ಪರಿಣಮಿಸಿತು. ಅಲ್ಲದೆ ರಾಷ್ಟ್ರ ನಿರ್ಮಾಣದ ಕನಸೂ ಕಮರಿ ಹೋದಂತಾಯಿತು. ಅದರೊಂದಿಗೆ ರಾಷ್ಟ್ರ ಕಲ್ಪನೆಯೂ ಮುಗಿಯಿತು. ಕನಸೂ ಮುಗಿಯಿತು.

ಇಲ್ಲಿಂದಾಚೆಗೆ ಇದ್ದುದ್ದನ್ನು ಇದ್ದುದರಲ್ಲೇ ಸುಧಾರಿಸಿಕೊಂಡು ಹೋಗುವುದಕ್ಕೆ ಅಗತ್ಯವಾದ ಉಪಾಯಗಳು ಆರಂಭವಾದವು. ನೂರಾರು ಹೆಸರುಗಳ ಬಡತನ ನಿರ್ಮೂಲನಾ ಕಾರ್ಯಕ್ರಮಗಳು, ಕಲ್ಯಾಣ ಯೋಜನೆಗಳು, ಮೀಸಲಾತಿ, ವಿನಾಯಿತಿ, ರಿಯಾಯ್ತಿಗಳು, ಪ್ರಶಸ್ತಿಗಳು, ಪ್ರತಿಮೆಗಳ ಮೂಲಕ ಈ ಆಧುನೀಕರಣವೆಂಬ ಸಾಹಸಯಾತ್ರೆಯು ರಾಜಕೀಯ ದೊಂಬರಾಟದಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುವಂತಾಯಿತು.

ಇದರ ಪರಿಣಾಮವಾಗಿ ೫೦ ವರ್ಷಗಳ ಹಿಂದೆ ರಾಷ್ಟ್ರ ಯಾವ ಮೌಲ್ಯಗಳು ಹಾಗೂ ಸಂಸ್ಥೆಗಳನ್ನು ಪವಿತ್ರವೆಂದು ಪರಿಗಣಿಸಿ ತನ್ನ ಆಧುನೀಕರಣದ ಯಾತ್ರೆಯನ್ನು ಆರಂಭಿಸಿತೋ ಅವೆಲ್ಲವೂ ಇಂದು ಈ ವಿಷ ಚಕ್ರದಲ್ಲಿ ಸಿಲುಕಿಕೊಂಡು ಹಾಸ್ಯಾಸ್ಪದವಾಗಿ ಹೋಗಿವೆ. ಪ್ರಜಾಪ್ರಭುತ್ವ ತಲೆ ಎಣಿಕೆಯ ಮಟ್ಟಕ್ಕೆ ಇಳಿದು ಹೋಗಿದೆ. ಸಮಾನತೆ ಎಂದರೆ ಮೀಸಲಾತಿ ಎಂದಾಗಿದೆ. ಶಿಕ್ಷಣ ಜೂಜಿಗೆ ಹತ್ತಿರವಾಗುತ್ತಿದೆ. ಅಭಿವೃದ್ಧಿ ಹೊಸ ಹೊಸ ಟಿ.ವಿ. ಚಾನಲ್‌ಗಳಲ್ಲಿ ಹೊಸ ಹೊಸ ಮದ್ಯಗಳ ಪ್ರಾಯೋಜಕತ್ವದಲ್ಲಿ ತನ್ನ ಚಹರೆಗಳನ್ನು ರೂಪಿಸಿಕೊಂಡಿದೆ. ವಿಶ್ವದೃಷ್ಟಿ ವಿಶ್ವಬ್ಯಾಂಕ್‌ನ ಕೃಪಾದೃಷ್ಟಿಯಾಗಿ ಪರಿವರ್ತಿತವಾಗಿದೆ. ರಾಷ್ಟ್ರದ ಮನಸ್ಸಿನ ದಿಗಂತದಂಚಿನಲ್ಲಿ ಮತ್ತೊಂದು ಈಸ್ಟ್ ಇಂಡಿಯಾ ಕಂಪೆನಿಯ ಚಿತ್ರ ತೇಲಿ ಬರುತ್ತಿದೆ..... ಅಥವಾ ಅದು ಹಳೆಯ ನೆನಪಿನ ಭಯ ಮಾತ್ರವೋ?

ರಾಷ್ಟ್ರ ಚೇತನ ಇಂತಹ ಬೌದ್ಧಿಕ ವಿಭ್ರಮಣೆಗೆ ಒಳಗಾಗಿರುವಾಗ ಗಾಂಧೀಜಿ ಕನಸಿನ ಸ್ವರಾಜ್ಯ ನಿರ್ಮಾಣವಾಗಲು ಸಾಧ್ಯವೇ ಎಂಬ ನಿಮ್ಮ ನಿರ್ಣಾಯಕ ಪ್ರಶ್ನೆಗೆ ಏನೆಂದು ಉತ್ತರ ಕೊಡಬಹುದು? ನಮ್ಮ ರಾಷ್ಟ್ರೀಯ ಮನಸ್ಸಿನಲ್ಲಿ ಇಂತಹ ಪ್ರಶ್ನೆಯೊಂದು ಇನ್ನೂ ಉಳಿದಿದೆ ಎಂಬುದೇ ದೊಡ್ಡ ಆಶ್ಚರ್ಯ ಹಾಗೂ ಸಮಾಧಾನ.

(ಆಂದೋಲನ : ಸುವರ್ಣ ಸ್ವಾತಂತ್ರ್ಯೋತ್ಸವ ಸಂಚಿಕೆ ೧೫-೮-೧೯೯೭)

ಕನ್ನಡ ಸಾಹಿತ್ಯ ಸಾಗಿರುವ ಹಾದಿ ಎತ್ತ? ಕೇಳಿದ ಪ್ರಶ್ನೆಗಳು

೧) ಹಲವು ಸ್ಥಿತ್ಯಂತರಗಳನ್ನು ಮತ್ತು ಚಳವಳಿಗಳನ್ನು ಹಾದು ಬಂದಿರುವ ಕನ್ನಡ ಸಾಹಿತ್ಯ ಹೊಸ ಸಹಸ್ರಮಾನದ ಹೊಸ್ತಿಲಲ್ಲಿ ಹಲವು ಬೆಳವಣಿಗೆಗಳ ಬೆಳಕಲ್ಲಿ ದಿಕ್ಕುಗಾಣದೆ ನಿಂತಂತೆ ಕಾಣಿಸುತ್ತಿದೆಯಲ್ಲವೇ? ಹಾಗಾದರೆ ಮುಂದಿನ ದಾರಿ ಎತ್ತ?

೨) ಅಕ್ಷರ, ಮುದ್ರಣ ಮತ್ತು ಪುಸ್ತಕಗಳ ಕಾಲ ಮುಗಿದಂತೆ, ಕಂಪ್ಯೂಟರ್, ಇಂಟರ್‌ನೆಟ್ ಮತ್ತು ಕೇಬಲ್‌ಗಳ ಯುಗ ಆರಂಭವಾದಂತೆ ಕಾಣುತ್ತಿರುವ ಈ ಹೊತ್ತಿನಲ್ಲಿ ಹೃದಯಗಳನ್ನು ಅರಸಿ ಹೊರಟ ಸಾಹಿತ್ಯ ಆದಿಮಾನವನಂತೆ ಕಾಣಿಸುತ್ತಿದೆಯೇ?

೩) ಗ್ಲೋಬಲ್ ವಿಲೇಜ್ ಎಂಬ ವಾಸ್ತವ, ಅರ್ಥ ವ್ಯವಸ್ಥೆಯ ಆರ್ಭಟ ಭೂಮಿಯನ್ನು ಮಾತ್ರವಲ್ಲ ಆಕಾಶವನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡಿರುವ ಮಾಹಿತಿಯ ಮಾಯಾಜಾಲ ಇವೆಲ್ಲವನ್ನು ಗಮನಿಸಿದಾಗ ಸಾಹಿತ್ಯದ ಕೇಂದ್ರ ಎಲ್ಲಿ? ಹೊಣೆಗಾರಿಕೆ ಏನು?

೧. ಈ ಬಿಕ್ಕಟ್ಟು ಸಾಹಿತ್ಯಕ್ಕಷ್ಟೇ ಸೀಮಿತವಲ್ಲವಾದುದರಿಂದ ಸಾಹಿತ್ಯಕ್ಕೇ ಸಂಬಂಧಿಸಿದಂತೆ ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಹೀಗಾಗಿ ಈ ಪ್ರಶ್ನೆಗೆ ಉತ್ತರ ಮುಂದಿನೆರಡು ಪ್ರಶ್ನೆಗಳ ಉತ್ತರಗಳಲ್ಲೂ ವಿಸ್ತರಿಸಿಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯದ ಹೆಸರಿನಲ್ಲಿ ನಡೆದ ಅಸಾಹಿತ್ಯಕ ಚಳುವಳಿಗಳು ಹಾಗೂ ಗುಂಪುಗಾರಿಕೆ ಮತ್ತು ಅವುಗಳಿಂದ ಉತ್ಪನ್ನವಾದ ಸಾಹಿತ್ಯ ಕ್ಷೇತ್ರದ ರಾಜಕಾರಣ ಹಾಗೂ ಪುಡಾರಿಗಿರಿಗಳು ಸಾಹಿತ್ಯವೆಂಬುದರ ಸೂಕ್ಷ್ಮತೆಯನ್ನೂ ಘನತೆಯನ್ನೂ ಅನುಮಾನಾಸ್ಪದ ಮಾಡಿದ್ದಕ್ಕೆ ಪೂರಕವಾಗಿ; ಈಗ ಅಳಿದುಳಿದ ಎಲ್ಲ ಸೂಕ್ಷ್ಮತೆಯನ್ನೂ ವಿಶಿಷ್ಟತೆಯನ್ನೂ ಸ್ಥೂಲ ಹಾಗೂ ರೂಕ್ಷಗೊಳಿಸುತ್ತಿರುವ ಜಾಗತೀಕರಣವೆಂಬ ಮಾಯೆಯು ಕನ್ನಡ ಸಾಹಿತ್ಯದ ಬೇರಾದ ಕನ್ನಡ ಭಾಷೆಯನ್ನೇ, ನಾವು ವಿಶ್ವದ ಜೊತೆ ಕ್ಷಿಪ್ರಗತಿಯಲ್ಲಿ ಹೆಜ್ಜೆ ಹಾಕಲು (ಏಕೆಂದು ಗೊತ್ತಿಲ್ಲ) ನಮ್ಮ ತಲೆಗಳ ಮೇಲಿಂದ ಬೇಗನೆ ಇಳಿಸಿಕೊಳ್ಳಬೇಕಾದ ಭಾರ ಎಂಬ ಆಭಾಸ ಉಂಟುಮಾಡಿರುವುದರಿಂದ, ಈ ದಿಕ್ಕುಗಾಣದಿರುವಿಕೆ ಅಥವಾ ದಿಗ್ಭ್ರಮೆ ಉಂಟಾಗಿದೆ. ಈ ಆಭಾಸವನ್ನು ಅರಿಯುವುದರಲ್ಲಿಯೇ ಮುಂದಿನ ದಾರಿ ಕಾಣಬಹುದು.

೨. ಸಾಹಿತ್ಯವೇ ಏಕೆ, ಕಂಪ್ಯೂಟರ್ - ಇಂಟರ್‌ನೆಟ್ - ಕೇಬಲ್‌ಗಳು ಅರಸಿ ಹೊರಟಿರುವುದೂ ಆತ್ಯಂತಿಕವಾಗಿ ಮನುಷ್ಯ ಹೃದಯಗಳನ್ನೇ. ಆದ್ದರಿಂದ ಇಂದಿನ ಸಂದರ್ಭ

ದಲ್ಲಿ ಸಾಹಿತ್ಯ ಆದಿಮಾನವನಂತೆ ಕಾಣಿಸುತ್ತಿದೆಯೇ ಎಂದು ನಾವು ಪ್ರಶ್ನಿಸುತ್ತಿರುವಾಗಲೇ, ಕಂಪ್ಯೂಟರ್ - ಇಂಟರ್‌ನೆಟ್ - ಕೇಬಲ್ ಸಂಸ್ಕೃತಿಪ್ರಿಯರ ಕಣ್ಣಿಗೆ ನಾವು ಆದಿಮಾನವರಂತೆ ಕಾಣುತ್ತಿದ್ದಿರಬಹುದು ಎಂಬ ಎಚ್ಚರದೊಂದಿಗೆ ಈ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಬೇಕು. ಅಕ್ಷರ ವಿನ್ಯಾಸ, ಮುದ್ರಣ ಹಾಗೂ ಪುಸ್ತಕ ತಂತ್ರಜ್ಞಾನ ಆವಿಷ್ಕಾರವಾದಾಗಲೂ ಇದೇ ರೀತಿಯ ಗೊಂದಲ ಉಂಟಾಗಿದ್ದಿರಬಹುದು. ಮನುಷ್ಯನ ನಿರಂತರ ಕ್ರಿಯಾಶೀಲತೆ ಹಾಗೂ ಆವಿಷ್ಕಾರಪ್ರಿಯತೆಗಳನ್ನು ಪ್ರಶ್ನಿಸುವುದರಲ್ಲಿ ಅರ್ಥವಿಲ್ಲ. ಆದರೆ ಅವುಗಳೊಡನೆ ಎಷ್ಟು ವಿವೇಕ ಬೆರೆತಿದೆ ಎಂಬುದರ ನಿರಂತರ ಪರಿಶೀಲನೆ ಅಗತ್ಯ. ಒಂದು ಹೊಸ ಆವಿಷ್ಕಾರ ನಮಗೆ ಏನೆಲ್ಲ ಗಳಿಸಿಕೊಡುತ್ತಿರುವಾಗಲೇ ನಮ್ಮೊಳಗಿನ ಏನೆಲ್ಲವನ್ನೂ ಅಳಿಸಿಹಾಕುತ್ತಿರುತ್ತದೆ ಎಂಬುದರ ವಿವೇಚನೆ ಮಾಡಬಲ್ಲ ಶಕ್ತಿ ಹಾಗೂ ಸಂಘಟನೆ ಒಂದು ಜನ ಸಮುದಾಯಕ್ಕೆ ಇರಬೇಕು. ಇವೆರಡನ್ನೂ ಕಳೆದುಕೊಂಡ ಜನ ಸಮುದಾಯ ಇಂತಹ ಬಿಕ್ಕಟ್ಟು, ಪ್ರಶ್ನೆಗಳನ್ನು ಎದುರಿಸಬೇಕಾಗಿ ಬರುವುದು ಅನಿವಾರ್ಯ. ಇವಕ್ಕೆ ಸರಳ ಉತ್ತರಗಳಿಲ್ಲ.

೩. ಮಡಕೆಯ ಮಾಡಲು ಮಣ್ಣೇ ಮೊದಲು ಎಂಬಂತೆ ಎಲ್ಲದಕ್ಕೂ ಮನುಷ್ಯನ ಆತ್ಮಪ್ರಜ್ಞೆಯೇ ಮೊದಲು ಎಂಬುದು ನಿಜವಾದಲ್ಲಿ ಸಾಹಿತ್ಯವೂ ಸೇರಿದಂತೆ ಎಲ್ಲ ಕಾಲಕ್ಕೂ, ಎಲ್ಲದರ ಕೇಂದ್ರ ಮನುಷ್ಯ ಹೃದಯವೇ ಆಗಿರುತ್ತದೆ. ಏಕೆಂದರೆ ಎಲ್ಲವೂ ಆರಂಭವಾಗುವುದೂ ಅಲ್ಲೇ. ಕೊನೆಗೆ ಕರಗುವುದೂ ಅಲ್ಲೇ. ಮಧ್ಯೆ ಕ್ರಿಯಾಶೀಲತೆ, ಆವಿಷ್ಕಾರಪ್ರಿಯತೆಗಳೆಂಬ ಆಟ, ಮಾಟ. ಆದುದರಿಂದ ಈ ಗ್ಲೋಬಲ್ ವಿಲೇಜ್, ಹೊಸ ಆರ್ಥಿಕತೆಯ ಆರ್ಭಟ, ಮಾಹಿತಿಯ ಮಾಯಾಜಾಲ-ಇವೆಲ್ಲ ಸುಸ್ತಾಗಿ ಮತ್ತೆ ಹೃದಯದಲ್ಲಿ ಲೀನವಾಗುವವರೆಗೂ ಕಣ್ಕಟ್ಟುಗಳಾಗಿ ಕಾಡುತ್ತವೆ. ಇಂತಹ ಕಣ್ಕಟ್ಟುಗಳಿಂದ ಕಂಗೆಡಬಲ್ಲ ಸಾಹಿತ್ಯದ ಕೇಂದ್ರ ಎಲ್ಲಿದ್ದರೇನು? ಅದಕ್ಕೆ ಎಂತಹ ಹೊಣೆಗಾರಿಕೆ? ಪಂಪ, ಹರಿಹರ, ಕುಮಾರವ್ಯಾಸ, ಅಲ್ಲಮ, ಅಕ್ಕ, ಬಸವ, ಬೇಂದ್ರೆ, ಕುವೆಂಪು, ಮಾಸ್ತಿ, ಕಾರಂತ ಹಾಗೂ ಮಹಾದೇವರನ್ನೊಳಗೊಂಡ ಸಾಹಿತ್ಯ ಪರಂಪರೆ ದಿಕ್ಕೆಡಬಹುದಾದದ್ದು ಪ್ರಳಯವಾದಾಗ ಮಾತ್ರ. ಪ್ರಳಯದಲ್ಲೂ ಗಟ್ಟಿ ಕಾಳುಗಳು ಬದುಕುಳಿದುಕೊಂಡು ಕಾಲಕ್ರಮದಲ್ಲಿ ಚಿಗುರುತ್ತವಂತೆ. ಇನ್ನು ಈ ಕಣ್ಕಟ್ಟುಗಳು ಏನು ಮಾಡಿಯಾವು. ಆದುದರಿಂದ ಇಂದು ಸಾಹಿತ್ಯದ ಕೇಂದ್ರ ಎಲ್ಲಿ, ಅದರ ಹೊಣೆಗಾರಿಕೆ ಏನು ಎಂಬ ಬಾಹ್ಯ ಪ್ರಶ್ನೆಗಳಿಗೆ ಬದಲಾಗಿ ನಾವು ಕೇಳಿಕೊಳ್ಳಬೇಕಾದ ಆಂತರಿಕ ಪ್ರಶ್ನೆಗಳೆಂದರೆ ಈ ಹೊಸ ಆವಿಷ್ಕಾರ - ಪರಿಕಲ್ಪನೆಗಳು ನಮ್ಮ ಹೃದಯಕ್ಕೇನು ಘಾತ ಮಾಡಿವೆ ಮತ್ತು ಈ ಸಂದರ್ಭದಲ್ಲಿ ನಮ್ಮ ಹೊಣೆಗಾರಿಕೆ ಏನು ಎಂಬುದೇ ಆಗಿದೆ. ಏಕೆಂದರೆ ಸಾಹಿತ್ಯವೂ ಸೇರಿದಂತೆ ಯಾವುದೂ ನಮ್ಮ ಹೊರಗೆ ನಡೆಯುವುದಿಲ್ಲ. ಎಲ್ಲಕ್ಕೂ-ಆಗಿರುವುದಕ್ಕೂ, ಆಗುವುದಕ್ಕೂ - ನಾವೇ ಹೊಣೆ. ತಪ್ಪಾಗಿದ್ದರೆ ನಮ್ಮಿಂದಲೇ. ಹಾಗಿದ್ದಲ್ಲಿ ಅದು ಸರಿಯಾಗ ಬೇಕಾದ್ದೂ ನಮ್ಮಿಂದಲೇ. ಈ ಎಚ್ಚರದಲ್ಲೇ ನಿಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರ ದೊರಕಿಯಾವು.

(ಪ್ರಜಾವಾಣಿ ದೀಪಾವಳಿ ವಿಶೇಷಾಂಕ : ೨೦೦೦)

ಮನುಷ್ಯತ್ವದ ಸ್ಪರ್ಶವಿಲ್ಲದ ವಿಜ್ಞಾನ ಅಪೂರ್ಣ

ರಾಹುಕಾಲ ನೋಡಿ ಉಪಗ್ರಹವನ್ನು ಉಡಾಯಿಸುವ ವಿಜ್ಞಾನಿಗಳು ಒಂದೆಡೆ; ಮಂಡಿಗಾಯವನ್ನು ನೀರಿನಿಂದ ತೊಳೆಯುವ ಆದಿವಾಸಿಗಳು ಇನ್ನೊಂದೆಡೆ... ವಿಜ್ಞಾನವೇ ಹೊಸಯುಗ ಧರ್ಮ ಎನ್ನುವ ಚಿಂತಕರಿದ್ದಾರೆ; ವಿಜ್ಞಾನ ಸೃಜನಶೀಲತೆಗೆ ವಿರುದ್ಧವಾದದ್ದು ಎನ್ನುವ ಕಲೆಗಾರರೂ ಇದ್ದಾರೆ...

'ವೈಜ್ಞಾನಿಕ ದೃಷ್ಟಿಕೋನ' ಮನುಷ್ಯನ ವಿಕಾಸ ಮಾರ್ಗದ ಸಹಜ ಸ್ಥಿತಿಯೇ? ಅಥವಾ ಪ್ರಜ್ಞಾಪೂರ್ವಕವಾಗಿ ಅವಳಡಿಸಿಕೊಳ್ಳಬೇಕಾದ ಸಂಗತಿಯೋ? ಅನಿವಾರ್ಯವೋ?

'ವೈಜ್ಞಾನಿಕ ದೃಷ್ಟಿಕೋನ'ವನ್ನು ನೀವು ಹೇಗೆ ಪರಿಭಾವಿಸುವಿರಿ?

ಒಂದು ನಿರ್ದಿಷ್ಟ ಚಹರೆ ಪಡೆದುಕೊಂಡು ಬಿಟ್ಟ ಎಲ್ಲ ತತ್ವ ಸಿದ್ಧಾಂತಗಳೂ ಒಂದಲ್ಲ ಒಂದು ಕಾಲಕ್ಕೆ ಸ್ಥಾವರಗೊಳ್ಳುವುದು ಸಹಜ. ವೈಜ್ಞಾನಿಕ ಮನೋಭಾವ ಎಂಬ ತತ್ವದ ಸ್ಥಿತಿಯೂ ಇಂದು ಅದೇ ಆಗಿದೆ. ತನ್ನ ಗ್ರಹಿಕೆಯ ತೆಕ್ಕೆಗೆ ಸಿಗದ ಎಲ್ಲ ಹಳೆಯ ನಂಬಿಕೆಗಳನ್ನೂ ಪಾರಂಪರಿಕ ಮೌಢ್ಯಗಳು ಎಂದು ಕರೆದು, ಅವನ್ನು ತಮ್ಮ ಹೊಸ ವಿಜ್ಞಾನ ವಿದ್ಯೆಯ ಬಲದಿಂದ ನಿವಾರಿಸುತ್ತಾ, ಲೋಕ ಕಲ್ಯಾಣ ಮಾಡುತ್ತಾ ಹೋಗುತ್ತಿದ್ದೇವೆಂಬುದು ಈ ವೈಜ್ಞಾನಿಕ ಧರ್ಮ ಪ್ರಚಾರಕರ ನಂಬಿಕೆಯಾಗಿದೆ. ಆದರೆ ತಮಾಷೆ ಎಂದರೆ, ಇವರ ಮೌಢ್ಯ ನಿವಾರಣಾ ಕಾರ್ಯಕ್ರಮದ ಪರೋಕ್ಷ ಪರಿಣಾಮವೋ ಎಂಬಂತೆ ದಿನೇ ದಿನೇ ಜಗತ್ತಿನಾದ್ಯಂತ ಈ 'ಪಾರಂಪರಿಕ ಮೌಢ್ಯ'ಗಳ ಸಂಖ್ಯೆ ಹಾಗೂ ವೈವಿಧ್ಯ ಹೆಚ್ಚುತ್ತ ಹೋಗುತ್ತಿರುವುದನ್ನು ನಾವು ಗಮನಿಸಬಹುದಾಗಿದೆ! ಹೀಗಾಗಿ ಇವರ ಈ ನಂಬಿಕೆಯೇ, ಬಹುಜನರು ಕ್ಯಾರೇ ಎನ್ನದ ಒಂದು ಓಬೀರಾಯನ ಕಾಲದ ನಂಬಿಕೆಯ ಚಹರೆ ಪಡೆದು, ಕ್ರಮೇಣ ತಾನೇ ಒಂದು 'ಪಾರಂಪರಿಕ ಮೌಢ್ಯ'ವಾಗಿ ಪರಿವರ್ತಿತವಾಗುತ್ತಿರುವ ದುರಂತವನ್ನು ನಾವಿಂದು ನೋಡುತ್ತಿದ್ದೇವೆ.

ವೈಚಾರಿಕತೆ ಎಂದಿನಿಂದಲೂ ಇದೆ; ಅದು ವಿಕಾಸವಾಗುತ್ತಲೂ ಇದೆ. ಆದರೆ ವಿಜ್ಞಾನವಾದಿಗಳು ಇಂದ್ರಿಯ ಸಾಕ್ಷ್ಯದ ನಿಕಷಕ್ಕೊಡ್ಡಲ್ಪಟ್ಟ ವೈಚಾರಿಕತೆಯೇ ಆತ್ಯಂತಿಕವೆಂಬ ಮೂಢನಂಬಿಕೆಗೆ ಸಿಕ್ಕಿ (ಕೊನೆಯ ಪ್ರವಾದಿ) ಈ ವಿಕಾಸಕ್ಕೆ ಕಣ್ಣು ಮುಚ್ಚಿದ್ದಾರೆ. ವಿಜ್ಞಾನ ಒಂದು ಸ್ವಯಂಚಾಲಿತ ಧಾರೆಯಾಗಿರುವುದರಿಂದ ಅದು ಇಂತಹ ಎಲ್ಲ ಮೌಢ್ಯವನ್ನೂ ನಿರಾಕರಿಸುತ್ತಾ ಬೆಳೆದು, ಇಂದು 'ಅನಿಶ್ಚಿತತಾ ತತ್ವ' (Principle of uncertainty)ದ ಹೊಸ್ತಿಲಲ್ಲಿ ನಿಂತಿದೆ. ಈ ಹೊಸ್ತಿಲು ದಾಟಿದರೆ, ಎಲ್ಲ ವಿಜ್ಞಾನಗಳ ಮೂಲಧಾರೆ ಎನಿಸಿದ ಇಡೀ ಭೌತಶಾಸ್ತ್ರವೇ ಪ್ರಜ್ಞಾಶಾಸ್ತ್ರವಾಗಿ ಪರಿವರ್ತಿತವಾಗಿ, ವಿಜ್ಞಾನ ತನ್ನೆಲ್ಲ ಚಾಲು -

ಚಹರೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಅದನ್ನೇ ನಮ್ಮ ಕಾಲದ ಶ್ರೇಷ್ಠ ಭೌತವಿಜ್ಞಾನಿ ಎನಿಸಿದ Stephen Hawking, ಮೊನ್ನೆ ಭಾರತಕ್ಕೆ ಭೇಟಿ ನೀಡಿದ್ದಾಗ, 'ಭೌತಶಾಸ್ತ್ರದ ಅಂತ್ಯ ಸನ್ನಿಹಿತವಾಗುತ್ತಿದೆ' ಎಂದು ಪುನರುಚ್ಚರಿಸಿ ಸೂಚಿಸಿದ್ದು. ಇದನ್ನರಿಯದ ಸಂಪ್ರದಾಯಸ್ಥ ವಿಜ್ಞಾನವಾದಿಗಳು ಹಳೆಯ ಪುಸ್ತಕದ ಬದನೇಕಾಯಿಯನ್ನೇ ಒಪ್ಪಿಸುತ್ತಿದ್ದಾರೆ. ಎಲ್ಲ ಮನುಷ್ಯರ ಮೂಲಕಾಳಜಿ ನೆಮ್ಮದಿ. ಅದನ್ನು ಒದಗಿಸದ ಯಾವ ತತ್ವವೂ ಪರಿಪೂರ್ಣವಲ್ಲ. ಇದು ವಿಜ್ಞಾನಕ್ಕೂ ಅನ್ವಯಿಸುವ ಸತ್ಯ.

ನಮ್ಮ ಕಾಲದ ವೈಜ್ಞಾನಿಕತೆ ಹಾಗೂ ವೈಚಾರಿಕತೆಗಳ ಆತ್ಮಸಾಕ್ಷಿಯಂತಿದ್ದ ಶಿವರಾಮ ಕಾರಂತರನ್ನು ನಾನೊಮ್ಮೆ-ಎಂಭತ್ತರ ದಶಕದಲ್ಲಿರಬೇಕು-ಅವರ ಮನೆಯಲ್ಲಿ ಭೇಟಿಯಾಗಿದ್ದಾಗ, 'ವೈಜ್ಞಾನಿಕ ದೃಷ್ಟಿಕೋನ'ದ ಮಸ್ತಿಯಲ್ಲಿ 'ನೀವು ನಿಮ್ಮ ಪತ್ನಿಯನ್ನು ಸಾಯಿಬಾಬರ ದರ್ಶನಕ್ಕೆ ಕಳಿಸುವುದು ಸರಿಯೇ' ಎಂದು ಕೇಳಿದೆ. ಅದಕ್ಕವರು 'ಅದು ಅವಳ ಹಕ್ಕು ಹಾಗೂ ನನ್ನ ಮನುಷ್ಯತ್ವದ ಪ್ರಶ್ನೆ' ಎಂದು ಉತ್ತರಿಸಿ ನನ್ನ ಕಣ್ಣಂಚಿನಲ್ಲಿ ನೀರುಕ್ಕುವಂತೆ ಮಾಡಿದರು.

ವಿಜ್ಞಾನ ಎಲ್ಲ ಮನುಷ್ಯರ ಬದುಕುವ ಹಕ್ಕನ್ನು ಮಾನ್ಯ ಮಾಡಿ, ಮನುಷ್ಯತ್ವದ ಸ್ಪರ್ಶವನ್ನು ಪಡೆದಾಗ ಮಾತ್ರ ವೈಜ್ಞಾನಿಕ ಮನೋಭಾವ ಎಂಬುದು ಪರಿಪೂರ್ಣ ತತ್ವವಾದೀತು. ಅಲ್ಲಿಯವರೆಗೆ, ಕುಂಭ ಮೇಳಿಗರ ಹಾಗೂ ಅಣು ಬಾಂಬಿಗರ ನರ್ತನ ಒಟ್ಟಿಗೆ ನಡೆದೇ ಇರುತ್ತದೆ.

('ಭಾವನಾ' ವಾರ್ಷಿಕ ವಿಶೇಷಾಂಕ, ಏಪ್ರಿಲ್ ೨೦೦೧)

ಪ್ರಶ್ನೋತ್ತರ - ೪

ಮತ್ತೆ ಜನಮಾಧ್ಯಮವಾಗಬೇಕಾದ ಆಕಾಶವಾಣಿ

೧. ಆಕಾಶವಾಣಿಯ ಇಂದಿನ ಸ್ಥಿತಿಗತಿ ಬಗ್ಗೆ ನಿಮ್ಮ ಅನಿಸಿಕೆ ಏನು?

೨. ನಿಮ್ಮ ಪ್ರಕಾರ ಆಕಾಶವಾಣಿಯ ಮುಂದೆ ಸದ್ಯಕ್ಕಿರುವ ಸವಾಲುಗಳು ಯಾವುವು?

೩. ಈ ಸವಾಲುಗಳನ್ನು ಎದುರಿಸುವ ಬಗೆ ಹೇಗೆ?

೧. ನಾವಿಂದು ಈ ವಿಷಯದಲ್ಲಿ ಪ್ರತಿಷ್ಠೆ ಬಿಟ್ಟು ಯೋಚಿಸಬೇಕಿದೆ; ನಮ್ಮದೇ ಶ್ರೋತೃ ಸಂಶೋಧನಾ ಸಮೀಕ್ಷೆಗಳ ತೀರ್ಮಾನಗಳ ಮಿತಿಗಳನ್ನು ಮೀರಿ ಮಾತನಾಡಬೇಕಿದೆ. ಆಕಾಶವಾಣಿ ಬಿಕ್ಕಟ್ಟಿನಲ್ಲಿದೆ ಎಂದು ಹತ್ತು ವರ್ಷಗಳಿಂದಲೂ ಹೇಳಿಕೊಳ್ಳುತ್ತಾ ಇರುವುದರಲ್ಲಿಯೇ ಪರಿಸ್ಥಿತಿ

ಎಷ್ಟು ಗಂಭೀರವಾಗಿದೆ ಎಂಬುದು ಗೊತ್ತಾಗುತ್ತದೆ. ನೇರವಾಗಿ ಹೇಳಬೇಕೆಂದರೆ ಆಕಾಶವಾಣಿಯನ್ನು ಇಂದಿನ ಮಾಧ್ಯಮ ಪರಿಪ್ರೇಕ್ಷ್ಯದಲ್ಲಿಟ್ಟು ನೋಡಿದರೆ ಅದು ತನ್ನ 'ಕ್ರಿಯಾತ್ಮಕ' ಕೇಳುಗ ಸಮೂಹದ ಬಹುಭಾಗವನ್ನು ಕಳೆದುಕೊಂಡು ನಿಜವಾಗಿಯೂ ಚಿಂತಾಜನಕ ಸ್ಥಿತಿಯಲ್ಲಿದೆ ಎಂದು ಹೇಳಬೇಕಿದೆ. ಅದರ ದೀರ್ಘ ಪರಂಪರೆ, ಇತಿಹಾಸ, ಆಶೋತ್ತರ ಹಾಗೂ ಸಾಧನೆಗಳ ಹಿನ್ನೆಲೆಯಲ್ಲಂತೂ ಇದು ಮುಜುಗರವಾಗುವಷ್ಟು ಎದ್ದು ಕಾಣುತ್ತದೆ. ಆಕಾಶವಾಣಿಗೆ ಬದಲಾದ ಮಾಧ್ಯಮ-ಸಂದರ್ಭಕ್ಕೆ ಹೊಂದಿಕೊಳ್ಳಲು ಇನ್ನೂ ಸಾಧ್ಯವಾಗಿಯೇ ಇಲ್ಲ.

ಇದಕ್ಕೆ ಮುಖ್ಯ ಕಾರಣ ಆಕಾಶವಾಣಿಯನ್ನು ಒಂದು ಮಾಧ್ಯಮವೆಂದು ಪರಿಗಣಿಸದೆ ಸಂಸ್ಥೆಯೆಂದೇ ಪರಿಗಣಿಸುವ, ಎಲ್ಲ ಹಂತಗಳಲ್ಲೂ ಮನೆ ಮಾಡಿಬಿಟ್ಟಿರುವ ಅಧಿಕಾರಶಾಹಿ ನಿಲುವು. ಇದರಿಂದಾಗಿ, ವೃತ್ತಿಪರತೆ ಮಾತ್ರ ಒಂದು ಮಾಧ್ಯಮವನ್ನು ಎಲ್ಲ ಕಾಲದ ಸವಾಲುಗಳಿಂದ ರಕ್ಷಿಸಬಲ್ಲುದು; ಆದುದರಿಂದ ಅದನ್ನು ಗುರುತಿಸಿ ಪ್ರೋತ್ಸಾಹಿಸುವುದರ ಮೂಲಕ ಮಾತ್ರ ಮಾಧ್ಯಮ ಉಳಿದು ಬೆಳೆಯಬಲ್ಲುದು ಎಂಬ ಅರಿವೇ ಕಾಣೆಯಾಗುತ್ತಿದೆ. ಎಲ್ಲಿಯವರೆಗೆ ಅನುಭವ, ಅಭಿಪ್ರಾಯ ಮಾಹಿತಿಗಳ ದ್ವಿಮುಖ ಸಂಚಲನೆಗಳ ಅವಕಾಶವಿರುವಂತಹ ವ್ಯವಸ್ಥೆ ರೂಪುಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ಮಾಧ್ಯಮ-ಅದೂ ಇಂದಿನ ಬಹುಮಾಧ್ಯಮ ಸಂದರ್ಭದಲ್ಲಿ-ಜೀವಂತವಾಗಿರಲು ಸಾಧ್ಯವಿಲ್ಲ.

ಅಂದ ಹಾಗೆ ನಿಲಯ ನಿರ್ದೇಶಕರ ಅಥವಾ ಕಾರ್ಯಕ್ರಮ ಮುಖ್ಯಸ್ಥರ ವಿವಿಧ ಹಂತಗಳ ಸಮ್ಮೇಳನಗಳು ನಡೆದು ಎಷ್ಟು ವರ್ಷಗಳಾದವು? ಇಂತಹ ಸಮ್ಮೇಳನ ಅನಗತ್ಯ ಎಂದು ಭಾವಿಸುವ ವ್ಯವಸ್ಥೆ ಮತ್ತು ಇಂತಹ ವ್ಯವಸ್ಥೆಯನ್ನು ಪ್ರಶ್ನಿಸಲಾಗದ ಅಸಹಾಯಕ ಸಿಬ್ಬಂದಿಯಿರುವ ಮಾಧ್ಯಮದ ಭವಿಷ್ಯದ ಬಗ್ಗೆ ಆಶಾವಾದ ಇಟ್ಟುಕೊಳ್ಳುವುದು ಕಷ್ಟವೇ. ಆದರೆ ನಮ್ಮಲ್ಲಿ ಆಶಾವಾದಿಗಳೇ ಹೆಚ್ಚು. ನಿರಾಶವಾದ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬ ಅಭಿಪ್ರಾಯ ಇದಕ್ಕೆ ಕಾರಣವಿರಬಹುದು! ಆದರೆ ಒಂದು ಸಂದರ್ಭಕ್ಕೆ ಆಶಾವಾದ ಮತ್ತು ನಿರಾಶಾವಾದ ಎಂಬೆರಡೇ ರೀತಿಯ ಪ್ರತಿಕ್ರಿಯೆಗಳಿರಲಾರವಷ್ಟೇ?

೨. ಬಹುಮಾಧ್ಯಮ ಸ್ಪರ್ಧೆ ಹಾಗೂ ವಾಣಿಜ್ಯೀಕರಣಗಳು ಇಂದು ಆಕಾಶವಾಣಿಯ ಮುಂದಿರುವ ಎರಡು ಮುಖ್ಯ ಸವಾಲುಗಳು. ಮಿಕ್ಕೆಲ್ಲವೂ ಇವುಗಳ ಪ್ರತ್ಯಕ್ಷ ಅಥವಾ ಪರೋಕ್ಷ ಪರಿಣಾಮಗಳಷ್ಟೆ.

ಬಹು ಮಾಧ್ಯಮ ಸ್ಪರ್ಧೆ ಆಕಾಶವಾಣಿಯನ್ನು ಬೆಳೆಸಬಲ್ಲ ಸ್ಪರ್ಧೆಯಾಗಬೇಕಿತ್ತು. ಆದರೆ ಅದಕ್ಕೆ ತದ್ವಿರುದ್ಧವಾದ ಪರಿಣಾಮವನ್ನು ನಾವಿಂದು ಕಾಣುತ್ತಿದ್ದೇವೆ. ಬಹು ವರ್ಷಗಳ ಮಾಧ್ಯಮ-ಗುತ್ತೇದಾರಿಕೆಯ ಸಂಸ್ಕೃತಿ ಆಕಾಶವಾಣಿಯನ್ನು ಎಷ್ಟು ನಿರಾಳ ಹಾಗೂ ಜಡಗೊಳಿಸಿಬಿಟ್ಟಿತ್ತೆಂದರೆ (ಈ ಅವಧಿಯಲ್ಲಿ ಹಲವು ಹಿರಿಯರು ನಡೆಸಿದ ಪ್ರಯೋಗಗಳ ಹೊರತಾಗಿಯೂ) ಬಹುಮಾಧ್ಯಮ ಸ್ಪರ್ಧೆ ಆರಂಭವಾದ ಹತ್ತು ವರ್ಷಗಳ ನಂತರವೂ ಅದಕ್ಕೆ ಸ್ಪರ್ಧೆಯನ್ನು ರಚನಾತ್ಮಕವಾಗಿ ಎದುರಿಸಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ

ವಿಸ್ಮೃತಿ: ಆಕಾಶವಾಣಿಗೆ ಮೂಲತಃ ತಾನೇನೆಂಬುದೇ ಮರೆತುಹೋಗಿದೆ. ತನ್ನ ಮಾಧ್ಯಮ ವಿಶಿಷ್ಟತೆಯನ್ನು ಗುರುತಿಸಿಕೊಂಡು ಅದನ್ನೇ ಒಂದು ಶಕ್ತಿಯಾಗಿ ಬಳಸಿಕೊಂಡು ಬೆಳೆಯುವ ಪ್ರತಿಭೆಯನ್ನು ಆಕಾಶವಾಣಿ ಕಳೆದುಕೊಂಡಂತೆ ಕಾಣುತ್ತದೆ. ಹಲವಾರು ವರ್ಷಗಳ ಸರ್ಕಾರಿ ಒಡೆತನ ಹಾಗೂ ಈ 'ಪ್ರಸಾರ ಭಾರತಿ' ದಿನಗಳ ಆತಂಕಕಾರಿ ಅನಿಶ್ಚಿತತೆಗಳು ಮಾಧ್ಯಮದೊಳಗೇ ಅಂತರ್ಗತವಾಗಿರುವ ಇಂತಹ ಪ್ರತಿಭೆಯನ್ನು ಮೇಲೇಳದಂತೆ ಮಾಡಿವೆ.

ಇನ್ನು ಜಾಗತೀಕರಣ ಮತ್ತು ಉದಾರೀಕರಣ ನೀತಿಗಳ ಫಲವಾದ ವಾಣಿಜ್ಯೀಕರಣ ವಂತೂ ಬಹುಮಾಧ್ಯಮ ಸ್ಪರ್ಧೆಯ ಮಧ್ಯೆ ಆಕಾಶವಾಣಿ ತನ್ನ ಜೀವ ಉಳಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನಗಳನ್ನು ವಿಫಲಗೊಳಿಸಲೆಂದೇ ಬಂದಂತೆ ತೋರುತ್ತದೆ. ಹಳೆಯ ಸರ್ಕಾರಿ ಮಡಿ - ಮೈಲಿಗೆಗಳನ್ನುಳಿಸಿಕೊಂಡೇ, ಸಮಾಚಾರ-ಪ್ರಸಾರ ಖಾತೆಯ ಹೆಸರಲ್ಲೋ ಪ್ರಸಾರ ಭಾರತೀಯ ಹೆಸರಲ್ಲೋ ಬರುವ ಸರ್ಕಾರಿ ಸುತ್ತೋಲೆಗಳ ಪ್ರಕಾರ ಕಾರ್ಯಕ್ರಮ ನಿಯೋಜನೆ ಮಾಡುವ ಪರಿಸ್ಥಿತಿಯನ್ನಿಟ್ಟುಕೊಂಡೇ ವಾಣಿಜ್ಯೀಕರಣದ ಮಾತನ್ನು ಆಡುವುದು ಪ್ರಾಮಾಣಿಕವೆನಿಸುವುದಿಲ್ಲ. ಹೊಸ ಸಂದರ್ಭಕ್ಕೆ ಮಾಧ್ಯಮವನ್ನು ಅಂತರಿಕವಾಗಿ ಅಣಿ ಮಾಡಲಾಗದವರು ವಾಣಿಜ್ಯೀಕರಣ (ಜಾಹೀರಾತು ಆದಾಯ)ದ ಮೂಲಕ ಅದನ್ನು ಬಾಹ್ಯವಾಗಿ ಬಲಗೊಳಿಸಲು ಹೊರಟಿರುವುದು ಎಂತಹ ವಿಪರ್ಯಾಸ! ಆಕಾಶವಾಣಿಗೆ ಇರುವವನು ಕೇಳುಗನೇ ಹೊರತು ಗ್ರಾಹಕನಲ್ಲ. ಕೇಳುಗನನ್ನು ಗ್ರಾಹಕನಾಗಿ ಮಾಡುವುದು ಆಕಾಶವಾಣಿಯ ಕೆಲಸವಲ್ಲ. ಆದರೂ ಮೇಲಿನ ಒತ್ತಡಕ್ಕೋ ಅಥವಾ ಸ್ವತಃ ಬದುಕುಳಿಯಲು ಒಂದು ಆಸರೆಯೆಂದೋ ಆಕಾಶವಾಣಿ ವಾಣಿಜ್ಯೀಕರಣಗೊಳ್ಳಬೇಕಾದೀತು. ಆದರೆ ಇಂತಹ ವಾಣಿಜ್ಯೀಕರಣದ ಆಂತರಿಕ ತರ್ಕ ಸ್ವತಃ ಮಾಧ್ಯಮವನ್ನೇ ಎಲ್ಲಿಗೆ ಕೊಂಡೊಯ್ಯಬಹುದು ಎಂಬುದರ ಬಗ್ಗೆ ಯಾರೂ ಗಂಭೀರವಾಗಿ ಯೋಚಿಸಿದಂತೆ ಕಾಣುವುದಿಲ್ಲ.

೩. ಪ್ರತಿಯೊಂದು ಆಕಾಶವಾಣಿ ಕೇಂದ್ರವೂ ಈಗ ತನ್ನ ಕೇಳುಗರನ್ನು ಹೆಚ್ಚಿಸಿಕೊಳ್ಳುವ ದಿಕ್ಕಿನಲ್ಲಿ ತನ್ನದೇ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ ಇಂತಹ ಬಿಡಿ, ವೈಯಕ್ತಿಕ ಪ್ರಯತ್ನಗಳು ಬಹಳ ಕಾಲ ಫಲ ಕೊಡಲಾರವು. ಏಕೆಂದರೆ ಮಾಧ್ಯಮ ಸ್ಪರ್ಧೆ ಈಗ ಕೇವಲ ವ್ಯಾಪ್ತಿಯ ಸ್ಪರ್ಧೆಯಾಗಿ ಉಳಿದಿಲ್ಲ. ಬಹುಮಾಧ್ಯಮ ಸ್ಪರ್ಧೆಯ ಸಂದರ್ಭ ಎಷ್ಟು ಸಂಕೀರ್ಣ ವಾದುದೆಂದರೆ ಅದು ಈವರೆಗೆ ಆಕಾಶವಾಣಿಯಂತಹ ಮಾಧ್ಯಮ ನಂಬಿಕೊಂಡು ಬಂದಿದ್ದ ಮಾಧ್ಯಮ ಮೌಲ್ಯಗಳನ್ನೇ ಬುಡಮೇಲುಗೊಳಿಸಿಬಿಟ್ಟಿದೆ. ಹೀಗಾಗಿ ಬಿಕ್ಕಟ್ಟನ್ನು ಆಮೂಲಾಗ್ರ ವಾಗಿ ಅರಿತು ಅದರ ಆಧಾರದ ಮೇಲೆ ಆಕಾಶವಾಣಿ ಒಂದು ಮಾಧ್ಯಮವಾಗಿ ಆ ಬಗ್ಗೆ ಒಂದು ತಾತ್ವಿಕ ನಿಲುವು ತೆಗೆದುಕೊಳ್ಳದ ಹೊರತು, ಅದು ತನ್ನ ಪ್ರಭಾವವನ್ನು ಪರಿಣಾಮಕಾರಿಯಾಗಿ ಹೆಚ್ಚಿಸಿಕೊಳ್ಳಲಾರದು. ಇಂತಹ ತಾತ್ವಿಕ ನಿಲುವು ಈ ಮುಂದೆ ಹೇಳುವ ಕ್ರಮಗಳಿಗೆ ದಾರಿ ಮಾಡಿಕೊಡಬಹುದು.

(i) ಇಂದಿನ ಬಹು ಮಾಧ್ಯಮ ಸ್ಪರ್ಧೆ ಎಂಬುದೇ ಮುಕ್ತ ಸ್ಪರ್ಧೆ ನೀತಿಯ ಫಲವಾಗಿರುವುದರಿಂದ ಆಕಾಶವಾಣಿ ಈ ಮುಕ್ತ ಸ್ಪರ್ಧೆಯನ್ನು ಸಮಬಲದೊಂದಿಗೆ ಎದುರಿಸಲು

ಮೊದಲು ತಾನು ಸರ್ಕಾರದ ಪ್ರತ್ಯಕ್ಷ ಅಥವಾ ಪರೋಕ್ಷ ನಿಯಂತ್ರಣದಿಂದ ಮುಕ್ತವಾಗಬೇಕಿದೆ. ಇವರ ಸಹಜ ಫಲವೆಂಬಂತೆ ಮಾಧ್ಯಮ ನಿರ್ವಹಣೆ ಆದಷ್ಟು ವಿಕೇಂದ್ರಿಕರಣಗೊಂಡು ಅತ್ಯುನ್ನತ ವೃತ್ತಿಪರತೆಯನ್ನು ಸಾಧಿಸಿಕೊಳ್ಳಬೇಕಿದೆ.

(ii) ಆಕಾಶವಾಣಿ ಸರ್ವರಿಗೂ ಸರ್ವರೀತಿಯ ಮಾಧ್ಯಮ ಅಗತ್ಯಗಳನ್ನು ಪೂರೈಸುವ ತನ್ನ ಏಕಮಾಧ್ಯಮ ಸಂದರ್ಭದ ದಿನಗಳ ಜವಾಬ್ಧಾರಿಯನ್ನು ಬಿಟ್ಟುಕೊಟ್ಟು, ಹೊಸ ಸಂದರ್ಭಕ್ಕೆ ತನ್ನ ಮಾಧ್ಯಮ ಗುರಿ-ಕರ್ತವ್ಯಗಳನ್ನು ಪರಿಷ್ಕರಿಸಿಕೊಳ್ಳಬೇಕು.

(iii) ಆಕಾಶವಾಣಿಯು ಅನ್ಯ ಮಾಧ್ಯಮಗಳು ಒದಗಿಸಲಾಗದ ಜನರ ಅಗತ್ಯಗಳನ್ನು ಗುರುತಿಸಿಕೊಳ್ಳಬೇಕು ಹಾಗೂ ಅನ್ಯ ಮಾಧ್ಯಮಗಳು ಸಾಧಿಸಲಾಗದ ಪರಿಣಾಮಗಳ ಸಾಧ್ಯತೆಗಳಿರುವ ಹೊಸ ಕಾರ್ಯಕ್ರಮ ರೂಪಗಳನ್ನು ಆವಿಷ್ಕರಿಸಿಕೊಳ್ಳಬೇಕು.

(iv) ಇತರೆಲ್ಲ ಮಾಧ್ಯಮಗಳು ಜಾಗತೀಕರಣದತ್ತ ಚಲಿಸುತ್ತಿರುವ ಸಂದರ್ಭದಲ್ಲಿ ಆಕಾಶವಾಣಿ ಹೆಚ್ಚೆಚ್ಚು ಸ್ಥಳೀಯಗೊಳ್ಳುವುದರ ಮೂಲಕ ಮತ್ತು ತನ್ನ ಸಂಪ್ರದಾಯಿಕ ಮಹತ್ವಾಕಾಂಕ್ಷೆಯನ್ನು ಕಡಿಮೆಗೊಳಿಸಿಕೊಳ್ಳುವ ಮೂಲಕ ಒಂದು ಅನೌಪಚಾರಿಕ ಮಾಧ್ಯಮದ ಸ್ವರೂಪ ಪಡೆದು ನಿಜವಾದ ಅರ್ಥದಲ್ಲಿ ಜನಮಾಧ್ಯಮ ಎನಿಸಿಕೊಳ್ಳಬೇಕು.

(v) ಇಂದು ಕಾಣುತ್ತಿರುವ ಬಹುಮಾಧ್ಯಮ ಸಂದರ್ಭ ಕೃತಕವಾದ ಸೃಷ್ಟಿಯಾಗಿರುವುದರಿಂದ ಈ ಸಂದರ್ಭ ಜನರಲ್ಲಿ ಬಹುಬೇಗ ಮಾಧ್ಯಮ ಆಯಾಸವನ್ನು ಉಂಟುಮಾಡುವ ಸೂಚನೆಗಳು ಈಗಾಗಲೇ ದೊರಕುತ್ತಿವೆ. ಆಕಾಶವಾಣಿ ಇದನ್ನು ಗಮನಿಸಿ ಕಾಲಕ್ರಮದಲ್ಲಿ ಬದಲಾಗಬಹುದಾದ ಸಂದರ್ಭಕ್ಕೆ ತನ್ನನ್ನು ಸಜ್ಜುಗೊಳಿಸಿಕೊಳ್ಳಬೇಕು. ಆಕಾಶವಾಣಿ ರೂಢಿಸಿಕೊಂಡಿರುವ ಹಾಗೂ ಇಂತಹ ಜಟಿಲ ಸಂದರ್ಭದಲ್ಲೂ ಬಿಟ್ಟುಕೊಡಲು ತಯಾರಿಲ್ಲದ 'ಸದಭಿರುಚಿ' ಇಲ್ಲಿ ನೆರವಿಗೆ ಬರಬಹುದು.

(ಮಂಗಳೂರು ಆಕಾಶವಾಣಿ ಕ್ಷೇತ್ರದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಹೊರತರಲಾದ 'ಮಂಗಳ ಧ್ವನಿ - ೨೫' ಸ್ಮರಣ ಸಂಚಿಕೆಯಲ್ಲಿ ಪ್ರಕಟಿತ - ೨೦೦೧)

ಆತ್ಮವಿಶ್ವಾಸ, ಶ್ರದ್ಧೆ, ತಾಳ್ಮೆ ಹಾಗೂ ಧಾರಣಶಕ್ತಿಗಳ ಅಗತ್ಯ

ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಜನಪರ ಚಳವಳಿಯ ಕವಲುಗಳಾದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇತರೇ ಜನಪರ ಚಳವಳಿಗಳು ಹಾಗೂ ವ್ಯಕ್ತಿ-ಶಕ್ತಿಗಳೊಂದಿಗೆ ಜೊತೆಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸುವ ಐತಿಹಾಸಿಕ ಪ್ರಯತ್ನವೊಂದಕ್ಕೆ ಮುಂದಾಗಿದೆ. ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ರಾಜಕಾರಣದ ಜೀವಾಳವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣದ ಈ ಪ್ರಯತ್ನ ಜನಪರ ವಿಚಾರಧಾರೆಯುಳ್ಳವರಲ್ಲಿ ಹೊಸ ಸಂಚಲವನ್ನು ಮೂಡಿಸಿದೆ. ಹಿಂದೆ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡು ಕಾಲಾನಂತರ ವಿವಿಧ ರಾಜಕೀಯ ಪಕ್ಷಗಳಲ್ಲಿ ಸೇರಿಹೋಗಿದ್ದ ವ್ಯಕ್ತಿಗಳೂ ಈ ಪ್ರಯತ್ನದಿಂದಾಗಿ ಖುಷಿಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಸಂವಾದ' ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರಿಗೆ ಕಳುಹಿಸಿಕೊಟ್ಟಿತು :

೧. ಜನಪರ ಚಳವಳಿಗಳು (ವಿಶೇಷವಾಗಿ ದಸಂಸ ಮತ್ತು ರೈತಸಂಘ) ಜೊತೆಗೂಡಿ ರೂಪಿಸ ಹೊರಟಿರುವ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣಕ್ಕೆ ಹೊರತಾದ 'ಪರ್ಯಾಯ ರಾಜಕಾರಣ' ಹೇಗಿರಬೇಕೆಂದು ನೀವು ಬಯಸುತ್ತೀರಿ?

೩. ಎಂಥ ಶಕ್ತಿಗಳು ಮತ್ತು ವ್ಯಕ್ತಿಗಳು ಒಗ್ಗೂಡಿದರೆ 'ಪರ್ಯಾಯ ರಾಜಕಾರಣ' ರೂಪಿಸಲು ಸಾಧ್ಯ?

೪. ಜನಪರ ಚಳವಳಿಗಳು - ವ್ಯಕ್ತಿ -ಶಕ್ತಿಗಳು ಒಗ್ಗೂಡಲು ತಾವು ಸೂಚಿಸುವ ಮಾರ್ಗೋಪಾಯಗಳೇನು?

೫. ಪರ್ಯಾಯ ರಾಜಕೀಯ ಶಕ್ತಿ (ಪಕ್ಷ) ಹೊಂದಬಹುದಾದ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳೇನು ?

೧. ಸುಮಾರು ೨೦ ವರ್ಷಗಳ ಹಿಂದೆ ದೇವನೂರ ಮಹಾದೇವ ಅವರ ಬಯಕೆಯಂತೆ ನಾನು ಮತ್ತು ಎಚ್. ಗೋವಿಂದಯ್ಯ ದಲಿತ + ರೈತ ಸಂಚಿಕೆ ರೂಪಿಸಿದ ಹೊತ್ತಲ್ಲೇ ಇಂತಹ ಪ್ರಯತ್ನಕ್ಕೆ ಚಾಲನೆ ದೊರಕಿತ್ತು.

ಆದರೆ ಆಗ ಈ ಚಳವಳಿಗಳು ತುಂಬು ಹರೆಯದ ಸೊಕ್ಕಿನಲ್ಲಿದ್ದು ಒಂದಕ್ಕೆ ದೇಶ ಕಾಣದ; ಇನ್ನೊಂದಕ್ಕೆ ನೆಲ ಕಾಣದ ಅವಿವೇಕ ಆವರಿಸಿದ್ದುದರಿಂದಾಗಿ ಆ ಪ್ರಯತ್ನ ಯಶ ಕಾಣಲಿಲ್ಲ. ಈ ಅವಿವೇಕದಿಂದಾಗಿಯೇ ಈ ಎರಡೂ ಚಳವಳಿಗಳಿಗೆ ಅಕಾಲ ವೃದ್ಧಾಪ್ಯ ಬಂದೊದಗಿ, ಈಚಿನ ದಿನಗಳಲ್ಲಿ ಮೊದಲಬಾರಿಗೆ ಇವನ್ನು ಸಾವಿನ ಭಯ ನಿಜವಾಗಿ ಮುಟ್ಟಿದಂತಿದೆ.

ಹೀಗಾಗಿ ಈ ಭಯವನ್ನು ಮೀರಲು ಎಲ್ಲರೂ ಒಟ್ಟಾಗಿ; ಬದುಕುವ ಧೈರ್ಯ, ಕೌಶಲ್ಯ ಸಂಘಟಿಸಿಕೊಳ್ಳುವುದೊಂದೇ ಮಾರ್ಗ ಎಂಬ ವಿವೇಕ, ಈ ಚಳವಳಿಗಳಲ್ಲಿ ಸಹಜವಾಗಿ ಮೂಡಿದೆ. ಸಹಜವಾಗಿ ಮೂಡಿದ್ದು ಸತ್ಯವೂ ಆಗಿರುವುದರಿಂದ, ಸದ್ಯದ ಏಕತೆಯ ಪ್ರಯತ್ನಕ್ಕೆ ತಮ್ಮದೇ ರೀತಿಗಳಲ್ಲಿ ಸತ್ಯದೊಂದಿಗೆ ಪ್ರಯೋಗಗಳನ್ನು ನಡೆಸುತ್ತಿರುವ ಎಲ್ಲ ಕ್ರಿಯಾಶೀಲರ ಬೆಂಬಲವಿರುತ್ತದೆ. ಏಕೆಂದರೆ ಈ ಎಲ್ಲ ಕ್ರಿಯಾಶೀಲರಿಗೆ ಪ್ರಮುಖವಾಗಿ ಆ ಎರಡು ಚಳವಳಿಗಳೂ ಪ್ರಯೋಗಶಾಲೆಗಳಾಗಿದ್ದವು.

೨. ಅಧಿಕಾರ ಮತ್ತು ಅಗತ್ಯಗಳು ಹೆಚ್ಚಿದಷ್ಟೂ ಮನುಷ್ಯನ ಕಷ್ಟ-ಕೋಟಲೆ ಮತ್ತು ಅಶಾಂತಿ ಹೆಚ್ಚುತ್ತದೆ ಮತ್ತು ಅದಕ್ಕನುಪಾತವಾಗಿ ಆತನ ತೃಪ್ತಿಯ ಆಳ ಮತ್ತು ಆಯಸ್ಸು ಕಡಿಮೆಯಾಗುತ್ತಾ ಹೋಗುತ್ತದೆ ಎಂಬ ಅರಿವನ್ನು ಮೂಡಿಸುವ ಚಿಂತನ - ಮಂಥನದ ಸುತ್ತ ಪರ್ಯಾಯ ರಾಜಕಾರಣವನ್ನು ಕಟ್ಟಬೇಕಾಗುತ್ತದೆ.

೩. ಮೇಲೆ ಸೂಚಿಸಿದಂತಹ ಚಿಂತನ-ಮಂಥನದಲ್ಲಿ ಭಾಗಿಗಳಾಗಬಯಸುವ ಎಲ್ಲರೂ-ಪಕ್ಷ ಮತ್ತು ಪೂರ್ವಾಪರ ಬೇಧವಿಲ್ಲದೆ - ಒಗ್ಗೂಡಿದರೆ ಇದು ಸಾಧ್ಯವಾದೀತು.

೪. ಒಗ್ಗೂಡಿಸಲು ಹೊರಟಿರುವ ಜನರ ಆತ್ಮವಿಶ್ವಾಸ, ಶ್ರದ್ಧೆ, ತಾಳ್ಮೆ ಹಾಗೂ ಧಾರಣ ಶಕ್ತಿಗಳೇ ಸದ್ಯಕ್ಕೆ ಉಳಿದಿರುವ ಮಾರ್ಗೋಪಾಯಗಳು. ಇವುಗಳಿಗೆ ಹೊರತಾದ ಹೊರಗಿನ ಮಾರ್ಗೋಪಾಯಗಳು ಈಗಾಗಲೇ ಹಲವು ಪ್ರಯೋಗಗಳಲ್ಲಿ ಬಳಕೆಯಾಗಿ ಸವಕಲಾಗಿ ಹೋಗಿವೆ.

೫. ಗಾಂಧಿವಾದ, ಸಮಾಜವಾದ, ಅಂಬೇಡ್ಕರ್‌ವಾದ, ಮಾರ್ಕ್ಸ್‌ವಾದ ಮುಂತಾದವುಗಳನ್ನು ಮಾರ್ಗದರ್ಶಿಗಳೆಂದು ನಂಬಿ ಹೊರಟ ಚಳವಳಿಗಳನ್ನು ದಾರಿತಪ್ಪಿಸಿದ 'ಮಾಯೆ' ಯಾವುದು ಎಂಬುದನ್ನು ಕಂಡುಕೊಳ್ಳುವುದರಲ್ಲೇ ಹೊಸ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳು ಅರಳಿಯಾವು.

(ಸಂವಾದ, ನವೆಂಬರ್ ೨೦೦೪)

❑

ನಾಲ್ಕು ಸಂದರ್ಶನಗಳು

ಕೆ. ಶಿವರಾಮ ಕಾರಂತರೊಂದಿಗೆ ಸಂದರ್ಶನ

ಡಾ. ಕೆ. ಶಿವರಾಮ ಕಾರಂತರಿಗೆ ತೊಂಭತ್ತು ವರ್ಷ ತುಂಬುವ ಕೆಲ ದಿನಗಳ ಹಿಂದೆ - ಅಂದರೆ ೧೯೯೨ರಲ್ಲಿ - ಅವರು ಹಾಸನಕ್ಕೆ ಬಂದಿದ್ದಾಗ ಆಕಾಶವಾಣಿ ಹಾಸನ ಕೇಂದ್ರಕ್ಕಾಗಿ ಧ್ವನಿಮುದ್ರಿಸಿಕೊಂಡ ಸಂದರ್ಶನದ ಸಂಕಲಿತ ರೂಪ ಇದು. ಕಾರಂತರ ಮಾತುಗಾರಿಕೆಯ ಲಹರಿ ಸಂದರ್ಶನವನ್ನು ಎಲ್ಲೆಲ್ಲಿಯೋ ಕೊಂಡೊಯ್ಯಿತು. ... ಕಿರಿಯ ಸಂದರ್ಶಕರನ್ನೂ ಸಮಾನರಂತೆ, ಎದುರಾಳಿಯಂತೆ ಪರಿಗಣಿಸಿ ತೀವ್ರವಾಗಿ ವಾದ ಮಾಡುವ ಅವರ ಧಾಟಿ ಇಲ್ಲಿಯೂ ಎದ್ದು ಕಾಣುತ್ತದೆ. ಆದರೆ ಆಗ್ಗೆ ಏಳೆಂಟು ವರ್ಷಗಳಿಂದಲೂ ಕಾರಂತರನ್ನು ವೈಯಕ್ತಿಕವಾಗಿ ಬಲ್ಲವನಾಗಿದ್ದುದರಿಂದ ಹಾಗೂ ಅವರ ಈ ಆಕ್ರಮಣಕಾರಿ ಮಾತುಗಾರಿಕೆ ಆತ್ಯಂತಿಕವಾಗಿ ಒಂದು ಸ್ನೇಹದ ಆಟ ಮಾತ್ರವಾಗಿರುತ್ತದೆಂದು ಗೊತ್ತಿದ್ದರಿಂದ ನಾನೂ ಅವರನ್ನು ನನ್ನ ಶಕ್ತ್ಯಾನುಸಾರ ಕಾಡಿದೆ... ಹೀಗಾಗಿ ಈ ಸಂದರ್ಶನ ಕಾರಂತರನ್ನು ತಕ್ಕಮಟ್ಟಿಗಾದರೂ ಅವರೆಲ್ಲ ಜೀವಂತಿಕೆಯೊಂದಿಗೆ ಪ್ರಸ್ತುತಪಡಿಸಿದೆ ಎಂದೇ ನನ್ನ ಭಾವನೆ.

ಡಿ.ಎಸ್. ನಾಗಭೂಷಣ : ಸರ್, ತಮ್ಮ ಬದುಕಿನ ತೊಂಭತ್ತು ವರ್ಷಗಳನ್ನು ತಾವು ಪೂರ್ಣಗೊಳಿಸ್ತಾ ಇದೀರಾ. ಈ ಸಂದರ್ಭದಲ್ಲಿ...

ಶಿವರಾಮ ಕಾರಂತ : ತಾನಾಗಿ ಪೂರ್ಣ ಆಗ್ತಾ ಇದೆ. ನಾನೇನೂ ಪ್ರಯತ್ನ ಮಾಡಿಲ್ಲ... ಹ್ಞಾಂ...

ನಾ : ಈ ಸಂದರ್ಭದಲ್ಲಿ ನೀವೊಮ್ಮೆ ಹಿಂತಿರುಗಿ ನೋಡಿದಾಗ ನಾನು ಸಾರ್ಥಕವಾದ ಬದುಕು ನಡೆಸಿದ್ದೇನೆ ಅನ್ನೋ ಆತ್ಮತೃಪ್ತಿ ನಿಮಗೆ ಇದೆಯಾ ಸರ್?

ಕಾ : ಇಲ್ಲಿ ... ನಾನು ನನ್ನ ಬದುಕಿನಲ್ಲಿ ಸಾಕಷ್ಟು ಸಂತೋಷ ಪಟ್ಟಿದ್ದೇನೆ. ಇಲ್ಲದಿದ್ರೆ ಹೀಗೆ ಎಲ್ಲದ್ರಲ್ಲಿ ಡ್ಯಾಬಲ್ ಮಾಡೋದು? ನನಗೆ ಯಾವುದು ಮಾಡಬೇಕೆಂತಿದೆಯೋ ಅದನ್ನ ಮಾಡಿದ್ದೇನೆ. ಅದು ನನಗೆ ಬೇಕನ್ನುವಷ್ಟು ಸಂತೋಷ ಕೊಟ್ಟಿದೆ. ಆತ್ಮತೃಪ್ತಿಗಿಪ್ತಿ ಅದೆಲ್ಲ ಇನ್ನೊಂದು ದೊಡ್ಡ ಕುಂಬಳಕಾಯಿ ಆಯಿತು. ಆತ್ಮತೃಪ್ತಿ ಇದಕ್ಕೆಲ್ಲ ಮೋಕ್ಷಕ್ಕೆ ಹೋಗಬೇಕಾಗುತ್ತೆ.

ನಾ : ಬದುಕು ಸಾರ್ಥಕ ಅನ್ನಿಸಿದೆಯಾ?

ಕಾ : ಏನು ...

ನಾ : ಸಾರ್ಥಕತೆ...

ಕಾ : ಸಾ... ರ್ಥಕತೆ... ನನಗೆ ಸಂತೋಷ ಕೊಟ್ಟಿದೆ ಬದುಕು. ದುಡ್ಡು ಕೊಟ್ಟರೆ ಅರ್ಥ ಬರ್ತ್ತದೆ ಸಾ...ಅರ್ಥ... ಅಂದ್ರೆ ಯಾವ ಪ್ರಯೋಜನ ಕೊಟ್ಟಿದೆ ಅಂತ. ಅನೇಕ ಬದುಕಿನ ಕೆಲಸಗಳನ್ನ ರೂಪಾಯಿ-ಆಣೆ-ಪೈಯಲ್ಲಿ ಲೆಕ್ಕ ಹಾಕತಕ್ಕದ್ದಲ್ಲ. ಸಂಪಾದನೆ ಆಗದೇ ಹೋಗಬಹುದು. ಆ ಹೊತ್ತು ಸರಿಯಾಗಿ ಹೋಯಿತೇ, ಆ ಹೊತ್ತಿನ ನೆನಪು ಉಳಿಯಿತೇ. ಆ ಹೊತ್ತು ನನ್ನ ಬದುಕಿಗೆ, ನಾಳೆಗೆ ಪ್ರಯೋಜನಕ್ಕೆ ಬಂತೆ? ಈ ದೃಷ್ಟಿಯಿಂದ ತಕ್ಕೊಂಡಾಗ ನನ್ನ ಡೊಂಬರಾಟಗಳೆಲ್ಲ, ಸೋಲು ಗೆಲುವು ನನಗೆ ಬೇಕೆನ್ನುವಷ್ಟು ಪ್ರಯೋಜನ ಕೊಟ್ಟಿದೆ. ಅಯ್ಯೋ ಅದು ಸೋತು ಹೋಯ್ತು, ಅದು ನಷ್ಟ ಆಯ್ತು - ಈ ಭಾವನೆಯೇ ಬರೋದಿಲ್ಲ. ಯಾಕೇಂದ್ರೆ ಅದು ಕಲಿಸಿದಂಥಾ ಪಾಠ ತಿಳುವಳಿಕೆ. ನಾನು ಡಿಕ್ಶನರಿ ಮಾಡ್ಲಿಕ್ಕೆ ಹೊರಟೆ... ನಾಲ್ಕೈದು ವರ್ಷ ಒದ್ದಾಡಿದ್ದೇನೆ. ಮುಂದೆ ಆ ಪುಸ್ತಕ ಮಾರಾಟ ಆಯ್ತೋ ಇಲ್ಲವೋ ಬೇರೆ. ಆ ನಾಲ್ಕೈದು ವರ್ಷಗಳ ಕಾಲದಲ್ಲಿ ನೋಡದೇ ಇದ್ದ ಕನ್ನಡ ಶಬ್ದ-ಎಲ್ಲೆಲ್ಲಿ ಯಾರ್‍ಯಾರು ಉಪಯೋಗಿಸಿದ್ದಾರೆ, ಯಾವ ಅರ್ಥದಲ್ಲಿ ಉಪಯೋಗಿಸಿದ್ದಾರೆ... ಈ ಅನುಭವ ನಾನು ಮನೆಯಲ್ಲೇ ಕೂತ್ಕೊಂಡು ಶಾಲೆ ಪಾಠ ಕಲ್ತಿದ್ರೆ ನನಗೆ ಗೊತ್ತಾಗಿತ್ತೆ? ಆಗ ಕಾಲದಲ್ಲಿ ಈ ಅರ್ಥ ಇತ್ತು, ಮುಂದೆ ಮರೆತು ಹೋಯಿತು... ಅದರ ಮಾತು ತಕ್ಕೊಳ್ಳುವಾಗ ಮಾತಿನ ವ್ಯವಹಾರ ನನಗೊಂದು ಉದ್ಯೋಗ ಆದದ್ರಿಂದ ಪುಸ್ತಕ ಮಾರಾಟ ಆಗದೇ ಇದ್ರೂ ಕೂಡಾ ನಾನು ಮಾಡಿದ ಪ್ರಯತ್ನ ಅದು ನನ್ನ ಪಾಲಿಗೆ ಸಫಲವೇ ಆಗ್ತದೆ. ಎಲ್ಲವನ್ನೂ ನಾವೇನು ಮಾಡ್ತೇವೆ ಮಾರಾಟ ಆಯ್ತೇ ಇಲ್ಲವೇಂತ ನೋಡ್ತೇವೆ. ಯಾವುದು ಮಾರಾಟ ಆಗಬೇಕಾದ್ರೂ ನಮ್ಮ ಸಾಮಾನು ಇನ್ನೊಬ್ಬನಿಗೆ ಬೇಕಂತ ಅನ್ನಿಸಬೇಕಾಗ್ತದೆ. ನಮ್ಮ ಚಂದ ನೋಡಿ ಅವನು ತಕ್ಕೊಳ್ಳಲ್ಲ. ಅವನ ಅವಶ್ಯಕತೆ ಇದ್ರೆ ತಕ್ಕೋತಾನೆ. ಸಾಹಿತ್ಯ ಅತಿ ಕಡಿಮೆ ಆಯುಷ್ಯದ್ದು ಕಾಫಿ, ತಿಂಡಿ, ನಾಟಕ ಇವು ಪ್ರಥಮ. ಆ ರೀತಿ ಕಲಾಕೃತಿಗಳಲ್ಲ. ಅವನ್ನ ಮೆಚ್ಚಬೇಕಾದ್ರೆ ಒಂದು ಸಂಸ್ಕಾರ ಬೇಕಾಗ್ತದೆ. ಅದನ್ನ ಪಡೆದಿರತಕ್ಕಂತಹ ವ್ಯಕ್ತಿಗೆ ಬಹಳ ಖುಷಿಯಾಗಬಹುದು. ಇಲ್ಲದೇ ಹೋದರೆ ಇಲ್ಲ. ಆದ್ರೆ ಆ ಕಲಾ ಕೃತಿಯನ್ನು ಮಾಡುವವನಿಗೆ, ಮಾಡಿ ತೋರಿಸುವವನಿಗೆ ಒಂದು ಸಂತೋಷ ಸಿಗುತ್ತೆ. ಆದ್ರಿಂದ ಈ ದೃಷ್ಟಿಯಿಂದ ಸಾರ್ಥಕತೆ ಅನ್ನೊಂದು ದೊಡ್ಡ ಅಳತೆ ಏನಲ್ಲ...

ನಾ : ಬದುಕಿನ ಯಾವುದೇ ಘಟ್ಟದಲ್ಲಿ ನಾನು ಸೋಲು ಅನುಭವಿಸಿದ್ದೇನೆ ಅಂತ ನಿಮಗೆ ಅನ್ನಿಸೇ ಇಲ್ಲವೆ ಸರ್? ಅಥವಾ ಯಾವುದೇ ವಿಷಾದ...

ಕಾ : ಸೋಲು... ಅನ್ನೋದು... ನಾವು ಮಾಡಿದ ಕೆಲಸ ಎಲ್ಲ ಆಗ್ತದೆಯೇನು?ಹ್ಞೂಂ? ವ್ಯಾಪಾರ ಮಾಡ್ತೇವೆ, ಕೈ ಸುಟ್ಕೋತೇವೆ. ಪತ್ರಿಕೆ ಮಾಡಿದ್ದೇನೆ, ಬರೆದಿದ್ದೇನೆ, ತಿರುಗಾಡಿದ್ದೇನೆ. ವರ್ಗಣಿದಾರರೇ ಸಿಕ್ಕಿಲ್ಲ. ಪತ್ರಿಕೆ ತಗೊಂಡು ಹೋದವ ಈಕಡೆ ಮುಖವೇ ಹಾಕಿಲ್ಲ...

'ಚೋಮನ ದುಡಿ' ಬಹಳ ಶಿಫಾರ್ಸಿನ ಪುಸ್ತಕ ಬರೆದಿದ್ದೇನೆ... ಹನ್ನೆರಡಾಣೆ ಬೆಲೆ ಇಟ್ಟಿದ್ದೇನೆ. ಐದು ಆರು ವರ್ಷ ಸಾವಿರ ಪ್ರತಿ ಖರ್ಚಾಗಲಿಲ್ಲ. ಆ ಲೆಕ್ಕದಲ್ಲಿ ನಾನು ಎಲ್ಲಿದ್ದೇನೆ ಅನ್ನೋ ಜ್ಞಾನ ನನಗಿದೆ. ಬಾಕಿಯವರಿಗೆ ಆದ್ರೆ ದಿಗಿಲು ಹಾರೋರು... ನಾನು ಒಂದು ಮರುಭೂಮಿಯಲ್ಲಿ ಕೃಷಿ ಮಾಡ್ತಾ ಇದೇನೆ. ಆಗ ಒದುವವರು ಕಡಿಮೆ. ಪುರಾಣ ಪುಣ್ಯ ಇದ್ರೆ ಕೇಳ್ತಾರೆ. ಇಲ್ಲ ಸಿನಿಮಾ ಸ್ಟೈಲಿನ ಹಾಗೆ ಬರೇ ಕುತೂಹಲ ಹುಟ್ಟಿಸತಕ್ಕಂತಹ ಕಥೆ ಇದ್ರೆ ಓದ್ತಾರೆ. ಯಾರೋ ಒಬ್ಬ ಹೊಲೆಯಂದು, ಯಾರಿಗೂ ಬ್ಯಾಡದೇ ಇದ್ದ ವ್ಯಕ್ತಿಯದ್ದು ಕತೆ ಬರೆದ್ರೆ ಆಗ ಓದ್ಲಿಲ್ಲ ಅಂದ್ರೆ... ನಾನೊಂದು ಬರೆದ ಕೂಡ್ಲೆ ಅವರು ಬಲಿಯಾಗಬೇಕೋ? ನಿಮಗದು ಸಂತೋಷ ಕೊಡದಿದ್ರೆ? 'ವಿಚಿತ್ರ ಕೂಟ' ಬರೆದೆ: ನನಗೆ ಭಾರೀ ಲಾಯಕ್ಕಿತ್ತು ಪತ್ತೇದಾರಿ ಕತೆ ಅಂದ್ರೆ. ಯಾಕೆ ಬರೆದ್ರಿ ಇದನ್ನ ಅಂತ ಒಬ್ಬರು ಕೇಳಿದ್ರು. ಇಡೀ ನನ್ನ ಅಟಿಟ್ಯೂಡ್ ಬದಲಾಯಿತು... ನಾನು ಎಂಟರ್‌ಟೇನ್‌ಮೆಂಟ್ ಮಾಡ್ಲಿಕ್ಕೆ ಹುಟ್ಟಿದ್ದೋ? ಗಾಂಧೀ ಕಂಪನೀಲಿ ಸ್ವಾತಂತ್ರ್ಯ, ಸ್ವರಾಜ್ಯ, ಸಮಾಜ ಸುಧಾರಣೆ ಅಂತ ತಕ್ಕೊಂಡು ಚಮತ್ಕಾರದ ಒಂದು ಕಥೆ ಬರೆದಿದ್ದೆ. ನನ್ನ ಬರವಣಿಗೆ ಈ ಉದ್ದೇಶಕ್ಕಾಗಿ ಖರ್ಚಾಗಬೇಕೋ ಎನ್ನುವ ಪ್ರಶ್ನೆಯನ್ನು ನನಗೆ ನಾನು ಕೇಳಿದ ಮೇಲೆ ಆ ವ್ಯವಹಾರಕ್ಕೆ ಹೋಗಲಿಲ್ಲ. ಹಾಗಾಗಿ ಅನೇಕ ಸೋಲುಗಳು ಸಹ... ಎಲ್ಲವೂಂತ ಹೇಳ್ಲಿಕ್ಕೆ ಬರೋದಿಲ್ಲ; ಯಾಕೇಂದ್ರೆ ಮಾಡಿದ್ದು ವಿಪರೀತ ಆದ್ರೆ ಯಾವುದರಿಂದ ಸೋತೆ-ಗೆದ್ದೇಂತ ಹೇಳ್ಲಿಕ್ಕೆ ಬರೋದಿಲ್ಲ. ಹೀಗೆ ಅದರ ಪ್ರಯೋಜನ ನನಗೆ ತೃಪ್ತಿ ಕೊಟ್ಟಿದೆ. ನಾನೇನೂ ಬೇಜಾರು ಪಡೋಂಥದ್ದಿಲ್ಲ. ಆದರೆ ನಾನು ಇಂತಹದ್ದಕ್ಕೇ ಮಾಡಿದೆ, ಲೋಕೋದ್ಧಾರಕ್ಕೆ ಮಾಡಿದೆ; ಅದಾಗಲಿಲ್ಲಾ...ನೀನೊಬ್ಬನೇ ಹುಟ್ಟಿದ್ದಲ್ಲ. ನಿನ್ನ ಹಾಗೆ ಮಾತಾಡುವವರು ನೂರು ಜನ ಇದ್ದಾರೆ. ದಿವಸಕ್ಕೆ ಇಷ್ಟಿಷ್ಟು ಪೇಪರ್ ಓದ್ತಾರೆ, ನಿಂದೂ ಒಂದೆರಡು ಹಾಳೆ ಓದಿರಬಹುದು. ಆದ್ದರಿಂದ ನಾನು ಬರೀತಿನಿ ಅಂತ ಹೇಳ್ಕೊಂಡು ತಲೆಗೆ ಪಿತ್ಥ ಹಚ್ಕೊಳ್ಳಬೇಡ... ಆ ದೃಷ್ಟಿಯಿಂದ ನನಗೆ ಎಲ್ಲ ಸಾಹಿತಿಗಳ ಮೇಲೆ ಬೇಜಾರು ಇದೆ. ನಾವೇ ಒಂದು ಜಾತಿ ಬೇರೆ... ಈ ಸಮಾಜವನ್ನು ಮೇಲೆತ್ತುತ್ತೇವೆ... ಈ ಪಿತ್ಥ ಹೋಗದವರೆಗೆ ಅವರೂ ದುರಸ್ತಿ ಆಗೋದಿಲ್ಲ, ಇನ್ನೊಬ್ರೂ ದುರಸ್ತಿ ಆಗೋದಿಲ್ಲ. ನಿರಾಶೆ ಬರೋದೇ. ಇಡಿ ನಿಮ್ಮ ಆಯುಷ್ಯ ಮಾತಾಡೇ ಕಳಿತದೆ. ನನ್ನ ಮಾತು ಮುಖ್ಯ ಆಗಬೇಕಾದ್ರೆ ಅವನಿಗೆ ಎಲ್ಲಿಯೋ ಅದು ತಾಗಬೇಕಾಗುತ್ತೆ. ನೆನಪು ಉಳಿಬೇಕಾಗ್ತದೆ. ಅಂವ ನಮ್ಮ ಕಡೆ ನೋಡಬೇಕಾಗ್ತದೆ. ಅಂವ ನೋಡದೆ ಇದ್ರೆ ಏನ್ಮಾಡೋದು...? ಸಾಹಿತಿಯಾದವ ತನ್ನನ್ನ ತಾನು ಅಳಕೊಳ್ಳೋದು ಒಳ್ಳೆಯದು...

ನಾ : ತಮ್ಮ ಬದುಕನ್ನು ಕಟ್ಟಿದ್ದು ವೈಚಾರಿಕ ದೃಷ್ಟಿಕೋನ ಅಂತ ಸಾರಿ ಹೇಳಿದ್ದೀರಿ ನೀವು. ಆದರೆ ವೈಚಾರಿಕ ದೃಷ್ಟಿಕೋನವೊಂದೇ ಬದುಕನ್ನು ಗ್ರಹಿಸುವ ಮಾರ್ಗ ಅಂತ ನೀವು ನಂಬ್ತಿರಾ?

ಕಾ : (ಇದ್ದಕ್ಕಿದಂತೆ ಉದ್ವಿಗ್ನರಾಗಿ) ಯಾವುದೇ ಬದುಕನ್ನ ಗ್ರಹಿಸುವ ಮಾರ್ಗ ಅಂತ ಪಟ್ಟಿಕೊಡಿ ನನಗೆ...

ನಾ : ನಾನು ಕೇಳ್ತಿರೋದು ವೈಚಾರಿಕ ದೃಷ್ಟಿಕೋನ ಮಾತ್ರಾನಾ...

ಕಾ : (ಉದ್ವಿಗ್ನತೆಯಲ್ಲೇ) ಬದುಕು ಒಂದು ಸಾವಿರ ವಿಷಯಕ್ಕೆ ಸಂಬಂಧಪಟ್ಟಿದ್ದು ಇದೆ. ಎಲ್ಲವುದಕ್ಕೂ ಒಂದು ಚೌಕಟ್ಟು ಹಾಕಿ ವೈಚಾರಿಕ ಅಂತ ಹಾಕಿದ ಕೂಡಲೇ ಬುದ್ಧಿಗೇಡಿ ಆಗಬೇಕು ಅಂತ ಅದರ ಉತ್ತರ. ಅದಕ್ಕೆ ಹೇಳಿ ನನಗೆ .... ಮನುಷ್ಯ ವಿಚಾರ ಮಾಡಲಿಕ್ಕೇ ಬುದ್ಧಿ ಇರೋದು. ಉಪಯೋಗಿಸಿದ್ದಾನೆ. ಎಂದಿಗೂ ಅದು ಅಪರಾದ ಆಗೋದಿಲ್ಲ... ಹಾಂ...

ನಾ : ಈ ಪ್ರಶ್ನೆ ಯಾಕೆ ಕೇಳ್ತಾ ಇದೀನಿ ಅಂದ್ರೆ...

ಕಾ : (ತಿರುಗೇಟು ಕೊಟ್ಟಂತೆ) ನಾನು ಯಾಕೆ ಹೇಳ್ತಾ ಇದೀನಿ ಎಂದ್ರೆ ಕಣ್ಣು ಮುಚ್ಚಿ ನಂಬಿಬಂದಂತಹ ಸಂಪ್ರದಾಯದಿಂದ ಬದುಕುವಾಗ ವೈಚಾರಿಕ ಜೀವನ ಅನಿವಾರ್ಯ. ಕಷ್ಟಪಟ್ಟು ಸ್ವಾತಂತ್ರ್ಯ ತಂದ ಕಾಲದಲ್ಲಿ ಅದಕ್ಕೆ ಬೇಕಾದ ಪರಿಹಾರ ಸಿಕ್ಕದಿದ್ದಾಗ ರಾಜಕೀಯ ವೈಚಾರಿಕತೆ ಬೇಕಾಗ್ತದೆ. ಸಂಪ್ರದಾಯ ಅಂತ ನಂಬಿ ಬರುವಂತಹ ವಿಷಯದಲ್ಲಿ ನಾನು ನಂಬಿದ ಹಾಗೆಯೇ ಎಷ್ಟು ಜನ ನಂಬಲಿಲ್ಲ ಅನ್ನೋ ಪ್ರಶ್ನೆ ಬರ್ತದೆ. ನಿಮ್ಮ ಧರ್ಮ ಹಿಂದೂ ಧರ್ಮ, ವೈಷ್ಣವ ಧರ್ಮ, ವಿರಶೈವ ಧರ್ಮ... ಚೀನಾದಲ್ಲಿ ಜಪಾನದಲ್ಲಿ ಐದು ಸಾವಿರ ವರ್ಷಗಳ ನಾಗರೀಕತೆ ಇತಿಹಾಸದಲ್ಲಿ ಸಾವಿರ ಧರ್ಮಗಳು ಸಾವಿರ ರೀತಿ ಹೇಳಿವೆ. ನಿಮ್ಮದೂ ಒಂದು ವಿಚಾರ ಮಾಡ್ತಿರೋ ಅಥವಾ ನಂದೇ ಸರಿ ಬಾಕಿಯವರದ್ದು ಬೇಡಾಂತ ಹೇಳ್ತೀರೋ? ವಿಚಾರವಿಲ್ಲದೆ ಬದುಕೋದಕ್ಕೆ ಆಗೋದಿಲ್ಲ. ನನ್ನಪ್ಪ ಹೇಳಿದ್ದೇ ನಿಜ...

ನಾ : ಅದಲ್ಲ ಸರ್; ಆಲೋಚನೆ ಮಾಡುವ ಒಂದು ಶಿಸ್ತಿನ ವಿಚಾರ ನಾನು ಹೇಳ್ತಿರೋದು... ಆದ್ರಿಂದ ನಾನು ಕೇಳ್ತಿರೋದು...

ಕಾ : (ಸ್ವಲ್ಪ ಶಾಂತರಾದಂತೆ) ಹೌದು ಶಿಸ್ತಿನ ಬಗ್ಗೆಯೇ... ಯಾವುದು ಆತ್ಮ ಅಂತ ನಿಮಗೆ ಗೊತ್ತಿದೆಯೋ? ಉಂಟೋ ಇಲ್ಲವೋ... ಅದರ ಬಗ್ಗೆ ಯಾವ್ಯಾವ ಏನೇನು ಹೇಳಿದೆ?... ನನ್ನ ಅಪ್ಪ ಹೇಳಿದ್ದೇ ನಿಜ ಅಂದರೆ ಅದು ವಿಚಾರ ಅಲ್ಲ. ಕಣ್ಣು ಮುಚ್ಚಿ ದಸ್ಕತ್ತು ಹಾಕಿದ್ದೇನೆ... ಹಿಂದೂಸ್ತಾನದಲ್ಲಿ ಇಷ್ಟು ಧರ್ಮ ಆಯ್ತು. ತಲೆ ತಲೆ ಹೊಡಕೊಂಡ್ರು. ಇದು ಪೇಪರ್‌ನಲ್ಲಿ ಬರ್ತದೆ... ಆವಾಗ ವಿಚಾರ ಮಾಡಬೇಕೋ ಬೇಡವೋ?... ತಿಂದೆ ಬಾಯಿ ರುಚಿ ಆಯ್ತು. ಮೂರು ದಿನಕ್ಕೆ ಹೊಟ್ಟೆನೋವು ಬಂತು. ಯಾಕೆ ಬಂತು? ವಿಚಾರ.... ಎಲ್ಲದಕ್ಕೂ ಬೇಕು. ಒಂದೇ ಕಂಡದ್ದು ಆದ್ರೆ, ಬೇರೆ ಇಲ್ಲದಿದ್ದಾಗ ವಿಚಾರ ಅವಶ್ಯವಿಲ್ಲ. ಬೇರೆ ನೂರಾರು ಇರುವಾಗ, ನಾವು ಆಯುವಂತಾದ್ದು ಇರುವಾಗ, ತುಲನೆ ಇರಬೇಕಾದರೆ, ನಮ್ಮ ಬೆಳವಣಿಗೆ ಆಗಬೇಕಾದರೆ, ನಾವು ಬಳಸುವ ಪದಾರ್ಥವಿರಲಿ, ನಂಬಿಕೆ ಇರಲಿ, ಏನಾದ್ರೂ ಅಭ್ಯಾಸ ಇರಲಿ, ಇದನ್ನೇ ಏಕೆ ಅರಸ್ತೇವೆ ಅಂತ ವಿಚಾರ ಮಾಡಬೇಕಾಗತ್ತೆ. ಇತರ ಪ್ರಾಣಿಗಳು ವಿಚಾರ ಮಾಡೋಲ್ಲ. ತಿಂತಾವೆ, ಹೋಗ್ತಾವೆ, ಅವನಿಗೂ ಇವಕ್ಕೂ ಏನು ವ್ಯತ್ಯಾಸ ಇಲ್ಲ. ಆದರೆ ತಿನ್ನೋದು ಕಹಿಯಾಗಿ ಕಂಡರೆ ಎರಡನೇ ಸಾರಿ ಅದು ತಿನ್ನೋದಕ್ಕೆ ಹೋಗೋದಿಲ್ಲ. ಆವಾಗ ವಿಚಾರ ಮಾಡ್ತದೆ ಅದು. ಪುಸ್ತಕ ಬರೀದೆ ಇರಬಹುದು. ವಕೀಲರಿಗೆ ಹೇಳದೇ ಇರಬಹುದು. ಯಾವ್ದೂ ಆಹಾರ ಇಲ್ಲದ ಸಮಯದಲ್ಲಿ ಮಕ್ಕಳನ್ನು ಸಹ ತಿನ್ಲಿಕ್ಕೆ ಹೋಗ್ತದೆ.

ಏನು ಮಾಡ್ಬೇಕು ಅದು. ಬದುಕಬೇಕಾಗಿದೆ. ಅದಕ್ಕೆ ರೂಢಿ ಮಾಡಿಕೊಳ್ತಾ ಇದೆ...

ನಾ : ಸರ್ ಈಗ ಕೇಳಿ... ನೀವು ವಿಚಾರ ಮಾಡಿ ಕೈಗಾ ಪ್ರಾಜೆಕ್ಟ್ ಬೇಡಾ ಅಂತಿದೀರಾ. ಆದರೆ ವಿಜ್ಞಾನಿಗಳೂ ವಿಚಾರ ಮಾಡಿಯೇ ಕೈಗಾ ಪ್ರಾಜೆಕ್ಟ್ ಬೇಕು ಅಂತಿದಾರೆ. ಈಗ ನಿರ್ಧಾರ ಯಾವ ವಿಚಾರದಿಂದ...

ಕಾ : (ಒಮ್ಮೆಗೇ ಸಿಟ್ಟಿನಿಂದ) ಆವಾಗ ನೀವು... ಆ ವಿಜ್ಞಾನಿಗಳ ಬರಹ ಓದದೇ ಇರೋದಕ್ಕೆ ಇದೇ ಸಾಕ್ಷಿ... ಯು.ಎನ್.ಓ. ಸಂಸ್ಥೆ ಸಾಲ ಕೊಡಬೇಕಾದ್ರೆ ಕಮಿಟಿ ಮಾಡಿಕೊಂಡು ಇನ್ಮುಂದೆ ಇದು ಮಾಡಕೂಡದು, ಇದು ಚೀಪ್ ಅಲ್ಲ, ಇದರ ಹಾನಿ ನಿರಂತರ... ಯುನೈಟೆಡ್ ನೇಶನ್ಸ್ ಹ್ಯಾಸ್ ಡಿಕ್ಲೇರ್ಡ್ ದ ಡೇಂಜರ್ಸ್ ; ದ ಕಾಸ್ಟ್ ಆಂಡ ದ ಡೇಂಜರ್ಸ್ ಲಾಸ್ಟಿಂಗ ಫಾರ್ ಜನರೇಶನ್ಸ್ ಅಂಡ ದ ವಿಜ್ಞಾನಿ ಕಮೀಟೀ... ನೀಲ್ಸ್ ಬೋರ್ ಮಾಡಿಕೊಟ್ಟು ಅದ್ರಿಂದ ಅದ ಅಪಾಯ ನೋಡಿದ ಮೇಲೆ ವಾರ್ ಎಂಡ್ ಆಗೋವರೆಗೆ ಅಮೇರಿಕಾ ನೀಲ್ಸ್ ಬೋರ್ ಮೇಲೆ ಡಿಟೆಕ್ಟಿವ್ ಇಡಬೇಕಾಯ್ತು, ಇವನು ಏನು ಹೇಳ್ತಾನೋ ಅದ್ಕೊಂಡು. ಆದದ್ದರಿಂದ ಒಮ್ಮೆಗೆ ತೀರ್ಮಾನ ಮಾಡಬೇಡಿ. ನೀವು ಅಂತಲ್ಲ. ಇಡೀ ರಷಿಯಾ ಇವೊತ್ತು ಬ್ಯಾಡಾ ಅಂತಿದೆ. ಡಿಸ್‌ಮೆಂಬರ್ ಮಾಡ್ಲಿಕ್ಕೆ ತಯಾರಾಗಿದಾರೆ. ಇವತ್ತೋ ಅವರಿಗೆ ಚೆರ್ನೋಬಿಲ್ ಮುಚ್ಚಿದ ಗೋರಿ, ತೆರೆಯಬಾರದ್ದು... ರೇಡಿಯೇಶನ್ ಬಂದು ಇನ್ನೂ ಎಷ್ಟೋ ಕೋಟಿ ರೂಪಾಯಿ ಹಾಳಾಗಿದೇಂತ. ಇಪ್ಪತ್ತೈದು ವರ್ಷ ಬಾಳಬೇಕಾದಂತಹ ರಿಯಾಕ್ಟರ್ ಹಾಳಾಗಿ ಮುಚ್ಚಬೇಕಾದರೆ ಅದರ ಹಾನಿ ತಪ್ಪಿಸಬೇಕಾದ್ರೆ ಅದರ ನಾಲ್ಕು ಪಾಲು ದುಡ್ಡು ಬೇಕು. ಅದರ ಮೇಲೂ ಖಂಡಿತ ಇಲ್ಲ. ಅದರ ಅಪಾಯ ಮಿಲಿಯ ಮಿಲಿಯಗಟ್ಟಲೆ ವರ್ಷಗಳವೆರೆಗಿದೆ. ಪ್ಲುಟೋನಿಯಂ ಒಂದು ಕಿಲೋ ಅರ್ಧ ಆಗಬೇಕಾದರೆ ಇಪ್ಪತ್ತನಾಲ್ಕು ಸಾವಿರ ವರ್ಷ... ಅದು ಇಲ್ಲದ ಹಾಗೆ ಆಗಬೇಕಾದರೆ ಒಂದರೆಡು ಲಕ್ಷ ವರ್ಷ...

ನಾ : ಇಷ್ಟೆಲ್ಲ ವಾಸ್ತವಾಂಶಗಳು ಸ್ಪಷ್ಟವಾಗಿದ್ದರೂ ಕೂಡಾ ಇದರ ಬಗ್ಗೆ ವಾದ ವಿವಾದಗಳು ಯಾಕೆ ನಡೀಬೇಕು ಸರ್?

ಕಾ : (ಫಕ್ಕನೆ) ನಿಮ್ಮ ಆಳುವವರಿಗೆ ಬುದ್ಧಿ ಇಲ್ದಿದ್ದಕ್ಕೆ...

ನಾ : ನೀವು ನಾವು ಆಯ್ಕೆ ಮಾಡಿದವರೆ ಅಲ್ವಾ ಸಾರ್?

ಕಾ : (ಲೆಕ್ಕಿಸದೆ) ವ್ಹೆನ್ ಯುನೈಟೆಡ್ ನೇಶನ್ಸ್ ಡೊಂಟ್ ಲೆಂಡ್ ಮನಿ, ಇಟ್ ಈಸ್ ಕಾಸ್ಟ್‌ಲಿಯರ್, ದೆರ್ ಈಸ್ ನೊ ಹೋಪ್ ಆಫ್ ವೇಸ್ಟಿಂಗ್ ದೀಸ್ ಥಿಂಗ್ಸ್.... ಆದ್ದರಿಂದ ನೀವು ಓದ್ತಾ ಯಾವ ಜ್ಞಾನ ಸಿಕ್ತೋ ಅದು ನಾನು ಓದ್ತಾ ಸಿಕ್ಕಿದಕ್ಕಿಂತ ಬೇರೆ ಆಗಿರಬಹುದು. ಅದಕ್ಕೆ ಪ್ರಶ್ನೆಗೆ ಈ ರೂಪ ಬಂದಿದೆ.

ನಾ : ಆದರೆ ನಮ್ಮ ಜೀವನ ಶೈಲಿಯಲ್ಲೇ ಈ ಇಂಧನ ಬೇಡಿಕೆ ಅಂತರ್ಗತ ವಾಗಿರೋದರಿಂದ...

ಕಾ : ಇಲ್ನೋಡಿ ... ಜೀವನ ಶೈಲಿಗೂ ಈ ತರಹದ ಬೇಡಿಕೆಗೂ ... ಈ ತರಹದ ಬೇಡಿಕೆ ಪ್ಲುಟೋನಿಯಂ, ರೇಡಿಯೋ ಆಕ್ಟಿವಿಟಿ, ಸ್ಟ್ರಕ್ಚರ್ ಆಫ್ ಮ್ಯಾಟರ್ ಗೊತ್ತಾದ ಮೇಲೂ

ಬಂದಂತದ್ದು... ಈ ತರಹ ತೊಡಗಿದ್ದು ಸ್ಟ್ರಕ್ಚರ್ ಆಫ್ ಮ್ಯಾಟರ್ ಗೊತ್ತಾದ ಮೇಲೆ... ಮಿಲಿಯಗಟ್ಟಲೆ ವರ್ಷದ ಹಿಂದೆ, ಸಾವಿರ ವರ್ಷಗಳ ಹಿಂದೆ ಈ ಶೈಲಿ ಇರಲಿಲ್ಲ. ವೈಸ್ ಯು ಕಮ್ ಟು ಎ ನ್ಯು ನಾಲೆಜ್ ಅದನ್ನ ಏನು ಮಾಡಬಹುದು, ಯಾಕೇಂತ ತಿಳಕೊಳ್ಳೋದು ಅದೆಲ್ಲ ಗೊತ್ತಾದ ಮೇಲೆ. ಅದು ಹಿಂದೆ ಇರಲಿಲ್ಲ ಅಂದ್ರೆ ಹಿಂದೆ ಇರಲಿಕ್ಕೆ ಕಾರಣ ಇಲ್ಲ. ಸ್ಟ್ರಕ್ಚರ್ ಆಫ್ ಮ್ಯಾಟರ್ ಯಾರು ಯೋಚಿಸಿದ್ದರು?... ಸ್ಪ್ಲಿಟಿಂಗ್ ಆಫ್ ಆಟಮ್ ಯಾರು ಮಾಡಿದ್ದರು...

ನಾ : ಪರಿಸರದ ಪ್ರಶ್ನೆ ಈಗ ಜೀವನ ಶೈಲಿಯ ಪ್ರಶ್ನೆಯಾಗಿ ಪರಿವರ್ತಿತವಾಗಿಲ್ವಾ ಸಾರ್? ನಿಮಗೆ ವಿದ್ಯುಚ್ಛಕ್ತಿ ಬೇಕು, ಮತ್ತೊಂದು ಇಂಧನ ಬೇಕು. ಹಾಗಿರತಕ್ಕಂತಹ ಸಮಯದಲ್ಲಿ ನೀವು ರಿಯಾಕ್ಟರ್ ಬೇಡಾಂದ್ರೆ...

ಕಾ : ಸ್ವಾಮಿ... ಹಾಗಿರತಕ್ಕಂತಹ ಸಮಯದಲ್ಲಿ ನಿಮ್ದು ಪಟ್ಟಿ ಮೊದಲು ಹಾಕ್ಕೊಳ್ಳ ಬೇಕು... ನಾಲ್ಕು ಬೇಕಾದ್ದು ಆರಿಸೋದು, ಬೇಡದೇ ಇದ್ದರೆ ಬಿಡೋದು ಅಲ್ಲ. ನಿಮಗೆ ಏನೆಲ್ಲ ಬೇಕು, ಯಾರು ಕೊಡಬೇಕು, ಎಲ್ಲಿಂದ ಕೊಡಬೇಕು ಅದೆಲ್ಲ ಪಟ್ಟಿ ಬೇಕು. ಸಹರಾದಲ್ಲಿ ಹುಟ್ಟಿದ್ದೇನೆ... ನನಗೆ ವಿದ್ಯುಚ್ಛಕ್ತಿ... ನೀರೇ ಇಲ್ಲ ಅಲ್ಲಿ... ಅವನಿಗೂ ಬೇಕು. ನಮ್ಮ ತ್ರಾಣದಲ್ಲಿ ಎಲ್ಲಿ ಇದೆ, ನಮಗೆ ಅನುಕೂಲತೆ ಎಲ್ಲಿ ಇದೆ, ಯಾವುದರಿಂದ ಎಷ್ಟು ಹಾನಿಯಾಗುತ್ತೆ ಅಂತ ಹೇಳಲಿಕ್ಕೆ ಬರ್ತದೆ. ನೀರೇ ಇಲ್ದಿದ್ದ ಊರ್ನಲ್ಲಿ ಇದ್ದವನಿಗೆ ಮತ್ತೇನೋ ಬೇಕೂಂತ ನಿಮ್ಮನ್ನ ಕೇಳಿ ಅಂವ ಹೇಳೋಕ್ಕೆ ಹೋಗೋಲ್ಲ. ನೀವು ಹೇಳಬಹುದು. ಇದ್ದ ಶಕ್ತಿ ನೀವು ಏನು ಮಾಡ್ತಾ ಇದ್ದೀರಿ ಅನ್ನೋ ಪ್ರಶ್ನೆ ಬರುತ್ತೆ. ಎಷ್ಟು ಉತ್ಪಾದನೆ ರೇಟಿಂಗಿಂದ ಜನರೇಟರ್ ಸ್ಥಾಪನೆ ಮಾಡಿದ್ದೀರಿ? ಎಷ್ಟು ದಿವಸ ನಡೀತಾ ಇದೆ? ಅರ್ಧ ಸಹ ಯಾಕೆ ನಡೆಯೋದಿಲ್ಲ? ಏನೇನು ಆಗಿದೆ, ಏನು ಬೇಕು ಅನ್ನಬೇಕಾದರೆ ಮಾಡಿದ್ದು ಯಾಕೆ ಹಾಳಾಯ್ತು? ಇದನ್ನ ಕೇಳೋ ಬುದ್ಧಿ ಬೇಕು. ಯಾಕೇಂದ್ರೆ ನನ್ನ ಹತ್ತು ಜನರ ದುಡ್ಡು ತಗೊಂಡು ಎಕ್ಸ್‌ಪರಿಮೆಂಟ್ ಮಾಡ್ತೀರಿ. ಹನ್ನೆರಡು ಜನರೇಟರ್ ಇದೆ ಆರು ಕೆಲಸಾನೇ ಮಾಡಿಲ್ಲ. ರೇಟಿಂಗ್ ಇಂತಿಷ್ಟು ಕೊಟ್ಟಿದ್ದಾರೆ, ಅದರ ಕಾಲಂಶ ರೇಟಿಂಗ ಆಗೋದಿಲ್ಲ. ಅದನ್ನ ಮೊದಲು ಸರಿ ಮಾಡ್ಕೊಳ್ಳಿ. ಇನ್ನೂ ಮಾಡ್ತಾ ಹೋಗ್ತೇವೆ... ಯಾಕೇಂದ್ರೆ ನನ್ನ ಕಣ್ಣೆದುರು ಮಾಡಿದ್ರೆ ತಿನ್ಲಿಕ್ಕೆ ಸುಖ ಸಿಗ್ತದೆ. ಇಲ್ಲದಿದ್ರೆ ತಿನ್ನಲಿಕ್ಕೆ ಏನೂ ಬರೋದಿಲ್ಲ... ಇದು ಒಂದು ಕಾರಣ. ಇನ್ನು ಎರಡನೆಯದು ಬಾಕಿಯವರು ಏನು ಮಾಡಿದಾರೇಂತ ನೋಡಿದ್ದೇ ಇಲ್ಲ. ಇದಕ್ಕೆ ಕಾರಣ ಏನಾಗ್ತದೆ ಅಂದ್ರೆ ನೀವು ಆರಿಸತಕ್ಕಂತವರು, ನಿಮ್ಮ ಪ್ರತಿನಿಧಿಗಳು ಓಟಿನ ಬೆಂಬಲದಿಂದ ಬಂದ ಬುದ್ಧಿವಂತರು. ಗೊತ್ತಾಯ್ತೋ? ಇವತ್ತಿನ ರಾಜ್ಯದಲ್ಲಿ ಆಳಬೇಕಾದರೆ ನೂರು ವಿಷಯಗಳ ಜ್ಞಾನ ಬೇಕಾಗ್ತದೆ. ಯಾವುದೂ ಇಲ್ಲ... ಓಟಿನ ಬಲದಿಂದ ಆಳಿಕೊಂಡು, ಈ ನೂರು ವಿಷಯ ಕೊಡೋರ್ನ ಕ್ರಯಕ್ಕೆ ತಗೊಂಡು... ನೀವು ದುಡ್ಡು ಕೊಟ್ಟ ಹಾಗೆ ನಿಮಗೆ ಉಪದೇಶ ಕೊಡ್ತಾರೆ ಅವರು... ಪ್ರೀವಿಯಸ್ ಎಕ್ಸ್‌ಪಿರಿಯನ್ಸ್ ಎಲ್ಲಿದೆ... ಯಾಕೆ ಬ್ಲಂಡರ್ ಆಯ್ತು ಅಂತ ಕೇಳಿದ್ದೀರೋ?

ನಾ : ಹಾಗಾದ್ರೆ ಇವೊತ್ತು ಅಣುಶಕ್ತಿ ಸ್ಥಾವರಗಳು ಅಗತ್ಯಗಳನ್ನಾಧರಿಸಿ ಆಗಿಲ್ಲಾ ಅನ್ನೋದು ನಿಮ್ಮ...

ಕಾ : ಯಾರದ್ದು?... ನೋಡಿ ಅದರಷ್ಟು ಅಪಾಯ ಇನ್ನು ಯಾವುದೂ ಇಲ್ಲ. ಯಾಕೇಂದ್ರೆ ಮಿಲಿಯಗಟ್ಟಲೆ ವರ್ಷ ಅದರ ಹಾನಿ ನಾಟುತ್ತೆ. ಬಾಕಿ ಕಟ್ಟಿಗೆ ಸುಟ್ಟೆವು ಬಿಟ್ಟೆವು... ಅಲ್ಲಿಗೆ ಮುಗೀತು... ಬಾಕಿ ಉಳಿದದ್ದು ಒಂದೆರಡು ವರ್ಷಕ್ಕೆ ಹಾನಿ ಆಯ್ತು... ಅಣುಶಕ್ತಿ ಆ ರೀತಿ ನೀವು ಹೇಳಿದ ಹಾಗೆ ಕೇಳುವ ವಸ್ತು ಅಲ್ಲ... ಅದರ ವೇಸ್ಟನ್ನ ಡಿಸ್ಪೋಸ್ ಮಾಡಲಿಕ್ಕೆ ಬರೋದಿಲ್ಲ. ಎರಡನೆಯದು ಭೂಮೀನ ಸುತ್ತಾಕ ತಕ್ಕಂತಹ ಯಾವುದೇ ವಸ್ತುವಿನ ಮೇಲೆ ನಿಮ್ಮ ಅಧಿಕ ಪ್ರಸಂಗ ನಿಲ್ಲಿಸಬೇಕು. ನಿಮಗೆ ಬೇಕಾದ್ದು ನೀವು ಮಾಡಬಹುದು ಸರೇ... ಆದ್ರೆ ಭೂಮಿ ಸುತ್ತು ಬರ್ತಾ ಇದೆ ವಿಷಗಾಳಿ ಇನ್ನೊಂದು ದೇಶದ ಮೇಲೆ... ಹಿ ಕ್ಯಾನ್ ಕ್ಲೇಮ್ ಡ್ಯಾಮೇಜಿಸ್! ಚೆರ್ನೋಬೈಲ್ ಆಯ್ತು. ಪೋಲಂಡಿನಲ್ಲಿ ಬೆಳೆ ಹಾಳಾಯ್ತು... ಒಂದು ತಿಂಗಳು ಉಪವಾಸ ಬೀಳಬೇಕಾಯ್ತು... ಅನ್ನ ಹಾಲು ಎಲ್ಲ ಬಿಡಬೇಕಾಯ್ತು...

ನಾ : ಸರ್ ಪರಿಸರ ನಾಶದ ಬಗ್ಗೆ ಏನು ಆಂದೋಲನ ನಡೀತಾ ಇದೆ ಇವೊತ್ತು ಈ ದೇಶದಲ್ಲಿ ಅದು ಒಂದು ಬಿಕ್ಕಟ್ಟಿನ ಪರಿಸ್ಥಿತಿಗೆ ಬಂದು ಮುಟ್ಟಿದೇಂತ ಹೇಳಬಹುದಾ? ಇದೆಲ್ಲದಕ್ಕೆ ಬದಲಾಗಿ ಮನುಷ್ಯನ ಜೀವನಶೈಲಿಯನ್ನ ಬದಲಾಯಿಸುವ ದಿಕ್ಕಿನಲ್ಲಿ ಆಂದೋಲನ ಮಾಡಿದರೆ ಹೆಚ್ಚು ಅರ್ಥಪೂರ್ಣ ಅನ್ನಿಸೋದಿಲ್ವ?...

ಕಾ : ಸ್ವಾಮಿ ತಾವು ದಿಲ್ಲಿಗೆ ಹೋಗಿ ಉಪದೇಶ ಕೊಡೋದು ಒಳ್ಳೇದು ಸ್ವಾಮಿ. ದಿಲ್ಲಿಗೆ...! ಯಾರಿಗೆ ಹೇಳ್ಬೇಕೋ ಅವರಿಗೆ ಹೇಳ್ಬೇಕು...

ನಾ : ಜನರಿಗೆ ಹೇಳಬೇಕು... ನಮ್ಮ ಅಗತ್ಯಗಳನ್ನ ಕಡಿಮೆ ಮಾಡಿಕೊಳ್ಳೋ ಬಗ್ಗೆ...

ಕಾ : ಆಗ ಜನರಿಗೆ ನಾನು ತಿಳಿದಿದ್ದನ್ನು ಹೇಳ್ತೇನೆ. ನೀವು ತಿಳಿದಿದ್ದನ್ನ ಹೇಳಿ. ಈ ಹೇಳೋ ಕೆಲಸ ಇದೆಯಲ್ಲಾ, ಹಾಗೆ ಹೇಳುವಾಗ ಮಾತ್ರ ನಮ್ಮನ್ನ ಕೇಳ್ಕೊಂಡು, ನೀವು ಬರೆದದ್ದನ್ನ ಗೀಚಿದ್ದನ್ನ ಓದ್ಕೊಂಡು ಜನ ಬದುಕಿಲ್ಲ - ಅದನ್ನೂ ನೆನಪಿಟ್ಕೊಳ್ಳಿ. ಅಲ್ಲಿ ನಾನೂ ಸಮ ನೀವೂ ಸಮ... ಏನೂ ಗೊತ್ತಿಲ್ಲ ಅದರ ತಲೆಬುಡ ಗೊತ್ತಿಲ್ಲ... ಅಣುಶಕ್ತಿ ಏನೂಂತ ಗೊತ್ತಿಲ್ಲ. ಅವರಿಗೆ ನಾವು ಹೇಳ್ಬೇಕಾಗಿದೆ. ಅದು ಹೀಗೆ... ಅದರ ಅಪಾಯ ಹೀಗಾಗ್ತದೆ. ಕ್ಯಾನ್ಸರ್... ಕ್ಯಾನ್ಸರ್ ರೋಗ ನಾಳೆಗೆ ಬರುತ್ತೆ... ಬರ್ತಾ ಇದೆ... ರಾಜಪುತಾನದಲ್ಲಿ ವಿಕೃತ ಶಿಶುಗಳು ಹುಟ್ತಾ ಇವೆ... ಆ ಹೆಣಗಳ ಫೋಟೋ ಎಲ್ಲ ನಿಮಗೆ ತೆಗೆದು ತೋರಿಸಿಕೊಡ ಬೇಕಾಗುತ್ತದೆ. ಆವಾಗ ಓ!... ಹೀಗಾಗುತ್ತ ಅಂತ ಅವನಿಗೆ ಯೋಚನೆ ಬರುತ್ತೆ. ಏಹೇ!... ಅದೆಲ್ಲ ಸುಳ್ಳು, ನಾವು ಮುಂದೆ ಹೋಗಬಾರದು ಅಂತ ಈ ಹೊರಗಿನವರು ಮಾಡಿದ್ದಾರೆ... ಅದಕ್ಕೋಸ್ಕರ ನಾವು ಮುಂದೆ ಹೋಗುವವರೇ... ಆವಾಗ ಈ ಮುಂದೆ ಹೋಗುವವನು ಏನು ಓದ್ಕೊಂಡಿದ್ದಾನೆ ಅವ್ನಿಗೆ ಏನು ಗೊತ್ತಿದೇಂತ ಕೇಳಿದ್ದೀರಾ?

ನಾ : ಆದರೆ ಸಾಮಾನ್ಯ ಮನುಷ್ಯನಿಗೆ ಈ ಅಪಾಯದ ಸೂಚನೆಗಳು ತಾಗದೇ ಇರೋದಕ್ಕೆ ಅವನ ಆಸೆಗಳು ತೀವ್ರ ಆಗ್ತಿರೋದು ಇರಬಹುದಲ್ವಾ ಸಾರ್? ಎಲ್ಲರಿಗೂ

ಎಲ್ಲವೂ ಬೇಕು... ವಿದ್ಯುಚ್ಛಕ್ತಿಯಿಂದ ಏನೇನು ಉತ್ಪಾದನೆ ಆಗ್ತಾ ಇದೆ-ರೆಫ್ರಿಜರೇಟರ್ ಬೇಕು, ಏರ್ ಕಂಡೀಶನರ್ ಬೇಕು.

ಕಾ : ಸ್ವಾಮೀ ಅಸಾಮಾನ್ಯ ಸಾಮಾನ್ಯ ಎಲ್ಲರಿಗೂ ಚೆನ್ನಾಗಿ ಬದುಕುವ ಆಸೆ ಇದೆ...

ನಾ : ಹಾಗಲ್ಲ ಸರ್...

ಕಾ : ನಾವು ನೀವು ನಮ್ಮಿಬ್ಬರಿಗೂ ಬೇಕು ... ಅವನನ್ನು ತಗೆದು ಬೇರೆ ಹಾಕ್ಬೇಡಿ... ನಾನೂ ಸಾಮಾನ್ಯ ಮನುಷ್ಯನೇ...

ನಾ : ನಾನೂ ಸಾಮಾನ್ಯ ಮನುಷ್ಯನೇ ... ಅಂದ್ರೆ ಪ್ರಶ್ನೆ ಅದಲ್ಲ ಸರ್... ನಿಮಗೆ ರೆಫ್ರಿಜರೇಟರ್ ಬೇಕು... ಏರ್ ಕಂಡೀಶನರ್ ಬೇಕು ಮತ್ತೊಂದು ಎಲ್ಲವೂ ಬೇಕು; ಆದ್ರೆ ಕೈಗಾ ಮಾತ್ರ ಬೇಡ ಅಂದ್ರೆ ಹೇಗೆ ಸಾರ್?

ಕಾ : (ಖಾರವಾಗಿ) ಆಂ... ಆಗ ತಪರಾಕಿ ತಿನ್ನೋದು... ಹೇಳಿ ಸ್ವಾಮೀ ತಪರಾಕಿ ತಿನ್ನೋದು ಬ್ಯಾಡ ಅಂದ್ರೆ ಏನು ಸಾಧ್ಯ?... ಕೈಗಾ ಬ್ಯಾಡಾಂತ ಅಂತಾರೆ ಯಾರು? ಚೆರ್ನೋಬೈಲ್ ಮಾಡಿದವರೇ ಬ್ಯಾಡಂತಿದಾರೆ. ಇಡೀ ಈಸ್ಟ್ ಬರ್ಲಿನ್‌ಲ್ಲಿ ಆದ ಡ್ಯಾಮೇಜ್ ನೋಡಿದವರು ಬ್ಯಾಡಾಂತಿದಾರೆ. ಓದಿದ್ದೀರಾ ತಾವು?

ನಾ : ಗೊತ್ತಿದೆ ಸಾರ್.

ಕಾ : ಗೊತ್ತಿದ್ದೂ ಈ ಮೂರ್ಖತನ ಮಾಡೋದು ತಪ್ಪು... (ನಗು)

ನಾ : ಪ್ರಶ್ನೆ ಅದಲ್ಲ ಸರ್ (ನಗು)... ಅದಿರಲಿ ಸರ್, ಈಗ ವೈಚಾರಿಕತೆಯ ಮೂಲ ಪ್ರಶ್ನೆಗೆ ಬಂದ್ರೆ ನಿಮ್ಮ ಅನೇಕ ಕಾದಂಬರಿಗಳಲ್ಲಿ ಈ ವೈಚಾರಿಕ ಅಂತ ಹೇಳಲಾಗದ ನಂಬಿಕೆಗಳನ್ನ ಇಟ್ಟುಕೊಂಡಿರುವ ಮುದುಕ ಮುದುಕಿಯರು ಆದರ್ಶ ಪಾತ್ರಗಳಾಗಿ ಬರ್ತಾರೆ...

ಕಾ : ಸ್ವಾಮಿ ನಾನು ಆತ್ಮಚರಿತ್ರೆ ಬೇರೆ ಬರೆದಿದ್ದೇನೆ. ಗೊತ್ತಾಯ್ತೋ ಇಲ್ವೋ? ಸಾಹಿತ್ಯ ಆತ್ಮಚರಿತ್ರೆ ಅಲ್ಲ. ನನ್ನ ಅನುಭವ... ನನ್ನ ಅನುಭವ ನನಗೆ ಮಾತ್ರ ಸೀಮಿತ ಅಲ್ಲ. ನನ್ನ ಜನಕ್ಕೆ ಸೀಮಿತ. ಆದ್ದರಿಂದ ನನ್ನ ಜನವನ್ನ ತಿಳಿದಾಗ ಅವರ ಸಂಕಟ ಏನೂಂತ ಗೊತ್ತಾಗುತ್ತೆ. ಅವರ ಸುಖ ದುಃಖ ಗೊತ್ತಾಗುತ್ತೆ. ಆದದ್ದರಿಂದ ನನ್ನ ಜನಕ್ಕೆ ಏನು ನಂಬಿಕೆ ಅನ್ನೋದು ನನ್ನ ಕನ್ಸರ್ನ್. ಅವರ ಮನೇಲಿ ನಾನು ಹುಟ್ಟಿದೇನೆ, ಬದುಕಿದ್ದೇನೆ... ಆದ್ರಿಂದ ನನ್ನ ನಂಬಿಕೆ ಪ್ರಚಾರ ಮಾಡ್ಲಿಕ್ಕೆ ಪುಸ್ತಕವೇ ಬೇರೆ ಬರೆದಿದ್ದೇನೆ. ಕಾದಂಬರಿ ಬೇರೆ, ನನ್ನ ಯಾವ್ದು... 'ಬಾಳ್ವೆಯೇ ಬೆಳಕು' ಬೇರೆ.

ನಾ : ಕಾದಂಬರಿ ಬರೆಯೋ ಉದ್ದೇಶವಾದ್ರೂ ಏನು ಸಾರ್ ಹಾಗಾದ್ರೆ?

ಕಾ : ನನ್ನ ಅನುಭವವನ್ನು ತೋಡಿಕೊಳ್ಳೋದು... ನಿಮಗೆ ಇಷ್ಟ ಇದ್ರೆ ನೀವು ಓದೋದು... ನೀವು ನಾಲ್ಕಾಣೆ ಕೊಟ್ರೆ ಅದರಿಂದ ಬದುಕಲಿಕ್ಕೆ ಬಂದ್ರೆ ಬದುಕೋದು... ಇಲ್ದಿದ್ರೆ ಬರೆಯೋದು ನಿಲ್ಸೋದು.

ನಾ : ಆದರೆ ನಿಮ್ಮ ಕಾದಂಬರಿಗಳ ನಾಯಕರೆಲ್ಲ ಈ ಮುದುಕ ಮುದುಕಿಯರ ಪ್ರಾಚೀನ ನಂಬಿಕೆಗಳ ಜೊತೆ ಹೊಂದಾಣಿಕೆ ಮಾಡ್ಕೋತಾ ಹೋಗ್ತಾರೆ... ಮತ್ತೆ ಅದರಲ್ಲೆ

ಸಾರ್ಥಕತೆ ಕಂಡ್ಕೊಳ್ಳೋ ಹಾಗೆ ಕಾಣ್ತಾರೆ...

ಕಾ : ಅವರು ಹೊಂದಾಣಿಕೆ ಮಾಡ್ಕೊಂಡು ಹೋಗ್ತಾರೋ ಇಲ್ವೋ.... ಹ್ಞಾಂ...? ಹೊಂದಾಣಿಕೆ ಮಾಡಿಕೊಳ್ಳದವರೂ ಇದ್ದಾರೆ...

ನಾ : ಹೌದು ಇದ್ದಾರೆ ... ಆದ್ರೆ...

ಕಾ : ಯಾಕೇಂದ್ರೆ ಓದತಕ್ಕಂತಹವ್ರು ಆರಿಸಿಕೊಂಡು ನಾಲ್ಕು ಪುಸ್ತಕ ಓದ್ಕೊಂಡು ಬಾಕಿ ಪುಸ್ತಕ ನೋಡದೆ ಯಾರೋ ಒಬ್ಬರು ಹೇಳಿದ ಅಭಿಪ್ರಾಯವನ್ನ ಹಾರಿಸಬೇಡಿ...

ನಾ : ಇಲ್ಲ ಇಲ್ಲ... ಹಾಗಲ್ಲ ಸರ್... ನಾಯಕರು...

ಕಾ : ಆದದ್ದರಿಂದ ಏನೂಂತ ಹೇಳಿದರೆ, ನಾನಿರುವ ಪ್ರಪಂಚದಲ್ಲಿ ಏನು ಪ್ರಾಬ್ಲೆಂ... ನನ್ನ ಜನರ ಪ್ರಾಬ್ಲೆಂ ಏನು? ನಾನು ವ್ಯಾಲ್ಯು ಕೊಡೋದು ನೀವು ಯಾವ್ದನ್ನ ಪ್ರಾಮಾಣಿಕವಾಗಿ ನಂಬ್ತೀರೋ-ನನ್ನದಲ್ಲ-ನಿಮ್ಮ ನಂಬಿಕೆಯಂತೆ ಪ್ರಾಮಾಣಿಕವಾಗಿ ನಡೆಯಿರಿ ಅಂತ ಹೇಳುವವ ನಾನು. ನನ್ನ ನಂಬಿಕೆಯನ್ನೇ ನೀವು ಮಾಡಬೇಕಾಗಿದ್ದಿಲ್ಲ. ಯಾಕೇಂದ್ರೆ ಅದಕ್ಕೆ ಆ ತಿಳುವಳಿಕೆ ಬರಬೇಕು ಆ ಪ್ರಾಮಾಣಿಕತೆ ನಡೀಲಿಕ್ಕೆ ಬರಬೇಕು. ಸತ್ಯವನ್ನೇ ಹೇಳಿ ಅಂತ ಗಾಂಧೀಜಿ ಜಪ ಮಾಡೋದು ಅಲ್ಲ; ಅದನ್ನ ನಿಜವಾಗಿ ನಂಬೋದಾದ್ರೆ ಸತ್ಯ ಹೇಳೋ ಚಟ ಕಲೀರೀಂತ ಹೇಳೋದು. ಮೂರು ವರ್ಷದ ಮಗು... ಅದಕ್ಕೆ ಸಾಕ್ಷಾತ್ಕಾರವಾಗಿ ಪಾರಮ್ಯವನ್ನು ಮುಟ್ಟಿತು... ಕೃಷ್ಣಂದೇ ಅವತಾರಾಂತ ಆ ಮಗು ಹೇಳಿತು... ಹ್ಞಾಂ? ನನಗೆ ಅನುಭವ ಬರಬೇಕಾದ್ರೆ ದಿನ ಹೋಗ್ಬೇಕು... ಜೀವನದ ಕಷ್ಟ ಸುಖ ಅನುಭವಿಸಬೇಕು... ಹಾಗೆ ಪಕ್ವವಾದ ಮನಸ್ಸು ಇದ್ದ ಮಟ್ಟಿಗೆ ಆ ಬದುಕು ಪಕ್ವವಾಗಬೇಕು... ಹೀಗಾಗಿ ಆ ಚೈಲ್ಡ್ ಪ್ರಾಡಿಗೀಸ್‌ನ ಆಕರ್ಷಕ ಪ್ರಧಾನ ಪಾತ್ರ ಮಾಡದೆ ನಾಲ್ಕು ದಿವಸ ಬದುಕಲಿಕ್ಕೆ ಬಿಟ್ಟು ಆವಾಗ ಅಭಿಪ್ರಾಯ ಏನೂಂತ ಹೇಳ್ತಾ ಹೋಗ್ತೇನೆ... ಹ್ಞಾಂ?

ನಾ : ಸರ್, ನಿಮ್ಮ ಬಗ್ಗೆ ಒಂದು ಮಾತಿದೆ... ಇವರು ಕಾರಂತರಲ್ಲ-ಖಾರಂತರು ಅಂತ. ನಿಮ್ಮ ಈ ಸಿಟ್ಟು ತುಂಬಾ ಜನಪ್ರಿಯವಾದಂತಹ ಸಿಟ್ಟು ಕರ್ನಾಟಕದಲ್ಲಿ. ಇದು ನಿಮ್ಮ ಹುಟ್ಟು ಗುಣವೋ ಅಥವಾ ನೀವು ಬದುಕನ್ನು ಎದುರಿಸಿದಂತಹ ರೀತಿಯಲ್ಲಿ ಬಂದಂತಹ...

ಕಾ : ಅದು... ಸಿಟ್ಟು ಯಾವುದು ? ತಾಳ್ಮೆಗೇಡಿತನ ಯಾವುದು? ಯಾವುದನ್ನ ಸಹಿಸಲಿಕ್ಕೆ ಬರೋದಿಲ್ಲ... ಹ್ಞಾಂ?... ಮನುಷ್ಯ ಉದ್ಧಾರವಾಗಬೇಕಾದ್ರೆ ಏನು ಮಾಡಬೇಕು? ಬಾವಿಗೆ ಹಾರಬೇಕು... ಯಾಕೇಂದ್ರೆ ನೀವು ಕೇಳೋ ಪ್ರಶ್ನೆ ಅಷ್ಟು ಸುಲಭದ್ದೂಂತ ತಕ್ಕೊಂಡು ಅದಕ್ಕ ಮೂರು ದಿವಸ ಉಪನ್ಯಾಸ ಮಾಡಬೇಕಾಗಿ ಬಂದಾಗ ನೀವು ಸೀರಿಯಸ್ ಇದ್ದೀರೋ ಇಲ್ಲವೋ ಅನ್ನೋ ಪ್ರಶ್ನೆ ನಮಗೆ ಬರ್ತದೆ. ಆಗ ಸ್ವಲ್ಪ ಇನ್ನೂ ಸ್ವಲ್ಪ ಹೆಚ್ಚು ಓದ್ಕೊಂಡಿದ್ದರೆ ಆಗಬಹುದಲ್ಲಾ ಜನಸಂಪರ್ಕದಿಂದ ಲೋಕೋದ್ಧಾರ ಮಾಡೋ ಆಕಾಶವಾಣಿ ಜನಗಳು... (ನಗು)

ನಾ : (ನಗು)... ನಿಮ್ಮ ಹುಟ್ಟುಗುಣವೋ ಅಥವಾ ಬದುಕನ್ನ ಎದುಸಿರೋ ರೀತಿಯಿಂದ

ಬಂದದ್ದೋ...

ಕಾ : ಯಾವುದೂ ಹುಟ್ಟುಗುಣ ಅಲ್ಲ. ಹುಟ್ಟುಗುಣ ಸೊನ್ನೆ ಇದ್ದದ್ದು ಒಂದೊಂದೇ ಕಲ್ತುಕೊಂಡು ಹೋಗ್ತೇವೆ. ಕೆಲವುಸಲ ತಾಳ್ಮೆ ಕಡಿಮೆ ಇರ್ತದೆ... ಎಲ್ಲರೊಟ್ಟಿಗೆ ಬದುಕ ಬೇಕಾಗುತ್ತಲ್ಲ? ಇಂಪೇಶನ್ಸ್ ಇರ್ತದೆ. ಯಾಕೇಂದ್ರೆ ವರ್ತಮಾನ ಪತ್ರಿಕೆಯವರು ಆಕಾಶವಾಣಿ ಯವರೇ ಇಂತಿಂತಾ ಕೆಲವು ಪ್ರಶ್ನೆ ಕೇಳುವಾಗ ಸಿಟ್ಟು ಬರಬೇಕಾಗುತ್ತೆ (ನಗು).

ನಾ : (ನಗುತ್ತಲೇ) ಇನ್ನು ಎಷ್ಟು ವರ್ಷ ಬದುಕಬೇಕೂಂತ ಆಸೆ ಇದೆ ಸರ್?

ಕಾ : ಯಾವ್ದು...? ಈಗ ಟಿಕೆಟ್ ಕೊಟ್ರೆ ಹೊರಡ್ತೇನೆ.

ನಾ : ಆಸೆಯಂತೂ ಇರುತ್ತಲ್ಲ ಸರ್?

ಕಾ : ಎಲ್ಲೀವರೆಗೆ ನಿಮಗೆ ಬದುಕಿದ ದಾಖಲೆ ತೋರಿಸಲಿಕ್ಕೆ ಬರ್ತದೋ... ನಿದ್ದೆ ಮಾಡೋದಾದ್ರೆ...ಹರಟೆ ಹೊಡೆಯೋದಾದ್ರೆ ಅದರಲ್ಲೇ ಹೋಗಬಹುದಲ್ಲ?... ಎಲ್ಲೀವರೆಗೆ ನಾನು ಜೀವಂತವಾಗಿ ಇದ್ದೇನಂತ ಅನ್ನಿಸೋ ಫ್ಯಾಕಲ್ಟಿ ಇರ್ತದೋ ಅಲ್ಲಿಯವರೆಗೆ ಬದುಕ ಬೇಕಾದೀತು. ಅದು ಪರಾಧೀನವಾದ ಕಾಲದಲ್ಲಿ... ನಮಗೇ ಸುಖ ಆದಷ್ಟು ಬೇಗ ಹೊರಟು ಹೋದರೆ... ಮತ್ತು ನಮ್ಮನ್ನು ನೋಡಿಕೊಳ್ಳೋವರಿಗೆ ಇನ್ನೂ ಸುಖ... ಆದ್ದರಿಂದ ಆ ಒಂದು ವಿಷಯವಾಗಿ ನಮ್ಮ ಕೈಯಲ್ಲಿ ಇಲ್ಲವೋ ಅದರ ಬಗ್ಗೆ ಯಾವ ಪುರಾಣ ಉಪನ್ಯಾಸ... ಯಾರು ಎಲ್ಲಿ ಸಾಯ್ತಾರೆ, ಯಾವಾಗ ಸಾಯ್ತಾರೆ ಅನ್ನೋ ಈ ಚೊಯಿಸ್ ಇಲ್ಲದಿದ್ದ ವಿಷಯದಲ್ಲಿ ಎಷ್ಟೂ ಮಾತಾಡ್ಕೊಳ್ಳಬಹುದು, ಇದ್ರಿಂದ ಏನೂ ಪ್ರಯೋಜನ ಇಲ್ಲ...

❑

(ಬರಹಕ್ಕೆ : ಎಚ್.ಎಂ. ಶಿವಾನಂದ)

ಜಿ.ಎಸ್. ಶಿವರುದ್ರಪ್ಪನವರೊಂದಿಗೆ ಸಂದರ್ಶನ

ಪಂಪ ಪ್ರಶಸ್ತಿ ಸಂದ ಸಂದರ್ಭದಲ್ಲಿ ಜಿ.ಎಸ್.ಎಸ್., ಭದ್ರಾವತಿ ಆಕಾಶವಾಣಿಗಾಗಿ ನೀಡಿದ ಸಂದರ್ಶನ, ಫೆಬ್ರವರಿ ೧೯೯೯ :

ಡಿ.ಎಸ್.ಎನ್ : ಕನ್ನಡ ಸಾಹಿತ್ಯಲೋಕದಲ್ಲಿ ಜಿಎಸ್ಎಸ್ ಎಂದೇ ಹೆಸರುವಾಸಿಯಾದಂತಹ ಡಾ. ಜಿ.ಎಸ್. ಶಿವರುದ್ರಪ್ಪ ಅವರನ್ನು ನಮ್ಮ ಕೇಳುಗರಿಗೆ ವಿಶೇಷವಾಗಿ ಪರಿಚಯ ಮಾಡಿಕೊಡುವ ಅವಶ್ಯಕತೆ ಇಲ್ಲ ಅಂತ ಕಾಣುತ್ತೆ. 'ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ, ಹಾಡುವುದು ಅನಿವಾರ್ಯ ಕರ್ಮ ಎನಗೆ' ಎಂದೇ ಕಳೆದ 50 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಕನ್ನಡ ಕಾವ್ಯ ರಸಿಕರ ಮುಂದೆ ಎದೆ ತುಂಬಿ ಹಾಡಿದ ಕವಿ ಶಿವರುದ್ರಪ್ಪ ಅವರು, ಇವರು ಕವಿ ಮಾತ್ರ ಅಲ್ಲ, ಕಾವ್ಯಮೀಮಾಂಸೆ ಕ್ಷೇತ್ರದಲ್ಲಿ ಕೂಡ ಕೆಲಸ ಮಾಡಿ ವಿದ್ವಾಂಸರು ಅಂತ ಹೆಸರು ಪಡೆದವರು. ಇದರ ಜತೆಗೆ ಕನ್ನಡ ಪ್ರಾಧ್ಯಾಪಕರಾಗಿ ಹಲವಾರು ಪ್ರತಿಭಾವಂತ ಶಿಷ್ಯರನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟವರು. ಇಂತಹ ಜಿಎಸ್.ಎಸ್ ಅವರು ಇವತ್ತು ನಮ್ಮೊಡನಿದ್ದಾರೆ. ಅವರೊಡನೆ ಇವತ್ತಿನ ಸಾಹಿತ್ಯ ಮತ್ತು ಸಾಹಿತ್ಯ ವಾತಾವರಣದ ಬಗ್ಗೆ ಲೋಕಾಭಿರಾಮವಾಗಿ ಮಾತಾಡುವ ಆಶಯ ನಮ್ಮದು. ನಮಸ್ಕಾರ ಸರ್.

ಜಿಎಸ್ಎಸ್ : ನಮಸ್ಕಾರ

ಡಿಎಸ್ಎನ್ : ಮೊದಲಿಗೆ, ಇತ್ತೀಚೆಗೆ ತಮಗೆ ಪಂಪ ಪ್ರಶಸ್ತಿ ಬಂದಿದೆ ಸರ್...

ಜಿಎಸ್ಎಸ್ : ಹೌದು

ಡಿಎಸ್ಎನ್ : ನಿಮಗೆ ದೊರಕಿರುವ ಅನೇಕ ಪ್ರಶಸ್ತಿಗಳ ನಡುವೆ ಇದೊಂದು ದೊಡ್ಡ ಪ್ರಶಸ್ತಿನೇ. ಕರ್ನಾಟಕ ಸರ್ಕಾರ ಕೊಡತಕ್ಕಂತಹ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ...

ಜಿಎಸ್ಎಸ್ : ಖಂಡಿತವಾಗಿಯೂ

ಡಿಎಸ್ಎನ್ : ಈ ಪಂಪ ಪ್ರಶಸ್ತಿ ನಿಮಗೆ ನಿಮ್ಮ ಸಾಹಿತ್ಯ ಜೀವನದಲ್ಲಿ ಎಷ್ಟು ಮುಖ್ಯ ಅನಿಸುತ್ತೆ ಸರ್ ಮತ್ತು ಯಾಕೆ?

ಜಿಎಸ್ಎಸ್ : ಪ್ರಶಸ್ತಿಗಳು ಬಹಳ ಮುಖ್ಯ ಅಂತ ಯಾವತ್ತೂ ಅನಿಸಿಲ್ಲ. ಯಾಕೆಂದರೆ, ಯಾವತ್ತೂ ನಾನು ಪ್ರಶಸ್ತಿಗಳನ್ನು ನಿರೀಕ್ಷಿಸಿದವನೇ ಅಲ್ಲ. ಬಹುಶಃ ಪ್ರಶಸ್ತಿಗಳು ಬಂದಿದ್ದರಿಂದ

ಸಂತೋಷವಾಗಿಲ್ಲ ಅಂತ ಹೇಳಲಾರೆ. ಸಂತೋಷವಾಗಿದೆ. ರಾಷ್ಟ್ರೀಯವಾದ ಪ್ರಶಸ್ತಿ-ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಖಾಸಗಿಯಾದ ಭೂಸನೂರುಮಠ ಪ್ರಶಸ್ತಿ, ಶಿವಮೊಗ್ಗ ಕರ್ನಾಟಕದ ಸಂಘದ ಸದಸ್ಯತ್ವ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇಂತಹವೆಲ್ಲ ಬಂದಿವೆ. ಇವುಗಳು ಸಹಜವಾಗಿಯೇ ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಕೆಲಸ ಮಾಡಿದ ಅನೇಕರಿಗೆ ಬರುವಂತಹ ಪ್ರಶಸ್ತಿಗಳೇ. ಪಂಪ ಪ್ರಶಸ್ತಿ ನೀವು ಹೇಳಿದ ಹಾಗೆ, ಒಂದು ರಾಜ್ಯದ ಅತ್ಯಂತ ಉನ್ನತ ಮಟ್ಟದ ಪ್ರಶಸ್ತಿ ಎನ್ನುವ ಕಾರಣಕ್ಕೆ ಉಳಿದ ಪ್ರಶಸ್ತಿಗಳಿಗಿಂತ ಇದು ಹೆಚ್ಚು ಪ್ರಿಯವಾದದ್ದು ಮತ್ತು ಸಂತೋಷವಾದದ್ದು ಆಗಿದೆ ಅಂತ ಹೇಳೋದಕ್ಕೆ ಸಂಕೋಚ ಪಡಬೇಕಾಗಿಲ್ಲ ನಾನೇನೂ....

ಡಿಎಸ್‌ಎನ್ : ಪಂಪನ ಹೆಸರಿನಲ್ಲಿ ಇರೋದ್ರಿಂದ ಏನಾದರೂ ವಿಶೇಷವಾದ ಒಲವು...

ಜಿಎಸ್‌ಎಸ್ : ಬಹಳ ಬಹಳ ಬಹಳ ಇಷ್ಟವಾದದ್ದು. ಯಾಕೆಂದರೆ ಕನ್ನಡ ಸಾಹಿತ್ಯದ ಸೀಮಾಪುರುಷರಿಬ್ಬರು, ಪಂಪ ಮತ್ತು ಕುವೆಂಪು. ಪಂಪನಿಂದ ಕುವೆಂಪುವರೆಗೆ ಅನ್ನುವ ಸಾಹಿತ್ಯದ ಒಂದು ಮಾತಿದೆಯಲ್ಲಾ ಅದು ಪ್ರಾಸಂಗಿಕ ಅಂತ ನನಗನಿಸ್ತಲೇ ಇಲ್ಲ. ಇವೆರಡು ಹೆಸರುಗಳು ಎರಡು ಸಾಂಸ್ಕೃತಿಕ ಸೀಮಾರೇಖೆಗಳನ್ನು ಸೂಚಿಸ್ತವೆ ಮತ್ತು ಪಂಪನಿಗೂ ಕುವೆಂಪು ಅವರಿಗೂ ಅನೇಕ ಸಾಮ್ಯಗಳಿವೆ. ಪಂಪ ''ಮನುಷ್ಯ ಜಾತಿ ತಾನೊಂದು ವಲಂ'' ಅಂತ ಹೇಳಿದಾನೆ. ಕುವೆಂಪು ''ವಿಶ್ವ ಮಾನವ'' ಕಲ್ಪನೆಯನ್ನು ಅದರ ಆಧಾರದ ಮೇಲೆ ಕಟ್ತಾರೆ. ಪಂಪ ರಾಜತ್ವವನ್ನು ಕುರಿತು ಹೇಗೆ ಒಂದು ರೀತಿಯಾದ ಪ್ರತಿಭಟನೆ ಸೂಚಿಸಿದನೋ ಹಾಗೆ ಕುವೆಂಪು ರಾಜತ್ವದ ಬಗ್ಗೆ ಪ್ರತಿಭಟನೆ ಸೂಚಿಸ್ತಾರೆ. ಪಂಪ ಎಷ್ಟರ ಮಟ್ಟಿಗೆ ನಿಸರ್ಗ ಪ್ರೀತಿಯ ಬಗ್ಗೆ ಅದಮ್ಯವಾದ ಹಂಬಲವನ್ನುಳ್ಳವನಾಗಿದ್ದನೋ ಕುವೆಂಪು ಕೂಡಾ ಅಷ್ಟೇ ಗಾಢವಾದ ನಿಸರ್ಗ ಪ್ರೀತಿ ಉಳ್ಳವರು. ಪಂಪ ಕನ್ನಡದ ಮೊಟ್ಟಮೊದಲ ಕಥಾದ್ವೈತ ಪ್ರತಿಭೆಯಾದರೆ ಕುವೆಂಪು ಬಹುಶಃ ಕೊಟ್ಟ ಕೊನೆಯ ಕಥನದ ಮಹತ್ವದ ಕವಿ ಅಂತ ಹೇಳಬಹುದು.

ಡಿಎಸ್‌ಎನ್ : ಕೊಟ್ಟಕೊನೆ ಅಂತ ಹೇಳ್ತಿರಾ ಸರ್...?

ಜಿಎಸ್‌ಎಸ್ : ಸದ್ಯಕ್ಕೆ, ನಮ್ಮ ಮಟ್ಟಿಗೆ... ಈ ದೃಷ್ಟಿಯಿಂದ ಪಂಪನಿಗೂ ಕುವೆಂಪುಗೂ ಬಹಳ ಸಾಮ್ಯವಿದೆ ಮತ್ತು ಕುವೆಂಪು ಶಿಷ್ಯನಾಗಿ ಪಂಪನ ಹೆಸರಿನಲ್ಲಿ ಬರುವ ಪ್ರಶಸ್ತಿಯನ್ನು ಪಡೆದುಕೊಳ್ಳುವುದು ಮತ್ತು ಪಂಪನ ಬನವಾಸಿಯೂ ಕುವೆಂಪು ಅವರ ಕುಪ್ಪಳಿಯೂ ಒಟ್ಟಿಗೆ ಕೂಡಿರುವ ಸಹ್ಯಾದ್ರಿ ಪರಿಸರದ ಶಿಕಾರಿಪುರವು ನನ್ನೂರು ಆಗಿರುವುದರಿಂದ ಇದು ಇನ್ನೂ ಹೆಚ್ಚು ಪ್ರಿಯವಾಗಿದೆ ಎನ್ನಬಹುದು.

ಡಿಎಸ್‌ಎನ್ : ಅಂದ ಹಾಗೆ ಪ್ರಶಸ್ತಿಗಳ ಬಗ್ಗೆಯೇ ಒಂದು ಮಾತಿದೆ. ಈ ಇತ್ತೀಚಿನ ದಿನಗಳಲ್ಲಿ ಊರಿಗೊಂದು ಪ್ರಶಸ್ತಿಯಾಗಿದೆ ಅಂತ. ಅನೇಕ ಸಂಘ ಸಂಸ್ಥೆಗಳು 500 ರೂಪಾಯಿಯಿಂದ 20,000 ರೂಪಾಯಿಗಳವರೆಗೆ ಅನೇಕ ಪ್ರಶಸ್ತಿಗಳನ್ನು ಕೊಡ್ತಾ ಇದ್ದಾರೆ. ಯಾರಿಗೆ ಯಾತಕ್ಕೋಸ್ಕರ ಯಾವ ಪ್ರಶಸ್ತಿ ಕೊಡ್ತಾ ಇದ್ದಾರೆ ಅಂತ ಗೊಂದಲಾನೇ ಉಂಟಾಗಿದೆ.

ಇದರಿಂದಾಗಿ ಒಳ್ಳೆಯ ಸಾಹಿತ್ಯ ಬರೀತಿರುವವರು ಯಾರು? ಕೆಟ್ಟ ಸಾಹಿತ್ಯ ಬರೀತಿರುವವರು ಯಾರು? ಅಭಿರುಚಿ ಯಾವುದು ಉತ್ತಮವಾದದ್ದು ಅನ್ನುವುದರ ಬಗ್ಗೆ ಗೊಂದಲನೇ ಎದ್ದಿದೆ. ಇದರ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ಸಾರ್?

ಜಿಎಸ್‌ಎಸ್ : ಒಂದು ಕಾಲಕ್ಕೆ ಪ್ರಶಸ್ತಿಗಳೇ ಇರಲಿಲ್ಲ. ಮಹತ್ವದ ಕೆಲಸ ಮಾಡಿಯೂ ಪ್ರಶಸ್ತಿ ಪಡೆಯದೇ ಹೋದ ಅನೇಕ ದೊಡ್ಡ ದೊಡ್ಡವರು ನಮ್ಮಲ್ಲಿದ್ದಾರೆ ಎನ್ನುವುದು ಒಂದು ಕೊರಗಿನ ವಿಷಯ. ಆದರೆ ಇವತ್ತು ಪ್ರಶಸ್ತಿಗಳು ಸಿಕ್ಕಾಪಟ್ಟೆ ಇವೆ. ಯಾರಿಗೆ ಬೇಕಾದ್ರೂ ಪ್ರಶಸ್ತಿ ಬರಬಹುದು. ಪ್ರಶಸ್ತಿಗಳಿಂದ ತಪ್ಪಿಕೊಳ್ಳಲಾರದಷ್ಟು ಪ್ರಶಸ್ತಿಗಳು ನಮ್ಮಲ್ಲಿ ಇವೆ ಅಂತ ಹೇಳಬಹುದು. ಹೀಗಾಗಿ ಕನ್ನಡ ಸಾಹಿತ್ಯ ಪರಿಸರದಲ್ಲಿ ಅಲ್ಪಸ್ವಲ್ಪ ಕೆಲಸ ಮಾಡಿದ ಯಾರೂ ಕೂಡಾ ಪ್ರಶಸ್ತಿಯ ಪರಿಗಣನೆಗೆ ಅರ್ಹರಾಗದೇ ಹೋಗುವಂತಿಲ್ಲದ ಕಾಲ ಬಂದಿರುವುದು ಒಳ್ಳೆದು ಅಂತ ಒಂದು ದೃಷ್ಟಿಯಲ್ಲಿ ಹೇಳಿದ್ರೂ ಕೂಡಾ, ನೀವು ಹೇಳಿದ ಹಾಗೆ ಇಷ್ಟೊಂದು ಸಿಕ್ಕಾಪಟ್ಟೆ ಪ್ರಶಸ್ತಿಗಳಿಂದ ಯಾರು ಯಾವುದಕ್ಕೆ ಅರ್ಹರು ಅನ್ನುವುದು ಗೊತ್ತಾಗದಿರೋ ಸಾಧ್ಯತೆಗಳೂ ಉಂಟು.

ಡಿಎಸ್‌ಎನ್ : ಇದರಿಂದ ಅಭಿರುಚಿಯ ಗೊಂದಲ ಉಂಟಾಗೋದಿಲ್ವಾ ಸಾರ್?

ಜಿಎಸ್‌ಎಸ್ : ಒಳ್ಳೇದು ಕೆಟ್ಟದ್ದು ಅನ್ನುವ ಅಭಿರುಚಿಯನ್ನು ನಿರ್ಣಯ ಮಾಡುವವರು ಓದುಗರು. ಆದುದರಿಂದ ಗೊಂದಲ ಬಹುಶಃ ಉಂಟಾಗಲಾರದು. ಅವರಿಗೆ ಗೊತ್ತಾಗುತ್ತೆ- ನೋಡಿ ಇವರಿಗೆ ಈ ಪ್ರಶಸ್ತಿ ಕೊಟ್ಟಿದ್ದಾರೆ, ಇದು ಕೊಡಬಾರದಾಗಿತ್ತು ಅಂತ ಹೇಳುವವರೂ ಇದ್ದಾರೆ. ಆ... ಇವರಿಗೆ ಎಂದೋ ಬರಬೇಕಾಗಿತ್ತು ಇವತ್ತು ಬಂದಿದೆ ಅಂತ ಹೇಳುವವರೂ ಇದ್ದಾರೆ. ಅಲ್ದೇ ನಮ್ಗೆ ಗೊತ್ತಾಗುತ್ತೆ ಅನೇಕ ಕಡೆ... ಪ್ರಶಸ್ತಿಗಳು ಬಂದಾಗ ಪಡೆದಂತಹ ಜನ ಅದಕ್ಕೆ ಅರ್ಹರೇ ಅಲ್ವೇ ಅನ್ನುವ ಅನುಮಾನಗಳು. ಆ ಅನುಮಾನಗಳ ಕುರಿತು ಯೋಚನೆ ಮಾಡುವಂತಹ ಸಂದರ್ಭ ಕೂಡಾ ನಮ್ಮ ಸಹೃದಯರಿಗೆ ಇದೆ. ಆದ್ದರಿಂದ ಅಭಿರುಚಿಯಲ್ಲಿ ಗೊಂದಲ ಏನೂ ಉಂಟಾಗುವುದಿಲ್ಲ ಅಂತ ಕಾಣುತ್ತೆ.

ಡಿಎಸ್‌ಎನ್ : ಬಹುಶಃ ಇದೇ ಮಾತನ್ನು ವಿಮರ್ಶಾ ರಾಜಕಾರಣದ ಬಗ್ಗೆ ಕೂಡಾ ಹೇಳಬಹುದೂಂತ ಕಾಣುತ್ತೆ. ಯಾಕೆಂದ್ರೆ ತಮ್ಮದೇ ಪತ್ರಿಕಾ ವಿಮರ್ಶೆ ಮೂಲಕ ಯಾರನ್ನು ಬೇಕಾದ್ರೆ ತುಳೀಬಹುದು ಯಾರನ್ನು ಬೇಕಾದ್ರು ಎತ್ತಿ ಹಿಡೀಬಹುದು ಅನ್ನುವ ಒಂದು ರೀತಿಯ ವಿಮರ್ಶೆ ಗುಂಪುಗಾರಿಕೆ ಕೂಡಾ ಹೆಚ್ಚಾಗ್ತಿದೆ ಅನ್ನೋ ಮಾತು ಕೇಳಿ ಬರ್ತಾ ಇದೆ...

ಜಿಎಸ್‌ಎಸ್ : ಹೌದು, ಉದಾಹರಣೆಗೆ ನನ್ನ ವಿಚಾರನೇ ತಗೊಳ್ಳಿ, ಕನ್ನಡ ವಿಮರ್ಶೆ ನನ್ನನ್ನು ಅಷ್ಟಾಗಿ ಉತ್ಸಾಹದಿಂದ ಚರ್ಚಿಸಿಲ್ಲ. ಆದ್ರೆ ಮರುಮುದ್ರಣದ ಮೇಲೆ ಮರುಮುದ್ರಣಗಳು ಬರುವ ಹಾಗೆ ನಿಶ್ಶಬ್ದವಾಗಿ ನನ್ನ ಕೃತಿಗಳು ಖರ್ಚಾಗುತ್ತಿರುವುದು ನೋಡಿದ್ರೆ ಆ ವಿಮರ್ಶೆಗೆ ಮೂಲವಾದ ಯಾವುದೋ ಇನ್ನೊಂದು ಯಾವುದೋ ಒಂದು ಅಂತರಂಗ ಇದೆಯಲ್ಲಾ ಕನ್ನಡ ಜನಮನಸ್ಸಿನ ಅಂತರಾತ್ಮ, ಅದು ಒಪ್ಪಿಕೊಳ್ತಾ ಇದೆ ನನ್ನನ್ನ. ನನಗೆ ಅದೇ ದೊಡ್ಡ ವಿಮರ್ಶೆ ಅಂತ ಅನ್ನಿಸ್ತಾ ಇದೆ.

ಡಿಎಸ್ಎನ್ : ವಿಮರ್ಶಾ ರಾಜಕಾರಣದಿಂದ ಆತ್ಯಂತಿಕವಾಗಿ ಯಾವುದೇ ಪ್ರಯೋಜನ ಇಲ್ಲ...

ಜಿಎಸ್ಎಸ್ : ಇಲ್ಲ, ಅದು ಬಹಳ ತಾತ್ಕಾಲಿಕ ಕೂಡಾ ಹೌದು.

ಡಿಎಸ್ಎನ್ : ಆಮೇಲೆ ನೀವು ಬರೆಯಲಿಕ್ಕೆ ಆರಂಭ ಮಾಡಿದ ಕಾಲದಲ್ಲಿ ಸಾಹಿತ್ಯಿಕ ವಾತಾವರಣ ಹೇಗಿತ್ತು ಸರ್? ಸಾಕಷ್ಟು ಪ್ರೋತ್ಸಾಹ ಹಿರಿಯರಿಂದ ಸಿಗ್ತಾ ಇತ್ತಾ? ಇತ್ತೀಚಿನ ದಿನಗಳಲ್ಲಿ ಸಾಹಿತ್ಯಿಕ ಪ್ರೋತ್ಸಾಹ ಹಿರಿಯರಿಂದ ಇಲ್ವೇ ಇಲ್ಲ ಅನ್ನುವ ಮಾತು ಕೂಡ ಇದೆ.....

ಜಿಎಸ್ಎಸ್ : ಆಗ್ಲೂ ಬಹಳ ಹಿರಿಯರಾದವರೂ ಯಾರನ್ನಾದರೂ ಓದುತ್ತಿದ್ದರು ಅಂತ ಹೇಳೋದು ಕಷ್ಟಾನೆ. ಉದಾಹರಣೆಗೆ ಶಿವರಾಮ ಕಾರಂತರಾಗಲಿ, ಕುವೆಂಪು ಅವರು ಆಗಲಿ ಉಳಿದವರನ್ನು ಓದುವಷ್ಟು ವ್ಯವಧಾನ ಇಲ್ಲದಷ್ಟು ಅವರ ಸೃಜನಶೀಲತೆ ಅವರನ್ನು ಆಕ್ರಮಿಸಿಕೊಂಡಿತ್ತು ಅಷ್ಟೇನೆ. ಹಾಗಂತ ಹೇಳಿದ್ರೆ - ತಿರಸ್ಕಾರದಿಂದ ನೋಡ್ತಾ ಇರಲಿಲ್ಲ. ನಮ್ಮನೆಲ್ಲಾ ಬೆಳೆಸಿದವರು ಅವರು. ಕಾರಂತರಾಗ್ಲೀ, ಕುವೆಂಪು ಅವರಾಗ್ಲೀ ಅವರ ವ್ಯಕ್ತಿತ್ವದಲ್ಲೇ ಆ ಬಗೆಯ ಉದಾರತೆ ಇತ್ತು. ನಮ್ಮ ಪುಸ್ತಕ ಓದಲೇ ಬೇಕಾಗಿರಲಿಲ್ಲ. ಕಡೇಪಕ್ಷ, ಕುವೆಂಪು ಅವರಿಗೆ, ನಾನು ಏನು ಬರೆದಿದ್ದೇನೆ ಎಂದು ಕರೆದು ಕೇಳುವಷ್ಟು ಸೌಜನ್ಯತೆ ಇತ್ತು. ಒಂದು ಮುನ್ನುಡಿ ಬರೆದುಕೊಡಿ ಅಂದ್ರೆ ಬರ್ದು ಕೊಡ್ತಾ ಇದ್ರು. ಕುವೆಂಪು ಅವರನ್ನು ಹೇಗೆ ಅವರ ಹಿಂದಿನ ತಲೆಮಾರಿನವ್ರು ಗುರುತಿಸಿ ಗೌರವಿಸಿದ್ರೋ ಹಾಗೆ ನಮ್ಮ ನವೋದಯ ಸಂದರ್ಭದಲ್ಲಿ ಕೂಡಾ ಹೊಸದಾಗಿ ಬರೆಯೋರ್ಗೆ ಈ ಪ್ರೋತ್ಸಾಹದ ಕೊರತೆ ಅಷ್ಟು ಇರಲಿಲ್ಲ. ಇವತ್ತು ಪ್ರಕಾಶನ ಸಂಸ್ಥೆಗಳು ಹೆಚ್ಚಾಗಿವೆ. ಪ್ರಕಟಣೆಯ ಅವಕಾಶಗಳು ಹಿಂದಿಗಿಂತ ಹೆಚ್ಚಾಗಿವೆ. ವಿಮರ್ಶೆಯ ಅನುಕೂಲಗಳು, ಅವಕಾಶಗಳೂ ಮೊದಲಿಗಿಂತ ಹೆಚ್ಚಾಗಿವೆ. ಹೀಗಾಗಿ ಮೊದಲಿಗಿಂತ ಈಗ ಬರೆಯೋದು ಹೆಚ್ಚು ಸುಲಭ ಅಂತ ಕೂಡಾ ಅಂತ ನನಗನ್ನಿಸ್ತಾ ಇದೆ.

ಡಿಎಸ್ಎನ್ : ಅದರಿಂದ ಸಾಹಿತ್ಯಕ್ಕೆ ಅಪಾಯ ಇಲ್ವಾ ಸಾರ್?

ಜಿಎಸ್ಎಸ್ : ಇದೆ; ಅಪಾಯ ಇದೆ; ಇದ್ದೇ ಇರುತ್ತೆ.

ಡಿಎಸ್ಎನ್ : ಆಮೇಲೆ, ಗಿರೀಶ್ ಕಾರ್ನಾಡ್ ಅವರು ಇತ್ತೀಚೆಗೆ ಜ್ಞಾನಪೀಠ ಪ್ರಶಸ್ತಿ ಬಂದ ಸಂದರ್ಭದಲ್ಲಿ ಒಂದು ಮಾತು ಹೇಳಿದ್ರು- ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲಿಗರೇನಿದ್ದಾರೆ ಕುವೆಂಪು ಆಗಲಿ, ಕಾರಂತರಾಗಲಿ, ಬೇಂದ್ರೆಯವರಾಗ್ಲಿ, ಅವರ ಸಾಹಿತ್ಯ ಸಮೃದ್ಧಿ ಏನಿದೆ ಅದು ಇತ್ತೀಚಿನ ತಲೆಮಾರಿನ ಲೇಖಕರಲ್ಲಿ - ತಮ್ಮನ್ನೂ ಸೇರಿಸಿಕೊಂಡು ಹೇಳಿದ್ದು ಅವರು ಕಾಣ್ತಾ ಇಲ್ಲ ಅಂತ.....

ಜಿಎಸ್ಎಸ್ : ಅದನ್ನು ನಾನೇ, ಅವರಿಗೆ ಪ್ರಶಸ್ತಿ ಬಂದಾಗ ಒಂದು ಪತ್ರಿಕೆಗೆ ಹೇಳಿಕೆ ಕೊಡುವಾಗ ಈ ಮಾತು ಹೇಳಿದ್ದೀನಿ. ನಾಟಕಕಾರರಾಗಿ ಗಿರೀಶ್ ಕರ್ನಾಡ್ ಅವರು ಏನು ಸಾಧಿಸಿದ್ದಾರೆ ಅದಕ್ಕೆ ಸಂದ ಪ್ರಶಸ್ತಿ ಇದು ಅಂತ. ಹಿಂದಿನ ತಲೆಮಾರಿನ ಜ್ಞಾನಪೀಠ ಪ್ರಶಸ್ತಿ ಪಡೆದ ಲೇಖಕರಿಗೂ ಇವರಿಗೂ ಇರುವ ವ್ಯತ್ಯಾಸ ಅಂದ್ರೆ ಅವರ ಸಾಹಿತ್ಯ ಬಹುಮುಖಿಯಾದದ್ದು, ಸಮೃದ್ಧವಾದದ್ದು. ಆದ್ರೆ ಇದು ಒಂದು ಪ್ರಕಾರಕ್ಕೆ ಸೀಮಿತವಾದದ್ದು. ಬಹುಶಃ

ಇನ್ನು ಮೇಲೆ ಹೀಗೆ ಆಗ್ತದೋ ಏನೋ ಗೊತ್ತಿಲ್ಲ ನನಗೆ.

ಡಿಎಸ್‌ಎನ್ : ಯಾಕೆ ಹೀಗಾಗ್ತಿದೆ ಸರ್?

ಜಿಎಸ್‌ಎಸ್ : ಯಾಕೆಂದ್ರೆ ಕುವೆಂಪು ಅವರ ಹಾಗೆ, ಕಾರಂತರ ಹಾಗೆ, ಬೇಂದ್ರೆಯವರ ಹಾಗೆ ಬರೆಯುವವರು ಎಲ್ಲಿದ್ದಾರೆ ಈಗ?

ಡಿಎಸ್‌ಎನ್ : ಅದೇ ನಾನು ಕೇಳ್ತಾ ಇರೋದು. ತಲೆಮಾರಿನಿಂದ ತಲೆಮಾರಿಗೆ ಸಾಹಿತ್ಯ ಸಮೃದ್ಧಿ ಕಡಿಮೆಯಾಗ್ತಿದೆಯಲ್ಲಾ, ಇದಕ್ಕೆ ಏನು ಮುಖ್ಯ ಕಾರಣ, ಇದರಿಂದ ಒಟ್ಟಾರೆ ಕನ್ನಡ ಸಾಹಿತ್ಯದ ಮೇಲೆ ಏನು ಪರಿಣಾಮ ಆಗಬಹುದು ಸರ್?

ಜಿಎಸ್‌ಎಸ್ : ನಾವು ಎಲ್ಲಾ ಕಾಲಕ್ಕೂ ಸಮೃದ್ಧಿಯನ್ನು ನಿರೀಕ್ಷಿಸಲಿಕ್ಕೆ ಆಗುವುದಿಲ್ಲ. ನನ್ನ ಪ್ರಕಾರ, ಮಳೆಗಾಲವನ್ನು ಎಲ್ಲ ಕಾಲದಲ್ಲೂ ನಿರೀಕ್ಷಿಸಲಿಕ್ಕೆ ಆಗುವುದಿಲ್ಲ. ನದಿಯಲ್ಲಿ ಪ್ರವಾಹವನ್ನು ಯಾವಾಗಲೂ ನಿರೀಕ್ಷಿಸಲಿಕ್ಕೆ ಆಗಲ್ಲ. ಚಳುವಳಿಗಳ ಮಳೆಗಾಲದಲ್ಲಿ ಸಾಹಿತ್ಯಕ್ಕೆ ಬರುವ ಸಮೃದ್ಧಿ, ಉಳಿದ ಕಾಲದಲ್ಲಿ ಸ್ವಲ್ಪ ಕಡಿಮೆಯಾಗಬಹುದು.

ಡಿಎಸ್‌ಎನ್ : ಅಂದ್ರೆ ಕನ್ನಡ ಸಾಹಿತ್ಯಲೋಕದಲ್ಲೂ ಒಂದು ಋತುಚಕ್ರ ಇದ್ದೇ ಇರುತ್ತೆ ಅಂತ ಆಯ್ತು.

ಜಿಎಸ್‌ಎಸ್ : ಖಂಡಿತವಾಗಿಯೂ ಇದ್ದೇ ಇರುತ್ತೆ. ಹಾಗೆ ನೋಡಿದ್ರೆ ವಿಮರ್ಶಾ ಲೋಕದಲ್ಲಿ ನಾವೆಷ್ಟು ವಿಸ್ತಾರವಾಗ್ತಿದೀವಿ ಈಗ ನಾವು. ಸೃಜನಶೀಲ ಕೃತಿಗಳಿಗಿಂತ ವೈಚಾರಿಕ ಕೃತಿಗಳು ಹೆಚ್ಚಾಗಿ ಬರ್ತಾವೆ. ಆದ್ರಿಂದ ಇದನ್ನು ವೈಚಾರಿಕತೆಯ ಕಾಲ ಅಂತ ಕರೆಯಲಿಕ್ಕೆ ನಾನು ಅಪೇಕ್ಷೆ ಪಡ್ತೀನಿ. ಮತ್ತೆ, ಒಂದು ಸಾಹಿತ್ಯದ ಚಲನಶೀಲತೆಯನ್ನು, ಮಾಪನವನ್ನು ಕೇವಲ ಸೃಜನಶೀಲ ಸಾಹಿತ್ಯದ ಮೇಲೆ ಮಾಡುವುದು ಸರಿಯಲ್ಲ ಅನ್ನೋದು ಕೂಡಾ ಬಹಳ ಮುಖ್ಯವಾದ ಸಂಗತಿ ನಮಗೆ. ಒಟ್ಟು, total ಆಗಿ, ಏನು ಒಂದು ಕಾಲಮಾನ, ಒಟ್ಟಾಗಿ ಸಮಗ್ರವಾಗಿ ಬೆಳೆದಿದೆ ಅನ್ನೋದನ್ನು ನಾವು ಒಟ್ಟಾಗಿ ತಗೆದುಕೊಂಡು ನಾವು ಅದರ ಬೆಳವಣಿಗೆ ಗುರುತಿಸಬೇಕೇ ಹೊರತಾಗಿ ಕೇವಲ ಸೃಜನಶೀಲ ಕೃತಿಗಳ ಆಧಾರದ ಮೇಲೆ ಒಂದು ಕಾಲಮಾನದ ಸಾಹಿತ್ಯದ ಗತಿಯನ್ನು ಮತ್ತು ಪ್ರಗತಿಯನ್ನು ನಿರ್ಣಯಿಸುವುದು ಸರಿಯಲ್ಲ ಅನ್ನುವುದೇ ನನ್ನ ಇತ್ತೀಚಿನ ಅಭಿಪ್ರಾಯ.

ಡಿಎಸ್‌ಎನ್ : ಆದರೆ ಈ ಪ್ರಶ್ನೋತ್ತರದ ಹಿಂದೆ ಇನ್ನೊಂದು ಸಂಗತಿ ಇದೆ ಅಂತ ಕಾಣುತ್ತೆ ಸರ್... ಏನೂಂತ ಅಂದ್ರೆ, ಇತ್ತೀಚಿನ ದಿನಗಳಲ್ಲಿ-ಅಂದ್ರೆ, ಕಳೆದ ಕೆಲವು ವರ್ಷಗಳಿಂದೀಚೆಗೆ ಕನ್ನಡದ ಜನರಲ್ಲಿ ಕನ್ನಡ ಭಾಷೆಯ ಬಳಕೇನೇ ತುಂಬ ಕಡಿಮೆ ಆಗ್ತಿದೆ-ಶಿಕ್ಷಣ ಮಾಧ್ಯಮವಾಗಿ ಕನ್ನಡ ನಶಿಸಿ ಹೋಗ್ತಾ ಇದೆ... ಕನ್ನಡ ಭಾಷೆಯ ಶಬ್ದಗಳನ್ನು ಬಳಸುವ ಒಂದು ಪ್ರೀತಿ -ಖುಷಿನೇ ತಪ್ಪಿ ಹೋಗ್ತಾ ಇದೆ. ಅನೇಕ ಶಬ್ದಗಳು ನಶಿಸಿ ಹೋಗ್ತಾ ಇವೆ, ವಾಕ್ಯರಚನೆ ಯದ್ವಾತದ್ವಾ ಆಗ್ತಾ ಇದೆ, ಕಾಗುಣಿತದ ಪಾಡಂತೂ ಹೇಳಬಾರದು... ಇಂತಹ ವಾತಾವರಣದಲ್ಲಿ ಲೇಖಕರು ಹುಟ್ಟುವುದು ಹೇಗೆ ಸಾಧ್ಯ? ಸೃಜನಶೀಲತೆ ಕನ್ನಡ ಭಾಷೆಯಲ್ಲಿ ವ್ಯಕ್ತವಾಗುವುದು ಹೇಗೆ ಸಾಧ್ಯ?

ಜಿಎಸ್‌ಎಸ್ : ಲೇಖಕರು ಹುಟ್ಟೋದಿಲ್ಲ. ಓದುಗರು ಬರೋದಿಲ್ಲ. ಆ ಸ್ಥಿತಿ ಬಂದಿದೆ ನಮಗೀಗ. ಇಷ್ಟೊಂದು ಪ್ರಶಸ್ತಿಗಳಿಂದ ಸಮೃದ್ಧವಾದ ಸಾಹಿತ್ಯದ ಬೇರು, ಬುಡ ಒಣಗ್ತಾ ಇದೆ. ಹೀಗಾಗಿ ಕನ್ನಡ ಮಾಧ್ಯಮದಲ್ಲಿ ಓದುವುದಕ್ಕಿಂತ ಇಂಗ್ಲಿಷ್ ಮಾಧ್ಯಮದಲ್ಲಿ ಓದುವುದು ಹೆಚ್ಚು ಲಾಭದಾಯಕ ಎನ್ನುವ ಪರಿಸ್ಥಿತಿ ನಿರ್ಮಾಣವಾಗ್ತಾ ಇರೋದು ಮತ್ತು ಇಂಗ್ಲಿಷ್ ಮಾಧ್ಯಮವನ್ನೇ ನಮ್ಮ ಮಕ್ಕಳು ಅನಿವಾರ್ಯವಾಗಿ ಆಶ್ರಯಿಸಬೇಕಾದ ಒಂದು ವ್ಯಾಪಾರೀ ಜಾಲ ಸೃಷ್ಟಿಯಾಗುತ್ತಿರೋದ್ರಿಂದ ಮತ್ತು ಅನೇಕ ಭ್ರಮೆಗಳು ಇದನ್ನು ಪೋಷಿಸ್ತಾ ಇರೋದ್ರಿಂದ ನಮ್ಮ ಮಕ್ಕಳು ಕನ್ನಡದಿಂದ ದೂರವಾಗ್ತಾ ಇದ್ದಾರೆ. ನಾಳೆ ದಿವಸ ನಾವು ಬರೆದಿದ್ದನ್ನ ಓದುವವರು ಗತಿಯಿಲ್ಲ. ಬರೆಯುವವರೂ ಇಲ್ಲ. ಮತ್ತೊಂದು ಅಂದ್ರೆ ಬೇರೆ ಬೇರೆಯ ಸಂಸ್ಕೃತಿಗಳ ಆಕ್ರಮಣ ಇದೆಯಲ್ಲ ನಮ್ಮ ಮೇಲೆ, ಅದು, ಕೂಡಾ ಇದಕ್ಕೊಂದು ಕಾರಣ ಆಗ್ತದೆ. ನಮ್ಮ ವೈಚಾರಿಕತೆಯನ್ನ, ಸೃಜನಶೀಲತೆಯನ್ನ ಧ್ವಂಸಮಾಡುವಷ್ಟರ ಮಟ್ಟಿಗೆ ವಿಕಾರ ಸಂಸ್ಕೃತಿಗಳ ಆಕ್ರಮಣ ನಮ್ಮ ಜನಜೀವನದ ಮೇಲೆ ಆಗ್ತಾ ಇದೆ, ನಮ್ಮ ಮಕ್ಕಳ ಮೇಲೆ ಆಗ್ತಾ ಇದೆ. ಹೀಗಾಗಿ ಯಾವ ಮಾಧ್ಯಮಗಳನ್ನ - ವಿಶೇಷವಾಗಿ ದೃಶ್ಯ ಮಾಧ್ಯಮಗಳು - ಪರಿಣಾಮಕಾರಿಯಾಗಿ ಬಳಸಿದ್ದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಬಹುದಿತ್ತೋ ಅದೇ ಮಾಧ್ಯಮಗಳು ಬಹುಶಃ ಕಲ್ಪನಾ ದರಿದ್ರರ, ಅಥವಾ ವ್ಯಾಪಾರಿ ಮನೋಧರ್ಮದವರ ಕೈಗೆ ಸಿಕ್ಕು ಹೀಗೆ ಒಂದು ಕೀಳು ಸಂಸ್ಕೃತಿಯ ಪ್ರಸರಣದಲ್ಲಿ ತೊಡಗಿರೋದ್ರಿಂದ ಒಟ್ಟಾರೆಯಾಗಿ ನಮ್ಮ ನಾಳಿನ ಭವಿಷ್ಯ ಬಹಳ ನಿರಾಶದಾಯಕವಾಗಿದೆ ಅಂತ ನನಗನಿಸ್ತಾ ಇದೆ. ಸಾಹಿತ್ಯದ ಭವಿಷ್ಯ ಮಾತ್ರ ಅಲ್ಲ, ನಮ್ಮ ನಾಡಿನ ಭವಿಷ್ಯವೇ....

ಡಿಎಸ್‌ಎನ್ : ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಸಾಹಿತಿಗಳ ಪಾತ್ರ ಏನನಿಸುತ್ತೆ ಸರ್? ಮೊದಲಿನಿಂದಲೂ ಕೂಡಾ ಸಾಮಾಜಿಕ ಸಂದರ್ಭಗಳಿಗೆ ಪ್ರತಿಕ್ರಿಯಿಸುತ್ತಾ ಬಂದಿರುವಂತಹ ಸಾಮಾಜಿಕ ಕವಿ ನೀವು.

ಜಿಎಸ್‌ಎಸ್ : ಸಾಹಿತಿಗಳು ಏನು ಮಾಡಬಹುದು? **protest** ಮಾಡಬಹುದು. ಪ್ರತಿಭಟನೆ ಮಾಡಬಹುದು. ಸರಿ ಇಲ್ಲ ಅಂತ ಹೇಳ್ಬಹುದು-ಮಕ್ಕಳಿಗೆ ಸಂದರ್ಭ ಸಿಕ್ಕಾಗ ಇದನ್ನೆಲ್ಲಾ ಪ್ರತಿಭಟಿಸುವಂತಹ ವೈಚಾರಿಕತೆ ಬೆಳೆಸಿಕೊಳ್ಳಿ ಅಂತ ಹೇಳಬಹುದು. ನಮ್ಮ ಇವತ್ತಿನ ಅಗತ್ಯ ಅಂದ್ರೆ ವೈಚಾರಿಕತೆಯ ಅಭಾವ. ಯಾರೂ ಯಾವುದ್ರ ಕುರಿತೂ ಗಂಭೀರವಾಗಿ ವಿಚಾರ ಮಾಡ್ತಾ ಇಲ್ಲ. ತಾತ್ಕಾಲಿಕವಾಗಿ ಏನು ಸಿಗುತ್ತೋ ಅಷ್ಟರಲ್ಲಿ ತೃಪ್ತರಾಗಿ ಬಿಡ್ತಾರೆಯೇ ಹೊರತಾಗಿ ನಮ್ಮ ಮೇಲೆ ಈ ಅನ್ಯಪ್ರಭಾವಗಳು ಮಾಡುವ ದುಷ್ಪರಿಣಾಮಗಳು ಏನು, ಇದನ್ನು ಹೇಗೆ ಪ್ರತಿಭಟಿಸಬೇಕು ಎನ್ನುವ ಎಚ್ಚರ ನಮ್ಮಲ್ಲಿ ಬರ್ತಾ ಇಲ್ಲ.

ಡಿಎಸ್‌ಎನ್ : ಅಂದ್ರೆ ವೈಚಾರಿಕತೆಯ ಕೊರತೆ ಅಂತ...

ಜಿಎಸ್‌ಎಸ್ : ಹೌದು, ಈ ಎಚ್ಚರವನ್ನು ನಮ್ಮ ಶಿಕ್ಷಣ ಹುಟ್ಟಿಸಬೇಕಾಗಿದೆ. ಲೇಖಕರು ಹುಟ್ಟಿಸಬೇಕಾಗಿದೆ. ರಾಜಕಾರಣಿಗಳು ಹುಟ್ಟಿಸಬೇಕಾಗಿದೆ. ಜಗದ್ಗುರುಗಳು ಹುಟ್ಟಿಸಬೇಕಾಗಿದೆ. ಇವರೆಲ್ಲ ಈ ಪರಿಸ್ಥಿತಿ ಹೀಗಿರುವುದಕ್ಕೆ ಕಾರಣ ಅಷ್ಟೆ.

ಡಿಎಸ್‌ಎನ್ : ಆದ್ರೆ ನೀವು ಹಿಂದೆ ಹೇಳಿದ್ರಿ, ಇದು ವೈಚಾರಿಕ ಸಾಹಿತ್ಯದ ದೊಡ್ಡ ಕಾಲ ಅಂತ. ಇನ್ನೊಂದು ಕಡೆ ವೈಚಾರಿಕತೆಯ ಅಭಾವ ಅಂತಿರಾ...

ಜಿಎಸ್‌ಎಸ್ : ಈಗ ವೈಚಾರಿಕತೆಯ ದೊಡ್ಡ ಕಾಲ ಅನ್ನೋದು, ಬರೆಯುವವರೆಲ್ಲಾ, 50 + ವರ್ಷದ ವಯಸ್ಸಿನವರು ಅಷ್ಟೇನೆ; ಅಂದರೆ ಮುಂದಿನ ತಲೆಮಾರಿನವರು ಬೆಳೆಸುವ ವಿಮರ್ಶಾಕ್ರಮವನ್ನು ಕುರಿತಾಗಿ ನಾನು ಹೇಳ್ತಾ ಇದ್ದೇನೆ ಹೊರತಾಗಿ ಅದರ ಮುಂದಿನದನ್ನು ದೇವ್ರೆ ಕಾಪಾಡಬೇಕು.

ಡಿಎಸ್‌ಎನ್ : ಹಾಗಾಗಿ ಕನ್ನಡ ಸಾಹಿತ್ಯ ಅಥವಾ ಭಾರತದ ಯಾವುದೇ ಭಾಷೆಯ ಸಾಹಿತ್ಯ ಈಗ ಬಡವಾಗುತ್ತಿರುವ ಈ ಸಂದರ್ಭದಲ್ಲಿ ಏಳುವ ಬಹು ದೊಡ್ಡ ಪ್ರಶ್ನೆ ಅಂದ್ರೆ, ಸಾಹಿತ್ಯವೇ ಕಳೆದು ಹೋದ್ರೆ ಇನ್ನು ಜನಜೀವನದಲ್ಲಿ ಏನು ಉಳಿಯುತ್ತೆ?

ಜಿಎಸ್‌ಎಸ್ : ಏನೂ ಉಳಿಯೋದಿಲ್ಲ. ಕೇವಲ ಪ್ರಾಯೋಜನಿಕ ಬುದ್ಧಿ ಮಾತ್ರ ಉಳಿಯಬಹುದು ಅಷ್ಟೇ.

ಡಿಎಸ್‌ಎನ್ : ದೊಡ್ಡ ದುರಂತ ಇದು...

ಜಿಎಸ್‌ಎಸ್ : ಹೌದು

ಡಿಎಸ್‌ಎನ್ : ಇದಕ್ಕೆ ಸಂಬಂಧಪಟ್ಟಂತೇನೇ ಇನ್ನೊಂದು ದುರಂತದ ಕಡೆ ಗಮನ ಸೆಳೆಯಬಯಸುತ್ತೇನೆ ಸರ್. ಇತ್ತೀಚೆಗೆ ಸಾಹಿತಿಗಳ ಮತ್ತು ಸರ್ಕಾರದ ಒಡನಾಟ ಜಾಸ್ತಿಯಾಗ್ತಾ ಇದೆ. ಅನುಕೂಲತೆಗಳಿಗೋಸ್ಕರ, ಸ್ಥಾನಮಾನಗಳಿಗೋಸ್ಕರ ಸಾಹಿತಿಗಳು ರಾಜಕಾರಣಿಗಳ ಸುತ್ತಮುತ್ತ ಓಡಾಡ್ತಿದಾರೆ ಅಂತ ಹೇಳ್ತಾರೆ. ಇದಕ್ಕೆ ನೀವು ಹೇಗೆ ಪ್ರತಿಕ್ರಿಯಿಸ್ತೀರಿ? ಇದರಿಂದ ಸಾಹಿತ್ಯದ ಮೇಲೆ ಏನು ಪ್ರಭಾವ ಅಗ್ಬಹುದು ಸರ್?

ಜಿಎಸ್‌ಎಸ್ : ಹಾಗೆ ಆಗ್ಬಾರದು. ಆಗ್ತಾ ಇದೆ. ಇದನ್ನು ನಾವು ಅಸಹಾಯಕರಾಗಿ ನೋಡ್ತಾ ಇದೇವೆ. ಯಾಕೆ? ಸಾಹಿತಿಗಳಿಗೆ ರಾಜಕಾರಣಿಗಳನ್ನು ಓಲೈಸುವ ಅಗತ್ಯಗಳೇ ಇಲ್ಲ. ಯಾಕೆಂದ್ರೆ ಸಾಹಿತಿಯ ನಿಜವಾದ ವ್ಯಕ್ತಿತ್ವ ಯಾವುದೇ ಅಧೀನತೆಗಳನ್ನು ನಿರಾಕರಿಸುವ ಮನೋಧರ್ಮ - ನಿಜವಾದ ಸಾಹಿತಿಯದು...

ಡಿಎಸ್‌ಎನ್: ಬಹಳ ಒಳ್ಳೆಯ ಲೇಖಕ ನಿಜವಾದ ಬಂಡಾಯಗಾರ ಅಂತಲೂ ಹೇಳ್ತಾರೆ.

ಜಿಎಸ್‌ಎಸ್ : ಹೌದು, ಹೀಗೆ ಅಧೀನತೆಯನ್ನು ಮೀರುವುದು ಹೇಗೆ ಅನ್ನುವುದನ್ನು ಪಂಪನಿಂದ ಇವತ್ತಿನ ಕುವೆಂಪುವರೆಗೆ ಎತ್ತಿ ಹೇಳುವ ಕವಿಗಳಿದ್ದಾರೆ. ಆದರೆ ಯಾಕೆ ಸಾಹಿತಿಗಳು ಹೀಗೆ ಮಾಡ್ತಾರೆ - ಅದು ವೈಯಕ್ತಿಕವಾದ ವಿಚಾರವಷ್ಟೆ. ಅದು ಸಾರ್ವತ್ರಿಕವಾಗಿ ಅನ್ವಯವಾಗುವಂತಹ ಸಂಗತಿಯಲ್ಲ.

ಡಿಎಸ್‌ಎನ್ : ಒಟ್ಟಾರೆ ಜೀವನದ ದಿಕ್ಕೇ ಬದಲಾಗ್ತಾ ಇದೆ. ಸಾಹಿತಿಗಳೂ ಇದಕ್ಕೆ ಹೊರತಲ್ಲ ಅಂತ ಕಾಣುತ್ತದೆ.

ಜಿಎಸ್‌ಎಸ್ : ಬಹುಶಃ ಇದು ಪ್ರಾಯೋಜನಿಕ ಬುದ್ಧಿಯ ಪರಿಣಾಮ ಅಂತ ಕಾಣುತ್ತೆ.

ಬಿಎಸ್‌ಎಸ್ : ಇರಬಹುದು ಸರ್... ಅದೇನೇ ಇರಲಿ. ಈ ಸಂಕ್ಷಿಪ್ತ ಸಂದರ್ಶನದಲ್ಲಿ ಸಾಕಷ್ಟು ವಿಸ್ತಾರವಾದ ವಿಚಾರಗಳು ಹೊರಹೊಮ್ಮಿದಂತೆ ಕಾಣುತ್ತೆ. ವಿಶ್ವಾಸದಿಂದ ಈ ಮಾತುಕತೆಯಲ್ಲಿ ಭಾಗವಹಿಸಿದಕ್ಕೆ ವಂದನೆಗಳು ಸರ್.

ಜಿಎಸ್‌ಎಸ್ : ನಮಸ್ಕಾರ.

❑

(ಬರಹಕ್ಕೆ : ಎಸ್. ಉಷಾಲತಾ)

ದೇವನೂರ ಮಹಾದೇವ ಅವರೊಂದಿಗೆ ಸಂದರ್ಶನ

ದೇವನೂರ ಮಹಾದೇವ ಅವರ 'ಕುಸುಮಬಾಲೆ' ಕೃತಿಗೆ ೧೯೯೧ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾದಮೇಲೆ 'ಸಂಕ್ರಮಣ' ಪತ್ರಿಕೆಯು ಕುಸುಮಬಾಲೆ - ಮಹಾದೇವ ಕುರಿತಂತೆ ವಿವಾದ ಒಂದನ್ನು ಆರಂಭಿಸಿತು. ಮಹಾದೇವ ಅವರಿಗೆ ಪ್ರಶಸ್ತಿ ಬಂದ ಸಂತಸದ ಸಂದರ್ಭ ಮತ್ತು ಈ ವಿವಾದ - ಇವುಗಳ ಹಿನ್ನೆಲೆಯಲ್ಲಿ ಮಹಾದೇವ ಅವರನ್ನು ಸಂದರ್ಶಿಸುವ ಉದ್ದೇಶದಿಂದ 'ಸಾಹಿತ್ಯ ಸಂವಾದ' ನಿಯತಕಾಲಿಕದ ಪರವಾಗಿ ನಾನು ಹಾಗೂ ಶ್ರೀ ರಾಘವೇಂದ್ರ ಪಾಟೀಲ ಮೈಸೂರಿಗೆ ಹೋಗಿ ಸುಮಾರು ಎರಡು ಗಂಟೆಗಳ ಕಾಲ ಮುಕ್ತವಾಗಿ ಮಾತಾಡಿದೆವು. ಚರ್ಚೆಯನ್ನು ಧ್ವನಿಮುದ್ರಿಸಿಕೊಂಡಿಲ್ಲ; ಯಥಾವತ್ತಾಗಿ ಬರೆದುಕೊಂಡೂ ಇಲ್ಲ. ಸಂದರ್ಶನ ಮುಗಿದಾದ ಮೇಲೆ ನೆನಪಿನ ಆಧಾರದ ಮೇಲೆ ಬರೆದ ಲೇಖನ ಇದಾಗಿದೆ. ಆದ್ದರಿಂದ ಇಲ್ಲಿ ಬಳಕೆಗೊಂಡ ಮಾತುಗಳು ಚರ್ಚೆಯಲ್ಲಿ ಬಳಕೆಗೊಂಡ ತದ್ವತ್ ಮಾತುಗಳಾಗದಿರಬಹುದು. ಆದರೆ ಇಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಮಾತ್ರ ಚರ್ಚೆಯಲ್ಲಿ ಮೂಡಿಬಂದ ಅಭಿಪ್ರಾಯಗಳೇ ಆಗಿವೆ.

ಡಿ.ಎಸ್. ನಾಗಭೂಷಣ : ಮಹಾದೇವ, ನೀವು ಎಪ್ಪತ್ತರ ದಶಕದ ಆರಂಭದಲ್ಲಿ ಕಥೆ ಬರೆಯಲು ಆರಂಭಿಸಿದಿರಿ. ನಿಮ್ಮ ಕಥೆಗಳು ಹೊಸದೊಂದು ಧ್ವನಿಯನ್ನು ಹೊತ್ತು ಬಂದವು. ಬಹುಶಃ ಅವು ಕನ್ನಡದ ಮೊದಲ ಗಮನಾರ್ಹ ದಲಿತ ಬರಹ ಕೂಡ ಆಗಿವೆ. ಆದರೆ ನಿಮ್ಮ ಈ ಆರಂಭದ ಕಥೆಗಳಲ್ಲಿ ರೊಚ್ಚು, ರೋಷ, ವ್ಯಕ್ತವಾಗದೇ ಒಂದು ತೆರನ ತಂಪಾದ ನಿರ್ಲಿಪ್ತ ಕೋಪ ಮೂಡಿ ಬಂದಿದೆ. ಇಂಥ ಒಂದು ನಿಲುವು ನಿಮಗೆ ನಿಮ್ಮ ಆರಂಭದ ಬರಹದಲ್ಲೇ ಹೇಗೆ ಸಾಧ್ಯವಾಯಿತು? ನಿಮ್ಮ ಬಾಲ್ಯದ ಅನುಭವಗಳ ಹಿನ್ನೆಲೆ ಏನಾದರೂ ಇದರ ಹಿಂದೆ ಇದೆಯಾ?

ದೇವನೂರ ಮಹಾದೇವ : ನಾನು ಬರೆಯಲು ಆರಂಭಿಸಿದಾಗ ಬರುತ್ತಿದ್ದಂತಹ ಕಥೆಗಳು - ನನ್ನ ಬಾಲ್ಯದ ಅನುಭವಗಳು - ಉದಾಹರಣೆಗೆ, ನನಗೆ ನನ್ನ ಅಜ್ಜಿ ಹೇಳುತ್ತಿದ್ದಂತಹ ಕಥೆಗಳು ಮತ್ತು ನನಗೆ ಒದಗಿದ ಸಹವಾಸ - ಆಗ ನನಗೆ ಸೂ. ರಾಮಕಾಂತ ಮತ್ತು ಆಲನಹಳ್ಳಿ ಕೃಷ್ಣನಂತವರ ಸಹವಾಸ ಒದಗಿತ್ತು. ಹೀಗೆ ಇವೆಲ್ಲಾ ಕಾರಣಗಳು ನನ್ನ ಕಥೆಗಳಲ್ಲಿನ ನಿಲುವಿಗೆ

ಕಾರಣ ಆಗಿರಬಹುದು. ಮತ್ತೆ... ನಾನು ಬರೆಯಲು ಆರಂಭಿಸಿದಾಗಲೇ ನನಗೆ ಏನನಿಸ್ತಿತ್ತು ಅಂದರೆ -ಹೇಳಬೇಕಾದ್ದನ್ನ ಪರಿಣಾಮಕಾರಿಯಾಗಿ ಮತ್ತು ಸಂಕ್ಷಿಪ್ತವಾಗಿ ಹೇಳಬೇಕು ಎನ್ನುವ ಭಾವನೆ ಇತ್ತು.

ರಾಘವೇಂದ್ರ ಪಾಟೀಲ : ನವ್ಯ ಮಾರ್ಗ ಮೀರಿದ ಈ ಶೈಲಿ ನಿಮಗೆ ಒಮ್ಮೆಲೇ ಒದಗಿ ಬಂದದ್ದು ಹೇಗೆ...

ದೇವನೂರ ಮಹಾದೇವ : ಗೊತ್ತಿಲ್ಲ...

ಡಿ.ಎಸ್.ಎನ್. : ದೇವರ ದಯವೇ?

ದೇಮ : ....(ನಗು)....

ರಾ. ಪಾ. : ನೋಡಿ... ನಿಮ್ಮ ತಂದೆ ಪೋಲೀಸ್ ಕಾನ್‌ಸ್ಟೇಬಲ್ ಆಗಿದ್ದವರು. ಅಂದರೆ ಸರ್ಕಾರಿ ನೌಕರಿಯಲ್ಲಿದ್ದವರು. ಹೀಗಾಗಿ ನಿಮಗೆ ಒಂದು ರೀತಿಯ Secured ಜೀವನ ಲಭ್ಯವಾಗಿತ್ತು. ಆದ್ದರಿಂದ ನಿಮ್ಮ ಬಾಲ್ಯದಲ್ಲಿ ನೀವು ನೋವನ್ನು ಅನುಭವಿಸದೇ ಇದ್ದಿರಬಹುದು. ಅದಕ್ಕೇ ನಿಮ್ಮ ಕಥಾನಕಗಳಲ್ಲಿ ದಲಿತ ಶೋಷಣೆ ಕುರಿತು ಭಾವಾವೇಶದ ರೊಚ್ಚು, ರೋಷ ವ್ಯಕ್ತವಾಗದೇ ಇರಬಹುದೇ...?

ದೇಮ : ಇಲ್ಲ, ಇಲ್ಲ. ನಮ್ಮಪ್ಪ ಪೋಲೀಸಾಗಿದ್ದಕ್ಕೆ ನನಗೆ ಸಮೃದ್ಧಿಯ ಜೀವನವೇನೂ ಸಿಕ್ಕಿಲ್ಲ. ನಾನು ಎಸ್.ಎಸ್.ಎಲ್.ಸಿ. ಪಾಸುಮಾಡಿ ಇಲ್ಲಿ ಮೈಸೂರಿಗೆ ಕಾಲೇಜಿಗೆ ಬಂದೆ ನೋಡಿ... ೬೭ - ೬೮ನೇ ಇಸ್ವಿಗಳಲ್ಲಿ... ಆಗ ಮಳೆಗಿಳೆ ಬರದೇ ಬರಗಾಲ ಸೈತ ಇತ್ತು... ಆಗ ಇಲ್ಲಿ ನನಗೆ ಊಟಕ್ಕೆ ಏನೇನೂ ವ್ಯವಸ್ಥೆ ಇರಲಿಲ್ಲ... ಸಾಲಾ ಮಾಡಿ ಕಾರಾ ಮಂಡಕ್ಕಿ ತಿಂದು ದಿನಾ ಕಳೀತಿದ್ದೆ. ಹಂಗೆ ಸಮೃದ್ಧಿಯ ಬದುಕೇನೂ ಅಲ್ಲ...

ರಾ. ಪಾ. : ಇದು ಬಡತನದ ಪ್ರಶ್ನೆ ಆಯ್ತು... ಎಲ್ಲ ಬಡವರಿಗೂ ಸಾಮಾನ್ಯವಾದ ಅನುಭವ...

ದೇಮ : ಹಾಗಲ್ಲ, ಬರೀ ಅದಷ್ಟೇ ಆಗಿರ್ಲಿಲ್ಲ

ಡಿ.ಎಸ್.ಎನ್ : ನೀವು ನಿಮ್ಮ 'ದ್ಯಾವನೂರು' ಸಂಕಲನದ ಕಥೆಗಳಲ್ಲಾಗಲೀ ಮತ್ತು 'ಒಡಲಾಳ' ದಲ್ಲಾಗಲೀ ನಿಮ್ಮ ದಲಿತ ಅನುಭವಗಳಿಗೆ ಸೀಮಿತಗೊಂಡು ಅವುಗಳಿಗೆ ಮಾತ್ರ ಅಭಿವ್ಯಕ್ತಿ ನೀಡಿದ್ದೀರಿ. ಅಂದರೆ ಈ ಕೃತಿಗಳಲ್ಲಿ ದಲಿತ ಲೋಕಕ್ಕೆ ಹೊರತಾದ ಅನುಭವಗಳು ಬರುವುದೇ ಇಲ್ಲ. ಆದರೆ ನಿಮ್ಮ ಕುಸುಮಬಾಲೆ ಕೃತಿಯಲ್ಲಿ ಮೊಟ್ಟ ಮೊದಲಿಗೆ ದಲಿತೇತರ ಲೋಕದ ಚಿತ್ರ ಕೊಡಲು ಪ್ರಯತ್ನಿಸಿದ್ದೀರಿ. ಈ ಪ್ರಯತ್ನದಲ್ಲಿ ನಿಮಗೆ ಮಾನಸಿಕ ಹಿಂಜರಿಕೆ ಏನಾದರೂ ಅನ್ನಿಸಿತೆ?

ದೇಮ : ನನ್ನ ಕಥೆಗಳಲ್ಲಿ ಮತ್ತು ಒಡಲಾಳದಲ್ಲಿ... ನಾನು ನೋಡಿದ ಪಾತ್ರಗಳು- ನನ್ನ ಲೋಕದ, ಅನುಭವದ ಪಾತ್ರಗಳು ಬರುತ್ತವೆ. ಅವು ಹೇಗಿದ್ದವೋ ಹಾಗೆ ಬರುತ್ತವಂತಲ್ಲ... ಅಂದರೆ ನಾನು ಅವುಗಳನ್ನ ಹ್ಯಾಂಡಲ್ ಮಾಡಲು ಹೋಗುವುದಿಲ್ಲ. ನಾನು interfere ಮಾಡಲು ಹೋಗುವುದಿಲ್ಲ. .. ಅಂದರೆ ಈ ಪಾತ್ರಗಳನ್ನ ಅವುಗಳ ಅತ್ಯಂತ

ಸಹಜ ವಾತಾರಣದೊಳಗೆ ಇಡುವ ಪ್ರಯತ್ನ ಮಾಡ್ತೀನಿ. ಈ ಪಾತ್ರಗಳು ನನ್ನ ವರ್ಗದವೇ ಆಗಿದ್ದವು... ಇನ್ನು 'ಕುಸುಮಬಾಲೆ'ಯೊಳಗೆ - ನಾನು ಬರೀ ನೋಡಿದವಲ್ಲ-ಇನ್ನೂ ಬೇರೆಯದನ್ನ ಹಿಡಿಯಲಿಕ್ಕೆ ನೋಡಿದ್ದೇನೆ.... ಅಂದರೆ ಬರೀ ನನ್ನ ಅನುಭವದ ಅಂಗಳದೊಳಗೇ ನಿಲ್ಲುವದಲ್ಲ. ಅದನ್ನು ದಾಟಿ ಹೋಗಲು ನೋಡುವುದು... ಒಂದು ರೀತಿಯಾಗಿ ನನ್ನ ಅನುಭವಗಳನ್ನು ಇನ್ನೊಂದಿಷ್ಟು ಬಾಚಿಕೊಳ್ಳುವುದು....

ರಾ. ಪಾ. : ಅಲ್ಲ ನಾವು ಈ ಪ್ರಶ್ನೆ ಯಾಕೆ ಕೇಳಿದೇವೆಂದರೆ - 'ಕುಸುಮಬಾಲೆ'ಯಲ್ಲಿ ಬರುವ ಮುಖ್ಯ ಎಳೆ ಈ ವಂಶ - ಜಾತಿಗಳ ಶುದ್ಧತೆಯ ಅಹಂಕಾರವನ್ನು ಸ್ಫೋಟಗೊಳಿಸುವುದಾಗಿದೆ... ಜಾತಿ ಸಂಕರವನ್ನ ಸಹಿಸಲಾರೆನ್ನುವ ನಮ್ಮ ಸಾಮಾಜಿಕ 'ಇಗೊ'ದ ಬಲೂನಿಗೆ ಮುಳ್ಳು ಚುಚ್ಚುವುದು ಇದರ ಮುಖ್ಯ ಎಳೆಯಾಗಿದೆ. ಆದರೆ ಈ ಎಳೆ ಅತ್ಯಂತ ತೆಳುವಾಗಿದೆ ಮತ್ತು ಅದು ಮೂರ್ತಗೊಳ್ಳುವುದಿಲ್ಲ. ಇದು ನೀವು ನಿಮ್ಮ ಖಾಸಾ ಅನುಭವ ಲೋಕವನ್ನು ಮೀರುವ ಪ್ರಯತ್ನದಲ್ಲಿನ ಮಾನಸಿಕ ಹಿಂಜರಿಕೆಯಿಂದ ಆದ ಪರಿಣಾಮವಾಗಿರ ಬಹುದೇ?... ಅದಕ್ಕೆ ನೋಡಿ ಕಾದಂಬರಿ ಅತ್ಯಂತ ದಟ್ಟ ಕುಸುರುಗಾರಿಕೆಯ ತಂತ್ರದಲ್ಲಿ ಹುದುಗಿಕೊಂಡುಬಿಡುತ್ತದೆನಿಸುತ್ತದೆ...

ದೇಮ : ಅಲ್ಲ ... ಒಂದು... 'ಕುಸುಮಬಾಲೆ'ಯಲ್ಲಿ ನಾನು ಹೊಸ ತಂತ್ರ ಬಳಸಿದ್ದೇನೆ ಅಥವಾ ನನ್ನ ಈ ಬರವಣಿಗೆ ಒಂದು ತಂತ್ರ, ಪ್ರಯೋಗ ಅಂತ ನಾನು ಖಂಡಿತವಾಗಿ ಭಾವಿಸುವುದಿಲ್ಲ. ಅಂದರಲ್ಲಿ ತಂತ್ರ ಅನ್ನುವುದು ಇಲ್ಲವೇ ಇಲ್ಲ.... ನಾನು ಯಾವಾಗಲೂ ಸಹಜವಾಗಿ ಕಥೆ ಹೇಳುವವ. ತಂತ್ರ ಅನ್ನುವಂಥಾದ್ದು ಅಲ್ಲಿ ಇರುವುದಿಲ್ಲ. 'ಕುಸುಮಬಾಲೆ' ಯಲ್ಲಿ ಈಗ ಜಾನಪದ ಸಹಜ ಕಥೆಯ ರೀತಿ ಜೋತಮ್ಮಗಳು ಬಂದು ಕಥೆ ಹೇಳತಾವೆ...

ಡಿ.ಎಸ್.ಎನ್ : ಅದು ತಂತ್ರವೆಂದೇ ಅನಿಸುತ್ತದೆ... ಕಥೆ ಹೇಳುವ ರೀತಿಯೇ ಅಲ್ಲವೇ ಈ ತಂತ್ರವೆನ್ನುವುದು...

ದೇಮ : ಹೌದು ... (ಮುಗುಳುನಗೆ)

ರಾ. ಪಾ. : ಅದಾಯಿತಲ್ಲ ... ಈ ಕಥಾನಕದ ಮುಖ್ಯ ಎಳೆನೋಡಿ ... ಎಷ್ಟೊಂದು ತೆಳುವಾಗಿ ಬಂದಿದೆ. ಕುಸುಮಳ ಒಂದು ಘಟನೆ - ಕೆಂಪಿಯ ಒಂದು ಘಟನೆ...

ದೇಮ : ಅದೇ ಮುಖ್ಯ ಎಳೆ ಅಂತ ಯಾಕೆ ಇಟ್ಕೋಬೇಕು...

ಡಿ.ಎಸ್.ಎನ್ : 'ಕುಸುಮಬಾಲೆ' ಹಾಗಿದ್ದರೆ ಏನನ್ನ ಹೇಳ್ತದೆ, ಅದು ತುಂಬ ಅಸ್ಪಷ್ಟ ಅಮೂರ್ತವಾಗಿಬಿಡ್ತದೆ. ಇದು ಒಂದು ತತ್ವಪದ ಆಗಬಹುದಿತ್ತು. ಆದರೆ ಕಾದಂಬರಿ ಆಗಲು ಹೋಗಿದೆ, ಎರಡೂ ಆಗಿಲ್ಲ... ನೀವು ಹಿಂದೊಮ್ಮೆ ಮಾತಾಡ್ತಾ - ನಾನು ಓದುಗನನ್ನ ಹೊರಗಡೆ ಇಟಕೊಂಡು ಬರೆಯುವುದಿಲ್ಲ... ನಾನೇ ಓದುಗ ಆಗಿ ನನ್ನನ್ನು ಕೂಡಿಸಿಕೊಂಡು ನಾನು ಕಥೆ ಹೇಳ್ತೀನಿ ಅಂತ ಹೇಳಿದ್ದಿರಿ. ಇಲ್ಲಿ ಅದು ಅತಿಗೆ ಹೋಗಿದೆ ಅನಿಸ್ತದೆ. ಇದರಿಂದಲೇ 'ಕುಸುಮಬಾಲೆ' ನಿಮ್ಮನ್ನು ಬಿಟ್ಟು ಮತ್ಯಾರಿಗೂ ತಲುಪೇ ಇಲ್ಲ ಅನ್ನುವ extreme ಅಭಿಪ್ರಾಯ ಮೂಡ್ತಾ ಇದೆ.

ದೇಮ : ಹಾಗೇ ಅಂದುಕೊಳ್ಳಿ... ಬುದ್ಧಿವಂತರಿಗೆ ಅರ್ಥವಾಗ್ತಿರಲಿಲ್ಲ... (ನಗು)

ರಾ. ಪಾ. : ಹಾಗಲ್ಲ. ಈಗ ನೋಡಿ ಕಾದಂಬರಿಯಲ್ಲಿ ಜೀತವಿಮೋಚನಾ ಚಳುವಳಿಯ ದಲಿತ ಸಂಘರ್ಷ ಸಮಿತಿಯ ಮೆರವಣಿಗೆಯ ವಿವರ ಬರ್ತದೆ. ಇದು ಕಾದಂಬರಿಯ ಮುಖ್ಯ ಎಳೆಗೆ ತನ್ನನ್ನು ಜೋಡಿಸಿಕೊಳ್ಳುವುದೇ ಇಲ್ಲ. ಸ್ವತಂತ್ರವಾಗಿ ಈ ಬರಹ ಇಷ್ಟವಾಗುತ್ತದೆ. ಅದರಲ್ಲಿನ ತಿಳಿಹಾಸ್ಯವಂತೂ ನಿಮ್ಮ ವೈಶಿಷ್ಟ್ಯ... ಆದರೆ ಈ ಅಧ್ಯಾಯ ಕಾದಂಬರಿಯ ಮುಖ್ಯ ಎಳೆಯೊಂದಿಗೆ ಕೇಂದ್ರೀಯವಾಗಿ ಜೋಡಿಸಿಕೊಳ್ಳುವುದಿಲ್ಲ... ಒಂದು ಮುಖ್ಯಧಾರೆ ಕಾದಂಬರಿಯಲ್ಲಿ ಹರಿಯುತ್ತಿದ್ದರೆ ಮುಂದುಗಡೆ ಇನ್ನೊಂದು ಧಾರೆ ಕಾಣುತ್ತದೆ. ಅಕ್ಕಪಕ್ಕದಲ್ಲಿ ಇನ್ನಷ್ಟು ಧಾರೆ ಕಾಣಿಸುತ್ತವೆ. ಅವೆಲ್ಲಾ ಎಲ್ಲೋ ಸೇರಿಕೊಳ್ಳಬಹುದೆಂದರೆ ಅವು ಸೇರಿಕೊಳ್ಳುವುದೇ ಇಲ್ಲ. ಎಲ್ಲಾ ಅಕ್ಕಪಕ್ಕದಲ್ಲಿ ಬೇರೆ ಬೇರೆಯಾಗಿ ಹರಿಯುತ್ತವೆ...

ದೇಮ : ಹರಿಯಲಿ ಬಿಡಿ... ಅಂತೂ ನೆಲಕ್ಕೆ ತಂಪೋ ... (ನಗು)

ಡಿ.ಎಸ್.ಎನ್. : ನೀವು ನಿಮ್ಮ ಕಥೆಗಳಲ್ಲಿ ಆರಂಭದಿಂದಲೇ ನಿಮ್ಮದೇ ಆದ ಒಂದು ಭಾಷೆಯನ್ನು ರೂಪಿಸಿಕೊಂಡಂತೆ ಕಾಣುತ್ತದೆ. ಅದರ ಅವಶ್ಯಕತೆ ಏನಿತ್ತು?... ಇಂಥದಕ್ಕೆ ಪ್ರೇರಣೆ ಪ್ರಭಾವ ದೊರೆತದ್ದು ಹೇಗೆ?

ದೇಮ : ಪ್ರಭಾವ ಅಂತಲ್ಲ... ಪಾತ್ರಗಳನ್ನ ಅವುಗಳ ಸ್ವಾಭಾವಿಕ ವಾತಾವರಣದಲ್ಲಿ ಇಡಬೇಕೆನ್ನುವ ನನ್ನ ಪ್ರಯತ್ನದ ಬಗ್ಗೆ ಹೇಳಿದೆನಲ್ಲ... ಅದರ ಅಂಗವಾಗಿಯೇ ಇದು ಬಂದಿರಬೇಕು. ಅದೂ ಅಲ್ಲದೇ ಕಥೆಗಳಲ್ಲಿ ಈ ಭಾಷೆ ಬಳಸಿದಾಗ ಬಂದ ಪ್ರತಿಕ್ರಿಯೆ - ಸಾಹಿತ್ಯದ ಗೆಳೆಯರು ಇದನ್ನು ಸ್ವೀಕರಿಸಿದ ರೀತಿ, ನೀಡಿದ ಪ್ರೋತ್ಸಾಹ - ಇವು ಕೂಡ ನನ್ನ ಈ ಭಾಷೆಯ ಬಳಕೆಯ ಬಗ್ಗೆ ನನಗೆ ಪ್ರೇರಣೆ ನೀಡಿರಬೇಕು...

ಡಿ.ಎಸ್.ಎನ್. : ನೀವು ಲೋಹಿಯಾರವರ ಸಮಾಜವಾದಿ ಚಿಂತನೆಯಿಂದ ಪ್ರಭಾವಿತರಾದವರು. ನೀವು ಕರ್ನಾಟಕ ಸಮಾಜವಾದೀ ಯುವಜನ ಸಭಾದ ಸಂಚಾಲಕರಾಗಿ ಕೆಲಸ ಮಾಡಿದ್ದೀರಿ. ನೀವು ಸಮಾಜವಾದಿ ಚಿಂತನೆಯಿಂದ ಪ್ರಭಾವಿತರಾಗಲು ನಿಮ್ಮಲ್ಲಿನ ತುಡಿತಗಳು ಕಾರಣವೋ ಅಥವಾ ಆಕಸ್ಮಿಕವಾಗಿ ಆದದ್ದೋ...

ದೇಮ : ಅದು ಆಕಸ್ಮಿಕವಾದದ್ದೆನಿಸುತ್ತದೆ... ಆಗ ಈ ಸಂಘಟನೆಯ ಸಂಪರ್ಕದಲ್ಲಿ ಬಂದೆ...

ಡಿ.ಎಸ್.ಎನ್. : ಹಾಗಂದರೆ ನೀವು ಆಗ ಕಮ್ಯುನಿಸ್ಟ್ ಸಂಘಟನೆಯ ಸಂಪರ್ಕಕ್ಕೆ ಬಂದಿದ್ದರೆ ಅದನ್ನು ಸೇರುತ್ತಿದ್ದಿರಾ?

ದೇಮ : ಹೌದೆನಿಸುತ್ತದೆ ...

ಡಿ.ಎಸ್.ಎನ್. : ಅಂದರೆ R.S.S ಸಂಪರ್ಕದಲ್ಲಿ ಬಂದಿದ್ದರೆ ಅದನ್ನು ಸೇರುತ್ತಿದ್ದಿರಾ?

ದೇಮ : ಇಲ್ಲ... ನಾನು R.S.Sನಲ್ಲಿ ಇದ್ದು ಹೊರಗೆ ಬಂದವನು... ಶಾಲೆಯಲ್ಲಿ ಇದ್ದಾಗ ನಾನೂ R.S.S ಗೆ ಹೋಗುತ್ತಿದ್ದೆ. ಒಂದು ರೀತಿಯಾಗಿ ಅದರ ಪ್ರಭಾವದಲ್ಲೆ ಇದ್ದೆ... ಒಂದು ನೆನಪು ಬರ್ತದೆ... ಮೋಹನ ಅಂತ - ಈಗ ಎಲ್ಲಿಯೋ ಇಂಜಿನಿಯರ್ ಆಗಿದ್ದಾನೆ...

ಬ್ರಾಹ್ಮಣರ ಹುಡುಗ. ಅವನೂ ಸಂಘದ ಕಾರ್ಯಕರ್ತ. ಅವ ಒಮ್ಮೆ ನನ್ನ ಎಂಜಲನ್ನು ಎತ್ತಿದ. ನನಗೆ ಅದು ಆಶ್ಚರ್ಯ ಅನಿಸಿತ್ತು. ಪ್ರಭಾವ ಬೀರಿತ್ತು. ಆದರೆ ಕ್ರಮೇಣ ಅವರು ಹೇಳುವ ಎಲ್ಲರೂ ಒಂದೇ ಅನ್ನುವ ಮಾತು ನಟನೆ ಅಂತ ತೋರತೊಡಗಿತು ಮತ್ತು ಇದೆಲ್ಲಾ ಅಲ್ಲದೇ, ಬರೀ ಅವರ ಸಂಪರ್ಕವೇ ಸಾಕು, ಒಂದು ರೀತಿಯಲ್ಲಿ ಮುಸ್ಲಿಂರ ಬಗೆಗೆ, ಕ್ರಿಶ್ಚಿಯನ್ನರ ಬಗೆಗೆ ತನ್ನಿಂದ ತಾನೇ ದ್ವೇಷಭಾವನೆ ಮೂಡಿಬಿಡ್ತದೆ... ಅದನ್ನ ಅವರು ವ್ಯಕ್ತವಾಗಿ ಹೇಳದಿದ್ದರೂ, ಕಲಿಸದಿದ್ದರೂ ಅದು ಸಹಜವಾಗಿ ನಮ್ಮ ಮನಸ್ಸಿನಲ್ಲಿ ಮೂಡ್ತದೆ... ಹೀಗಾಗಿ ನಾನು R.S.S. ಬಿಟ್ಟವ... ಅದಕ್ಕೆ ಅದನ್ನ ಮತ್ತೆ ಸೇರುವ ಪ್ರಶ್ನೆ ಇಲ್ಲ...

ರಾ. ಪಾ. : ಸಮಾಜವಾದೀ ಚಿಂತನೆಗಳ ಪ್ರಭಾವ ನಿಮ್ಮ ಕಥೆಗಳ ಮೇಲೆ ಆಗಿರಬಹುದಲ್ಲವೇ?

ದೇಮ : ಆಗಿರಬಹುದು... ಸಹಜವಾಗಿ.

ರಾ. ಪಾ. : ಹಾಗೆಯೇ ನೀವು ಹೇಳಿದಿರಲ್ಲ... ಸಮಾಜವಾದೀ ಚಿಂತನೆಯ ಪ್ರಭಾವಕ್ಕೆ ಒಳಗಾದದ್ದು ಆಕಸ್ಮಿಕಲೆಂದು. ಈ ಆಕಸ್ಮಿಕದಲ್ಲಿ ನೀವು ಕಮ್ಯುನಿಸ್ಟ್ ಚಿಂತನೆಯ ಪ್ರಭಾವಕ್ಕೆ ಒಳಗಾಗಿದ್ದರೆ ನಿಮ್ಮ ಕಥೆಗಳು ಇದೇ ರೂಪದಲ್ಲಿ ಬರುತ್ತಿದ್ದವೆ?

ದೇಮ : ನಾನು ಬರೆಯುವಾಗ ನನಗೆ ಈ ಯಾವ ಚಿಂತನೆಗಳೂ ಬದ್ಧತೆಗಳಾಗಿ ಕಾಡುವುದಿಲ್ಲ. ಸಮಾಜವಾದಿ ಚಿಂತನೆಗಳಾಗಲೀ, ಕಮ್ಯುನಿಸ್ಟ್ ಚಿಂತನೆಗಳೇ ಆಗಲಿ, ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳೇ ಆಗಲಿ... ಇವು ಯಾವುವೂ ಬದ್ಧತೆಗಳಾಗುವುದಿಲ್ಲ...

ಡಿ.ಎಸ್.ಎನ್. : ಹಾಗಿದ್ದರೆ, ನೀವು ಆಕಸ್ಮಿಕವಾಗಿ ಕಮ್ಯುನಿಸ್ಟ್ ಪಕ್ಷ ಸೇರುವಂತಾಗಿದ್ದರೆ ನೀವು ಆ ಪಕ್ಷದಲ್ಲಿ ಉಳಿಯಲು ಸಾಧ್ಯವಾಗುತ್ತಿತ್ತೆ?

ದೇಮ : ಆಗುತ್ತಿರಲಿಲ್ಲಾಂತ ಕಾಣ್ತದೆ... ನನ್ನ ಬರವಣಿಗೆಯನ್ನ ನಿರ್ದೇಶಿಸಕ್ಕಾಗದೆ ಹೊರಕ್ಕೆ ಹಾಕ್ತಿದ್ರೊ ಏನೋ...

ರಾ. ಪಾ. : ಈಗ ದಲಿತ ಸಂಘರ್ಷ ಸಮಿತಿ ಹೇಗಿದೆ ಅನಿಸ್ತದೆ...

ದೇಮ : ಅದು ಹಿಂದಕ್ಕೂ ಹೋಗ್ತಾ ಇಲ್ಲ, ಮುಂದಕ್ಕೂ ಬರ್ತಾ ಇಲ್ಲ ಅನಿಸ್ತದೆ.

ಡಿ.ಎಸ್.ಎನ್. : ಇದಕ್ಕೆ ನಿಮ್ಮಂಥವರ ನಿಷ್ಕ್ರಿಯತೆಯೇ ಕಾರಣವಲ್ಲವೆ? ನೀವೂ ರಾಜ್ಯ ಸಂಚಾಲಕರಾಗಿದ್ದಿರಿ...

ದೇಮ : ನಾನು ರಾಜ್ಯ ಸಂಚಾಲಕನಾಗಿದ್ದಾಗಲೇ ಜಿಲ್ಲಾ ಸಂಚಾಲಕರಿಗೆ ತಾವು ಜಿಲ್ಲಾ ಸಂಚಾಲಕರು ಅಂತ ಅನಿಸಿದ್ದು.... ದಲಿತ ಸಂಘರ್ಷ ಸಮಿತಿಯ ಸಮಸ್ಯೆ ಏನಂದರೆ ಅದು ಸಮಾಜದ ಡಾಕ್ಟ್ರಾಗಿ ವರ್ತಿಸಬೇಕಾದದ್ದು... ಆದರೆ ಅದು ಪೇಶಂಟ್‌ನಂತೆ ವರ್ತಿಸ್ತಾ ಇದೆ. ನಾವು ಈ ತರದ ತಪ್ಪು ಮಾಡಿದಿವಿ ಅಂತ ಈಗ ನನಗೆ ಗೊತ್ತಾಗ್ತಾ ಇದೆ.

ಡಿ.ಎಸ್.ಎನ್. : ಪರಿಸ್ಥಿತಿ ಹೀಗಿರುವಾಗ ಅದು ರಾಜಕೀಯಕ್ಕೆ ಇಳಿಯುವುದು ಎಷ್ಟರ ಮಟ್ಟಿಗೆ ಸರಿ?

ದೇಮ : ಹಂಗಲ್ಲ... ನಾವು ಎಲ್ಲಾ ರೀತಿಯಿಂದ ಪರಿಶುದ್ಧಿ ಮಾಡಿಕೊಂಡೇ

ಏನಾದರೂ ಕೆಲಸಕ್ಕೆ ಹೊರಡ್ತೀವಿ ಅಂದರೆ ಅದು ಆಗದ ಮಾತು... ಕೆಲಸಾ ಮಾಡ್ತಾ ಮಾಡ್ತಾನೇ ಸರಿಹೋಗಬೇಕು...

ರಾ. ಪಾ. : ನಿಮಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಮೇಲೆ ನೀವು ವಿವಾದಕ್ಕೆ ಸಿಕ್ಕಿಹಾಕಿಕೊಂಡಿದ್ದೀರಿ. ಇತ್ತೀಚಿನ 'ಸಂಕ್ರಮಣ'ಗಳಲ್ಲಿ ಬಂದ ಲೇಖನ - ಪ್ರತಿಕ್ರಿಯೆಗಳನ್ನು ನೀವು ಗಮನಿಸಬಹುದು, ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ?

ದೇಮ : ಬೇಜಾರು ಜಾಸ್ತಿ ಆಗಿ ಆಗಿ ಈಗ ಅದರ ತೀವ್ರತೆ ಕಳೆದು ಹೋಗಿದೆ... ಅಲ್ಲ, 'ಕುಸುಮಬಾಲೆ' ನಿಮಗೆ ಒಳ್ಳೆಯ ಕಾದಂಬರಿ ಅನಿಸದಿದ್ದಲ್ಲಿ - ಅದು ಅರ್ಥವಾಗುವುದಿಲ್ಲ ಅಂತ ಅನಿಸಿದಲ್ಲಿ - ಚಂಪಾ ಆಗಲಿ ಅಥವಾ ಮತ್ತೆ ಯಾರೇ ಆಗಲಿ -ಅದರ ಬಗ್ಗೆ ಹಾಗೆ ಬರೆದರೆ ನನಗೆ ಬೇಜಾರೇನೂ ಆಗುವುದಿಲ್ಲ. ಆದರೆ ಕೇವಲ ಊಹಾಪೋಹದ ಮೇಲೆ ವೈಯುಕ್ತಿಕ ಆರೋಪ ಮಾಡುವುದರಿಂದ ಪ್ರಯೋಜನವಿಲ್ಲ. ನನ್ನ ಕೃತಿಯಲ್ಲಿ ಅಂತಿಮವಾಗಿ ಏನನ್ನು ಉಳಿಸಿಕೊಳ್ಳಬೇಕು, ಏನನ್ನು ಬಿಡಬೇಕು ಅನ್ನುವುದು ಸಂಪೂರ್ಣವಾಗಿ ನನಗೆ ಸೇರಿದ್ದು. ಅದಕ್ಕೆ ನಾನೇ ಹೊಣೆ, ಬೇರೆ ಯಾರೂ ಅಲ್ಲ. ಈ ಸಂಬಂಧವಾಗಿ ಬೇರೆಯವರ ಕಡೆಗೆ ಬೊಟ್ಟು ಮಾಡುವುದು ಸದಭಿರುಚಿ ಆಗಲಾರದು.

ಡಿ.ಎಸ್.ಎನ್. : ನಿಮ್ಮ ಕೃತಿ ಕುರಿತ ವಿಮರ್ಶೆಯೊಂದು ಪತ್ರಿಕೆಯಲ್ಲಿ ಪ್ರಕಟವಾಗುವ ಮೊದಲು ಅದರ ಕೆಲವು ಭಾಗಗಳನ್ನು ನೀವು ತೆಗೆಸಿ ಹಾಕಿದಿರೆನ್ನುವ ಆರೋಪವಿದೆಯಲ್ಲ?

ದೇಮ : ಅದು ಹಾಗಲ್ಲ. ಚಂಪಾ ಈ ಸಂಬಂಧ ವಿಮರ್ಶೆಯ ಮಾಫಿಯಾ ಅದು ಇದೂ ಅಂತ ಭಯಾನಕ ಶಬ್ದ ಬಳಸಿ ಏನನ್ನೋ ಮಾಡಬಾರದ್ದನ್ನ ಮಾಡಲಾಗಿದೆ ಅನ್ನುವ ಅಭಿಪ್ರಾಯ ಮೂಡಿಸಲು ಪ್ರಯತ್ನಿಸಿದ್ದಾರೆ. ಆದರೆ ಆಗಿದ್ದೆಂದರೆ ಡೆಕನ್ ಹೆರಾಲ್ಡ್‌ಗೆ ಪೋಲಂಕಿಯವರು 'ಕುಸುಮಬಾಲೆ'ಯ ಬಗ್ಗೆ ಬರೆದು ಕಳುಹಿಸಿದ ಲೇಖನದಲ್ಲಿ ಕೃತಿಯಲ್ಲಿಲ್ಲದ ಭಾಗವನ್ನು ಉಲ್ಲೇಖಿಸಿ ಕೆಲವು ಅಭಿಪ್ರಾಯ ಮಂಡಿಸಿದ್ದರೆನ್ನುವುದು ಪತ್ರಿಕೆಯಲ್ಲಿನ ಓರ್ವ ಗೆಳೆಯನಿಂದ ತಿಳಿಯಿತು. ಆಗ ನಾನು ಶ್ರೀ ಪೋಲಂಕಿಯವರಿಗೆ ಪುಸ್ತಕದಲ್ಲಿಲ್ಲದ ಭಾಗದ ಮೂಲಕ ಪುಸ್ತಕವನ್ನು ಮತ್ತು ಲೇಖಕನನ್ನು ಚರ್ಚೆಗೀಡು ಮಾಡುವುದು ಸರಿಯಲ್ಲವೆಂದೂ, ಲೇಖನದಲ್ಲಿ ಬದಲಾವಣೆ ಮಾಡಲು ಇಷ್ಟವಿಲ್ಲದಿದ್ದರೆ, ಕನಿಷ್ಠ ಚರ್ಚೆಗೆ ನಿಮಿತ್ತವಾದ ಆ ಭಾಗ ಪುಸ್ತಕದಲ್ಲಿ ಸೇರಿಲ್ಲವೆನ್ನುವ ಟಿಪ್ಪಣಿಯನ್ನಾದರೂ ಬರೆಯಬೇಕೆಂದು ಸೂಚಿಸಿದೆ. ಆದರೆ ಅವರು ನನ್ನ ಸೂಚನೆಯನ್ನು ಒಪ್ಪದಿದ್ದಾಗ ಲೇಖನದ ಅಂಥ ಉಲ್ಲೇಖಗಳನ್ನು ತೆಗೆಯಲು ಪತ್ರಿಕೆಗೆ ಮನವಿ ಮಾಡಬೇಕಾಯಿತು. ಅಷ್ಟೇ...

❑

(ಬರಹ : ರಾಘವೇಂದ್ರ ಪಾಟೀಲ)

ಎಸ್. ನಿಜಲಿಂಗಪ್ಪ ಅವರೊಂದಿಗೆ ಸಂದರ್ಶನ

ನಿಜಲಿಂಗಪ್ಪನವರಿಗೂ ಚಿತ್ರದುರ್ಗ ಬಾನುಲಿಗೂ, ಅದು ಆರಂಭವಾದಾಗಿನಿಂದಲೂ ಬಲು ನಂಟು. ಬಾನುಲಿ ತಂಡ ಹತ್ತಾರು ಬಾರಿ ಅವರ ನಿವಾಸಕ್ಕೆ ಹೋಗಿ ಅನೇಕ ರೀತಿಯ ಕಾರ್ಯಕ್ರಮಗಳನ್ನು ಧ್ವನಿಮುದ್ರಿಸಿಕೊಂಡು ಬಂದಿದೆ. ಸ್ವತಃ ಅವರೇ ನಾಲ್ಕಾರು ಬಾರಿ ಬಾನುಲಿ ಕೇಂದ್ರಕ್ಕೆ ಬಂದು ಹೋಗಿದ್ದಾರೆ. ಅವರ ಸವಿನೆನಪುಗಳನ್ನು ಇಲ್ಲಿನ ಸಿಬ್ಬಂದಿ ಈಗಲೂ ಹಂಚಿಕೊಳ್ಳುತ್ತಿರುವುದುಂಟು. ೯೮ ವರ್ಷಗಳ ತುಂಬು ಬದುಕು ಬಾಳಿದ ಈ ಹಿರಿಯ ರಾಜಕೀಯ ಮುತ್ಸದ್ದಿ ತಾವು ಪಂಚಭೂತಗಳೊಂದಿಗೆ ಲೀನವಾಗುವ ಒಂದು ವರ್ಷದ ಮುನ್ನ ತಮ್ಮ ಸ್ವಂತ ನಿವಾಸದಲ್ಲಿ ಚಿತ್ರದುರ್ಗ ಬಾನುಲಿಗೆ ನೀಡಿದ ವಿವರವಾದ ಸಂದರ್ಶನ ಅವರ ಮಾಗಿದ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಡಿ.ಎಸ್. ನಾಗಭೂಷಣ : ಈ ತಿಂಗಳ ನಮ್ಮ 'ಅನುಭವ ಪ್ರಪಂಚ' ಕಾರ್ಯಕ್ರಮದ ಅತಿಥಿ ರಾಷ್ಟ್ರದ ಅತ್ಯಂತ ಹಿರಿಯ ರಾಜಕೀಯ ಮುತ್ಸದ್ದಿಗಳಲ್ಲೊಬ್ಬರಾದಂತಹ ಎಸ್. ನಿಜಲಿಂಗಪ್ಪ ಅವರು. ಎಸ್. ನಿಜಲಿಂಗಪ್ಪ ಅವರನ್ನು ನಮ್ಮ ಕೇಳುಗರಿಗೆ ವಿವರವಾಗಿ ಪರಿಚಯ ಮಾಡಿಕೊಡುವ ಅಗತ್ಯ ಇಲ್ಲ. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ, ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಮುಂದಾಳುಗಳಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ ಇವರು ಎಲ್ಲರಿಗೂ ಚಿರಪರಿಚಿತರು. ಇದು ಇವರ ಬಹಿರ್ಮುಖ. ಇವರ ಅಂತರ್ಮುಖವನ್ನು ಪರಿಚಯ ಮಾಡಿಕೊಳ್ಳುವ ಉದ್ದೇಶ ನಮ್ಮ ಇವತ್ತಿನ ಮಾತುಕತೆ ಹಿಂದಿದೆ.

ನಮಸ್ಕಾರ ನಿಜಲಿಂಗಪ್ಪನವರೇ

ನಿಜಲಿಂಗಪ್ಪನವರು : ನಮಸ್ಕಾರ.

ನಾ : ತಮಗೆ ೯೭ ವರ್ಷ ಈಗ. ಈ ೯೭ ವರ್ಷದ ಅವಧಿ ತುಂಬಾ ಚಿಕ್ಕದು ಅನ್ಸುತ್ತೋ ಅಥವಾ ತುಂಬಾ ಜಾಸ್ತಿಯಾಯ್ತು ಅನ್ಸುತ್ತೋ?

ನಿ : ಜೀವನಕ್ಕೆ ಅಂತ್ಯ ಇಲ್ಲ, ಆದಿ ಇಲ್ಲ. ಅದು ನಡೀತಲೇ ಇರಬೇಕು. ೯೭ ವರ್ಷ ದೊಡ್ಡದು ಅಂತ ನನಗೇನು ಅನ್ನೋದಿಲ್ಲ.

ನಾ : ಯಾಕಂದ್ರೆ ಒಂದ್ಮಾತಿದೆ, ವಯಸ್ಸಾಗೋದು ದೇಹಕ್ಕೆ ಹೊರತು ಮನಸ್ಸಿಗಲ್ಲಾಂತ.

ನಿ : ೯೭ ವರ್ಷ ಏನೋ ನಡೀತಾ ಇದೆ. ವಯಸ್ಸಾಗ್ತಾ ಇದೆ, ಮಾನವ ಕಲ್ಪನೆಯಿಂದ. ಆದ್ರೆ ನನ್ನ ಮನಸ್ಸೇನೋ ಎಳೇದಾಗೇ ಇದೆ. ಅದಕ್ಕೆ ವಯಸ್ಸೇನಾಗಿಲ್ಲ. ಇನ್ನೂ ಕಲೀಬೇಕು. ವಿಚಾರ ತಿಳ್ಕೋಬೇಕು, ಏನಾದ್ರು ಯೋಚನೆ ಮಾಡ್ಬೇಕು ಅಂತ ಇದ್ದೀನಿ. ಆ ದೃಷ್ಟಿಯಿಂದ ನಾನು ಚಿಕ್ಕೋನೇ.

ನಾ : ಬಹಳಷ್ಟು ಜನ ತತ್ವಜ್ಞಾನಿಗಳು ಸಂಸಾರ ದುಃಖಮಯ ಅಂತ್ಹೇಳ್ತಾರೆ. ಸಂಸಾರ ಮೂಲಭೂತವಾಗಿ ಕಷ್ಟದಾಯಕವಾದದ್ದು, ದುಃಖದಾಯಕವಾದದ್ದೂಂತ. ನಿಮ್ಮ ಒಟ್ಟು ೯೭ ವರ್ಷಗಳ ಜೀವನದಲ್ಲಿ ನಿಮ್ಗೇನನ್ನುತ್ತೆ?

ನಿ : ಸಂಸಾರ, ಹ್ಯಾಗೆ ಜೀವನ ನಡೆಸಿದ್ರೆ ಹಾಗಿರ್ತದೆ. ನನ್ನ ದೃಷ್ಟಿಯಲ್ಲಿ ಸಂಸಾರ ಸುಖಮಯವೇ. ಕಷ್ಟ ಬರ್ತದೆ. ಆದ್ರೂ ಎಲ್ಲ ಮನುಷ್ಯ ನೋಡೋದ್ರಲ್ಲಿ, ಜೀವನದ ಮೇಲೆ ಅವನ ದೃಷ್ಟಿ ಇರೋದ್ರಲ್ಲಿರ್ತದೆ. ನನಗೆ ಸಂಸಾರ ಬಹಳ ಸುಖಮಯವಾಗಿ ಕಂಡಿದೆ.

ನಾ : ನೀವು ಬಡ ಕುಟುಂಬದಲ್ಲಿ ಹುಟ್ಟಿದವರು. ಬಡತನ ನಿಮ್ಮನ್ನ ಕಾಡ್ಲಿಲ್ವಾ, ಬಾಲ್ಯದಲ್ಲಿ?

ನಿ : ಬಡತನದಲ್ಲಿ ಹುಟ್ಟಿದೆ, ಬಡತನ ನೋಡಿದ್ದೇನೆ. ಐಶ್ವರ್ಯವನ್ನೂ ನೋಡಿದ್ದೇನೆ, ನನಗೆ, ಬಡತನ ಇರಬಾರದು, ಇಲ್ದೇ ಇರುವಂತೆ ಮಾಡೋದಕ್ಕೆ ಅವಕಾಶ ಇದೆ ಅನ್ನುತ್ತೆ.

ನಾ : ತಾವು ಬಾಲ್ಯದಲ್ಲಿ ಬಡತನವನ್ನು ಕಂಡ್ರಿ. ನಂತರ ಜೀವನದ ಹಲವು ಉನ್ನತ ಮೆಟ್ಟಿಲುಗಳನ್ನು ಹತ್ತುತ್ತಾ ಹೋದ್ರಿ. ಜೀವನದ ಅನೇಕ ಕಷ್ಟ-ಸುಖಗಳನ್ನು ನೋಡಿದ್ದೀರಿ. ನೀವು ಬಾಲ್ಯದಲ್ಲಿ ಏನಾಗ್ಬೇಕೂಂತ ಬಯಸಿದ್ರಿ?

ನಿ : ನಾನು ವಿದ್ಯಾರ್ಥಿಯಾಗಿದ್ದಾಗ್ಲೇ ಒಂದು ಸ್ಪಷ್ಟವಾದ ಅಭಿಪ್ರಾಯಕ್ಕೆ ಬಂದಿದ್ದೆ. ಲಾಯರ್ ಆಗ್ಬೇಕೂ ಅಂತ. ನನಗೆ ಮ್ಯಾತ್‌ಮ್ಯಾಟಿಕ್ಸ್‌ನಲ್ಲಿ ಸೆಂಟ್‌ಪರ್ಸೆಂಟ್ ಮಾರ್ಕ್ಸ್ ಬರ್ತಿತ್ತು. ಸೈನ್ಸ್‌ನಲ್ಲೂ ಶೇಕಡಾ ತೊಂಭತ್ತೈದರವರೆಗೂ ಮಾರ್ಕ್ಸ್ ಬರ್ತಾ ಇತ್ತು. ನಾನು ಇಂಜಿನಿಯರ್ ಆಗ್ಬೇಕೂಂತ್ಹೇಳಿ ಅನೇಕರು ಅಪೇಕ್ಷೆ ಮಾಡಿದ್ರು. ಚೀಫ್ ಜಸ್ಟೀಸ್ ಮಹದೇವಯ್ಯನವರು ನೀನು ಇಂಜಿನಿಯರ್ ಕಾಲೇಜ್ ಸೇರು ಅಂದ್ರು. ನಾನು ಅವರಿಗ್ಹೇಳ್ದೆ, ನಾನು ಮನಸ್ಮಾಡಿದ್ದೇನೆ - ನಾನು ಲಾಯರ್ ಆಗ್ಬೇಕೂಂತ, ನಾ ಲಾಯರೇ ಆಗ್ತೀನಿ ಅಂತ. ನನ್ನ ಮನಸ್ಸಿನ ಸ್ಥಿತಿ ಹಾಗಿತ್ತು.

ನಾ : ಹಿಂದೆ ಲಾಯರ್‌ಗಳೂ ಅಂತದ್ರೆ ಹಣ ಮಾಡೋ ವೃತ್ತಿ, ದೊಡ್ಡ ವೃತ್ತಿ ಅಂತಿತ್ತು. ಆ ದೃಷ್ಟಿಯಿಂದ ಏನಾದ್ರು ಲಾಯರ್ ಆಗ್ಬೇಕೂ ಅಂತ ಆಸೆ ಪಟ್ರಾ ನೀವು?

ನಿ : ಹಣ, ಹಣ ಸಂಪಾದ್ನೆ ಮಾಡ್ಬೇಕೂ, ಶ್ರೀಮಂತನಾಗ್ಬೇಕೂ ಅನ್ನೋ ದೃಷ್ಟಿ ನನಗೆ ಯಾವಾಗ್ಲೂ ಇಲ್ಲ. ಆಗ್ಲೂ ಇರ್ಲಿಲ್ಲ, ಈಗ್ಲೂ ಇಲ್ಲ.

ನಾ : ಸ್ವಾತಂತ್ರ ಹೋರಾಟದ ಕಡೆ ನಿಮ್ಮ ಗಮನ ಹರಿದದ್ದು ಯಾತಕ್ಕೆ? ಅದರ ಹಿನ್ನೆಲೆ ಏನು ಹೇಳ್ತೀರಾ?

ನಿ : ಸ್ವಾತಂತ್ರ್ಯ- ಅದರ ಗಮನ ಹರಿದದ್ದು ಒಂದು ವರ್ಷದ ಮಾತಲ್ಲ. ಹೈಸ್ಕೂಲಿ

ನಲ್ಲಿರುವಾಗ್ಲೇನೇ ಅನಿಬೆಸೆಂಟ್, ಅದೇ ರೀತಿಯಲ್ಲಿ ತಿಲಕ್ ಮಹಾರಾಜ್ ಅವರ ಜೀವನದ ಧಾಟಿ, ಅವರು ಮಾಡಿದ ಕೆಲಸಗಳು, ನಂತರ ಗಾಂಧಿಯವರು ಬಂದು ತೋರಿಸಿದ ಹೊಸ ದಾರಿ-ಇವೆಲ್ಲವೂ ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮ ಮಾಡಿದ್ವು. ಆದ್ದರಿಂದ ಮೊದಲಿಂದ್ಲೂ ನನಗೆ ಸ್ವಾತಂತ್ರ್ಯದ ವಿಚಾರದಲ್ಲಿ ಆಸೆ ಇತ್ತು.

ನಾ : ನೀವು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಥಮವಾಗಿ ಭಾಗವಹಿಸಿದ್ದು ಯಾವಾಗ? ಯಾವ ಘಟನೆ ಮೂಲಕ?

ನಿ : ಸಕ್ರಮವಾಗಿ ಭಾಗವಹಿಸಿದ್ದು ಲಾಯರ್ ಆದ ಸುಮಾರು ಹತ್ತು ವರ್ಷದ ಮೇಲೆ. ೧೯೩೦ನೇ ಇಸ್ವಿ. ಅಷ್ಟೊಳಗಾಗಿ ನಾನು ಕಾಂಗ್ರೆಸ್ಸಿನ, ಮೈಸೂರು ಕಾಂಗ್ರೆಸ್ಸಿನ ಮುಖಂಡನಾಗಿದ್ದೆ, ಸಾಕಷ್ಟು ಪ್ರಚಾರ ಮಾಡಿದ್ದೆ. ಜನಗಳನ್ನು ಕಾಂಗ್ರೆಸ್ಸಿಗೆ ಸೇರಿದ್ದೆ. ಚಿತ್ರದುರ್ಗ ಡಿಸ್ಟ್ರಿಕ್ಟ್ ಕಾಂಗ್ರೆಸ್ ಸಾಕಷ್ಟು ಬಲವಾಗಿತ್ತು. ಅಲ್ಲಿ ೧೯೩೦ನೇ ಇಸ್ವಿಯಲ್ಲಿ ನಾವೇ ಪಾಸಿಟೀವ್ ಆಗಿ ಮುಂದಕ್ಕೋಗಿ ಕೆಲ್ಸ ಮಾಡ್ಬೇಕು, ಹಾಗಂತ್ಹೇಳಿ ಒಂದು ತೀರ್ಮಾನ ಚಿತ್ರುದುರ್ಗಾ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಮಾಡಿದ್ರು. ಎಸ್. ವಾಸುದೇವರಾವ್ ಅಂತ್ಹೇಳಿ ಇದ್ರು. ಅವ್ರು ನಮ್ಗೆಲ್ಲಾ ಒಂಥರಾ ಮುಖಂಡ್ರಾಗಿದ್ರು, ನನ್ನ ಸೆಕ್ರೆಟ್ರಿಯಾಗಿದ್ರು. ಅವ್ರು ನಾನು ಎಲ್ಲಾ ಸೇರ್ಕೊಂಡು ನಾವು ಸರ್ಕಾರದ ಕಾನೂನನ್ನು ಮುರಿದು ಹೋಗ್ಬೇಕು, ಸತ್ಯಾಗ್ರಹ ಮಾಡ್ಬೇಕು ಅಂತ ತೀರ್ಮಾನ ಮಾಡಿದ್ವು.

ನಾ : ನೀವು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸೋ ಹೊತ್ತಿಗೆ ನಿಮ್ಗೆ ಮದ್ವೆಯಾಗಿತ್ತಾ?

ನಿ : ಮದ್ವೆಯಾಗಿತ್ತಲ್ಲಾ.

ನಾ : ನೀವು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ್ರಿಂದ ನಿಮ್ಮ ವೈಯಕ್ತಿಕ ಅಥವಾ ಕೌಟುಂಬಿಕ ಜೀವನಕ್ಕೆ ತೊಂದ್ರೆ ಆಗ್ಲಿಲ್ವಾ?

ನಿ : ಆಗ ಕಷ್ಟ ಆಯ್ತು. ಎಷ್ಟು ಸುಖವಾಗಿದ್ರೋ ನನ್ನ ಸಂಸಾರ ಅಷ್ಟು ಕಷ್ಟಕ್ಕೊಳಗಾಗಬೇಕಾಗಿ ಬಂತು.

ನಾ : ಇದೆಲ್ಲದ್ರ ಬಗ್ಗೆ ನಿಮ್ಮ ಪತ್ನಿಯ ಪ್ರತಿಕ್ರಿಯೆ ಏನಿತ್ತು?

ನಿ : ನನ್ನ ಪತ್ನಿ ನನಗೆ ಗುರು ಇದ್ದಂಗೆ. ಒಂದ್ಹೇಳ್ತಿನಿ ಆಕೆ ವಿಚಾರ. ನನ್ನ ಅರೆಸ್ಟ್ ಮಾಡೋದಕ್ಕೆ ಪೋಲೀಸ್ನೋರ್ಗೆ ಧೈರ್ಯ ಬರ್ಲಿಲ್ಲ ಹಗಲೊತ್ತು. ಬೆಳಗ್ಗೆ ಸುಮಾರು ೪-೫ ಗಂಟೆಗೆ ಬಂದು ಬಾಗಿಲು ತಟ್ಟಿದರು. ನನಗೆ ಗೊತ್ತಿತ್ತು ಅರೆಸ್ಟ್ ಮಾಡ್ತಾರೆ ಅಂತ. ನನ್ನ ಹೆಂಡ್ತೀನ ಕೇಳ್ದೆ. ನೀನು, ನಿನ್ನ ಅತ್ತೆ, ನಿನ್ನ ಮಕ್ಳು ಬಹಳ ಸುಖವಾಗಿದ್ದೀರಿ, ಕಷ್ಟ ಇಲ್ಲ. ಆದ್ರೆ ಇವೊತ್ತು ನಾನು ದುಡ್ಡಿಟ್ಟಿಲ್ಲ. ಜೈಲ್ಗೋಗ್ತಿನಿ, ಕಷ್ಟಕ್ಕೊಳಗಾಗ್ಬೇಕಾಗ್ಬರ್ತದೆ. ನಿನ್ನ ಅಭಿಪ್ರಾಯ ಏನೂ ಅಂತ ಕೇಳ್ದೆ. ಆ ಮಹಾತಾಯಿ ಹೇಳಿದ್ಳು, ನೀವು ಗಾಂಧಿ ಪರೀಕ್ಷೆ ಕಟ್ಟಿದ್ದೀರಿ. ಅದ್ರಲ್ಲಿ ಪಾಸಾಗ್ಬೇಕೂಂತ. ಅದಕ್ಕಿಂತ ದೊಡ್ಡ ಆಶೀರ್ವಾದ ಏನ್ ಬೇಕಾಗಿತ್ತು ನನಗೆ...

ನಾ : ಸ್ವಾತಂತ್ರ್ಯ ಹೋರಾಟದಲ್ಲಿ ನೀವೂ, ಅನೇಕ ಜನ ಭಾಗವಹಿಸಿ ಸ್ವಾತಂತ್ರ್ಯ ತಂದ್ರಿ. ಇಷ್ಟು ದಿವಸ ಆದ್ಮೇಲೆ ಸುಮಾರು ೫೨-೫೩ ವರ್ಷ ಆಯ್ತು ಸ್ವಾತಂತ್ರ್ಯ ಬಂದು -

ನೀವು ಹಿರಿಯ ರಾಜಕಾರಣಿಯಾಗಿ ಅನೇಕ ರಾಜಕೀಯ ಹೋರಾಟದಲ್ಲಿ ಭಾಗವಹಿಸಿದ್ರಿ, ನಂತರ ಆಡಳಿತಗಾರರಾಗಿ - ಈಗ ಸ್ವತಂತ್ರ ಪ್ರಜೆಯಾಗಿ ನಿಂತು ನೋಡ್ದಾಗ ಸ್ವಾತಂತ್ರ್ಯ ಸಾರ್ಥಕ ಆಯ್ತು ಅಂತ ಅನ್ಸುತ್ತಾ ನಿಮ್ಗೆ?

ನಿ : ನೋಡಿ, ಒಂದ್ರೀತಿಯಲ್ಲಿ ಸ್ವತಂತ್ರರಾದ್ವು. ಬ್ರಿಟಿಷ್ ಸರ್ಕಾರ ಹೋಯ್ತು, ನಮ್ಮ ಸರ್ಕಾರ ನಮಗ್ಬಂತು. ನಾವೇ ನಮ್ಮ ಸರ್ಕಾರ ಮಾಡಿದ್ವಿ. ಆದ್ರೆ ಕಾಂಗ್ರೆಸ್ಸಿನ ಧೋರಣೆ ಏನಿತ್ತು? ಅದರ ತೀರ್ಮಾನಗಳೇನಿದ್ದು? ಏನ್ಮಾಡ್ಬೇಕೂ ಅಂತ್ಹೇಳಿ ಗಾಂಧಿಯವರ ಆಸೆ ಇತ್ತು? ಕಾಂಗ್ರೆಸ್ಸಿನ ಉದ್ದೇಶ ಏನು ಇತ್ತು, ಅದು ನೆರವೇರ್ಲಿಲ್ಲ. ಅದು ನೆರವೇರ್ಲಿಲ್ಲವಲ್ಲ ಅನ್ನೋ ದುಃಖ ನನಗೆ ಸಾಕಷ್ಟಿದೆ.

ನಾ : ನೀವು ಕರ್ನಾಟಕದ ಏಕೀಕರಣಕ್ಕೋಸ್ಕರ ಹೋರಾಡಿದ್ರಿ, ಅದರ ಮುಂದಾಳತ್ವ ವಹಿಸಿದ್ರಿ. ಕರ್ನಾಟಕ ಏಕೀಕರಣವಾಯ್ತು, ಕನ್ನಡ ನಾಡೆಲ್ಲ ಒಂದಾಯ್ತು. ಆದ್ರೂ ಕರ್ನಾಟಕದ ಕೆಲವು ಭಾಗಗಳು ಬಿಟ್ಹೋಗಿದ್ದು ಕರ್ನಾಟಕವನ್ನ ಅಂತ ಕೂಡ ದುಃಖ ಇದೆ. ಜೊತೆಗೆ ಇಷ್ಟು ವರ್ಷಗಳಾದ ನಂತರ ಮತ್ತೆ ಕರ್ನಾಟಕವನ್ನ ವಿಭಜಿಸುವ ಮಾತು ಕೂಡ ಕೇಳಿ ಬರ್ತಾ ಇದೆ. ಇದರ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ನಿ : ಇದಕ್ಕೆ ಕಾರಣ ಇಲ್ವೇ ಇಲ್ಲ. ವಿಭಜನೆ ಆಗ್ಬೇಕೂ ಅನ್ನೋದಕ್ಕೆ ಯಾವ ಸಕಾರಣವೂ ಇಲ್ಲ. ಸ್ವಾರ್ಥ, ಯಾರೋ ಕೆಲವರು ಜನಗಳು, ಮುಖಂಡ್ರೂ ತಮಗೆ ಸಾಕಷ್ಟು ಸ್ಥಿತಿ ಸಿಕ್ಕಲಿಲ್ಲಾ, ಸ್ಥಾನ ಸಿಕ್ಕಲಿಲ್ಲಾ ಅನ್ನೋ ಕಾರಣದಿಂದ ಅಂತ ಕಾಣುತ್ತೆ. ನನ್ನ ದೃಷ್ಟಿಯಲ್ಲಿ ಯಾರನ್ನು ನಿರ್ಲಕ್ಷ್ಯ ಮಾಡಿಲ್ಲ.

ನಾ : ಆದ್ರೆ ಪ್ರಾದೇಶಿಕ ಅಸಮಾನತೆ ತುಂಬಾ ಆಗಿದೆ, ಉತ್ತರ ಕರ್ನಾಟಕದಲ್ಲಿ ಜಾಸ್ತಿ ಅಭಿವೃದ್ಧಿ ಆಗಿಲ್ಲ, ಕೊಡಗಿನಲ್ಲಾಗಿಲ್ಲ ಅನ್ನೋ ಒಂದು ಕೂಗು ಕೇಳಿ ಬರ್ತಾ ಇದೆ.

ನಿ : ಅವರು ಹೇಳೋದಕ್ಕೆ ಕಾರಣವೇ ಇಲ್ಲ. ಏನಾಗ್ಬೇಕ್ಕಾಗಿತ್ತೂ ಅಂತ ಹೇಳ್ಲಿ.

ನಾ : ಉತ್ತರ ಕರ್ನಾಟಕದಲ್ಲಿ ನೀರಾವರಿ ಸೌಲಭ್ಯಗಳೇ ದೊರಕಿಲ್ಲ. ಕೃಷ್ಣಾ ಯೋಜನೆ ಇನ್ನೂ ಪೂರ್ತಿಗೊಂಡಿಲ್ಲ, ಹತ್ತಾರು ವರ್ಷಗಳಾದ್ರೂ ಕೂಡಾ.

ನಿ : ನೀರಾವರಿ ದೊರಕಿಲ್ಲ ಅಂತಕ್ಕಂಥ ಮಾತು ಶುದ್ಧ ಸುಳ್ಳು. ಅಪ್ಪಟ ಸುಳ್ಳು. ಅವರಿಗೆ ನೀರಾವರಿ ಸಾಕಷ್ಟು ನಾನೇ ಮಾಡ್ಸಿದ್ದೀನಿ. ನೀರಾವರಿ ನಿರ್ಲಕ್ಷ್ಯ ಮಾಡಿದೆ ಅಂತ್ಹೇಳ್ತಕ್ಕಂತ ಮಾತು ಶುದ್ಧ ಸುಳ್ಳು.

ನಾ : ನಿಮ್ಗೆ ತಿಳಿದಾಗ್ಲೆ ಕರ್ನಾಟಕವನ್ನು ಒಗ್ಗೂಡಿಸಿದ ಶಕ್ತಿಗಳಲ್ಲಿ ಕನ್ನಡ ಭಾಷೆ ಕೂಡ ಒಂದು. ನೀವೂ ಕೂಡ ಕನ್ನಡಾಭಿಮಾನಿ. ಆದ್ರೆ ಈ ಹೊತ್ತು ಕನ್ನಡದ ಸ್ಥಿತಿ ಏನಾಗಿದೆ ಅಂತಂದ್ರೆ, ಮನೆಯ ಒಳಗಡೆ ಕೂಡ ಕನ್ನಡ ಉಳಿಯದಂತೆ ಸ್ಥಿತಿ ಉಂಟಾಗಿದೆ. ಹಠ ಇರೋ ಕೆಲವರನ್ನ ಬಿಟ್ರೆ, ಎಲ್ಲಾ ತಮ್ಮ ಮಕ್ಕಳನ್ನ ಇಂಗ್ಲಿಷ್ ಶಿಕ್ಷಣ ಮಾಧ್ಯಮಕ್ಕೆ ಕಳ್ಸೋದ್ರಲ್ಲಿದ್ದಾರೆ. ಎಲ್ರೂ ತಮ್ಮನ್ನ, ತಮ್ಮ ಮಕ್ಕಳನ್ನ ವಿಶ್ವಪ್ರಜೆಗಳನ್ನಾಗಿ ಮಾಡೋ ಲಹರಿಯಲ್ಲಿದ್ದಾರೆ ಅನ್ಸುತ್ತೆ. ಇದು ಯಾಕಾಯ್ತೀರೀತಿ?

ನಿ : ನಮ್ಮಲ್ಲಿರ್ತಕ್ಕಂತ ಒಂದು ದೊಡ್ಡ ತಪ್ಪು - ವಿದ್ಯಾಭ್ಯಾಸ ಸರ್ಕಾರಿ ನೌಕರಿಗೋಸ್ಕರ ಅಂತ. ಜ್ಞಾನಾರ್ಜನೆ, ಜೀವನ ಹ್ಯಾಗ್ ನಡೆಸ್ಬೇಕೂ, ಒಂದು ವೃತ್ತಿ ಮಾಡ್ಬೇಕು ಅನ್ನೋದಿಲ್ಲ. ಸರ್ಕಾರಿ ನೌಕರಿ ಬೇಕು. ಸರ್ಕಾರಿ ನೌಕರಿ ಶೇ. ೧.೫ ಅಷ್ಟೇ ಇರೋದು. ಆದ್ರೂನೂ ಅದು ಒಂದು ಬಂದಿದೆ ಅದು- ಅದಕ್ಕೋಸ್ಕರ. ಇಂಗ್ಲಿಷ್ ಇಲ್ದೇ ಹೋದ್ರೆ ಸರ್ಕಾರಿ ನೌಕರಿ ಸಿಕ್ಕೋದಿಲ್ಲಲ್ಲಾ? ಅದಕ್ಕೋಸ್ಕರ ವ್ಯಾಮೋಹ ಜಾಸ್ತಿ ಆಗ್ತಾ ಇದೆ. ಇನ್ನೂ ಜಾಸ್ತಿಯಾಗ್ತಾ ಇದ್ಯೇ ಹೊರತು ಕಮ್ಮಿ ಆಗ್ತಾ ಇಲ್ಲ. ಬಹಳ ತಪ್ಪು ಇದು, ಅನ್ಯಾಯ.

ನಾ : ಇದನ್ನ ಹೇಗೆ ಸರಿಪಡಿಸಬಹುದು?

ನಿ : ಜನಗಳು ವಿಚಾರ ಮಾಡ್ಬೇಕು, ಜನಗಳಲ್ಲಿ ತಿಳುವಳಿಕೆ ತರ್ಬೇಕು. ಈಗೇನೋ ಒಂದ್ಮಾಡಿದಾರಲ್ಲ ೭ನೇ ತರಗತಿಯವರ್ಗೇನೋ ಕನ್ನಡದಲ್ಲೇ ಆಗ್ಬೇಕೂಂತ್ಹೇಳಿ. ಅದು ಒಳ್ಳೆ ಮೊದಲನೆ ಸ್ಟೆಪ್. ಅದರಂತೆ ಮುಂದೆ ನಡಕೊಂಡು ಹೋಗ್ಬೇಕು.

ನಾ : ಆದ್ರೆ ಸರ್ಕಾರದ ಪ್ರಯತ್ನ ಇದು. ಆದ್ರೆ ಇದ್ರ ಬಗ್ಗೆ ವಿರೋಧನೇ ಇದೆ ಬಹಳಷ್ಟು ಜನರಲ್ಲಿ.

ನಿ : ಜನಗಳಲ್ಲಿ ವಿರೋಧವಿದ್ರೆ ಆ ವಿರೋಧಕ್ಕೇನು ಬೆಲೆ ಕೊಡಬೇಕ್ಕಾದ್ದಿಲ್ಲ. ಸರ್ಕಾರ ಮಾಡಿರೋದು ಸರಿ. ಅದನ್ನೇ ಮುಂದವರಿಸ್ಕೊಂಡು ಹೋಗ್ಬೇಕು.

ನಾ : ಇದು ಒಂದ್ರೀತಿ ಬಿಕ್ಕಟ್ಟಾದ್ರೆ ಸಮಾಜದಲ್ಲಿವತ್ತು ಈ ಬಿಕ್ಕಟ್ಟು ತುಂಬಾ ಜಟಿಲ ಸ್ವರೂಪವನ್ನು ಪಡೀತಾ ಇರೋದು ಇನ್ನೂ ಹಲವಾರು ಕಾರಣಗಳಿಂದಾಗಿ, ಉದಾಹರಣೆಗೆ ಭ್ರಷ್ಟಾಚಾರ, ಜಾತೀಯತೆ, ಇವು ನಮ್ಮ ಸಮಾಜವನ್ನು ಕೊರೆದು ತಿಂತಾ ಇವೆ ಅನ್ತಾರಲ್ಲಾ?

ನಿ : ಹೌದು, ನಿಜ ತಿಂತಾ ಇದೆ, ಅದಕ್ಕೆ ಕಾರಣ ಸರ್ಕಾರಗಳು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು. ಯಾರ್ಯಾರ್ ತಪ್ಮಾಡ್ತಾರೋ ಅವರಿಗೆ ಶಿಕ್ಷೆ ಮಾಡ್ತಾ ಇಲ್ಲ. ವಿಚಾರಣೆಗಳನ್ನೇ ವರ್ಷಗಟ್ಟಳೆ ನಡಿಸ್ತಾರೆ, ಹೀಗಾದ್ರೆ ಹೇಗೆ?

ನಾ : ಅಲ್ಲಾ ಇದಕ್ಕೆ ಕಾರಣ ಏನು ಅನ್ಸುತ್ತೆ? ನಿಮ್ಮ ಕಾಲದಲ್ಲಿ ಇಷ್ಟೊಂದು ಭ್ರಷ್ಟಾಚಾರ, ಜಾತೀಯತೆ ಇತ್ತಾ?

ನಿ : ಇಷ್ಟೊಂದು ಜಾತೀಯತೆ ಇರ್ಲಿಲ್ಲ. ಕಾರಣ ಏನೂಂದ್ರೆ ಜಾತೀಯತೆ ಹೊಲಸಿಗೋಸ್ಕರ ಉಪಯೋಗವಾಗ್ತಾ ಇದೆ. ವಾತಾವರಣದಲ್ಲಿ ಹಾಗ್ಬಂದಿದೆ.

ನಾ : ಆದ್ರೆ ಈ ಭ್ರಷ್ಟಾಚಾರ ಮತ್ತು ಜಾತೀಯತೆಗೆ ಕಾರಣ ಹುಡುಕ್ತಾ ಹೋದ್ರೆ - ಇದ್ದಕ್ಕಿದಂಗೆ ಆರಂಭವಾದುದ್ದಲ್ಲ. ಬಹಳ ಹಿಂದಿನಿಂದ್ಲೇ ಇದೆ. ನೆಹರೂ ಕಾಲದಲ್ಲೂ ಕೂಡ ಭ್ರಷ್ಟಾಚಾರ ಇತ್ತು. ಅವ್ರು ಸಹಿಸ್ತಾ ಇದ್ರು ಅದನ್ನ. ನಿಮ್ಮ ಕಾಲದಲ್ಲೂ ಭ್ರಷ್ಟಾಚಾರ ಇತ್ತು. ನೀವೂ ಕೂಡ ಅದನ್ನ ಸಹಿಸ್ತಾ ಇದ್ರಿ - ಅನ್ನೋ ಒಂದು ಟೀಕೆ ಕೂಡ ಇದೆ.

ನಿ : ಭ್ರಷ್ಟಾಚಾರ ನಾನು ಸಹಿಸ್ಲೂ ಇಲ್ಲ, ಜನ ತಿಳ್ಕೊಂಡಿರೋ ಅಷ್ಟು ಭ್ರಷ್ಟಾಚಾರ ನನ್ನ ಕಾಲ್ದಲ್ಲಿ ಇರ್ಲಿಲ್ಲ. ಶ್ರೀರಾಮನ ಕಾಲದಿಂದ್ಲೂ ಭ್ರಷ್ಟಾಚಾರ ಇತ್ತು. ಇಲ್ಲಾಂತ ಹೇಳೋಕಾಗೋದಿಲ್ಲ. ಅಂದ್ರೆ ಎಷ್ಟೋ - ಬಹಳ ಕಡಿಮೆ ಇತ್ತು.

ನಾ : ಜಾತೀಯತೆ, ಭ್ರಷ್ಟಾಚಾರ ಹಿಂದೆ ಇತ್ತು. ಆದ್ರೆ ಈ ಭ್ರಷ್ಟಾಚಾರ ಜಾತೀಯತೆಯನ್ನ ಗುಟ್ಟಲ್ಲಿ ಮಾಡ್ತಾ ಇದ್ರು. ಈವೊತ್ತು ಬಹಿರಂಗವಾಗಿ ಅದೊಂದು ಸಿದ್ಧಾಂತವೇ ಆಗ್ಹೋಗ್ಬಿಟ್ಟಿದೆ. ಭ್ರಷ್ಟಾಚಾರಿಗಳು ಯಾರಲ್ಲ ಅಂತ ಕೇಳ್ತಾರೆ, ಜಾತೀಯತೆ ಯಾರು ಮಾಡಲ್ಲ ಅಂತ ಕೇಳ್ತಾರೆ. ಆದ್ರೆ ನಿಮ್ಮ ಕಾಲದಲ್ಲಿ ನೀವು ಜಾತೀಯತೆಯನ್ನು ಪ್ರೋತ್ಸಾಹಿಸಲಿಲ್ವಾ?

ನಿ : ನಾನು ಹೇಳಿದ್ನಲ್ಲಾ ಜಾತೀಯತೆಗೆ ನಾನು ಯಾವ ಪ್ರೋತ್ಸಾಹವನ್ನೂ ಕೊಡ್ಲಿಲ್ಲ. ಅವರೇನಾದ್ರು ಹೇಳಿದ್ರೆ ತೋರಿಸ್ಕೊಡಲಿ. ಅದು ಮೂರ್ಖತನ, ಸುಳ್ಳು. ನನ್ನ ಕಾಲದಲ್ಲಿ ಅದು ಬೇಳೀಲಿಲ್ಲ. ಅದು ಸರಿ, ಆದ್ರೆ ಈಚೆಗೆ ಬೆಳಿತಾ ಇದೆ.

ನಾ : ಈವೊತ್ತಿನ ರಾಜಕಾರಣಿಗಳಲ್ಲಿ ಎದ್ದು ಕಾಣುವಂತಹ ಕೊರತೆಗಳಾವುವು ನಿಮ್ಮ ಪ್ರಕಾರ?

ನಿ : ಎದ್ದು ಕಾಣೋ ಕೊರತೆ, ಭ್ರಷ್ಟಚಾರ, ಲಂಚಗುಳಿತನ. ಆ ಲಂಚಗುಳಿತನ ಯಾವಾಗ ಮನುಷ್ಯರಲ್ಲಿ ಬಂತೋ ಬಾಕಿ ಭ್ರಷ್ಟತೆಗಳು ಅದ್ರ ಹಿಂದೇ ಬರ್ತದೆ.

ನಾ : ಆದ್ರೆ ಅಂಥ ಜನವನ್ನೇ ಜನ ಆಯ್ಕೆ ಮಾಡ್ತಾರಲ್ಲಾ. ಇದು ಜನತೆಯ ತಪ್ಪಲ್ವಾ?

ನಿ : ಜಾತಿ ನೋಡಿ ಮಾಡ್ತಾರೆ, ಜನ ಓಟು ಮಾಡೋದು ಜಾತಿ ಮೇಲೆ, ಆ ಜಾತೀಯತೆ ಬೆಳೆದ್ಹೋಗಿದೆ, ಈ ಜಾತೀಯತೆ ಹೋಗ್ಬೇಕು.

ನಾ : ಈ ಜಾತಿ ಪದ್ಧತಿ ಹೋಗ್ಬೇಕಾದ್ರೆ ಏನ್ ಮಾಡ್ಬೇಕು ಅನ್ಸುತ್ತೆ?

ನಿ : ಇದು ಬಹಳ ದೊಡ್ಡ ಪ್ರಶ್ನೆ. ಇದಕ್ಕೆ ನಾನಾ ಕಾರಣಗಳಿವೆ. ಅದು ಹೋಗ್ಬೇಕಾದ್ರೆ ಮೊಟ್ಟ ಮೊದಲು ಜನಗಳು ವಿದ್ಯಾವಂತರಾಗ್ಬೇಕು.

ನಾ : ಎಂಥಾ ವಿದ್ಯೆ ಬೇಕು ? ವಿದ್ಯಾವಂತರಾಗ್ತಾ ಇದ್ದಾರೆ. ಈಗ ಬಹಳಷ್ಟು ಜನ ಎಲ್ಲಾ ಜಾತಿಗಳಲ್ಲೂ M.A. M.Sc., Ph.D. ಗಳು ಇದ್ದಾರೆ.

ನಿ : ಸರ್ಕಾರಿ ಕೆಲಸಕ್ಕೆ ಸೇರಿದ ವಿದ್ಯಾವಂತರಲ್ಲ. ವಿದ್ಯಾಭ್ಯಾಸದ ಕ್ರಮವೇ ಬದಲಾವಣೆಯಾಗ್ಬೇಕು. ಮನುಷ್ಯತ್ವ ಬೆಳೀಬೇಕು, ಪ್ರಾಮಾಣಿಕನಾಗಿ ಬಾಳ್ಬೇಕು, ಯೋಗ್ಯ ನಾಗರೀಕನಾಗ್ಬೇಕು ಅನ್ನೋದು ಆ ವಿದ್ಯಾಭ್ಯಾಸದ ಕ್ರಮದಲ್ಲಿರಬೇಕು.

ನಾ : ಎಲ್ಲಾ ಈ ರೀತಿ ಮಾತಾಡ್ತಿದ್ದಾರ್‍ಯೇ ಹೊರತು, ಇಂಥಾ ವಿದ್ಯಾಭ್ಯಾಸದ ಪದ್ಧತಿಯನ್ನ ಜಾರಿಗೆ ತರೋಕಡೆ ಗಮನವೇ ಕೊಡ್ತಾ ಇಲ್ವಲ್ಲ.

ನಿ : ಬಸವಣ್ಣೋರು ಹೇಳಿದ್ದಾರೆ - ಕಾಯಕ, ದಾಸೋಹ. ಕಾಯಕ ಅಂದ್ರೆ ನೀನು ಮತ್ತೊಬ್ಬರ ಮೇಲೆ ಅವಲಂಬಿಸಿ, ದುಡಿದೇನೇ ಜೀವನ ನಡೆಸ್ಬೇಡ. ದುಡಿದು ಜೀವ್ನ ನಡೆಸು. ಕಾಯಕ ಮಾಡು. ನೀನು ದುಡಿದದ್ದರ ಮೇಲೆ ನೀನಿರು, ದುಡಿದದ್ದರಲ್ಲಿ ಸ್ವಲ್ಪ ಕೊಡು ದೇಶಕ್ಕೆ ಸಮಾಜಕ್ಕೆ, ಅದು ದಾಸೋಹ. ಇದು ಬರ್ಬೇಕು. ವಿದ್ಯಾಭ್ಯಾಸದ ಕ್ರಮದಲ್ಲಿ ಬರ್ಬೇಕದು. ನಾನು ಮತ್ತೊಬ್ಬರ ಜೀವನದಲ್ಲಿ ಕೈ ಹಾಕ್ಬಾರ್ದು; ಮೋಸ ಮಾಡ್ಬಾರ್ದು : Exploitation, religious exploitation ಹೋಗ್ಬೇಕು.

ನಾ : ಬಸವಣ್ಣನ ಬಗ್ಗೆ ಇದೆಲ್ಲಾ ಹೇಳ್ತೀರಾ ನಿಜ. ನೀವು ಒಂದ್ಕಡೆ ಹೇಳಿದ್ರಿ ಬಹಳ ವರ್ಷಗಳ ಹಿಂದೆ, ನಮ್ಗೆ ಕುದುರೆ ಮೇಲೆ ಕೂತ ಬಸವಣ್ಣ ಬೇಕಾಗಿಲ್ಲಾ ಅಂತ. ಆದ್ರೆ ಬಸವಣ್ಣಾ ಈ ಹೊತ್ತು ಎಲ್ಲರ ಒಂದು ಆದರ್ಶದ ಬದಲಾಗಿ ಯಾವುದೋ ಒಂದು ಜಾತಿ ನಾಯಕನಾಗಿ ಬೆಳಿತಾ ಇದ್ದಾನೆ, ಅನ್ನಿಸೋದಿಲ್ವಾ ನಿಮಗೆ?

ನಿ : ಈ ಮಾತು, ನೀವು ಹೇಳೋ ಮಾತನ್ನು ಅಂಬೇಡ್ಕರ್ ಹೇಳ್ತಾ ಇದ್ರು ನನಗೆ. ಬಸವೇಶ್ವರನಂತಾ **social reformer** ಹುಟ್ಟಿಲ್ಲ ಅಂತ. ಸೊಸೈಟಿ ಹೆಂಗಿರ್ಬೇಕೂ, ಜನ ಹೆಂಗಿರ್ಬೇಕು, ಸಮಾಜ ಹ್ಯಾಗಿರ್ಬೇಕು ಅನ್ನೋದರ ಸ್ಪಷ್ಟವಾದ ಅಭಿಪ್ರಾಯ ಆತನಿಗಿತ್ತು. ಅದನ್ನ ನೀವು ಜೇಬಲ್ಲಿಟ್ಗಂಡಿದ್ದೀರಿ, ಬಸವ ತತ್ತ್ವಗಳನ್ನ, ನಿಮ್ಮ ಜನ ಅನುಷ್ಠಾನ ಮಾಡ್ತಿಲ್ಲ ಅಂತ, ಆ ಮಾತು-ನಂಬ್ತಿನದನ್ನ. ನಮ್ಮ ವಿದ್ಯಾಭ್ಯಾಸದಲ್ಲಿ ದುಡಿದು ತಿನ್ನತಕ್ಕಂತದ್ದು ಮೊದಲಿಂದಲೂ ಮಕ್ಕಳಲ್ಲಿ ಬರ್ಬೇಕದು, ಅದು ಬರ್ತಾ ಇಲ್ಲ. ಬರೀ ಸರ್ಕಾರಿ ಕಾನೂನು ಪಾಸ್ ಮಾಡೋದೆಷ್ಟೋ ಅಷ್ಟೆ. ಅದು ಹೀಗಾಗಿದೆ.

ನಾ : ಈವೊತ್ತು ಒಂದು ಜಾತಿಯ ಮೇಲ್ಮೆಯನ್ನು ಒಂದು ಸೀಮಿತ ಜನವರ್ಗದ ಒಂದು ಗರಿಮೆಯನ್ನ ಎತ್ತಿ ಹಿಡಿಯೋಕೆ ಒಂದು ಸಂಕೇತವಾಗ್ಬಿಟ್ಟಿದ್ದಾನೆ ಬಸವಣ್ಣ ಅನ್ನೋ ಟೀಕೆ ಇದೆಯಲ್ಲಾ?

ನಿ : ಸಾಕಷ್ಟು ಪ್ರಚಾರನೇ ನಡೆದಿಲ್ಲ. ಲಿಂಗಾಯಿತರೇನ್ ತಿಳ್ಕಂಡಿದ್ದಾರೆ ಅವ್ರು ನಮ್ಮವರು ಅಂತ. ಬಸವಣ್ಣ ಲಿಂಗಾಯಿತರವನಲ್ಲ, ಬಸವಣ್ಣೋರು ಎಲ್ಲಾ ಜಾತಿಗೂ ಸೇರಿದವರೇ. ಅವರಿಗೆ ಜಾತಿ ಇರ್ಲಿಲ್ಲ. ಆದ್ರಿಂದ ತತ್ತ್ವದ ಮೇಲೆ ಸಮಾಜ ಕಟ್ಬೇಕು ಅಂತ ಇದ್ದಿದ್ದು. ಲಿಂಗಾಯಿತರು ನಮ್ಮವರೇ ಅವ್ರು ಅಂತ ಹೆಮ್ಮೆ ಪಟ್ಕೋತಾರೆ. ಅದಕ್ಕೇನು ಕಾರಣ ಇಲ್ಲ, ಬಸವತತ್ತ್ವ ಅಂದ್ರೆ ನೀನು ಈ ದೇಶದ ನಾಗರೀಕನಾಗಿ ದುಡಿದು ತಿನ್ನು, ಕಷ್ಟಪಟ್ಟು ದುಡಿ. ಅದರ ಮುಖಾಂತರ ನೀನಿರಬೇಕೇ ಹೊರತು ಮತ್ತೊಬ್ಬರಿಗೆ ಮೋಸ ಮಾಡಿಯೋ, ಇನ್ಯಾವುದರ ಮೂಲಕವೋ ಅಲ್ಲ, ಅನ್ನೋ ತತ್ತ್ವ ಬರ್ಬೇಕು.

ನಾ : ಈ ಎಲ್ಲ ಬಿಕ್ಕಟ್ಟಿಗೆ ನಮ್ಮ ಜೀವನದಲ್ಲಿ ಧರ್ಮದ ಪಾತ್ರ, ಧಾರ್ಮಿಕ ಭಾವನೆ ಕಡಿಮೆ ಆಗ್ತಾ ಇರೋದು ಕಾರಣವಾಗಿರಬಹುದಾ?

ನಿ : ಹೌದೌದು, ಕಡಿಮೆ ಆಗ್ತಾ ಇದೆ. ಅದಕ್ಕೆ ನಾನ್ಹೇಳಿದ್ದು ದುಡಿದು ತಿನ್ನು ಅನ್ನೋದ್ರಲ್ಲಿ ಇವೆಲ್ಲ ಸೇರಿವೆ.

ನಾ : ಈಗ ಧರ್ಮ ಮತ್ತು ಕೋಮುವಾದಕ್ಕಿರೋ ವ್ಯತ್ಯಾಸ ಏನು, ನಿಮ್ಮ ಪ್ರಕಾರ?

ನಿ : ಕೋಮುವಾದ ಹೊಲಸು ಕೆಲಸ. ನನ್ನ ಜಾತಿನೇ ಹೆಚ್ಚು, ನನ್ನ ಜಾತಿಗೆ ನಾನು ಸಹಾಯ ಮಾಡ್ಬೇಕು ಅನ್ನತಕ್ಕಂತಾದ್ದಿದಿಯಲ್ಲಾ ಅದು ಅಧರ್ಮ, ಅದು ಅನ್ಯಾಯ, ಅದು ಆಗ್ಬಾರ್ದು. ಅದು ಧರ್ಮ ಅಲ್ಲ. ಧರ್ಮ ಅಂದ್ರೆ ಮನುಷ್ಯ ಯೋಗ್ಯ ರೀತಿಯಲ್ಲಿ ಪ್ರಾಮಾಣಿಕ ನಾಗಿ ದುಡಿದು ತಿನ್ನತಕ್ಕಂತಾದ್ದು. ಆ ಧರ್ಮದ ಕಡೆ ಹೆಚ್ಚು ಗಮನ ಕೊಡ್ಬೇಕು. ಅದು ಧರ್ಮವೇ ಹೊರತು, ಜಾತಿ ಧರ್ಮ ಅಲ್ಲ.

ನಾ : ನಿಮಗೆ ದೇವರಲ್ಲಿ ನಂಬಿಕೆ ಇದ್ಯಾ?

ನಿ : ಹಾಂ! ನಂಬಿಕೆ ಇದೆ.

ನಾ : ನಿಮ್ಮ ಪ್ರಕಾರ ದೇವರು ಅಂದ್ರೆ?

ನಿ : (ನಕ್ಕು) ದೇವರಲ್ಲಿ ನನಗೆ ಭಕ್ತಿಯೇ ಇಲ್ಲ. ಯಾವ ದೇವರು -ಈಶ್ವರ ಅದೂ ಇದು, ವಿಘ್ನೇಶ್ವರನಂತೆ, ಅದಂತೆ - ಗುಡಿಗಳಲ್ಲಿಟ್ಟಿರ್ತಾರಲ್ಲಾ ಅದ್ರಲ್ಲಿ ಏನೂ ನನಗೆ ನಂಬಿಕೆ ಇಲ್ಲ. ನನ್ನ ದೇವರು Universe. ಕನ್ನಡದಲ್ಲಿ ಏನ್ ಹೇಳ್ತೀರಿ ಅದಕ್ಕೆ...

ನಾ : ವಿಶ್ವಶಕ್ತಿ

ನಿ : ವಿಶ್ವ, ವಿಶ್ವಶಕ್ತಿಯಲ್ಲಿ ನನಗೆ ತುಂಬಾ ನಂಬಿಕೆ ಉಂಟು. ನಾನು ಅದರ ಭಾಗ. ಅದು ನನ್ನ ಭಾಗ. ಅದರಲ್ಲಿ ನಂಬಿಕೆ ಇದೆ ಹೊರತು ಯಾವ ದೇವರಲ್ಲೂ ನನಗೆ ನಂಬಿಕೆ ಇಲ್ಲ. ನಾನ್ಯಾವ ದೇವರನ್ನು ಪೂಜೆ ಮಾಡೋದು ಇಲ್ಲ.

ನಾ : ನಿಜಲಿಂಗಪ್ಪಾವ್ರೆ, ಇತ್ತೀಚಿನ ರಾಜಕಾರಣಿಗಳ ಜೀವನ ಶೈಲಿಯನ್ನು ನೋಡ್ದಾಗ ಮತ್ತು ನೀವು ಈಗ ಬಾಳ್ತಿರ್ತಕ್ಕಂತ ರೀತಿ, ಸರಳ ರೀತಿಯನ್ನ ನೋಡ್ದಾಗ ಆಶ್ಚರ್ಯ ಆಗ್ತಿದೆ. ನಿಮ್ಮ ರಾಜಕಾರಣ ಜೀವನದಲ್ಲಿ ನೀವೇನ್ ದುಡಿಮೆ ಮಾಡ್ಲಿಲ್ವಾ?

ನಿ : ಜೀವನದಲ್ಲಿ ದುಡಿಮೆ ಮಾಡೋಕೆ ರಾಜಕೀಯಕ್ಕೆ ಹೋಗಿಲ್ಲ, ಮುಖ್ಯಮಂತ್ರಿನೂ ಆಗ್ಲಿಲ್ಲ, ಏನೂ ಆಗ್ಲಿಲ್ಲ. ಜನಗಳ ಸೇವೆ ಮಾಡ್ಬೇಕು, ನನ್ ರಾಜ್ಯಕ್ಕೆ ಏನ್ಮಾಡ್ಬೇಕು - ಅದ್ರಲ್ಲೂನೂ ಹಳ್ಳಿ ಜನಗಳಿಗೆ ಏನ್ಮಾಡ್ಬೇಕು ಅನ್ನೋ ಉದ್ದೇಶವಿತ್ತೇ ಹೊರತು, ನನಗೋಸ್ಕರ ನಾನು ಇದ್ದೀನಿ ಅಂತ ಎಂದೂ ತಿಳ್ಕೊಳ್ಳಿಲ್ಲ.

ನಾ : ದುಡ್ಡು ಮಾಡಿಲ್ವ?

ನಿ : (ನಗು) ಮುಖ್ಯಮಂತ್ರಿಯಾದಾಗ ೧೦,೦೦೦ ರೂ. ಇತ್ತು ಬ್ಯಾಂಕಿನಲ್ಲಿ. ನಾನು ವಾಪಾಸ್ ಬಂದಾಗ ೮,೦೦೦ ರೂ. ಇತ್ತು.

ನಾ : ಆದ್ರೆ ಒಂದ್ಕಾಲ್ದಲ್ಲಿ. ನೀವು ಬಹಳ ದುಡ್ಡು ಮಾಡಿದ್ದೀರಾ ಅಂತ ಆಪಾದ್ನೇಗಳನ್ನ ಮಾಡಿದ್ರು ಜನ.

ನಿ : ಈಗ್ಮಾಡ್ತಾ ಇಲ್ಲ ಅಂತ ಕಾಣ್ತಾದೆ... ಅದೂ ಯಾರೂ... ಒಬ್ಬ ಮನುಷ್ಯ... ಅವನ್ನ ಮಂತ್ರಿಯಾಗಿ ತಗೊಳ್ಳಿಲ್ಲ. ಸುಳ್ಳು ಕಥೆಗಳನ್ನ ಹುಟ್ಟಿಸ್ದ ಅವ್ನು, ಅಷ್ಟೆ. ಒಬ್ಬ ಮನುಷ್ಯ ಇದಕ್ಕೆಲ್ಲ ಕಾರಣ.

ನಾ : ಆಗ ನಿಮಗೆ ತುಂಬಾ ದುಃಖ ಆಗ್ತಿತ್ತಾ?

ನಿ : ದುಃಖ ಏನಾಗ್ಲಿಲ್ಲ, ಬೇಜಾರಾಗಿತ್ತು ಅಷ್ಟೆ. ಯಾಕಿಂಗ್ಮಾಡ್ತಾರೆ ಜನ ಅಂತ.

ನಾ : ಆದ್ರು ಸ್ವಲ್ಪ ಕಾಲಕ್ಕೆ ನಂಬಿದ್ರು ಕೂಡ ಜನ ಅದನ್ನ.

ನಿ : ಯಾರ್ದಾದ್ರು ಒಬ್ಬ ಮನುಷ್ಯನ ವಿಚಾರವಾಗಿ ವಿರೋಧವಾದ್ದು, ಆಕ್ಷೇಪಣೀಯವಾದ್ದು ಬಂದಾಗ ಜನ ಅದನ್ನ ನಂಬ್ತಾರೆ. ಒಳ್ಳೆ ವಿಚಾರ ಬಂದಾಗ ಅದನ್ನ ನಂಬಿದರೆ ನಂಬಿದ್ರು, ಬಿಟ್ರೆ ಬಿಟ್ರು ಅದಕ್ಕಷ್ಟು ಪ್ರಾಮುಖ್ಯತೆ ಕೊಡೋದಿಲ್ಲ. ಏನೋ ಒಂಥರಾ ಸಂತೋಷ,

ಮತ್ತೊಬ್ಬರ ವಿಚಾರ ಕೆಟ್ಟದ್ದ ಕೇಳ್ದಾಗ ಒಂಥರಾ ಸಂತೋಷ, ಅಷ್ಟೆ, ಅದನ್ ನಂಬ್ತಾರೆ.

ನಾ : ನೀವು ಅಧಿಕಾರದಲ್ಲಿದ್ದಾಗ, ಮುಖ್ಯಮಂತ್ರಿಯಾಗಿದ್ದಾಗಿರಬಹುದು ಅಥವಾ ಬೇರೆ ಅಧಿಕಾರ ಸ್ಥಾನದಲ್ಲಿದ್ದಾಗಿರಬಹುದು, ನಿಮಗೆ ಆಮಿಷ ಒಡ್ಡಿದ್ದುಂಟಾ? ಹಣದ ಆಮಿಷ ಅಥವಾ ಬೇರೆ ದೌರ್ಬಲ್ಯಗಳನ್ನ...?

ನಿ : ಎಂದೆಂದೂ ಆ ವಿಚಾರನೇ ನನ್ ತಲೆಗ್ಹೋಗ್ತಿರ್ಲಿಲ್ಲ. ಇನ್ನೂ ಒಂದ್ಹೇಳ್ಬೇಕು, ಯಾರೂ ನನ್ನ ಹತ್ರ ಬಂದು ದುಡ್ಡು ತಗೊಳ್ಳಿ ಅಂತ ಬಂದು - ಅಲ್ಲಿ ಹದಿನೈದು ಲಕ್ಷದ ವಿನಃ - ಎಂದೆಂದೂ ನಾನು ಮುಖ್ಯಮಂತ್ರಿಯಾಗಿದ್ದಾಗ ದುಡ್ಡು ತಗೊಳ್ಳಿ ಅಂತ ಬರ್ಲೂ ಇಲ್ಲ. ಬಹುಶಃ ಅವರಿಗೆ ಭಯ ಇತ್ತೂ ಅಂಥ ಕಾಣ್ತದೆ, ಯಾರೂ ನನಗೆ ದುಡ್ಡಿನಾಸೆ ತೋರಿಸ್ಲಿಲ್ಲಾ.

ನಾ : ಆ ಹದಿನೈದು ಲಕ್ಷದ ಪ್ರಸಂಗ ಅಂದ್ರಲ್ಲ, ಅದರ ಬಗ್ಗೆ ಹೇಳಿ.

ನಿ : ಅದು ನಾನು ಪಾರ್ಲಿಮೆಂಟ್ ಮೆಂಬರಾಗಿದ್ದೆ. ಸಾಕಷ್ಟು ಇನ್‌ಫ್ಲೂಯೆನ್ಸ್ ಇತ್ತು. ಎಲ್ಲರೂ ಗೊತ್ತಿದ್ರು ಎಲ್ಲಾ ಇತ್ತು. ಆದ್ರಿಂದ ನಾನ್ಹೇಳಿದ್ರೆ ಕೆಲ್ಸ ಆಗುತ್ತೆ ಅಂತ ತಿಳ್ಕೊಂಡಿದ್ರು. ನನಗೆ ಅತ್ಯಂತ ಬಹಳ ಹತ್ತಿರದ ಸ್ನೇಹಿತ. ಅವ್ನು ಒಬ್ಬ ಕೋಲ್ ಮೈನ್ಸ್ ಕಂಟ್ರ್ಯಾಕ್ಟರನ್ನು ಕರ್ಕೊಂಡ್ ಬಂದ. ಹದಿನೈದು ಲಕ್ಷ ರೂಪಾಯಿ ಇಟ್ಟ. ಬಂದು ಇಟ್ಟು ಈತನಿಗೆ ಮುಂದಕ್ಕೆ ಕಂಟಿನ್ಯೂ ಆಗ್ಬೇಕು, ಕೋಲ್ ಮೈನ್ಸ್ ಲೈಸೆನ್ಸ್, ಮಾಡಿಸ್ಕೊಡಿ ಅಂತ ಇಟ್ಟ. ಅದನ್ನ ವಾಪಾಸ್ಕೊಟ್ಟೆ, ಇನ್ಮೇಲ್ ನನ್ನತ್ರ ಬರ್ಬೇಡ ಅಂತ್ಹೇಳಿ, ನನಗೆ ಬಹಳ ಬೇಕಾದ ಸ್ನೇಹಿತ. ಇನ್ಮೇಲೆ ಬರ್ಬೇಡ ಅಂತ ಹೇಳ್ದೆ.

ನಾ : ಆ ಹದಿನೈದು ಲಕ್ಷ ರೂಪಾಯಿಗಳನ್ನ ನಿಮ್ಮ ಮುಂದೆ ಇಟ್ಟಾಗ ನಿಮ್ಮ ಮನಸ್ಸು ಒಂದು ಕ್ಷಣವೂ ಅಲುಗಾಡ್ಲಿಲ್ವಾ?

ನಿ : ಏನೇನೂ ಆಗಿಲ್ಲ, ನನಗೆ ನಿಕೃಷ್ಟ ಆಯ್ತು. ಬೇಜಾರ್ ಬಂತು. ಅವನ್ಮೇಲೆ ಸಿಟ್ಟು ಬಂತು, ನನ್ನ ಸ್ನೇಹಿತನ ಮೇಲೆ. ಬಹಳ ನನಗೆ ಬೇಕಾದ ಸ್ನೇಹಿತ. ಆಮೇಲೆ ಅವನ್ನ ಕರ್ದು ಮಾತಾಡ್ಲಿಲ್ಲ. ಯಾಕೆ, ನನ್ನ ಮನಸ್ಸಿಗೆ ಬೇಜಾರಯ್ತು ಅಷ್ಟೆ. ಅದನ್ನೋಡಿ.

ನಾ : ತಾವು ತಮ್ಮ ಮಕ್ಕಳನ್ನು ರಾಜಕಾರಣಕ್ಕೆ ತರಲಿಲ್ಲ, ಇತ್ತೀಚಿನ ತಲೆಮಾರುಗಳಲ್ಲಂತೂ ಎಲ್ಲಾ ರಾಜಕಾರಣಿಗಳು ಮಕ್ಕಳನ್ನು ರಾಜಕೀಯಕ್ಕೆ ತರ್ತಾ ಇದ್ದಾರೆ. ನೀವ್ಯಾಕೆ ತರ್ಲಿಲ್ಲ?

ನಿ : ನಾನು ತಂದಿಲ್ಲ, ಯಾಕೆಂದ್ರೆ ನನ್ನ ಮಕ್ಳೂ ತಪ್ಪು ದಾರಿಯಿಂದ ದುಡಿದು ದೊಡ್ಡೋರಾಗ್ಬೇಕೂ ಅನ್ನೋ ಮಾತಿರ್ಲಿಲ್ಲ. ಅವರಿಗೆ ವಿದ್ಯಾಭ್ಯಾಸ ಮಾಡಿಸ್ದೆ, ಸರ್ಕಾರಿ ನೌಕರಿಗೆ ಇಬ್ಬರು ಸೇರಿದ್ರು, ಒಬ್ಬನು ವ್ಯವಸಾಯ ಮಾಡ್ದ. ಚೆನ್ನಾಗಿ ಕೆಲ್ಸ ಮಾಡ್ತಾ ಇದ್ದಾರೆ. ಅವ್ರು ನಮ್ಮ ಕಷ್ಟ ನೋಡಿ ರಾಜಕಾರಣಕ್ಕೆ ಹೋಗಬಾರ್ದು ಅಂತ್ಹೇಳಿ ತೀರ್ಮಾನ ಮಾಡಿದ್ರು.

ನಾ : ನಿಮ್ಮ ಕಾಲದಲ್ಲಿ ರಾಜಕಾರಣ ಕಷ್ಟವಾಗಿತ್ತಾ?

ನಿ : ಕಷ್ಟವಾಗಿತ್ತು, ಯಾರೂ ಹೋಗ್ತಿರ್ಲಿಲ್ಲ. ನನ್ನ ಮಕ್ಳೂ ಹೋಗ್ಲಿಲ್ಲ. ಅವರೇನೋ

ಅವರವ್ರೇ ದುಡ್ಕೋಳೋದಿಕ್ಕೆ ಮಾರ್ಗನಾ ಮಾಡ್ಕೊಂಡ್ಹೋದ್ರು. ಅವರಿಗೆ ರಾಜಕಾರಣಕ್ಕೆ ಬರ್‍ರಿ ಅಂತ ನಾನೆಂದೂ ಕರೀಲಿಲ್ಲ.

ನಾ : ನಿಮ್ಮ ಮಕ್ಕಳು ಎಂದಾದರೂ ನಿಮ್ಮನ್ನ ದೂರಿದಾರಾ, ನಮ್ಮನ್ನ ರಾಜಕಾರಣಕ್ಕೆ ತರ್‍ಲಿಲ್ಲಾಂತ.

ನಿ : ಇಲ್ಲ, ದೂರಿಲ್ಲ. ಅಷ್ಟೇ ಅಲ್ಲ, ಸದ್ಯ ನಾನು ಅಡ್ಡಿ ಬರ್‍ಲಿಲ್ವಲ್ಲಾ ಅಂತ ರಾಜಕಾರಣಕ್ಕೆ ಕರೀಲಿಲ್ವಲ್ಲಾಂತ ಅವರಿಗೆ ಸಂತೋಷ.

ನಾ : ನಿಮ್ಮ ಪತ್ನಿಯವರು ರಾಜಕಾರಣದಲ್ಲೇನಾದ್ರು ಆಸಕ್ತಿ ವಹಿಸ್ತಾ ಇದ್ರಾ?

ನಿ : ಏನೇನೇನೂ ಎಂದೆಂದು ಪ್ರವೇಶ ಮಾಡ್ಲಿಲ್ಲ. ಯಾರೂ ಅವ್ರಹತ್ರ ಹೋಗ್ತಾನೂ ಇರ್‍ಲಿಲ್ಲ.

ನಾ : ನಿಮ್ಮ ರಾಜಕೀಯ ಜೀವನದಲ್ಲಿ ನಿಮ್ಮ ಪತ್ನಿ ಯಾವ ರೀತಿ ಪಾತ್ರ ವಹಿಸ್ತಾ ಇದ್ರು?

ನಿ : ನಾನೇನ್ಮಾಡಿದ್ನೋ ಅದಕ್ಕಡ್ಡಿ ಬರ್‍ಲಿಲ್ಲ. ನಾನು ಮಾಡ್ತಾ ಇರ್‍ತಕಂತಾದ್ದು, ಜೈಲಿಗ್ಹೋಗ್ಲಿ, ಏನೇ ಮಾಡ್ಲಿ ಅದು ಸರಿ ಅಂತ ಆಕೆ ತಿಳ್ಕೊಂಡಿದ್ಳು. ಯಾಕೆ ಅಂದ್ರೆ ಗಾಂಧಿಯವರು ಹೇಳಿದ ಮಾತ್ನಲ್ಲಿ ನಡೀತಿದ್ದಾರೆ ಅಂತ. ಅವಾಗ್ಲೆ ಹೇಳಿದ್ನಲ್ಲಾ ಗಾಂಧೀ ಪರೀಕ್ಷೆ ಕಟ್ಬಿದ್ದೀರಿ ಅನ್ನೋ ಮಾತು. ಆದ್ರಿಂದ ಆಕೆಯಿಂದ ನನಗೆ ಪ್ರೋತ್ಸಾಹ ಸಿಕ್ತೇ ಹೊರತು ತಪ್ಪು ದಾರಿಯಿಂದ ದುಡೀರಿ ಅನ್ನೋ ಅಂತ ಮಾತು ಆಕೆಗೆ ಕನಸುಮನಸ್ಸೂ ಇರ್‍ಲಿಲ್ಲ.

ನಾ : ನೀವು ಗಾಂಧೀವಾದಿಗಳು, ಗಾಂಧೀಕಾಲದ ಮೌಲ್ಯಗಳನ್ನ ಪ್ರತಿಪಾದಿಸ್ತಾ ಇದ್ದೀರಾ. ಆದ್ರೆ ಈವೊತ್ತು ರಾಷ್ಟ್ರ ಎಷ್ಟು ಮುಂದಕ್ಹೋಗಿದೆ, ಅಥ್ವಾ ಎಷ್ಟು ದಾರಿಯನ್ನ ಸವೆಸಿದೆ ಬೇರೆ ಮಾರ್ಗದಲ್ಲಿ ಅಂತಂದ್ರೆ, ಮತ್ತೆ ನಾವು ಗಾಂಧಿಯವರ ಮೌಲ್ಯಗಳಿಗೆ ಗಾಂಧಿಯವರ ಜೀವನ ದೃಷ್ಟಿಗೆ ವಾಪಾಸ್ ಹೋಗೋದಿಕ್ಕೆ ಸಾಧ್ಯ ಅನ್ಸುತ್ತಾ ನಿಮ್ಗೆ?

ನಿ : ಸಾಧ್ಯ ಕೂಡ್ಲೆ ಆಗೋದಿಲ್ಲ, ಎಷ್ಟು ಕೆಟ್ಟ್ಹೋಗಿದೆ ಅಂದ್ರೆ ಇದು ಹೋಗ್ಬೇಕಾದ್ರೆ ಇನ್ನೂ ಐವತ್ತು ವರ್ಷ ಬೇಕು. ಪ್ರಯತ್ನ ನಡೀತಾ ಇದೆ. ಅದಾದ್ಮೇಲೆ ಬರ್‍ತದೆ.

ನಾ : ಮತ್ತೆ ಗಾಂಧಿ ಈ ದೇಶಕ್ಕೆ ಅಗತ್ಯ ಬೀಳ್ತದೆ ಅಂತ ಅನ್ಸುತ್ತಾ ನಿಮ್ಗೆ?

ನಿ : ಹೇಳ್ತೀನಿ, ಗಾಂಧೀಜಿ ಬರ್‍ತಾರೋ ಇಲ್ವೋ, ಪ್ರಾಮಾಣಿಕತೆ ಬರ್‍ತದೆ ಇಂಡಿಯಾ ದೇಶದಲ್ಲಿ - ಸ್ವಲ್ಪ ಟೈಂ ಆಗ್ತದೆ.

ನಾ : ನಿಮ್ಮ ಜೀವನದ ಅತ್ಯಂತ ಸವಿಯಾದ ಘಟನೆ ಯಾವುದು?

ನಿ : ಸವಿಯಾದ ಘಟನೆ ಅಂತಂದ್ರೆ...

ನಾ : ಅತ್ಯಂತ ಸವಿಯಾದ ಘಟನೆ ಹೇಳಿ

ನಿ : ಅದೇನೆ ಹೇಳೋದು ಬಹಳ ಕಷ್ಟಪ್ಪ.

ನಾ : ಮದುವೆಯಾದಾಗ?

ನಿ : ಮದುವೆಯಾದಾಗಾ, ನನಗೂ ಚಿಕ್ಕ ವಯಸ್ಸು, ನನ್ಹೆಂಡ್ತಿಗೂ ಚಿಕ್ಕ ವಯಸ್ಸು...

ನಾ : ಮುಖ್ಯಮಂತ್ರಿಯಾದಾಗ?

ನಿ : ಒಂದು ಹೇಳ್ಬೇಕೂಂದ್ರೆ ಶರಾವತಿ ಯೋಜನೆ ಫೌಂಡೇಷನ್ ಹಾಕ್ದಾಗ ಅದನ್ನ ನಾನು ಮರ್ಯಂಗಿಲ್ಲ. ಎಸ್. ಕೆ. ಪಾಟೀಲ್ ಕರ್‍ದು ಶರಾವತಿ ಫೌಂಡೇಷನ್ ಹಾಕ್ದೆ. ನನ್ನ ಸಂತೋಷದ ವಿಚಾರಗಳಲ್ಲಿ ಅದೂ ಒಂದು, ಘಟನೆ. ಅದನ್ನ ಹೇಳ್ಬಲ್ಲೆ.

ನಾ : ಮುಖ್ಯಮಂತ್ರಿಯಾದಾಗ ಸಂತೋಷ ಆಗಿಲ್ವಾ?

ನಿ : ಅದೇನ್ ಅಂತಾದ್ದೇನ್, ಸ್ವಾಭಾವಿಕವಾಗಿ ಬಂತದು. ಎಲ್ಲರೂ ನನ್ನ ಒಪ್ಪಿದ್ರು, ಆಯ್ತು ಅಷ್ಟೆ. ಅದ್ರಲ್ಲೇನ್ ದೊಡ್ಡ ವಿಚಾರ ಅಂತ- ಅದು ನನ್ಗೇನ್ ಅನ್ನಿಸಿಲ್ಲ.

ನಾ : ಸ್ವಾತಂತ್ರ್ಯ ಬಂದಾಗ?

ನಿ : ಅತ್ಯಂತ ಸಂತೋಷ ಆಯ್ತು. ಅದು ಒಂದು ದೊಡ್ಡ ಜ್ಞಾಪಕ. ಅದು ಅತ್ಯಂತ ಸಂತೋಷದ ಕಾಲ.

ನಾ : ನಿಮಗೆ ಅತ್ಯಂತ ದುಃಖವನ್ನುಂಟುಮಾಡಿದ ಘಟನೆ ಯಾವುದು?

ನಿ : ನನ್ನ ಹೆಂಡ್ತಿ ಸತ್ತಾಗ ಅತ್ತೆ ನಾನು. ನಾನು ಎಂದೆಂದೂ ಅತ್ತವನೇ ಅಲ್ಲ. ಕಣ್ಣಲ್ಲಿ ನೀರ್‍ತಂದಿಲ್ಲ. ಆವತ್ತು ಮಗು ಅತ್ತಂಗತ್ಬಿಟ್ಟೆ.

ನಾ : ತಮಗೀಗ ೯೭ ವರ್ಷ. ಶತಾಯುಷಿ ಆಗ್ಬೇಕೂಂತ ಆಸೆ ಇದ್ಯಾ?

ನಿ : ಇದೆ ಯಾಕೆಂದ್ರೆ ಈ ಜಗತ್ಕಂಡ್ರೆ ನನಗೆ ಇಷ್ಟ. ಅದನ್ನ ಪ್ರೀತಿಸ್ತೇನೆ I Love this world. I love this universe because I am a part of this universe.

ನಾ : ಇನ್ನೂ ಬದುಕ್‌ಬೇಕು ಅಂತ ಆಸೆ ಹುಟ್ಸೋ ಅಂತ ಆಕರ್ಷಣೆ ಜೀವನದಲ್ಲಿ ಏನಿದೆ ನಿಮ್ಗೆ? ಯಾತಕ್ಕೆ ಬದುಕ್ಬೇಕು?

ನಿ : ಪ್ರಪಂಚ ಅನುಭವಿಸೋದಕ್ಕೆ, ನೋಡಿ ಸಂತೋಷಪಡೋದಿಕ್ಕೆ.

ನಾ : ಏನಿದೆ ಪ್ರಪಂಚದಲ್ಲಿ ನಿಮ್ಮ ಪ್ರಕಾರ ಅನುಭವಿಸೋ ಅಂತಾದ್ದು?

ನಿ : ನೋಡೋದಕ್ಕೆ, ನಾನು ರಾತ್ರಿ ಹೊತ್ತು ಮಲಕ್ಕೊಂಡು ನಕ್ಷತ್ರಗಳನ್ನ ನೋಡುವಾಗ, ಸೂರ್ಯ ಹುಟ್ಟೋದು ನೋಡುವಾಗ, ಚಂದ್ರ ಹುಟ್ಟೋದು ನೋಡುವಾಗ, ಜನಗಳ್ನ ನೋಡ್ದಾಗ, ಇವೆಲ್ಲವು ಪ್ರತಿಯೊಂದು ಆಕರ್ಷಣೀಯವಾದ ಸಂಗತಿಗಳೇ ಅಲ್ವೇ? ಒಳ್ಳೆ ಮರ ನೋಡ್ದಾಗ, ಅರಣ್ಯ ನೋಡ್ದಾಗ, ನದೀ ನೋಡ್ದಾಗ, ಸಮುದ್ರ ನೋಡ್ದಾಗ, ಇವೆಲ್ಲವೂ ಆಕರ್ಷಣಿಯವಾದ್ದೇ. ಅದನ್ನೋಡಿ ಸಂತೋಷಪಡ್ಬೇಕು ಅಂತ.

ನಾ : ನಿಮಗೆ ತುಂಬ ವಯಸ್ಸಾಗಿದೆ, ನಿಮ್ಮ ಚಲನೆ ಕೂಡ ತುಂಬ ಮಿತಗೊಂಡಿದೆ ಬೇಜಾರಾಗುತ್ತಾ ಇದ್ರ ಬಗ್ಗೆ?

ನಿ : ಇದೆ. ಅದಕ್ಕೇನ್ಮಾಡೋದು? ಈ ವಯಸ್ಸಾದಂಗೆಲ್ಲ ಈ ರೀತಿ ಬಾಧೆಗಳು ಯಾವ್ಯಾವೋ ಸಣ್ಣ ಸಣ್ಣವು - ಬೇಧಿ ಸರಿಗಾಗ್ಲಿಲ್ಲ, ಇಲ್ಲೇನೋ ನೋಯ್ತದೆ, ಅಲ್ಲೇನೋ ಆಯ್ತು, ಕಿವಿ ಸರಿಯಾಗಿ ಕೇಳ್ಸಿಲ್ಲ, ಕಣ್ಣು ಸರಿಯಾಗಿ ಕಾಣ್ಸಿಲ್ಲ, ಅನ್ನೋದಿದ್ಯಲ್ಲಾ ಅವು - I welcome it, I can't just reject it because it has to be either enjoyed or suffered;

I am enjoying it in a way and suffering it also in a way.

ನಾ : ಸಾವಿನ ಬಗ್ಗೆ ಭಯ ಇಲ್ವಾ?

ನಿ : ಹಾಂ!

ನಾ : ಸಾವಿನ ಬಗ್ಗೆ ಭಯ ಇಲ್ವಾ?

ನಿ : ಇಲ್ಲ. ಸಾವಿನ ಬಗ್ಗೆ ಏನೇನೇನೇನೂ ಭಯ ಇಲ್ಲ. ಏನೂ ಭಯ ಇಲ್ಲ. ಓ ಸಂತೋಷ್ದಿಂದ ಹೋಗ್ತಿನಿ. ಯಾಕೆಂದ್ರೆ ಎಲ್ಹೋಗ್ತಿನಿ? ಎಲ್ಲಿಂದ ಬಂದ್ನೋ ಅಲ್ಲೋಗ್ತಿನಿ. ಯಾಕ್ ಭಯ ? ಏನು ಭಯ ಇಲ್ಲ...

ನಾ : ಮತ್ತೆ ಹುಟ್ಟೋ ಭಯ ಏನು ಇಲ್ವಾ?

ನಿ : ಅದೂನು ಇಲ್ಲ. ಭಯ ಯಾಕೆ? ಹುಟ್ಟೋದಕ್ಕೆ ಭಯ ಯಾಕೆ? ಹುಟ್ಟೋದು ಒಂದು ಸಂತೋಷದ ಸಂಗತಿ, ಭಯ ಎಲ್ಲಿಂದ ಬಂತು? ಇದು ಮೂರ್ಖತನ, ಮಾನವ ಜನ್ಮ ದೊಡ್ಡದು, ಅದನು ಹಾಳುಮಾಡಲು ಬೇಡಿರಿ ಹುಚ್ಚಪ್ಪಗಳಿರಾ ಅಂತ್ಹೇಳಿ ದಾಸರು ಹೇಳ್ತಾರೆ. ಅದು ಸರಿ, ಅದ್ರಿಂದ ಹುಟ್ಟೋದಕ್ಕೆ ಭಯ ಯಾಕೆ? ನಾನು ಹುಟ್ತೇನಿ ಅಂತ ಯಾರಿಗ್ಗೊತ್ತು? ನಾನು ಹುಟ್ಟೋದೇ ಇಲ್ಲ. ಯಾಕಂದ್ರೆ ನನಗೆ ಪುನರ್ ಜನ್ಮ ಇಲ್ಲ. ಹೋಗ್ಬಿಡ್ತೀನಿ. ಸತ್ತುಹೋದೆ ಅಂದ್ರೆ ಪೃಥ್ವಿ, ಅಪ್ಪು, ತೇಜಸ್ಸು, ವಾಯು ಅದದದದು ಅದ್ರಪ್ಪಕ್ಕದೆ ಸೇರ್ಕಂಡ್ಹೋಗ್ತದೆ, I become an indistinguishable part of the universe.

ನಾ : ನಿಜಲಿಂಗಾಪ್ಪಾವ್ರೆ ಈವರ್ಗೆ ತುಂಬಾ ಬಿಚ್ಚು ಮನಸ್ಸಿನಿಂದ ಅನೇಕ ವಿಷಯಗಳನ್ನು ನಮ್ಜೊತೆಯಲ್ಲಿನ ಈ ಮಾತುಕತೆಯಲ್ಲಿ ನೀವು ತೆರೆದಿಟ್ಟಿದ್ದೀರಾ. ಇದಕ್ಕೋಸ್ಕರ ನಿಮ್ಗೆ ತುಂಬಾ ಧನ್ಯವಾದಗಳು.

ನಿ : ಬಹಳ ಸಂತೋಷ.

❑

(ಬರಹಕ್ಕೆ : ಎಂ. ರೇವಣ್ಣ)

ಎರಡು ಸಾಹಿತ್ಯ ಕಮ್ಮಟಗಳು

ಕಾವ್ಯ ಕಮ್ಮಟ

ಡಿ.ಎಸ್. ನಾಗಭೂಷಣ : ನಮ್ಮ ಈ ಕಮ್ಮಟದಲ್ಲಿ ಮುಖ್ಯವಾಗಿ ನಾವು ಕಾವ್ಯದ ಹುಟ್ಟಿನ ಹಿನ್ನೆಲೆ, ಅದಕ್ಕೆ ಸಂಬಂಧಿಸಿದಂತಿರುವ ಸ್ಫೂರ್ತಿಯ ಪ್ರಶ್ನೆ, ಅಭಿವ್ಯಕ್ತಿಯ ಕ್ರಮ ಹಾಗೂ ಸ್ವರೂಪ, ಅದರ ಅರ್ಥ ಹಾಗೂ ಸಾರ್ಥಕ್ಯ ಮತ್ತು ಅದರ ಸಾಮಾಜಿಕ ಆಯಾಮ-ಇವುಗಳ ಬಗ್ಗೆ ಚರ್ಚಿಸುವ ಆಶಯ ಇಟ್ಟುಕೊಂಡಿದ್ದೇವೆ. ಈ ಚರ್ಚೆಯಲ್ಲಿ ಪರಿಣತರಾಗಿ ಭಾಗವಹಿಸ್ತಾ ಇರೋರು ಅಂದ್ರೆ ಕನ್ನಡದ ಹಿರಿಯ ಕವಿ ಹಾಗೂ ವಿಮರ್ಶಕರಾದ ಡಾ. ಜಿ.ಎಸ್. ಶಿವರುದ್ರಪ್ಪನವರು, ಈಚಿನ ದಿನಗಳಲ್ಲಿ ಸಮರ್ಥ ಕವಿ ಅನ್ನಿಸಿಕೊಂಡಿರೋರಲ್ಲಿ ಒಬ್ಬರಾದ ಹೆಚ್. ಎಸ್. ಶಿವಪ್ರಕಾಶ್ ಹಾಗೂ ಇತ್ತೀಚೆಗೆ ತಮ್ಮ 'ಬಕಾಲ' ಅನ್ನುವ ಪ್ರಥಮ ಕವನ ಸಂಕಲನದ ಮೂಲಕವೇ ಬೆರಗು ಹಾಗೂ ಕುತೂಹಲ ಹುಟ್ಟಿಸಿರುವ ಕೆ.ಬಿ. ಸಿದ್ದಯ್ಯನವರು. ಕಾವ್ಯ ಪ್ರಯೋಗದ ಹಿನ್ನೆಲೆಯಲ್ಲಿ ನೋಡಿದಾಗ ಈ ಮೂವರೂ ಇವೊತ್ತಿನ ಕಾವ್ಯ ಸಂದರ್ಭದ ಮೂರು ಗಂಭೀರ ನೆಲೆಗಳನ್ನು ಪ್ರತಿನಿಧಿಸುವಂತಹವರು. ಹೀಗಾಗಿ ಇವೊತ್ತಿನ ಚರ್ಚೆ ಹೆಚ್ಚು ಅರ್ಥಪೂರ್ಣ ಮತ್ತು ಕುತೂಹಲಕಾರಿಯಾಗಿರುತ್ತೆ ಅನ್ನುವ ನಿರೀಕ್ಷೆ ನಮ್ಮದು. ಬಹುಶಃ ಇವೊತ್ತಿನ ಚರ್ಚೆಯನ್ನು ನಾವು, ಮನುಷ್ಯ ಸಂಸ್ಕೃತಿಯಲ್ಲಿ ಕಾವ್ಯ ಒಂದು ಅಭಿವ್ಯಕ್ತಿ ರೂಪವಾಗಿ ಮೂಡಿದುದರ ಹಿನ್ನೆಲೆಯನ್ನು ಹೇಗೆ ಗುರುತಿಸಬಹುದು ಅನ್ನೋ ಪ್ರಶ್ನೆಯಿಂದ ಆರಂಭಿಸಬಹುದೂಂತ ಕಾಣುತ್ತೆ. ಕೆ.ಬಿ. ಸಿದ್ಧಯ್ಯನವರು ಚರ್ಚೆಯನ್ನು ಶುರುಮಾಡಬಹುದು.

ಕೆ.ಬಿ. ಸಿದ್ಧಯ್ಯ: ಮನುಷ್ಯ ಸಂಸ್ಕೃತಿಯಲ್ಲಿ ಕಾವ್ಯ ಹೇಗೆ ಹುಟ್ಟಿತು ಅನ್ನೊದಕ್ಕಿಂತ ಮುಂಚಿತವಾಗಿ ನಾವು ತಿಳೀಬೇಕಾದ್ದೇನು ಅಂದರೆ, ಮನುಷ್ಯ ಸಂಸ್ಕೃತಿಯನ್ನು ಗ್ರಹಿಸೋದಕ್ಕೆ ಇರೋ ಮಾರ್ಗಗಳು ಯಾವುವು, ಈ ಲೋಕಗ್ರಹಣ ಮಾರ್ಗಗಳೇನು ಅನ್ನೋದನ್ನ; ಈಗ ಲಭ್ಯವಿರುವ ಮಾರ್ಗಗಗಳು ಅಂದರೆ Rational ಆದ ಮಾರ್ಗ. ಅದನ್ನ ವೈಚಾರಿಕ ಮಾರ್ಗ ಅಂತ ಕರೀಬಹುದು. ಇನ್ನೊಂದು Intuitive ಆದ ಮಾರ್ಗ. ಅದನ್ನ ಅರಿವಿನ ಮಾರ್ಗ ಅಂತ ಕರೀಬಹುದು. ಈಗ ಈ ವೈಚಾರಿಕ ಮಾರ್ಗದಲ್ಲಿ ಮನುಷ್ಯ ಸಂಸ್ಕೃತಿಯನ್ನು ಅಧ್ಯಯನ ಮಾಡೋದಾದರೆ ಅದರ ಬೆನ್ನೆಲುಬಿಗೆ ತರ್ಕ ಇರುತ್ತದೆ. ಈ ತರ್ಕ ಮಂಡನೆಗೆ ಮಾಹಿತಿ ಮತ್ತು ವಿವರಗಳನ್ನು ಸಂಗ್ರಹಣೆ ಮಾಡಿ, ಒಂದು ಮಾನದಂಡವನ್ನು ಮಾಡಿ ಆ ಮೂಲಕ ಮನುಷ್ಯ ಸಂಸ್ಕೃತಿಯನ್ನು ಅಧ್ಯಯನ ಮಾಡಬೇಕಾಗುತ್ತದೆ. ಹೀಗೆ ಮಾಡುವಾಗ ಮನುಷ್ಯ

ಸಂಸ್ಕೃತಿಯ ವಿಭಾಗೀಯ ರೀತಿಯ ಒಂದು ಅಧ್ಯಯನ್ನು ಮಾಡಬಹುದಾದರೂ -ಈಗ ಮನುಷ್ಯನ ಸೈಕಾಲಜಿ, ಅವನ ಸೋಷಿಯಾಲಜಿ ಈ ತರ ವಿಭಾಗೀಯ ಹಂತದಲ್ಲಿ ಅಧ್ಯಯನ ಮಾಡಿಕೊಂಡು ಒಟ್ಟಾರೆಯಾಗಿ ಈ Rational ಆದ ಮಾರ್ಗದಿಂದ Study ಮಾಡೋಕಾಗೋದಿಲ್ಲ ಅಂತ ನನಗನಿಸುತ್ತೆ. ಇದರ ವಿಫಲತೆಯಿಂದ ಏನಾಯಿತು? ಮನುಷ್ಯ ಸಂಸ್ಕೃತಿಯನ್ನು ಅಧ್ಯಯನ ಮಾಡೋದಕ್ಕೆ ಅರಿವಿನ ಮಾರ್ಗವನ್ನು ಮನುಷ್ಯ ಅನಿವಾರ್ಯವಾಗಿ ಕಂಡುಕೊಳ್ಳಬೇಕಾಯಿತು ಈ ಅರಿವಿನ ಮಾರ್ಗ ಅಂದರೆ? ಈ ಛಿದ್ರಗೊಂಡಿರುವ ಮನುಷ್ಯ-ನಾಗರೀಕತೆಯಿಂದಾಗಿರಬಹುದು, ರಾಗದ್ವೇಷಗಳಿಂದ ಆಗಿರಬಹುದು, ಪ್ರೇಮದ್ವೇಷಗಳಿಂದ ಆಗಿರಬಹುದು - ಇಂಥ ಭಾವನೆಗಳಿಂದ ಛಿದ್ರಗೊಂಡಿರತಕ್ಕಂತಹ, ಬದುಕಿನ ಕ್ರೌರ್ಯದಿಂದ ಛಿದ್ರಗೊಂಡಿರತಕ್ಕಂತಹ ವ್ಯಕ್ತಿತ್ವ ಈ ಸಂಸ್ಕೃತಿಯ ಕೇಂದ್ರ ಆಗಿರುತ್ತದೆ. ಈ ಕೇಂದ್ರ ವ್ಯಕ್ತಿಯ ಅಖಂಡ ಅನುಭವದ ಏಕತ್ವದಲ್ಲಿ ನಾವು ಮನುಷ್ಯನ ಇರುವಿಕೆಯನ್ನು ನೋಡಬೇಕಾಗುತ್ತದೆ. ಇದು ಅರಿವಿನ ಮಾರ್ಗ ಅಂತ ನಾವು ತಿಳಿಯೋದಾದರೆ, ಇಂಥ ಒಂದು ಮಾರ್ಗವೇ ಕಾವ್ಯ ಕೂಡ ಅಂತ ನನಗನಿಸುತ್ತೆ. ಈ ಕಾವ್ಯ ಅಭಿವ್ಯಕ್ತಿಯಾಗಿ ಬರೋದರ ಹಿನ್ನೆಲೆ ಎಂಥದ್ದಿರಬಹುದು ಅಂತ ನಾನು ಯೋಚನೆ ಮಾಡೋವಾಗ ಅನಿಸುತ್ತೆ; ಸರ್ವೇ ಸಾಮಾನ್ಯವಾಗಿ ಗೊತ್ತಿರೋ ಅಂಥ 'ಕಿಸಾಗೌತಮಿ' ಕತೆಯ ಮೂಲಕ ಕಾವ್ಯ ಅಭಿವ್ಯಕ್ತಿ ಪಡೆದಿದ್ದರ ಅರ್ಥ ಮಾಡಿಕೊಳ್ಳಬಹುದು ಅಂತ ಕಾಣುತ್ತೆ. ಸಾವಿನ ಬಾಯಿಗೆ ಮಗನನ್ನು ಒಪ್ಪಿಸಿದ ಕಿಸಾ ಗೌತಮಿಯ ಮಾನಸಿಕ ತೊಳಲಾಟ ಎಂಥದ್ದು ಅಂತ ಕೂಡ ನಾವು ಊಹಿಸೋಕ್ಕಾಗೋದಿಲ್ಲ. ಸಮುದ್ರದಂಥ ತಳಮಳಗಳಿಂದ ಇದ್ದ ಕಿಸಾಗೌತಮಿ ಎದುರಾಗಿದ್ದು ಯಾರನ್ನು ಅಂದರೆ ಬುದ್ಧನನ್ನು. ಅವಳ ಸಮುದ್ರದಂಥ ತಳಮಳಗಳನ್ನು ಕಂಡಂಥ ಬುದ್ಧ ಕಿಸಾಗೌತಮಿಗೆ ಕೊಟ್ಟ ಸಾಂತ್ವನದ ಮಾತು ಅತ್ಯಂತ ಸರಳವಾದದ್ದು. 'ಸಾವಿಲ್ಲದ ಮನೆಯಲ್ಲಿ ನೀನು ಸಾಸಿವೆಯನ್ನು ತರಬೇಕು' ಅಂತ ಬುದ್ಧ ಕಿಸಾಗೌತಮಿಗೆ ಹೇಳಿದಂತ ಮಾತು. ಆ ಅಭಿವ್ಯಕ್ತಿಯ ಹಿಂದೆ ಏನಿದೆ ಅಂದರೆ, ಕಿಸಾಗೌತಮಿಯ ತಳಮಳವನ್ನು, ಹತಾಶೆಯನ್ನು ಸಂಕಟವನ್ನು ಪೂರ್ಣವಾಗಿ ತಿಳಿದಿರುವ ಒಂದು ಅರಿವು. ಅದನ್ನು ಜ್ಞಾನ ಅಂತ ಕರೀಬಹುದೇನೋ. ಇಂಥ ಅರಿವು ಕಿಸಾಗೌತಮಿಯಲ್ಲಿರತಕ್ಕಂತಹ ತಳಮಳ - ಅದನ್ನು ನೀವು ಅವಳ ಒಂದು ದುರಂತ ಕನಸು ಅಂತ ಕರೀಬಹುದು, ಒಂದು ನಂಬಿಕೆ ಅಂತ ತಿಳೀಬಹುದು. ಒಂದು ಪುರಾಣ ಅಂತ ನಾವು ಕರೀಬಹುದು - ಈ ಎಲ್ಲ ಭಾವನಾ ಲಯಗಳನ್ನು ಜ್ಞಾನದ ಕಣ್ಣಿಂದ ನೋಡಿ ಅದಕ್ಕೆ ಒಂದು ಅಭಿವ್ಯಕ್ತಿಯನ್ನು ಕೊಡುವಂತಹ ಸಾಮರ್ಥ್ಯ ಬುದ್ಧನಿಗೆ ಇದ್ದುದರ ಕಾರಣ, ಕೇವಲ ಒಂದು ಸರಳ ವಾಕ್ಯ ಕಿಸಾಗೌತಮಿಯ ಸಮುದ್ರದಂತ ತಳಮಳಗಳನ್ನ ಶಾಂತಗೊಳಿಸಿ ಅರಿವಿನ ಕಡೆಗೆ, ಸಾವಿಲ್ಲದ ಮನೆಯಿಲ್ಲ ಎಂಬ ಅರಿವಿನ ಕಡೆಗೆ ಅವಳನ್ನು ಕೊಂಡೊಯ್ತು. ಆದ್ದರಿಂದ ನನಗನ್ನಿಸುತ್ತಾ ಇದೆ, ಮಾನವ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಾವ್ಯಕ್ಕೆ ಕಿಸಾಗೌತಮಿಯಲ್ಲಿದ್ದಂತಹ ಒಂದು ತಳಮಳ, ಬುದ್ಧನ ಅಭಿವ್ಯಕ್ತಿಯಲ್ಲಿದಂತಹ ಒಂದು ಅರಿವು ಬೇಕಾಗುತ್ತದೆ. ಅಂಥ ಒಂದು ತಳಮಳ ಹಾಗೂ ಇಂಥ ಜ್ಞಾನಸ್ಪರ್ಶದಿಂದ ಕಾವ್ಯ ಅಭಿವ್ಯಕ್ತಿ ಪಡೆಯಬಹುದೇನೋ ಅಂತ

ನನಗನ್ನಿಸುತ್ತಾ ಇದೆ.

ಡಿ.ಎಸ್. ನಾಗಭೂಷಣ : ಕಾವ್ಯ ಇಷ್ಟೆಲ್ಲ ಬೆಳೆದ ಮೇಲೆ ಯೋಚನೆ ಮಾಡಿದಾಗ ಇಷ್ಟೆಲ್ಲಾ ಅನಿಸಬಹುದೇನೋ... ಆದರೆ ಒಬ್ಬ ಮೊದಲ ಮನುಷ್ಯ ಕಾವ್ಯ ಬರೆದಾಗ ಇಷ್ಟೆಲ್ಲ ಭಾರವಾದ ಒಂದು ಒತ್ತಡ ಅವನಿಗಿತ್ತೆ?

ಶಿವಪ್ರಕಾಶ್ : ಇದು ಕಾವ್ಯ ಯಾವ ರೀತಿ ಚಾರಿತ್ರಿಕವಾಗಿ ಶುರುವಾಯಿತು ಅನ್ನುವುದು ಬಹಳ Speculative ಆದ ಪ್ರಶ್ನೆ. ಇದರ ಬಗ್ಗೆ ಉಹಾಪೋಹ ಮಾಡಬಹುದು, guess-work ಮಾಡಬಹುದು. ಆದರೆ ನಾವು ಆಖೈರಾಗಿ ಏನೋ ಹೇಳೋಕ್ಕೆ ಬರೋದಿಲ್ಲ. ಸಿದ್ಧಯ್ಯನವರು ಅದನ್ನು ಚಾರಿತ್ರಿಕವಾಗಿ ನೋಡದೆ ಇದ್ದರೂ ಕೂಡ ಒಂದು ಕಾವ್ಯ ಮತ್ತು ಕಲೆಗಳಿಗೆ ಸಂಬಂಧಿಸಿದ ಒಂದು ಗ್ರಹಣದ ಕ್ರಮ, ಇನ್ನೊಂದು ಕಾವ್ಯೇತರವಾದ ಚಟುವಟಿಕೆಗಳಿಗೆ ಸಂಬಂಧಿಸಿದ ಇನ್ನೊಂದು ಗ್ರಹಣ ಕ್ರಮ-ಈ ವ್ಯತ್ಯಾಸವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಒಂದು ತಾರ್ಕಿಕವಾಗಿ ಜಗತ್ತನ್ನು, ಅನುಭವವನ್ನು ನೋಡುವುದು, ಗ್ರಹಿಸುವುದು ಮತ್ತು ಅಭಿವ್ಯಕ್ತಿಗೊಳಿಸುವುದು. ಇನ್ನೊಂದು ಅರಿವಿನ ಮೂಲಕ ಅನುಭವವನ್ನು ಗ್ರಹಿಸುವುದು ಮತ್ತು ಅಭಿವ್ಯಕ್ತಿಗೊಳಿಸುವುದು. ಕಾವ್ಯ, ಚರಿತ್ರೆಯಲ್ಲಿ ಯಾವ ರೀತಿ ಹುಟ್ಟಿತು? ಇದು ಬಹುಶಃ ಆಚರಣೆಗಳ ಸಂದರ್ಭಗಳಲ್ಲಿ, ಪೂಜೆಗಳ ಸಂದರ್ಭದಲ್ಲಿ ಮನುಷ್ಯ ಅಗೋಚರ ಶಕ್ತಿಗಳನ್ನ ಆವಾಹನೆ ಮಾಡುವ ಸನ್ನಿವೇಶದಲ್ಲಿ ಹುಟ್ಟಿಬಂತು. ಈಗ ನಾವು ಜಗತ್ತಿನ ಜಾನಪದ ಕಾವ್ಯಗಳನ್ನು ಗಮನಿಸಿದಾಗ ಎರಡು ರೀತಿಯ ಅಭಿವ್ಯಕ್ತಿಯ ಕ್ರಮ ಕಾಣುತ್ತೀವಿ. ಒಂದು ಹಾಡಿನ ರೂಪ, ಇನ್ನೊಂದು ಮಂತ್ರೋಚ್ಚಾರದ ರೂಪ. So, ಈ ಹಾಡು ಒಂದು ಸಂತೋಷ ಸಮಾರಂಭದಲ್ಲಿ, ಹಬ್ಬ ಹುಣ್ಣಿಮೆಗಳಲ್ಲಿ ಸಂತೋಷವನ್ನು ಇಡೀ Tribeನವರು ಹಂಚಿಕೊಳ್ಳೋದಕ್ಕೆ ಹಾಡ್ತಾ ಇದ್ದರು. ಇನ್ನೂ ಕೆಲವು ಸಲ ಅಗೋಚರ ಶಕ್ತಿಗಳನ್ನು ಆವಾಹನೆ ಮಾಡಿಕೊಳ್ಳೋದಕ್ಕೋಸ್ಕರ ಮಂತ್ರೋಚ್ಚಾರದ ಮೂಲಕ ಅದನ್ನು ಮಾಡ್ತಾ ಇದ್ದರು. ಆ ಮೇಲೆ ತಾರ್ಕಿಕ ಕ್ರಮ ಅಂತ ಸಿದ್ಧಯ್ಯನವರು ಹೇಳಿದರು. ಬಹುಶಃ ಇದು ಚರಿತ್ರೆಯಲ್ಲಿ ಬಹಳ ನಿಧಾನವಾಗಿ ಶುರುವಾಗಿದ್ದು. ಎಷ್ಟೋ ಶತಮಾನಗಳು ಆ ಮಾಟ ಮಂತ್ರ ಇದ್ದವು. ಅವು ಕ್ರಮೇಣ ವಿಜ್ಞಾನವಾಗಿ ಪರಿವರ್ತನೆಯಾಯಿತು. ಅದೇ ರೀತಿ ಈ ಅರಿವಿನ ಮಾರ್ಗ ಚರಿತ್ರೆಯಲ್ಲಿ ಮೊದಲು ಬಂದದ್ದು. ಮನುಷ್ಯನಿಗೆ ಅದು ಮೂಲಭೂತವಾದದ್ದು. ಈವೊತ್ತು ಕೂಡ ನಾವು ಈ ಚಾರಿತ್ರಿಕ ವಿವರಗಳು ಏನೇ ಇರಲಿ, ಮನುಷ್ಯರು ಬಹಳ ಭಾವುಕರಾದಾಗ ಅವರು ಗದ್ಯದ ರೀತಿಯಲ್ಲಿ ನಡೆದುಕೊಳ್ಳಲ್ಲ. ಈಗ ಬಹಳ ಸಂತೋಷವಾದಾಗ ಕುಣೀತಾರೆ, ಅವರು ಭಾವುಕರಾದಾಗ ವಿಚಿತ್ರವಾದ ಲಯ ಬಂದುಬಿಡುತ್ತದೆ. So, ಈ ಮೂಲಕ ಕಾವ್ಯ ಉಗಮವಾಯಿತು. ಆದರೆ ಕಾವ್ಯ ಅಲ್ಲೇ ನಿಂತಿಲ್ಲ. ಈ ಅರಿವಿನ ಉನ್ನತ ಹಂತಗಳನ್ನು ಬರ್‍ತಾ ಬರ್‍ತಾ ಕಾವ್ಯ ಶೋಧನೆ ಮಾಡ್ತಾ ಹೋಗುತ್ತದೆ. ಆದ್ದರಿಂದ ಯಾವುದನ್ನ ತರ್ಕದ ಮೂಲಕ ಹೇಳೋಕಾಗೋದಿಲ್ಲ, ವಿಚಾರಗಳ ಮೂಲಕ ಹೇಳೋಕಾಗೋದಿಲ್ಲ, ಪರಿಕಲ್ಪನೆಗಳ ಮೂಲಕ ಹೇಳೋಕಾಗೋದಿಲ್ಲ. ಯಾವುದನ್ನು ನಾವು ಅಭಿನಯಿಸಿ ತೋರಿಸಬಹುದು, ಅಭಿವ್ಯಕ್ತಿ ಮಾಡಿ

ತೋರಿಸಬಹುದು-ಇದು ಭಾಷೆಯಲ್ಲಿ ಪ್ರಧಾನವಾಗಿ ಜರುಗಿದಾಗ ಅದು ಕಾವ್ಯವಾಗೋದು ಜಗತ್ತಿನ ಎಲ್ಲ ಸಂಸ್ಕೃತಿಗಳಲ್ಲಿ ಕಂಡು ಬರುತ್ತದೆ.

ಜಿ.ಎಸ್. ಶಿವರುದ್ರಪ್ಪ : ನನ್ನ ಇಬ್ಬರು ಸ್ನೇಹಿತರ ಮಾತಿಗೆ ನಾನು ಕಾವ್ಯಮೀಮಾಂಸೆಯ ಚೌಕಟ್ಟಿನೊಳಗೆ ಹೇಳೋದಕ್ಕೆ ಅಪೇಕ್ಷೆಪಡುತ್ತೇನೆ. ಸಿದ್ಧಯ್ಯನವರು ಹೇಳಿದರು-ಜಗತ್ತನ್ನು ಗ್ರಹಿಸುವ ಕ್ರಮಗಳು ಎರಡು, ಒಂದು ಬುದ್ಧಿ ಪೂರ್ವಕವಾಗಿ ಇನ್ನೊಂದು ಭಾವಪೂರ್ವಕವಾಗಿ ಅಂತ. ಮನುಷ್ಯ ಬುದ್ಧಿ ಪೂರ್ವಕವಾಗಿ ಗ್ರಹಿಸುವ ಕ್ರಮ ಸ್ವಲ್ಪ ನಿಧಾನವಾಗಿ ಬಂತು ಅಂತ ಶಿವಪ್ರಕಾಶ್ ಹೇಳಿದರು. ಮೂಲತಃ ಮನುಷ್ಯ ಭಾವನಾಜೀವಿ. ಹೀಗೆ ತೀವ್ರವಾದ ಲೋಕಾನುಭವಗಳನ್ನು ಗ್ರಹಿಸಿದಾಗ ಅವುಗಳಿಗೆ ತಕ್ಕ ಅಭಿವ್ಯಕ್ತಿಯನ್ನು ಕೊಡಬೇಕು ಅನ್ನೋ ತುಯ್ತಕ್ಕೆ ಸಿಕ್ಕಾಗ ಮೊದಲಿಗೆ ಕಾವ್ಯ ಹುಟ್ಟಿರಬಹುದು ಅಂತ ಕಾಣುತ್ತದೆ. ಹೀಗೆ ಕಾವ್ಯದ ಉಗಮವನ್ನು ಕುರಿತು ಹೇಳುವಾಗ ಧಾರ್ಮಿಕ ಆಚರಣೆಗಳ, ಧಾರ್ಮಿಕ ವಿಧಿಗಳ, ಹಬ್ಬ ಹರಿದಿನಗಳ ಪ್ರಸ್ತಾಪವನ್ನು ಮಾಡಿದರು. ಮುಖ್ಯವಾಗಿ ಮನುಷ್ಯನ ಮನಸ್ಸಿನ ಭಾವೋತ್ಕರ್ಷ ವನ್ನು ಹೆಚ್ಚು ಮಾಡುವ ಸಂದರ್ಭಗಳು ಇವು. ಹೀಗಾಗಿ ಮೊದಲಿಗೆ ಕಾವ್ಯ ಸಾಮೂಹಿಕವಾಗಿತ್ತು. ಒಂದು ಸಮೂಹ ಸೃಷ್ಟಿಯಾಗಿತ್ತು ಅಂತ ಕೂಡ ಹೇಳುತ್ತಾರೆ. ಹೀಗೆ ಒಂದು ಜನದ ಮನಸ್ಸು ತನ್ನ ಸುತ್ತಣ ಪರಿಸರಕ್ಕೆ ಅದರ ಅನುಭವಗಳಿಗೆ ತೀವ್ರವಾಗಿ ಸ್ಪಂದಿಸಿದಾಗ ಅದನ್ನ ಭಾವಪೂರ್ವಕ ವಾಗಿ ಗ್ರಹಿಸಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕೆಂದಾಗ ಅಲ್ಲಿ ಕಾವ್ಯ ಹುಟ್ಟಿರಬೇಕು ಅಂತ ಕಾಣುತ್ತದೆ. ಇದು ಎಲ್ಲ ಕಲೆಗಳಿಗೂ ಸಮಾನವಾದ ಅಂಶ ಅಂತ ನಾನು ಅಂದುಕೊಂಡಿದ್ದೇನೆ. ಮೊದಮೊದಲಿಗೆ ಅವನು ತನ್ನ ಸುತ್ತ ಕಂಡ ಅನುಭವಗಳಿಗೆ ಆಕಾರ ಕೊಡೋದಕ್ಕೆ ಪ್ರಯತ್ನಪಡುತ್ತಾನೆ. ಯಾಕೆಂದರೆ ಅನುಭವಗಳಿಗೆ ಒಂದು ಆಕಾರ ಕೊಡೋದರೊಳಗೆ ಒಂದು ಸಂತೋಷ ಇದೆ. ಎರಡನೆಯದು ತಾನು ಕೊಟ್ಟ ಅಭಿವ್ಯಕ್ತಿಯನ್ನು ಇತರರೊಡನೆ ಹಂಚಿ ಕೊಂಡಾಗ ಇನ್ನೊಂದು ಸಂತೋಷ ಸಿಗುತ್ತದೆ. ಆದ್ದರಿಂದ ಮನುಷ್ಯನಿಗೆ ತಾನು ಅರಿವಿನ ಮೂಲಕ ಅಥವಾ ಭಾವದ ಮೂಲಕ ಯಾವ್ಯಾವ ಅನುಭವಗಳನ್ನು ಗ್ರಹಿಸಿದನೋ ಅಂಥ ಗ್ರಹಿಕೆಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ, ಶಬ್ದಾರ್ಥರೂಪದಲ್ಲಿ ಅವನು ಅಭಿವ್ಯಕ್ತ ಪಡಿಸಿದಾಗ ಅದನ್ನು ನಾನು ಕಾವ್ಯ ಅಂತ ಕರೀತೀನಿ. ಹೀಗಾಗಿ ಕಾವ್ಯ ಅನ್ನೋದು ಅತ್ಯಂತ ಪ್ರಾಚೀನ ಕಾಲದಿಂದ ಹಿಡಿದು ಇವತ್ತಿನವರೆಗೂ ಕೂಡ ಮನುಷ್ಯನ ಅತ್ಯಂತ ಒಂದು ಆಕರ್ಷಕ ವಾದ ಕಲಾಪ್ರಕಾರವಾಗಿದೆ. ಈ ಹಂತದೊಳಗೆ ಕಾವ್ಯಕ್ಕೂ, ಮನುಷ್ಯನ ಸಂಸ್ಕೃತಿಗೂ ಇರುವ ಸಂಬಂಧ ಅತ್ಯಂತ ಭಿನ್ನವಾದದ್ದು. ಹಾಗೆ ನೋಡಿಕೊಂಡರೆ ಕಾವ್ಯವನ್ನೇ ಮನುಷ್ಯನ ನಿಜವಾದ ಅಭಿವ್ಯಕ್ತಿ ಸಂಸ್ಥೆ ಅಂತ ಹೇಳಬಹುದು.

ಯಾಕೆಂದರೆ ಅವನು ತನ್ನ ಅಂತರಂಗದ ಅನಿಸಿಕೆಗಳನ್ನು, ಭಾವಗಳನ್ನು ಆಲೋಚನೆ ಗಳನ್ನು ಮತ್ತು ಬೇರೆಬೇರೆಯ ಸ್ತರಗಳನ್ನು ಮುಟ್ಟಿ ಪಡೆದಂತ ಸಂಗತಿಗಳನ್ನು ಕಾವ್ಯದ ಮೂಲಕ ಹೇಳೋದಕ್ಕೆ ಪ್ರಯತ್ನಪಟ್ಟಿದ್ದಾನೆ. ಹೀಗಾಗಿ ಎಲ್ಲ ಕಾಲದಲ್ಲೂ ಕೂಡ ಸಾಹಿತ್ಯ ಚರ್ಚೆಯ ಕೇಂದ್ರ ಯಾಕೆ ಕಾವ್ಯವಾಗಿದೆ ಅಂತ ಹೇಳಿದರೆ ಅದು ಮೂಲಭೂತವಾಗಿ ಮನುಷ್ಯನ ಅರಿವಿನ

ಆಳವನ್ನು ಅಭಿವ್ಯಕ್ತಪಡಿಸುವ ಕಲಾತ್ಮಕ ಕ್ರಿಯೆ ಅನ್ನುವ ಅಭಿಪ್ರಾಯ ಇವತ್ತು ಹೆಚ್ಚು ಖಚಿತಗೊಳ್ಳುತ್ತಿದೆ ಅಂದ್ಕೊಂಡಿದ್ದೀನಿ.

ಡಿ.ಎಸ್. ನಾಗಭೂಷಣ : ಸಿದ್ಧಯ್ಯ ಮತ್ತು ಶಿವಪ್ರಕಾಶರು ಆಡಿದ ಮಾತಿನಿಂದ ಒಂದು ವಿಚಾರ ಏನು ಬರುತ್ತೆ ಅಂದರೆ ಕಾವ್ಯ ಸ್ವಯಂ ಅಭಿವ್ಯಕ್ತಿ ಅನ್ನೋ ಅರ್ಥ ಬರುತ್ತದೆ. ಆದರೆ ತಾವು ಇನ್ನೊಂದು ಅಂಶವನ್ನು ಇದಕ್ಕೆ ಸೇರಿಸಿದಿರಿ. ಇದು ಸಮೂಹ ಕ್ರಿಯೆ ಕೂಡ ಹೌದು, ಅವನು ತನ್ನ ಪರಿಸರಕ್ಕೆ ಸ್ಪಂದಿಸುತ್ತಾ ಇರುತ್ತಾನೆ ಮತ್ತು ಇನ್ನೊಬ್ಬರು ಅದನ್ನು ಕೇಳಿದಾಗ ಸಂತೋಷಪಡುವಂತ ಒಂದು ಅಂಶ ಕೂಡ ಅದರಲ್ಲಿದೆ ಅಂತ. ಅಂದರೆ ಕಾವ್ಯ ಸ್ವಯಂ ಅಭಿವ್ಯಕ್ತಿಯಾಗಿ ಹುಟ್ಟಿದರೂ ಅದು ಸಂಪರ್ಕ ಸಾಧ್ಯತೆಯನ್ನು ಕೂಡ ಪಡೆದಿದೆ ಹಾಗಾದರೆ ಕಾವ್ಯದ ನಿಜವಾದ ಸಾರ್ಥಕ್ಯ ಎಲ್ಲಿದೆ? ಕೇವಲ ಸ್ವಯಂ ಅಭಿವ್ಯಕ್ತಿಯಲ್ಲೋ ಅಥವಾ...

ಜಿ.ಎಸ್. ಶಿವರುದ್ರಪ್ಪ : ಎರಡರಲ್ಲಿ ಕೂಡ...

ಶಿವಪ್ರಕಾಶ್: ಕಾವ್ಯಕ್ಕೆ ಎರಡು ಮುಖಗಳಿವೆ. ಒಂದು ಅದು ಅಭಿವ್ಯಕ್ತಿ, expression. ಇನ್ನೊಂದು ಸಂವಹನ - communication. ಈ ಎರಡು ಒಟ್ಟಾದಾಗ ಮಾತ್ರ ಕಾವ್ಯ ಯಶಸ್ವಿಯಾಗುತ್ತದೆ.....

ಜಿ.ಎಸ್. ಶಿವರುದ್ರಪ್ಪ : ಯಾವುದೇ ಒಂದು ಅನುಭವ ರೂಪಗೊಳ್ಳುತ್ತದೆ ಅಂತ ಹೇಳಿದರೆ, ಅದು ಇನ್ನೊಬ್ಬರಿಗೆ ತಿಳಿಸಬೇಕೆನಿಸುವ ಒಂದು ಪೂರ್ವ ಸಿದ್ಧವಾದ ಒತ್ತಡದಲ್ಲೇ ರೂಪಗೊಳ್ಳುತ್ತೆ. ಇಲ್ಲದೇ ಇದ್ದರೆ ಸಾಧ್ಯವೇ ಇಲ್ಲ. ಒಬ್ಬ ಮನುಷ್ಯನನ್ನು ನೀವು ಅತ್ಯಂತ ಏಕಾಂತವಾದ ಸ್ಥಿತಿಯಲ್ಲಿ ಕಲ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ಸಮುದಾಯದ ಭಾಗವಾಗಿ ಕವಿ ಅಭಿವ್ಯಕ್ತಪಡಿಸುತ್ತಾನೆ ಅಂದ ಮೇಲೆ ಅವನಿಗೆ ಅಪ್ರಜ್ಞಾಪೂರ್ವಕವಾಗಿ ತನ್ನ ಅಭಿವ್ಯಕ್ತಿ ಸಮುದಾಯವನ್ನು ಮುಟ್ಟಬೇಕು ಅಂತ ಇರುತ್ತದೆ. ಆದ್ದರಿಂದ ಕಾವ್ಯ ಅನ್ನುವುದು ಒಂದು ರೀತಿಯಲ್ಲಿ ಕವಿ ಮೊದಲು ತನಗೆ ತಾನೆ ಮಾತಾಡಿಕೊಂಡ ಅಭಿವ್ಯಕ್ತಿಯಾದರೂ ಕೂಡ ಅನಂತರ ಅದು ಇನ್ನೊಬ್ಬರನ್ನು ಉದ್ದೇಶಿಸಿದ ಅಭಿವ್ಯಕ್ತಿ ಸಾಧ್ಯವಾದ ಕಾರಣದಿಂದ ಅದು ಸಂಪರ್ಕ ಸಾಧನವೂ ಹೌದು ಮತ್ತು ಅಭಿವ್ಯಕ್ತಿಯೂ ಹೌದು.

ಶಿವಪ್ರಕಾಶ್ : ಆಮೇಲೆ ಅದರ ಉಗಮಕಾಲದಲ್ಲಿ ಕೂಡ ಈ ಪುರಾತನ ಸಮುದಾಯಗಳಲ್ಲಿ ಬುಡಕಟ್ಟುಗಳಲ್ಲಿ ಯಾವುದೋ ದೈವವನ್ನು ಆವಾಹನೆ ಮಾಡಿಕೊಂಡ ಒಬ್ಬ ಪೂಜಾರಿ ಒಂದು ಹಾಡನ್ನು ಹಾಡಿದರೆ ಅಥವಾ ಮಂತ್ರೋಚ್ಚಾರ ಮಾಡಿದರೆ ಅದೂ ಕೂಡ ಸಂಪರ್ಕ. ಅದು ಯಾವುದೋ ಒಂದು ಶಕ್ತಿ ಜೊತೆ ಅವನು ಸಂಪರ್ಕ ಸಾಧಿಸ್ತಾ ಇದ್ದಾನೆ. ಆಮೇಲೆ ಸೃಷ್ಟಿಯ ಮೇಲೆ ಸಂಪರ್ಕ ಸಾಧಿಸ್ತಾ ಇರ್ತಾನೆ. ಆದ್ದರಿಂದ ಇದು ಮೊದಲಿನಿಂದ ಇದ್ದದ್ದು. ಒಂದು ಮಟ್ಟದಲ್ಲಿ ಅದು ಅಭಿವ್ಯಕ್ತಿ. ಇನ್ನೊಂದು ಮಟ್ಟದಲ್ಲಿ ಸಂವಹನ. ಸಂವಹನವನ್ನು ಬರೀ ಬೇರೆ ವ್ಯಕ್ತಿಗಳ ಜೊತೆ ಮಾಡುವ ಸಂವಹನ ಅಂತ Limit ಮಾಡಲೇಬಾರದು. ಯಾಕೆಂದರೆ ಒಬ್ಬ ಕವಿ ಇವತ್ತು ಬರಿತಾ ಇರೋನು ತನ್ನ ಹಿಂದಿನ ಕವಿಗಳ

ಜೊತೆಯಲ್ಲಿ ಸಂವಹನವನ್ನು ಸಾಧಿಸ್ತಾ ಇರ್ತಾನೆ.

ಡಿ.ಎಸ್. ನಾಗಭೂಷಣ : ಕಾವ್ಯ ಹುಟ್ಟುವ ಕ್ರಿಯೆಯಲ್ಲೇ ಈ ಸಂವಹನದ ಅಂಶ ಕೂಡಾ ಸೇರ್‍ಕೊಂಡಿರುತ್ತಾ?

ಶಿವಪ್ರಕಾಶ್ : ಹೌದು

ಕೆ.ಬಿ. ಸಿದ್ದಯ್ಯ : ಇಲ್ಲ. ಕಾವ್ಯ ಬಹಳಸಲ ಹುಟ್ಟುವಾಗ ಸ್ವಯಂ ಅಭಿವ್ಯಕ್ತಿಯೇ ಆಗಿ ಹುಟ್ಟುತ್ತೆ. ಈಗ ಅದು ಹೆಂಗೆ ಅಂದರೆ, ನಮ್ಮ ಉಸಿರಾಟಾನ ನಾನೇ ಅಧ್ಯಯನ ಮಾಡೋ ರೀತಿ. ಈಗ Sound ನಾವು ಹತ್ತಿರದಲ್ಲಿದ್ದರೆ ಅದು ನಮಗೆ ಜೋರಾಗಿ ಕೇಳ್ಸುತ್ತೆ. ದೂರ ಹೋದ ಹಾಗೆ ಆ Sound ಕೇಳಿಸದ ಹಾಗೆ ಆಗುತ್ತೆ. ಈ ರೀತಿ ಕಾವ್ಯ ಅದು ಹುಟ್ಟುವಾಗ ಸ್ವಯಂ ಅಭಿವ್ಯಕ್ತಿಯಾಗಿ, ಅಂದರೆ ತನ್ನೊಡನೆ ತಾನೆ ಮಾತಾಡಿಕೊಳ್ಳೊ ರೀತಿನಲ್ಲಿ ಕಾವ್ಯ ಹುಟ್ಟುತ್ತೆ. ಆದರೆ ಹೀಗೆ ತನ್ನೊಡನೆ ತಾನು ಮಾತಾಡಿಕೊಳ್ಳುವಾಗ, ತನ್ನ ಉಸಿರಾಟವನ್ನು ತಾನೇ ಅಧ್ಯಯನ ಮಾಡುವಾಗ, ತಾನೇ ತಿಳಿದಾಗ ಆ ಉಸಿರಾಟದ ಹಂತಗಳನ್ನು ನಾವು ತಿಳಿಯಬೇಕಾಗುತ್ತೆ. ಅದನ್ನು ಆದಿ, ಮಧ್ಯ, ಅಂತ ಹೇಳಬಹುದು. ಅದೇ ರೀತಿ ಕಾವ್ಯ ಸ್ವಯಂ ಅಭಿವ್ಯಕ್ತಿಯಾಗಿದ್ದಾಗ, ತನ್ನೊಡನೆ ತಾನು ಮಾತಾಡಿಕೊಳ್ಳುವಾಗ ಅದರ ಪ್ರಾರಂಭವನ್ನ (Past) ನಾವು ತಿಳೀಬೇಕಾಗುತ್ತದೆ. ಅಂದರೆ ಈ Pastಗೆ ಇರುವ ಅರ್ಥ - ಅದು ಒಂದು ಜನಾಂಗದ ದನಿಯಾಗಿರಬಹುದು. ಒಂದು ಸಂಸ್ಕೃತಿಯ ವಾಹಕವಾಗಿರಬಹುದು ಒಂದು ವಿಚಾರದ ವಾಹಕ ವಾಗಿಯೂ ಕೂಡ - ಅಂತಹ ಒಂದು ಆದಿಯನ್ನ ನಾವು ತಿಳಿದು ಅದನ್ನು ವರ್ತಮಾನದಲ್ಲಿ ಅರ್ಥೈಸಬೇಕಾಗುತ್ತದೆ. ಆಮೇಲೆ ಅದರ ಮುಂದುವರಿಕೆನೂ ಕೂಡ ತಿಳೀಬೇಕಾಗುತ್ತದೆ. ಹೀಗೆ ತಿಳಿಯುವಾಗ ಈ ಸ್ವಯಂ ಅಭಿವ್ಯಕ್ತಿ ಅಂತಕ್ಕದ್ದು ಸಂವಹನ ಆಗಬೇಕಾದ ಒಂದು ಸ್ಥಿತಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಏಕೆಂದರೆ ಕವಿ ಆದವನು ಅವನ ಅರಿವಿನ ಮಟ್ಟದಲ್ಲಿ ಸಾಧಕನೂ ಆಗಿರುತ್ತಾನೆ. ಆದ್ದರಿಂದ ಅದು ಸ್ವಯಂ ಅಭಿವ್ಯಕ್ತಿಯಾಗಿ ಹುಟ್ಟಿ ಸಂವಹನದ ಮೂಲಕ ಇದನ್ನೆಲ್ಲಾ ಗೆದ್ದಿರುತ್ತದೆ. ಅಂತ ನನಗನ್ನಿಸುತ್ತದೆ.

ಡಿ.ಎಸ್. ನಾಗಭೂಷಣ : ಶಿವಪ್ರಕಾಶ್ ಮಾತಾಡ್ತ ಭಾವೋತ್ಕರ್ಷದ ಗಳಿಗೆಯಲ್ಲಿ ಕಾವ್ಯ ಹುಟ್ಟುತ್ತೆ ಅಂತ ಹೇಳಿದರು. ಈ ಭಾವೋತ್ಕರ್ಷವನ್ನೇ ಹಿಂದೆ ಸ್ಫೂರ್ತಿ ಅಂತ ಕರೀತಾ ಇದ್ದರಾ? ಇವತ್ತು ಜನ ಸ್ಫೂರ್ತಿಯ ಬಗ್ಗೆ ಹೆಚ್ಚು ಮಾತಾಡೋದಿಲ್ಲ. ಆದರೆ ಇವತ್ತು ಚರ್ಚೆಯಲ್ಲಿ ಕಾವ್ಯಕ್ಕೆ ಸ್ಫೂರ್ತಿ ಮೂಲ ಅನ್ನುವ ರೀತಿಯಲ್ಲಿ ಮಾತು ಮತ್ತೆ ಮತ್ತೆ ಬರ್‍ತಾ ಇದೆ. ಈ ಬಗ್ಗೆ ಏನು ಹೇಳ್ತೀರಿ? ಸ್ಫೂರ್ತಿಯನ್ನ ನೀವು ಇವತ್ತು ಯಾವ ರೀತಿ ನಿರೂಪಿಸುತ್ತೀರಾ?

ಜಿ.ಎಸ್. ಶಿವರುದ್ರಪ್ಪ : ಸ್ಫೂರ್ತಿಗಿದ್ದ ಧಾರ್ಮಿಕ ಸಂಬಂಧವಾದ ಭಾವನೆ ಮಾಯವಾಗಿದೆಯೇ ಹೊರತಾಗಿ ಸ್ಫೂರ್ತಿಯ ಪರಿಕಲ್ಪನೆ ಹಾಗೆ ಇದೆ. ಯಾರೂ ಕೂಡ ಕಾವ್ಯವನ್ನು ತನ್ನ ಮನಸ್ಸು ಬಂದಾಗ ಬರಿತೀನಿ ಅಂತ ಹೇಳೋಕ್ಕಾಗೋಲ್ಲ. ಅದಕ್ಕೊಂದು ವಿಶೇಷವಾದ ಮನಃಸ್ಥಿತಿ, ಸಂದರ್ಭ ಮತ್ತು ಅದಕ್ಕೆ ಅಗತ್ಯವಾದ ಯಾವುದೋ ಒಂದು ಒತ್ತಡ ಮತ್ತು ಉತ್ಸಾಹ ಇರಬೇಕು. ಈ ಸ್ಥಿತೀನೇ ನಾವು ಸ್ಫೂರ್ತಿ ಅಂತ ವರ್ಣಿಸುತ್ತೇವೆ. ಆದರೆ

ಸ್ಫೂರ್ತಿ ಅಂತ ಹೇಳಿದರೆ, ಕವಿ, ಕಾವ್ಯಾಭಿವ್ಯಕ್ತಿಯ ಸಂದರ್ಭದಲ್ಲಿ ಇರುವಾಗಿನ ಒಂದು ಮನಃಸ್ಥಿತಿಯನ್ನು ನಾನು ಸ್ಫೂರ್ತಿ ಅಂತ ಕರೀತಿನಿ. ಆದ್ದರಿಂದ ಈ ಸ್ಫೂರ್ತಿಯ ಸ್ಥಿತಿ ಅನ್ನೋದು ಪ್ರತಿಭೆಯೊಂದಿಗೆ ಹೋಗತಕ್ಕಂತದ್ದು. ಹೀಗಾಗಿ ಸ್ಫೂರ್ತಿ ಅನ್ನೋದು ಒಂದು ಮಾನಸಿಕ ಉತ್ಸಾಹ ಅಂತ ಮನಃಶಾಸ್ತ್ರಜ್ಞರು ವರ್ಣಿಸುತ್ತಾರೆ. ಕವಿಯ ಕಾವ್ಯರಚನೆಯ ಸಂದರ್ಭದಲ್ಲಿ ಅವನ ಕಾವ್ಯರಚನೆಯನ್ನು ಇನ್ನೂ ಹೆಚ್ಚು ಸುಗಮವಾಗಿ ಮೂಡುವಂತಹ ಉತ್ಸಾಹ ಆವೇಶ ಅಥವಾ ಸಾಮರ್ಥ್ಯ ಅಂತ ಹೇಳುತ್ತಾರೆ. ಈ ಸ್ಫೂರ್ತಿಯಲ್ಲಿ ಬರೆದಿದ್ದೆಲ್ಲ ಸರಿಯಾಗಿರುತ್ತದೆ ಅಂತ ಹೇಳೋಕ್ಕಾಗೋದಿಲ್ಲ. ಅನೇಕ ವೇಳೆ ಸ್ಫೂರ್ತಿ ಇರುತ್ತದೆ ನಿಜ, ಆದರೆ ಸ್ಫೂರ್ತಿ ಜೊತೆಗೇ ವಿವೇಚನೆ ಅನ್ನೋದು ಕೆಲಸ ಮಾಡುತ್ತದೆ. ಇದನ್ನ Critical Faculty ಅಂತಾನು ಕರೀತಾರೆ. ಆದ್ದರಿಂದ ಕವಿಯ ಕಾವ್ಯ ನಿರ್ಮಿತಿಯ ಸಂದರ್ಭದಲ್ಲಿ ಮೂರು ಶಕ್ತಿಗಳು ಕೆಲಸಮಾಡುತ್ತವೆ. ಒಂದು ಪ್ರತಿಭೆ, ಇನ್ನೊಂದು ಸ್ಫೂರ್ತಿ ಮತ್ತೊಂದು ವಿವೇಚನೆ. ಈ ಮೂರು ಸೇರಿ ಒಂದು ಕೃತಿ ನಿರ್ಮಾಣ ಆಗೋದರಲ್ಲಿ ಸಹಕರಿಸುತ್ತದೆ. ಆದ್ದರಿಂದ ಸ್ಫೂರ್ತಿ ಅನ್ನೋ ವಿಚಾರ ಕುರಿತು ಬಹಳ ಜನ ಇವತ್ತು ಲಘುವಾಗಿ ಮಾತಾಡ್ತಾ ಇದ್ದರೂ ಕೂಡ ಸ್ಫೂರ್ತಿ ಅನ್ನೋದು ಒಂದು ಮಾನಸಿಕ ಉತ್ಸಾಹ, ಕಾವ್ಯರಚನೆಯ ಮನಃಸ್ಥಿತಿ ಅನ್ನೋದನ್ನ ಬಹುಶಃ ಎಲ್ಲರೂ ಒಪ್ಪುತ್ತಾರೆ ಅಂತ ನಾನು ತಿಳಿದಿದ್ದೀನಿ.

ಡಿ.ಎಸ್. ನಾಗಭೂಷಣ : ಕಾವ್ಯವನ್ನ ಧ್ಯಾನದ ಪರಿಭಾಷೆಯಲ್ಲಿ ವಿವರಿಸುವ ಸಿದ್ಧಯ್ಯನವರು ಏನ್ ಹೇಳ್ತಾರೆ ಈ ಬಗ್ಗೆ?

ಕೆ.ಬಿ. ಸಿದ್ಧಯ್ಯ : ಈ ಸ್ಫೂರ್ತಿಗೆ ಒಂದು ಸಾಂಪ್ರದಾಯಿಕ ಅರ್ಥ ಕೂಡ ಇದೆ.

ಜಿ.ಎಸ್. ಶಿವರುದ್ರಪ್ಪ : Inspiration ಅನ್ನೋ ಮಾತೇ ಮೂಲಭೂತವಾಗಿ Medical Scienceನಿಂದ ಬಂದದ್ದು. ಅದಕ್ಕೂ ಹಿಂದೆ ಶಿವಪ್ರಕಾಶ್ ಹೇಳಿದ ಹಾಗೆ ಜಾತ್ರೆ ಮತ್ತು ಹಬ್ಬಹರಿದಿನಗಳಲ್ಲಿ ದೇವರು ಮೈಮೇಲೆ ಬರುತ್ತಲ್ಲ ಆ ಕ್ರಮವನ್ನ ಗ್ರೀಕರಲ್ಲಿ ಸ್ಫೂರ್ತಿ ಅಂತ ಕರೀತಾ ಇದ್ದರು. ಅರಿಸ್ಟಾಟಲ್ ತನ್ನ ಕಾವ್ಯಮೀಮಾಂಸೆಯಲ್ಲಿ ಉಲ್ಲೇಖಿಸಿರುವ ಈ ಸ್ಫೂರ್ತಿ ಅಂತ ಅನ್ನೋದು ಗ್ರೀಕ್ ವೈದ್ಯಶಾಸ್ತ್ರದಿಂದ ತೆಗೆದುಕೊಂಡಿರೋದು. ಆದರೆ ಸ್ಫೂರ್ತಿ ಅಂದರೆ ಉಸಿರನ್ನ ಹೊರ ಬಿಡುವ ಒಂದು ಕ್ರಮ. ಉಚ್ಛ್ವಾಸ - ನಿಶ್ವಾಸಕ್ಕೆ ಸಂಬಂಧಪಟ್ಟ ಹಾಗೆ. ಆದ್ದರಿಂದ ಸ್ಫೂರ್ತಿ ಅಂದರೆ ಒಂದು ಉತ್ಸಾಹದ ಮನಸ್ಸಿಗೆ ಸ್ಫೂರ್ತಿ ಅಂತ ಹೇಳಬಹುದು. Taking the breath in ಅಂತ ಹೇಳ್ತಾರಲ್ಲ ಈ ಸ್ಥಿತಿಗೆ ಸ್ಫೂರ್ತಿ ಅಂತ ಕರೀತಾರೆ.

ಕೆ.ಬಿ. ಸಿದ್ಧಯ್ಯ : ಸ್ಫೂರ್ತಿ ಅಂದರೆ ಅದು ಎಲ್ಲಿಂದ ಬರ್ತದೆ, ಹೆಂಗೆ ಬರ್ತದೆ ಅಂತ. ಈಗ ಒಂದು ಹೂವನ್ನ ನೋಡಿದರೆ, ಅಥವಾ ಆ ಅರಳಿದ ಹೂವಿನ ಮೇಲೆ ದುಂಬಿ ಬಂದು ಕೂಡೋದನ್ನ ನೋಡಿದರೆ ಇದು ಭಾವುಕನಾಗಿರುವ ಕವಿಗೆ ಒಂದು ಸ್ಫೂರ್ತಿಯಾಗಿರಬಹುದು. ಆದರೆ ನನಗೆ ಹಾಗನಿಸೋದಿಲ್ಲ. ಆ ಹೂವಿನ ಪರಾಗ ನಳಿಕೆನಲ್ಲಿ ಕ್ಯಾಂಟಾಕರಸ್ ಅನ್ನೋ ಹುಳ ಇರುತ್ತೆ, ಅದು ದಳಗಳನ್ನ ಹೂವಿಗೆ ಗೊತ್ತಿಲ್ಲದೆನೆ ಕಡಿದು ಹಾಕುತ್ತೆ. ಅದರಿಂದ ದುಂಬಿ ಮಧುವಿನಿಂದ ವಂಚಿತವಾಗುತ್ತದೆ. ಸೌಂದರ್ಯ ನಾಶವಾಗುತ್ತದೆ. ಇದನ್ನ ನೋಡಿದಾಗ

ಒಟ್ಟು, ಹೂ ದುಂಬಿ ಮತ್ತು ಆ ಕ್ಯಾಂಟಾಕರಸ್ ಹುಳ ಇವುಗಳ ಪೂರ್ಣ ಚಕ್ರದಲ್ಲಿ ಅಡಗಿರುವ ನಿರ್ನಾಮ ಅಥವಾ ಇಲ್ಲದಿರುವಿಕೆ, ಅಲ್ಲಿ ನನಗೆ ಆಕರ್ಷಣೆ ಉಂಟಾಗುತ್ತದೆ. ಅದನ್ನ ಸ್ಫೂರ್ತಿ ಅಂತ ನಾನು ತಿಳೀತೀನಿ. ಅಷ್ಟೇ ಅಲ್ಲದೆ ಹೂವಿನಿಂದ ಹಿಡಿದು ನೆರೂಡನವರೆಗೆ ನೋಡೋದಾದರೆ, ತೋಟದ ಗುಲಾಬಿನಲ್ಲಿ ಕಾವ್ಯಕ್ಕೆ ಸ್ಫೂರ್ತಿ ಇದೆಯೋ ಬೀದಿಯಲ್ಲಿ ಚೆಲ್ಲಿರುವ ರಕ್ತದಿಂದ ಕಾವ್ಯಕ್ಕೆ ಸ್ಫೂರ್ತಿ ಇದೆಯೋ ಅಂತ ನಾವು ಕೇಳಿದರೆ, ನನಗೆ ಅವೆರಡೂ ಕೂಡ ಅಲ್ಲ ಅಂತ ಅನಿಸುತ್ತದೆ. ಈ ಎರಡರ ಪೂರ್ಣ ತಿಳುವಳಿಕೆ ಈ ಎರಡರ ಪೂರ್ಣ ಅರಿವು ಇರುತ್ತಲ್ಲ, ಅದೇ ಸ್ಫೂರ್ತಿ ಅಂತ ನನಗನಿಸುತ್ತದೆ. ಯಾವ ಅರ್ಥದಲ್ಲಿ ನಾನು ಹೇಳ್ತಾ ಇದ್ದೀನಿ ಅಂದರೆ ನಮ್ಮ ಜಾನಪದದಲ್ಲಿ ಅರಿವೇ ಗುರು ಅಂತ ಹೇಳ್ತಾರೆ. ಈ ಅರ್ಥದಲ್ಲಿ ಅರಿವು ಸ್ಫೂರ್ತಿಯಾಗಿರುತ್ತದೆ ಅಥವಾ ಪ್ರಭುದೇವರು ಹೇಳೋ ಮಾತಿನ ಅರ್ಥದಲ್ಲಿ 'ತನ್ನ ತಾನರಿತ ಶರಣಂಗೆ ಗುಹೇಶ್ವರನೆಂಬುದು ಒಂದು ಕಿಂಚಿತ್' ಅನ್ನುವ ಈ ಅರಿವೇ ಗುರು ಎನ್ನುವ ಈ ಅರ್ಥದಲ್ಲಿ ಸ್ಫೂರ್ತಿ ಇರಬಹುದೇನೋ ಅಂತ ನನಗೆ ಅನಿಸ್ತಾ ಇದೆ.

ಶಿವಪ್ರಕಾಶ್ : ಸ್ಫೂರ್ತಿ ಅನ್ನೋದು ಇವತ್ತು ತಮಾಷೆ ಶಬ್ದವಾಗಿದೆ, ಕೆಲವು ಸಲ ಈತರ ಆಗೋದು ಅವಶ್ಯಕ ಅಂತ ಕಾಣಿಸ್ತದೆ. ಯಾವ ರೀತಿ ದೇವರು ಅನ್ನೋ ಶಬ್ದ, ಧರ್ಮ ಅನ್ನೋ ಶಬ್ದ, ಸಮಾಜವಾದ ಅನ್ನೋ ಶಬ್ದ ಭ್ರಷ್ಟಾವಾಗಬಹುದೋ ಅದೇ ರೀತಿ ಸ್ಫೂರ್ತಿ ಅನ್ನೋ ಶಬ್ದ ಭ್ರಷ್ಟವಾದಾಗ ಅದು ಮೊದಲು ಯಾವ ಸ್ಥಿತಿಯನ್ನು ತೋರಿಸ್ತಾ ಇತ್ತು ಅದನ್ನ ತಿರುಗಿ ಪಡೆದುಕೊಳ್ಳೋಕ್ಕೋಸ್ಕರ ಆ ಶಬ್ದವನ್ನು ನಿರಾಕರಿಸಬೇಕಾಗುತ್ತದೆ. ಈಗ ನಮ್ಮ ನವೋದಯ ಕಾವ್ಯದಲ್ಲಿ ಬಹಳ ಕವಿಗಳ ಶ್ರೇಷ್ಠ ರಚನೆಗಳನ್ನು ಬಿಟ್ಟರೆ ಸ್ಫೂರ್ತಿ ಬಹಳ ಜನಕ್ಕೆ ಒಂದು pose ಆಗಿದೆ. ಒಂದು ಹುಣಸೆ ಮರ ನೋಡಿದರೆ thrill ಆಗೋದು, ಒಂದು ನಾಯಿ ಕರಕೊಂಡು ಹೋಗೋದು ನೋಡಿ thrill ಆಗೋದು ಈತರದ್ದೆಲ್ಲಾ ಶುರುವಾಗುತ್ತದೆ. ಹೀಗೆ ಸ್ಫೂರ್ತಿ ಅನ್ನೋದು pose ಆದಾಗ ಅದನ್ನ ನಿರಾಕರಿಸಬೇಕಾಗುತ್ತದೆ. ಯಾವ ರೀತಿ ವಚನಕಾರರು ದೇವಸ್ಥಾನ ಒಂದು pose ಆದಾಗ ಆಚರಣೆಗಳು ಒಂದು pose ಆದಾಗ ಅದನ್ನ ನಿರಾಕರಿಸಿದರು, ಹಾಗೇ ನಾವೂ ನಿರಾಕರಿಸಬೇಕಾಗುತ್ತದೆ. ಆಮೇಲೆ ವಚನಕಾರರು ಸ್ಥಾಪಿಸಿದ ಧರ್ಮದಲ್ಲಿ ಅವರು ಬೋಧಿಸಿದ ವಿಧಿಗಳು ಒಂದು pose ಆದಾಗ ಅದನ್ನ ನಿರಾಕರಿಸಬೇಕಾಗುತ್ತದೆ. ಇನ್ನೊಂದು ಕಾರಣ ಏನೆಂದರೆ, ಆಧುನಿಕ ನಾಗರೀಕತೆಯಲ್ಲಿ ವೈಜ್ಞಾನಿಕ ಮಾದರಿಗಳ ಮೇಲೆ, ಲೌಕಿಕ ಮಾದರಿಗಳ ಮೇಲೆ ಹೆಚ್ಚು ಒತ್ತು ಇರುವುದರಿಂದ, ಕಾವ್ಯವನ್ನೂ ಲೌಕಿಕ ಮಾದರಿಗಳ ಮೂಲಕ ಅರ್ಥಮಾಡಿಕೊಳ್ಳುವ ಒಂದು ಕ್ರಮ ವಿಮರ್ಶೆಯಲ್ಲಿ ಕಾಣುತ್ತದೆ. ಕವಿಗಳು ಬರೆದಿರುವ ವಿಮರ್ಶೆಯಲ್ಲಿ ಹೆಚ್ಚು ಕಾಣುತ್ತದೆ. ನನಗೆ ಅನ್ನಿಸೋದು ಏನೆಂದರೆ ಸ್ಫೂರ್ತಿ ಅನ್ನುವ ಶಬ್ದಕ್ಕಿಂತ, ಮೂಲತಃ ಆ ಶಬ್ದ ಯಾವ ಸ್ಥಿತಿಯನ್ನು ತೋರಿಸ್ತಾ ಇತ್ತು, ನಿರ್ದೇಶಿಸುತ್ತಾ ಇತ್ತು, ಅದು ಮುಖ್ಯ. ಪ್ರೊಫೆಸರ್ ಅದರ ಬಗ್ಗೆ ಮಾತಾಡ್ತಾ, ಒಂದು ರೀತಿಯ ಮಾನಸಿಕ ತಯಾರಿ, ಉತ್ಸಾಹ ಅಂತ ಅರ್ಥ ಕೊಟ್ಟರು. ಸಿದ್ಧಯ್ಯನವರು ಅರಿವಿನ ಉನ್ನತ ಸ್ಥಿತಿ ಅಂತ ಅರ್ಥ ಕೊಟ್ಟರು. ಬಹುಶಃ ನನಗನಿಸೋದು, ಒಂದು ಆಂತರಿಕ ಒತ್ತಡ ಇಲ್ಲದೆ ಯಾರೂ

ಕವಿತೆ ಬರೆಯೋಕ್ಕಾಗೋದಿಲ್ಲ, ಈ ಆಂತರಿಕ ಒತ್ತಡವನ್ನು ನಾವು ಅರ್ಥಮಾಡಿಕೊಳ್ಳಬೇಕಾದರೆ, ಈ ಆಂತರಿಕ ಒತ್ತಡದ ಮುಂದೆ ನಾವು ನಮ್ರರಾಗಿರಬೇಕಾಗುತ್ತದೆ. ಬಹಳ ಪ್ರಾಮಾಣಿಕರಾಗಿರ ಬೇಕಾಗುತ್ತದೆ. ಈ ಪ್ರಾಮಾಣಿಕತೆ ಯಾವಾಗ ಬರುತ್ತದೆ ಎಂದರೆ ನಮ್ಮ ಅರಿವಿನ ದ್ವಾರಗಳು ಬಹಳ ಶುದ್ಧವಾಗಿದ್ದಾಗ ಮಾತ್ರ ಬರುತ್ತದೆ. ಆದ್ದರಿಂದ ಸ್ಫೂರ್ತಿ ಅನ್ನೋ ಶಬ್ದ ಒಂದು pose ಆದಾಗ ಒಂದು ಸ್ಟಂಟ್ ಆದಾಗ ಅದು ಪ್ರಾಮಾಣಿಕತೆಯನ್ನ ತೆಗೆದುಹಾಕುತ್ತದೆ. ಇದು ಮುಖ್ಯವಾದ ಪ್ರಶ್ನೆ. ಈ ಆಂತರಿಕ ಒತ್ತಡಕ್ಕೆ ಒಬ್ಬ ಕವಿ ತನ್ನ ಕವಿತೆಯಲ್ಲಿ ಅವನು ಬದ್ಧವಾಗಿದ್ದಾನಾ, ಪ್ರಾಮಾಣಿಕವಾಗಿದ್ದಾನಾ ಅನ್ನೋದು.

ಡಿ.ಎಸ್. ನಾಗಭೂಷಣ : ಪ್ರಾಮಾಣಿಕತೆ ಪ್ರಶ್ನೆ ಬಂದಾಗ ಅದನ್ನ ಯಾರು ನಿರ್ಧರಿಸಬೇಕು ಅನ್ನೋದು ಗೊತ್ತಾಗದೇ ಇರೋದರಿಂದ.....

ಜಿ.ಎಸ್. ಶಿವರುದ್ರಪ್ಪ : ನಾವೇ ನಿರ್ಧರಿಸಬೇಕಷ್ಟೇ.....

ಶಿವಪ್ರಕಾಶ್ : ಪ್ರಾಮಾಣಿಕತೆ, ಸ್ಫೂರ್ತಿ, ಕವಿತೆ ಚೆನ್ನಾಗಿದೆ, ಚೆನ್ನಾಗಿಲ್ಲ ಇವೆಲ್ಲ ಬಹುಮಟ್ಟಿಗೆ ಬಹಳ Subjective ಆದ feelings, ಅಂದರೆ ಅದು ಕವಿತೆ ಬರೆದೋನಿಗೆ ಗೊತ್ತಿರಬೇಕು. ಆ ಕವಿತೆ ಓದ್ದೋವರಿಗೆ ಅವನು ಪ್ರಾಮಾಣಿಕನೆ ಅಲ್ಲದೆ ಅನ್ನೋದು Intuitiveಆಗಿ ಗೊತ್ತಾಗುತ್ತದೆ, ಅದನ್ನ ಯಾರೂ prove ಮಾಡೋದಕ್ಕಾಗೋದಿಲ್ಲ.

ಡಿ.ಎಸ್. ನಾಗಭೂಷಣ : ಒಟ್ಟಿನಲ್ಲಿ ಸ್ಫೂರ್ತಿಯ ಅರ್ಥ ಬದಲಾವಣೆ ಆಗಿದ್ದರೂ ಕೂಡ ಸ್ಫೂರ್ತಿ ಇದ್ದೇ ಇರುತ್ತದೆ, ಪ್ರತಿಯೊಂದು ಕವನದ ಹಿಂದೆ ಅಂತ ಹೇಳಬಹುದು.

ಶಿವಪ್ರಕಾಶ್ : ಒಂದು ಬಗೆಯ ಮಾನಸಿಕ ಸಿದ್ಧತೆ, ಮಾನಸಿಕ ಒತ್ತಡ ಇಲ್ಲದಿದ್ದರೆ ಕಾವ್ಯ ಬರೆಯೋದಕ್ಕೆ ಆಗೋಲ್ಲ.

ಡಿ.ಎಸ್. ನಾಗಭೂಷಣ : ಇಷ್ಟೆಲ್ಲ ಚರ್ಚೆ ಆದ ಮೇಲೆ ಒಂದು ಪ್ರಶ್ನೆ ಏಳುತ್ತದೆ. ಈ ಕಾವ್ಯ ಅರ್ಥಕ್ಕೆ ಸಿಗುತ್ತಾ ಅಂತ. ಮೊದಲು ಕಾವ್ಯವನ್ನು ಅದರ ಪ್ರತಿಪದಾರ್ಥದ ಮೂಲಕ ತಾತ್ಪರ್ಯ ಹೇಳೋ ಒಂದು ಪರಿಪಾಠ ಇತ್ತು. ಇವತ್ತಿನ ಕಾವ್ಯ ಆ ಥರದ ಅರ್ಥಕ್ಕೆ ಸಿಗುತ್ತಾ.

ಜಿ.ಎಸ್. ಶಿವರುದ್ರಪ್ಪ : ಕಾವ್ಯದಲ್ಲಿ ಅರ್ಥ ಉಂಟು. ಅದರಲ್ಲಿ ಎರಡು ಬಗೆ ಅಂತ ಹೇಳ್ತಾರೆ. ಒಂದು ತಿಳಿಯುವ ಅರ್ಥ ಮತ್ತೊಂದು ಹೊಳೆಯುವ ಅರ್ಥ. ತಿಳಿಯುವ ಅರ್ಥ ಎಲ್ಲರಿಗೂ ಸಮಾನವಾದದ್ದು. ಕಾವ್ಯದಲ್ಲಿ ಇದೂ ಬಹಳ ಮುಖ್ಯವಾದದ್ದು. ಇಲ್ಲಿ ಕವಿ ಏನು ಹೇಳುತ್ತಿದ್ದಾನೆ ಅನ್ನೋದು ತಿಳಿಯುವ ಹಾಗೆ ಇರಬೇಕು. ಅದರಾಚೆಗೆ ಹೊಳೆಯುವ ಅರ್ಥ ಇದೆ. ಅಂದರೆ ಯಾವುದೋ ವಿಶೇಷವಾದ ಅನುಭವವನ್ನು ಕಟ್ಟಿಕೊಡುವಾಗ ಅದರಾಚೆಗೆ ನಿಲ್ಲುವಂತ ಒಂದು ಅರ್ಥ ಇದೆಯಲ್ಲ, ಅದೇ ನಿಜವಾದ ಕಾವ್ಯದ ಅರ್ಥ. ನಮ್ಮ ಕಾವ್ಯ ಮೀಮಾಂಸೆಯಲ್ಲಿ ಧ್ವನ್ಯಾರ್ಥ ಅಂತ ಕರೀತಾ ಇದ್ದರು. ತಿಳಿಯುವ ಅರ್ಥ ಎಲ್ಲರಿಗೂ ಸಮಾನವಾದದ್ದು. ಹೊಳೆಯುವ ಅರ್ಥ ಇದೆಯಲ್ಲ ಅದು ಓದುಗರಲ್ಲಿ ಮತ್ತೆ ಮತ್ತೆ ಬೆಳೆಯುವ ಅರ್ಥ ಕೂಡ ಹೌದು. ಈ ದೃಷ್ಟಿಯಿಂದ ಕಾವ್ಯಕ್ಕಿರುವ ಅರ್ಥ ಒಂದೇ ಅಲ್ಲ. ಮತ್ತು ಅದು ಓದುಗನ ಸಂಸ್ಕಾರಕ್ಕೆ ಅನುಗುಣವಾಗಿ ಕವಿಯ ಇಚ್ಛೆಗೆ ಸಂಗತವಾಗುವ ರೀತಿಯಲ್ಲಿ ಬೆಳೀತಲೇ

ಹೋಗುತ್ತದೆ. ಆ ದೃಷ್ಟಿಯಿಂದ ಕಾವ್ಯಕ್ಕೆ ಒಂದೇ ಅರ್ಥ ಅಂತ ಹೇಳೋಕಾಗೋದಿಲ್ಲ. ಒಂದು ಪದ್ಯವನ್ನು ನಾವು ಚಿಕ್ಕಂದಿನಲ್ಲಿ ಓದಿದಾಗ ಆಗುವ ಅರ್ಥಕ್ಕೂ ನಾವು ಬೆಳೆದ ಮೇಲೆ ಆಗುವ ಅರ್ಥಕ್ಕೂ ವ್ಯತ್ಯಾಸ ಇದೆ. ಆದ್ದರಿಂದ ನಾವು ಬೆಳೆತಾ ಹೋದಹಾಗೆ ಕಾವ್ಯದ ಅರ್ಥವೂ ಬೆಳೆತಾ ಹೋಗುತ್ತದೆ. ಈ ಕಾವ್ಯದ ಅರ್ಥವಂತಿಕೆ ಇದೆಯಲ್ಲ, ಇದೇ ಅದರ ನಿಜವಾದ ಸತ್ವ ಅಂತ ನಾನು ತಿಳಿದಿದ್ದೀನಿ.

ಶಿವಪ್ರಕಾಶ್ : ಕಾವ್ಯಕ್ಕೆ ಅರ್ಥ ಇಲ್ಲ ಅಂತ ಹೇಳೋಕ್ಕಾಗೋಲ್ಲ. ಈ ಶತಮಾನದ ಕೆಲವು ಕಾವ್ಯಪಂಥಗಳಲ್ಲಿ, ಕಾವ್ಯದಲ್ಲಿ ಅರ್ಥ ಮುಖ್ಯ ಅಲ್ಲ ಎಂಬ ನಿಲುವಿಗೆ ಪಶ್ಚಿಮದ ಅನೇಕ ವಿಮರ್ಶಕರು ಒಗ್ಗಿದ್ದಾರೆ. ಆದರೆ ಅರ್ಥ ಎನ್ನುವುದು ಕಾವ್ಯದ ಮುಖ್ಯವಾದ ಅಂಗ ಅನ್ನಿಸುತ್ತೆ. ಆದರೆ ಅರ್ಥ ಅನ್ನೋದೆ ಒಂದು ತಾರ್ಕಿಕವಾದ Category. ಅರ್ಥದ ಅರ್ಥವೇ ತರ್ಕ ಪ್ರಪಂಚಕ್ಕೆ ಸೇರಿದ್ದು. ನಾವೀಗ ಧ್ವನ್ಯಾರ್ಥ ಅಂದಾಗಲೂ ಕೂಡ ಒಂದು ಪರಿಕಲ್ಪನೆ ಮೂಲಕ ಅದನ್ನ ಅರ್ಥಮಾಡಿಕೊಳ್ಳೋದಕ್ಕೆ try ಮಾಡ್ತಾ ಇರ್ತೀವಿ. ಇದು ಸರಿಯಿಲ್ಲ ಅಂತ ನಾನು ಹೇಳ್ತಾ ಇಲ್ಲ, ತರ್ಕದ ಮೂಲಕ ಅರಿವಿನ ಅಭಿವ್ಯಕ್ತಿ ಕ್ರಮಗಳನ್ನು ಅರ್ಥಮಾಡಿಕೊಳ್ಳೋ ಅವಶ್ಯಕತೆ ಇದೆ. ಆದರೆ ಒಂದು ಅಪಾಯ ಏನು ಅಂದರೆ ಅರ್ಥಕ್ಕೆ ನಾವು ಜಾಸ್ತಿ ಒತ್ತು ಕೊಟ್ಟಾಗ ಕಾವ್ಯದ ಇನ್ನೂ ಮುಖ್ಯವಾದ ನಿಯೋಗಗಳು (Functions) ಏನು ಇರುತ್ತವೆ ಅವನ್ನ ಮರೆತು ಬಿಡ್ತೀವಿ. ಬಹಳ ಮಹತ್ವದ ಕವಿತೆಯನ್ನು ಓದಿದಾಗ ಅದು ಜಗತ್ತನ್ನು ನೋಡುವ ಹೊಸ ದೃಷ್ಟಿಯನ್ನು ನಮಗೆ ಕೊಡುತ್ತದೆ. ಹೊಸ ಕಣ್ಣನ್ನು ನಮಗೆ ಕೊಡುತ್ತದೆ. ಅಂದರೆ ಒಂದು ರೀತಿಯ ಪರಿವರ್ತನೆಯನ್ನು ಉಂಟುಮಾಡುತ್ತದೆ. ಅದು ಉಪಮೆಗಳ ಮೂಲಕ ಮಾಡಬಹುದು, ವಿರೋಧಾಭಾಸಗಳ ಮೂಲಕ ಮಾಡಬಹುದು. ಇದನ್ನ ಜಪಾನಿನ ಕಾವ್ಯ ಮೀಮಾಂಸೆಯಲ್ಲಿ ಏನು ಹೇಳ್ತಾರೆ ಅಂದರೆ, ಹಾಯಿಕು ಪದ್ಯವನ್ನು ಓದಿದಾಗ, ಓದುಗನ ಮನಸ್ಸಿನಲ್ಲಿ ಒಂದು ನಿರ್ಣಾಯಕವಾದ ಪರಿವರ್ತನೆಯಾಗುತ್ತದೆ. ಆಗ ಅವನು ಬುದ್ಧನ ಕಣ್ಣನ್ನ ಪಡೀತಾನೆ ಅನ್ನೋದು. ಈ ಅನುಭವವನ್ನು 'ಸಂವೇಗ' ಅಂತ ಕರೀತಾರೆ. ಆದ್ದರಿಂದ ಇದು ಒಂದು ಶ್ರೇಷ್ಠ ಕಾವ್ಯ ಮಾಡಬಹುದಾದ ಒಂದು ಬಹುಮುಖ್ಯ ನಿಯೋಗ ಅಂತ ನಾನು ತಿಳಿದಿದ್ದೀನಿ. So, ಅರ್ಥ ಕಾವ್ಯಕ್ಕೆ ಇದೆ ಅಂತ ಒಪ್ಪಿಕೊಂಡರೂ ಕೂಡ ಅಗತ್ಯಕ್ಕಿಂತ ಹೆಚ್ಚಿನ ಅರ್ಥಕೊಟ್ಟರೆ ಕಾವ್ಯದ ಇತರ ಪರಿಕರಗಳನ್ನು ನಾವು ಉದಾಸೀನ ಮಾಡ್ತಾ ಇದ್ದೀವಿ ಅಂತ ಅನಿಸುತ್ತೆ.

ಕೆ.ಬಿ ಸಿದ್ಧಯ್ಯ : ಈಗ ಒಂದು ಕಾವ್ಯಕ್ಕೆ ಅರ್ಥ ಇದೆ ಅಂತ ಕಾವ್ಯಕ್ಕೆ ಪ್ರವೇಶ ಮಾಡಬೇಕು ಅಥವಾ ಕಾವ್ಯವನ್ನು ಓದುವುದರಿಂದ ಅರ್ಥ ಬರುತ್ತದೋ ಅನ್ನೋದನ್ನ ನಾವು ತಿಳಿಬೇಕಾಗುತ್ತದೆ, ಇಲ್ಲಿ ಕಾವ್ಯ ಅಂತಿಮವಾಗಿ ಏನು? ಅನುಭವ. ಅದನ್ನ ನಾವು ಆಂತರಿಕ ಕಂಪನ ಅಂತ ಕರೀಬಹುದು. ಆಗ ಅಂತಿಮವಾಗಿ ಮನುಷ್ಯ ತನ್ನೊಳಗೆನೆ ತನ್ನ ಅನುಭವಗಳಿಗೆ ಅರ್ಥಗಳನ್ನು ಕಂಡುಕೊಳ್ಳುತ್ತಾನೆ. ಅವನ ಅನುಭವದಿಂದ ಉಂಟಾದ ಅರ್ಥವನ್ನು ವಿಸ್ತಾರ ಗೊಳಿಸುತ್ತಾನೆ. ಅಂದರೆ ವೈಯಕ್ತಿಕ ಅರ್ಥಗಳನ್ನು ವಿಶ್ವಾತ್ಮಕ ಅರ್ಥಗಳಿಗೆ ಒಳಪಡಿಸುತ್ತಾನೆ.

ಆದ ಕಾರಣ ಕಾವ್ಯಕ್ಕೆ ಅರ್ಥ ಇರುತ್ತೆ. ಆದರೆ ಅರ್ಥದ ಮೂಲಕ ಕಾವ್ಯವನ್ನು ನಾವು ನೋಡೋದಕ್ಕೆ ಆಗೋದಿಲ್ಲ. ಕಾವ್ಯದಿಂದ ಯಾವ ಅರ್ಥ ಬರುತ್ತದೆ. ಆ ಅನುಭವ ಕಟ್ಟಿಕೊಡುವ ಒಂದು ಅರ್ಥ ಏನಿರುತ್ತದೆ ಅದನ್ನು ನಾವು ತಿಳಿಬಹುದೇನೊ. ಆದರೆ ಇದೇ ಅರ್ಥ ಅಂತ $(A+B)^2$ ಸೂತ್ರದಂತೆ ಹೇಳೋಕೆ ಆಗೋದಿಲ್ಲ. ಆದರೆ ಆ ತರದ್ದು ಏನೂಂತ ಕೂಡ ಗೊತ್ತಾಗೋದಿಲ್ಲ. ನನಗನಿಸಿದ್ದು ಏನೂ ಅಂದರೆ ಈ ಮ್ಯಾಕ್‌ಬೆತ್ ನಾಟಕದಲ್ಲಿ ಲೇಡಿ ಮ್ಯಾಕ್‌ಬೆತ್‌ನ ನೋಡೋಕೆ ಒಬ್ಬ ಡಾಕ್ಟರ್ ಬರುತ್ತಾನೆ. ಅವನು ಹೇಳುತ್ತಾನೆ 'They should need more than a Physician', ಅವಳಿಗೆ ಡಾಕ್ಟರ್ ಕೋಡೋ ಔಷದಿಗಿಂತ ಏನೋ ಜಾಸ್ತಿ ಬೇಕಾಗಿರುತ್ತದೆ. ಡಾಕ್ಟರ್ cure ಮಾಡೋಕಾಗೋದಿಲ್ಲ ಅನಿಸುತ್ತೆ. ಕಾವ್ಯಕ್ಕೆ ಇಂಥ ಯಾವುದೋ ಒಂದು ಅರ್ಥ ಇರಬೇಕು. ಒಂದು ಔಷಧಿಯ ಗುಣ ಇರೋ ಅರ್ಥ ಕಾವ್ಯಕ್ಕೆ ಇರಬೇಕೇನೋ. ಯಾಕೆಂದರೆ ಮನುಷ್ಯನನ್ನು ಅಂತಿಮವಾಗಿ ಸಾಂತ್ವನಗೊಳಿಸುವ ಮತ್ತು ತನ್ನ ಅನುಭವದ ಜೊತೆ ತನ್ನನ್ನು ತಾನು ತೊಡಗಿಸಿಕೊಂಡು ಅರ್ಥ ಮಾಡಿಕೊಳ್ಳೋ ಒಂದು means ಕೂಡ ಒಂದು ಕಾವ್ಯ ಆಗಿರೋದ್ರಿಂದ ಆತರದ್ದು ಏನೋ ಅರ್ಥ ಇರಬೇಕು.

ಡಿ.ಎಸ್. ನಾಗಭೂಷಣ : ಶಿವಪ್ರಕಾಶ್ ಆರಂಭದಲ್ಲಿ ಮಾತಾಡ್ತಾ ಕಾವ್ಯದ ವಿಚಿತ್ರ, ಲಯದ ಬಗ್ಗೆ ಮಾತಾಡಿದರು. ಈ ಹಿನ್ನೆಲೆಯಲ್ಲಿ ನಾವು ಕಾವ್ಯಕ್ಕಿದ್ದ ಛಂದಸ್ಸಿನ ಪ್ರಶ್ನೆ ತಗೊಂಡರೆ, ಈಗ ಕಾವ್ಯ ಕ್ರಮೇಣ ಛಂದಸ್ಸನ್ನು ಕಳಕೊಂಡು ಸ್ವಚ್ಛಂದವಾಗುತ್ತಿದೆ ಅನ್ನೋ ಮಾತು ಕೇಳಿಬರ್ತಾ ಇದೆ. ಕಾವ್ಯ ಛಂದಸ್ಸನ್ನ ಯಾಕೆ ಕಳಕೊಳ್ತು ಅಥವಾ ನಿಜವಾಗಿಯೂ ಕಳಕೊಂಡಿದೆಯೇ? ಇವತ್ತು ಛಂದಸ್ಸಿನಲ್ಲಿ ಬರೀಬಹುದೊ? ಬರೆದೂ ಅದು ಸಾರ್ಥಕ ಕಾವ್ಯ ಆಗಬಹುದಾ! ಯಾರೂ ಏಕೆ ಛಂದಸ್ಸಿನಲ್ಲಿ ಕಾವ್ಯ ಬರೆಯೋದಿಲ್ಲ!

ಜಿ.ಎಸ್. ಶಿವರುದ್ರಪ್ಪ : ಕಾವ್ಯವನ್ನು ಮೊದಲಿಂದಲೂ ಛಂದೋಬದ್ಧವಾದ ಅಭಿವ್ಯಕ್ತಿ ಅಂತಾನೆ ಎಲ್ಲರೂ ಹೇಳ್ತಾ ಬರ್‍ತಿದ್ದಾರೆ. ಬಹುಶಃ ಅನುಭವಕ್ಕೊಂದು ಆಕಾರಾನ, ಚೌಕಟ್ಟನ್ನ ಕೊಡೋದಕ್ಕೆ ಛಂದಸ್ಸು ಅನ್ನೊದು Frame Work ಆಗಿತ್ತು. ಆದರೆ ನಮ್ಮ ಭಾರತೀಯ ಪರಂಪರೆಯೊಳಗೆ ಕಾವ್ಯ ಅಂದರೆ ಪದ್ಯರೂಪದ್ದು ಮಾತ್ರವಲ್ಲ, ಗದ್ಯರೂಪಕ್ಕೂ ಕಾವ್ಯ ಅಂತ ಹೇಳಿದ್ದಾರೆ. ಗದ್ಯಕ್ಕೆ ಯಾವ ಛಂದಸ್ಸಿದೆ? ಆದ್ದರಿಂದ ಭಾರತೀಯ ಕಾವ್ಯ ಕಲ್ಪನೆಯೊಳಗೆ ಛಂದೋಬದ್ಧವಾದ ರಚನೆ ಹೇಗೋ ಹಾಗೆ ಛಂದೋಬದ್ಧವಲ್ಲದ, ಆದರೆ ಕಾವ್ಯಕ್ಕೆ ಸಮೀಪ ವಾದ ಕಾವನ್ನ ಉಳಿಸಿಕೊಳ್ಳುವ ಬರವಣಿಗೆಗೆ ಕೂಡ ಕಾವ್ಯ ಅಂತ ಪರಿಗಣಿಸಲಾಗಿತ್ತು. ಕಾವ್ಯ ಅಂದರೆ ಪದ್ಯ-ಗದ್ಯ ಎರಡೂ ಸೇರಿ ಅಂತ ನಮ್ಮಲ್ಲಿ ಹೇಳಿರೋದು ಬಹಳ ಸ್ವಾರಸ್ಯಕರ ವಾದದ್ದು. ಪಶ್ಚಿಮದಲ್ಲಿ ಈ ರೀತಿಯ ಕಲ್ಪನೆಯಿಲ್ಲ. ಬಹುಶಃ ಅಲ್ಲಿ ಯಾರೂ ಗದ್ಯವನ್ನ ಕಾವ್ಯ ಅಂತ ಕರೆದಿರೋದು ನನಗೆ ಗೊತ್ತಿಲ್ಲ.

ಡಿ.ಎಸ್. ನಾಗಭೂಷಣ : ಅಂದರೆ ಸೃಜನಾತ್ಮಕ ಸಾಹಿತ್ಯವೆಲ್ಲವೂ ಕಾವ್ಯ!

ಜಿ.ಎಸ್. ಶಿವರುದ್ರಪ್ಪ : ಹೌದು ಪ್ರತಿಭಾ ನಿರ್ಮಿತವಾದದ್ದು ಗದ್ಯವಾಗಿರಬಹುದು. ಪದ್ಯವಾಗಿರಬಹುದು. ಆದರೆ ಕಾವ್ಯವನ್ನು ಗದ್ಯ - ಪದ್ಯ ಅಂತ ಕರೆದಿರೋದು ನಮ್ಮ ಭಾರತೀಯ

ಚಿಂತಕರೇ ಆದ್ದರಿಂದ ನಮ್ಮಲ್ಲಿ ಛಂದೋಬದ್ಧದಾದ ರಚನೆಯೂ ಕೂಡ ಕಾವ್ಯ; ಛಂದೋಬದ್ಧವಲ್ಲದ ರಚನೆಯೂ ಕೂಡ ಕಾವ್ಯ. ಆದರೆ ಕಾವ್ಯ ಅಂತ ಹೇಳಿದರೆ ಛಂದೋಬದ್ಧವಾಗಿ ಇರಲೇಬೇಕಂತಲ್ಲ. ಯಾವ ಬರವಣಿಗೆಯಲ್ಲಿ ಒಂದು ರೀತಿಯ ಭಾವೋತ್ಕರ್ಷ ಇರುತ್ತದೆ, ಭಾವನೆಗಳನ್ನ ಅಥವಾ ಅನುಭವಗಳನ್ನ ಆಲೋಚನೆಗಳನ್ನ ಹರಳುಗೊಳಿಸಿ ಹೇಳಲಾಗುತ್ತದೆ ಅಂತ ಅಭಿವ್ಯಕ್ತಿಯನ್ನ ಕಾವ್ಯ ಅಂತ ಕರೀತಾರೆ. ಆದ್ದರಿಂದ ಕಾವ್ಯ ಅಂದರೆ, ಕಾವ್ಯವಲ್ಲದ ಬರವಣಿಗೆಯಿಂದ ಬೇರ್ಪಡಿಸೋ ಲಕ್ಷಣ ಇದೆಯಲ್ಲ ಶಾಸ್ತ್ರದಿಂದ ಗುರುತಿಸೋ ಲಕ್ಷಣ - ಈಗ ಮೊದಲಿಗೇನೆ ಇವರು ಚರ್ಚೆಯನ್ನು ಆರಂಭಿಸಿದವರು, ಬುದ್ಧಿಪೂರ್ವಕವಾಗಿ ಗ್ರಹಿಸೋದು, ಭಾವಪೂರ್ವಕವಾಗಿ ಗ್ರಹಿಸೋದು ಅಂತ - ಹಾಗೆ ಬುದ್ಧಿಪೂರ್ವಕವಾದ ರೀತಿಯಲ್ಲಿ ಲೋಕವನ್ನ ಗ್ರಹಿಸುವ ಬರವಣಿಗೆಯಿಂದ ಭಿನ್ನವಾದದ್ದು ಕಾವ್ಯ. ಆದ್ದರಿಂದ ಕಾವ್ಯಕ್ಕೆ ಛಂದಸ್ಸು ಅತ್ಯಂತ ಅಗತ್ಯ ಅಂತ ನನಗನಿಸೋದಿಲ್ಲ. ಆದರೆ ಅದನ್ನ ಕಾವ್ಯವನ್ನಾಗಿ ಮಾಡೋ ಒಂದು ಲಯಗಾರಿಕೆ ಇದೆಯಲ್ಲ ಅದು ಇದ್ದೇ ಇದೆ. ಆದಕಾರಣ ಇವತ್ತು ನಾವು ಛಂದೋಬದ್ಧವಾಗಿ ಬರೀತಾ ಇಲ್ಲ ಅನ್ನೋ ಕಾರಣಕ್ಕೆ ಕಾವ್ಯ ಅಲ್ಲ ಅಂತ ಹೇಳೋಕೆ ಸಾಧ್ಯವಾಗೋದಿಲ್ಲ. ಆದರೆ ಅದು ಮುಖ್ಯವಾಗಿ ಕಾವ್ಯವಾಗಿರಬೇಕು. ಕಾವ್ಯ ಏಕಾಗಿರುತ್ತದೆ ಅನ್ನೋದು ಬರಿಯೋರಿಗೆ ಗೊತ್ತು, ಓದೋರಿಗೆ ಗೊತ್ತು. ಅದು ಬರದೋವನಿಗೆ ಕಾವ್ಯವಾಗಿರುತ್ತದೆ ಇಲ್ಲವೇ ಅನ್ನೋದು ಮೂಲಮಾನ ನಾವು ಓದ್ದಾಗ ಗೊತ್ತಾಗುತ್ತದೆ. ಹೊರತಾಗಿ ಛಂದಸ್ಸು ಇದೆಯೋ ಇಲ್ಲವೋ ಅನ್ನೋದು ಮುಖ್ಯವಾಗೋದಿಲ್ಲ ನನಗೆ.

ಡಿ.ಎಸ್. ನಾಗಭೂಷಣ : ಇತ್ತೀಚಿನವರೆಗೆ ಎಲ್ಲಾ ಕವಿಗಳೂ ಛಂದೋಬದ್ಧವಾಗಿಯೇ ಬರೀತಾ ಇದ್ದರು ಅಂದರೆ ಸ್ಥೂಲವಾಗಿ ಹೇಳೋದಾದರೆ, ನವೋದಯ ಆರಂಭವಾಗೋ ಮುಂಚಿನವರೆಗೆ. ಆದರೆ ಇದ್ದಕ್ಕಿದಂತೆ ಛಂದಸ್ಸು ಯಾಕೆ ಮಾಯಾವಾಯ್ತು. ಇವತ್ತು ಯಾಕೆ ಯಾರೂ ಛಂದಸ್ಸಿನೊಂದಿಗೆ ಬರೆಯೋದಿಲ್ಲ?

ಶಿವಪ್ರಕಾಶ್ : ಇವತ್ತು ಯಾರೂ ಛಂದಸ್ಸಿನಲ್ಲಿ ಬರೀತಾ ಇಲ್ಲ ಅನ್ನೋದು ಸುಳ್ಳು. ಇವತ್ತು ಬರೀತಾ ಇರೋ ಬಹಳ ಜನ ಯುವಕವಿಗಳನ್ನು ನೋಡಿದಾಗ ಅದು ಬಹಳ ಸುಲಭವಾಗಿ ಐದು ಮಾತ್ರೆಯ ಲಯದಲ್ಲಿ ಬಿದ್ದು ಒದ್ದಾಡ್ತ ಇರುತ್ತೆ. ನಾವು ಮುಕ್ತ ಛಂದಸ್ಸಿನಲ್ಲಿ ಬರೀತಿದ್ದೀವಿ ಅಂತ ಅವರು ತಿಳಿದಿರುತ್ತಾರೆ. ಆದರೆ ನಿಜವಾಗಿಯೂ ಮುಕ್ತಿ ಸಿಕ್ಕೋದು ಎಷ್ಟು ಕಷ್ಟಾನೋ ಮುಕ್ತ ಛಂದಸ್ಸಿನಲ್ಲಿ ಬರೆಯೋದು ಅಷ್ಟೇ ಕಷ್ಟ. ಇಲ್ಲಿ ಛಂದಸ್ಸಿಗಿಂತ ಮುಖ್ಯವಾದದ್ದು ಕಾವ್ಯಕ್ಕೆ ಲಯ ಅಂತಾರೆ. ಕಾವ್ಯದ ಉಗಮದ ಪ್ರಶ್ನೆ ಬಂದಾಗ.... ಒಬ್ಬ ಪುರಾತನ ಸಮುದಾಯದ ಪೂಜಾರಿ ಯಾವುದೋ ಒಂದು ಶಕ್ತಿಯನ್ನು ಆವಾಹನೆ ಮಾಡಬೇಕಾದರೆ, ಅವನು ಆವಾಹನೆ ಮಾಡುತ್ತಿದ್ದ ಶಬ್ದಗಳ ಸಂಘಟನೆ ಲಯಬದ್ಧವಾಗಿ ಇರುತ್ತಿತ್ತು. ಅಂದರೆ ಅವನು ಒಂದು ಛಂದಸ್ಸನ್ನು ಹಾಕ್ಕೊಂಡು ಲಯವನ್ನ ನಿರ್ಮಾಣ ಮಾಡಲಿಲ್ಲ. ಎಷ್ಟೋ ಶತಮಾನಗಳ ಕಾಲ ಕಾವ್ಯ ರಚನೆಯಾಗುತ್ತಾ ಹೋಗುತ್ತದೆ. ಲಯಬದ್ಧವಾಗಿರುತ್ತದೆ. ಆಮೇಲೆ ಪಂಡಿತರು ಬಂದು ಅದನ್ನ ಒಂದು ಛಂದಸ್ಸ್ಃಶಾಸ್ತ್ರ ಮಾಡುತ್ತಾರೆ.

ಅದಕ್ಕೆ ಒಂದು ರೂಪ ಕೊಡುತ್ತಾರೆ. ಆದರೆ ಇದಕ್ಕೆ ಅಲ್ಲಮಪ್ರಭುವಿನಲ್ಲಿ ಒಂದು ಮಾತು ಬರುತ್ತೆ 'ಮೂರ್ತಿಯಾದ್ದಕ್ಕೆ ಪ್ರಳಯ ತಪ್ಪದು' ಅಂತ. ಈ ರೀತಿ ಅದು ಸ್ಥಾವರವಾದಾಗ, ಅದು ತನ್ನ ಜಂಗಮ ಸತ್ವವನ್ನ ಕಳೆದುಕೊಳ್ಳೊ ಅಪಾಯವಿರುತ್ತದೆ. ಆಗ ಹೊಸ ಲಯಗಳ ಹುಡುಕಾಟ ಶುರುವಾಗುತ್ತೆ. ತನ್ನ ಆಂತರಿಕ ಒತ್ತಡಕ್ಕೆ ಅವನು ಹೆಚ್ಚು ಪ್ರಾಮಾಣಿಕನಾಗಿರ ಬೇಕಾದಾಗ ಛಂದಸ್ಸ್ಃಶಾಸ್ತ್ರದ ನಿಯಮಗಳ ಪ್ರಕಾರ ಅವನು ಕಾವ್ಯ ಬರೆಯೋದಕ್ಕೆ ಆಗೋಲ್ಲ. ಹೊಸ ಲಯಗಳನ್ನು ಹುಡುಕಿ ಹೋಗ್ತಾನೆ. ಈಗ ಛಂದಸ್ಸಿನ ನಿಯಮಗಳನ್ನು ಮುರೀಬೇಕಾಗಿ ಬರುತ್ತದೆ. 12ನೇ ಶತಮಾನದಲ್ಲಿ ವಚನಕಾರರು ಇದನ್ನು ಮಾಡಿದ್ದಾರೆ. ಅಷ್ಟು ಯಶಸ್ವಿಯಾಗಿ ಇಪ್ಪತ್ತನೆ ಶತಮಾನದಲ್ಲಿ ಕಾವ್ಯ ಈ ಪ್ರಯೋಗ ಮಾಡಿದೆ ಅಂತ ನನಗನಿಸೋದಿಲ್ಲ. ಆಮೇಲೆ ಪ್ರತಿಯೊಬ್ಬ ಕವಿಯೂ ಕೂಡ ಛಂದಸ್ಸಿನ ನಿಯಮಗಳನ್ನು ಅನುಸರಿಸಿ, ಕಾವ್ಯ ಬರೆಯೋನೂ ಕೂಡ -ಒಂದು ಘಟ್ಟದಲ್ಲಿ ಅವನ ಅನುಭವ ಪಕ್ವವಾಗುತ್ತಿದ್ದಾಗ ಹೆಚ್ಚು ಗಾಢವಾಗುತ್ತಿದ್ದಾಗ ಅದನ್ನ ಮುರೀಬೇಕಾಗುತ್ತದೆ.

ಡಿ.ಎಸ್. ನಾಗಭೂಷಣ : ಅಂದರೆ ಒಂದು ಹಳೆಯ ಛಂದಸ್ಸಿನ ಚೌಕಟ್ಟನ್ನು ಕಟ್ಟೋಕಡೆ ಇವತ್ತಿನ ಕಾವ್ಯ ಹೋಗುತ್ತಿದೆ ಅಂತ ಹೇಳಬಹುದಾ?

ಶಿವಪ್ರಕಾಶ್ : ಚೌಕಟ್ಟನ್ನ ರೂಪಿಸುವುದೇ ಪಂಡಿತರ ಹಸ್ತಕ್ಷೇಪದಿಂದಾಗುವುದು. ಕಾವ್ಯ ಯಾವಾಗಲೂ ಹೆಚ್ಚು ಸ್ಪಷ್ಟವಾದ, ಹೆಚ್ಚು ಪ್ರಾಮಾಣಿಕವಾದ ಲಯಗಳನ್ನ ಹುಡುಕ್ತಾ ಇರುತ್ತದೆ. ಅಷ್ಟರ ಮಟ್ಟಿಗೆ ಇವತ್ತಿನ ಛಂದಸ್ಸು, ಸಾಲುಗಳನ್ನ ಬರೆದಾಗ ಅದು ಮುರಿದಂತೆ ಕಾಣುತ್ತದೆ. ನೀವು ಅದನ್ನ Scan ಮಾಡಿದರೆ ಅನೇಕ ಸಲ ಐದು ಮಾತ್ರೆಗೆ ಸಿಕ್ಕುತ್ತದೆ.

ಜಿ.ಎಸ್. ಶಿವರುದ್ರಪ್ಪ : ಐದು ಮಾತ್ರೆಯ ಗಣದ ಮುಖ್ಯ ಲಕ್ಷಣ ಅಂದರೆ ಆಡುಮಾತಿಗೆ ಸಮೀಪವಾಗಿರೋದು.

ಶಿವಪ್ರಕಾಶ್ : ನಿಜ ಅದು. ಈಗ ಕನ್ನಡ ಕಾವ್ಯದ ಬಹಳ Memorable ಆದ ಸಾಲುಗಳನ್ನು ತೆಗೆದುಕೊಂಡಾಗ ಅದು ಐದು ಮಾತ್ರೆಯ ಲಯಕ್ಕೆ ಬೀಳ್ತಾ ಇರುತ್ತದೆ.

ಡಿ.ಎಸ್. ನಾಗಭೂಷಣ : ಒಂದೆರಡು ಉದಾಹರಣೆ ಕೊಡ್ತಿರಾ.

ಶಿವಪ್ರಕಾಶ್ : 'ಶ್ರೀರಾಮನವಮಿ' ಕವಿತೆ ಆಗಬಹುದು. ಬೇಂದ್ರೆಯವರ 'ಮಾಯಾ ಕಿನ್ನರಿ' ಆಗಬಹುದು. ಇದನ್ನ ನೀವು ಅಂಶಿ ಛಂದಸ್ಸಿನಲ್ಲಾದರೂ ಹೇಳಬಹುದು, ಮಾತ್ರಾ ಛಂದಸ್ಸಿನಲ್ಲಿ ಬೇಕಾದರೂ ಓದಿಕೊಳ್ಳಬಹುದು. ಆದರೆ ವಚನಗಳ ಭಾಷೆ ನೋಡಿದಾಗ ಅದು ಆಡುಮಾತಿಗೆ ಬಹಳ ಹತ್ತಿರ ಇರುತ್ತದೆ. But ಇದು ಐದು ಮಾತ್ರೆಗೆ ಸಿಗೋದಿಲ್ಲ. ಆದರೆ ವಚನಗಳಲ್ಲಿ ಸಾಧ್ಯವಾಗುವಷ್ಟು ಲಯ ವೈವಿಧ್ಯ ಈವೊತ್ತಿನ ಕಾವ್ಯದಲ್ಲಿ ಸಾಧ್ಯವಾಗುತ್ತಿಲ್ಲ.

ಕೆ.ಬಿ. ಸಿದ್ಧಯ್ಯ : ಶಿವರುದ್ರಪ್ಪನವರು ಹೇಳಿದ ಪ್ರಕಾರ ಛಂದಸ್ಸು ಯಾವಾಗ ಸಾಕಾಗದೆ ಹೋಗುತ್ತೆ ಅಂದರೆ, ಈ ಕಾವ್ಯವನ್ನ ಸೃಷ್ಟಿಸುವ ಕ್ರಿಯೆ ಆಂತರಿಕವಾಗಿ ಏಕವ್ಯಕ್ತಿಯ ಉಸಿರಾಟದ ಲಯವನ್ನೇ ಅವಲಂಭಿಸಿರುತ್ತದೆ. ಆ ಲಯ ಛಂದಸ್ಸಿಗೆ ಒಳಪಡದೆ ಇದ್ದಾಗ ಅವನು ತನ್ನದೇ ಆದ ಬೇರೆ ಒಂದು ಲಯವನ್ನು ಕಂಡುಕೊಳ್ಳಬೇಕಾಗುತ್ತದೆ. ಅದನ್ನ ನಾವು ಹನ್ನೆರಡನೇ

ಶತಮಾನದ ವಚನಕಾರರಲ್ಲಿ ನೋಡಬಹುದು. ಇಡೀ ವಚನಕಾರರು ತಮ್ಮ ವಚನಸೃಷ್ಟಿಯಲ್ಲಿ ಪ್ರತಿಯೊಬ್ಬರೂ ಕೂಡ, ಅಲ್ಲಮ ಪ್ರಭುವಿನ ವಚನವಿದ್ದಂತೆ ದೇವರ ದಾಸಿಮಯ್ಯನವರ ವಚನವಿರುವುದಿಲ್ಲ. ದೇವರ ದಾಸಿಮಯ್ಯನವರ ವಚನವಿದ್ದಂತೆ ಅಂಬಿಗರ ಚೌಡಯ್ಯನವರ ವಚನ ಇರೋದಿಲ್ಲ. ಏಕೆಂದರೆ ಅವರ ಆಂತರಿಕ ಕಂಪನಗಳಿಗೆ ಅನುಗುಣವಾಗಿ ಅವರು ಲಯಗಳನ್ನ ಸೃಷ್ಟಿಸುತ್ತಾ ಆ ಲಯಗಳಿಗೆ ಬದ್ಧರಾಗಿ ವಚನಗಳನ್ನು ರಚನೆ ಮಾಡುತ್ತಾ ಬಂದಿರುತ್ತಾರೆ. ಈ ರೀತಿ ಛಂದಸ್ಸು ರೂಪಾಂತರಗೊಳ್ಳಬಹುದು ಅನಿಸುತ್ತೆ.

ಡಿ.ಎಸ್. ನಾಗಭೂಷಣ : ಸ್ವಚ್ಛಂದವಾಗಿ ಬರೆಯುವುದೂ ಕೂಡ ಛಂದಸ್ಸು ಅಂತ ಹೇಳಬಹುದಾ? ಸ್ವಚ್ಛಂದ ಕೂಡ ಛಂದಸ್ಸೇ.

ಶಿವಪ್ರಕಾಶ್ : ಸ್ವಚ್ಛಂದವಾಗಿ ಬರೆದಾಗಲೂ ಕೂಡ ಪಂಡಿತರ ಕೈಗೆ ಸಿಗದ ಒಂದು ಛಂದಸ್ಸಿರುತ್ತದೆ. ಒಂದು ಲಯ ಇರುತ್ತದೆ. ಆ ಲಯವನ್ನು ಹುಡುಕೋದಕ್ಕೇನೇ ಸಿದ್ಧಯ್ಯನವರು 'ಕಂಪನ' ಅಂತ ಶಬ್ದ ಬಳಸಿದರು. ಆ ಕಂಪನವನ್ನ ಕಾವ್ಯ ಇತರ ಪರಿಕರಗಳ ಮೂಲಕ ಹಿಡಿದಿಡುವುದು ಇದೆಯಲ್ಲಾ ಅದೇ ಕಾವ್ಯ.

ಡಿ.ಎಸ್. ನಾಗಭೂಷಣ : ಈಚೆಗೆ ಕಾವ್ಯ ಈ ಛಂದಸ್ಸಿನಿಂದ ಹೊರಗಡೆ ಬಂದದ್ದು ಬಹುಶಃ ಕಾವ್ಯದ ಮೇಲೆ ಪಾಂಡಿತ್ಯದ ಪ್ರಭಾವ ಜಾಸ್ತಿಯಾಗಿ ಅದರಿಂದ ಬಿಡುಗಡೆ ಪಡೆಯೋದಕ್ಕೆ ಏನಾದರೂ.....

ಶಿವಪ್ರಕಾಶ್ : ಕಾವ್ಯ ಯಾವತ್ತೂ ಛಂದಸ್ಸನ್ನು ಅವಲಂಬಿಸಿಲ್ಲ. ಈಗ ವಚನಕಾರರ ಬಗ್ಗೆ ನಾವು ಮಾತಾಡ್ತಾ ಇದ್ದಿವಿ. ಈಗ ಮಲೆಯ ಮಾದೇಶ್ವರ ಪುರಾಣ ಅಥವಾ ಮಂಟೆಸ್ವಾಮಿ ಕಾವ್ಯ ಮುಂತಾದ ಜಾನಪದ ಕಾವ್ಯಗಳನ್ನು ನಾವು ನೋಡಿದಾಗ, ಅಲ್ಲಿನ ಛಂದಸ್ಸು ಏನಿದೆ ಅದು ಈ ಪಂಡಿತರ ಛಂದಸ್ಸಿಗೆ ಸಿಗೋದಿಲ್ಲ. But ಅದರಲ್ಲಿ ಲಯ ಇಲ್ಲ ಅಂತ ಹೇಳೋಕೆ ಆಗೋದಿಲ್ಲ. ಪಂಡಿತರ ಕೈಗೆ ಸಿಗದೇ ಇರೋ ಛಂದಸ್ಸುಗಳಿವೆ. ಆದರೆ ಛಂದಸ್ಸನ್ನ ಕವಿ ಯಾಕೆ ನಿರಾಕರಿಸಬೇಕಾಗಿ ಬರುತ್ತದೆ ಅಂದರೆ, ಅದು ಕಾವ್ಯದ ರೂಪವನ್ನು ಪೂರ್ವನಿರ್ಧಾರ ಗೊಳಿಸುವುದಕ್ಕೆ ಕಾರಣವಾಗುತ್ತದೆ, ಆದ್ದರಿಂದ ನಿರಾಕರಿಸಬೇಕಾಗಿ ಬರುತ್ತದೆ.

ಜಿ.ಎಸ್. ಶಿವರುದ್ರಪ್ಪ : ನನಗನಿಸೋದು ಛಂದಸ್ಸಿನಲ್ಲಿ ಚೆನ್ನಾಗಿ ಪಳಗಿದೋನೇ ಛಂದಸ್ಸನ್ನ ಮುರಿಯೋದಕ್ಕೆ ಸಾಧ್ಯ ಅಂತ.

ಶಿವಪ್ರಕಾಶ್ : ಇದು ಅನೇಕ ಕವಿಗಳ Practiceನಲ್ಲಿ ನಿಜ ಆಗಿದೆ. ಆದರೆ ನೆರೂಡ ನಂತಹ ಒಬ್ಬ ಕವಿ ಹೇಳುತ್ತಾನೆ. 'ನಾನು ಯಾವತ್ತೂ ಛಂದಸ್ಸನ್ನ ಕಲಿತೇ ಇಲ್ಲ ಅಂತ'

ಜಿ.ಎಸ್. ಶಿವರುದ್ರಪ್ಪ : ಕಲಿಯುವುದಲ್ಲ, ಅದು ಮೂಲಭೂತವಾಗಿ ಒಂದು Descipline ಒಂದರ್ಥದಲ್ಲಿ.

ಶಿವಪ್ರಕಾಶ್ : ಅಲ್ಲಾ ಸಾರ್, ಒಬ್ಬೊಬ್ಬರು ಅದನ್ನ Descipline ಮೂಲಕ Perfect ಮಾಡಿಕೊಳ್ಳಬಹುದು ಅಥವಾ ಮಾಡಿಕೊಳ್ಳದೇ ಇರಬಹುದು. ಇನ್ನೊಬ್ಬ ಅದನ್ನ ಪೂರ್ತಿ Awareness ಒಂದು Sixth Sense ಅಂತಾರಲ್ಲ ಅದರ ಮೂಲಕಾನೂ ಕಲಿಯೋದಕ್ಕೆ

ಸಾಧ್ಯವಾಗುತ್ತದೆ.

ಡಿ.ಎಸ್. ನಾಗಭೂಷಣ : ಸಾರ್, ನಾವೀಗ ಮುಂದಿನ ಪ್ರಶ್ನೆಗೆ ಹೋಗಬಹುದು ಅನಿಸುತ್ತೆ. ನಾವು ಹಿಂದೆ ಭಾಷಾ ಕಮ್ಮಟದಲ್ಲಿ ಮಾತಾಡ್ತ ಭಾಷೆ ಸೃಜನಶೀಲವಾದಾಗ, ಅದು ಒಂದು ಹೊಸ ವ್ಯಾಕರಣವನ್ನು ಸೃಷ್ಟಿಸುತ್ತದೆ ಅನ್ನೋ ಒಂದು ಮಾತು ಬಂತು. ಕಾವ್ಯದ ಸಂದರ್ಭದಲ್ಲಿ ಇದನ್ನ ಹೇಗೆ ಹೇಳಬಹುದು ಅಂದರೆ ಒಂದು ಒಳ್ಳೆಯ ಕಾವ್ಯ ಹೊಸ ವ್ಯಾಕರಣವನ್ನ ಸೃಷ್ಟಿಸುತ್ತದೆ ಅಂತ ಹೇಳಬಹುದು. ಈ ಬಗ್ಗೆ ನೀವೇನು ಹೇಳ್ತೀರಿ.

ಜಿ.ಎಸ್. ಶಿವರುದ್ರಪ್ಪ : ಭಾಷೆಯನ್ನ ಕಾವ್ಯ ಬಳಸಿಕೊಳ್ಳೋದು ನಿಜ. ಬಹುಶಃ ಈ ಪ್ರಶ್ನೆಗೆ ನಾವು ಇನ್ನೂ ಹಿಂದಕ್ಕೆ ಹೋಗಿ ವಿಚಾರ ಮಾಡೋದಾದರೆ, ಕಾವ್ಯ ಎನ್ನುವುದು ಅಭಿವ್ಯಕ್ತಿಯೋ ಸಂವಹನವೋ ಎಂಬ ಪ್ರಶ್ನೆಯನ್ನ ಈ ಸಂವಾದದಲ್ಲಿ ಎತ್ತಲಾಯಿತು. ಅಲ್ಲಿಗೆ ಈ ಪ್ರಶ್ನೆಯನ್ನು ಲಗತ್ ಮಾಡೋದಾದರೆ, ಭಾಷೆಯ ಮೂಲಕವೇ ಅದು ಸಂವಹನಗೊಳ್ಳ ಬೇಕಾದ್ದರಿಂದ ಕಾವ್ಯಕ್ಕೆ ಭಾಷೆ ಎನ್ನುವುದು ಅದರ ನಿಜವಾದ ಮಾಧ್ಯಮ. ಹೇಗೆ ಬೇರೆ ಬೇರೆ ಕಲೆಗಳಿಗೆ ಬೇರೆ ಬೇರೆ ಮಾಧ್ಯಮಗಳಿವೆಯೋ ಹಾಗೆ ಕಾವ್ಯಕ್ಕೆ ಭಾಷೆಯೇ ಮಾಧ್ಯಮ. ಈ ಭಾಷೆ ಅಂತಕ್ಕದ್ದು ಬಹುಶಃ ಕವಿಗೆ, ನನಗೆ ತೋರೋಮಟ್ಟಿಗೆ ಮೂರು ರೀತೀಲಿ ಪರಿಚಿತ ವಾಗಿರುತ್ತದೆ. ಒಂದು; ಇದೇ ಭಾಷೆಯನ್ನ ತನಗಿಂತ ಹಿಂದಿನ ಕಾವ್ಯ ಪರಂಪರೆ ಸೃಜನಾತ್ಮಕವಾಗಿ ಬಳಸಿದ ದಾಖಲೆಗಳು. ಇದನ್ನ ಸಾಹಿತ್ಯ ಪರಂಪರೆಯ ಭಾಷೆ ಅಂತ ಕರೀಬಹುದು. ಮತ್ತೊಂದು: ತನ್ನ ಸುತ್ತಮುತ್ತ ತನ್ನ ಪ್ರಾದೇಶಿಕ ವೈಶಿಷ್ಟ್ಯಗಳಿಗೆ ಅನುಸಾರವಾಗಿ ವ್ಯವಹಾರದಲ್ಲಿ ಬಳಕೆಯಾಗುತ್ತಿರುವ ಭಾಷೆ ಮತ್ತು ಕಿವಿ ಮೇಲೆ ಬೀಳುವ ಭಾಷೆ. ಇದನ್ನ ವ್ಯವಹಾರಿಕ ಭಾಷೆ ಅಂತ ಕರೀಬಹುದು. ಮತ್ತೊಂದು ತನ್ನ ಸಮಕಾಲೀನರು ಪರಂಪರೆಯ ಭಾಷೆಯನ್ನ ಗಮನದಲ್ಲಿಟ್ಟುಕೊಂಡು ತಾವಾಗಿಯೇ ಸೃಷ್ಟಿಸುವ ಸಮಕಾಲೀನ ಭಾಷೆ. ಬಹುಶಃ ಒಬ್ಬ ಕವಿಯ ಅಭಿವ್ಯಕ್ತಿ ರೂಪುಗೊಳ್ಳುವಾಗ ಈ ಮೂರು ರೀತಿಯ ಎಚ್ಚರ ಅವನಿಗಿರುತ್ತದೆ ಅಂತ ನಾನಂದುಕೊಂಡಿದ್ದೇನೆ. ಆದಕಾರಣ ಕಾವ್ಯ ಅನ್ನುವುದು ಭಾಷೆಯಲ್ಲಿ ಸಂಭವಿಸುವುದರಿಂದ ಆ ಭಾಷೆಯನ್ನು ಅವನು ಸೃಜನಾತ್ಮಕವಾಗಿ ಅಭಿವ್ಯಕ್ತಪಡಿಸುತ್ತಾನೆ. ಸೃಜನಾತ್ಮಕವಾಗಿ ಅಭಿವ್ಯಕ್ತಿ ಪಡಿಸೋದು ಅಂದರೆ, ಭಾಷೆಯ ವ್ಯವಹಾರಿಕ ರೂಪವನ್ನು ಮುರಿದು ಹೊಸದಾಗಿ ತನ್ನ ಸೃಜನಾತ್ಮಕ ಉದ್ದೇಶಕ್ಕೆ ಅದನ್ನು ಕಟ್ಟುವುದು. ಹೀಗಾಗಿ ಭಾಷೆ ಅನ್ನೋದು ಮೂಲಭೂತವಾಗಿ ಇಲ್ಲಿ ಸೃಜನಾತ್ಮಕವಾದ ಪರಿವರ್ತನೆಗೆ ಒಳಗಾಗೋದರಿಂದ ಅದು ಒಂದು ಭಾಷೆಯ ಲಯವನ್ನ, ಛಂದಸ್ಸನ್ನ, ವ್ಯಾಕರಣವನ್ನ ಎಲ್ಲವನ್ನೂ ಒಳಗೊಳ್ಳುತ್ತದೆ. ಆದ್ದರಿಂದ ಭಾಷೆಯ ಪುರ್ನನಿರ್ಮಿತಿ ಸಾಹಿತ್ಯದ ಸಂದರ್ಭದಲ್ಲಿ ಆಗುತ್ತದೆ. ಹಾಗೆ ಆಗುವ ಭಾಷೆಯ ಕ್ರಮವನ್ನ ನಮ್ಮ ಹಿಂದಿನ ಅಲಂಕಾರಿಕರು 'ವಕ್ರೋಕ್ತಿ' ಅಂತ ಕರೆದರು. ಅದು ನೇರವಾದ ಉಕ್ತಿ ಅಲ್ಲ. ವಕ್ರವಾದ ಉಕ್ತಿ. **Deviated Expression** ಅಂತ ಕರೀತಾರೆ, ಹೀಗೆ ಕಾವ್ಯದ ಭಾಷೆಗೆ ಬಹಳ ಮುಖ್ಯವಾದ್ದು ಅಂದರೆ ಅದು ವ್ಯವಹಾರಿಕ ಭಾಷೆಗಿಂತ ಭಿನ್ನವಾಗಿರುತ್ತದೆ ಮತ್ತು ಶಾಸ್ತ್ರ ಭಾಷೆಗಿಂತ ಭಿನ್ನವಾಗುತ್ತದೆ ಇದು ಮೊದಲನೆಯದು. ಎರಡನೆಯದಾಗಿ ಅದು ಸಾಂಕೇತಿಕವಾದ

ರೂಪದಲ್ಲಿ ಮಾತಾಡುತ್ತದೆ Symbolic ಅಂತಾರಲ್ಲ ಆ ಅರ್ಥದಲ್ಲಿ. ಹೀಗೆ ಭಾಷೆಯನ್ನು ಸಾಂಕೇತಿಕವಾಗಿ ಬಳಸುವ ಕ್ರಮವನ್ನ ಕಾವ್ಯಭಾಷೆಯ ಲಕ್ಷಣ ಅಂತ ನಾವು ಕರೀಬಹುದು. ಒಂದು ಉದಾಹರಣೆ ಕೊಡೋದಾದರೆ ಕೆ. ಎಸ್.ನ ಅವರ ಒಂದು ಪದ್ಯದೊಳಗೆ 'ಬರಿಗೊಡ ಗಳಿಗೆ ಸಮಾಧಾನ ಹೇಳುತ್ತಿದೆ ನಲ್ಲಿ; ಮಟಮಟ ಮಧ್ಯಾಹ್ನದಲ್ಲಿ' ಇದು ಕಾವ್ಯ ಭಾಷೆಯ ಒಂದು ಲಕ್ಷಣ. ಇಲ್ಲಿ ಏನಾಗಿದೆ ಅಂದರೆ ಭಾಷೆ ಒಂದು ಲಯಕ್ಕೆ ಛಂದಸ್ಸಿಗೆ ಒಂದು ಶಿಸ್ತಿಗೆ ಒಳಪಟ್ಟಿದೆ. ವ್ಯವಹಾರಿಕ ಭಾಷೆಯಲ್ಲಿ ಇಷ್ಟು ಕ್ರಮಬದ್ಧವಾಗಿ ಬಳಸೋದಿಲ್ಲ. ವ್ಯವಹಾರಿಕ ಭಾಷೆ ಒಂದು ರೀತೀಲಿ ಸಡಿಲವಾಗಿರುತ್ತದೆ. ಅಜಾಗರೂಕವಾಗಿರುತ್ತದೆ. ಅಲ್ಲಿ ಹೇಳಬೇಕಾದ ತುರ್ತು ಇರೋದಿಲ್ಲ. ಆದರೆ ಕಾವ್ಯದಲ್ಲಿ ಒಂದು ಅನುಭವವನ್ನು ಹೇಳಲೇಬೇಕಾದ ಅನಿವಾರ್ಯ ಒದಗಿದಾಗ ಅದಕ್ಕೆ ಭಾಷೆ ತಾನಾಗಿಯೇ ಒದಗಿ ಬಂದುಬಿಡುತ್ತದೆ. ಮೇಲಿನ ಉದಾಹರಣೆ ಒಂದು ಸಾಮಾಜಿಕ ಸಂದರ್ಭ ಆಗಬಹುದು. 'ಬರಿಗೊಡಗಳಿಗೆ ಸಮಾಧಾನ ಹೇಳುತ್ತಿದೆ ನಲ್ಲಿ: ಮಟಮಟ ಮಧ್ಯಾಹ್ನದಲ್ಲಿ' ಈ ಎರಡು ಪಂಕ್ತಿಗಳಲ್ಲಿ ಒಂದು ರೀತಿಯ ವಿನ್ಯಾಸ ಕಾಣುತ್ತದೆ. ಈ ವಿನ್ಯಾಸ ಯಾವ ರೀತಿಯಲ್ಲೂ ಕೂಡ ವ್ಯವಹಾರಿಕ ಭಾಷೆಯ ಕ್ರಮವನ್ನೇ ಆಗಲಿ ಮತ್ತು ಶಾಸ್ತ್ರೀಯ ಭಾಷೆಯ ಕ್ರಮವನ್ನು ಅನುಸರಿಸಿಲ್ಲ. ಅಲ್ಲದೆ ಇಲ್ಲಿ ಕಾವ್ಯದ ಭಾಷೆ ತನ್ನ ವ್ಯವಹಾರಿಕವಾದ ರೂಪವನ್ನು ವರ್ಜಿಸಿಕೊಂಡು ಪ್ರಾಸ, ಛಂದಸ್ಸು, ಲಯಗಳ ಒಂದು ಶಿಸ್ತಿಗೆ ಒಳಪಡುತ್ತದೆ. ಈ ಒಂದು ಶಿಸ್ತಿಗೆ ಒಳಪಟ್ಟಾಗ ಅದು ಒಂದು ರೀತಿಯಾದ 'ಘನೀಭವನ' ಸ್ಥಿತಿಗೆ ಬರುತ್ತದೆ. Crystalization ಹಾಗೆ. ಅಂದರೆ ಒಂದು ಬಗೆಯ ಚಿತ್ರ ನಿರ್ಮಾಣವಾಗುತ್ತದೆ. ಇಲ್ಲಿ ಒಂದು ಚಿತ್ರ ಇದೆ. ಇದನ್ನ ಶಬ್ದಚಿತ್ರ ಅಂತ ಕರೀತೀವಿ. ಹೀಗೆ ಚಿತ್ರವನ್ನ ನಿರ್ಮಾಣ ಮಾಡಿ ಆ ಚಿತ್ರದ ಮೂಲಕ ತಾನು ಹೇಳಬೇಕಾದ ಅಭಿಪ್ರಾಯಗಳನ್ನ ಅಥವಾ ಆಲೋಚನೆಗಳನ್ನ, ಭಾವನೆಗಳನ್ನ ಪ್ರಕಟಪಡಿಸುತ್ತದೆ. ಇದನ್ನ ನಾವು ಒಂದು ಪ್ರತೀಕ ಅಂತ ಕರೀಬಹುದು. ಉದಾಹರಣೆಗೆ ಈ ಸಾಲು (ಕೆ.ಎಸ್.ನ. ಅವರ ಕವಿತೆಯ) ಒಂದು ರೀತಿ ಸಾಮಾಜಿಕವಾದ ವಿಷಮಸ್ಥಿತಿಯನ್ನು ಹೇಳ್ತಾ ಇದೆ. ಹೀಗೆ ಕವಿ ತನ್ನ ಅನುಭವ, ಆಲೋಚನೆಗಳನ್ನ ಕಟ್ಟಿಕೊಡೋದಕ್ಕೆ ಕೆಲವು ಶಬ್ದ ಚಿತ್ರಗಳ ಮೂಲಕ ಮಾಡುತ್ತಾನೆ. ಇದನ್ನ ಪ್ರತೀಕ ಅಂತ ಕರೆಯೋದಕ್ಕೆ ಸಾಧ್ಯ. ಹೀಗೆ ಪ್ರತೀಕಾತ್ಮಕವಾದ ರೀತಿಯಲ್ಲಿ ಕಾವ್ಯದಲ್ಲಿ ಭಾಷೆ ಸೃಜನಾತ್ಮಕವಾದ ಸ್ವರೂಪವನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಆದ್ದರಿಂದ ಭಾಷೆಯ ಮೂಲಕವೇ, ಸಂಭವಿಸಬೇಕಾದ ಕಾವ್ಯ, ಆ ಭಾಷೆಯ ಪರಿಚಿತವಾದ ಸ್ವರೂಪವನ್ನ ಮುರಿದು ಒಂದು ಹೊಸ ಮತ್ತು ಅಪರಿಚಿತವಾದ ಶಬ್ದಚಿತ್ರದ ಮೂಲಕ ಅಭಿಪ್ರಾಯಗಳನ್ನ, ಭಾವನೆಗಳನ್ನ ಹೇಳೋದಕ್ಕೆ ಕಟ್ಟಿಕೊಳ್ಳುತ್ತದೆಯಲ್ಲ, ಆ ಕ್ರಮವನ್ನ ನಾವು ಕಾವ್ಯ ಭಾಷೆಯ ರೂಪ ಅಂತ ಕರೀತೀವಿ.

❑

(ಬರಹಕ್ಕೆ : ಜಿ.ವಿ. ಆನಂದಮೂರ್ತಿ)

ಕಥಾ ಕಮ್ಮಟ

ಡಿ.ಎಸ್. ನಾಗಭೂಷಣ : ಇಂದಿನ ನಮ್ಮ ಕಥಾಕಮ್ಮಟಕ್ಕೆ ಪರಿಣತರಾಗಿ ಬಂದಿದ್ದಾರೆ ಕನ್ನಡದ ಪ್ರತಿಭಾವಂತ ಕಥೆಗಾರರಲ್ಲಿ ಒಬ್ಬರೆನಿಸಿದ ರಾಘವೇಂದ್ರ ಖಾಸನೀಸರು ಹಾಗೂ ಪ್ರತಿಭಾವಂತ ವಿಮರ್ಶಕರಲ್ಲಿ ಒಬ್ಬರಾದ ಕಿ. ರಂ. ನಾಗರಾಜ ಅವರು. ನಮ್ಮ ಹಿಂದಿನ ಕಮ್ಮಟ ಭಾಷಾ - ಕಮ್ಮಟವನ್ನು ಭಾಷೆಯ ಸೃಜನಶೀಲ ಬಳಕೆ ಎಂದರೇನು ಎಂಬ ಪ್ರಶ್ನೆ ಯೊಂದಿಗೆ ಮುಕ್ತಾಯಗೊಳಿಸಿದ್ದೆವು. ಈ ಪ್ರಶ್ನೆಯನ್ನು ಇಂದು ಮತ್ತೆ ಎತ್ತಿಕೊಂಡು, ಭಾಷೆಯ ಸೃಜನಶೀಲ ಬಳಕೆಯ ಒಂದು ರೂಪವಾದ ಕಥಾಪ್ರಕಾರದ ಬಗ್ಗೆ ಚರ್ಚೆ ಮಾಡಹೊರಟಿದ್ದೀವಿ. ಇಂದಿನ ಚರ್ಚೆಯಲ್ಲಿ ಕಥೆ ಅಂದರೇನು, ಮಾನವ ಸಂಸ್ಕೃತಿಯಲ್ಲಿ ಕಥೆಯ ಮೂಲ ಎಲ್ಲಿದೆ, ಕಥೆ-ವರದಿ-ಕಲ್ಪನೆಗಳ ಅಂತರ್ ಸಂಬಂಧ, ಕಥೆ ಮತ್ತು ಸಮಾಜ ಹಾಗೂ ಕಥೆಯಲ್ಲಿ ಭಾಷೆಯ ಬಳಕೆಯ ವೈಶಿಷ್ಟ್ಯ ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳುವ ಉದ್ದೇಶ ಇದೆ.

ಮನುಷ್ಯ ತನ್ನ ಬಾಲ್ಯದಲ್ಲೇ ಕಥಾಪ್ರಪಂಚವನ್ನು ಪ್ರವೇಶಿಸುತ್ತಾನೆ. ಕಥೆ ಕೇಳಿಕೊಂಡೇ ಕಥೆ ಕಲ್ಪಿಸಿಕೊಂಡೇ ಆತ ಬೆಳೆಯುತ್ತಾನೆ. ಅಜ್ಜಿಯರು ಹೇಳುವ ಜಾನಪದ ಕಥೆಗಳು, ಅಣ್ಣಂದಿರು ಹೇಳುವ ದೆವ್ವದ ಕಥೆಗಳು, ತಂದೆ ತಾಯಂದಿರು ಹೇಳುವ ಮಹಾಭಾರತ, ರಾಮಾಯಣ, ಪುರಾಣಗಳ ಮಹಾಕಥೆಗಳು, ಸುದ್ದಿ - ವದಂತಿಗಳ ಮೂಲಕ ಬರುವ ಅನ್ಯರ 'ಕಥೆ'ಗಳು- ಹೀಗೆ ವಿವಿಧ ತೆರನ, ಸ್ತರದ ಕಥೆಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮನ್ನು ತಾಕುತ್ತಲೇ ಇರುತ್ತವೆ. ಈ ಅರ್ಥದಲ್ಲಿ ಕಥೆ ಮತ್ತು ಮನುಷ್ಯಜೀವ ಪರಸ್ಪರ ಪೋಷಿಸಿಕೊಂಡೇ ಬೆಳೆಯುತ್ತಿವೆಯೇನೋ ಎಂಬ ಅನುಮಾನ ಉಂಟಾಗುತ್ತೆ. ಈ ಹಿನ್ನೆಲೆಯಲ್ಲಿ ಏಳುವ ಬಹಳ ಪ್ರಾಥಮಿಕ ಕುತೂಹಲದ ಪ್ರಶ್ನೆ ಅಂದರೆ ಮನುಷ್ಯನ ಬದುಕಿನಲ್ಲಿ ಅಥವಾ ಸಂಸ್ಕೃತಿಯಲ್ಲಿ ಈ ಕಥೆಯ ಪರಿಕಲ್ಪನೆ ಯಾಕೆ ಬಂತು ಮತ್ತು ಹೇಗೆ ರೂಪುಗೊಳ್ತು ಅನ್ನೋದು. ಅಂದ್ರೆ, ಮನುಷ್ಯನಿಗೆ ಒಂದು ಕಥೆ ಹೇಳಬೇಕು ಅಥವಾ ಕೇಳಬೇಕು ಅಂತ ಯಾಕೆ ಅನ್ನಿಸತೊಡಗಿತು? ಕಥೆ ಅನ್ನುವ ಕಲ್ಪನೆ ಹಿಂದಿರುವಂತಹ ಮನುಷ್ಯನ ಮನಸ್ಸಿನ ಶಕ್ತಿ ಯಾವುದು? ಈ ಪ್ರಶ್ನೆಗಳೊಂದಿಗೆ ನಾವು ಈ ಚರ್ಚೆಯನ್ನು ಆರಂಭಿಸಬಹುದೂಂತ ಕಾಣುತ್ತೆ. ಏನು ಕಿ.ರಂ?

ಕಿ.ರಂ. ನಾಗರಾಜ : ನೀವೇ ನಿಮ್ಮ ಪೀಠಿಕೆಯಲ್ಲಿ ಹೇಳಿದ ಹಾಗೆ ಕಥೆ ಒಂದು ವಿಶ್ವವ್ಯಾಪಕ ಕಲೆ. ಮನುಷ್ಯ ಬರವಣಿಗೆಯನ್ನು ತಿಳಿಯುವುದಕ್ಕೆ ಮುನ್ನವೇ ರೂಪುಗೊಂಡಂತಹ

ಒಂದು ಕಲೆ ಇದು. ಬೇಟೆಯ ಮೇಲೆ ಅವಲಂಬಿಸಿದಂತಹ ಮನುಷ್ಯ ತನ್ನ ಪ್ರತಿನಿತ್ಯದ ಬೇಟೆಯ ವಿವರಗಳನ್ನು ಮತ್ತೊಬ್ಬನಿಗೆ ವಿವರಿಸಿಕೊಳ್ಳೊ ಕಾಲಕ್ಕೆ ದಿನನಿತ್ಯದ ಮನುಷ್ಯನ ಚಟುವಟಿಕೆಗಳನ್ನು ಮತ್ತೊಬ್ಬನಿಗೆ ನಿರೂಪಿಸಿಕೊಳ್ಳುವಂತ ಕಾಲಕ್ಕೆ ಈ ಕತೆ ಅನ್ನೋದು ಆರಂಭವಾಗಿರಬಹುದು. ಒಂದು ಬಹಳ ಪ್ರಸಿದ್ಧವಾದ ಮಾತಿದೆ -ಕಥೆಗೆ ಕಾಲಿಲ್ಲ ಅಂತ. ಹೀಗಾಗಿ ಕಥೆ ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ರೂಪುಗೊಂಡದ್ದು ತುಂಬಾ ಕುತೂಹಲದಾಯಕವಾದಂತಹ ಒಂದು ದೊಡ್ಡ ಚರಿತ್ರೆಯನ್ನು ಪಡಕೊಂಡಿದೆ. ಈಜಿಪ್ಟ್‌ನಲ್ಲಿ ಕ್ರಿ.ಪೂ. 3200ರ ಹೊತ್ತಿಗೆ ಕಥೆ ಆರಂಭವಾಯಿತು ಅಂತ ಕೆಲವು ಸಂಶೋಧಕರು ವಿವರಿಸ್ತಾರೆ. ಆದರೆ ಅದನ್ನು ನಿಖರವಾಗೇನೂ ಹೇಳುವಂತಿಲ್ಲ. ಉದಾಹರಣೆಗೆ ಜಾತಕದ ಕಥೆಗಳು, ಈಸೋಪನ ಕಥೆಗಳು, ಪಂಚತಂತ್ರದ ಕಥೆಗಳು, ಅರೇಬಿಯನ್ ನೈಟ್ಸ್ ಕಥೆಗಳು-ಹೀಗೆ ಕಥೆಯ ಒಂದು ದೊಡ್ಡ ವಲಯವೇ ನಮ್ಮ ಮುಂದೆ ಇದೆ. ಅದು ಕಾಲಕ್ರಮದಲ್ಲಿ ಹೆಚ್ಚು ಹೆಚ್ಚು ಬೇರೆ ಬೇರೆಯಾದಂಥ ಪ್ರಯೋಗಗಳಿಗೆ ಗುರಿಯಾಗುತ್ತಾ ಮನುಷ್ಯ ಸಂಸ್ಕೃತಿಯಲ್ಲಿ ಅದು ಸೂಕ್ಷ್ಮಗೊಳ್ಳುತ್ತಾ ಇವೊತ್ತು ಬಹಳ ಮುಖ್ಯವಾದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ.

ಡಿ.ಎಸ್. : ಮಾನವ ಸಂಸ್ಕೃತಿಯಲ್ಲಿ ಕಥೆ ಮೂಡಿದ್ದರ ಒಂದು ರೀತಿಯ ಐತಿಹಾಸಿಕ ಹೆಜ್ಜೆಗಳನ್ನು ಕಿ.ರಂ. ಗುರುತಿಸಿದರು. ಖಾಸನೀಸರು, ಕಥೆ ಅಂದರೆ ಮೂಲತಃ ಏನು? ಸಾಹಿತ್ಯರೂಪವಾಗಿ ಅದು ಬೆಳೆದುಬಂದ ಕ್ರಮ ಯಾವುದು ಅನ್ನೋದರ ಬಗ್ಗೆ ಹೇಳಬಹುದು.

ರಾಘವೇಂದ್ರ ಖಾಸನೀಸ : ಆದಿಮಾನವನು ನಡೆದ ಘಟನೆಗಳನ್ನು ಅವು ನಡೆದಂತೆ, ನಡೆದ ಕ್ರಮದಲ್ಲಿ ಹೇಳುತ್ತಿದ್ದ ಕ್ರಮವೇ ಕಥೆಯ ಮೂಲ ಆಗಿರಬಹುದು. ಕತೆ ಕೇಳುತ್ತಿದ್ದವನ ಪ್ರತಿಕ್ರಿಯೆಯಲ್ಲಿ ಅಭಿವ್ಯಕ್ತವಾಗುತ್ತಿದ್ದ ಉದ್ವೇಗ, ಕುತೂಹಲ, ಸಂತೋಷ, ನಿರಾಶೆ ಮುಂತಾದ ಭಾವನೆಗಳು ಕಥೆ ಹೇಳುವವನಿಗೆ ತನ್ನ ಕಥೆ ಹೇಳುವ ತಂತ್ರವನ್ನು ರೂಪಿಸಲು ಸಹಾಯಕಾರಿಯಾಗಿರಬೇಕು. ಅದೇ ಮುಂದೆ ಕಾಲ ಕಳೆದಂತೆ ಬೆಳೆದು ಸೂಕ್ಷ್ಮಾತಿಸೂಕ್ಷ್ಮವಾದ ಕಥಾತಂತ್ರ Story telling technique ಆಗಿ ಪರಿವರ್ತಿಸಿತು. ವೇದಗಳಲ್ಲಿ, ಪುರಾಣಗಳಲ್ಲಿ, ಬೈಬಲ್ ಮುಂತಾದ ಧರ್ಮ ಗ್ರಂಥಗಳಲ್ಲಿ ಉಪಕಥೆಗಳಾಗಿ ಕಥೆ ಹುಟ್ಟಿಕೊಂಡಿತು. ಇದುವರೆಗೆ ಕಥೆಗಳಲ್ಲಿ ಹೇಳುವ ವಿಷಯ ಮುಖ್ಯವಿತ್ತೇ ವಿನಃ ಅದನ್ನು ಹೇಳುವ ರೀತಿ ಅಲ್ಲ. ಒಂದರ್ಥದಲ್ಲಿ ರಾಮಾಯಣ-ಮಹಾಭಾರತದಲ್ಲಿ ಬರುವ ಘಟನೆಗಳು ಉಪಕಥೆಗಳೇ, ಬೈಬಲ್‌ನಲ್ಲಿ ಬರುವಂತಹ ಪ್ರಾಡಿಗಲ್ ಸನ್ ದೃಷ್ಟಾಂತ ಇದಕ್ಕೆ ಇನ್ನೊಂದು ಉದಾಹರಣೆ.

ಆ ಮೇಲಿನ ಮುಖ್ಯಘಟ್ಟವೆಂದರೆ ಅರೇಬಿಯನ್ ನೈಟ್ಸ್ ಕಥೆಗಳು, ಬೊಕಾಶಿಯೋನ ಡೆಕಮೊರಾನ್ ಕಥೆಗಳು ಹಾಗೂ ಚಾಸರನ ಕ್ಯಾಂಟರ್‌ಬರಿ ಟೇಲ್ಸ್ ಇವು ತಾಂತ್ರಿಕವಾಗಿ ಹೆಚ್ಚು ಪರಿಪೂರ್ಣವಾಗಿ ಬೆಳೆದ ಕಥೆಗಳಾಗಿದ್ದು, ಅದರಲ್ಲೂ ಬೊಕಾಶಿಯೋನ ಡೆಕಮೊರಾನ್ ಕಥೆಗಳು, ಸಮಾಜದ ವಿಶಿಷ್ಟ ವರ್ಗಗಳ ಕಟು ವಿಮರ್ಶೆ ಮಾಡುವ ಪ್ರಯತ್ನಗಳು. ಮುಂದೆ ಕಾಲಾನುಕ್ರಮದಲ್ಲಿ ಅಮೆರಿಕಾದಲ್ಲಿ ಎಡ್ಗರ್ ಅಲೆನ್‌ಪೋ, ಓ ಹೆನ್ರಿ, ಫ್ರಾನ್ಸ್‌ನಲ್ಲಿ ಗಾಯ್ ದ ಮೊಪಾಸಾ, ರಷಿಯಾದ ಚೆಕಾಫ್, ಇಂಗ್ಲೆಂಡ್‌ನಲ್ಲಿ ಸರ್ ಆರ್ಥರ್ ಕಾನನ್ ಡಾಯ್ಲ್ ಮುಂತಾದ ಪ್ರತಿಭಾ

ಶಾಲಿ ಕಥೆಗಾರರು ಹುಟ್ಟಿ ತಾಂತ್ರಿಕವಾಗಿ ಮಹತ್ವದ ಸಾಹಿತ್ಯ ಪ್ರಕಾರವೆಂದು ಸಣ್ಣ ಕಥೆಯ ಪರಿಪೂರ್ಣತೆಗೆ ಕಾರಣೀಭೂತರಾದರು.

ಡಿ.ಎಸ್. : ಭಾರತೀಯ ಸಂಸ್ಕೃತಿಯಲ್ಲಿ ಕಥನಕ್ರಮ ಬೆಳೆದು ಬಂದ ಬಗೆ ಬಗ್ಗೆ ಕಿ.ರಂ. ಏನಾದ್ರೂ ಹೇಳಲು ಇಷ್ಟಪಡ್ತೀರಾ?

ಕಿ.ರಂ. : ಐತಿಹಾಸಿಕವಾಗಿ ಭಾರತೀಯ ಸಂಸ್ಕೃತಿಯಲ್ಲಿ ಕಥೆ ಬಹಳ ಹಿಂದಿನ ಕಾಲ ದಿಂದಲೂ ರೂಪುಗೊಳ್ತಾ ಬಂದಿದೆ. ಜಾನಪದ ಕಥೆಗಳು, ದೃಷ್ಟಾಂತ ಕಥೆಗಳು, ಖಾಸನೀಸರು ಪ್ರಸ್ತಾಪ ಮಾಡಿದಂತಹ ಉಪಕಥೆಗಳು-ಇವುಗಳೆಲ್ಲಾ ಎಲ್ಲ ಪ್ರದೇಶಗಳ ಭಾಷೆಗಳ ಸಂದರ್ಭದಲ್ಲಿ ವಿಕಾಸಗೊಂಡಿರುವಂಥದ್ದೇ ಆಗಿವೆ. ಆದ್ದರಿಂದ ಕಥೆ ಬೆಳೆದ ಕ್ರಮವನ್ನು ನಿರ್ದಿಷ್ಟ ದೇಶ-ಕಾಲಮಾನಕ್ಕೆ ಅಂಟಿಸಿ ಹೇಳೋದು ತುಂಬಾ ಕಷ್ಟ ಆಗುತ್ತೆ. ಏಕೆಂದರೆ ಬಹಳ ಮಹತ್ವದ ಕಥೆಗಳನ್ನು ನಾವು ಉಪನಿಷತ್ತುಗಳಲ್ಲಿ ಕೂಡ ಕಾಣಬಹುದು. ನನಗೆ ಇಲ್ಲಿ ಬಹಳ ಮುಖ್ಯ ಆಸಕ್ತಿ ಪ್ರಾಚೀನ ಕಥನ ಕಲೆಗಿಂತ ಹತ್ತೊಂಭತ್ತನೇ ಶತಮಾನದ ಮತ್ತು ಅದರ ಅನಂತರದಲ್ಲಿ ವಿಕಾಸಗೊಂಡ ಕಥಾಪ್ರಕಾರ ಹೆಚ್ಚು ಗಮನಾರ್ಹ ಅನಿಸೋದು.

ಡಿ.ಎಸ್. : ಯಾವ ಅರ್ಥದಲ್ಲಿ?

ಕಿ.ರಂ. : ಅಂದರೆ ಹೊಸ ಸಾಹಿತ್ಯ ಪ್ರಕಾರವಾಗಿ ಯಾವುದಕ್ಕೆ ನಿರ್ದಿಷ್ಟವಾದಂತಹ ಓದುಗರಿದ್ದಾರೆ ಮತ್ತು ಒಂದು ಸಾಹಿತ್ಯ ಪ್ರಕಾರವಾಗಿ ವಿಕಾಸಗೊಂಡಂತಹ ಸಣ್ಣ ಕಥೆ ಅಂತ ನಾವು ಯಾವುದನ್ನ ಕರೀತೀವಿ ಈ ಮಾಧ್ಯಮ ಹೆಚ್ಚು ಈ ಹೊತ್ತು ವಿಶ್ಲೇಷಿಸಬೇಕಾಗಿರುವ, ವಿಚಾರ ಮಾಡಬೇಕಾಗಿರುವಂಥ ಒಂದು ಅಂಶ. ಅಲ್ಲದೆ ಇನ್ನೆಲ್ಲವೂ ಒಂದು ರೀತಿ ಕಥಾಸಾಹಿತ್ಯ ಅಂತ ಅನ್ನುವುದು ಹಿಂದೆ ಕಾವ್ಯದ ಮುಖೇನ Present ಆಗ್ತಾ ಇತ್ತು. ಈಗ ಕನ್ನಡ ಸಾಹಿತ್ಯವನ್ನೇ ತಗೊಳ್ಳಿ. ೧೦ನೇ ಶತಮಾನದಿಂದ ೨೦ನೇ ಶತಮಾನದ ತನಕ ಕಥೆಯೇ ಕನ್ನಡ ಸಾಹಿತ್ಯದ ಕೇಂದ್ರ ನೆಲೆ. ಪಂಪನಂತಹ ಕವಿಯ ಕಾವ್ಯವೂ ಕಥೆ ಮೂಲಕ ಪ್ರಕಟಗೊಳ್ಳುವಂಥಾದ್ದು. ಹರಿಹರನ ರಗಳೆಗಳು, ಕುಮಾರವ್ಯಾಸ, ರಾಘವಾಂಕನ ಕಾವ್ಯ-ಇವೆಲ್ಲ ಕಥಾಕೇಂದ್ರಿತ ವಾದವುಗಳು. ಆದರೆ ೧೯ನೇ ಶತಮಾನದ ನಂತರ ಸಣ್ಣ ಕಥೆ ಎನ್ನುವಂತ ಪ್ರಕಾರ ಆರಂಭವಾಗಿ ಅದಕ್ಕೆ ವಿಭಿನ್ನವಾಗಿರು ವಂಥ, ವಿಶಿಷ್ಟವಾಗಿರುವಂಥ ಲಕ್ಷಣಗಳನ್ನು ನಾವು ಅನ್ವಯ ಮಾಡ್ತೀವಿ. ಕಥೆ ಅಂತ ಖಚಿತವಾಗಿ ಹೇಳುವಂತಹ ಒಂದು ಶಿಸ್ತಿಗೆ ಒಳಪಟ್ಟ ನಿರ್ದಿಷ್ಟ ತಂತ್ರ, ಧೋರಣೆ ಮತ್ತು ಅದಕ್ಕನುಗುಣ ವಾದಂತಹ ಭಾಷೆಯ ಬಳಕೆ ಇವುಗಳೆಲ್ಲ ಪ್ರಕಟಗೊಂಡು, ಬಹಳ ಹೆಚ್ಚು ಅದನ್ನ ನಯಗೊಳಿಸಿದಂತಹ ಒಂದು ಮಾಧ್ಯಮವನ್ನಾಗಿ ರೂಪಿಸಿದಂತಹ ವಿಚಾರವನ್ನು ಗಮನಿಸ್ತೀವಿ.

ಡಿ.ಎಸ್. : ಈ ಹಿನ್ನಲೆಯೊಂದಿಗೆ ನಾವು ಮುಂದಿನ ಪ್ರಶ್ನೆಗೆ ಹೋಗಬಹುದೂಂತ ಕಾಣುತ್ತೆ. ಕಥೆ ಅಂದರೆ ಮೂಲತಃ ಏನು ಎನ್ನುವ ಪ್ರಶ್ನೆಗೆ ನೀವಿಬ್ರೂ ಉತ್ತರ ಕೊಡ್ತಾ, ನಡೆದ ಘಟನೆಗಳ ನಿರೂಪಣೆಯಿಂದ ಕತೆ ಆರಂಭವಾಗುತ್ತೆ ಅಂದಿರಿ. ಹಾಗಾದ್ರೆ ವರದಿಗೂ ಕತೆಗೂ ಮೂಲಭೂತ ವ್ಯತ್ಯಾಸಗಳು ಎಲ್ಲಿಂದ ಆರಂಭವಾಗ್ತದೆ?

ಖಾಸನೀಸ : ಅಂದ್ರೆ ನೀವು ಕೇಳಿದ ಪ್ರಶ್ನೆ ವರದಿಯೂ ಕತೆಯಾಗಬಹುದೇ ಹೇಗೆ

ಅಂತ. ಬಹುಶಃ ವರದಿ ಕತೆಯಾಗಲಾರದು. ಏಕೆಂದರೆ ನಿರ್ದಿಷ್ಟ ವಿಷಯದ ನಿವೇದನೆಯೊಂದೇ ವರದಿಯ ಗುರಿಯಾಗಿದ್ದು ಮೇಲುನೋಟಕ್ಕಷ್ಟೇ ಲಭ್ಯವಿರುವ ಮಾಹಿತಿಯನ್ನು ಮಾತ್ರ ಅದು ಒಳಗೊಂಡಿರುತ್ತದೆ. ಕಾರಣ-ಕಾರಕಗಳ Cause and effects ಬಗ್ಗೆ ವರದಿಗಾರ ಅಷ್ಟೊಂದು ತಲೆಕೆಡಿಸಿಕೊಂಡಿರುವುದಿಲ್ಲ. ಈ ಕಾರಣಕ್ಕಾಗಿ ವರದಿ ಕತೆಯಾಗುವುದಿಲ್ಲ. ಆದರೆ ಕತೆಗಾರನು ನಿರ್ಲಿಪ್ತನಾಗಿದ್ದು ಕಥಾನಕದ ಓಟವನ್ನು ಪಾತ್ರಗಳ ಸ್ವಭಾವಗಳನ್ನು ಹಾಗೂ ಕಥಾಕ್ರಿಯೆಯನ್ನು ಮಾನಸಿಕವಾಗಿ ವಿಶ್ಲೇಷಿಸಿದಾಗ ಮೂಡಿಬರುವ ಅನುಭವ ಒಟ್ಟಾರೆ ಅಭಿವ್ಯಕ್ತಿಯೇ ಕತೆ. ಕತೆಗಾರನು ಕತೆಯ ಓಟಕ್ಕೆ ಕೃತ್ರಿಮ ಕಡಿವಾಣ ಹಾಕದೆ ರಾಜಸೂಯ ಯಾಗದ ಕುದುರೆಯಂತೆ ಅದನ್ನು ಅದರ ಪಾಡಿಗೆ ಬಿಟ್ಟರೆ ಅದು ಸುತ್ತಿ ಸೂರೆಮಾಡಬಹುದಾದ ಅಭಿವ್ಯಕ್ತಿಯ ವ್ಯಾಪ್ತಿ ಕತೆಯ ಅಡಿಪಾಯ ಎನ್ನುವುದು ನನ್ನ ಗ್ರಹಿಕೆ.

ಡಿ.ಎಸ್. : ಖಾಸನೀಸರು ಹೇಳಿದ ಮಾತುಗಳನ್ನು ಇನ್ನಷ್ಟು ವಿಸ್ತರಿಸಿ ಕಿ.ರಂ. ಮಾತಾಡಬಹುದು. ಅದಕ್ಕೆ ಪ್ರೇರಕವಾಗಿ ನನ್ನದೊಂದು ಸಣ್ಣ ಪ್ರಶ್ನೆ. ಒಂದು ವರದಿ ಎಲ್ಲಿ ವರದಿಯಾಗುವುದು ನಿಂತು ಕತೆಯಾಗಲು ಆರಂಭಿಸುತ್ತೆ?

ಕಿ.ರಂ. : ಖಾಸನೀಸರು ಹೇಳಿದ ಹಾಗೆ ವರದಿ ಕತೆ ಅಲ್ಲ. ವರದಿ ಒಂದು ನಿರ್ದಿಷ್ಟ ಘಟನೆಯನ್ನು ನಿರೂಪಿಸುವಂಥ ಮಟ್ಟಕ್ಕೆ ಮಾತ್ರ ಸೀಮಿತಗೊಳ್ಳುತ್ತೆ. ಅಷ್ಟೇ ಅಲ್ಲದೆ, ವರದಿಯಲ್ಲಿ ವರದಿಗಾರನ ಒಂದು Vision - ದರ್ಶನ - ಪ್ರಧಾನವಾಗಿರಲ್ಲ. ಬಹಳ ಖಚಿತವಾಗಿ ನಡೆದ ಸಂಗತಿಯನ್ನು ನಿರೂಪಿಸೋದಷ್ಟೇ ವರದಿಯ ಪ್ರಧಾನ ಉದ್ದೇಶ. ಆದರೆ ಒಂದು ಕತೆ ಅಂದ್ರೆ ಅದಕ್ಕೊಂದು ಘಟನೆ ಇರುತ್ತೆ. ಒಂದು ಸನ್ನಿವೇಶ ಇರುತ್ತೆ. ಈ ಘಟನೆ ಸನ್ನಿವೇಶಗಳನ್ನು ನಡೆಸಿಕೊಂಡು ಹೋಗುವಂತಹ ಪಾತ್ರ ನಿರ್ಮಿತಿ ಇರುತ್ತೆ. ಅವೆಲ್ಲವೂ ಒಂದು ಐಕ್ಯತೆಯ ಕಡೆಗೆ ವಿಕಾಸಗೊಳ್ಳಲು ಬೆಳೆಯುವಂಥದ್ದಾಗಿರುತ್ತದೆ. ಕತೆಯನ್ನು ಓದ್ತಾ ಇರತಕ್ಕಂಥವನನ್ನು ಅದರೊಳಗಡೆ ಇರತಕ್ಕಂತಹ ಘಟನೆ, ಸನ್ನಿವೇಶ, ಪಾತ್ರನಿರ್ಮಿತಿ ಇವುಗಳು ಮೇಲಿಂದ ಮೇಲೆ ಆವರ್ತನಗೊಳ್ಳುತ್ತಾ ಒಂದು ನಿರ್ದಿಷ್ಟ ಪರಿಣಾಮದ ಕಡೆಗೆ ಕರೆದುಕೊಂಡು ಹೋಗುವಂತಿರುತ್ತದೆ. ಹೀಗಾಗಿ ವರದಿ ಕತೆ ಆಗೋಲ್ಲ. ಆದರೆ ಕಥಾನಕದ ಒಂದು ತಂತ್ರವನ್ನಾಗಿ ವರದಿಯನ್ನು ಬಳಸಿಕೊಳ್ಳಬಹುದು. ಉದಾಹರಣೆಗೆ ಮಾಸ್ತಿಯವರ ಕತೆಗಳಲ್ಲಿ ನಾನು ಹಿಂದೆ ಕೇಳಿದಂತಹ ಒಂದು ಘಟನೆಯನ್ನು ನಿಮಗೆ ಈಗ ನಿರೂಪಿಸುತ್ತೇನೆ ಅಥವಾ ಇಂಥ ಡೈರಿಯೊಂದನ್ನು ನಾನು ನಿಮಗೆ ಈಗ ಪ್ರಸ್ತುತಗೊಳಿಸುತ್ತೇನೆ ಅಂತನ್ನೋ ರೀತಿಯಾದಂಥ ಒಂದು ಅಂಶವಾಗಿ, ವರದಿ ಒಂದು ತಂತ್ರವಾಗಿ ಕತೆಯಲ್ಲಿ ಬಳಕೆಯಾಗಬಹುದು.

ಡಿ.ಎಸ್. : ಆದರೆ ಒಂದು ಘಟನೆಯಲ್ಲಿ ವರದಿ ಮತ್ತು ಕತೆಗಳೆರಡರ ಸಾಧ್ಯತೆಯೂ ಇರುತ್ತೆ; ಅದನ್ನು ವರದಿಯಾಗಾದ್ರೂ ಪ್ರಸ್ತುತಪಡಿಸಬಹುದು, ಕತೆಯಾಗಾದ್ರೂ ಪ್ರಸ್ತುತಪಡಿಸಬಹುದು ಅಂತೀರಾ?

ಕಿ.ರಂ. : ವರದಿ ಮೂಲತಃ ಕಲಾತ್ಮಕ ತಂತ್ರಗಳೆಲ್ಲವನ್ನೇನೂ ಒಳಗೊಳ್ಳುವುದಿಲ್ಲ. ಆದರೆ ಕತೆಯಲ್ಲಿ ಒಂದು ಕಲಾತ್ಮಕ ತಂತ್ರದ ನೆಲೆಗಳ ಮೂಲಕ ಒಂದು ವಿಶೇಷ ಅರ್ಥ

ಸಾಧ್ಯತೆಗಳು ಹೊರಡುತ್ತೆ.

ಡಿ.ಎಸ್. : ಹಾಗಾದ್ರೆ ಕಲಾತ್ಮಕ ವರದಿ ಕತೆಯಾಗಬಲ್ಲುದಾ?

ಕಿ.ರಂ. : ಹೂಂ... ಕಲಾತ್ಮಕತೆಯ ವ್ಯಾಖ್ಯಾವನ್ನು ನಾವೀಗ ಪರಿಶೀಲಿಸಬೇಕಾಗುತ್ತೆ.

ಡಿ.ಎಸ್. : ಈ ಪರಿಶೀಲನೆಗೆ ಸಂಬಂಧಪಟ್ಟ ಹಾಗೇ ನಾವು ಇನ್ನೊಂದು ಪ್ರಶ್ನೆಯನ್ನು ಕೇಳಿಕೊಂಡು ಮುಂದವರೀಬಹುದೂಂತ ಕಾಣುತ್ತೆ. ಆ ಪ್ರಶ್ನೆ, ಕತೆ ಹುಟ್ಟುವುದು ಒಂದು ಘಟನೆಯಲ್ಲೋ ಅಥವಾ ಒಂದು ಸೃಜನಶೀಲ ಮನಸ್ಸಿನಲ್ಲೋ ಅನ್ನೋದು.

ಖಾಸನೀಸ : ಕತೆಯೊಂದರ ಹುಟ್ಟು ಒಂದು ಸಂಕೀರ್ಣ ಕ್ರಿಯೆ. ಹೀಗಾಗಿ ಅದರ ಉಗಮ ಬೆಳವಣಿಗೆ ಹಾಗೂ ಅಭಿವ್ಯಕ್ತಿಗಳನ್ನು ಹಂತ ಹಂತವಾಗಿ ನಿಖರವಾಗಿ ಗುರುತಿಸುವುದು ಅಸಾಧ್ಯ. ಘಟನೆಯು ಕೇವಲ ಪ್ರೇರಣೆ ಮಾತ್ರವಾಗಿ, ಕತೆಯ ಸರ್ವಾಂಗೀಣ ಬೆಳವಣಿಗೆ ಲೇಖಕನ ವ್ಯಕ್ತಿತ್ವದ ಕಮ್ಮಟದಲ್ಲಿ ರೂಪ ತಾಳುತ್ತದೆ. ಕತೆಯಲ್ಲಿ ಲೇಖಕನ ಸೃಜನಶೀಲ ಮನಸ್ಸಿನ ಕ್ರಿಯೆ ಅಲ್ಲದೆ ಅವನ ಸಂಸ್ಕಾರವೂ ಬಹು ಮಟ್ಟಿಗೆ ಧ್ವನಿತವಾಗಿರ್ತದೆ.

ಕಿ.ರಂ. : ಒಂದು ಕತೆ ಲೇಖಕನು ಲೋಕವನ್ನು ನೋಡುವ ಮೂಲಕ ನಿರ್ಮಾಣವಾಗುವಂತಹುದು. ಹೀಗಾಗಿ ಲೋಕದ ಘಟನೆಗಳೇ ಕತೆಯಲ್ಲೂ ಮೈ ತಳೆಯುತ್ತವೆ. ಆದರೆ ಹಾಗೆ ಮೈದಳೆಯುವಾಗ ಅದು ಅನೇಕ ಅವಸ್ಥಾಂತರಗಳನ್ನು ಪಡೆದುಕೊಳ್ತದೆ ಅನ್ನುವುದನ್ನು ನಾವು ಮರೆಯುವ ಹಾಗಿಲ್ಲ. ಹೀಗಾಗಿ ಕತೆ ಹುಟ್ಟುವುದು ಒಂದು ಸೃಜನಶೀಲ ಮನಸ್ಸಿನಲ್ಲಿಯೇ. ಈ ಸೃಜನಶೀಲ ಮನಸ್ಸು ಅದಕ್ಕೆ ಒಂದು ಆಕಾರ ಕೊಡುತ್ತೆ. ಲೇಖಕ ತನ್ನ ನಿರ್ಮಾಣ ಪ್ರತಿಭೆಯ ಮೂಲಕ ಆ ಘಟನೆ, ಸನ್ನಿವೇಶವನ್ನು ಒಂದು ಕತೆಯನ್ನಾಗಿ ಮಾಡುತ್ತಾನೆ. ಆದರಿಂದ ಕಥೆ ಹುಟ್ಟುವುದು ಲೋಕದ ಸಂಗತಿಗಳಿಂದಲೇ ಆದರೂ ಅದು ಬೇರೆ ಬೇರೆ ರೂಪಾಂತರಗಳನ್ನು ಧರಿಸಿ, ಒಂದು ಹೊಸ ಆಯಾಮವನ್ನು ಒಬ್ಬ ಕತೆಗಾರನ ಮೂಲಕ ಪಡೆದುಕೊಳ್ಳುತ್ತೆ.

ಡಿ.ಎಸ್. : ನಮ್ಮ ಚರ್ಚೆಗೆ ಇಲ್ಲಿ ಇನ್ನೊಂದು ಅಂಶವನ್ನು ತರಬಹುದೂಂತ ಕಾಣುತ್ತೆ, ನಾವು ಸೃಜನಶೀಲತೆ, ನಿರ್ಮಾಣ ಪ್ರತಿಭೆ, ಅವಸ್ಥಾಂತರ, ರೂಪಾಂತರ ಹಾಗೂ ಹೊಸ ಆಯಾಮಗಳ ಮಾತನಾಡುವಾಗ ನಾವು ಸ್ಥೂಲವಾಗಿ ಹೇಳ್ತಾ ಇರೋದು ಮನಸ್ಸಿನ ಕಲ್ಪನಾಶೀಲತೆ ಬಗ್ಗೆ ಅನ್ನಿಸುತ್ತೆ. ಈ ಹಿನ್ನೆಲೆಯಲ್ಲಿ ಏಳುವ ಪ್ರಶ್ನೆ ಅಂದ್ರೆ, ಒಂದು ಲೋಕಸಂಗತಿಗೆ ಕಲ್ಪನೆಯ ಶಕ್ತಿಯ ಸ್ಪರ್ಶ ಮಾಡಿಸಿದರೆ ಅದು ಒಂದು ಕತೆಯಾಗಿ ಅರಳುತ್ತೇಂತ ಹೇಳಬಹುದಾ? ಅಥವಾ ಕಥಾಭಿವ್ಯಕ್ತಿಗೂ ಮನುಷ್ಯನ ಕಲ್ಪನಾಶಕ್ತಿಗೆ ಇರುವ ಸಂಬಂಧ ಯಾವ ತೆರನದ್ದು, ಎನ್ನುವ ಪ್ರಶ್ನೆ ತಗೊಂಡರೆ, ಖಾಸನೀಸರು ಏನು ಹೇಳ್ತಾರೆ?

ಖಾಸನೀಸ : ಕಥಾವಸ್ತು ಅಂದರೆ ಕಚ್ಚಾ ಸರಕು ಇದ್ದ ಹಾಗೆ. ಕಲ್ಪನೆಯ ಮಿಶ್ರಣ ಆ ಕಚ್ಚಾ ಸರಕನ್ನು ಸಂಸ್ಕರಿಸಿ ಕಲಾಕೃತಿಯನ್ನಾಗಿ ಮಾಡುತ್ತೆ. ಕತೆಗಾರನಲ್ಲಿ ಅಗತ್ಯವಾಗಿ ಇರಬೇಕಾದ ಪರಕಾಯ ಪ್ರವೇಶ ಶಕ್ತಿ ಕಲ್ಪನಾಲೋಕಕ್ಕೆ ಸಂಬಂಧಿಸಿದ್ದು. ಸಂಶೋಧಕನ ಮೂಲ ಪ್ರೇರಣೆ ಹಾಗೂ ಅತ್ಯುತ್ತಮ ಲೇಖಕನ ಸ್ಫೂರ್ತಿಯ ಮೂಲ ಸೆಲೆ ಒಂದೇ. ಅದೇ ತರ್ಕಬದ್ಧವಾದ ಕಾಲ್ಪನಿಕ ವೈಚಾರಿಕ ಶಕ್ತಿ. ಜೂಲ್ಸ್‌ವರ್ನ್‌ನಲ್ಲಿ ವ್ಯಕ್ತವಾಗುವ ವೈಜ್ಞಾನಿಕ ಭವಿಷ್ಯವಾಣಿ (Sci-

entific Prophecy) ಹಾಗೂ ಮುಂದೆ ಶತಮಾನಗಳ ನಂತರ ವಿಜ್ಞಾನಿಗಳು ಸಾಧಿಸಿದ ಅಂತರಿಕ್ಷ ಪ್ರಯಾಣದ ಯಶಸ್ಸು-ಇವೆರಡೂ ಕಲ್ಪನೆಗಳ ಸೆಲೆಗಳ ಉಗಮ ಒಂದೇ. ಹೀಗಾಗಿ ಕತೆ ಹಾಗೂ ಕಲ್ಪನೆಗಳ ಸಂಬಂಧ ಪೂರಕವಾಗಿದೆ ಮತ್ತು ಪರಸ್ಪರ ಅವಲಂಬಿಯಾಗಿದೆ.

ಕಿ.ರಂ. : ಈ ಕಲ್ಪನೆ ಅನ್ನುವುದು ಲೇಖಕ ಲೋಕಾನುಭವವನ್ನು ಪರಿಣಾಮಕಾರಿಯಾಗಿ ಮಂಡಿಸೋದಕ್ಕೆ ಬಳಸುವಂಥ ಒಂದು ಮುಖ್ಯವಾದ ಅಂಶ. ಹೀಗಾಗಿ ಕಲ್ಪನೆ ಅನ್ನೋದನ್ನ ಇಲ್ಲಿ ಪ್ರತ್ಯೇಕವಾಗಿ ವಿಚಾರ ಮಾಡೋಕೆ ಆಗೋಲ್ಲ. ಲೋಕಾನುಭವವನ್ನು ಪರಿಣಾಮಕಾರಿ ಯಾಗಿ ಮಂಡಿಸೋದಕ್ಕೆ ಬಳಸುವಂಥ ಒಂದು ಮುಖ್ಯವಾದ ಅಂಶ. ಹೀಗಾಗಿ ಕಲ್ಪನೆ ಅನ್ನೋದನ್ನ ಇಲ್ಲಿ ಪ್ರತ್ಯೇಕವಾಗಿ ವಿಚಾರ ಮಾಡೋಕೆ ಆಗೋಲ್ಲ. ಲೋಕಾನುಭವ ಕಲಾಕೃತಿ ಆದಾಗ ಅದು ಕಲ್ಪನೇನೋ ಅದು ವಸ್ತು ಸತ್ಯವೋ ಅಥವಾ ಲೋಕಸಂಗತಿಯೋ! ಅವೆಲ್ಲವೂ ಮೀರಿ ಒಂದು ಕಲಾಕೃತಿಯಾಗಿ ಬಿಡುತ್ತೆ ಅದು.

ಡಿ.ಎಸ್. : ಅಂದರೆ ನೀನು ಏನು ಹೇಳ ಹೊರಟಿದ್ದಿ ಅನ್ನೋದು ಆ ನಿನ್ನ ಕಲ್ಪನೆಯನ್ನು ನಿಯಂತ್ರಿಸುತ್ತೇಂತ ಅಂತೇನಾದ್ರೂ ನೀವು ಹೇಳೋಕ್ಕೆ ಹೊರಟಿದ್ದೀರಾ?

ಕಿ.ರಂ. : ನಮಗೆ ಒಂದು ಕಲಾಕೃತಿಯ ಒಳಗಡೆ ಅದು ಬಹಳ ನಿರ್ದಿಷ್ಟವಾಗಿ, ನಿಖರವಾಗಿ ಗುರುತಿಸೋಕ್ಕೆ ಆಗೋಲ್ಲ-ಕಲ್ಪನೆಯ ಅಂಶ ಯಾವುದೂಂತ. ಯಾಕೇಂದ್ರೆ ಆ ಕಲ್ಪನೆ ಏನಿದ್ರೂ ಕವಿಯ ಸೃಷ್ಟಿಶೀಲತೆಯ ಸಂದರ್ಭದಲ್ಲಿ ಮಾತ್ರ ಕ್ರಿಯಾತ್ಮಕವಾಗಿರು ವಂತಹದ್ದು. ಅದು ಓದುಗನ ಹತ್ತಿರ ಬಂದಾಗ ಅದು ಕಲ್ಪನೆಯ ಅಂಶ ಅನ್ನುವುದನ್ನು ಪ್ರತ್ಯೇಕಗೊಳಿಸುವುದಕ್ಕೆ ಸಾಧ್ಯವಾಗದೇ ಇರುವಂತಾದ್ದು ಕೂಡಾ ಆಗಿರುತ್ತೆ.

ಡಿ.ಎಸ್. : ಈಗ ನಾವು ಮುಂದಿನ ಪ್ರಶ್ನೆಗೆ ಹೋಗಬಹುದು, ಈ ಪ್ರತಿಭೆ, ಕಲ್ಪನೆ ಮೈದಳೆಯುವ ಒಂದು ಮಾಧ್ಯಮವಾದ ಭಾಷೆ ಕಡೆಗೆ. ನಾವು ಸಾಮಾನ್ಯವಾಗಿ ಕಥಾ ವಿಮರ್ಶೆ ಯಲ್ಲಿ, ಇಲ್ಲಿ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳಲಾಗಿದೆ. ಅಥವಾ ದುಡಿಸಿಕೊಂಡಿಲ್ಲ ಎನ್ನುವ ಮಾತುಗಳನ್ನು ಕೇಳ್ತಾ ಇರ್ತೀವಿ. ಹೀಗಂದ್ರೆ ಏನರ್ಥ ಖಾಸನೀಸ್?

ಖಾಸನೀಸ : ಕಥಾನಕದ ಸಮರ್ಥ ಸಂವಹನೆಯ ಸಾಧನವಾಗಿ ಮಾತ್ರ ಕತೆಯಲ್ಲಿ ಭಾಷೆಗೆ ಸ್ಥಾನವಿದೆ. ಕಾವ್ಯದಲ್ಲಿ ಕವಿತೆಯಲ್ಲಿ ಇದ್ದಷ್ಟು ಪ್ರಮುಖ ಹೊಣೆಗಾರಿಕೆ ಭಾಷೆಗೆ ಇಲ್ಲಿಲ್ಲ. ಗದ್ಯಲೇಖನ ಶೈಲಿಯಲ್ಲಿ ವಿಚಾರಗಳನ್ನು ಭಾವನೆಗಳನ್ನು ಸುಲಲಿತವಾಗಿ ಹೇಳುತ್ತಾ ವಿಶಿಷ್ಟ ಪರಿಣಾಮಕ್ಕಾಗಿ ವಿಶಿಷ್ಟ ಪದಪುಂಜಗಳನ್ನು ಉಪಯೋಗಿಸುತ್ತಾ ಹೋಗುವ ಸಕ್ರಿಯ ಭಾಷೆಯೊಂದರ ಅಗತ್ಯವಿರುತ್ತದೆ. ಅತಿರಂಜಿತ ಭಾಷೆಯೂ ಒಳ್ಳೆಯ ಕತೆಯ ಅಂತಸ್ಸತ್ವವನ್ನು ಕಡಿಮೆ ಮಾಡಿಬಿಡಬಹುದು. ಗ್ರಾಮೀಣ ಭಾಷೆ, ಗ್ರಂಥಸ್ಥ ಭಾಷೆ, ಶ್ರೀ ಸಾಮಾನ್ಯನ ಆಡುಮಾತು - ಉಪಯೋಗಿಸಿದ ಭಾಷೆ ಯಾವುದೇ ಆದರೂ ಕತೆಯ ಅಗತ್ಯಕ್ಕನುಗುಣವಾಗಿ ಉಪಯೋಗಿಸಬೇಕೇ ಹೊರತು ಅನಗತ್ಯವಾದ ಚಮತ್ಕಾರಿಕ ಪರಿಣಾಮಕ್ಕಾಗಿ ಅಲ್ಲ.

ಕಿ.ರಂ. : ನಾನು ಖಾಸನೀಸರ ಅಭಿಪ್ರಾಯವನ್ನು ಹಾಗೆ ಒಪ್ಪಲ್ಲ-ಒಂದು ಕವಿತೆ ಒಳಗಡೆ ಭಾಷೆಗೆ ಇರತಕ್ಕಂತಹ ಸ್ಥಾನದ ರೀತಿಯಲ್ಲಿ ಸಣ್ಣ ಕತೆ ಒಳಗಡೆ ಅದರ ಸ್ಥಾನ ಅಷ್ಟೇನೂ

ಮಹತ್ವದ್ದಲ್ಲ ಅನ್ನೋ ಮಾತನ್ನ. ಖಾಸನೀಸರು ಭಾಷೆಯನ್ನು ಒಂದು ಅಂಶವನ್ನಾಗಿ ಮಾತ್ರ ಪ್ರತ್ಯೇಕಿಸಿ ಮಾತನಾಡುತ್ತಾ ಇದಾರೆ. ಒಳ್ಳೆ ಕಲಾಕೃತಿಯಲ್ಲಿ ಹಾಗೆ ಭಾಷೆಯನ್ನು ಪ್ರತ್ಯೇಕಿಸಿ ಮಾತನಾಡೋಕೆ ಆಗೋಲ್ಲ. ಯಾಕೇಂದ್ರೆ ಈ ಸಣ್ಣ ಕತೆಯ ಮಾಧ್ಯಮವೇ, ಅಥವಾ ಸಾಹಿತ್ಯದ ಮಾಧ್ಯಮವೇ ಮೂಲಭೂತವಾಗಿ ಭಾಷೆಯನ್ನು ಒಡೆದು ಕಟ್ಟೋದರಿಂದ ನಿರ್ಮಾಣವಾಗುವಂಥದ್ದು. ಭಾವಗೀತೆ ಮತ್ತು ಸಣ್ಣ ಕತೆ ಇವೆರಡೂ ಕೂಡ ಒಂದೇ ರೀತಿಯಾದಂಥ ತೀವ್ರತೆಯನ್ನು ಪಡೆದುಕೊಂಡಿರುವಂತಹ ಮಾಧ್ಯಮಗಳು. ಇರಬಹುದು-ಭಾವಗೀತೆ ಒಳಗಡೆ ಅದಕ್ಕೆ ಬೇರೆ ರೀತಿಯಾದಂತಹ ಗೇಯತೆ, ಲಯ, ಛಂದೋರೀತಿಗಳು ಮುಖ್ಯ ಆಗಿರಬಹುದು. ಅದೂ ಹೇಳೋಕ್ಕಾಗಲ್ಲ. ಈಗ ಉದಾಹರಣೆಗೆ ಲಂಕೇಶರ 'ರೊಟ್ಟಿ' ಅಥವಾ ದೇವನೂರ ಮಹಾದೇವರ 'ಅಮಾಸ'ದಂತಹ ಕತೆಗಳನ್ನೇ ನೋಡಿ. ಅವಕ್ಕೆ ತನ್ನದೇ ಆದಂಥ ವಿಶಿಷ್ಟ ಲಯವೂ ಇರುತ್ತೆ ಅಲ್ಲಿ. ಒಂದು ರೀತಿ ಕಾವ್ಯದ ಸ್ಪರ್ಶದಿಂದ ಕತೆಗೆ ಬೇರೆಯೇ ರೀತಿಯಾದಂಥ ಒಂದು ತೀವ್ರತೆ ಬರುವಂತಾಹದ್ದನ್ನು ನೋಡಿದ್ದೀವಿ ನಾವು ಕನ್ನಡದಲ್ಲಿ. ಸ್ವತಃ ಖಾಸನೀಸರೇ ಆ ರೀತಿಯಾದಂಥ ಒಳ್ಳೆ ಕತೆಗಳನ್ನು ಬರೆದಿದ್ದಾರೆ. ಆದ್ದರಿಂದ ಭಾಷೆ ಇಲ್ಲಿ ಎಂಥದ್ದಿರಬೇಕು ಎಂತ ಹೇಳಕ್ಕಾಗಲ್ಲ. ಬಹಳ ಕಷ್ಟವಾದ ವಿಚಾರ.

ಡಿ.ಎಸ್. : ಪ್ರಶ್ನೆ ಇಲ್ಲಿ ಭಾಷೆ ಎಂಥದ್ದಿರಬೇಕು ಅನ್ನುವುದಲ್ಲ. ಕಥಾಭಿವ್ಯಕ್ತಿಗಾಗಿ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳುವುದು ಅಂದರೇನು ಅನ್ನುವುದು.

ಕಿ.ರಂ. : ಹಾಂ... ಈಗ ಉದಾಹರಣೆಗೆ ಮಾಸ್ತಿಯವರ 'ಗೌತಮಿ ಹೇಳಿದ ಕತೆ' ಅಥವಾ 'ಮೊಸರಿನ ಮಂಗಮ್ಮ' ತಗೊಳ್ಳಿ. ಅಲ್ಲಿ ಗೊತ್ತಾಗುತ್ತೆ ಭಾಷೆಗೆ ಯಾವ ರೀತಿಯಾದಂಥ ತೀವ್ರತೆ ಮತ್ತು ಆ ಭಾಷೆಗಿರತಕ್ಕಂತಹ immediacy ಅಂದರೆ 'ಸದ್ಯತನ' ಎಷ್ಟು ಮುಖ್ಯಾಂತ. ಈವಾಗ ಕಾದಂಬರಿಯ ಭಾಷಾಕ್ರಮಕ್ಕಿಂತ ಒಂದು ಸಣ್ಣಕತೆಯ ಭಾಷಾಕ್ರಮ ಇದೆಯಲ್ಲಾ ಅದು ಬಹಳ ಸದ್ಯತನವನ್ನು ಅಪೇಕ್ಷಿಸುತ್ತೆ. ಅಂತಹ ಸದ್ಯತನದ ಭಾಷಾಕ್ರಮ ಇದೆಯಲ್ಲಾ ಆ ಭಾಷಾಕ್ರಮ ಯಾವುದೇ ಉತ್ತಮವಾದಂಥ ಸಣ್ಣಕತೆಯ ಜೀವಾಳ.

ಡಿ.ಎಸ್. : ಆದ್ರೆ ಕನ್ನಡದಲ್ಲಿ ಅನೇಕ ಸಾಹಿತ್ಯ ಚಳುವಳಿಗಳು ನಡೆದ ಮೇಲೆ ಈ ಕಥಾ ರೂಪದಲ್ಲಿ ಭಾಷೆಯ ಬಳಕೆ ಕುರಿತಂತೆ ಕೂಡಾ ನಮ್ಮ ಕಲ್ಪನೆ ಬದಲಾಗ್ತಾ ಬಂದಿದೆ ಅಲ್ವಾ? ಉದಾಹರಣೆಗೆ ನವೋದಯದ ಕುವೆಂಪು ಅವರ 'ಧನ್ವಂತರಿಯ ಚಿಕಿತ್ಸೆ'ಯ ಭಾಷಾಕ್ರಮಕ್ಕೂ ನಂತರವೇ ಕಾಣಿಸಿಕೊಂಡ ಪ್ರಗತಿಶೀಲ ಭಾರತೀಪ್ರಿಯರ 'ಮೋಚಿ' ಕತೆಯ ಭಾಷಾ ಕ್ರಮಕ್ಕೂ ಸಾಕಷ್ಟು ವ್ಯತ್ಯಾಸ ಇದೆಯಲ್ವಾ?

ಕಿ.ರಂ. : ಭಾಷೆಯ ಕಲ್ಪನೆ ಮತ್ತು ಲೇಖಕನ ಧೋರಣೆ - ಇವೆರಡಕ್ಕೂ ಬಹಳ ಸಮೀಪದ ಸಂಬಂಧ ಇದೆ. ಅಷ್ಟೇ ಅಲ್ದೆ ನಮ್ಮ ಸಮಾಜದಲ್ಲಿಯೂ ಕೂಡಾ ಈ ಭಾಷೆ ಬೇರೆ ಬೇರೆ ರೀತಿಯಾದಂಥ ಬದಲಾವಣೆಗೆ ಪಕ್ಕಾಗಿರುವಂಥದನ್ನ ನೋಡುತ್ತೀವಿ. ಆದ್ದರಿಂದ ಸಾಹಿತ್ಯದಲ್ಲಿ ಮಾತ್ರ, ಕತೆಯಲ್ಲಿ ಮಾತ್ರ ಭಾಷೆ ಬದಲಾಗಿ ಬಿಟ್ಟಿದ್ದೇಂತ ಹೇಳಕ್ಕಾಗೋಲ್ಲ.

ಡಿ.ಎಸ್. : ಮೂಲತಃ ಸಮಾಜದಲ್ಲಿ ಆಗತಕ್ಕಂಥ ಬದಲಾವಣೆಯೇ ಸಾಹಿತ್ಯದಲ್ಲಿ

ಆಗುವಂಥ ಬದಲಾವಣೆಗೆ ಕಾರಣವಾಗಬಹುದು.

ಕಿ.ರಂ. : ಅದೇ ಕಾರಣ. ಅದೂ ಭಾಷೆಯಲ್ಲಂತೂ ಬಹಳ. ಹತ್ತು ವರ್ಷಗಳ ಹಿಂದೆ ನಾವು ಉಪಯೋಗಿಸುತ್ತಿದ್ದಂತಹ ಭಾಷಾ ಕ್ರಮಕ್ಕೂ ಇವತ್ತೂ ನಾವು ಬಳಸಿರತಕ್ಕಂತಹ ಭಾಷಾಕ್ರಮಕ್ಕೂ ಎಷ್ಟೋ ವ್ಯತ್ಯಾಸ ಇದೆ. ಈಗ ಉದಾಹರಣೆಗೆ ಶ್ರೀಕೃಷ್ಣ ಆಲನಹಳ್ಳಿ ಮತ್ತು ದೇವನೂರ ಮಹಾದೇವ ಅವರ ಕತೆಗಳನ್ನು ನಾವು ಓದಿದಾಗ ನಮಗೆ ಕನ್ನಡ ಗದ್ಯದ ಸ್ವರೂಪ ಅಥವಾ ಕಥಾ ಭಾಷೆಯ ಸ್ವರೂಪ ಹೇಗೆ ಹೊಸ ಮಜಲುಗಳನ್ನು ಪಡಕೊಂಡಿದೆ ಅನ್ನೋದು ಕಾಣುತ್ತೆ. ಅಲ್ದೆ ನೋಡಿ, ನವ್ಯ ಕತೆಗಾರರಾದಂಥ ಅನಂತಮೂರ್ತಿ, ಲಂಕೇಶ, ಚಿತ್ತಾಲ, ದೇಸಾಯಿ, ತೇಜಸ್ವಿ, ಖಾಸನೀಸ - ಇವರ ಕಥಾಕ್ರಮ ಹಾಗೂ ಅದರ ಭಾಷಾಕ್ರಮಗಳಿಗಿಂತ ಭಿನ್ನವಾದಂತಹ ಭಾಷಾಕ್ರಮದ ಸಂದರ್ಭದಲ್ಲಿ ಇವತ್ತು ನಾವಿದ್ದೀವಿ. ಆದ್ದರಿಂದ ಕನ್ನಡ ಸಾಹಿತ್ಯ ಎಂದಿನಿಂದಲೂ ಪ್ರಯೋಗಶೀಲತೆಯ ಕಡೆಗೆ ಅದರ ತುಡಿತ ಇರುವುದರಿಂದ ಹೊಸ ಓದುಗರನ್ನು ಆಕರ್ಷಿಸುವಂತಹ ಮಾಧ್ಯಮ ಕೂಡಾ ಆಗಿಬಿಟ್ಟಿದೆ. ಒಂದು ರೀತಿ ಸಣ್ಣ ಕತೆ ಇವೊತ್ತು ಬಹಳ ಅತ್ಯಂತ ಜನಪ್ರಿಯವಾದಂತಹ ಸಾಹಿತ್ಯದ ಪ್ರಕಾರಗಳಲ್ಲಿ ಒಂದು. ಆ ಹಿನ್ನೆಲೆಯಲ್ಲಿ ಭಾಷೆಯನ್ನು ದುಡಿಸಿಕೊಳ್ಳುವುದು ಲೇಖಕನಿಗೆ ಸಂಬಂಧಪಟ್ಟಂಥ ವಿಚಾರ. ಆದರೆ ಆ ಕತೆಗೆ ಆಕರ್ಷಿತರಾಗಿ ಇರತಕ್ಕಂತಹ ಓದುಗರಿದ್ದಾರಲ್ಲ ಆ ಓದುಗರು ಕೂಡಾ ಹೊಸ ಭಾಷಾ ಸಂದರ್ಭಕ್ಕೆ ಹೇಗೆ ಪ್ರತಿಕ್ರಿಯಿಸುತ್ತಿದ್ದಾರೆ ಅಂತನ್ನುವುದನ್ನ ಈ ಹೊತ್ತಿನ ಸಣ್ಣಕತೆಯ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ನೋಡಬಹುದು.

ಡಿ.ಎಸ್. : ನಮ್ಮ ಚರ್ಚೆ ಏನು ಹೇಳುತ್ತೆ ಅಂದ್ರೆ, ಸಣ್ಣಕತೆ ಒಂದು ಸಾಹಿತ್ಯ ಪ್ರಕಾರವಾಗಿ ತನ್ನದೇ ಆದ ಒಂದು ಆಂತರಿಕ ಶಿಸ್ತನ್ನು ಪಡೆದುಕೊಂಡಿದೆ ಮತ್ತು ಈ ಆಂತರಿಕ ಶಿಸ್ತಿನ ಮೂಲಕ ಅದು ಸ್ವಯಂಪೂರ್ಣವಾದ ಒಂದು ಕಲಾ ಕೃತಿಯಾಗಿ ಮೂಡಬಲ್ಲದಾಗಿದೆ. ಈ ಹಿನ್ನೆಲೆಯಲ್ಲಿ ನಾವು ಈಗ ಈ ಕಮ್ಮಟದ ಕೊನೆಯ ಪ್ರಶ್ನೆಯನ್ನ ಎತ್ತಿಕೊಳ್ಳಬಹುದು. ಅದೂಂದ್ರೆ, ಸಣ್ಣಕತೆ ಒಂದು ಸ್ವಯಂ ಪೂರ್ಣವಾದ ಕಲಾಕೃತಿ ಆಗುವುದಾದರೆ ಅದು ತನ್ನ ಒಡಲಲ್ಲಿ ಒಂದು ದರ್ಶನದ ಕುಡಿಯನ್ನಾದರೂ ಪಡೆದಿರಬೇಕಾಗುತ್ತೆ ಅಲ್ಲವಾ?

ಖಾಸನೀಸ : ಕತೆಯು ಅದರ ಸೀಮಿತ ಚೌಕಟ್ಟಿನಲ್ಲಿ ಬದುಕಿನ ವಿರಾಟ್‌ದರ್ಶನವನ್ನು ಕೊಡಲಾರದು. ಆದರೆ ಪ್ರತಿಯೊಂದು ಕತೆಯೂ ತನ್ನ ಇತಿಮಿತಿಯಲ್ಲಿ ಬದುಕಿನ ಒಂದು ಅಂಶವನ್ನಾದರೂ ಬೆಳಗಿಸುವಂತಾಗಬೇಕು. ಕೊನೆಯಲ್ಲಿ ಓದುಗರನ್ನು Sadder and a wiser man ಅಥವಾ Happier and wiser man ಮಾಡುವುದೇ ಒಂದು ಒಳ್ಳೆಯ ಕತೆಯ ಸಾರ್ಥಕತೆಯ ದ್ಯೋತಕ. ಕೆಲವು ಕತೆಗಳನ್ನು ಕೇವಲ ಮನರಂಜನೆಗೆಂದೇ ಬರೆದಿದ್ದಿರಬಹುದು. ಆದರೆ ಒಂದು ಮಾತು ನಿಜ - ಪ್ರತಿಯೊಂದು ಕತೆಗೂ ಅದರದೇ ಆದ ಖಚಿತ ಉದ್ದೇಶ ಸಾಧನೆ ಇರಬೇಕು. ಆ ಅರ್ಥದಲ್ಲಿ ಅದೇ ಆ ಕತೆ ಕೊಡುವ ಬದುಕಿನ ದರ್ಶನ. ಸಣ್ಣ ಕತೆ ಒಂದು ಧರ್ಮೋಪದೇಶವಲ್ಲ. ದಿನಪತ್ರಿಕೆಯಲ್ಲಿಯ ಒಂದು ರಾಜಕೀಯ ಸಂಪಾದಕೀಯವಲ್ಲ. ಯಾವುದೋ ಪಠ್ಯಪುಸ್ತಕವೊಂದರ ಒಂದು ಪ್ರಕರಣವೂ ಅಲ್ಲ. ನಾವು ನೋಡಿ ಸಂತೋಷಪಟ್ಟ

ಒಂದು ಒಳ್ಳೆಯ ಚಲನಚಿತ್ರದಂತೆ, ನಾವು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದ ಒಂದು ಉದ್ರೇಕಕಾರಿ ಪಂದ್ಯದಂತೆ, ಕತೆ ಅದಕ್ಕನುಗುಣವಾದ ಒಂದು ನಿರ್ದಿಷ್ಟವಾದ ಮನರಂಜನೆಯನ್ನು ನೀಡಬೇಕು ಎನ್ನುವುದು ಮಾತ್ರ ಸ್ಪಷ್ಟವಾದ ಅಂಶ. ಕತೆಯು ಒಂದು ಅರ್ಥದಲ್ಲಿ Fiction. A Fiction the Dictionary tells us, is another word for lie. ಹಾಗಾದ್ರೆ ಕತೆ ಸುಳ್ಳುಗಳ ಕಂತೆಯೇ? ಇಂಥ ಸುಳ್ಳುಗಳಿಂದ ನಾವು ಹೇಗೆ ಮತ್ತುಯಾಕೆ ಪುಳಕಿತರಾಗುತ್ತೇವೆ? ಕೆಲವೊಂದು ಸುಳ್ಳುಗಳು ಸತ್ಯಕ್ಕಿಂತಲೂ ಹೆಚ್ಚು ದಿಟವಾದ ಸತ್ಯದ ಭ್ರಮೆಯನ್ನುಂಟು ಮಾಡುತ್ತವೆಂದೇ?..... ಹೀಗೆ ಒಟ್ಟಿನಲ್ಲಿ ಕತೆ ಪುರಾಣವಾಗಿ, ಇಡೀ ಮನುಕುಲದ ಐತಿಹಾಸಿಕ ಹಾಗೂ ಸಾಮಾಜಿಕ ಪ್ರಜ್ಞೆಯಾಗಿ ಮನೋವಿಶ್ಲೇಷಣೆಯ ಹರಿತವಾದ ಅಸ್ತ್ರವಾಗಿ ಅಥವಾ ಕೇವಲ ತಂತ್ರ ಚಮತ್ಕಾರವಾಗಿ ನಮಗೆ ಬದುಕಿನ ದರ್ಶನವನ್ನು ಕೊಡುತ್ತದೆ.

ಕಿ.ರಂ. : ಖಾಸನೀಸರ ಮಾತಿನಲ್ಲೇ ಎಲ್ಲ ಅಂಶಗಳೂ ಇದ್ದ ಹಾಗೆ ನನಗೆ ತೋರುತ್ತಾ ಇದೆ. ಆದರೆ ಖಾಸನೀಸರು ಹೇಳುವಂಥಾ ಸುಳ್ಳು ಎನ್ನುವ ಒಂದು ಅಂಶವನ್ನು ವಿಸ್ತರಿಸೋಕೆ ಇಷ್ಟಪಡ್ತಿನಿ. ಯಾವುದೇ ಕತೆ ಸುಳ್ಳು ಹೇಳ್ತಾ ಇರುತ್ತೆ; ಆದರೆ ಓದತಕ್ಕಂಥವನಿಗೆ ಅದರ ನಿಜಗಳು ತಿಳೀತಾ ಇರ್ತವೆ. ಸುಳ್ಳು ಲೇಖಕನ ದೃಷ್ಟಿಯಲ್ಲಿ ಒಂದು ತಂತ್ರ. ಓದುಗನ ನೆಲೆಯಿಂದ ಅದು ನಿಜ. ಯಾಕೇಂದ್ರೆ ಯಾವುದೇ ಒಂದು ಕಲಾಕೃತಿ ಅನೇಕ ಸುಳ್ಳಿನ ಅಂಶಗಳನ್ನು ಒಳಗೊಳ್ಳದೆ ಅದು ಒಳ್ಳೇ ಕಾಲಾಕೃತಿ ಆಗೋಲ್ಲ. ಯಾಕೇಂದ್ರೆ ನಾವು ಲೋಕದಲ್ಲಿ ಮಾತನಾಡುವ ರೀತಿಯಲ್ಲಿ ಒಂದು ಕತೆ ಮಾತನಾಡ್ತಾ ಇರೋಲ್ಲ. ನಾವು ಲೋಕದಲ್ಲಿ ವ್ಯವಹರಿಸೋ ರೀತಿ ಒಂದು ಕತೆಯ ವ್ಯವಹಾರಗಳು ನಡೆಯೊಲ್ಲ. ಇದೇ ಒಂದು ರೀತಿಯಾದಂಥ Manipulation. ಹಾಗಾಗಿ ಒಂದು ಕತೆಯಲ್ಲಿ ದರ್ಶನ ಎನ್ನುವುದು ಅದು ಪ್ರತೀತಿಗೊಳ್ಳುವಂಥಾದದ್ದು. ದರ್ಶನ ಒಂದು ಅರ್ಥದಲ್ಲಿ ತುಂಬಾ Fat word. ಇನ್ನೊಂದು ಅರ್ಥದಲ್ಲಿ ಬಹಳ ಅನಿವಾರ್ಯವಾದಂಥ ಮುಖ್ಯವಾದಂಥ Element. ಯಾಕೆಂದ್ರೆ ಸಣ್ಣ ಕತೇನ ಅಲ್ಪ ಜೀವಿಗಳ ಮಹಾಕಾವ್ಯ ಅಂತ ಕರೀತಾರೆ. ಆಮೇಲಿಂದ ಬಾಹ್ಯ ಘಟನೆಗಳನ್ನೆಲ್ಲ ವಿಘಟನೆಗೊಳಿಸೋದು ಒಂದು ಕತೆಯ ಉದ್ದೇಶ. ಆಮೇಲಿಂದ ಘಟನೆ ವಿಘಟನೆಗಳನ್ನು ಪೋಣಿಸಿ ಅದರಿಂದ ಮತ್ತೊಂದು ಅರ್ಥ ಸಾಧ್ಯತೆಯನ್ನು ಹುಟ್ಟಿಸೋದು ಒಂದು ಸಣ್ಣ ಕತೆಯ ಉದ್ದೇಶ. ಹೀಗಾಗಿ ಸಣ್ಣ ಕತೆಯಲ್ಲಿ ಒಂದು Vision ಅನ್ನೊದು ಎಲ್ಲ ಕಲಾಕೃತಿಗಳಲ್ಲೂ ಹುಟ್ಟೋಹಾಗೆ ಹುಟ್ಟುತ್ತೆ. ಆದರೆ ಈ ಸಣ್ಣಕತೆಯಲ್ಲಿ ಹುಟ್ಟುವಂತ Visionಅನ್ನ ಎಲ್ಲರೂ ಒಂದಲ್ಲ ಒಂದು ರೀತಿಯಿಂದ ಮುಖ್ಯಾಂತ ಪರಿಗಣಿಸ್ತಾರೆ. ಏಕೆಂದರೆ ತಮ್ಮ ಸುತ್ತಣ ಸಂಗತಿಗಳ ಮುಖೇನವೇ ಈ ಸಣ್ಣಕತೆಗೆ ಮೂಲದ್ರವ್ಯ ಸಿದ್ಧಗೊಳ್ಳೋದ್ರಿಂದ ಅದರಿಂದ ಹುಟ್ಟುವಂಥ ದರ್ಶನ ಕೂಡಾ ಬಹಳ ಮುಖ್ಯವಾದದ್ದೇ ಆಗಿರುತ್ತೇಂತ.

❑

(ಬರಹಕ್ಕೆ : ಎಚ್. ನಾಗರಾಜಪ್ಪ)

ಇದೇ ಲೇಖಕರ 'ಗಮನ' (ವಿಮರ್ಶೆ – ವಿಚಾರ) ಕುರಿತು...

ಸಾಹಿತ್ಯದ ಬಗ್ಗೆ ಗಾಢವಾದ ಪ್ರೀತಿಯಿಂದ ಮೂಡುವ ವಿಮರ್ಶೆಗೆ ಯಾವ ಒಂದು ಹದ ಹಾಗೂ ಸೃಜನಶೀಲತೆ ಇರಬಲ್ಲುದೆಂಬುದಕ್ಕೆ ಶ್ರೀ ಡಿ.ಎಸ್. ನಾಗಭೂಷಣ ಅವರ ಈ ಬರಹಗಳು ಸಾಕ್ಷಿಯಾಗಿವೆ. ಕನ್ನಡದ ಕೆಲವು ಪ್ರಮುಖ ಲೇಖಕರ ಮೂಲಮಾನದಲ್ಲಿ ಇಲ್ಲಿ ನಡೆದಿರುವ ಚರ್ಚೆಗಳು ಪ್ರಸ್ತುತ ಸಾಹಿತ್ಯ ವಿಮರ್ಶೆಗೆ ಹೊಸ ಆಯಾಮವನ್ನು ಕಲ್ಪಿಸುವಂಥವುಗಳಾಗಿವೆ.

- ಜಿ.ಎಸ್. ಶಿವರುದ್ರಪ್ಪ

ಇಂಥ ನಿಷ್ಪಕ್ಷಪಾತ, ನಿರ್ಭೀತ ವಿಮರ್ಶೆ ಓದಿ ತುಂಬಾ ಸಮಯವೇ ಆಯಿತು... ಇಂದಿನ ಬಹುತೇಕ ವಿಮರ್ಶೆಯಲ್ಲಿ ಬೌದ್ಧಿಕ ಕಸರತ್ತೇ ಅತಿಯಾಗಿ ಹೃದಯವಂತಿಕೆ ಶೂನ್ಯವಾಗಿರುವುದರಿಂದ ಸಾಹಿತ್ಯ ಕೃತಿಗೆ ನ್ಯಾಯ ಸಲ್ಲದೇ ಹೋಗುವಂಥ ಪರಿಸ್ಥಿತಿ ಉದ್ಭವವಾಗಿದೆ. ನಿಮ್ಮ ನಿಲುವು ಆರೋಗ್ಯಕರವಾದದ್ದು - ಚಿಕಿತ್ಸಕವಾಗಿ ನೋಡಿಯೂ ಕೃತಿಗೆ ಅಪಚಾರವಾಗದಂತೆ ಎಚ್ಚರ ವಹಿಸಿದ್ದೀರಿ. ನಿಮಗೆ ಯಾರೂ ಮುಖ್ಯರಲ್ಲ, ಕೃತಿ ಮುಖ್ಯ ಎಂಬುದನ್ನು ಸಾಬೀತುಪಡಿಸಿದ್ದೀರಿ.

- ಚದುರಂಗ

ಮೊದಲು ನಿಮ್ಮನ್ನು ಅಭಿನಂದಿಸಬೇಕು. ಹೇಳುವುದನ್ನು ಸ್ಪಷ್ಟವಾಗಿ, ಆಧಾರಪೂರ್ವಕವಾಗಿ ಹೇಳಿದ್ದೀರಿ. ವೈಯಕ್ತಿಕ ಬೇಕು ಬೇಡಗಳನ್ನು ದೂರವಿಟ್ಟು, ಅಧ್ಯಯನದ, ವ್ಯಾಖ್ಯಾನದ ತತ್ವಗಳನ್ನು ಆಧರಿಸಿ ಬರೆದಿದ್ದೀರಿ... ಮುಖ್ಯವಾದ ಸಂಗತಿ, ನಿಮ್ಮ ವಿಮರ್ಶೆ ಬುದ್ಧಿವಂತಿಕೆಯ ಜಾಹೀರಾತಾಗದೆ, ಸೂಕ್ಷ್ಮ ಸಂವೇದನೆಗಳ ಪ್ರತಿಕ್ರಿಯೆಯಾಗಿದೆ ಎನ್ನುವುದು.

- ಎಲ್.ಎಸ್. ಶೇಷಗಿರಿರಾವ್

'ಗಮನ' ಓದಿ ನಿಜಕ್ಕೂ ಸಂತೋಷವಾಯಿತು... ಪ್ರಸ್ತುತ ಸಾಹಿತ್ಯ ವಿಮರ್ಶೆಗೆ ಹೊಸ ಆಯಾಮವನ್ನು ನಿಮ್ಮ ಬರವಣಿಗೆ ಕಲ್ಪಿಸಿದೆ. ನಾನು ಮೆಚ್ಚಿಕೊಂಡಿದ್ದು ಇಲ್ಲಿನ ಸ್ವಂತಿಕೆ ಮತ್ತು ಅದನ್ನು ಪ್ರತಿಪಾದಿಸುವ ಹೊಸ ರೀತಿ. ಓದುಗರ, ವಿಮರ್ಶಕರ ಹಾಗೂ ಸಾಹಿತ್ಯಾಸಕ್ತರೆಲ್ಲರ ಗಮನ ಸೆಳೆಯಲೇಬೇಕಾದ ಕೃತಿ ಇದು.

- ಚೆನ್ನವೀರ ಕಣವಿ

ಮಾಸ್ತಿಯವರ ಮೇಲಿನ ಲೇಖನ ನಾನು ತುಂಬಾ ಮೆಚ್ಚಿಕೊಂಡ ಲೇಖನ - ಅದರ ಭಾಷೆಯ, ವಿಚಾರಗಳ ತಾಜಾತನದಿಂದಾಗಿ. ಇಂದಿನ ವಿಮರ್ಶೆಯ ಚರ್ವಿತ ಚರ್ವಣದಿಂದ ಸಂಪೂರ್ಣವಾಗಿ ಮುಕ್ತವಾದ ಈ ಬರವಣಿಗೆ ನನಗೆ ಅತ್ಯಂತ ಪ್ರಿಯವಾದದ್ದು, ಖುಷಿ ಕೊಡುವಂಥದ್ದು... ಕನ್ನಡ ವಿಮರ್ಶೆಗೆ ನೀವು ಮೌಲಿಕವಾದುದನ್ನು ಕೊಡಬಲ್ಲಿರಿ ಎಂಬುದರಲ್ಲಿ ನನಗೆ ಸಂಶಯವಿಲ್ಲ.

- ಯಶವಂತ ಚಿತ್ತಾಲ

ನಿಮ್ಮ ಬರವಣಿಗೆಯಲ್ಲಿ ತಾಜಾತನವಿದೆ, ಸೂಕ್ಷ್ಮವಾಗಿ ಗಮನಿಸುವ ಶಕ್ತಿಯಿದೆ. ಕನ್ನಡ ಸಾಹಿತ್ಯದಲ್ಲಿ ಹೆಚ್ಚಾಗಿ ಸದ್ಯದ್ದೂ, ಶಾಶ್ವತವಾದದ್ದೂ ಹೆಣೆದಿರುತ್ತದೆ. ಸದ್ಯದ ಸಂಕಟಗಳಿಂದ ನೋಡುವುದೇ ಮೇಲೆಂದು, ಅಗತ್ಯವೂ ಎಂದು ತಿಳಿದವನು ನಾನು. ಹೀಗೆ ಮಾಡುತ್ತಿರುವಾಗಲೂ ಮೂಡಿಬರುವ 'ಶಾಶ್ವತ' ಮಾತ್ರ ನೈಜವಾದದ್ದು. ಹೀಗೆ ನೋಡಬಲ್ಲ ಗುಣ ಪಡೆದ ವಿಮರ್ಶಕ ನೀವು.

- ಯು.ಆರ್. ಅನಂತಮೂರ್ತಿ

ನಿಮ್ಮ ವಿಚಾರ ಕ್ರಮ ನನಗೆ ಮೆಚ್ಚುಗೆಯಾಯಿತು. ಯಾವುದೇ ಪೂರ್ವೋದ್ದೇಶವಿಲ್ಲದೆ, ಯಾರನ್ನು ಒಲಿಸಿಕೊಳ್ಳಲೆತ್ನಿಸದೆ ನಿರ್ಭಯವಾಗಿ, ನಿಷ್ಪಕ್ಷಪಾತವಾಗಿ ವಿಮರ್ಶೆ ಮಾಡಿರುವುದಕ್ಕೆ ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು.

- ತೀ. ನಂ. ಶಂಕರನಾರಾಯಣ

ಕನ್ನಡ ವಿಮರ್ಶೆಯಲ್ಲಿ ಈಗ ನಡೆಯುತ್ತಿರುವ ಚಟುವಟಿಕೆಗೆ ಇನ್ನೊಂದು ಮಗ್ಗುಲನ್ನು ನೀಡುವಂಥ ಕೃತಿಯನ್ನು ರಚಿಸಿರುವುದಕ್ಕೆ ಅಭಿನಂದನೆಗಳು. ಸಮಾಜವಾದದ ಖಚಿತ ಹಿನ್ನೆಲೆ ಹಾಗೆಯೇ ಸಾಹಿತ್ಯ ಕೃತಿಯ ಬಗೆಗಿನ ಗೌರವ ಎಂದು ನಿಮ್ಮ ವಿಮರ್ಶೆಯ ವಿಶಿಷ್ಟತೆಗಳೆಂದು ಗುರುತಿಸಬಹುದೇನೋ.

- ಎಚ್.ಎಸ್. ರಾಘವೇಂದ್ರ ರಾವ್

'ಗಮನ' ಚೆನ್ನಾಗಿದೆ. ಎಲ್ಲಕ್ಕಿಂತ ಹೆಚ್ಚು ಸರಳ ಹಾಗೂ ಋಜುವಾಗಿದೆ. ಈ ಗುಣಗಳಿಂದಲೇ ಮನಸ್ಸನ್ನು ತಟ್ಟುತ್ತದೆ.

- ಲಕ್ಷ್ಮೀಶ ತೋಳ್ಪಾಡಿ

ನನಗೆ ಖುಷಿ ಕೊಟ್ಟ ವಿಚಾರವೆಂದರೆ, ಇಂದಿನ ಅನೇಕ ವಿಮರ್ಶಕರಿಗಿಂತ ಭಿನ್ನವಾಗಿ, ಕೃತಿಯನ್ನು ಡಿಸೆಕ್ಷನ್ ಟೇಬಲ್ಲಿಗೆ ಬಂದ ಒಂದು 'ವಸ್ತು'ವಾಗಿ ಪರಿಗಣಿಸದೆ, ಅದನ್ನೊಂದು ಜೀವಂತ ಕೃತಿಯಾಗಿ ನೋಡಿ ಆಸ್ವಾದಿಸುತ್ತೀರಿ; ಆಮೇಲೆ ಆ ಕೃತಿ ಕೊಟ್ಟ ಸಂತೋಷಕ್ಕೋ, ಅತೃಪ್ತಿಗೋ

ಕಾರಣಗಳನ್ನು, ಅದು ವ್ಯಕ್ತಪಡಿಸುವ ದರ್ಶನವನ್ನು - ಅರ್ಥದ ವಿಭಿನ್ನ ಮೈಗಳ ಮೂಲಕ ಒಟ್ಟಾಗಿ ಕಾಣಲು - ಬರಹದ ಮೂಲಕ ಕಾಣಿಸಲು ಯತ್ನಿಸುತ್ತೀರಿ ಎಂಬುದು. ನಿಮ್ಮ ತೀರ್ಮಾನವನ್ನು ನಾವು ಒಪ್ಪದೇ ಇರಬಹುದು: ಆದರೆ ಆಕೃತಿಯೊಂದಿಗೆ ನೀವು ನಡೆಸುವ ತೀವ್ರ ಹಾಗೂ ಆಪ್ತ ಅನುಸಂಧಾನದ ಬೆಚ್ಚಗಿನ ಅನುಭವವನ್ನು ಪಡೆಯದಿರಲು, ಮೆಚ್ಚದಿರಲು ಸಾಧ್ಯವೇ ಇಲ್ಲ.

- ಸುಬ್ರಾಯ ಚೊಕ್ಕಾಡಿ

You are a breath of fresh air! ಭಾಷೆಯ ಮೂಲಕವೇ 'ಎಲ್ಲ'ವನ್ನೂ ತಿಳಿದುಕೊಳ್ಳುತ್ತೇನೆ ಎನ್ನುವ ಅಹಂಕಾರವನ್ನು ನೀಗಿಕೊಂಡ ಸಂಪನ್ನ ಲಕ್ಷಣಗಳು ನಿಮ್ಮ ಸಂವೇದನೆಯಲ್ಲಿವೆ. ಅಂದರೆ ಕೃತಿಯ ನಿಲುಕುಗಳನ್ನು ಹಿಗ್ಗಿಸುವ, ಕೃತಿಗೆ ಹೆಚ್ಚಿನ space ಕಲ್ಪಿಸಿಕೊಡುವ positive ನೆಲೆಯಲ್ಲಿ ನಿಮ್ಮ ನಿಲುವು ಇದೆ. ಇದು ನಿಮಗಷ್ಟೇ ಅಲ್ಲ, ಸಾಹಿತ್ಯ ವೆಂಬ ಆ ಮಹಾರಥಕ್ಕೂ ಅಲ್ಲ, ಕೃತಿಕಾರರ ಚೇತನಗಳಿಗೂ ಚೇತೋಹಾರಿಯಾದ ಸಂಗತಿ.

- ಜಯಂತ ಕಾಯ್ಕಿಣಿ

ಒಂದು ಕೃತಿಯಲ್ಲಿ, ಸಾಂಸ್ಕೃತಿಕ ವಾತಾವರಣದಲ್ಲಿ ಭಾಗವಹಿಸಲೆಂದೆ ಬರೆಯುವ ನಿಮ್ಮಂತಹವರ, ಜಿ. ರಾಜಶೇಖರರಂತಹವರ ಬರವಣಿಗೆಗಳೇ ಹೆಚ್ಚು ತುರ್ತಿನಿಂದ, ಪ್ರಾಮಾಣಿಕ ತುಡಿತದಿಂದ ಕೂಡಿರುತ್ತದೆ... ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮ ವಿಮರ್ಶೆ, ಬರವಣಿಗೆ ಓದಲು ಸುಸ್ತೆನಿಸುವುದಿಲ್ಲ, ಬೋರೆನಿಸುವುದಿಲ್ಲ. ಈವೊತ್ತಿನ ವಿಮರ್ಶೆಯ ವಾತಾವರಣದಲ್ಲಿ ಅದೂ ಕೂಡಾ ಮುಖ್ಯವಲ್ಲವೇ?

- ಕೆ. ಸತ್ಯನಾರಾಯಣ

ವಿಚಾರ ವಿಮರ್ಶೆ ನಡೆಯುತ್ತದೆ ಎಂದರೆ ಏನೋ ಗಲಾಟೆ ಆಗುತ್ತಿದೆ ಅನ್ನುವಂತಿರುವ ಈ ಸಂದರ್ಭದಲ್ಲಿ ನಿಮ್ಮ ವಿಮರ್ಶೆ ಒಳ್ಳೆಯ ಕಾವ್ಯದ ಸೆಳೆತದೊಂದಿಗೆ ನಮ್ಮನ್ನು ಸಮೀಪಿಸಿಬಿಡುತ್ತದೆ.

- ಹಿ.ಶಿ. ರಾಮಚಂದ್ರೇಗೌಡ

ಭಾಷೆಯ ಸೊಗಸು, ಖಚಿತ ಅಭಿಪ್ರಾಯ ಹಾಗೂ ವಿಭಿನ್ನ ಒಳನೋಟಗಳು ನಿಮ್ಮ ವಿಮರ್ಶೆಯ ವಿಶೇಷ.

- ಜಿ.ಪಿ. ಬಸವರಾಜು

'ಗುತ್ತಿ - ಹೂವಯ್ಯ' ನಿನ್ನ ಪ್ರಪಂಡಶಕ್ತಿಗೆ ನಿದರ್ಶನವಾಗಿದೆ... ಮಾಸ್ತಿಯವರ

ಕಥೆಗಳು ನಿನ್ನ ನಿರ್ಮಲ ಪ್ರೇಮದ ಬೆಳಕಿನಲ್ಲಿ ಉಜ್ವಲವಾಗಿ ಹೊಳೆಯುತ್ತವೆ.

- ಬಿದರಹಳ್ಳಿ ನರಸಿಂಹಮೂರ್ತಿ

ವಿಮರ್ಶೆ ಒಂದು ಪ್ರಬಂಧ ಬರೆದಂತೆ, ಅನಿಸಿದಂತೆ, ಹೇಳುತ್ತಾ ಹೋಗುವ ರೀತಿ ನಮ್ಮಲ್ಲಿ ತುಂಬಾ ಬಳಕೆಯಲ್ಲಿಲ್ಲ. ಹೀಗಾಗಿ 'ಗಮನ'ದ ಶೈಲಿ ಬಳಕೆಗೆ ಬರಬೇಕಾದ, ಬರಬಹುದಾದ ಶೈಲಿ ಅನ್ನಿಸುತ್ತದೆ.

- ಎಸ್.ಆರ್. ವಿಜಯಶಂಕರ

ಲೋಹಿಯಾ ಪ್ರಕಾಶನ

'ಕ್ಷಿತಿಜ', ಕಪ್ಪಗಲ್ಲು ರಸ್ತೆ, ಗಾಂಧೀನಗರ, ಬಳ್ಳಾರಿ - 583 103 ✆ : 08392-257412

ನಮ್ಮ ಪ್ರಕಟಣೆಗಳು

ಕಥಾ ಸಂಕಲನ

*1.	ಕರ್ಪೂರದ ಕಾಯದಲ್ಲಿ	ಡಾ. ರಾಜಶೇಖರ ನೀರಮಾನ್ವಿ	15/-
*2.	ನೀರಮಾನ್ವಿ ಕಥೆಗಳು	ಡಾ. ರಾಜಶೇಖರ ನೀರಮಾನ್ವಿ	15/-
*3.	ನಾರೀ ಹಳ್ಳದ ದಂಡೆಯಲ್ಲಿ	ಚಂದ್ರಕಾಂತ ವಡ್ಡು	15/-
*4.	ಮಣ್ಣಿನ ಬಳೆ ಮತ್ತು ಇತರ ಕತೆಗಳು	ಶಾಂತಾರಾಮ ಸೋಮಯಾಜಿ	30/-
*5.	ಹಂಗಿನರಮನೆಯ ಹೊರಗೆ	ಡಾ. ರಾಜಶೇಖರ ನೀರಮಾನ್ವಿ	60/-
*6.	ಅನಾಥ ಪಕ್ಷಿಯ ಕಲರವ	ವೀರಭದ್ರ	125/-
*7.	ಕಾಳಬೆಳುದಿಂಗಳ ಸಿರಿ	ರಾಜಶೇಖರ ಹತಗುಂದಿ	45/-
*8.	ಹಣದಿ	ಶಿವಕುಮಾರ ನಾಗವಾರ	60/-
*9.	ಪಟ್ಟಾ	ಚಿತ್ರಶೇಖರ ಕಂಠಿ	45/-
*10.	ಉಡಿಯಲ್ಲಿಯ ಉರಿ	ಕಲಿಗಣನಾಥ ಗುಡದೂರು	45/-
*11.	ಮಣ್ಣಿನ ಕುಡಿಕೆ	ಡಾ. ಮಲ್ಲಿಕಾರ್ಜುನ ವಣೇನೂರು	50/-
12.	ಹಂಸೆ ಹಾರಿತ್ತು	ಬಿದರಹಳ್ಳಿ ನರಸಿಂಹಮೂರ್ತಿ	75/-
*13.	ಬಾಳೆಗಿಡ ಗೊನೆಹಾಕಿತು	ಬಿ. ಎಂ. ಬಶೀರ್	30/-
14.	ವಾಸ್ತವದ ಕನವರಿಕೆ	ಡಿ. ಬಿ. ರಜಿಯಾ	30/-
15.	ತಪ್ಪಂಡ	ಡಾ. ಬಸವರಾಜ ಸಾದರ	45/-
16.	ಹುಡುಕಾಟ	ಅಬ್ಬಾಸ್ ಮೇಲಿನಮನಿ	60/-
17.	ಪಕ್ಷುಬ್ಧ ಅಲೆಗಳು	ಡಾ. ಪ್ರಹ್ಲಾದ ಅಗಸನಕಟ್ಟೆ	60/-
18.	ಲದೇಣಿಯಾ	ಕೃಷ್ಣ ನಾಯಕ್	50/-
19.	ಮೀಯುವ ಆಟ	ಡಾ. ಎಚ್. ನಾಗವೇಣಿ	60/-

ಕಾವ್ಯ

*20.	ಹಟವಾದಿ ಮತ್ತು ಹುಡುಗಿ	ಡಾ. ಬೂದಗುಪ್ಪ ಪ್ರಹ್ಲಾದರೆಡ್ಡಿ	60/-
*21.	ಗಾಂಧಿಯೊಂದಿಗೆ	ಪ್ರಮೋದ್ ತುರ್ವಿಹಾಳ್	30/-
22.	ಆ ಅಜ್ಜ - ಈ ಮೊಮ್ಮಗ	ಮುದೇನೂರ ಸಂಗಣ್ಣ	75/-
*23.	ತಮಾಷಾ	ವಿಕ್ರಮ ವಿಸಾಜಿ	45/-
*24.	ಜಾಲಿ ಹೂಗಳ ನಡುವೆ	ಬಿ. ಪೀರ್ ಬಾಷ	45/-
25.	ಮರಾಠಿ ದಲಿತ ಕಾವ್ಯ	ಡಾ. ಸರಜೂ ಕಾಟ್ಕರ್	75/-
26.	ಕೆಡಹಬಲ್ಲರು ಅವರು ಕಟ್ಟಬಲ್ಲೆವು ನಾವು	ಪ್ರೊ. ಅಲ್ಲಮಪ್ರಭು ಬೆಟ್ಟದೂರು	35/-
*27.	ಗಾಂಧೀಗಿಡ	ಸತೀಶ್ ಕುಲಕರ್ಣಿ	35/-
*28.	ಕಣ್ಣಮುಂದಿನ ಬೆಳಕು	ದಸ್ತಗೀರ್‌ಸಾಬ್ ದಿನ್ನಿ	35/-
29.	ಸಿಸಿಫಸ್‌ರ ಸುತ್ತು	ಡಾ. ಬಸರಾಜ ಸಾದರ	50/-
*30.	ಕದವಿಲ್ಲದ ಊರಲ್ಲಿ	ಜಿ. ಕೆ. ರವೀಂದ್ರಕುಮಾರ್	75/-
31.	ಅವ್ವ	ಡಾ. ಸರಜೂ ಕಾಟ್ಕರ್	60/-
32.	ಕಣ್ಮುಚ್ಚಿ ಕಂಡವರು	ಶಂಕರ ಪಾಟೀಲ	35/-
33.	ಸುನೀತ ಸಂಪದ	ಚೆನ್ನವೀರ ಕಣವಿ	100/-
34.	ಮಳೆಯೇ ಮಂಟಪ	ಎಚ್. ಎಸ್. ಶಿವಪ್ರಕಾಶ್	50/-
35.	ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು	ಡಾ. ಸರಜೂ ಕಾಟ್ಕರ್	30/-
36.	ಈ ಮಣ್ಣು ಅಪ್ಪಿಕೊಳ್ಳುವ ಮುನ್ನ...	ಗವಿಸಿದ್ಧ ಎನ್. ಬಳ್ಳಾರಿ	75/-
37.	ಮಗುಮಲಗಿದೆ ಎದೆಯಮೇಲೆ	ಎಂ. ಡಿ. ಒಕ್ಕುಂದ	35/-
38.	ಚಿತ್ತಾರ	ಡಾ. ಸಬಿಹಾ ಭೂಮಿಗೌಡ	40/-
39.	ಬಾಗಿಲಾಚೆಯ ಮೌನ	ರೂಪ ಹಾಸನ	50/-

ಕಾದಂಬರಿ

*40.	ಮಾಂಡೋವಿ	ರವಿ ಬೆಳಗೆರೆ	60/-
*41.	ಶಾಮಣ್ಣ	ಕುಂ. ವೀರಭದ್ರಪ್ಪ	175/-
*42.	ಗಾಂಧಿಬಂದ	ಎಚ್. ನಾಗವೇಣಿ	130/-

43. ಬದುಕು	ಗೀತಾ ನಾಗಭೂಷಣ	200/-
44. ಹುತ್ತ	ಬಾಳಾಸಾಹೇಬ ಲೋಕಾಪುರ	75/-
45. ಲೋಟಸ್ ಪಾಂಡ್	ತಾರಾಭಟ್	50/-
46. ಚಾಕ್ರಿ ನಿಂಬಜ್ಜ	ಬ್ರಹ್ಮದೇವ್ ಹದಳಗಿ	30/-
47. ರಂಗನೋ ಮಲೆ ಮಂಗನೋ!	ಮುಹಮ್ಮದ್ ಕುಳಾಯಿ	30//-
48. ಕೆರೂರುನಾಮಾ	ಚಂದ್ರಕಾಂತ ಕುಸನೂರ	60/-

ಪ್ರವಾಸ ಕಥನ

*49. ನನ್ನೊಳಗಿನ ಹಾಡು ಕ್ಯೂಬಾ	ಜಿ. ಎನ್. ಮೋಹನ್	50/-
50. ಪಂಚಮುಖಿ ಪಂಜಾಬ್	ಜಿ. ಪಿ. ಬಸವರಾಜು	60/-
*51. ನಾ ಕಂಡ ಬ್ರಝಿಲ್	ಡಾ. ಸಿ. ನಾಗಭೂಷಣ	60/-
52. ಥೇಮ್ಸ್‌ದಿಂದ ಟೈಬರ್‌ವರೆಗೆ	ವೆಂಕಟೇಶ ಮಾಚಕನೂರ	50/-

ವೈಚಾರಿಕ ಮತ್ತು ಇತರೆ

*53. ಲೋಹಿಯಾ	ಹಸನ್‌ನಯೀಂ ಸುರಕೋಡ	120/-
*54. ಸರಳಸಿದ್ದರಾಮ ಚರಿತೆ	ಡಾ. ಎಲ್. ಬಸವರಾಜು	60/-
*55. ಶ್ರೀ ಮಧುರಚೆನ್ನರ ಸ್ಮೃತಿಗಳು	ಡಾ. ಸಿಂಪಿ ಲಿಂಗಣ್ಣ	60/-
56. ಕಾಡು ಮತ್ತು ತೋಪು	ವಿ. ಚಂದ್ರಶೇಖರ ನಂಗಲಿ	90/-
57. ಅಮೃತ ಮತ್ತು ವಿಷ	ರಂಜಾನ್ ದರ್ಗಾ	75/-
*58. ಶತಮಾನ	ಮೊಗಳ್ಳಿ ಗಣೇಶ	50/-
*59. ಅಣುವೆಂಬ ಸದ್ದಿಲ್ಲದ ಸಾವ ಕುರಿತು	ಎನ್. ಜಗದೀಶ ಕೊಪ್ಪ	25/-
60. ನಿರ್‌ಬೀಜೀಕರಣದ ವಿರಾಟ್ ಸ್ವರೂಪ	ವಿ. ಚಂದ್ರಶೇಖರ ನಂಗಲಿ	12/-
61. ಬುದ್ಧ ಚರಿತೆ	ಡಾ. ಎಲ್. ಬಸವರಾಜು	180/-
62. ಸೌಂದರನಂದ	ಡಾ. ಎಲ್. ಬಸವರಾಜು	150/-
63. ನೀರದೀವಿಗೆ	ಡಾ. ಕೆ. ವೈ. ನಾರಾಯಣಸ್ವಾಮಿ	100/-
64. ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ	ಜಸ್ವೀರ್ ಸಿಂಗ್	25/-
65. ಅಲ್ಲಮನ ವಚನಚಂದ್ರಿಕೆ	ಡಾ. ಎಲ್. ಬಸವರಾಜು	250/-
*66. ಸೂಳೆ ಸಂಕವ್ವೆ (ನಾಟಕ)	ಮುದೇನೂರ ಸಂಗಣ್ಣ	50/-
*67. ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯಪೋಳ	75/-
*68. ನಾ ನಿಮ್ಮೊಳಗು	ಪ್ರೊ. ವಿ. ಚಂದ್ರಶೇಖರ ನಂಗಲಿ	100/-
*69. ಬಗೆ	ಡಾ. ಸಬಿಹಾ ಭೂಮಿಗೌಡ	60/-
70. ಹಣತೆ: ಜಿ.ಎಸ್.ಎಸ್. ಅಭಿನಂದನ ಗ್ರಂಥ		300/-
71. ಎಸ್. ನಿಜಲಿಂಗಪ್ಪ : ಒಂದು ಅಧ್ಯಯನ	ಕೋ. ಚೆನ್ನಬಸಪ್ಪ	125/-
72. ಬಸವಪ್ರಜ್ಞೆ	ರಂಜಾನ್ ದರ್ಗಾ	15/-
73. ಹುತಾತ್ಮ ಭಗತ್‌ಸಿಂಗ್	ಜಿ. ಪಿ. ಬಸವರಾಜು	60/-
74. ಗುಣಗೌರವ	ಜಿ. ಎಚ್. ನಾಯಕ	75/-
*75. ಜೀವನಸಂಧ್ಯಾ	ಡಾ. ಕೃಷ್ಣಮೂರ್ತಿ ಕಿತ್ತೂರ	75/-
76. ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ	ಡಾ. ಜೆ. ಎಂ. ನಾಗಯ್ಯ	100/-
77. ನೊಂದವರ ನೋವು	ಮೂಡ್ನಾಕೂಡು ಚಿನ್ನಸ್ವಾಮಿ	60/-
78. ಸಾಕ್ಷಿ	ಡಾ. ಸರಜೂ ಕಾಟ್ಕರ್	50/-
79. ಸಲ್ಲಲಿತ ಸನ್ಮಾರ್ಗ	ಚೆನ್ನಬಸವಪ್ಪ ಬೆಟ್ಟದೂರು	30/-
80. ಪ್ರೇಮಲೋಕದ ಮಾಯಾವಿ	ಹಸನ್ ನಯೀಂ ಸುರಕೋಡ	45/-
71. ಶರಣ ಬಂಡಾಯ	ಡಾ. ಸರಜೂ ಕಾಟ್ಕರ್	50/-
72. ಜಯಪ್ರಕಾಶ್ ನಾರಾಯಣ	ಡಿ. ಎಸ್. ನಾಗಭೂಷಣ	100/-
83. ಬೆಳಗಿನ ಬೆರಗು	ಜಿ. ಎನ್. ಮಲ್ಲಿಕಾರ್ಜುನ	75/-
84. ರಸೀದಿ ತಿಕೀಟು	ಹಸನ್‌ನಯೀಂ ಸುರಕೋಡ	100/-
85. ನಡುಹಗಲಿನಲ್ಲಿ ಕಂದೀಲುಗಳು	ಡಾ. ರಾಜೇಂದ್ರ ಚೆನ್ನಿ	125/-
86. ಕುವೆಂಪು-ಒಂದು ಪುನರನ್ವೇಷಣೆ	ಡಿ.ಎಸ್. ನಾಗಭೂಷಣ	125/-
87. ಬಸವಣ್ಣನವರ ದೇವರು	ರಂಜಾನ್ ದರ್ಗಾ	15/-
88. ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು	ಹಸನ್ ನಯೀಂ ಸುರಕೋಡ	20/-
89. ನಮ್ಮೊಡನೆ ನಮ್ಮನುಡಿ	ಡಾ. ಕೆ. ವಿ. ನಾರಾಯಣ	50/-
90. ಅನೇಕ	ಡಾ. ಡಿ. ಎಸ್. ನಾಗಭೂಷಣ	125/-

ಇಲ್ಲಿಯ ಬರಹಗಳು ಪ್ರಿಯ ಗೆಳೆಯ ಡಿ.ಎಸ್.ನಾಗಭೂಷಣರ ಮೂರು ದಶಕಗಳ ಸಾಂಸ್ಕೃತಿಕ ಕ್ರಿಯಾಶೀಲತೆಯ ವ್ಯಾಪಕತೆ ಮತ್ತು ಸೂಕ್ಷ್ಮತೆಗೆ ಸಾಕ್ಷಿಯಾಗಿವೆ. ನಮ್ಮೆದುರಿಗೇ ಇತಿಹಾಸಕ್ಕೆ ಸಂದು ಹೋಗುತ್ತಿರುವ ಈ ಕಾಲಾವಧಿಯಲ್ಲಿ ಕನ್ನಡ ಸಾಂಸ್ಕೃತಿಕ ಲೋಕವೂ, ಭರತ ಖಂಡವೂ ಅನೇಕ ಚಳುವಳಿಗಳ ಏಳುಬೀಳುಗಳನ್ನು ಕಂಡಿದೆ. ಈ ಚಳುವಳಿಗಳು ತಮ್ಮೆಲ್ಲ ಸದಾಶಯ, ಕನಸುಗಾರಿಕೆಗಳೊಡನೆಯೂ ತತ್ಕಾಲದ ಅನುಕೂಲ, ಅವಕಾಶ ಮತ್ತು ಲಾಭಕ್ಕೆ ಮಾತ್ರವೇ ಸ್ಪಂದಿಸಿದ್ದರಿಂದ ನಾಗಭೂಷಣ್ ಸೇರಿದಂತೆ ನಾವೆಲ್ಲರೂ ಖೇದಗೊಂಡಿದ್ದೇವೆ, ಭ್ರಮನಿರಸನಗೊಂಡಿದ್ದೇವೆ. ಈ ಖೇದ, ಭ್ರಮನಿರಸನತೆಯ ನಡುವೆಯೂ ನಾಗಭೂಷಣ್ ತಮ್ಮ ಕನಸುಗಾರಿಕೆ ಆದರ್ಶದ ಪ್ರೀತಿಯನ್ನು ಇನ್ನೂ ಕಳೆದುಕೊಂಡಿಲ್ಲವೆಂಬುದನ್ನು ಈ ಲೇಖನಗಳು ತಮ್ಮ ಹರವು, ತೀವ್ರತೆ, ಅಕಡೆಮಿಕ್ ಅಲ್ಲದ ತೀವ್ರ ಪಠ್ಯೋತ್ಸಾಹದಲ್ಲಿ ನಮಗೆ ಮನವರಿಕೆ ಮಾಡಿಕೊಡುತ್ತವೆ.

ಸಮಾಜವಾದಿ ಹಾಗೂ ರೈತ-ದಲಿತ ಚಳುವಳಿಗಳಿಗೆ ಸಾಕ್ಷಿಯಾಗಿ, ಸಾಹಿತ್ಯ, ಸಂವಾದ ಪತ್ರಿಕೆ/ಪ್ರಕಾಶನದ ಜೊತೆ-ಸಂಪಾದಕತ್ವ ನಿರ್ವಹಿಸಿ, ಲೋಹಿಯಾ ಪ್ರಕಾಶನದೊಡನೆ ಒಡನಾಡುತ್ತಾ, ವರ್ಗವಾಗಿ ಹೋದ ಕಡೆಯೆಲ್ಲಾ ಸಮಾನ ಮನಸ್ಕರ ಜೊತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಾ-ಹೀಗೆ ಹತ್ತು ಹಲವು ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ನಾಗಭೂಷಣ ಸಾಹಿತ್ಯದ ಪ್ರಸ್ತುತತೆ, ಸಾಮಾಜಿಕ ಬೆಳವಣಿಗೆಗಳ ಅರ್ಥವಂತಿಕೆಯನ್ನು ಸದ್ಯದ ತುರ್ತು ಮತ್ತು ಅಗತ್ಯಗಳ ಒತ್ತಾಸೆಯ ಹಿನ್ನೆಲೆಯಲ್ಲಿ ಮಾತ್ರವೇ ಅಲ್ಲದೆ ವಿಶಾಲವಾದ ಕಾಲದ , ಪರಂಪರೆಯ ಪರಿಪ್ರೇಕ್ಷ್ಯದಲ್ಲಿಯೂ ಕಾಣಬಲ್ಲರು. ಇಂತಹ ಕಾಣುವಿಕೆಯಿಂದಾಗಿ ನಮ್ಮ ಕಾಲದಲ್ಲಿ ಜನಪ್ರಿಯವಾಗಿರುವ ಆಂಶಿಕ ಸತ್ಯ, ಪಾರ್ಶ್ವನೋಟದ ಚಿಂತನೆಯ ಮಾದರಿಗಳಿಂದ ಬಿಡಿಸಿಕೊಳ್ಳುವ ಧೈರ್ಯ ಮತ್ತು ವಿನಯವನ್ನು ತೋರಬಲ್ಲರು. ಈ ಕಾರಣಕ್ಕೇ ಸಾಹಿತ್ಯವೆಂಬುದು ಸಾಹಿತಿಗಳ, ಬರಹಗಾರರ ಲೋಕದಲ್ಲಿ ಮಾತ್ರ ನಡೆಯುವ ಒಂದು ವೃತ್ತಿಪರ ವ್ಯಾಪಾರವೆಂಬ ಸ್ಥಾಪಿತ ತಿಳುವಳಿಕೆಯನ್ನು ಪ್ರಶ್ನಿಸುವ ಛಾತಿ ಮತ್ತು ಸಾಹಿತ್ಯದ ಓದಿನಿಂದ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಮನುಷ್ಯನಾಗಿ ನಾನೇನು ಕಲಿಯಬಲ್ಲೆ, ಕಲಿಯಬೇಕು ಎಂಬ ಶೋಧ ಮತ್ತು ಎಚ್ಚರ ನಾಗಭೂಷಣರಲ್ಲಿ ಸದಾ ಜಾಗೃತವಾಗಿರುತ್ತದೆ.

ಗಾಂಧಿ, ಲೋಹಿಯಾ, ಜೆ.ಪಿ., ಕುವೆಂಪು, ಮಾಸ್ತಿ, ರಾಮಕೃಷ್ಣ ಪರಮಹಂಸ, ರಮಣಮಹರ್ಷಿ ಇವರೆಲ್ಲರನ್ನು ತಮ್ಮ ಚಿಂತನಶೀಲತೆ, ತನ್ಮಯತೆಯ ಅಂತರಂಗದಲ್ಲಿಟ್ಟುಕೊಂಡು ಬರೆಯುವ ನಾಗಭೂಷಣರಲ್ಲಿ ಎಲ್ಲ ರೀತಿಯ ಯಜಮಾನಿಕೆ, ಸ್ಥಾಪಿತ-ಘೋಷಿತ ಅಭಿಪ್ರಾಯ, ತಿಳುವಳಿಕೆಗಳನ್ನು ಪ್ರಶ್ನಿಸುವ ಪ್ರತಿಭಟನಾ ಮನೋಭಾವ ಮತ್ತು ಸತ್ಯದ ನಿರಂತರ ಪ್ರೀತಿ ಎರಡರ ಸಮನಾದ ಹದವನ್ನು ಒಟ್ಟಿಗೇ ಕಾಣಬಹುದು.

-ಕೆ. ಸತ್ಯನಾರಾಯಣ

ಲೋಹಿಯಾ ಪ್ರಕಾಶನ , ಬಳ್ಳಾರಿ
ISBN: 81-87731-67-2
ಬೆಲೆ ರೂ. 125